ಒಂದು ಬುಡಕಟ್ಟಿನ ಅರ್ಥವ್ಯವಸ್ಥೆ

(ಸಿದ್ದಿ ಬುಡಕಟ್ಟನ್ನು ಪರಿಗಣಿಸಿ)

ಅರ್ಥಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಜಿ. ಶಶಿಕಿರಣ್

ಮಾರ್ಗದರ್ಶಕರು
ಡಾ ವಿ ಎಸ್ ಪ್ರಭಾಕರ
ಸಹಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೪

ಒಂದು ಬುಡಕಟ್ಟಿನ ಅರ್ಥವ್ಯವಸ್ಥೆ

(ಸಿದ್ದಿ ಬುಡಕಟ್ಟನ್ನು ಪರಿಗಣಿಸಿ)

ಅರ್ಥಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಜಿ. ಶಶಿಕಿರಣ್

ಮಾರ್ಗದರ್ಶಕರು
ಡಾ ಎ ಎಸ್ ಪ್ರಭಾಕರ
ಸಹಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೪

ಮಾರ್ಗದರ್ಶಕರ ದೃಢೀಕರಣ ಪತ್ರ

ಜಿ. ಶಶಿಕಿರಣ್ ವಿದ್ಯಾರ್ಥಿಯು **"ಒಂದು ಬುಡಕಟ್ಟಿನ ಅರ್ಥ ವ್ಯವಸ್ಥೆ"** (ಸಿದ್ದಿ ಬುಡಕಟ್ಟನ್ನು ಪರಿಗಣಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್ ಡಿ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಅರ್ಥಶಾಸ್ತ್ರ ವಿಷಯದಲ್ಲಿ ಸಿದ್ಧಪಡಿಸಿ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲ ವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : 28.3.2016

ಸ್ಥಳ : ವಿದ್ಯಾರಣ್ಯ

(ಡಾ ಎ ಎಸ್ ಪ್ರಭಾಕರ)
ಸಹಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

"ಒಂದು ಬುಡಕಟ್ಟಿನ ಅರ್ಥ ವ್ಯವಸ್ಥೆ" (ಸಿದ್ದಿ ಬುಡಕಟ್ಟನ್ನು ಪರಿಗಣಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು **ಡಾ ಎ ಎಸ್ ಪ್ರಭಾಕರ**, ಸಹಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಅರ್ಥಶಾಸ್ತ್ರ ವಿಷಯದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : 28.3.2014
ಸ್ಥಳ : ವಿದ್ಯಾರಣ್ಯ

(ಜಿ. ಶಶಿಕಿರಣ್)
ಸಂಶೋಧನಾ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿಶಿಷ್ಟಗಳು

ಭೂಪಟಗಳು

ಕೋಷ್ಟಕಗಳು

ಲಂಬಚಿತ್ರ

ವೃತ್ತಚಿತ್ರ

ಚಿತ್ರಗಳು

ಅಂಕಿ ಅಂಶಗಳು

ಪರಿವಿಡಿ

ಅನುಬಂಧಗಳು

ಅಧ್ಯಾಯ ಒಂದು

ಅಧ್ಯಯನದ ಸ್ವರೂಪ, ಸಮಸ್ಯೆ, ಉದ್ದೇಶ ಮತ್ತು ವ್ಯಾಪ್ತಿ

೧. ಪ್ರಸ್ತಾವನೆ

೨. ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ಮಹತ್ವ

೩. ಅಧ್ಯಯನದ ವ್ಯಾಪ್ತಿ, ಮಿತಿ ಮತ್ತು ಅವಶ್ಯಕತೆ

೪. ಅಧ್ಯಯನದ ವಿಧಾನ ಮತ್ತು ಇದುವರೆಗಿನ ಅಧ್ಯಯನಗಳ ಸಮೀಕ್ಷೆ

೫. ಭೌಗೋಳಿಕ-ಭೌತಿಕ ಅಂಕಿ ಅಂಶಗಳು

ಅಧ್ಯಾಯ ಒಂದು

ಅಧ್ಯಯನದ ಸ್ವರೂಪ, ಸಮಸ್ಯೆ, ಉದ್ದೇಶ ಮತ್ತು ವ್ಯಾಪ್ತಿ

ಪ್ರಸ್ತಾವನೆ

ಅಧುನಿಕ ಜಗತ್ತಿನ ಬಹು ಚರ್ಚಿತ ಮತ್ತು ಪ್ರಭಾವಶಾಲಿ ವಿಷಯಗಳೆಂದರೆ ರಾಜಕೀಯ ಮತ್ತು ಆರ್ಥಿಕತೆ. ರಾಜಕೀಯವೂ ಆರ್ಥಿಕ ಅಂಶಗಳಿಂದಲೇ ಪ್ರೇರಿತವಾಗಿದೆ. ನನ್ನ ೨೫ ವರ್ಷಗಳ ಅರ್ಥಶಾಸ್ತ್ರದ ಬೋಧನೆಯಲ್ಲಿ ಆಡಂ ಸ್ಮಿತ್, ಮಾರ್ಷಲ್, ಕೇನ್ಸ್ ಹೇಳಿದ್ದನ್ನೇ ಹೇಳುತ್ತಿದ್ದ ನನಗೆ, ಜಗತ್ತಿನಲ್ಲಿ ಈ ಸ್ವಾರ್ಥ, ಶೋಷಣೆ, ಆರ್ಥಿಕ, ಸಾಮಾಜಿಕ, ಲಿಂಗಸಂಬಂಧಿ, ಜನಾಂಗೀಯ, ಅಂತಾರಾಷ್ಟ್ರೀಯ ತಾರತಮ್ಯ ಇತ್ಯಾದಿಗಳು ಏಕಿವೆ? ಇವುಗಳಿಗೆಲ್ಲಾ ಮೂಲ ಕಾರಣ ವೇನು? ಇವುಗಳಿಗೆ ಅರ್ಥಶಾಸ್ತ್ರದಲ್ಲಿ ಪರಿಹಾರಗಳಿವೆಯೇ ಎಂಬ ಪ್ರಶ್ನೆಗಳು ಕಾಡತೊಡಗಿದವು. ಆದರೆ ಕಾಲಾನುಕ್ರಮದಲ್ಲಿ ನನ್ನ ಅಧ್ಯಯನ ವಿಸ್ತರಿಸುತ್ತಾ ಬುದ್ಧ, ಬಸವ, ಕಾರ್ಲ್ ಮಾರ್ಕ್ಸ್, ಅಂಬೇಡ್ಕರ್, ಅಮರ್ತ್ಯಸೇನ್ ಮುಂತಾದವರ ಪ್ರವೇಶವಾಗುತ್ತಾ ಹೋದಂತೆ, ಮಾನವನ ಈ ಎಲ್ಲ ಸಮಸ್ಯೆಗಳಿಗೆ ಅರ್ಥಶಾಸ್ತ್ರದಲ್ಲಿ ಉತ್ತರ ಸಿಗುವುದು ಹಾಗಿರಲಿ ಅರ್ಥಶಾಸ್ತ್ರವೇ ಈ ಎಲ್ಲ ಸಮಸ್ಯೆಗಳಿಗೆ ಮೂಲ ಕಾರಣವೆಂಬ ಭಾವನೆ ಮೂಡತೊಡಗಿತು. ಏಕೆಂದರೆ, ಅದೃಶ್ಯಹಸ್ತ, ಸ್ವಹಿತಾಸಕ್ತಿ, ತಾರ್ಕಿಕ ಮಾನವ, ಬಯಕೆಗಳ ಅಪರಿಮಿತತೆ, ಸಂಪನ್ಮೂಲಗಳ ಸೀಮಿತತೆ, ತುಷ್ಟಿಗುಣದ ಸಮಾನತೆ, ಬಂಡವಾಳದ ಅನಿವಾರ್ಯತೆ, ಹಣದ ಅಪರಿಮಿತ ಶಕ್ತಿ, ಅದರ ಮೇಲೆಯೇ ಮಾನವನ ಯಶಸ್ಸಿನ ನಿರ್ಧಾರ, ಸುಖದ ಹುಡುಕಾಟವೇ ಜೀವನದ ಸಾರ್ಥಕ್ಯ ಇತ್ಯಾದಿ ಊಹೆ, ನಂಬಿಕೆ, ಸಿದ್ಧಾಂತಗಳನ್ನು ಕಳೆದ ಎರಡು ಶತಮಾನಗಳಿಂದ ಜನರ ತಲೆಗೆ ತುಂಬುತ್ತಲೇ ಬಂದಿರುವ ಮುಖ್ಯವಾಹಿನಿ ಅರ್ಥಶಾಸ್ತ್ರ ಮತ್ತು ಅದನ್ನು ನಿಜ ಮಾಡಲು ಪ್ರಯತ್ನಿಸುತ್ತಿರುವ ಮಾರುಕಟ್ಟೆ, ಬೆಲೆ ತಾಂತ್ರಿಕತೆ, ಬೃಹತ್ ಕಾರ್ಖಾನೆಗಳ ಬಂಡವಾಳಶಾಹಿಗಳು, ಮಾನವ; ಮಾನವೀಯತೆಗಿಂತ ಸರಕು ಉತ್ಪಾದನೆ ಮತ್ತು ಮಾರಾಟವೇ ಮುಖ್ಯವೆಂದು ಬಿಂಬಿಸುತ್ತಿರುವ ಮಾಧ್ಯಮಗಳು, ಹುಸಿ

ಭರವಸೆಗಳ ಮೂಲಕ ದೇಶ ಸುಭಿಕ್ಷವಾಗಿದೆ ಎಂದು ನಂಬಿಸುತ್ತಿರುವ ರಾಜಕಾರಣಿಗಳು, ಒಂದರ ಮೇಲೊಂದು ಏಕಸ್ವಾಮ್ಯ ಸಾಧಿಸಲು ಹವಣಿಸುತ್ತಿರುವ ವಸಾಹತುಶಾಹಿ ರಾಷ್ಟ್ರಗಳು, ಅವುಗಳ ತಾಳಕ್ಕೆ ಬಡರಾಷ್ಟ್ರಗಳನ್ನು ಕುಣಿಸುತ್ತಿರುವ ವಿಶ್ವಬ್ಯಾಂಕ್ ಇತ್ಯಾದಿಗಳ ಸಿಂಡಿಕೇಟ್‌ನ ಹಿಂದೆ ಈ ಮುಖ್ಯವಾಹಿನಿಯ ಅರ್ಥಶಾಸ್ತ್ರದ ನೆರಳು ದಟ್ಟವಾಗಿಯೇ ಕಾಣುತ್ತದೆ.

ಇದರಿಂದ ಹೊರಬರುವ ದಾರಿಯನ್ನು ತೋರಿಸಿದ ಮಾರ್ಕ್ಸ್, ಸೆನ್ ಮುಂತಾದವರು ವಿಭಿನ್ನ ರೀತಿಯಲ್ಲಿ ಅರ್ಥಶಾಸ್ತ್ರವನ್ನು ವಿವೇಚಿಸುವ ಪ್ರಯತ್ನ ಮಾಡಿದರಾದರೂ ಅವರನ್ನು ಅರ್ಥಮಾಡಿಕೊಳ್ಳುವಲ್ಲಿ ಜಗತ್ತು ಸಂಪೂರ್ಣ ಯಶಸ್ಸು ಕಾಣಲಿಲ್ಲವೆಂದೇ ಹೇಳಬಹುದು. ಈಗ ಜಗತ್ತಿನಲ್ಲಿ ಕಾಣುತ್ತಿರುವ ವ್ಯವಸ್ಥೆ ವಿರೋಧಿ ಆಂದೋಲನಗಳು, ಪರಿಸರಮಾಲಿನ್ಯ, ಅಶಾಂತಿ ಅಸ್ಥಿರತೆ ಇತ್ಯಾದಿಗಳು ಈ ಅಂಶವನ್ನು ನಿರೂಪಿಸುತ್ತವೆ. ಈ ಹಿನ್ನೆಲೆಯಲ್ಲಿ ೨೧ನೇ ಶತಮಾನಕ್ಕೆ ಸೂಕ್ತವಾಗುವಂತೆ ಮತ್ತೊಮ್ಮೆ ಅರ್ಥಶಾಸ್ತ್ರವನ್ನು ವಿಭಿನ್ನವಾಗಿ ಅವಲೋಕಿಸುವ ಅವಶ್ಯಕತೆ ಇದೆ. ಪ್ರತಿಯೊಂದು ಸಮಸ್ಯೆಯ ಉತ್ತರ ಆ ಸಮಸ್ಯೆಯ ಮೂಲದಲ್ಲೇ ಇರುತ್ತದೆಂಬ ಮಾತಿನಂತೆ ಮೂಲ ಅರ್ಥಶಾಸ್ತ್ರ ಅಥವಾ ಪಾರಂಪರಿಕ ಅರ್ಥಶಾಸ್ತ್ರ ಅಥವಾ ಬುಡಕಟ್ಟು ಆರ್ಥಿಕತೆಯನ್ನು ಏಕೆ ಮರುಪರಿಶೀಲನೆ ಮಾಡಬಾರದೆಂಬ ಯೋಚನೆ ಬಂದ ನಂತರ ಈ ವಿಷಯವಾಗಿ ಆರಂಭವಾದ ಅಧ್ಯಯನವೇ ಈ ಮಹಾಪ್ರಬಂಧವಾಗಿದೆ.

ಬುಡಕಟ್ಟು ಮಾನವನ ಜೀವನದ ಆದಿಮ ಆರ್ಥಿಕತೆಯ ವಿವಿಧ ಹಂತಗಳು, ಆಚರಣೆಗಳು, ನಂಬಿಕೆಗಳು, ಹೋರಾಟಗಳು, ಯಶಸ್ಸುಗಳು, ವೈಫಲ್ಯಗಳು ಹೇಗೆ ಹಂತಹಂತವಾಗಿ ಆಧುನಿಕ ಆರ್ಥಿಕತೆಗೆ ಕಾರಣವಾದುವು ಮತ್ತು ಅವು ಹೇಗೆ ಪಲ್ಲಟಗೊಂಡು ಹೊಸಹೊಸ ರೂಪ ಪಡೆದವು ಎನ್ನುವುದನ್ನು ಮಾನವಿಕಾರ್ಥಶಾಸ್ತ್ರದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಆರ್ಥಿಕತೆಯ ಅಸಮಾನತೆ, ಅಸ್ಥಿರತೆ ಮುಂತಾದ ಅನಾರೋಗ್ಯಕರ ಸ್ಥಿತಿಗೆ ಪರಿಹಾರಗಳು ಮೂಲ ಬುಡಕಟ್ಟಿನ ಆರ್ಥಿಕತೆಯಲ್ಲೇ ಇರುವುದೇ ಹೇಗೆಂಬುದನ್ನೂ ವಿವೇಚಿಸಲಾಗಿದೆ. ಆ ಆದಿಮ ಆರ್ಥಿಕತೆ ಬುಡಕಟ್ಟುಗಳ ಜೀವನದಲ್ಲಿ ಅದರಲ್ಲೂ ಸಿದ್ದಿಗಳಲ್ಲಿ ಹಾಗೇ ಉಳಿದಿದೆ ಎನ್ನಲಾಗದಿದ್ದರೂ, ಅದರ ಛಾಯೆಗಳ ಹುಡುಕಾಟ ನಡೆಸಲಾಗಿದೆ. ಈ ಬುಡಕಟ್ಟಿನ ಪ್ರಸಕ್ತ ಏಕಾಂಗಿತನದ ಪರಿಸ್ಥಿತಿಗೆ ಅವರ ವಿದೇಶಿ ಮೂಲ, ಗುಲಾಮಗಿರಿ ಹಾಗೂ ದೈಹಿಕ ಲಕ್ಷಣಗಳೂ ಕಾರಣವಾಗಿವೆಯೇ ಹೇಗೆ? ಅವರನ್ನು ಮುಖ್ಯವಾಹಿನಿಗೆ ತರುವುದರಿಂದ ಅವರ ಜೀವನ ಉತ್ತಮವಾಗಬಹುದೇ? ಇತ್ಯಾದಿ ಸಾಧ್ಯತೆಗಳನ್ನು ನಿರ್ವಚಿಸಲು ಪ್ರಯತ್ನಿಸಲಾಗಿದೆ.

ಇಂದಿನ ಬಹುತೇಕ ಬುಡಕಟ್ಟುಗಳಲ್ಲಿ ಮೂಲ ಲಕ್ಷಣಗಳು ಮಾಯವಾಗಿವೆಯಾದರೂ ಜನನ, ಮರಣ, ವಿವಾಹ, ಬಳಿ, ಅಂತ್ಯಸಂಸ್ಕಾರ, ಹಬ್ಬ-ಹರಿದಿನಗಳ ಆಚರಣೆಗಳಲ್ಲಿ ಬುಡಕಟ್ಟಿನ ಮೂಲ ಕುರುಹು, ಸಂಸ್ಕೃತಿ, ಆಹಾರಪದ್ಧತಿ ಇತ್ಯಾದಿಗಳ ಛಾಪು ಇನ್ನೂ ಉಳಿದಿರುವುದು ಕಂಡುಬರುತ್ತದೆ. ಅಂದರೆ ಬುಡಕಟ್ಟುಗಳು ಹೊರನೋಟಕ್ಕೆ, ಭೌತಿಕವಾಗಿ ಬದಲಾಗಿರಬಹುದಾದರೂ ಆಂತರಿಕವಾಗಿ,

ಸಾಂಸ್ಕೃತಿಕ ಆಚರಣೆಯಲ್ಲಿ, ಮೂಲ ಬುಡಕಟ್ಟು ಚಹರೆಗಳು ಇನ್ನೂ ಬದಲಾಗಿಲ್ಲ. ನಾವು ಎಷ್ಟೇ ಆಧುನೀಕರಣ ಹೊಂದಿದ್ದೇವೆ, ಬದಲಾಗಿದ್ದೇವೆ ಎಂದುಕೊಂಡರೂ ಗೋತ್ರಗಳನ್ನು ಉಳಿಸಿಕೊಂಡಿರುವುದು, ಸಗೋತ್ರ ವಿವಾಹವಾಗದಿರುವುದು. ಆಧುನಿಕ ದೈವಗಳನ್ನು ಪೂಜಿಸಿದರೂ ಮೂಲದೈವ ಹಾಗೂ ಹಿರಿಯರ ಹಬ್ಬಗಳನ್ನು ಆಚರಿಸುತ್ತಿರುವುದು, ಸಾಂಕೇತಿಕವಾಗಿಯಾದರೂ ಬೇಟೆ, ಯುದ್ಧ, ಆಯುಧ ಪೂಜೆ, ಹಬ್ಬ-ತಿಥಿ ಸಮಯದಲ್ಲಿ ನಿರ್ದಿಷ್ಟ ಆಹಾರದ ನೈವೇದ್ಯ, ಸೇವನೆ, ಬಲಿ(ಕುರಿ, ಕೋಳಿ, ಕುಂಬಳಕಾಯಿ, ತೆಂಗಿನಕಾಯಿ ಅಥವಾ ನಿಂಬೆಹಣ್ಣು)ಗಳನ್ನು ಇನ್ನೂ ಉಳಿಸಿಕೊಂಡಿರುವುದು ಇತ್ಯಾದಿಗಳು ಮೂಲ ಬುಡಕಟ್ಟಿನ ಆಚರಣೆಗಳನ್ನು, ಅದರ ಗಟ್ಟಿತನವನ್ನು ಸೂಚಿಸುತ್ತವೆ. ನಾವು ಮತ್ತು ನಮ್ಮ ಮನೆ, ಎಷ್ಟೇ ಬದಲಾದರೂ ಆದಿಮ ಸಂಸ್ಕೃತಿ ನಮ್ಮ ಅಡುಗೆಮನೆ, ದೇವರಮನೆ, ಹಿತ್ತಲು, ಅಂಗಳ, ಮದುವೆಮನೆ, ಹಾಗೂ ಸ್ಮಶಾನಗಳಲ್ಲಿ ಇವುಗಳ ನೆರಳು ಇನ್ನೂ ಕಂಡುಬರುತ್ತದೆ.

ಈ ಹಿನ್ನೆಲೆಯಲ್ಲಿ ಬುಡಕಟ್ಟು ಆರ್ಥಿಕತೆಯು ಆಧುನಿಕ ಆರ್ಥಿಕತೆಗೆ ಕೆಲವು ಮೂಲಭೂತ ಸಮಸ್ಯೆಗಳ ಪರಿಹಾರ ಕಂಡುಕೊಳ್ಳುವಲ್ಲಿ ಮಾರ್ಗದರ್ಶನ ಮಾಡಬಹುದು. ಹಾಗೆಯೇ ಬುಡಕಟ್ಟುಗಳು ಎದುರಿಸುತ್ತಿರುವ ಹಲವಾರು ಸಮಸ್ಯೆ, ಸಂಕಷ್ಟಗಳಿಗೆ ಆಧುನಿಕ ಆರ್ಥಿಕತೆ ಪರಿಹಾರ ನೀಡಬಹುದು. ಈ ರೀತಿಯ ಕೊಡುಕೊಳ್ಳುವಿಕೆಯ ಅವಶ್ಯಕತೆ ಹಿಂದೆಂದಿಗಿಂತಲೂ ಇಂದು ಅತ್ಯಾವಶ್ಯಕವಾಗಿದೆ. ಬುಡಕಟ್ಟು ಆರ್ಥಿಕತೆಯ ಕೆಲವು ಸರಳ ನೀತಿನಿಯಮಗಳನ್ನು ಪಾಲಿಸುವ ಮೂಲಕ ಆಧುನಿಕ ಅರ್ಥಶಾಸ್ತ್ರದ ದುರಾಸೆ, ಅನೈತಿಕತೆ, ಅನಗತ್ಯ ಉತ್ಪಾದನೆ, ಅತಿಯಾದ ಕೊಳ್ಳುಬಾಕತನಗಳಂತಹ ಸ್ವಯಂಕೃತಾಪರಾಧಗಳಿಂದ ಜಗತ್ತು ಪ್ರಳಯದಂಚಿಗೆ ಜಾರುವುದರಿಂದ ರಕ್ಷಿಸಬಹುದಲ್ಲದೆ, ಮೂಲಭೂತ ಸೌಕರ್ಯಗಳ ಕೊರತೆ, ಅನಿರೀಕ್ಷಿತ ವಿಪತ್ತುಗಳನ್ನು ಹಾಗೂ ಆಧುನಿಕ ಮಾನವನ ದಾಳಿಯನ್ನು ಎದುರಿಸುವ ಜ್ಞಾನ, ಸಾಮರ್ಥ್ಯಗಳನ್ನು ನೀಡುವ ಮೂಲಕ ಬುಡಕಟ್ಟುಗಳನ್ನು ಸಶಕ್ತಗೊಳಿಸಿ ಅವು ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳುವಂತೆ ಮಾಡಬಹುದು. ಇದಕ್ಕಾಗಿ ನಾವು ಬುಡಕಟ್ಟು ಆರ್ಥಿಕತೆಯನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯ. ಆದರೆ ಬುಡಕಟ್ಟುಗಳಿಗೆ ಆರ್ಥಿಕತೆಯೇ ಇಲ್ಲ ಅಥವಾ ಬುಡಕಟ್ಟು ಅರ್ಥಶಾಸ್ತ್ರವೆಂಬ ಜ್ಞಾನ ಶಿಸ್ತೇ ಇಲ್ಲ ಎಂಬ ವಾದ ಕೆಲವು ಆಧುನಿಕ ಅರ್ಥಶಾಸ್ತ್ರಜ್ಞರದು. ಏಕೆಂದರೆ ಅವರಲ್ಲಿ ಇನ್ನೂ ಸಾಟಿಪದ್ಧತಿ ಪ್ರಮುಖವಾಗಿದ್ದು ಹಣದ ಆರ್ಥಿಕತೆ ಅಷ್ಟಾಗಿಲ್ಲ. ಬುಡಕಟ್ಟುಗಳಲ್ಲಿ ಅನುಭೋಗ, ಉಳಿತಾಯ, ಬೇಡಿಕೆ, ಬಂಡವಾಳ ಹೂಡಿಕೆ, ವರಮಾನ, ಉದ್ಯೋಗ ಎಂಬಿತ್ಯಾದಿ ಪರಿಕಲ್ಪನೆಗಳನ್ನು ಆಧುನಿಕ ಆರ್ಥಿಕತೆಯಂತೆ ಸುಲಭವಾಗಿ ವಿವರಿಸಲು ಸಾಧ್ಯವೇ ಇಲ್ಲ. ಏಕೆಂದರೆ ಬೇಟೆಯನ್ನು ಉದ್ಯೋಗವೆನ್ನಲಾಗದು ಮತ್ತು ಅವರಿಗೆ ನಿರ್ದಿಷ್ಟ ಉದ್ಯೋಗವೆಂಬುದೇ ಇಲ್ಲ. ವರಮಾನ ನಿರ್ದಿಷ್ಟವಾಗಿ ಇಷ್ಟೇ ಎಂದು ಹೇಳಲಾಗದು, ಉಳಿತಾಯ, ಬಂಡವಾಳಗಳು ಅವರಿಗೆ ಗೊತ್ತೇ ಇಲ್ಲ, ಇತ್ಯಾದಿ ವಾದಗಳನ್ನು ಅವರು ಮುಂದಿಡುತ್ತಾರೆ. ಹಾಗಾಗಿ ಅವರ ಪ್ರಕಾರ ವರ್ತಮಾನದ ಅರ್ಥಶಾಸ್ತ್ರದ ನಿಯಮಗಳು ಬುಡಕಟ್ಟು ಜಗತ್ತಿಗೆ ಅನ್ವಯವಾಗುವುದಿಲ್ಲ.

ಆದರೆ ಅರ್ಥಶಾಸ್ತ್ರದ ವಿವಿಧ ಪರಿಕಲ್ಪನೆಗಳನ್ನು ಮೂಲ ಸಿದ್ಧಾಂತದಲ್ಲಿರುವಂತೆಯೇ ಗ್ರಹಿಸ ಬೇಕೆಂದುಕೊಳ್ಳುವುದು ಸರಿಯಲ್ಲ. ಬುಡಕಟ್ಟುಗಳ ಲೋಕವೇ ವಿಶಿಷ್ಟವಾಗಿದ್ದು ಅದಕ್ಕೆ ತಕ್ಕಂತೆ ಅರ್ಥಶಾಸ್ತ್ರದ ನಿಯಮಗಳಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಂಡರೆ ಮಾತ್ರ ಬುಡಕಟ್ಟು ಆರ್ಥಿಕತೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ. ಬದಲಾಗಿ ಅರ್ಥಶಾಸ್ತ್ರದ ಪುಸ್ತಕಗಳಲ್ಲಿ ಇರುವುದೇ ಪರಮಸತ್ಯ, ಅದರಾಚೆಗಿರುವುದೆಲ್ಲ ಸುಳ್ಳು ಎಂದುಕೊಂಡರೆ ಬುಡಕಟ್ಟುಗಳ ಸರಳ ಆರ್ಥಿಕತೆಯಲ್ಲಿ ಮಹತ್ವದ ಪಾತ್ರ ವಹಿಸುವ ನಂಬಿಕೆಗಳು, ಸಂಪ್ರದಾಯಗಳು, ಸೃಷ್ಟಿಪುರಾಣಗಳು ಇತ್ಯಾದಿಗಳು ನಮಗೆ ಬಾಲಿಶವೆನಿಸಬಹುದಾದ ಸಾಧ್ಯತೆಗಳಿವೆ. ಬುಡಕಟ್ಟು ಜನರಿಗೆ ನಮ್ಮ ಹಣ ಕೇವಲ ಕಾಗದವೆನಿಸಬಹುದು. ನಮ್ಮ ಅವಸರದ, ಒತ್ತಡದ ಜೀವನ ವಿಚಿತ್ರವೆನಿಸಬಹುದು. ಹಣ ಕೊಟ್ಟು ಎಲ್ಲವನ್ನೂ ಕೊಳ್ಳಬಹುದು, ಹಣವಿಲ್ಲದಿದ್ದರೆ ಜೀವನವೇ ನಶ್ವರ ಎಂಬುದೆಲ್ಲಾ ಅವರಿಗೆ ಕೇವಲ ವೆನಿಸಬಹುದು. ಅವರ ನಂಬುಗೆಯಂತೆ ಗಿಡ ಮರಗಳೂ ಮಾತನಾಡುತ್ತವೆ, ಪ್ರಾಣಿಗಳ ಆತ್ಮಕ್ಕೆ ನಾವು ನಮ್ಮನ್ನು ಕ್ಷಮಿಸುವಂತೆ ಬೇಡಿಕೊಳ್ಳಬೇಕು, ಎಂಬೆಲ್ಲಾ ನಂಬಿಕೆಗಳು ನಮಗೆ ಮೂಢನಂಬಿಕೆಯಂತೆ ಕಾಣಬಹುದು. ಆದರೆ ನಮ್ಮ ನಂಬಿಕೆ ನಮಗೆ ಹೇಗೆ ಸರಿಯೆನ್ನಿಸುತ್ತದೆಯೋ ಹಾಗೆಯೇ ಅವರ ನಂಬಿಕೆಗಳೂ ಅವರಿಗೆ ಸರಿಯೆನಿಸುವುದರಲ್ಲಿ ತಪ್ಪೇನಿಲ್ಲ. ಇದನ್ನು ಅರ್ಥ ಮಾಡಿಕೊಳ್ಳಲು ಅವರ ಮುಗ್ಧತೆ, ನಂಬಿಕೆ, ಜಾನಪದಗಳನ್ನು ನೋಡಬೇಕೇ ವಿನಾ ನಮ್ಮ ತಾರ್ಕಿಕತೆ, ವೈಜ್ಞಾನಿಕ ಕಾರ್ಯಕಾರಣ ಸಂಬಂಧಗಳಿಂದಲ್ಲ. ಅವರಲ್ಲಿ 'ಮನುಷ್ಯ ಮರವಾಗಬಹುದು, ಮೊಟ್ಟೆ ಮನುಷ್ಯ ನಾಗಬಹುದು, ಆತ್ಮ ಜೋರಾಗಿ ಊದಿದರೆ ಬಿರುಗಾಳಿ ಏಳಬಹುದು. ಇವೆಲ್ಲವೂ ಅವರಿಗೆ ಸೂರ್ಯ ಚಂದ್ರರಷ್ಟೇ ನಿಜ ಮತ್ತು ಸಹಜ'.[೧] ಈ ಅರ್ಥವಂತಿಕೆ ಬಂದಾಗ ಮಾತ್ರ ನಾವು ಬುಡಕಟ್ಟುಗಳನ್ನು, ಅವರ ಆರ್ಥಿಕತೆಯ ವಿವಿಧ ಪರಿಕಲ್ಪನೆಗಳನ್ನೂ ಅರ್ಥ ಮಾಡಿಕೊಳ್ಳುವುದು ಸಾಧ್ಯ.

ಅರ್ಥಶಾಸ್ತ್ರ ಹಾಗೂ ಅರ್ಥವ್ಯವಸ್ಥೆ

ಜನಸಾಮಾನ್ಯರ ದೃಷ್ಟಿಯಲ್ಲಿ ಅರ್ಥಶಾಸ್ತ್ರವೆಂದರೆ ಅದೊಂದು ಅರ್ಥವಾಗದ, ನೀರಸ, ಕ್ಲಿಷ್ಟ ಕಬ್ಬಿಣದ ಕಡಲೆಯಾಗಿದ್ದು ಅರ್ಥಶಾಸ್ತ್ರಜ್ಞರಿಗೆ ಮಾತ್ರ ಸಂಬಂಧಿಸಿದೆಯೆಂಬ ಭಾವನೆಯಿದೆ. ಆದರೆ ವಾಸ್ತವಿಕವಾಗಿ ಅದು ಹಾಗಿರದೆ ಎಲ್ಲರಿಗೂ ಸಂಬಂಧಿಸಿದ, ಜೀವನದ ಎಲ್ಲ ಆಯಾಮಗಳನ್ನೂ ಪ್ರಭಾವಿಸುವ ಸರಳವಾದ ವಿಷಯವಾಗಿದೆ. 'ರಾಜಕೀಯ ಅರ್ಥಶಾಸ್ತ್ರವು ನೀರಸವಾದ, ಬೇಸರ ತರಿಸುವಂತಹ ವಿಷಯವೆಂದು ಭಾವಿಸುವುದು ಕೆಲವರಿಗೆ ಅಭ್ಯಾಸವಾಗಿಬಿಟ್ಟಿದೆ. ಆದರೂ ಸಮಾಜದ ಆರ್ಥಿಕ ರಚನೆಯೂ ಪ್ರಕೃತಿಗಿಂತ ಕಮ್ಮಿ ಏನೂ ಇಲ್ಲದಷ್ಟು ಆಕರ್ಷಕ ಸಮಸ್ಯೆಗಳನ್ನೂ ರಹಸ್ಯಗಳನ್ನೂ ಒಳಗೊಂಡಿದೆ'[೨] ಎನ್ನುವುದು ಹೆಚ್ಚು ಸೂಕ್ತ.

ಅರ್ಥಶಾಸ್ತ್ರವೆಂದರೆ ಶಾಬ್ಧಿಕವಾಗಿ 'ಎಯ್ಕಾಸ್' ಮತ್ತು 'ನೋಮೋಸ್' ಎಂಬ ಎರಡು ಶಬ್ದ ಗಳಿಂದಾಗಿದ್ದು ಅದರ ಅರ್ಥ 'ಮನೆವಾರ್ತೆಯ ಮೇಲ್ವಿಚಾರಣೆ' Household Management

ಎಂದಾಗುತ್ತದೆ. ಸರಳವಾಗಿ ಹೇಳಬೇಕೆಂದರೆ ಒಂದು ಸಮಾಜ ತನ್ನ ಭೌತಿಕ ಅವಶ್ಯಕತೆಗಳನ್ನು ಹಣಕಾಸಿನ ವ್ಯವಸ್ಥೆಯ ಸಹಾಯದೊಡನೆ ಪೂರೈಸಿಕೊಳ್ಳುವ ಮಾರ್ಗವೇ ಅರ್ಥಶಾಸ್ತ್ರವಾಗಿದೆ. ಇದು ಕೇವಲ ಧನಾರ್ಜನೆಯ ಕಲೆ ಅಥವಾ ವ್ಯಕ್ತಿಗಳು, ಕುಟುಂಬಗಳು ಮತ್ತು ಕಂಪನಿಗಳ ಹಣಕಾಸು ಸಂಬಂಧಿ ಸಮಸ್ಯೆ ಹಾಗೂ ವಿಷಯಗಳ ಅಧ್ಯಯನ ಮಾತ್ರವಲ್ಲದೆ ಆರ್ಥಿಕತೆಯ ಮತ್ತು ಆರ್ಥಿಕತೆಯು ಎದುರಿಸುತ್ತಿರುವ ಸಮಸ್ಯೆಗಳ, ವಿಶ್ವದ ಶಾಂತಿ ನೆಮ್ಮದಿ ಕದಡಬಹುದಾದ ಅಥವಾ ಸಾಧಿಸಬಹುದಾದ ಪ್ರಮುಖ ವಿಷಯಗಳ ಅಧ್ಯಯನವೂ ಆಗಿದೆ. ಅದು ನಮ್ಮೆಲ್ಲರ ಸಾಮಾಜಿಕ, ರಾಜಕೀಯ, ನೈತಿಕ, ಧಾರ್ಮಿಕ, ಭಾವನಾತ್ಮಕ, ತಾಂತ್ರಿಕ, ತಾತ್ವಿಕ ಇತ್ಯಾದಿಯಾಗಿ ಜೀವನದ ಎಲ್ಲ ಆಯಾಮಗಳ ಮೇಲೆ ತನ್ನ ಛಾಪನ್ನು ಒತ್ತಿದೆ.

'ಸರಳವಾಗಿ ಹೇಳಬೇಕೆಂದರೆ ಒಂದು ಸಮಾಜ ತನ್ನ ಭೌತಿಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಮಾರ್ಗವೇ ಅರ್ಥಶಾಸ್ತ್ರವಾಗಿದೆ.'[೩]

'ಮಾನವಕುಲವು ಯಾವತ್ತೂ ಅರ್ಥಶಾಸ್ತ್ರದ ಮೇಲೆಯೇ ಜೀವಿಸಿಕೊಂಡು ಬಂದಿದೆ. ರಾಜಕಾರಣ, ಮತ, ಧರ್ಮ, ವಿಜ್ಞಾನ, ಕಲೆ ಇವೆಲ್ಲಾ ಅರ್ಥಶಾಸ್ತ್ರದ ಆಧಾರದ ಮೇಲಷ್ಟೇ ಅಸ್ತಿತ್ವದಲ್ಲಿರಬಲ್ಲವು.'[೪]

ಇನ್ನು ಆರ್ಥಿಕತೆ, ಅರ್ಥವ್ಯವಸ್ಥೆ ಎಂಬುದು ಒಂದು ದೇಶದ, ಪ್ರದೇಶದ ಜನರ, ಜನಾಂಗದ ಆರ್ಥಿಕ ಜೀವನದ ವ್ಯವಸ್ಥೆಯನ್ನು, ಸಮಗ್ರ ಆರ್ಥಿಕ ಚಟುವಟಿಕೆಗಳನ್ನು ಪ್ರತಿನಿಧಿಸುತ್ತದೆ. ಜನರ ಜೀವನೋಪಾಯದ ವಿವಿಧ ಕಸುಬುಗಳೇನು, ಉತ್ಪಾದಿಸುವ, ಅನುಭೋಗಿಸುವ, ವಿನಿಮಯಿಸುವ, ಉಳಿತಾಯ ಅಥವಾ ಸಾಲ ಮಾಡುವ, ಹಂಚಿಕೆಯ, ಒಟ್ಟಾರೆ ಭೌತಿಕ ಜೀವನದ, ಹಣಕ್ಕೆ ಸಂಬಂಧಿಸಿದ ವಿವಿಧ ಚಟುವಟಿಕೆಗಳು ಹೇಗೆ ನಿರ್ವಹಿಸಲ್ಪಡುತ್ತಿವೆ? ಯಾವ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಇವುಗಳನ್ನೆಲ್ಲಾ ನಿಯಂತ್ರಿಸಲಾಗುತ್ತಿವೆ ಎಂಬುದರ ವಿವೇಚನೆಯಾಗಿದೆ.

ಇದು ಸಾಮಾನ್ಯ ಅನಿಸಿಕೆಯಾಗಿದ್ದು, ವಾಸ್ತವಿಕವಾಗಿ ಇದಕ್ಕೆ ತುಂಬಾ ವಿಶಾಲ ಅರ್ಥವಿದೆ. ಅರ್ಥವ್ಯವಸ್ಥೆ ಕೇವಲ ಆರ್ಥಿಕ ಅಂಶಗಳನ್ನು ಮಾತ್ರವಲ್ಲದೆ ಭೌಗೋಳಿಕ, ಸಾಮಾಜಿಕ, ಧಾರ್ಮಿಕ, ನೈತಿಕ, ರಾಜಕೀಯ, ನ್ಯಾಯಿಕ, ಕೌಟುಂಬಿಕ, ಇತ್ಯಾದಿ ಮಾನವ ಜೀವನದ ಎಲ್ಲ ರಂಗಗಳನ್ನು ಪ್ರಭಾವಿಸುವ ಮತ್ತು ಆಯಾ ರಂಗಗಳಲ್ಲಿ ಅವನ ಅಭಿವೃದ್ಧಿಗೆ ಪೂರಕವಾಗಿರುವ, ಐಹಿಕ ಜೀವನಕ್ಕೆ ಸಹಾಯಕವಾಗುವ ಎಲ್ಲ ಅಂಶಗಳ ಸಮಗ್ರ ಮೊತ್ತವೇ ಆರ್ಥಿಕತೆಯಾಗಿದೆ ಎನ್ನಬಹುದು.

ಅಭಿವೃದ್ಧಿ: ಇಂದಿನ ದಿನಗಳಲ್ಲಿ ಅಭಿವೃದ್ಧಿಯ ಬಗ್ಗೆ ಬಹಳಷ್ಟು ಚರ್ಚೆಗಳಾಗುತ್ತಿದ್ದು ಇದಕ್ಕೆ ಹಲವಾರು ಆಯಾಮಗಳಿವೆ. ಮೊದಮೊದಲು ಆಡಂ ಸ್ಮಿತ್, ಮಾರ್ಷಲ್‌ರ ಚಿಂತನೆಗಳು ವ್ಯಕ್ತಿಯ ವೈಯಕ್ತಿಕ ಅಭಿವೃದ್ಧಿಗೆ ಆದ್ಯತೆ ನೀಡಿದ್ದವು. ಪ್ರತಿ ವ್ಯಕ್ತಿಯ ಜೀವನಕ್ಕೆ ಅವನೇ ಜವಾಬ್ದಾರನಾಗಿದ್ದು ಅವನ ಏಳ್ಗೆಯ ತೀರ್ಮಾನಗಳನ್ನು ಅವನಿಗಿಂತಲೂ ಚೆನ್ನಾಗಿ ಬೇರೆ ಯಾರೂ ಕೈಗೊಳ್ಳಲಾರರು.

ಅಂದರೆ, ಪ್ರತಿ ವ್ಯಕ್ತಿಗೂ ಸ್ವ ಹಿತಾಸಕ್ತಿಯೆಂಬ ಅದೃಶ್ಯ ಹಸ್ತದ ಅಂತಃಸ್ಫೂರ್ತಿ ಇದ್ದು, ಅದು ಅವನನ್ನು ಅಭಿವೃದ್ಧಿ ಹೊಂದುವಂತೆ ಪ್ರೇರೇಪಿಸುತ್ತಿರುತ್ತದೆ. ಅದಕ್ಕಾಗಿ ಅವನು ಕಷ್ಟಪಟ್ಟು ಕೆಲಸ ಮಾಡುತ್ತಾನೆ, ಆದಾಯ ಗಳಿಸುತ್ತಾನೆ, ಅನುಭೋಗ ಮಾಡುತ್ತಾನೆ. ಹೀಗೆಯೇ ಪ್ರತಿಯೊಬ್ಬ ವ್ಯಕ್ತಿಯೂ ತನ್ನನ್ನು ತಾನು ಅಭಿವೃದ್ಧಿಗೊಳಿಸಿಕೊಳ್ಳುತ್ತಾ ಹೋದಂತೆ ಇಡೀ ಸಮಾಜದ ಅಭಿವೃದ್ಧಿ ತಂತಾನೆ ಆಗುತ್ತದೆ. ಇಲ್ಲಿ ಸರ್ಕಾರ ಅಥವಾ ಬಾಹ್ಯಶಕ್ತಿಗಳ ಹಸ್ತಕ್ಷೇಪಕ್ಕೆ ಅವಕಾಶವೇ ಇಲ್ಲ. ಏಕೆಂದರೆ, ಬಂಡವಾಳಶಾಹಿ ವ್ಯವಸ್ಥೆಯು ಸ್ವಯಂಚಾಲಿತ ಹೊಂದಾಣಿಕೆಯ ಶಕ್ತಿ ಹೊಂದಿದ್ದು ಸಮಸ್ಯೆಗಳನ್ನು ಮಾರುಕಟ್ಟೆ ಶಕ್ತಿಗಳೇ ಪರಿಹರಿಸಿಕೊಳ್ಳುತ್ತವೆ. ಯಾವುದೇ ಹಸ್ತಕ್ಷೇಪ ಈ ಸ್ವಯಂ ಹೊಂದಾಣಿಕೆಗೆ ಅಡಚಣೆ ಉಂಟುಮಾಡುತ್ತದೆ. ತುಷ್ಟಿಗುಣ ಅನುಭೋಗವನ್ನು ನಿರ್ಧರಿಸಿದರೆ ಬೆಲೆ ತಾಂತ್ರಿಕತೆ ಮತ್ತು ಮಾರುಕಟ್ಟೆ ಉತ್ಪಾದನೆಯನ್ನು ನಿಯಂತ್ರಿಸುತ್ತವೆ. ಬೆಲೆ ಮತ್ತು ಮಾರುಕಟ್ಟೆಯನ್ನು ಬಂಡವಾಳ ನಿರ್ಧರಿಸುತ್ತದೆ.

ಆದರೆ ನಂತರದ ದಿನಗಳಲ್ಲಿ ವೈಯಕ್ತಿಕ ಹಿತಾಸಕ್ತಿಗಳ ಬದಲಾಗಿ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಪ್ರಾಮುಖ್ಯತೆ ದೊರೆತು ವಸಾಹತುಶಾಹಿಗೆ ದಾರಿ ಮಾಡಿಕೊಟ್ಟಿತು. ಸಾಮಾನ್ಯವಾಗಿ ರಾಷ್ಟ್ರೀಯ ವರಮಾನ ಮತ್ತು ತಲಾ ವರಮಾನಗಳನ್ನು ಹೆಚ್ಚಿಸುವುದೇ ಅಭಿವೃದ್ಧಿ ಎಂಬ ಭಾವನೆ ಇತ್ತು. ವಿಶ್ವಬ್ಯಾಂಕ್ ನಂತಹ ಸಂಸ್ಥೆಗಳು ಇದೇ ಆಧಾರದ ಮೇಲೆಯೇ ರಾಷ್ಟ್ರಗಳನ್ನು ಅಭಿವೃದ್ಧಿ ಹೊಂದಿದ, ಹಿಂದುಳಿದ ಅಥವಾ ಅಭಿವೃದ್ಧಿಶೀಲ ರಾಷ್ಟ್ರಗಳೆಂದು ವಿಭಜಿಸಿದೆ. ಇದು ಹಣ ಅಥವಾ ಭೌತಿಕ ಸರಕುಗಳ ಹೊಂದುವಿಕೆ ಹಾಗೂ ಅನುಭೋಗವನ್ನು ಅವಲಂಬಿಸಿದೆ, ಅವಶ್ಯಕ ಸರಕುಗಳನ್ನು ಹೊಂದಿದವರು ಹಿತಕರ ಸರಕುಗಳನ್ನೂ. ಹಿತಕರ ಸರಕುಗಳನ್ನು ಹೊಂದಿದವರು ಐಷಾರಾಮದ ಸರಕುಗಳನ್ನೂ ಹೆಚ್ಚು ಹೆಚ್ಚು ಹೊಂದುವಂತೆ ಮಾಡುವುದೇ ಅಭಿವೃದ್ಧಿ ಎಂಬ ಪರಿಕಲ್ಪನೆ ಇದೆ. ಇನ್ನಷ್ಟು ಸರಕು, ಉತ್ತಮ ಸರಕು, ಹೊಸ ಸರಕುಗಳನ್ನು ಹೊಂದುವುದೇ ಅಭಿವೃದ್ಧಿಯ ರಹದಾರಿ ಎಂಬ ಹೆಡೋನಿಸಂ ಅಥವಾ ಭೋಗ ಕೇಂದ್ರಿತ ಮನಃಸ್ಥಿತಿಯನ್ನೇ ಅಭಿವೃದ್ಧಿ ಎಂದು ಬಿಂಬಿಸಲಾಗುತ್ತಿದೆ. ಇದಕ್ಕಾಗಿ ರಾಷ್ಟ್ರಗಳು ತಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು, ಮಾನವ ಸಂಪನ್ಮೂಲಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಂಡು ಉತ್ಪಾದನೆಯನ್ನು ಗರಿಷ್ಠಗೊಳಿಸಿಕೊಳ್ಳಬೇಕು. ಉತ್ಪಾದನೆ ಹೆಚ್ಚಾದಂತೆ ಅದಕ್ಕೆ ತಕ್ಕ ಮಾರುಕಟ್ಟೆ ಹುಡುಕಬೇಕು ಇಲ್ಲವೇ ಹೊಸ ಮಾರುಕಟ್ಟೆ ಸೃಷ್ಟಿಸಿಕೊಳ್ಳಬೇಕು. ಇದಕ್ಕಾಗಿ ಅಲ್ಲಲ್ಲಿ ವಸಾಹತುಗಳನ್ನು ಸೃಷ್ಟಿಸಬೇಕು. ಆಯಾ ದೇಶದ ಆರ್ಥಿಕತೆಯನ್ನು ಮಾತ್ರವಲ್ಲದೆ ರಾಜಕೀಯ, ಸಾಮಾಜಿಕ, ನೈತಿಕ ಅಂಶಗಳನ್ನು ಮಾರುಕಟ್ಟೆಗಳ ಆಶಯಕ್ಕನುಗುಣವಾಗಿ ಬದಲಾಯಿಸಬೇಕು. ಏನೇ ಆಗಲಿ, ಹೆಚ್ಚು, ಉತ್ಪಾದನೆ, ಹೆಚ್ಚು ಮಾರಾಟ, ಹೆಚ್ಚು ಲಾಭ, ಮತ್ತಷ್ಟು ಬಂಡವಾಳ ಹೂಡಿಕೆ, ಮತ್ತಷ್ಟು ಆದಾಯ. ಹೀಗೆ ನಿರಂತರ ಲಾಭ ಮತ್ತು ಆದಾಯ ಹೆಚ್ಚಳವೇ ಅಭಿವೃದ್ಧಿಯ ಸಾಧನ ಮತ್ತು ಸಾಧನೆ ಎಂಬುದು ಮುಖ್ಯವಾಹಿನಿ ಅರ್ಥಶಾಸ್ತ್ರದ ನಂಬಿಕೆ.

ಆದರೆ ಇದರಿಂದ ಬೇರ್ಪಟ್ಟ ಕೆಲವರು ಮಾನವನ, ಮಾನವ ಕಲ್ಯಾಣದ ಜೊತೆ ಜೊತೆಗೇ ಅವನಿರುವ ಪರಿಸರ ಹಾಗೂ ನೈತಿಕತೆಯ ಪ್ರಶ್ನೆ ಎತ್ತಿ ಅದನ್ನೂ ಅರ್ಥಶಾಸ್ತ್ರಕ್ಕೆ ಜೋಡಿಸಿದರು.

ಮಾರ್ಷಲ್‌ರಿಂದ ಹಿಡಿದು ಅಮರ್ತ್ಯಸೇನ್‌ರವರೆಗೆ ಹಲವಾರು ಜನ ಅರ್ಥಶಾಸ್ತ್ರಕ್ಕೆ ಬೇರೆಯದೇ ಆಯಾಮ ನೀಡಲು ಪ್ರಯತ್ನಿಸಿದರೂ ಅದಕ್ಕಂಟಿರುವ ಕಳಂಕ ಅಥವಾ ಸ್ಟಿಗ್ಮಾವನ್ನು ತೊಳೆಯಲು ಸಾಧ್ಯವಾಗಿಲ್ಲ. 'ಮಾನವಮುಖಿ ಅಭಿವೃದ್ಧಿಯ ಅಂತಿಮ ಗುರಿ ವರಮಾನವಲ್ಲ, ಉತ್ಪಾದನೆಯಲ್ಲ, ಅಣುಬಾಂಬುಗಳಲ್ಲ. ಅಭಿವೃದ್ಧಿಯ ಗುರಿ ಮಾನವ ಮತ್ತು ಮಾನವನ ಬದುಕು'[೫] ಎಂದ ಅಮರ್ತ್ಯಸೇನ್‌ರ ಅಭಿವೃದ್ಧಿ ತತ್ವವನ್ನು ಅಳವಡಿಸಿಕೊಳ್ಳದಿರುವುದರಿಂದ ಆಗುತ್ತಿರುವ ಅನಾಹುತಗಳನ್ನು ಈ ಕೆಳಗಿನ ಉದಾಹರಣೆಯ ಮೂಲಕ ತಿಳಿಯಬಹುದಾಗಿದೆ.

ರಿಯೋ ಅರ್ಥ್ ಸಮ್ಮಿಟ್‌ನಲ್ಲಿ ವ್ಯಕ್ತವಾದ ಅನಿಸಿಕೆಯಂತೆ 'ಅಭಿವೃದ್ಧಿಯನ್ನು ತಪ್ಪಾಗಿ ಅರ್ಥೈಸಿರುವ ಮತ್ತು ಕುರುಡಾಗಿ ಅದನ್ನು ಹಿಂಬಾಲಿಸುತ್ತಿರುವ ಸರ್ಕಾರಗಳಿಂದಾಗಿ ಪ್ರಸ್ತುತ ಜಗತ್ತಿನ ನಾವುಗಳು 'ಪ್ರತಿ ಸೆಕೆಂಡಿಗೆ ೭೪೭.೫೦ ಟನ್ ಅಥವಾ ಪ್ರತಿ ನಿಮಿಷಕ್ಕೆ ೪೪,೩೨೦ ದಶಲಕ್ಷ ಟನ್ ಫಲವತ್ತಾದ ಮೇಲ್‌ಮಣ್ಣಿನ ಸವಕಳಿ ಮಾಡುತ್ತಿದ್ದೇವೆ, ಪ್ರತಿ ಸೆಕೆಂಡಿಗೆ ೧.೬ ಎಕರೆ ಅಥವಾ ಪ್ರತಿ ನಿಮಿಷಕ್ಕೆ ೯೬ ಎಕರೆ ಅರಣ್ಯಭೂಮಿಯನ್ನು ನಾಶ ಮಾಡುತ್ತಿದ್ದೇವೆ. ಸಾಲದೆಂಬಂತೆ ಪ್ರತಿ ನಿಮಿಷಕ್ಕೆ ೨.೮ ಜನ ಈ ಜಗತ್ತಿನಿಂದ ನಿರ್ಗಮನ ಹೊಂದಿದರೆ ಪ್ರತಿ ಸೆಕೆಂಡಿಗೆ ಅಷ್ಟೇ ಜನ ಅಂದರೆ ೨.೮ ಜನ ಅಥವಾ ಪ್ರತಿ ನಿಮಿಷಕ್ಕೆ ೧೬೮ ಜನ ಈ ಜಗತ್ತಿಗೆ ಸೇರ್ಪಡೆಯಾಗುತ್ತಿದ್ದಾರೆ. ಜೊತೆಗೆ ಅಸಂಖ್ಯಾತ ಪ್ರಾಣಿ, ಪಕ್ಷಿ, ಕ್ರಿಮಿಕೀಟ, ಗಿಡಮರಗಳು ಅವಸಾನ ಹೊಂದಿವೆ ಹಾಗೂ ಅವಸಾನದ ಅಂಚಿನಲ್ಲಿವೆ.'[೬]

ಹೀಗಾಗಿ ಇತ್ತೀಚಿನ ದಿನಗಳಲ್ಲಿ ಆರ್ಥಿಕಾಭಿವೃದ್ಧಿಯನ್ನು ಹೊಸ ರೀತಿಯಲ್ಲಿ ಅರ್ಥೈಸಲು ಯತ್ನಿಸಲಾಗುತ್ತಿದೆ. ಅದರಂತೆ ಅಭಿವೃದ್ದಿಯು ಬೆಳವಣಿಗೆಯಂತಹ ಒಂದು ನಿರಂತರ ವಿಕಾಸದ ಪ್ರಕ್ರಿಯೆಯಾಗಿದ್ದು, ಪ್ರಾಕೃತಿಕ ಅಸಮತೋಲನ ಉಂಟುಮಾಡದೆ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ನೈತಿಕ ಮೌಲ್ಯಗಳನ್ನು ಹದಗೆಡಿಸದೇ, ಜನರ ಬದುಕಿನಲ್ಲಿ ಮೌಲಿಕ ಮತ್ತು ಗುಣಾತ್ಮಕವಾದ ಸುಧಾರಣೆಯನ್ನು ತರುವ ಪ್ರಕ್ರಿಯೆಯನ್ನೇ ನಿಜವಾದ ಅಭಿವೃದ್ಧಿ ಎನ್ನಬಹುದು.

ಆರ್ಥಿಕ ಅಭಿವೃದ್ಧಿಯು ಜನಸಾಮಾನ್ಯರ ಜೀವನದ ಗುಣಮಟ್ಟ, ನೀತಿನಿಯಮಗಳ ನಿರ್ಧಾರದಲ್ಲಿ ಜನರ ಸಕ್ರಿಯ ಪಾಲ್ಗೊಳ್ಳುವಿಕೆ ಅಲ್ಲದೆ ಅವರ ಆದಾಯ, ವಿದ್ಯಾಭ್ಯಾಸ, ಆರೋಗ್ಯ, ವಿಶ್ರಾಂತಿಗಳಲ್ಲಿ ಸುಧಾರಣೆ ತರುವ ಒಂದು ನಿಧಾನದ ನಿರಂತರ ಪ್ರಕ್ರಿಯೆಯಾಗಿದ್ದು, ಅವರ ಸಾಮಾಜಿಕ ಮತ್ತು ಆರ್ಥಿಕ ಜೀವನದ ಸಂತೋಷ ಮತ್ತು ಸಂಪೂರ್ಣತೆ ತರುವ ಎಲ್ಲ ಅಂಶಗಳನ್ನು ಇದು ಒಳಗೊಂಡಿರುತ್ತದೆ. ವಿಶಾಲಾರ್ಥದಲ್ಲಿ ಇದು ಆರ್ಥಿಕ ಅಭಿವೃದ್ಧಿ, ಮಾನವಾಭಿವೃದ್ಧಿ ಹಾಗೂ ಸಾಮಾಜಿಕ ಸಾಂಸ್ಕೃತಿಕ ಬದಲಾವಣೆಗಳನ್ನು ಒಳಗೊಂಡಿದೆ. ಅಭಿವೃದ್ಧಿಯು ಹಿಂದೆ ತಿಳಿದಂತೆ ಕೇವಲ ಭೌತಿಕ ಉತ್ಪಾದನೆಗಿಂತ ಸಮಗ್ರ ಮಾನವಕಲ್ಯಾಣದ ಅಂಶಗಳನ್ನು ಒಳಗೊಂಡಿದೆ ಎಂಬ ವಾದಕ್ಕೆ ಹೆಚ್ಚಿನ ಬೆಂಬಲ ದೊರೆಯುತ್ತಿದೆ. ಸುಸ್ಥಿರ ಬೆಳವಣಿಗೆ ಎಂದರೆ ಭವಿಷ್ಯದ ಜನಾಂಗ ತನ್ನ ಬೇಡಿಕೆ ಗಳನ್ನು ಈಡೇರಿಸಿಕೊಳ್ಳಲು ಅವಶ್ಯಕವಾದ ಸಾಮರ್ಥ್ಯಕ್ಕೆ ಧಕ್ಕೆ ತರದೆ ವರ್ತಮಾನದ ಜನಾಂಗ ತನ್ನ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ವ್ಯವಸ್ಥೆ ಎನ್ನಬಹುದು. ಜೊತೆಗೆ ಕೇವಲ ಅಭಿವೃದ್ಧಿಗಿಂತ

ಸುಸ್ಥಿರ ಅಭಿವೃದ್ಧಿಯ ಪರ ಹೋರಾಟಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮುಂದಿನ ಜನಾಂಗಕ್ಕೆ ನಾವು ಬಿಟ್ಟು ಹೋಗಬೇಕಿರುವ ಈ ಭೂಮಿ ಮತ್ತು ನೈಸರ್ಗಿಕ ಸಂಪತ್ತಿನ ರಕ್ಷಣೆಗೆ ಆದ್ಯತೆ ದೊರೆಯುತ್ತಿದೆ.

೨. ಅಧ್ಯಯನದ ಸ್ವರೂಪ, ಸಮಸ್ಯೆ, ಉದ್ದೇಶಗಳು ಮತ್ತು ಮಾರ್ಗೋಪಾಯಗಳು

ಅಧ್ಯಯನದ ಸ್ವರೂಪ

ಇದೊಂದು ಅಂತರ್‌ಶಿಸ್ತೀಯ ಅಧ್ಯಯನವಾಗಿದೆ. 'ಬುಡಕಟ್ಟು ಆರ್ಥಿಕತೆ' ಅಥವಾ ಅಲಕ್ಷಿತರ ಅರ್ಥಶಾಸ್ತ್ರ ಎಂಬ ಹೊಸ ಶಾಸ್ತ್ರದ(ಕನ್ನಡದ ಮಟ್ಟಿಗಾದರೂ) ಹಿನ್ನೆಲೆಯಲ್ಲಿ ಕರ್ನಾಟಕದ ಸಿದ್ದಿ ಸಮುದಾಯವನ್ನು ಅಧ್ಯಯನ ಮಾಡುವ ಹೊಸ ಪ್ರಯತ್ನ ಇದಾಗಿದ್ದು ಇದಕ್ಕಾಗಿ ಸಿದ್ದಿಗಳನ್ನೇ ಆಯ್ಕೆ ಮಾಡಿಕೊಂಡಿರುವುದಕ್ಕೆ ಕಾರಣವೂ ಇದೆ. ಏಕೆಂದರೆ, ಒಂದು ಖಂಡದ ಬುಡಕಟ್ಟು ಜನಾಂಗವೊಂದು ತನ್ನ, ಕಾಡಿನ ಸಮೃದ್ಧ ಆರ್ಥಿಕತೆಯಿಂದ ಬೇರ್ಪಡಿಸಲ್ಪಟ್ಟು ಇನ್ನೊಂದು ಖಂಡಕ್ಕೆ ಮಾರಾಟದ ಸರಕಾಗಿ, ಒತ್ತಾಯದಿಂದ ತರಲ್ಪಟ್ಟು, ಗುಲಾಮರಾಗಿ ಆ ದೇಶದ ಸಿರಿವಂತರ ಮನೆಯ ತೊತ್ತುಗಳಾಗಿ, ಅವರ ಶ್ರೀಮಂತಿಕೆಯ ದುರಾಸೆಗೆ ಬಲಿಪಶುಗಳಾಗಿ, ಆ ಕಾಲದ ಆರ್ಥಿಕತೆಯ ಇಟ್ಟಿಗೆಗಳಾಗಿ, ಮೆಟ್ಟಿಲುಗಳಾಗಿ ಆ ಜನಾಂಗ ಅಥವಾ ದೇಶವನ್ನು ಸಿರಿವಂತಗೊಳಿಸಿ ತಾವು ಮಾತ್ರ ಬಡತನವನ್ನೇ ಹಾಸಿ ಹೊದ್ದು, ತೀವ್ರ ಹೋರಾಟದ ನಂತರವಷ್ಟೇ ಗುಲಾಮಗಿರಿಯಿಂದ ಹೊರಬಂದು ಹೊಸದಾಗಿ ಜೀವನ ಕಟ್ಟಿಕೊಂಡ ಕಥೆ ಆಫ್ರಿಕನ್-ಅಮೆರಿಕನ್ ನಿಗ್ರೋ ಗುಲಾಮರ ಕಥೆ ಎಲ್ಲರಿಗೂ ತಿಳಿದಿದೆ.

ಆದರೆ ಇದೇ ಗುಲಾಮಗಿರಿಯ ಪರಿಸ್ಥಿತಿಯಲ್ಲಿದ್ದ, ಆದರೆ ಆ ಕ್ಷೋಭೆಯಿಂದ ಇನ್ನೂ ಹೊರ ಬರಲಾಗದೆ ಅಸಹಾಯಕರಾಗಿರುವ ಭಾರತದ ಸಿದ್ದಿಗಳ ಕಥೆ ಇನ್ನೂ ಅಜ್ಞಾತವಾಗಿಯೇ ಉಳಿದಿದೆ. ಒಂದು ಕಾಲಘಟ್ಟದಲ್ಲಿ ಗುಲಾಮಗಿರಿಯಿಂದ ತಪ್ಪಿಸಿಕೊಂಡು ಮತ್ತೆ ಕಾಡಿಗೆ ಓಡಿಹೋಗಿ ತಮ್ಮದೇ ಆರ್ಥಿಕತೆಯನ್ನು ಕಾಡಿನಲ್ಲಿ ಕಟ್ಟಿಕೊಂಡು ನೆಮ್ಮದಿಯಿಂದಿದ್ದ ಈ ಜನಾಂಗಕ್ಕೆ ಮತ್ತೆ ಅದೇ ದಾರಿಯಲ್ಲಿ ಇನ್‌ಕ್ವಿಜಿಶನ್‌ನ ಭಯದಿಂದ ಗೋವಾದಿಂದ ಕರ್ನಾಟಕಕ್ಕೆ ಓಡಿ ಬಂದ ಪುರೋಹಿತಶಾಹಿಗಳು ಹಾಗೂ ಅರಣ್ಯ ಗುತ್ತಿಗೆದಾರರು, ಲೇವಾದೇವಿದಾರರು, ಅರಣ್ಯ ಇಲಾಖೆಯ ಅಧಿಕಾರಿಗಳು ಮುಂತಾದ ಬಂಡವಾಳಶಾಹಿ ವರ್ಗವೇ ಕಂಟಕಪ್ರಾಯವಾಯಿತು. ಅವರು ಉಪಾಯದಿಂದ ಮುಗ್ಧ ಅನಕ್ಷರಸ್ಥ ಸಿದ್ದಿಗಳಿಗೆ ಸುಲಭದ ಸಾಲ ನೀಡಿ ಅದಕ್ಕೆ ಬಡ್ಡಿ ಚಕ್ರಬಡ್ಡಿ ಸೇರಿಸಿ ಒಂದಕ್ಕೆರಡು ಸಾಲಪತ್ರಗಳ ಮೇಲೆ ದ್ರೋಣಾಚಾರ್ಯ ಏಕಲವ್ಯನ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಪಡೆದಂತೆ, ಭೂಮಾಲಿಕ ಅವರ ಹೆಬ್ಬೆರಳನ್ನು ಹಿಡಿದು ಖಾಲಿಪತ್ರಗಳ ಮೇಲೆ ಸಹಿ ಹಾಕಿಸಿ ಅವರೆಂದೂ ಹೊರಬರಲಾಗದಂತಹ ಋಣಭಾರದ ಸುಳಿಗೆ ಸಿಲುಕಿಸಿ ಅವರೇ ಕಷ್ಟಪಟ್ಟು ಕಾಡು ಸವರಿ, ಸಮ ಮಾಡಿ ಹದ ಮಾಡಿ, ಮಾಡಿಕೊಂಡಿದ್ದ ವ್ಯವಸಾಯದ ಭೂಮಿಗಳನ್ನು ಕಿತ್ತುಕೊಂಡು ಅವರನ್ನು ಅದೇ ಭೂಮಿಯಲ್ಲಿ ಗುಲಾಮರನ್ನಾಗಿ, ಜೀತದಾಳುಗಳನ್ನಾಗಿ ಮಾಡಿಕೊಂಡಿದ್ದಾರೆ. ಅವರ ಕೈಗೆ ಸಿಕ್ಕು ಅಲ್ಲಿಯೂ

ಇಲ್ಲದ ಇಲ್ಲಿಯೂ ಸಲ್ಲದ ತ್ರಿಶಂಕುಗಳಾಗಿ ಮತ್ತೆ ಹೊಸ ಆರ್ಥಿಕತೆಯನ್ನು ಕಟ್ಟಿಕೊಳ್ಳಲು ಹೆಣಗಾಡುತ್ತಿರುವ ಈ ಶಾಪಗ್ರಸ್ತ ಕಪ್ಪುದೇವತೆಗಳ ಭೂತ-ವರ್ತಮಾನ-ಭವಿಷ್ಯಗಳನ್ನು ಅಧ್ಯಯನ ಮಾಡುವ, ಅವರ ಈ ಸ್ಥಿತಿಗೆ ಕಾರಣವಾದ ಅಂಶಗಳನ್ನು, ಅದರಲ್ಲೂ ಎಲ್ಲ ಸಮಸ್ಯೆಗಳ ಮೂಲವಾದ, ಆರ್ಥಿಕ ಅಂಶಗಳನ್ನು ಅಧ್ಯಯನ ಮಾಡುವ ಮೂಲಕ ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಉದ್ದೇಶ ಈ ಅಧ್ಯಯನದ್ದಾಗಿದೆ.

ಯಾವ ರಾಷ್ಟ್ರದ ಏಳ್ಗೆಯಲ್ಲಿ ಅನಿವಾರ್ಯ ಉತ್ಪಾದನಾಂಗಗಳಾಗಿದ್ದರೋ, ಉತ್ಪಾದನೆಯಲ್ಲಿ ಸಕ್ರಿಯ ಪಾಲುದಾರರಾಗಿದ್ದರೋ, ಅದರ ಶ್ರೀಮಂತಿಕೆಗೆ ಕಾರಣರಾಗಿದ್ದರೋ ಅವರೇ ಅಲ್ಲಿನ ತೃತೀಯ ದರ್ಜೆಯ ಪ್ರಜೆಗಳಿಗಿಂತ ಕೆಳಹಂತದಲ್ಲಿರಲು, ನಿರಂತರ ಶೋಷಣೆಗೊಳಗಾಗಲು ಪ್ರಮುಖ ಕಾರಣವೇ ಮಾರ್ಕ್ಸ್‌ವಾದ ಪ್ರತಿಪಾದಿಸಿರುವಂತೆ ಅವರಿಂದ ಉತ್ಪಾದನಾ ಸಾಧನಗಳ ಮೇಲೆ, ಆರ್ಥಿಕತೆಯ ಮೇಲೆ, ಮಾಲೀಕತ್ವ ಹಾಗೂ ಹಿಡಿತ ಸಾಧಿಸಲು ಸಾಧ್ಯವಾಗದೇ ಹೋದದ್ದು. ಯಾವ ಜನಸಮುದಾಯವೇ ಆಗಿರಲಿ, ಅದರ ಬೆಳವಣಿಗೆಯ ಚಾರಿತ್ರಿಕ ಹಂತಗಳಲ್ಲಿ ರೂಪುಗೊಳ್ಳುವ ವೈವಿಧ್ಯಮಯ ಆಯಾಮಗಳ ಹಿಂದೆ ಆ ಸಮುದಾಯದ ಆರ್ಥಿಕತೆಯು ನಿಶ್ಚಿತವಾಗಿ ಪ್ರಭಾವ ಬೀರುತ್ತದೆ ಎಂಬ ಮಾತು ಸಿದ್ದಿ ಸಮುದಾಯಕ್ಕೂ ಅನ್ವಯಿಸುತ್ತದೆ.

ಈ ಅಧ್ಯಯನದ ಮೂಲ ಉದ್ದೇಶ ಸಿದ್ದಿಯರ ವರ್ತಮಾನದ ಸ್ಥಿತಿಗತಿಗಳಿಗೆ ಅವರ ಪಾರಂಪರಿಕ ಆರ್ಥಿಕ ವ್ಯವಸ್ಥೆ ಕಾರಣವೋ ಅಥವಾ ಆ ಪಾರಂಪರಿಕ ಆರ್ಥಿಕ ವ್ಯವಸ್ಥೆಯನ್ನು ಪೋಷಣೆ ಮಾಡಿಕೊಂಡು ಬಂದ ರೂಢಿಗತ ರಾಜಕೀಯಾರ್ಥಿಕ, ಸಾಮಾಜಿಕ ಅಂಶಗಳು ಕಾರಣವೋ ಅಥವಾ ತಮ್ಮ ಮೂಲ ಆರ್ಥಿಕತೆಯಿಂದ ದೂರವಾಗುತ್ತಿರುವುದೇ ಕಾರಣವೋ? ಎಂಬುದಾಗಿದೆ. ಆಧುನಿಕ ಅಳತೆಗೋಲಿನಿಂದ, ಅಂದರೆ ಅವರ ಆದಾಯ, ಪೌಷ್ಟಿಕ ಆಹಾರ, ಅನುಭೋಗದ ಪ್ರಮಾಣ, ಅನುಭೋಗದ ವಸ್ತುಗಳ ಗುಣಮಟ್ಟ, ಜೀವನಶೈಲಿ, ಉದ್ಯೋಗ, ಉದ್ಯಮ, ಸುಖ, ಆರೋಗ್ಯ ಸೇವೆಗಳು, ವಿದ್ಯಾಭ್ಯಾಸ ಇತ್ಯಾದಿಗಳ ದೃಷ್ಟಿಯಿಂದ, ತುಂಬಾ ಹಿಂದುಳಿದಿವೆ ಎಂದುಕೊಳ್ಳುವ ಎಲ್ಲ ಸಮುದಾಯಗಳ ಯಾವುದೇ ವರ್ತಮಾನದ ಸಮಸ್ಯೆಯ ಬೀಜ, ಬೇರು ಅದರ ಭೂತಕಾಲದ ಮುಸುಕಿನಲ್ಲಿ ಅಡಗಿರುತ್ತದೆ. ಆದ್ದರಿಂದ ಅವರ ಪಾರಂಪರಿಕ-ಪ್ರಸ್ತುತ ಆರ್ಥಿಕ ವ್ಯವಸ್ಥೆಯ ಅಧ್ಯಯನದ ಮೂಲಕ ಸಮಸ್ಯೆಗೆ ಕಾರಣ ಹಾಗೂ ಪರಿಹಾರ ಕಂಡುಕೊಳ್ಳುವ ಅನಿಸಿಕೆ, ಹಂಬಲ ಹಾಗೂ ಪ್ರಯತ್ನ ಇದಾಗಿದೆ.

ಪರಿಶೋಧಿಸಬೇಕಾದ ಸಮಸ್ಯೆ

ಪ್ರತಿಯೊಂದು ಜೀವಿಯ ಜೀವನವೂ ಸಮಸ್ಯೆಗಳ ಸಂತೆ ಹಾಗೂ ಅವಕಾಶಗಳ ಕಂತೆ, ಅಂತೆಯೇ ಬುಡಕಟ್ಟುಗಳ ಜಗತ್ತು ವಿಶಿಷ್ಟವಾಗಿದ್ದು ಅವರ ಸಮಸ್ಯೆಗಳೂ ಅವರಷ್ಟೇ ವಿಶಿಷ್ಟ. ಅದರಲ್ಲೂ ಸಿದ್ದಿ ಬುಡಕಟ್ಟು ಅತಿ ವಿಶಿಷ್ಟ. ಏಕೆಂದರೆ ಭಾರತದ, ಬಹುಶಃ ಜಗತ್ತಿನ ಇತಿಹಾಸದಲ್ಲೇ ಒಂದು ಖಂಡದ ಮೂಲನಿವಾಸಿಗಳು ಮತ್ತೊಂದು ಖಂಡಕ್ಕೆ ಗುಲಾಮರಾಗಿ ಬಂದು ನಾಗರಿಕ ಜಗತ್ತಿಗೆ

ಪ್ರವೇಶಿಸಿ ಮತ್ತೆ ಅಲ್ಲಿಂದ ತಪ್ಪಿಸಿಕೊಂಡು ಕಾಡಿನ ಮಡಿಲಿಗೆ ಮರಳಿ ಮತ್ತೆ ಪರಿಶಿಷ್ಟ ಬುಡಕಟ್ಟಾಗಿ ಪರಿವರ್ತನೆಯಾದ ಮತ್ತೊಂದು ಉದಾಹರಣೆ ನಮಗೆ ಸಿಗಲಿಕ್ಕಿಲ್ಲ. ಅಲ್ಲದೇ ತಮ್ಮ ವಿಶಿಷ್ಟ ಭೌತಿಕ ಚಹರೆ ಹಾಗೂ ಬಣ್ಣದಿಂದಾಗಿ ಮುಖ್ಯವಾಹಿನಿ ಇರಲಿ, ಇತರ ಬುಡಕಟ್ಟುಗಳೂ ಅವರನ್ನು ತಮ್ಮೊಳಗೆ ಸೇರಿಸಿಕೊಳ್ಳದೆ ಅನ್ಯಗ್ರಹದವರಂತೆ ನಡೆಸಿಕೊಳ್ಳುತ್ತಿರುವುದು ಅವರ ಸಮಸ್ಯೆಗಳನ್ನು ಹೆಚ್ಚಿಸಿದೆ.

ಈ ಹಿನ್ನೆಲೆಯಲ್ಲಿ ಯಾವುದೇ ಜನಾಂಗದ ತುಳಿತಕ್ಕೊಳಗಾಗುವಿಕೆ, ಶೋಷಣೆ ಹಾಗೂ ಹಿಂದುಳಿಯುವಿಕೆಗೆ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಇತ್ಯಾದಿ ಕಾರಣಗಳಿರುತ್ತವೆ. ಆದರೆ ತೋರಿಕೆಯ ಅಥವಾ ತತ್‌ಕ್ಷಣದ ಕಾರಣಗಳು ಹಲವಾರಿರಬಹುದಾದರೂ, ವಿಶ್ವದ ಎಲ್ಲ ಜನಾಂಗಗಳ ತಲಸ್ಪರ್ಶಿ ಅಧ್ಯಯನದಿಂದ ಕಂಡುಬರುವ ಅಂಶವೆಂದರೆ ಈ ಎಲ್ಲ ಸಮಸ್ಯೆಗಳ ಮೂಲ ಆರ್ಥಿಕ ಕಾರಣಗಳೇ ಅಥವಾ ಮಾರ್ಕ್ಸ್ ಹೇಳುವಂತೆ ಉತ್ಪಾದನಾ ಸಂಬಂಧಗಳು ಅಥವಾ ಉತ್ಪಾದನಾ ಮೂಲಗಳ ಒಡೆತನಗಳೇ ಆಗಿವೆ. ಹೀಗಾಗಿ ಪ್ರಸ್ತುತ ಅಧ್ಯಯನದಲ್ಲಿ ಸಿದ್ದಿಗಳ ಆರ್ಥಿಕತೆಯ ಪಲ್ಲಟಗಳಿಗೆ ಕಾರಣವಾಗಿರುವ ಅಂಶಗಳ ಬಗೆಗೂ ಚರ್ಚಿಸಲಾಗಿದೆ.

ಸಿದ್ದಿಗಳ ಶೋಷಣೆ ಹಾಗೂ ಸಂಕಷ್ಟದ ~~ಸಧ್ಯದ~~ ಸ್ಥಿತಿಗೆ ಆರ್ಥಿಕ ಅಂಶಗಳೇ ಕಾರಣವಾದ್ದರಿಂದ ~~ಅವರ ಅಭಿವೃದ್ಧಿಗೂ ಅವರ ಮೂಲ~~ ಆರ್ಥಿಕತೆಯ ಅಧ್ಯಯನ, ~~ಪಾಲನೆ~~ ಮತ್ತು ಆರ್ಥಿಕ ಸಬಲೀಕರಣವೇ ~~ಪರಿಹಾರ ಎಂಬ ಪ್ರಮೇಯದೊಂದಿಗೆ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.~~

ಅಧ್ಯಯನದ ಉದ್ದೇಶಗಳು

ಮೇಲಿನ ಪ್ರಮೇಯವನ್ನು ಒರೆಗೆ ಹಚ್ಚಲು ಈ ಕೆಳಕಂಡ ಉದ್ದೇಶಗಳೊಂದಿಗೆ ಅಧ್ಯಯನವನ್ನು ನಡೆಸಲಾಗಿದೆ.

೧. ಒಂದು ಬುಡಕಟ್ಟಿನ ಅರ್ಥವ್ಯವಸ್ಥೆ: ಹಾಗೆಂದರೇನು? ಈ ಬಗೆಯ ಅನನ್ಯ ಸ್ಥಿತಿಯೊಂದಿದೆಯೆ? ಎನ್ನುವುದರ ವಿವೇಚನೆ ಮಾಡುವುದು.

೨. ಒಂದು ಬುಡಕಟ್ಟಿನ ಅರ್ಥವ್ಯವಸ್ಥೆಯ ಸ್ಥಿತ್ಯಂತರಗಳಿಗೆ ಕಾರಣಗಳೇನು? ಸಮುದಾಯದ ಒಳಗಿನ ಬದಲಾವಣೆಯ ಕಡೆಗಿನ ತುಡಿತ ಮತ್ತು ವ್ಯವಸ್ಥೆಯ ನಿಯಂತ್ರಕ ಶಕ್ತಿಗಳ ಬಾಹ್ಯ ಒತ್ತಡಗಳ ಸ್ವರೂಪವೇನು ಎನ್ನುವುದನ್ನು ಅಧ್ಯಯನ ಮಾಡುವುದು.

೩. ಬುಡಕಟ್ಟು ಆರ್ಥಿಕತೆಯ ಉಗಮ, ಬೆಳವಣಿಗೆಗಳ ಅವಲೋಕನ ಮತ್ತು ಈ ಹಿನ್ನೆಲೆಯಲ್ಲಿ ಆಧುನಿಕ ಆರ್ಥಿಕ ಪರಿಕಲ್ಪನೆಗಳ ವಿಶ್ಲೇಷಣೆ ಹಾಗೂ ಪ್ರಸ್ತುತ ಪರಿಸ್ಥಿತಿಯಲ್ಲಿ ಬುಡಕಟ್ಟು ಆರ್ಥಿಕತೆಯ ಅಧ್ಯಯನ ಮಾಡುವುದು.

೪. ಸಿದ್ದಿಗಳ ಹಿನ್ನೆಲೆ ಹಾಗೂ ವರ್ತಮಾನದ ಸ್ಥಿತಿಗೆ ಕಾರಣವಾದ 'ಗುಲಾಮಗಿರಿ'ಯ ಮೂಲ, ಬೆಳವಣಿಗೆ ಮತ್ತು ಮುಂದುವರಿಕೆಯನ್ನು ~~ವಿಶ್ಲೇಷಿಸುವುದು.~~

೫. ಉತ್ತರಕನ್ನಡದ ಸಿದ್ದಿಗಳ ಸದ್ಯದ ಆರ್ಥಿಕ ಪರಿಸ್ಥಿತಿ ಮತ್ತು ಅವರ ಅಭಿವೃದ್ಧಿಗೆ ಇದುವರೆಗೆ ಕೈಗೊಂಡ ಕಾರ್ಯಕ್ರಮಗಳ ಪರಾಮರ್ಶೆ ಮಾಡುವುದು.

ಉದ್ದೇಶ ಸಾಧನೆಯ ಮಾರ್ಗೋಪಾಯಗಳು

೧. ಪ್ರಸ್ತುತ ಅಧ್ಯಯನದಲ್ಲಿ ಒಂದು ಬುಡಕಟ್ಟು ಸಮುದಾಯದ ಅರ್ಥವ್ಯವಸ್ಥೆಯನ್ನು ತಲಸ್ಪರ್ಶಿ ಶೋಧನೆಗೆ ಒಳಪಡಿಸಲಾಗುವುದು. ಚಾರಿತ್ರಿಕವಾಗಿ ಸಿದ್ದಿಯರ ಆರ್ಥಿಕ ಬದುಕಿನ ಸಮಗ್ರ ವಿವರಗಳನ್ನು ಸಂಗ್ರಹಿಸುವುದು.

೨. ಆಯಾ ಕಾಲಘಟ್ಟದಲ್ಲಿ ಸಿದ್ದಿಯರು ರೂಢಿಸಿಕೊಂಡು ಬಂದ ಆರ್ಥಿಕ ಚಟುವಟಿಕೆಗಳನ್ನು ವಿಶ್ಲೇಷಿಸುವುದು.

೩. ವರ್ತಮಾನದಲ್ಲಿ ಸಿದ್ದಿಯರ ಆರ್ಥಿಕ ಸ್ಥಿತಿಗತಿಗಳನ್ನು ಮತ್ತು ಅವರ ದುಡಿಮೆಯ ವಿವಿಧ ಮಾದರಿಗಳನ್ನು ಅಧ್ಯಯನ ಮಾಡುವುದು.

೪. ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಮುಂದುವರೆದಿರುವಿಕೆ ಮತ್ತು ಹಿಂದುಳಿದಿರುವಿಕೆಗೆ ಇರುವ ಕಾರಣಗಳನ್ನು ಗುರುತಿಸುವುದು.

೫. ಎಲ್ಲಕ್ಕಿಂತ ಮುಖ್ಯವಾಗಿ ಈಗ ತಾನೇ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿರುವ ಸಿದ್ದಿಯರಿಗೆ ಸೂಕ್ತ ಯೋಜನಾ ಸವಲತ್ತುಗಳು ದೊರಕುವಂತಾಗಲು ಇರುವ ಮಾರ್ಗೋಪಾಯಗಳನ್ನು ಕಂಡು ಕೊಳ್ಳುವುದು.

೩. ಅಧ್ಯಯನದ ವ್ಯಾಪ್ತಿ, ಮಿತಿ ಮತ್ತು ಅಧ್ಯಯನದ ಅವಶ್ಯಕತೆ

ಅಧ್ಯಯನದ ವ್ಯಾಪ್ತಿ ಹಾಗೂ ಮಿತಿ

ಯಾವುದೇ ಅಧ್ಯಯನವು ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿ, ಸೀಮಿತ ಪರಿಧಿಯಲ್ಲಿ ನಡೆಯ ಬೇಕಾಗುತ್ತದೆ. ಹಾಗೆಯೇ

೧. ಈ ಅಧ್ಯಯನದ ವ್ಯಾಪ್ತಿಯನ್ನು ಉತ್ತರಕನ್ನಡ ಜಿಲ್ಲೆಗೆ ಮಾತ್ರ ಸೀಮಿತಗೊಳಿಸ ಲಾಗಿದೆ. ಆಫ್ರಿಕಾ ಖಂಡವನ್ನು ಬಿಟ್ಟರೆ ಭಾರತದಲ್ಲಿ ಸಿದ್ದಿಗಳು ಗುಜರಾತ್, ಗೋವಾ ಮತ್ತು ಕರ್ನಾಟಕದಲ್ಲಿ ಮಾತ್ರ ಹೆಚ್ಚಾಗಿ ಕಂಡುಬರುತ್ತಾರೆ.

೨. ಸಿದ್ದಿಯರು ಕರ್ನಾಟಕದಲ್ಲಿ ಉತ್ತರ ಕನ್ನಡ ಜಿಲ್ಲೆಯ ಹಲವು ತಾಲೂಕುಗಳಲ್ಲಿ ದಟ್ಟವಾಗಿ ಇನ್ನೂ ಕೆಲವು ತಾಲೂಕುಗಳಲ್ಲಿ ವಿರಳವಾಗಿ ವಾಸಿಸುತ್ತಿದ್ದಾರೆ. ಅವರು ದಟ್ಟವಾಗಿ ವಾಸಿಸುತ್ತಿರುವ ಅಂಕೋಲ, ಯಲ್ಲಾಪುರ, ಶಿರಸಿ, ಹಳಿಯಾಳ, ಮುಂಡಗೋಡು ಮತ್ತು ಜೋಯ್ಡ ತಾಲೂಕುಗಳಲ್ಲೂ ಕ್ಷೇತ್ರಕಾರ್ಯ ಕೈಗೊಳ್ಳಲಾಗಿದೆ.

೩. ಬೆಳಗಾವಿ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಹಾಗೂ ಧಾರವಾಡ ಜಿಲ್ಲೆಯ ಪಶ್ಚಿಮಭಾಗದ ಹಳಿಯಾಳ ತಾಲೂಕಿ ನಲ್ಲಿಯೂ ಇವರು ಕಂಡುಬರುತ್ತಿದ್ದು ಅವರನ್ನು ಕೇವಲ ಆನುಷಂಗಿಕವಾಗಿ ಪರಿಗಣಿಸಲಾಗಿದೆ.

೪. ಅವರ ಪ್ರಸ್ತುತ ಅರ್ಥವ್ಯವಸ್ಥೆಯ ಅಧ್ಯಯನಕ್ಕಾಗಿ ಸುಮಾರು ೪೩೭ ಸಿದ್ದಿ ಕುಟುಂಬಗಳ ಮಾದರಿ ಕೌಟುಂಬಿಕ ಸರ್ವೆ ಮತ್ತು ಕುಟುಂಬಗಳ ವ್ಯಕ್ತಿ ಸಂದರ್ಶನ (Case Study) ಮಾಡಿ ಅವರ ದೈನಂದಿನ ಜೀವನದ ಮೂಲಾಧಾರಗಳು, ಅವರ ವಾಸ ಸ್ಥಳ, ಲಿಂಗ, ವಯಸ್ಸು, ಭಾಷೆ, ಜಾತಿ, ಪ್ರಸ್ತುತ ಕಸುಬು, ಸ್ಥಿರ ಚರ, ಆಸ್ತಿ ಪಾಸ್ತಿ, ಅಭಿವೃದ್ಧಿ ಯೋಜನೆಗಳ ಸೌಲಭ್ಯಗಳು, ವಿದ್ಯಾಭ್ಯಾಸ, ಇತ್ಯಾದಿ ಮಾಹಿತಿಗಳನ್ನು ಸಂಗ್ರಹಿಸುವ ಮೂಲಕ ಸದ್ಯದ ಪರಿಸ್ಥಿತಿಯನ್ನರಿತು ಕೊಳ್ಳಲು ಪ್ರಯತ್ನಿಸಲಾಗಿದೆ.

೫. ಸಿದ್ದಿಗಳ ಜನಸಾಂದ್ರತೆಗನುಗುಣವಾಗಿ ತಾಲೂಕುವಾರು ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

೬ ಪ್ರತಿ ತಾಲೂಕಿನಲ್ಲೂ ನಗರದಿಂದ ತುಂಬಾ ದೂರದಲ್ಲಿರುವ, ಮಧ್ಯಮ ದೂರದಲ್ಲಿರುವ ಹಾಗೂ ಹತ್ತಿರವಿರುವ ಹಳ್ಳಿಗಳನ್ನು ಮಾಹಿತಿಗಾಗಿ ಆರಿಸಲಾಗಿದೆ. ಸಾಕ್ಷರತೆ ಪ್ರಮಾಣ ಕಡಿಮೆ ಇರುವುದು ಮತ್ತು ಭವಿಷ್ಯದ ಬಗೆಗೆ ಹೆಚ್ಚು ಚಿಂತಿಸದ ಬಿಡುಬೀಸಾದ ಜೀವನ ಪ್ರವೃತ್ತಿಯಿಂದಾಗಿ ಅವರ ಆದಾಯ ವೆಚ್ಚ, ಉಳಿತಾಯಗಳ ಸೂಕ್ತ ಮಾಹಿತಿ ದೊರೆಯುವುದು ಕಷ್ಟವಾದ್ದರಿಂದ ಆನುಷಂಗಿಕ ಮೂಲಗಳಿಂದ ವಿವರಗಳನ್ನು ಪಡೆಯಲು ಪ್ರಯತ್ನಿಸಲಾಗಿದೆ. ಇದರ ಮೂಲ ಉದ್ದೇಶವೇ ಬುಡಕಟ್ಟಿನ ಮೂಲ ಆರ್ಥಿಕತೆಯ ಅಧ್ಯಯನವಾದ್ದರಿಂದ ಅವರ ಹಣರಹಿತ, ಸಾಟಿ ಪದ್ಧತಿಯ ಆರ್ಥಿಕತೆಗೆ, ಅವರ ಭೌತಿಕ ಸುಖಕ್ಕಿಂತ ನೈಜ ಸಂತೋಷಕ್ಕೆ ಹೆಚ್ಚಿನ ಒತ್ತು ಕೊಟ್ಟಿರುವುದರಿಂದ ಸಾಮಾನ್ಯ ಅರ್ಥಶಾಸ್ತ್ರದ ಅಧ್ಯಯನಗಳಿಗಿಂತ ಭಿನ್ನವಾದ, ಅಂದರೆ ಕೇವಲ ಆದಾಯ, ವೆಚ್ಚ, ಆಸ್ತಿ, ಬಡತನಗಳ ಶುಷ್ಕ ಅಂಕಿಅಂಶ ವಿಶ್ಲೇಷಣೆಯ ಅಧ್ಯಯನಗಳಿಂದ ಬೇರೆಯಾದ ವಿಶ್ಲೇಷಣೆಗೆ ಪ್ರಯತ್ನಿಸಲಾಗಿದೆ.

ಅಧ್ಯಯನದ ಅವಶ್ಯಕತೆ

ಇದುವರೆಗೆ ಸಿದ್ದಿಗಳ ಬಗೆಗೆ ಹಲವಾರು ಅಧ್ಯಯನಗಳಾಗಿದ್ದರೂ ಬುಡಕಟ್ಟಿನ ಅರ್ಥ ವ್ಯವಸ್ಥೆಯ ಹಿನ್ನೆಲೆಯಲ್ಲಿ ಅವರ ಸಮಸ್ಯೆಗಳ ವಿಶ್ಲೇಷಣೆ ಸೂಕ್ತವಾಗಿ ಆಗಿಲ್ಲವೆಂಬುದು ನನ್ನ ಭಾವನೆ. ಏಕೆಂದರೆ ಬುಡಕಟ್ಟು ಆರ್ಥಿಕತೆ ಎಂಬ ಪರಿಕಲ್ಪನೆಯೇ ಕನ್ನಡದ ಮಟ್ಟಿಗೆ ತುಂಬಾ ಹೊಸದು. ಕನ್ನಡದಲ್ಲಿನ ಇದುವರೆಗಿನ ಆರ್ಥಿಕ ಅಧ್ಯಯನಗಳು ಹಲವಾರು ಬುಡಕಟ್ಟುಗಳ ಸಾಮಾಜಿಕಾರ್ಥಿಕ ಸಮಸ್ಯೆಗಳು, ಆರ್ಥಿಕಾಭಿವೃದ್ಧಿ ಇತ್ಯಾದಿಗಳ ಹೆಸರಿನಲ್ಲಿ ಅವರ ತಲಾ ವರಮಾನ ಕಡಿಮೆ ಇದೆ, ತಲಾ ಅನುಭೋಗ ಕಡಿಮೆ ಇದೆ, ಜೀವನಮಟ್ಟ ತುಂಬಾ ನಿಕೃಷ್ಟವಾಗಿದೆ, ಒಬ್ಬ ಮನುಷ್ಯ ಸುಖವಾಗಿ ಬದುಕಲು ಅಷ್ಟೇ ಏಕೆ ಕನಿಷ್ಠ ಜೀವನ ನಡೆಸಲು ಅವಶ್ಯಕವಾದ ಅನುಕೂಲಗಳೂ ಇಲ್ಲ ಎಂಬಿತ್ಯಾದಿ ಅಂಶಗಳಿಗೇ ಆದ್ಯತೆ ನೀಡಿವೆ. ಆದರೆ ಈ ಎಲ್ಲ ಸಮಸ್ಯೆಗಳ ಮೂಲವಾದ ಬುಡಕಟ್ಟು ಆರ್ಥಿಕತೆಯ ಮೂಲ ಹಾಗೂ ಹಿನ್ನೆಲೆಯನ್ನು ಅವು ಪ್ರಮುಖವಾಗಿ ಪರಿಗಣಿಸಿಲ್ಲವೆಂಬುದು ನನ್ನ ಅನಿಸಿಕೆ.

ಆಧುನಿಕ ಜಗತ್ತಿಗಿಂತ ಬುಡಕಟ್ಟು ಜಗತ್ತು ಸಂಪೂರ್ಣ ಭಿನ್ನವಾಗಿದೆ. ನಮ್ಮಂತೆ ಅವರು ಸ್ವಾರ್ಥದ, ಲಾಭದ, ಪರಾವಲಂಬನೆಯ ಆರ್ಥಿಕತೆಯನ್ನು ಕಟ್ಟಿಕೊಳ್ಳದೆ ನಿಸ್ವಾರ್ಥ, ನಿರ್ಭೀತ, ಸ್ವತಂತ್ರ ಹಾಗೂ ಸ್ವಾವಲಂಬಿ ಆರ್ಥಿಕತೆಯನ್ನು ಹೊಂದಿದ್ದು ಪಾಶ್ಚಾತ್ಯ ದೃಷ್ಟಿಕೋನದಿಂದ ಹೊರತಾದ, ಹೊಸತಾದ ಆರ್ಥಿಕ ಅಧ್ಯಯನದ ಜ್ಞಾನಶಿಸ್ತಿನ ಅವಶ್ಯಕತೆಯಿದೆ. ಅಂದರೆ ನಮ್ಮ ತಥಾಕಥಿತ ಆರ್ಥಿಕ ವಿಶ್ಲೇಷಣೆಗಳನ್ನೇ ಬುಡಕಟ್ಟುಗಳೆಂಬ ವಿಶಿಷ್ಟ ವಿಭಾಗಕ್ಕೆ ಯಥಾವತ್ತಾಗಿ ಅನ್ವಯಿಸುವ ಅಪಾಯಗಳೇನೆಂಬ ಪರಿವೆಯೇ ಇವರಿಗಿಲ್ಲ. ಬುಡಕಟ್ಟು ಅರ್ಥಶಾಸ್ತ್ರ (Tribal Economy) ಎಂಬ ಸಮಗ್ರ ದೃಷ್ಟಿಕೋನದ ಅಧ್ಯಯನ ಇಂದಿನ ಕಾಲದ ಅವಶ್ಯಕತೆ ಹಾಗೂ ಅನಿವಾರ್ಯವಾಗಿದೆ. ಸುಖ ಎನ್ನುವುದರ ಬದಲು ಸಂತೋಷ ಎಂಬ ಕಲ್ಪನೆ, ಲಾಭ ಎನ್ನುವುದರ ಬದಲು ಉಚಿತ ಹಂಚಿಕೆ, ಎಂಬಿತ್ಯಾದಿ ನಂಬಿಕೆಗಳಿರುವ ಈ ಸಮುದಾಯದ ಮೂಲ ಆರ್ಥಿಕತೆಯನ್ನು ಅಧ್ಯಯನ ಮಾಡಿರುವವರು ತುಂಬಾ ಕಡಿಮೆ. ಪ್ರಸ್ತುತ ಆರ್ಥಿಕತೆಯಲ್ಲಿ ವ್ಯಕ್ತಿಯೇ(ನಾನು) ಕೇಂದ್ರವಾದರೆ, ಬುಡಕಟ್ಟುಗಳಲ್ಲಿ ಸಮುದಾಯವೇ(ನಾವು) ಕೇಂದ್ರ. ಆಧುನಿಕ ಆರ್ಥಿಕತೆಯು ಆಸೆ ಅಥವಾ ಬಯಕೆ ಕೇಂದ್ರಿತವಾದರೆ ಬುಡಕಟ್ಟು ಆರ್ಥಿಕತೆ ಅವಶ್ಯಕತೆ ಕೇಂದ್ರಿತ. ಒಬ್ಬರು ಗೆಲ್ಲಬೇಕೆಂದರೆ, ಬದುಕಬೇಕೆಂದರೆ ಇನ್ನೊಬ್ಬರು ಸೋಲಲೇಬೇಕು ಅಥವಾ ಸಾಯಬೇಕೆಂಬ(ವಿನ್-ಲೂಸ್, ಲಿವ್ ಅಂಡ್ ಲೆಟ್ ಡೈ) ಋಣಾತ್ಮಕ ಚಿಂತನೆ ನಮ್ಮದಾದರೆ, ಎಲ್ಲರೂ ಗೆಲ್ಲುವ ವಿನ್ ವಿನ್ ತತ್ವ, ಎಲ್ಲರೂ ಬದುಕುವ ಲಿವ್ ಅಂಡ್ ಲೆಟ್ ಲಿವ್ ತತ್ವ ಅವರದು. ಒಬ್ಬ ನಿಷ್ಣಾತ ಬೇಟೆಗಾರ ಪಡೆದಷ್ಟೇ ಮಾಂಸವನ್ನು ಒಬ್ಬ ಕಳಪೆ ಬೇಟೆಗಾರನೂ ಪಡೆಯುತ್ತಾನೆ. ಯಾರ ಮನೆಯಲ್ಲೂ ಆಹಾರದ ಕೊರತೆ ಇರುವುದಿಲ್ಲ. ಏಕೆಂದರೆ ಸಿಕ್ಕಿದ್ದನ್ನು ಎಲ್ಲರೂ ಹಂಚಿಕೊಳ್ಳುತ್ತಾರೆ. ನನಗೆ ನನ್ನ ಮಕ್ಕಳಿಗೆ, ನಾಳೆಗೆ, ಭವಿಷ್ಯಕ್ಕೆ ಎಂದು ಆಸ್ತಿ ಕೂಡಿಸಿ ಗುಡ್ಡೆ ಹಾಕಿಕೊಳ್ಳುವುದಿಲ್ಲ. ಅವರಿಗೆ ತನ್ನ ಸಮುದಾಯದ ಸದಸ್ಯರ ಮೇಲೆ, ಪ್ರಕೃತಿಯ ಅಕ್ಷಯಪಾತ್ರೆಯ ಮೇಲೆ ಅದಮ್ಯ ವಿಶ್ವಾಸವಿದೆ. ಸಾಂಪ್ರದಾಯಿಕ ಸ್ಮಿತ್ತಿಯನ್ ಅರ್ಥಶಾಸ್ತ್ರದ ಅದೃಶ್ಯಹಸ್ತ ಅಂದರೆ ಸ್ವಹಿತಾಸಕ್ತಿಯೇ ನಮ್ಮೆಲ್ಲರನ್ನು ಮುನ್ನಡೆಸುವ ಶಕ್ತಿಯಾದರೆ ಬುಡಕಟ್ಟುಗಳ ಅದೃಶ್ಯಹಸ್ತ- ಪ್ರಕೃತಿ ಅಥವಾ ಆತ್ಮ ಹಾಗೂ ದೈವವಾಗಿದೆ.

ವರ್ತಮಾನದಲ್ಲಿ ಸಿದ್ದಿಯರು ಯಾವ ಬಗೆಯ ಸಾಮಾಜಿಕ ಆರ್ಥಿಕ ಸ್ಥಾನಮಾನಗಳನ್ನು ಹೊಂದಿದ್ದಾರೆ, ಅವರಲ್ಲಿ ಆದ ಬದಲಾವಣೆಗಳಿಗೆ ಯಾವ ಚಾರಿತ್ರಿಕ ಅನಿವಾರ್ಯತೆಗಳು ಕಾರಣವಾದವು ಸಿದ್ದಿಯರ ವರ್ತಮಾನದ ಬದುಕು ಯಾವ ಬಗೆಯ ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗುತ್ತಿದೆ, ಜಾಗತೀಕರಣದ ಬಿರುಗಾಳಿ ಅವರನ್ನು ಹೇಗೆ ಬದಲಾಯಿಸಿದೆ, ಎಂಬ ಪ್ರಶ್ನೆಗಳು ಬಹುಮುಖ್ಯ ವಾದವುಗಳೆಂದು ಭಾವಿಸಿದ್ದೇನೆ. ಸಾಮಾಜಿಕ ಬದಲಾವಣೆಯು ಕೇವಲ ಕಾಲದ ಒತ್ತಡದ ಅನಿವಾರ್ಯತೆಯಿಂದ ಮಾತ್ರ ಸಂಭವಿಸುವಂತಹದ್ದಲ್ಲ. ಅದಕ್ಕೆ ಆಯಾ ಸಮುದಾಯಗಳು ಪಾಲ್ಗೊಳ್ಳುವ ಒಟ್ಟು ವ್ಯವಸ್ಥೆಯ ರಾಜಕೀಯಾರ್ಥಿಕ ಚಲನೆಗಳೂ ಕಾರಣವಾಗುತ್ತವೆ. ಪಾರಂಪರಿಕ ಸಮಾಜಗಳು

ಇನ್ನೂ ಜೀವಂತವಿರುವ ಭಾರತದಂತಹ ದೇಶದಲ್ಲಿ ಸಿದ್ದಿಯರ ಸಾಮಾಜಿಕಾರ್ಥಿಕ ಸ್ಥಾನಮಾನಗಳ ಕುರಿತ ಅಧ್ಯಯನವು ಅನೇಕ ಬಿಕ್ಕಟ್ಟುಗಳನ್ನು ಎದುರಿಸಬೇಕಾಗುತ್ತದೆ.

ಪ್ರಸ್ತುತ ಅಧ್ಯಯನವು ಸಿದ್ದಿಯರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳನ್ನು ವಿವರಿಸಿಕೊಳ್ಳುವ ಪ್ರಯತ್ನವಾಗಿದೆ. ಅದರಲ್ಲೂ ಸಿದ್ದಿಯರ ಆರ್ಥಿಕ ಚಟುವಟಿಕೆಗಳನ್ನು ವಿಶೇಷವಾಗಿ ಅಧ್ಯಯನಕ್ಕೊಳ ಪಡಿಸಲಾಗಿದೆ. ಶತಮಾನಗಳ ಕಾಲ ಈ ದೇಶದ ಸಾಮಾಜಿಕಾರ್ಥಿಕ ವಿಷಮತೆಗಳ ನಡುವೆ ಸಿದ್ದಿಯ ರಂತಹ ಬುಡಕಟ್ಟುಗಳು ವಿವಿಧ ಕಾಲಘಟ್ಟದಲ್ಲಿ ಯಾವ ಬಗೆಯ ರಾಜಕೀಯಾರ್ಥಿಕ ವಿಪ್ಲವಗಳ ಮೂಲಕ ಹಾದು ಬಂದಿದ್ದಾರೆ, ಶ್ರೇಣೀಕೃತ ವ್ಯವಸ್ಥೆಯ ಈ ಸಮಾಜದಲ್ಲಿ ಅವರು ರೂಢಿಸಿಕೊಂಡು ಬಂದ ದುಡಿಮೆಯ ಮಾದರಿಗಳಾವವು? ವರ್ತಮಾನದಲ್ಲಿ ಅವರ ಆರ್ಥಿಕ ವ್ಯವಸ್ಥೆಯ ಸ್ವರೂಪವೇನು ಎಂಬ ಪ್ರಶ್ನೆಗಳನ್ನು ಮುಖ್ಯವಾಗಿಟ್ಟುಕೊಂಡು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ..

೪. ಸಂಶೋಧನಾ ವಿಧಾನ, ವಿನ್ಯಾಸ ಮತ್ತು ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಸಂಶೋಧನಾ ವಿಧಾನ

ಅಧ್ಯಯನದ ವಿಧಾನಗಳನ್ನು ಅಥವಾ ಮಾದರಿಗಳನ್ನು ಸಂಗ್ರಹ ವಿಧಾನ, ಸಮೀಕ್ಷಾ ವಿಧಾನ ಅಥವಾ ಪ್ರಶ್ನಾವಳಿ ವಿಧಾನ, ದಾಖಲೆ ವಿಧಾನ, ಸಂದರ್ಶನ ವಿಧಾನ, ವಿಶ್ಲೇಷಣಾ ವಿಧಾನ, ತೌಲನಿಕ ವಿಧಾನ, ಅಂತರ್‌ಶಿಸ್ತೀಯ ವಿಧಾನ, ಪರಿಕಲ್ಪನಾತ್ಮಕ ವಿಧಾನ, ಸಾಂಸ್ಕೃತಿಕ ಅಧ್ಯಯನ ವಿಧಾನ, ಚಾರಿತ್ರಿಕ ವಿಧಾನ, ಅವಲೋಕನ ವಿಧಾನ ಇತ್ಯಾದಿಗಳಾಗಿ ವಿಂಗಡಿಸಲಾಗಿದೆ. ಆಯಾ ಅಧ್ಯಯನದ ಅವಶ್ಯಕತೆಗೆ ತಕ್ಕಂತೆ ಸೂಕ್ತ ವಿಧಾನಗಳನ್ನು ಆರಿಸಿಕೊಳ್ಳಲಾಗುತ್ತದೆ. ಪ್ರಸ್ತುತ ಅಧ್ಯಯನವು ಮೂಲ ಹಾಗೂ ಆನುಷಂಗಿಕ ಅಥವಾ ಪೂರಕ ಆಕರಗಳೆರಡನ್ನೂ ಅಧ್ಯಯನಕ್ಕೆ ಬಳಸಿಕೊಂಡಿದೆ. ಈ ವಿಷಯಕ್ಕೆ ಸಂಬಂಧಿಸಿದ ಆನುಷಂಗಿಕ ಆಕರಗಳಾದ ಪುಸ್ತಕಗಳು, ಸಾಹಿತ್ಯ, ದಾಖಲೆ, ವೃತ್ತ ಪತ್ರಿಕೆ, ಬ್ಲಾಗ್, ಅಂತರ್ಜಾಲದ, ಅಂಕಣ ಬರಹಗಳು ಇತ್ಯಾದಿಗಳನ್ನು ಅಧ್ಯಯನಕ್ಕೆ ಬಳಸಿ ಕೊಳ್ಳಲಾಗಿದೆ. ಈಗಾಗಲೇ ಸಿದ್ದಿಯರ ಕುರಿತು ಬಂದಿರುವ ಅಧ್ಯಯನಗಳನ್ನು ಗಮನಿಸಲಾಗಿದೆ. ಇಲ್ಲಿಯವರೆಗೆ ನಡೆದ ಅಧ್ಯಯನಗಳ ಆಧಾರದ ಮೇಲೆ ಈ ತಲಸ್ಪರ್ಶಿ ಅಧ್ಯಯನದ ವಿಧಾನಗಳನ್ನು ರೂಪಿಸಿಕೊಳ್ಳಲಾಗಿದ್ದು, ಚಾರಿತ್ರಿಕವಾಗಿ ಸಿದ್ದಿ ಸಮುದಾಯದ ಬೆಳವಣಿಗೆ, ಸಮುದಾಯದ ವರ್ತಮಾನದ ಬಿಕ್ಕಟ್ಟುಗಳ ಕುರಿತು ಸಮಗ್ರ ಮಾಹಿತಿಗಳನ್ನು ಚಾರಿತ್ರಿಕ ವಿಧಾನದ ಮೂಲಕ ಕಲೆ ಹಾಕಲಾಗಿದೆ.

ಇದು ಕ್ಷೇತ್ರಕಾರ್ಯಾಧರಿತ ಅಧ್ಯಯನವಾಗಿದ್ದು, ಕ್ಷೇತ್ರಕಾರ್ಯದ ಮಾಹಿತಿ ಈ ಅಧ್ಯಯನಕ್ಕೆ ಪ್ರಾಥಮಿಕ ಆಕರವಾಗಿರುತ್ತದೆ. ಮೂಲ ಆಕರಗಳಾದ ಪ್ರಶ್ನಾವಳಿ ವಿಧಾನ, ಅವಲೋಕನ ವಿಧಾನ, ವಿದ್ಯುನ್ಮಾನ ದಾಖಲು(ವೀಡಿಯೋ-ಆಡಿಯೋ ರೆಕಾರ್ಡಿಂಗ್) ವಿಧಾನಗಳ ಉಪಯೋಗವನ್ನೂ ಇಲ್ಲಿ ಪಡೆಯಲಾಗಿದೆ. ವಿಷಯದ ಉದ್ದೇಶ, ಆಶಯಗಳಿಗನುಗುಣವಾಗಿ ಅವರ ಪರಿಸರ, ಪರಿಸ್ಥಿತಿಯ ನೈಜ ಹಿನ್ನೆಲೆಯಲ್ಲಿ ಅವರೊಡನೆ ಮುಖಾಮುಖಿಯಾಗಿ ನೇರ ಸಂದರ್ಶನ ನಡೆಸಿ ಮಾಹಿತಿ ಸಂಗ್ರಹಿಸಲಾಗಿದೆ. ಇದು ಆನುಷಂಗಿಕ ಆಕರಗಳು ಹುಟ್ಟಿಸಬಹುದಾದ ಬೆರಗು, ಅರೆಬರೆ ಮಾಹಿತಿಗಳನ್ನು

ನಿವಾರಿಸಿ, ಅವರ ಬದುಕಿನಲ್ಲಿ ಕಾಲಾನುಕ್ರಮದಲ್ಲಾದ ಬದಲಾವಣೆಗಳನ್ನು ಅರಿಯಲು ಸಹಾಯಕವಾಗಿದೆ. ಜೊತೆಗೆ ಸಿದ್ದಿಯರ ಸಾಮಾಜಿಕಾರ್ಥಿಕ ಸ್ಥಿತಿಗತಿಗಳ ಅಧ್ಯಯನಕ್ಕೆ ನಿಶ್ಚಿತ ಪ್ರಶ್ನಾವಳಿಯೊಂದನ್ನು ರೂಪಿಸಲಾಗಿದೆ. ಕ್ಷೇತ್ರಕಾರ್ಯದಲ್ಲಿ ಪಡೆದ ವಿವರಗಳನ್ನು ಸಂಖ್ಯಾಶಾಸ್ತ್ರೀಯ ವಿಧಾನದ ಮೂಲಕ ವಿಶ್ಲೇಷಿಸಿ ಕೋಷ್ಟಕ ಹಾಗೂ ಆಕೃತಿ ಅಥವಾ ರೇಖಾತ್ಮಕ ವಿಧಾನಗಳಲ್ಲಿ ಕೊಡಲಾಗಿದೆ.

ಸಿದ್ದಿಯರ ಜೊತೆ ಜೊತೆಯಲ್ಲೇ ಜೀವನ ನಡೆಸುತ್ತಿರುವ ಇತರ ಬುಡಕಟ್ಟುಗಳ ಅದರಲ್ಲೂ ಮುಖ್ಯವಾಗಿ ಕುಣುಬಿ ಮತ್ತು ಗೌಳಿಗರ ಸಾಮಾಜಿಕಾರ್ಥಿಕ ಪರಿಸ್ಥಿತಿಗಳನ್ನು ಸಿದ್ದಿಗಳ ಜೊತೆ ಹೋಲಿಸಲು ತೌಲನಿಕ ವಿಧಾನವನ್ನೂ ಬಳಸಲಾಗಿದೆ. ಅಧ್ಯಯನದ ವಿಷಯ ಅರ್ಥಶಾಸ್ತ್ರಕ್ಕೆ ನೇರವಾಗಿ ಸಂಬಂಧಿಸಿದ್ದರೂ ಆ ಜ್ಞಾನಶಿಸ್ತಿಗೆ ಮಾತ್ರ ನಮ್ಮನ್ನು ಸೀಮಿತಗೊಳಿಸಬೇಕಿಲ್ಲ. ಸಮಾಜವಿಜ್ಞಾನದ ವಿವಿಧ ಶಾಖೆಗಳಾದ ಮಾನವಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ, ಮನಃಶಾಸ್ತ್ರ ಇತ್ಯಾದಿಗಳ ಜೊತೆಗೆ ಗಣಿತ ಮತ್ತು ಸಂಖ್ಯಾಶಾಸ್ತ್ರಗಳನ್ನು ಸಮನ್ವಯಗೊಳಿಸಿ ಬುಡಕಟ್ಟು ಆರ್ಥಿಕತೆಯ ತಾತ್ವಿಕತೆಯನ್ನು ಶೋಧಿಸಲಾಗಿದೆ. ಈ ಮಾದರಿ ಬಹುಮುಖಿಯಾಗಿ ಭಿನ್ನ ವಿಚಾರಧಾರೆಗಳನ್ನು ಗೌರವಿಸುತ್ತಲೇ ವಿವಿಧ ಜ್ಞಾನಶಾಖೆಗಳೊಡನೆ ಬೆರೆತು ಸಂಕರಗೊಳ್ಳುತ್ತಾ ಹೊಸ ಹೊಳಹುಗಳನ್ನು, ಹೊಸ ಜ್ಞಾನಶಾಖೆಗಳನ್ನು ಸೃಷ್ಟಿಸುವ ಸೃಜನಶೀಲತೆಯನ್ನು ಒಳಗೊಂಡಿದೆ.

ಸಂಶೋಧನಾ ವಿನ್ಯಾಸ

ಪ್ರಸ್ತುತ ಅಧ್ಯಯನದ ಮೂಲ ಆಶಯಗಳನ್ನು ಪೂರೈಸಲು ಈ ಪ್ರಬಂಧವನ್ನು ೬ ಅಧ್ಯಾಯ ಮತ್ತು ಉಪಸಂಹಾರಗಳಲ್ಲಿ ರೂಪಿಸಿಕೊಳ್ಳಲಾಗಿದೆ. ಈ ಅಧ್ಯಾಯಗಳು ಕೆಳಕಂಡ ವಸ್ತು ವಿಷಯಗಳನ್ನು ಒಳಗೊಂಡಿವೆ. ಮೊದಲ ಅಧ್ಯಾಯವು ತಾಂತ್ರಿಕ-ತಾತ್ವಿಕ ಸ್ವರೂಪದ್ದಾಗಿದ್ದು ಅಧ್ಯಯನದ ಮೂಲ ಅಂಶಗಳಾದ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ಅವಶ್ಯಕತೆ, ಸಮಸ್ಯೀಕರಣ, ಸಾಹಿತ್ಯಕ ಪರಾಮರ್ಶೆ ಇತ್ಯಾದಿಗಳ ಜೊತೆಗೇ ಸಿದ್ದಿಗಳ ಪ್ರಾದೇಶಿಕ, ಭೌಗೋಳಿಕ ಮಾಹಿತಿಯನ್ನು ನೀಡಿದೆ

ಎರಡನೇ ಅಧ್ಯಾಯವು ಈ ಅಧ್ಯಯನದ ಆತ್ಮವಾಗಿದೆ. ಬುಡಕಟ್ಟು ಆರ್ಥಿಕತೆಯ ಅರ್ಥ, ಪರಿಕಲ್ಪನೆ, ಆರ್ಥಿಕ ಪಲ್ಲಟಗಳು, ಆದರ್ಶ ಮತ್ತು ಸಮಾನತೆಯ ಬುಡಕಟ್ಟು ಆರ್ಥಿಕತೆ, ಉತ್ಪಾದನೆ, ಹಂಚಿಕೆ ಇತ್ಯಾದಿ ಪರಿಕಲ್ಪನೆಗಳು, ಗಾಂಧಿ, ಅಂಬೇಡ್ಕರ್, ಮಾರ್ಕ್ಸ್ ಅವರ ಆರ್ಥಿಕ ಚಿಂತನೆಗಳ ಹಿನ್ನೆಲೆಯಲ್ಲಿ ಚಾರಿತ್ರಿಕ ರೂಪಾಂತರಗಳು, ಖಾಸಗಿ ಆಸ್ತಿ, ಊಳಿಗಮಾನ್ಯ ವ್ಯವಸ್ಥೆ, ಕೈಗಾರಿಕೀಕರಣ, ಮುಂತಾದವುಗಳನ್ನು ವಿವರಿಸಲಾಗಿದೆ. ಜೊತೆಗೆ ಅಂತರ್‌ಶಿಸ್ತೀಯ ಪ್ರಯೋಗಗಳ ಹಿನ್ನೆಲೆಯಲ್ಲಿ ಬುಡಕಟ್ಟು ಅಧ್ಯಯನದ ಪ್ರಯತ್ನಗಳಾದ ಮಾನವಿಕಾರ್ಥಶಾಸ್ತ್ರ, ಕೊಡುಗೆ ಆರ್ಥಿಕತೆ, ಅರಮನೆ ಆರ್ಥಿಕತೆ ಇತ್ಯಾದಿ ಹೊಸ ಪರಿಕಲ್ಪನೆಗಳ ಪರಿಚಯ ನೀಡಲಾಗಿದೆ. ವಿವಿಧ ಬುಡಕಟ್ಟುಗಳ ಆಚರಣೆಗಳಲ್ಲಿರುವ ನಂಬಿಕೆ ಆಧರಿತ ಆರ್ಥಿಕ ಪರಿಕಲ್ಪನೆಗಳ ಚಿತ್ರಣವನ್ನೂ ಇಲ್ಲಿ ನೀಡಲಾಗಿದೆ.

ಮೂರನೇ ಅಧ್ಯಾಯದಲ್ಲಿ ಸಿದ್ದಿಗಳ ಚಾರಿತ್ರಿಕ ಹಿನ್ನೆಲೆ, ಅವರ ಮೂಲ ಆರ್ಥಿಕತೆ, ಯುರೋಪಿನ ಪುನರುಜ್ಜೀವನ ಹಾಗೂ ಹೊಸ ಭೌಗೋಳಿಕ ಅನ್ವೇಷಣೆಗಳ ಹಿನ್ನೆಲೆಯಲ್ಲಿ ಗುಲಾಮಗಿರಿಯ

ಅಮಾನುಷ ವ್ಯವಸ್ಥೆಯ ದಾರುಣ ಚಿತ್ರಣ, ಇದರಿಂದ ಛಿದ್ರಗೊಂಡ ಸಿದ್ದಿಯರ ಸಮಾಜ ಮತ್ತು ಸಂಸ್ಕೃತಿ, ಏಕಾಂಗಿತನದ ಕಾರಣ ಮತ್ತು ಅದರ ಪರಿಣಾಮ ಇತ್ಯಾದಿಗಳ ಜೊತೆಗೆ ಫಿಜಿ, ಮಾರಿಷಸ್ ಗಳಲ್ಲಿರುವ ಭಾರತೀಯ ಗುಲಾಮರು ಮತ್ತು ಅಮೆರಿಕ, ಭಾರತಗಳಲ್ಲಿರುವ ಆಫ್ರಿಕನ್ ಗುಲಾಮರ ನಡುವಿನ ವೈರುಧ್ಯಗಳ ವಿವರಣೆ ನೀಡಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಸಿದ್ದಿಗಳ ವಸಾಹಾತುಶಾಹಿ ಅಡಿಯ ಗುಲಾಮ ಆರ್ಥಿಕತೆ, ನಂತರದ ರೂಪಾಂತರಗಳು, ಬದಲಾದ ಉತ್ಪಾದನಾ ವಿಧಾನಗಳು ಮತ್ತು ಒಡೆತನದ ಸ್ವರೂಪಗಳು, ಕಾರಣಗಳು ಮತ್ತು ಪರಿಣಾಮಗಳು ಇತ್ಯಾದಿಗಳನ್ನು ವಿವರಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಸಿದ್ದಿಗಳ ವರ್ತಮಾನದ ಆರ್ಥಿಕತೆ ಎಂಬ ಶೀರ್ಷಿಕೆಯ ಅಡಿಯಲ್ಲಿ ಅವರ ಪಾರಂಪರಿಕ ದುಡಿಮೆಯ ಬಹುರೂಪಗಳಾದ ಬೇಟೆ, ಆಹಾರ ಸಂಗ್ರಹಣೆ, ಕೃಷಿ, ಕೂಲಿ, ಪಶುಸಂಗೋಪನೆ ಹಾಗೂ ಇನ್ನಿತರ ಕಸುಬುಗಳು, ದುಡಿಮೆಯ ಲಿಂಗಸಂಬಂಧಿ ಆಯಾಮಗಳು ಇತ್ಯಾದಿಗಳ ಹಿನ್ನೆಲೆಯಲ್ಲಿ ಅವರ ಪ್ರಸ್ತುತ ಆರ್ಥಿಕತೆಯನ್ನು ಕ್ಷೇತ್ರಕಾರ್ಯದಲ್ಲಿ ದೊರೆತ ಅಂಕಿ ಸಂಖ್ಯೆಗಳ ಮೂಲಕ ಕೋಷ್ಟಕ ಹಾಗೂ ರೇಖಾಚಿತ್ರಗಳನ್ನು ಬಳಸಿ ವಿಶ್ಲೇಷಿಸಲಾಗಿದೆ.

ಆರನೇ ಅಧ್ಯಾಯವು ಸಿದ್ದಿಗಳ ವರ್ತಮಾನದ ಆರ್ಥಿಕತೆಯನ್ನು ಜಿಲ್ಲೆಯ ಇತರ ಪ್ರಮುಖ ಬುಡಕಟ್ಟುಗಳ ಜೊತೆ, ಅದರಲ್ಲೂ ಮುಖ್ಯವಾಗಿ ಕುಣಬಿ, ಗೌಳಿಗರ ಜೊತೆ ತೌಲನಿಕವಾಗಿ ಅಧ್ಯಯನ ಮಾಡಲಾಗಿದ್ದು, ಅಭಿವೃದ್ಧಿ ಯೋಜನೆಗಳ ಪರಾಮರ್ಶೆ, ಸ್ಥಳಾಂತರ, ಲ್ಯಾಂಪ್ಸ್, ಜಾಗತೀಕರಣದ ಮತ್ತು ಅಭಿವೃದ್ಧಿಯ ಸವಾಲುಗಳು, ಇವುಗಳಿಂದ ಗಾಸಿಗೊಂಡ ತಳಸಮುದಾಯಗಳು ಮತ್ತು ಈ ಸಮುದಾಯಗಳನ್ನು ಅಭಿವೃದ್ಧಿಪಡಿಸುವ ಸಾಧ್ಯತೆಗಳನ್ನು ಒಳಗೊಂಡಿದೆ.

ಸಮಾರೋಪದಲ್ಲಿ ಅಧ್ಯಯನದ ಫಲಿತಗಳು ಹಾಗೂ ಸಾಧ್ಯತೆಗಳು ಮತ್ತು ಗ್ರಂಥಋಣ ನೀಡಲಾಗಿದೆ. ಜೊತೆಗೆ ಪೂರಕವಾದ ಛಾಯಾಚಿತ್ರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ವಿಶಿಷ್ಟವಾದ ಸಿದ್ದಿ ಬುಡಕಟ್ಟನ್ನು ಅಧ್ಯಯನ ಮಾಡಿದ, ವಿವೇಚಿಸಿದ, ವಿದ್ವಾಂಸರು ಹೊರ ತಂದಿರುವ ಹಲವಾರು ಗ್ರಂಥಗಳು ನನ್ನ ಅಧ್ಯಯನದ ದಿಸೆಯಲ್ಲಿ ದಿಕ್ಸೂಚಿಗಳಾಗಿ, ದಾರಿದೀಪಗಳಾಗಿ ಮುನ್ನಡೆಸಿವೆ. ನನ್ನ ಅಧ್ಯಯನದ ನಿಲುಕಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಿಲುಕಿದ, ಸ್ಫೂರ್ತಿಯಾದ, ಸಹಕಾರಿಯಾದ ಹಲವಾರು ಪುಸ್ತಕಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

೧. ಸಿದ್ದಿಯರನ್ನು ಕುರಿತು ಪ್ರಕಟಗೊಂಡ ಮೊದಲ ಪುಸ್ತಕ ಟಿ.ಸಿ. ಪಾಲಾಕ್ಷಪ್ಪನವರ The Siddis of North Kanara. ಸಿದ್ದಿಯರ ಕುರಿತ ಸ್ಥೂಲ ಪರಿಚಯ, ಅವರ ಜೀವನ ವಿಧಾನ, ವಲಸೆ ಮುಂತಾದ ವಿಷಯಗಳ ಕುರಿತ ವಿವರಗಳನ್ನು ಒಳಗೊಂಡಿದೆ. ೧೯೭೬ರಲ್ಲಿ Sterling Publishers, New Delhi ಪ್ರಕಾಶನದವರು ಈ ಪುಸ್ತಕವನ್ನು ಪ್ರಕಟಿಸಿದ್ದಾರೆ.

೨. ೧೯೯೩ರಲ್ಲಿ ಸಾಹಿತ್ಯ ಅಕಾಡೆಮಿಯ ಉಪಸಂಸ್ಕೃತಿ ಮಾಲೆಯಲ್ಲಿ ಪ್ರಕಟವಾದ ಪ್ರೊ. ಹಿ.ಚಿ. ಬೋರಲಿಂಗಯ್ಯನವರ ಸಿದ್ದಿಯರ ಸಂಸ್ಕೃತಿ ಎಂಬ ಪುಸ್ತಕ ಮಾನವಶಾಸ್ತ್ರೀಯ ದೃಷ್ಟಿಕೋನದ ಮೂಲಕ ಸಿದ್ದಿಯರ ಜೀವನದ ಸಮಗ್ರ ವಿವರಗಳನ್ನು ಕಟ್ಟಿಕೊಡುತ್ತದೆ. ಇವರು ಸಿದ್ದಿಯರ ಹಿನ್ನೆಲೆ, ಗುಲಾಮಗಿರಿಯ ದಾರುಣ ಕಥೆಗಳನ್ನು ಬಿಚ್ಚಿಡುತ್ತಲೇ ಆ ಸಂಕೋಲೆಯಿಂದ ಬಿಡಿಸಿಕೊಂಡ ಸಿದ್ದಿಯರು ತಮ್ಮ ಮೂಲ ನೆಲೆಯಾದ ಆಫ್ರಿಕಾಕ್ಕೆ ಮರಳಲಾಗದಿದ್ದರೂ ನಿರಂತರ ಸಂಘರ್ಷದ ಮೂಲಕ ಅಂತಹುದೇ ಇನ್ನೊಂದು ನೆಲೆಯನ್ನು ಉತ್ತರಕನ್ನಡದ ದಟ್ಟ ಕಾಡುಗಳಲ್ಲಿ ಕಂಡುಕೊಂಡ ನಂತರ ತಮ್ಮದೇ ಹೊಸ ಜೀವನ, ಸಂಸ್ಕೃತಿ, ಬದುಕನ್ನು ಕಟ್ಟಿಕೊಂಡ ಬಗೆಯನ್ನು ಕಣ್ಣಿಗೆ ಕಟ್ಟುವಂತೆ ಕಟ್ಟಿಕೊಟ್ಟಿದ್ದಾರೆ.

೩. ಡಾ. ಎ.ಎಸ್. ಪ್ರಭಾಕರ ಅವರು ಸಂಪಾದಿಸಿರುವ ಆದಿವಾಸಿ ಆಖ್ಯಾನ–ಸಮುದಾಯಗಳ ಅಧ್ಯಯನಕ್ಕೊಂದು ಆಕರ, ಎಂಬ ಈ ಬೃಹತ್ ಗ್ರಂಥ, ಬುಡಕಟ್ಟುಗಳ ಅನನ್ಯಲೋಕಕ್ಕೆ ಪ್ರವೇಶಿಸುವವರಿಗೆ ಒಂದು ಸರಳವಾದ ಆಕರಗ್ರಂಥವಾಗಿದೆ. ಬುಡಕಟ್ಟಿನ ವಿವಿಧ ಆಯಾಮಗಳನ್ನು ಸರಳವಾಗಿ ಪರಿಚಯಿಸುವ, ಪ್ರಸಿದ್ಧ ಲೇಖಕರ ಪ್ರಾತಿನಿಧಿಕ ಲೇಖನಗಳನ್ನೊಳಗೊಂಡಿರುವ ಈ ಪುಸ್ತಕ, ಕನ್ನಡದ ಆಕರಗ್ರಂಥಗಳ ಕೊರತೆಯನ್ನು ಸಮರ್ಥವಾಗಿ ತುಂಬುತ್ತದೆ.

೪. ಕಾರ್ಲ್ ಮಾರ್ಕ್ಸ್‌ರ ಎಲ್ಲ ಬರವಣಿಗೆಗಳ ಸ್ಫೂರ್ತಿಯಾಗಿದ್ದ ಅವರ ಸ್ನೇಹಿತ ಫ್ರೆಡ್ರಿಕ್ ಎಂಗೆಲ್ಸ್‌ರು ಮಾರ್ಕ್ಸ್ ಅವರ ಜೀವಿತ ಕಾಲದಲ್ಲಿ ಅಮೆರಿಕದ ಎಲ್ ಜಿ ಮಾರ್ಗನ್‌ರ ಆದಿಕಾಲದ ಸಮಾಜ ಪುಸ್ತಕದ ಮೇಲೆ ಬರೆದ ಟಿಪ್ಪಣಿಗಳನ್ನಾಧರಿಸಿ ಬರೆದ ಪುಸ್ತಕವೇ. ಕುಟುಂಬ, ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ(ಲೂಯಿ ಎಚ್. ಮಾರ್ಗನ್‌ರ ಪರಿಶೋಧನೆಗಳ ಬೆಳಕಿನಲ್ಲಿ)'. ಇದು ಸಂಸ್ಕೃತಿಯ ಇತಿಹಾಸಪೂರ್ವ ಘಟ್ಟಗಳಾದ ಕಿರಾತಾವಸ್ಥೆಯಿಂದ ಹಿಡಿದು ಸ್ತ್ರೀಪ್ರಧಾನ ಮತ್ತು ಪುರುಷಪ್ರಧಾನ ಕುಟುಂಬ, ಬುಡಕಟ್ಟು, ಗೋತ್ರ, ಗುಲಾಮಗಿರಿ, ರಾಜ್ಯ, ಇತ್ಯಾದಿ ಬೆಳವಣಿಗೆಯ ಹಂತಗಳನ್ನು ಅಥೀನಿಯನ್, ಗ್ರೀಕ್, ರೋಮನ್ ಮತ್ತು ಜರ್ಮನ್ ನಾಗರಿಕತೆಗಳ ಹಿನ್ನೆಲೆಯಲ್ಲಿ ವೈಜ್ಞಾನಿಕವಾಗಿ ವಿವರಿಸಿದ್ದಾರೆ.

೫. ಆದಿವಾಸಿ ಆಖ್ಯಾನಕ್ಕೆ ಮುನ್ನುಡಿಯಂತಿರುವ ಬುಡಕಟ್ಟು ಅಭಿವೃದ್ಧಿ ಮೀಮಾಂಸೆ ಪುಸ್ತಕದಲ್ಲಿ ಬುಡಕಟ್ಟು ಅಭಿವೃದ್ಧಿಯ ವಿವಿಧ ಆಯಾಮಗಳ ಬಗೆಗೆ ನಾಡಿನ, ರಾಷ್ಟ್ರದ ವಿವಿಧ ಲೇಖಕರ ಲೇಖನಗಳನ್ನು ಒಳಗೊಂಡಿದ್ದು ಬಹು ವಿವಾದಿತ ಮತ್ತು ಚರ್ಚಿತವಾದ ಬುಡಕಟ್ಟು ಅಭಿವೃದ್ಧಿ ವಿಷಯದ ಬಗೆಗೆ ವೈವಿಧ್ಯಮಯವಾದ ಲೇಖನ ಹಾಗೂ ಅಭಿಪ್ರಾಯಗಳನ್ನು ಒಂದೇ ಕಡೆ ಕಟ್ಟಿಕೊಡುವ ಈ ಪುಸ್ತಕ ಬುಡಕಟ್ಟುಗಳ ಹಾಗೂ ಅವುಗಳ ಅಭಿವೃದ್ಧಿಯ ಬಗೆಗೆ ಕನ್ನಡದಲ್ಲಿ ಅಧ್ಯಯನ ನಡೆಸುವವರಿಗೆ ಉತ್ತಮ ಗ್ರಂಥವಾಗಿದೆ.

೬. ರಾಜಕೀಯ ಅರ್ಥಶಾಸ್ತ್ರದ ತಾರುಣ್ಯ ಎಂಬ ಪುಸ್ತಕದಲ್ಲಿ ಲೇಖಕ ಎ.ವಿ.ಅನೀಕಿನ್ ಅವರು ಅರ್ಥಶಾಸ್ತ್ರದ ಉಗಮ, ಬೆಳವಣಿಗೆ, ಅರ್ಥಶಾಸ್ತ್ರಜ್ಞರ ಜೀವನ, ಸಿದ್ಧಾಂತ ಇತ್ಯಾದಿಗಳನ್ನು

ಮಾರ್ಕ್ಸ್ ವಾದದ ಹಿನ್ನೆಲೆಯಲ್ಲಿ ವಿವರವಾಗಿ ವಿವೇಚಿಸಿದ್ದಾರೆ. ಅರಿಸ್ಟಾಟಲ್‌ರಿಂದ ಹಿಡಿದು ಮರ್ಕೆಂಟಲಿಸ್ಟ್, ಪೆಟಿ, ಬುವಾ ಗಿಲ್ಬರ್ಟ್, ಜೊನ್ ಲಾ, ಫ್ರಾಂಕ್ಲಿನ್, ಆಡಂ ಸ್ಮಿತ್, ರಿಕಾರ್ಡೋ, ಸೇ, ಸೇಂಟ್ ಸಿಮೋನ್, ಓವನ್‌ರವರೆಗಿನ ಅರ್ಥಶಾಸ್ತ್ರದ ಮಹಾನ್ ಪುರುಷರ ಸರಳ ಚಿತ್ರಣ ನೀಡಿದ್ದಾರೆ.

೭. ಪ್ರಾಚೀನ ಭಾರತದ ಚರಿತ್ರೆ, ಡಿ.ಡಿ. ಕೊಸಾಂಬಿಯವರ ಚಿಂತನೆಗಳು ಪುಸ್ತಕ ಬುಡಕಟ್ಟು ಆರ್ಥಿಕತೆಯ ಹುಟ್ಟು, ಬೆಳವಣಿಗೆ, ಅವಸಾನಗಳ ಚಿತ್ರಣ ನೀಡುವ ಉಪಯುಕ್ತ ಪುಸ್ತಕವಾಗಿದೆ. ಇತಿಹಾಸ ಪ್ರಸಿದ್ಧರಾದ, ಇತಿಹಾಸ ಸೃಷ್ಟಿಸಿದ ಸಾವಿರಾರು ಮಹನೀಯರಿಗೆ ಜನ್ಮ ನೀಡಿದ ಭಾರತ ಅದನ್ನು ದಾಖಲಿಸುವ, ವಿಶ್ಲೇಷಿಸುವ ಇತಿಹಾಸಕಾರರನ್ನು ಮಾತ್ರ ಸೃಷ್ಟಿಸುವಲ್ಲಿ ವಿಫಲವಾದ್ದು ಒಂದು ಐತಿಹಾಸಿಕ ವಿರೋಧಾಭಾಸ. ಈ ಕೊರತೆಯನ್ನು ನೀಗಿಸಲೋ ಎಂಬಂತೆ ಮೂಲತಃ ಸಂಖ್ಯಾಶಾಸ್ತ್ರಜ್ಞರಾಗಿದ್ದು ನಂತರ ವಿಶ್ವವೇ ನಿಬ್ಬೆರಗಾಗುವಂತೆ ಇತಿಹಾಸವನ್ನು ಮರುಸೃಷ್ಟಿಸಿ ವಿಶ್ಲೇಷಿಸಿದ ಪರಿ ಅನನ್ಯ. ವಿಶ್ವದಲ್ಲೇ ವಿಶಿಷ್ಟವಾಗಿರುವ ಭಾರತದ ಚರಿತ್ರೆಯನ್ನು ಕಟ್ಟುವ ಕೆಲಸ ಸುಲಭದ್ದಲ್ಲ. ಅಲೆಕ್ಸಾಂಡರ್ ಹೇಗಿದ್ದನೆಂದರೆ ಒಂದು ಸುಂದರ ಗ್ರೀಕ್ ಶಿಲ್ಪ ನಮ್ಮ ಕಣ್ಣ ಮುಂದೆ ಬರುತ್ತದೆ. ಆದರೆ ಅಶೋಕ ಹೇಗಿದ್ದ ಎಂದರೆ ನಮಗೆ ಸರಿಯಾದ ಕಲ್ಪನೆಯೇ ಬರುವುದಿಲ್ಲ. ಭಾರತೀಯರ ಇತಿಹಾಸ ದಾಖಲೆಯ ಸ್ವರೂಪ ತುಂಬ ಶೋಚನೀಯ. ಈ ಹಿನ್ನೆಲೆಯಲ್ಲಿ ಜನಸಾಮಾನ್ಯರ ಜೀವನದಲ್ಲಿ ಹಾಸುಹೊಕ್ಕಾಗಿರುವ ಆಚರಣೆ, ನಂಬಿಕೆ, ದೈವಗಳು, ಪಲ್ಲಟಗಳು ಇತ್ಯಾದಿಗಳ ಆಧಾರದ ಮೇಲೆಯೇ ಈ ನಾಡಿನ ಚರಿತ್ರೆಯನ್ನು ಹೆಕ್ಕಿ ತೆಗೆದರಲ್ಲದೆ ತಮ್ಮ ವಾದಗಳಿಗೆ ಸೂಕ್ತ ಪುರಾವೆಗಳನ್ನೂ ನೀಡಿದ್ದಾರೆ. ಈ ಪುಸ್ತಕದಲ್ಲಿ ಮಾರ್ಕ್ಸ್‌ನ ಛಾಯೆ ಇದ್ದರೂ ಅದರ ಹಿನ್ನೆಲೆಯಲ್ಲಿ ಆದಿಮಾನವ, ಅಲೆಮಾರಿ, ಬುಡಕಟ್ಟು ಮಾನವ, ಗ್ರಾಮೀಣ ಮಾನವ, ನಗರದ ನಾಗರಿಕ, ರಾಜ್ಯ, ಸರಕಾರ, ಇತ್ಯಾದಿ ಕಾಲಘಟ್ಟಗಳ ದುಡಿಮೆಯ ಮಾದರಿ, ದುಡಿಮೆಯ ಶಕ್ತಿ, ಅವುಗಳ ಹಸ್ತಾಂತರ, ಶೋಷಣೆ, ಹೋರಾಟ ಇವೆಲ್ಲವುಗಳನ್ನು ವಿವರಿಸಿದ್ದು ಬುಡಕಟ್ಟು ಆರ್ಥಿಕತೆಯು ಬೆಳೆದುಬಂದ ದಾರಿಯನ್ನು ಇದು ವಿವರವಾಗಿ ಚರ್ಚಿಸುತ್ತದೆ.

೮. ಅಭಿವೃದ್ಧಿಯೆಂಬ ಮರೀಚಿಕೆಯ ಹಿಂದೆ ಬಿದ್ದಿರುವ ಮನುಷ್ಯ, ಬದುಕಿನ ಮೂಲ ಸೆಲೆಯಾದ ಮಾನವೀಯತೆಯನ್ನೇ ಮರೆತು ಇಂದು ಅನುಭವಿಸುತ್ತಿರುವ ಎಲ್ಲ ಸಮಸ್ಯೆಗಳ ಹಿಂದಿನ ಕಾರಣಗಳನ್ನು ಎಳೆ ಎಳೆಯಾಗಿ ಬಿಡಿಸಿಡುವ ನಾಗೇಶ್ ಹೆಗಡೆಯವರ ಅಭಿವೃದ್ಧಿಯ ಅಂಧಯುಗ ಎಂಬ ಕಿರುಹೊತ್ತಗೆ ತುಂಬ ವಿಭಿನ್ನ ಆದರೆ ಪರಿಸರಸ್ನೇಹಿ ವಿಧಾನಗಳ ಮೂಲಕ ಹೇಗೆ ಇಳೆಯನ್ನು ಕೊಳೆಯ ನರಕವಾಗಿಸುವ ಬದಲು ಹಿಂದೆ ಹೋದರೂ ಸರಿ, ನಮ್ಮೆಲ್ಲರ ಏಕೈಕ ಆಧಾರವಾಗಿರುವ ಈ ಭೂಮಿಯನ್ನು ಮುಂದಿನ ಜನಾಂಗಕ್ಕೆ ಉಳಿಸುವ ಅನಿವಾರ್ಯತೆ ಯನ್ನಷ್ಟೇ ಅಲ್ಲದೆ ಮಾರ್ಗೋಪಾಯಗಳನ್ನು ವಿವರಿಸುತ್ತದೆ.

೯. ಷುಮಾಕರ್ ಅವರ ಸಣ್ಣದು ಸುಂದರ ಗ್ರಂಥವು ಇಡೀ ವಿಶ್ವವನ್ನೇ ಹೊಸಚಿಂತನೆಗೆ ಹಚ್ಚಿದ ಗ್ರಂಥವಾಗಿದ್ದು ನಿಸರ್ಗದೊಡನೆ ಯುದ್ಧ ಮಾಡುವುದಕ್ಕಿಂತ ಅನುಸಂಧಾನ ಮಾಡುವುದೇ

ಲೇಸು, ಅದಕ್ಕಾಗಿ ದೊಡ್ಡ ದೊಡ್ಡ ಯೋಜನೆಗಳಿಗಿಂತ ಸಣ್ಣ ಯೋಜನೆ, ಯಂತ್ರಗಳು ಅಗತ್ಯ ಎಂದು ಪ್ರತಿಪಾದಿಸಿದ್ದಾರೆ. ಇವರ ಚಿಂತನೆ ಬುಡಕಟ್ಟು ಚಿಂತನೆಗಳಿಗೆ ತುಂಬಾ ಹತ್ತಿರದಲ್ಲಿದೆ.

೧೦. ಕಿರಣ್ ಕಮಲ್ ಪ್ರಸಾದ್ ಅವರು ಬರೆದಿರುವ ಇನ್ ಸರ್ಚ್ ಆಫ್ ಎನ್ ಐಡೆಂಟಿಟಿ ಕರ್ನಾಟಕದ ಸಿದ್ದಿಗಳ ಬಗೆಗಿನ ಉತ್ತಮ ಪುಸ್ತಕಗಳಲ್ಲಿ ಒಂದಾಗಿದ್ದು ಮಾನವಶಾಸ್ತ್ರೀಯ ಹಿನ್ನೆಲೆಯಲ್ಲಿ ಸಾಕಷ್ಟು ಕ್ಷೇತ್ರಕಾರ್ಯ ನಡೆಸಿ ಸಿದ್ಧಪಡಿಸಿದ ಈ ಕೃತಿಯಲ್ಲಿ ಹಲವಾರು ಅಮೂಲ್ಯ ಅಂಕಿಸಂಖ್ಯೆ, ಅವರ ಆರ್ಥಿಕ ಜೀವನದ ಸಾಕಷ್ಟು ಮಾಹಿತಿಗಳು ಇಲ್ಲಿ ದೊರೆಯುತ್ತವೆ. ಸಿದ್ದಿಯರ ಬದುಕಿನ ಎಲ್ಲ ಮಗ್ಗುಲುಗಳನ್ನೂ ದಾಖಲಿಸಿರುವ ಈ ಪುಸ್ತಕ ತುಂಬಾ ಉಪಯುಕ್ತವಾಗಿದೆ.

೧೧. ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗ ಕಾಲಕಾಲಕ್ಕೆ ಹೊರತಂದಿರುವ ಅರ್ಧವಾರ್ಷಿಕ ಪತ್ರಿಕೆ 'ಬುಡಕಟ್ಟು ಅಧ್ಯಯನ'ದ ವಿವಿಧ ಸಂಪುಟಗಳು ಸಂಗ್ರಹಯೋಗ್ಯವಾಗಿದ್ದು ಬುಡಕಟ್ಟು ಸಮುದಾಯಗಳ ವಿವಿಧ ಆಯಾಮಗಳ ಮೇಲೆ ಬೆಳಕು ಚೆಲ್ಲುತ್ತವೆ. ಜೊತೆಗೆ ಮಾನವಶಾಸ್ತ್ರ ವಿಭಾಗ, ಮಹಿಳಾ ಅಧ್ಯಯನ ವಿಭಾಗ, ಇತಿಹಾಸ ವಿಭಾಗದ ಸಂಪುಟಗಳು ಅಧ್ಯಯನಾರ್ಥಿಗಳಿಗೆ ತುಂಬಾ ಪ್ರಯೋಜನಕಾರಿಯಾಗಿವೆ.

೧೨. ಡಾ. ಚ.ನಾ. ಅವರು ಸಂಪಾದಿಸಿರುವ Tribal religion and economic life ಪುಸ್ತಕ ಬುಡಕಟ್ಟುಗಳ ಮೂಲ ಅರ್ಥವ್ಯವಸ್ಥೆಯ ಬಗೆಗಿನ ಅತ್ಯಮೂಲ್ಯ ಪುಸ್ತಕವಾಗಿದೆ ಎಂದರೆ ತಪ್ಪಾಗಲಾರದು. ಬುಡಕಟ್ಟುಗಳ ನಂಬಿಕೆ, ಆಚರಣೆ, ಸಾಮಾಜಿಕ, ಧಾರ್ಮಿಕ, ರಾಜಕೀಯ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಆರ್ಥಿಕ ಅಂಶಗಳನ್ನು ಹೊರತೆಗೆದು ಕಟ್ಟಿಕೊಡುವ ವಿಶಿಷ್ಟ ಪುಸ್ತಕವಾಗಿದೆ. ವಿಶ್ವದ ವಿವಿಧ ಬುಡಕಟ್ಟುಗಳ ಉದಾಹರಣೆ ಯೊಂದಿಗೆ ಮಾಹಿತಿಯ ಆಕರವಾಗಿರುವ ಈ ಪುಸ್ತಕ ವೈವಿಧ್ಯಮಯ ಲೇಖನಗಳ ಸಮೃದ್ಧ ಸಂಗ್ರಹವಾಗಿದೆ.

೧೩. ಕಮಲ ಎಂ.ಆರ್. ಅವರ ಕಪ್ಪು ಹಕ್ಕಿಯ ಬೆಳಕಿನ ಹಾಡು ಪುಸ್ತಕ ಅಮೆರಿಕದ ಗುಲಾಮಗಿರಿಯ ಸಂಪೂರ್ಣ ಮಾಹಿತಿ ನೀಡುವ, ಗುಲಾಮರ ಬದುಕಿನ ಕರಾಳ ಅಧ್ಯಾಯಗಳ ಮೇಲೆ ಬೆಳಕು ಚೆಲ್ಲುವ, ಅವರ ಹೋರಾಟ ಹತಾಶೆ, ಬದುಕು, ಬವಣೆ, ಎಲ್ಲವುಗಳನ್ನೂ ಹೇಳುತ್ತ ಅದರ ವಿರುದ್ಧ ಹೋರಾಡಿದ ವ್ಯಕ್ತಿಗಳ, ಅದರಲ್ಲೂ ಮಹಿಳೆಯರ ಅನುಭವಗಳನ್ನು ದಾಖಲಿಸುತ್ತಲೇ ಆ ಕಾಲದ ವ್ಯವಸ್ಥೆಯ ಚಿತ್ರಣವನ್ನು ಸಚಿತ್ರವಾಗಿ ನೀಡುತ್ತದೆ.

೧೪. ೧೯೮೨ರಲ್ಲಿ 'ಸಿದ್ದಿಯರ ಕಥೆಗಳು' ಎಂಬ ಕಿರುಪುಸ್ತಿಕೆಯನ್ನು ಡಾ.ಎಲ್.ಆರ್. ಹೆಗಡೆ ಅವರು ಐ.ಬಿ.ಎಚ್. ಪ್ರಕಾಶನದ ಮೂಲಕ ಪ್ರಕಟಿಸಿದರು. ಇದರಲ್ಲೂ ಸಹ ಸಿದ್ದಿಯರ ಕುರಿತ ಮತ್ತು ಸಿದ್ದಿಯರಲ್ಲಿ ಬಳಕೆಯಲ್ಲಿರುವ ಕಥೆಗಳಿದ್ದು ಅವರ ನಂಬಿಕೆ, ಆದರ್ಶ ಮತ್ತು ಪರಿಸರಗಳ ಜೊತೆ ಜೊತೆಗೇ ಅವರ ಕಸುಬುಗಳು, ದುಡಿಮೆ ಇತ್ಯಾದಿಗಳ ಸ್ಥೂಲ ವಿವರಣೆಗಳಿವೆ.

೧೫. ೧೯೦೯ರಲ್ಲಿ ಪ್ರಕಟವಾದ ಎಡ್ಗರ್ ಥರ್ಸ್ಟನ್ ಅವರ Castes and Tribes of Southern India ಸಂಪುಟಗಳು ಸಿದ್ದಿಗಳ ಬಗೆಗೆ ದಾಖಲಿಸಿದೆಯಲ್ಲದೆ ಹಿಂದೆ ಭಾರತದಲ್ಲಿ ಚಾಲ್ತಿಯಲ್ಲಿದ್ದ ಗುಲಾಮಗಿರಿಯ ವಿವರಗಳು, ಗುಲಾಮರನ್ನಾಗಿಸುವ ವಿಧಾನಗಳು, ಕಾರಣಗಳು ಇತ್ಯಾದಿಗಳನ್ನು ವಿವರಿಸುತ್ತದೆ.

೧೬. ೧೯೩೦ರಲ್ಲಿ ಪ್ರಕಟವಾದ ಅನಂತಕೃಷ್ಣ ಅಯ್ಯರ್ ಅವರ Mysore Tribes and Castes, Mysore University, Mysore. ೧–೫ ಸಂಪುಟಗಳಲ್ಲಿ ಸಿದ್ದಿಯರ ಜೀವನ ವಿಧಾನವನ್ನು ವಿವರಿಸಲಾಗಿದೆ. ಇಲ್ಲಿ ಸಿದ್ದಿಯರ ಬದುಕಿನ ಯಥಾವತ್ತು ವಿವರಗಳ ದಾಖಲಾತಿ ಹೇರಳವಾಗಿ ಲಭ್ಯವಾಗುತ್ತದೆ. ಸಿದ್ದಿಯರ ವಲಸೆ, ಅವರ ನೆಲೆಗಳು, ಭೌಗೋಳಿಕ ಪ್ರಸಾರ, ಕಲೆ ಜೀವನ ವಿಧಾನ, ಆಚರಣೆಗಳ ಕುರಿತ ವಿವರಗಳನ್ನು ಕಲೆ ಹಾಕಲಾಗಿದೆ. ಥರ್ಸ್ಟನ್ ಮತ್ತು ಅಯ್ಯರ್ ಪ್ರಾರಂಭಿಸಿದ ವಸಾಹತು ಕಾಲಘಟ್ಟದ ಅಧ್ಯಯನ ವಿಧಾನಗಳನ್ನು ಆ ಮೇಲಿನ ವಿದ್ವಾಂಸರು ಯಥಾವತ್ತು ಅನುಸರಿಸಿಕೊಂಡು ಬಂದರು.

೫. ಉತ್ತರಕನ್ನಡ: (ಕಾರವಾರ) ಜಿಲ್ಲೆ ಒಂದು ಪಕ್ಷಿನೋಟ

ಕರ್ನಾಟಕದ ನಿಸರ್ಗಸ್ವರ್ಗವೆಂದೇ ಖ್ಯಾತವಾಗಿರುವ ಈ ಜಿಲ್ಲೆ ಬುಡಕಟ್ಟುಗಳ ಸ್ವರ್ಗವೂ ಹೌದು. 'ಪಶ್ಚಿಮ ಘಟ್ಟಗಳು' ಈ ನಿಸರ್ಗ ಸೌಂದರ್ಯದ ಮುಕುಟಮಣಿ. ಈ ಘಟ್ಟಗಳ ಹೃದಯ ಭಾಗದಲ್ಲಿ ಬರುವ ಉತ್ತರಕನ್ನಡ ಜಿಲ್ಲೆ ಕರ್ನಾಟಕದ, ಭಾರತದ, ಅಷ್ಟೇ ಏಕೆ ಭೂಮಿಯ ಜೀವವೈವಿಧ್ಯತೆಯ ತಾಣ, ಬಯೊಡೈವರ್ಸಿಟಿ ಹಾಟ್ ಸ್ಪಾಟ್, ಸೂಕ್ಷ್ಮ ಪರಿಸರದ ಶ್ವಾಶಕೋಶಗಳೆಂದರೆ ತಪ್ಪಾಗಲಾರದು. 'ಅರೇಬಿಯನ್ ಸಮುದ್ರದ ಗುಂಟ ೧೫೦೦ ಕಿ.ಮೀ. ಚಾಚಿಕೊಂಡಿರುವ ಈ ಘಟ್ಟಗಳು ೬ ರಾಜ್ಯಗಳ ೪೪ ಜಿಲ್ಲೆಗಳ, ೧೪೨ ತಾಲೂಕುಗಳನ್ನು ಆವರಿಸಿಕೊಂಡಿವೆ. ಅಪಾಯದ ಅಂಚಿನಲ್ಲಿರುವ ೧೫೦೦ ಜಾತಿಯ ಪುಷ್ಪ ಹಾಗು ಸಸ್ಯಸಂಪತ್ತು, ಸುಮಾರು ೫೦೦ ಜಾತಿಯ ವಿಶಿಷ್ಟ ಮೀನು, ಸಸ್ತನಿ, ಸರೀಸೃಪ ಇನ್ನಿತರ ಪ್ರಾಣಿಗಳಿಗೆ ಜೀವ ನೀಡಿರುವ, ನೂರಾರು ಅಪರೂಪದ ಬುಡಕಟ್ಟುಗಳಿಗೆ ಆಸರೆ ನೀಡಿರುವ ಕಾರಣಕ್ಕೇ ಇದು ಪರಿಸರಸೂಕ್ಷ್ಮವೆಂದು ಪರಿಗಣಿಸಬಹುದಾಗಿದೆ. ದಖನ್ ಪ್ರಸ್ಥಭೂಮಿಯ ವಾಟರ್ ಟ್ಯಾಂಕ್, ವಾಟರ್ ಟವರ್ ಎಂದೇ ಇದನ್ನು ಕರೆಯಬಹುದಾಗಿದೆ. ಏಕೆಂದರೆ ಈ ಭಾಗದ ಎಲ್ಲ ನದಿಗಳ ಉಗಮ ಇಲ್ಲೇ ಆಗುತ್ತದೆ. ಆದರೆ ಅಭಿವೃದ್ಧಿಯ ಹೆಸರಿನಲ್ಲಿ ಇಲ್ಲಿನ ನದಿಗಳಿಗೆ ಕಂಡಕಂಡಲ್ಲಿ ಅಣೆಕಟ್ಟೆ ಕಟ್ಟಿ, ಗಣಿಗಾರಿಕೆಗಾಗಿ ಅರಣ್ಯ ನಾಶ ಮಾಡಿ, ಮಣ್ಣಿನ ಸವಕಳಿಯಿಂದ ಈ ಅಣೆಕಟ್ಟೆಗಳೆಲ್ಲಾ ಹೂಳು ತುಂಬಿ, 'ಎಸ್ ಈ ಝಡ್' ಅಂದರೆ 'ವಿಶೇಷ ಆರ್ಥಿಕ ವಲಯ'ಗಳಿಗಾಗಿ ಈ 'ಈ ಎಸ್ ಝಡ್' ಅಂದರೆ 'ಎಕಾಲಜಿಕಲಿ ಸೆನ್ಸಿಟಿವ್ ಝೋನ್'ಗಳ ನಾಶವನ್ನು ಕ್ಷಮಿಸಲಾಗದು. ಮಹಾರಾಷ್ಟ್ರದ ದಹಾನು ತಾಲೂಕು ಪರಿಸರ ಪ್ರಾಧಿಕಾರವನ್ನು ಸುಪ್ರೀಂ ಕೋರ್ಟ್‌ನ ಆದೇಶದಂತೆ ಸ್ಥಾಪಿಸಿಕೊಂಡು ಮುಂಬೈ ನಗರದ ವಿಸ್ತರಣೆಗೆ ತಡೆಯೊಡ್ಡಿದ ಕ್ರಮ ಇತರ ಪ್ರಾದೇಶಿಕ ಸರ್ಕಾರಗಳಿಗೆ ಮಾರ್ಗದರ್ಶಿಯಾಗ

ಬೇಕಾಗಿದೆ. ಇದರ ರಕ್ಷಣೆಯ ಕೂಗು ಕೇಳಿಬಂದಾಗಲೆಲ್ಲ, ಸರ್ಕಾರ ಒಂದು ಸಮಿತಿಯನ್ನು ನೇಮಿಸಿ, ಅದಕ್ಕೊಬ್ಬ ಅಧ್ಯಕ್ಷ, ಸದಸ್ಯರು, ಸಿಬ್ಬಂದಿ, ಸಂಬಳ ಸಾರಿಗೆ ನೀಡಿ, ಅದು ಕೇಳಿದಂತೆಲ್ಲ ಅವಧಿ ವಿಸ್ತರಿಸಿ ಕೊನೆಗೊಮ್ಮೆ ಅದು ವರದಿ ನೀಡಿದಾಗ ಅದನ್ನು ಎತ್ತರದ ಶೆಲ್ಫಿನ ಮೇಲಿಟ್ಟು ಮರೆತುಬಿಡುವುದು ಸರ್ಕಾರದ ಹಳೆಯ ಚಾಳಿ.'[೬] ಪ್ರಖ್ಯಾತ ಪರಿಸರವಿಜ್ಞಾನಿ ಶ್ರೀ ಮಾಧವ ಗಾಡ್ಗೀಳ್‌ರ ಸಮಿತಿಗೆ ಈ ದುರ್ದೆಶೆ ಬರುವುದಿಲ್ಲವೆಂಬ ಆಶಯ ಕನಸಾಗಿಯೇ ಉಳಿದರೆ ಆಶ್ಚರ್ಯವಿಲ್ಲ. ಏಕೆಂದರೆ, ಕಸ್ತೂರಿ ರಂಗನ್ ಸಮಿತಿಯನ್ನು ರಚಿಸುವ ಮೂಲಕ ಸರ್ಕಾರ ತನಗೆ ಬೇಕಾದಂತೆ ವರದಿ ಬರೆಸಿ, ಇಡೀ ಪಶ್ಚಿಮಘಟ್ಟವನ್ನೇ ಬೆಳ್ಳಿಯ ತಟ್ಟೆಯಲ್ಲಿಟ್ಟು ಬಂಡವಾಳಶಾಹಿಗಳಿಗೆ ನೀಡಲು ವ್ಯವಸ್ಥೆ ಮಾಡಿದೆ.

'ಕರ್ನಾಟಕದ ಹೆಚ್ಚು ಅರಣ್ಯಪ್ರದೇಶ ಇರುವ ಜಿಲ್ಲೆಗಳಲ್ಲಿ ಉತ್ತರಕನ್ನಡ ಜಿಲ್ಲೆಯು ಮೊದಲನೆಯದಾಗಿದೆ. ರಾಜ್ಯದ ಒಟ್ಟು ಅರಣ್ಯಪ್ರದೇಶದ ಶೇಕಡ ೨೮ ಪಾಲು ಈ ಜಿಲ್ಲೆಯದೇ ಆಗಿದೆ.

ಜಿಲ್ಲೆಯು ರಾಜ್ಯದ ಪಶ್ಚಿಮಭಾಗದಲ್ಲಿದ್ದು, ಉತ್ತರಾರ್ಧಗೋಳದ ಉಷ್ಣವಲಯದ ಅಕ್ಷಾಂಶ ೧೩೦-೫೫ ಮತ್ತು ೧೫೦-೩೧ ಮಧ್ಯ ಮತ್ತು ಪೂರ್ವರೇಖಾಂಶ ೭೪೦-೦೦ ಮತ್ತು ೭೫೦-೧೦ರ ಮಧ್ಯ ಅಡಕವಾಗಿದೆ. ಉತ್ತರಕ್ಕೆ ಗೋವಾ ರಾಜ್ಯ ಮತ್ತು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕು, ಪೂರ್ವಕ್ಕೆ ಧಾರವಾಡ ಜಿಲ್ಲೆ ಹಾಗೂ ಹಾವೇರಿ ಜಿಲ್ಲೆ, ದಕ್ಷಿಣಕ್ಕೆ ಶಿವಮೊಗ್ಗ ಮತ್ತು ಉಡುಪಿ ಜಿಲ್ಲೆಗಳು ಪಶ್ಚಿಮಕ್ಕೆ ಅರಬ್ಬಿ ಸಮುದ್ರದಿಂದ ಆವರಿಸಲ್ಪಟ್ಟಿದ್ದು ೧೨೨ ಕಿ.ಮೀ. ಉದ್ದದ ಕರಾವಳಿ ಇದೆ.

ಈ ಜಿಲ್ಲೆಯು ೧೦,೨೯೧.೦೦ ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದ್ದು, ರಾಜ್ಯದಲ್ಲಿ ೫ನೇ ಸ್ಥಾನವನ್ನು ಪಡೆದಿದೆ. ಕಾರವಾರವು ಜಿಲ್ಲಾ ಕೇಂದ್ರವಾಗಿದ್ದು, ೧೧ ತಾಲೂಕುಗಳನ್ನು ಒಳಗೊಂಡಿದೆ. ೧,೯೧೦.೪೪ ಚ.ಕಿ.ಮೀ. ವಿಸ್ತೀರ್ಣ ಹೊಂದಿದ ಸೂಪಾ ತಾಲೂಕು ಎಲ್ಲಕ್ಕಿಂತ ದೊಡ್ಡದು ಮತ್ತು ೩೫೫.೫೦ ಚ.ಕಿ.ಮೀ. ವಿಸ್ತೀರ್ಣ ಹೊಂದಿದ ಭಟ್ಕಳ ತಾಲೂಕು ಎಲ್ಲಕ್ಕಿಂತ ಚಿಕ್ಕದಾಗಿದೆ. ಜಿಲ್ಲೆಯು ೩೫ ಹೋಬಳಿಗಳನ್ನು, ೨೦೮ ಗ್ರಾಮ ಪಂಚಾಯಿತಿಗಳನ್ನು, ೩ ನಗರಸಭೆಗಳನ್ನು, ೨ ಪುರಸಭೆಗಳನ್ನು, ೬ ಪಟ್ಟಣ ಪಂಚಾಯಿತಿಗಳನ್ನು ಹೊಂದಿರುತ್ತದೆ. ೨೦೦೧ರ ಜನಗಣತಿಯ ಅನುಸಾರ ಒಟ್ಟು ೧೨೮೯ ಗ್ರಾಮಗಳಿವೆ.

ಭೌಗೋಳಿಕ ಲಕ್ಷಣಗಳು : ಸಿದ್ದಾಪುರ, ಶಿರಸಿ, ಸೂಪಾ ಮತ್ತು ಯಲ್ಲಾಪುರ ತಾಲೂಕುಗಳು ಮಲೆನಾಡು ಪ್ರದೇಶದಲ್ಲಿ, ಅಂಕೋಲಾ, ಭಟ್ಕಳ, ಹೊನ್ನಾವರ, ಕಾರವಾರ ಮತ್ತು ಕುಮಟಾ ತಾಲೂಕುಗಳು ಕರಾವಳಿ ಪ್ರದೇಶದಲ್ಲಿ ಹಾಗೂ ಹಳಿಯಾಳ ಮತ್ತು ಮುಂಡಗೋಡ ತಾಲೂಕುಗಳು ಬಯಲುಸೀಮೆ ಪ್ರದೇಶದಲ್ಲಿವೆ.

ಹವಾಗುಣ : ಜಿಲ್ಲೆಯ ಹವಾಮಾನವು ಸಮಶೀತೋಷ್ಣವಾಗಿದೆ. ಸಮುದ್ರತೀರದಲ್ಲಿ ಆರ್ದ್ರತೆ ಮತ್ತು ಉಷ್ಣತೆ ಇರುತ್ತಿದ್ದು, ಬೇಸಿಗೆಯಲ್ಲಿ ಅತಿ ಹೆಚ್ಚು ೩೩° ಸೆಂ. ಮತ್ತು ಚಳಿಗಾಲದಲ್ಲಿ ೨೦° ಸೆಂ. ಉಷ್ಣತೆ ಇರುತ್ತದೆ.

ಸರಾಸರಿ ಮಳೆ ಬರುವ ದಿನಗಳು ೧೦೩ ದಿನಗಳಾಗಿದ್ದು, ೨೮೮೭ರಿಂದ ೩೨೩೮.೭೦ ಮಿ.ಮೀ. ಮಳೆಯಾಗುತ್ತದೆ.

ಮಣ್ಣಿನ ರಚನೆ : ಜಿಲ್ಲೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ಕಪ್ಪುಮಣ್ಣಿನ ಸ್ವರೂಪಗಳೆಂದರೆ, ಪದರುಪದರಾಗಿರುವ ಬೆಣಚುಕಲ್ಲಿನಿಂದ ಕೂಡಿದ ಹಗುರಾದ, ಸಸ್ಯಪೋಷಕ ದ್ರವ್ಯಗಳು ಕಡಿಮೆ ಇರುವ ಮಣ್ಣು ಹಾಗೂ ಕರಾವಳಿ ಪ್ರದೇಶದಲ್ಲಿ ಉಪ್ಪುನೀರು ಬೆರೆತ ಉಸುಕಿನ ನೆಲ ಕಂಡುಬರುತ್ತದೆ.

ನದಿಗಳು : ಜಿಲ್ಲೆಯ ನದಿಗಳಲ್ಲಿ ಕಾಳಿ, ಗಂಗಾವಳಿ, ಅಘನಾಶಿನಿ, ಶರಾವತಿ ಮುಖ್ಯವಾದ ನದಿಗಳಾಗಿದ್ದು, ವೆಂಕಟಾಪುರ ಮತ್ತು ವರದಾ ನದಿಗಳು ಉಪನದಿಗಳಾಗಿವೆ. ವರದಾ ನದಿಯನ್ನು ಹೊರತುಪಡಿಸಿ ಉಳಿದ ನದಿಗಳು ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬಿ ಸಮುದ್ರವನ್ನು ಸೇರುತ್ತವೆ.

ಜನಸಂಖ್ಯೆ : ಜಿಲ್ಲೆಯ ಒಟ್ಟು ಜನಸಂಖ್ಯೆ ೨೦೦೧ರ ಜನಗಣತಿಯ ಪ್ರಕಾರ ೧೩,೫೩,೬೪೪. ಇದರಲ್ಲಿ ೯,೬೫,೭೩೧ ಗ್ರಾಮೀಣ ಹಾಗೂ ೩,೮೭,೯೧೩ ಜನರು ನಗರ ಪ್ರದೇಶದಲ್ಲಿ ವಾಸಿಸುತ್ತಾರೆ.

ಉತ್ತರಕನ್ನಡದ ಪರಿಶಿಷ್ಟ ಬುಡಕಟ್ಟುಗಳ ಒಟ್ಟು ಜನಸಂಖ್ಯೆ ೨೦೧೧ರ ಜನಗಣತಿ ಅಂದಾಜಿನ ಪ್ರಕಾರ ೩೪,೨೩೯ ಆಗಿದೆ. ಪುರುಷರ ಸಂಖ್ಯೆ ೧೭,೦೯೫ ಮತ್ತು ಮಹಿಳೆಯರು ೧೭,೧೪೪ ಆಗಿದ್ದಾರೆ. ಇದರಲ್ಲಿ ಸಿದ್ದಿಗಳ ಸಂಖ್ಯೆ ಸುಮಾರು ೨೪,೦೦೦ರಷ್ಟಿರಬಹುದು.

ವ್ಯವಸಾಯ : ಜಿಲ್ಲೆಯಲ್ಲಿ ಏಕದಳ ಧಾನ್ಯವಾದ ಭತ್ತ ಪ್ರಮುಖ ಬೆಳೆಯಾಗಿದ್ದು, ರಾಗಿ, ಜೋಳ, ಮುಸುಕಿನ ಜೋಳ ಹಾಗೂ ದ್ವಿದಳ ಧಾನ್ಯಗಳಾದ ಕಡಲೆ, ತೊಗರಿ, ಹುರುಳಿ, ಹೆಸರು, ಅವರೆ ಮತ್ತು ಅಲಸಂದಿಯನ್ನು ಕಡಿಮೆ ಪ್ರದೇಶದಲ್ಲಿ ಬೆಳೆಯುತ್ತಾರೆ. ಗೋಡಂಬಿ ಮತ್ತು ಅಡಿಕೆ ಇವು ಪ್ರಮುಖ ವಾಣಿಜ್ಯ ಬೆಳೆಗಳಾಗಿವೆ.

ಉತ್ತರಕನ್ನಡದ ಒಟ್ಟು ೧೧ ತಾಲೂಕುಗಳಲ್ಲಿ ೭ ತಾಲೂಕುಗಳಲ್ಲಿ ಮಾತ್ರ ಸಿದ್ದಿಗಳು ಹೆಚ್ಚಾಗಿ ಕಂಡುಬರುತ್ತಾರೆ. ಅವುಗಳೆಂದರೆ ಅಂಕೋಲಾ, ಹಳಿಯಾಳ, ಜೋಯಿಡಾ, ಕಾರವಾರ, ಶಿರಸಿ, ಮುಂಡಗೋಡ, ಯಲ್ಲಾಪುರ. ಅದರಲ್ಲೂ ಹಳಿಯಾಳ ಮತ್ತು ಯಲ್ಲಾಪುರಗಳಲ್ಲಿ ಇವರ ಸಾಂದ್ರತೆ ಹೆಚ್ಚಾಗಿದೆ.

ಒಟ್ಟು ಅರಣ್ಯಪ್ರದೇಶ ೮೦೦೦ ಚ.ಕಿ.ಮೀ. ನಷ್ಟಿದೆ.'[೭]

ಅಂದರೆ ನಾಗರಿಕ ಜಗತ್ತಿನಲ್ಲಿ ಗಂಡು ಹೆಣ್ಣಿನ ಅನುಪಾತದಲ್ಲಿ(೯೩೩/೧೦೦೦) ಹೆಂಗಸರ ಸಂಖ್ಯೆ ಕುಸಿಯುತ್ತಿದ್ದರೆ ಬುಡಕಟ್ಟುಗಳಲ್ಲಿ ಮಾತ್ರ ಗಂಡಸರಿಗಿಂತ ಹೆಂಗಸರ ಸಂಖ್ಯೆಯೇ ಹೆಚ್ಚಿರುವುದು ಆಧುನಿಕ ಮಾನವನ ಪುರುಷ ಪ್ರಾಧಾನ ಪ್ರವೃತ್ತಿಗೆ ಸಾಕ್ಷಿಯಾಗಿದೆ.

ಮುಂದಿನ ಅಧ್ಯಾಯಗಳಲ್ಲಿ ಸಿದ್ದಿಗಳ ಮತ್ತು ಉತ್ತರಕನ್ನಡ ಜಿಲ್ಲೆಯ ಬಗೆಗೆ ಹೆಚ್ಚಿನ ಮಾಹಿತಿ ನೀಡಲಾಗಿದೆ. ಒಟ್ಟಾರೆ ಈ ಎಲ್ಲ ಹಿನ್ನೆಲೆಯಲ್ಲಿ ಸಿದ್ದಿ ಬುಡಕಟ್ಟಿನ ಆರ್ಥಿಕತೆಯನ್ನು ವಿಶ್ಲೇಷಿಸಲಾಗಿದೆ.

ಅಡಿ ಟಿಪ್ಪಣಿಗಳು

1. Fortune R.C, The Garden Rituals Among Dobu, Tribal Religion and Economic Life, p.272, 2002.
೨. ಅನೀಕಿನ್ ಎ.ವಿ., ರಾಜಕೀಯ ಅರ್ಥಶಾಸ್ತ್ರದ ತಾರುಣ್ಯ, ಪ್ರಸ್ತಾವನೆ, ಪ್ರಗತಿ ಪ್ರಕಾಶನ, ಮಾಸ್ಕೋ, ಪು.೭, ೧೯೮೨.
೩. ಮಾನವಿಕಾರ್ಥಶಾಸ್ತ್ರ, ಅಂತರ್ಜಾಲ, ವಿಕಿಪೀಡಿಯ.
೪. ಅನೀಕಿನ್ ಎ.ವಿ., ರಾಜಕೀಯ ಅರ್ಥಶಾಸ್ತ್ರದ ತಾರುಣ್ಯ, ಪ್ರಸ್ತಾವನೆ, ಪ್ರಗತಿ ಪ್ರಕಾಶನ, ಮಾಸ್ಕೋ, ಪು.೭, ೧೯೮೨.
೫. ಚಂದ್ರಶೇಖರ್ ಟಿ.ಆರ್., ಅಮರ್ತ್ಯಸೇನ್‌ರ ಅಭಿವೃದ್ಧಿ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೨, ೨೦೦೩.
೬. Economic and Political Weekly (ಇ.ಪಿ.ಡಬ್ಲ್ಯೂ), ಪು.೭, ಜೂನ್ ೧೬, ೨೦೧೩.
೭. ಜಿಲ್ಲಾ ಅಂಕಿ-ಸಂಖ್ಯಾ ಮಾಹಿತಿ ಪುಸ್ತಕ, ಅಂತರ್ಜಾಲ, ೨೦೧೩.

ಅಧ್ಯಾಯ ಎರಡು

ಬುಡಕಟ್ಟು ಅರ್ಥಿಕತೆ : ಒಂದು ವಿಶ್ಲೇಷಣೆ

೧. ಬುಡಕಟ್ಟು ಅರ್ಥಿಕತೆ: ಹಾಗೆಂದರೇನು?

೨. ಬುಡಕಟ್ಟು ಅರ್ಥಿಕತೆ: ಚಾರಿತ್ರಿಕ ಪ್ರಭಾವ, ಲಕ್ಷಣಗಳು ಮತ್ತು ರೂಪಾಂತರಗಳು

೩. ಬುಡಕಟ್ಟು ಅರ್ಥಿಕತೆ: ಅಧ್ಯಯನದ ಸಾಧ್ಯತೆಗಳು ಮತ್ತು ಪ್ರಯೋಗಗಳು

ಅ. ಮಾನವಿಕಾರ್ಥಶಾಸ್ತ್ರ

ಆ. ಕೊಡುಗೆ ಅರ್ಥಿಕತೆ

ಇ. ಅರಮನೆ ಅರ್ಥಿಕತೆ

೪. ಬುಡಕಟ್ಟು ಅರ್ಥಿಕತೆ ಮತ್ತು ಪಾರಂಪರಿಕ ನಂಬಿಕೆಗಳು

ಅಧ್ಯಾಯ ಎರಡು

ಬುಡಕಟ್ಟು ಆರ್ಥಿಕತೆ: ಒಂದು ವಿಶ್ಲೇಷಣೆ

೧. ಬುಡಕಟ್ಟು ಆರ್ಥಿಕತೆ: ಹಾಗೆಂದರೇನು?

ಪೀಠಿಕೆ: ಬುಡಕಟ್ಟು ಆರ್ಥಿಕತೆಯ ಇತಿಹಾಸ, ಇತಿಹಾಸಪೂರ್ವದ್ದಾದರೂ ಅದರ ಬಗ್ಗೆ ಚಿಂತನೆ, ಬರಹ, ವಿಶ್ಲೇಷಣೆಗಳು ಕಡಿಮೆಯೆಂದೇ ಹೇಳಬಹುದು. ಏಕೆಂದರೆ ಹಣವೇ ಇಲ್ಲದ ಈ ಹಿಂದುಳಿದ ಸಮಾಜದಲ್ಲಿ ಇರುವ ಆರ್ಥಿಕತೆಯಾದರೂ ಏನು? ನಾಡಿನ ನಾಗರಿಕರು ಕಾಡಿನ ಜನರಿಂದ ಕಲಿಯುವುದಾದರೂ ಏನನ್ನು? ಬುಡಕಟ್ಟುಗಳ ಅಧ್ಯಯನವೆಂದರೆ ಅವರ ಮಾನವಶಾಸ್ತ್ರೀಯ, ಸಮಾಜಶಾಸ್ತ್ರೀಯ ಮತ್ತು ಸಾಂಸ್ಕೃತಿಕ ಅಧ್ಯಯನಗಳಷ್ಟೇ ಎಂಬ ಭಾವನೆ ಸಾಮಾನ್ಯ. ಆದರೆ ಅವರೂ ನಮ್ಮಂತೆಯೇ ಮನುಷ್ಯರು, ಅವರಿಗೂ ಭಾವನೆಗಳು, ಬೇಡಿಕೆಗಳು ಮತ್ತು ಅವುಗಳನ್ನು ಪೂರೈಸಿಕೊಳ್ಳುವ ಶಕ್ತಿ ಇದೆ. ಸರಳವೇ ಆದರೂ ಹೋರಾಟದ, ಸ್ವಾವಲಂಬಿ, ಪರಿಸರಸ್ನೇಹಿ ಆರ್ಥಿಕತೆ ಹೊಂದಿರುವ ಅವರ ಜೀವನವೂ ಅಧ್ಯಯನಕ್ಕೆ ಅರ್ಹ. ಯಾವುದೇ ರಾಷ್ಟ್ರದ ಆರ್ಥಿಕತೆಯಲ್ಲಿ ಅವರಿಗೆ ಸೂಕ್ತವಾದ ಆರ್ಥಿಕ ಸ್ಥಾನಮಾನ ಸಿಗದಿದ್ದಲ್ಲಿ ಅಳಿವಿನಂಚಿನಲ್ಲಿರುವ ಅವರು ಭೂಮಿಯ ಮುಖದಿಂದಲೇ ಕಣ್ಮರೆಯಾಗುವ ಕಾಲ ದೂರವಿಲ್ಲ. ಅವರೊಡನೆ ಅವರ ನೈಸರ್ಗಿಕ, ವೈದ್ಯಕೀಯ, ನೈತಿಕ ಜ್ಞಾನವೂ ಕಣ್ಮರೆಯಾದರೆ ಅದು ಮನುಕುಲಕ್ಕೆ ನಿಜಕ್ಕೂ ತುಂಬಲಾರದ ನಷ್ಟ. ಎಲೆಮರೆಯ ಕಾಯಿಯಂತೆ ಇರುವ ಅವರನ್ನು ಉಳಿಸಿಕೊಳ್ಳಲು ಆರ್ಥಿಕ ಸಬಲೀಕರಣದ, ಸೂಕ್ತ ಸ್ಥಾನಮಾನದ ಸಹಾಯ ನೀಡುವುದು ಆವಶ್ಯಕ. ಆದರೆ ನಮ್ಮ ಆಧುನಿಕ ಆರ್ಥಿಕತೆಗಿಂತ ಬುಡಕಟ್ಟುಗಳ ಆರ್ಥಿಕತೆ ಭಿನ್ನವಾಗಿದ್ದು ಅವರ ಸಮಸ್ಯೆಗಳಿಗೆ ಪರಿಹಾರಗಳು ಭಿನ್ನವಾಗಿರಬೇಕು. ಇದಕ್ಕಾಗಿ ಅವರ ಆರ್ಥಿಕತೆಯ ಅಧ್ಯಯನ ಇಂದು ಅನಿವಾರ್ಯ.

ಇದುವರೆಗಿನ ಅಧ್ಯಯನಗಳು ಮಾನವಶಾಸ್ತ್ರದ ಭಾಗವಾಗಿ ಬುಡಕಟ್ಟುಗಳ ಆರ್ಥಿಕತೆಯನ್ನು ಮಾತ್ರ ಪರಿಗಣಿಸಿವೆ. ಬುಡಕಟ್ಟು ಆರ್ಥಿಕತೆಯ ನೆಲೆಯಲ್ಲಿ ಅರ್ಥಶಾಸ್ತ್ರೀಯ ಅಧ್ಯಯನಗಳು

ತುಂಬಾ ಅಪರೂಪ. ಅದರಲ್ಲೂ ಕನ್ನಡದಲ್ಲಿ ಈ ಬಗೆಯ ಅಧ್ಯಯನಗಳು ತುಂಬಾ ಕಡಿಮೆಯೆಂದೇ ಹೇಳಬಹುದು. ಈ ಅಧ್ಯಾಯ ಇಂತಹ ವಿಶ್ಲೇಷಣೆಯ ಒಂದು ಸಣ್ಣ ಪ್ರಯತ್ನವಾಗಿದೆ. ಇದರಲ್ಲಿ ಆಧುನಿಕ ಆರ್ಥಿಕತೆ ಮತ್ತು ಬುಡಕಟ್ಟು ಆರ್ಥಿಕತೆಗಳ ತೌಲನಿಕ ಅಧ್ಯಯನ ಮಾಡಲಾಗಿದೆ. ಆರ್ಥಿಕ ಪರಿಕಲ್ಪನೆಗಳ ಬುಡಕಟ್ಟು ಮೂಲದ ವಿವರಣೆ, ಮಾನವಿಕಾರ್ಥಶಾಸ್ತ್ರದ ಮೂಲಕ ಬುಡಕಟ್ಟು ಆರ್ಥಿಕತೆಯ ವಿಶ್ಲೇಷಣೆಯ ಪ್ರಯೋಗಗಳು ಮತ್ತು ಸಾಧ್ಯತೆಗಳು, ಅರಮನೆ ಆರ್ಥಿಕತೆ ಮತ್ತು ಕೊಡುಗೆ ಆರ್ಥಿಕತೆಯ ಪರಿಕಲ್ಪನೆಗಳನ್ನು ಪರಿಚಯಿಸುವ ಪ್ರಯತ್ನ ಇದಾಗಿದೆ. ಅಲ್ಲದೆ ಅವುಗಳ ಪ್ರಸ್ತುತತೆ, ಆರ್ಥಿಕತೆಯ ಉಗಮ, ವಿಕಸನ, ಬೆಳವಣಿಗೆ, ಬುಡಕಟ್ಟು ಆರ್ಥಿಕತೆಯ ಸಾಮಾಜಿಕ, ಧಾರ್ಮಿಕ ಮತ್ತು ಪಾರಂಪರಿಕ ನಂಬಿಕೆಗಳು ಹೇಗೆ ಅವರ ಆರ್ಥಿಕತೆಯನ್ನು ಪ್ರಭಾವಿಸುತ್ತಿದ್ದವು ಇತ್ಯಾದಿ ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಬುಡಕಟ್ಟು ಆರ್ಥಿಕತೆಯ ಲಕ್ಷಣಗಳ ಅಧ್ಯಯನಕ್ಕೂ ಮೊದಲು ಮತ್ತೊಮ್ಮೆ ಮೊದಲನೇ ಅಧ್ಯಾಯದಲ್ಲಿ ತಿಳಿಸಿದ ಮಾತುಗಳನ್ನೇ ಪುನರಾವರ್ತಿಸಬಯಸುತ್ತೇನೆ. ಅಂದರೆ 'ಅರ್ಥಶಾಸ್ತ್ರದ ವಿವಿಧ ಪರಿಕಲ್ಪನೆಗಳನ್ನು ಮೂಲ ಸಿದ್ಧಾಂತದಲ್ಲಿರುವಂತೆಯೇ, ಅಂದರೆ ಬಂಡವಾಳಶಾಹಿ ಪಾರ್ಶ್ವ ದಿಂದಲೇ ಪರಿಕಲ್ಪಿಸಿ ಗ್ರಹಿಸಬೇಕೆಂದುಕೊಳ್ಳುವುದು ಸರಿಯಲ್ಲ. ಬುಡಕಟ್ಟುಗಳ ಲೋಕವೇ ವಿಶಿಷ್ಟವಾಗಿದ್ದು ಅದಕ್ಕೆ ತಕ್ಕಂತೆ ಅರ್ಥಶಾಸ್ತ್ರದ ನಿಯಮಗಳಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಂಡರೆ ಮಾತ್ರ ಬುಡಕಟ್ಟು ಆರ್ಥಿಕತೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ. ಬದಲಾಗಿ ಅರ್ಥಶಾಸ್ತ್ರದ ಪುಸ್ತಕಗಳಲ್ಲಿರುವುದೇ ಪರಮ ಸತ್ಯ, ಅದರಾಚೆಗಿರುವುದೆಲ್ಲ ಸುಳ್ಳು ಎಂದುಕೊಂಡರೆ, ಬುಡಕಟ್ಟುಗಳ ಸರಳ ಆರ್ಥಿಕತೆಯಲ್ಲಿ ಮಹತ್ವದ ಪಾತ್ರ ವಹಿಸುವ ನಂಬಿಕೆಗಳು, ಸಂಪ್ರದಾಯಗಳು, ಸೃಷ್ಟಿಪುರಾಣಗಳು ಇತ್ಯಾದಿಗಳು ನಮಗೆ ಬಾಲಿಶವೆನಿಸಬಹುದಾದ ಸಾಧ್ಯತೆಗಳಿವೆ. ಬುಡಕಟ್ಟು ಜನರಿಗೆ ನಮ್ಮ ಹಣ ಕೇವಲ ಕಾಗದವೆನಿಸಬಹುದು, ನಮ್ಮ ಅವಸರದ, ಒತ್ತಡದ ಜೀವನ ವಿಚಿತ್ರವೆನಿಸಬಹುದು. ಹಣ ಕೊಟ್ಟು ಎಲ್ಲವನ್ನೂ ಕೊಳ್ಳಬಹುದು, ಹಣವಿಲ್ಲದಿದ್ದರೆ ಜೀವನವೇ ನಶ್ವರ ಎಂಬುದೆಲ್ಲಾ ಅವರಿಗೆ ಕೇವಲವೆನಿಸಬಹುದು. ಅವರ ನಂಬುಗೆಯಂತೆ ಗಿಡ ಮರಗಳೂ ಮಾತನಾಡುತ್ತವೆ, ಪ್ರಾಣಿಗಳ ಆತ್ಮಕ್ಕೆ ನಾವು ನಮ್ಮನ್ನು ಕ್ಷಮಿಸುವಂತೆ ಬೇಡಿಕೊಳ್ಳಬೇಕು, ಎಂಬೆಲ್ಲಾ ನಂಬಿಕೆಗಳು ನಮಗೆ ಮೂಢನಂಬಿಕೆಯಂತೆ ಕಾಣಬಹುದು. ಆದರೆ ನಮ್ಮ ನಂಬಿಕೆ ನಮಗೆ ಹೇಗೆ ಸರಿಯೆನ್ನಿಸು ತ್ತದೆಯೋ ಹಾಗೆಯೇ ಅವರ ನಂಬಿಕೆಗಳು ಅವರಿಗೆ ಸರಿಯೆನಿಸುವುದರಲ್ಲಿ ತಪ್ಪೇನಿಲ್ಲ. ಇದನ್ನು ಅರ್ಥ ಮಾಡಿಕೊಳ್ಳಲು ಅವರ ಮುಗ್ಧತೆ, ನಂಬಿಕೆ, ಜಾನಪದಗಳನ್ನು ನೋಡಬೇಕೇ ವಿನಾ ನಮ್ಮ ತಾರ್ಕಿಕತೆ, ವೈಜ್ಞಾನಿಕ ಕಾರ್ಯಕಾರಣ ಸಂಬಂಧಗಳಿಂದಲ್ಲ. ಅವರಲ್ಲಿ ಮನುಷ್ಯ ಮರವಾಗಬಹುದು, ಮೊಟ್ಟೆ ಮನುಷ್ಯನಾಗಬಹುದು, ಆತ್ಮ ಜೋರಾಗಿ ಊದಿದರೆ ಬಿರುಗಾಳಿ ಏಳಬಹುದು, ಅಣ್ಣ ತಂಗಿಯರ ಸಂಯೋಗದಿಂದ ಜಗತ್ತು ಸೃಷ್ಟಿಯಾಗಬಹುದು, ಹುಲಿ ದನ ಕಾಯಬಹುದು. ಇವೆಲ್ಲವೂ ಅವರಿಗೆ ಸೂರ್ಯ ಚಂದ್ರರಷ್ಟೇ ನಿಜ ಮತ್ತು ಸಹಜ. ಎಷ್ಟೆಂದರೂ ಈ ಜಗತ್ತನ್ನು

ನಿಜವಾಗಿ ಆಳುತ್ತಿರುವುದು ನಂಬಿಕೆಗಳೇ ಅಲ್ಲವೇ? ಈ ಅರ್ಥವಂತಿಕೆ ಬಂದಾಗ ಮಾತ್ರ ನಾವು ಬುಡಕಟ್ಟುಗಳನ್ನು, ಅವರ ಆರ್ಥಿಕತೆಯ ವಿವಿಧ ಪರಿಕಲ್ಪನೆಗಳನ್ನೂ ಅರ್ಥ ಮಾಡಿಕೊಳ್ಳುವುದು ಸಾಧ್ಯ.

ಜಾಗತೀಕರಣ ಮತ್ತು ಖಾಸಗೀಕರಣಗಳ ಹಿನ್ನೆಲೆಯಲ್ಲಿ ಜಗತ್ತು ಇಂದು ಎದುರಿಸುತ್ತಿರುವ ವ್ಯಕ್ತಿ ವ್ಯಕ್ತಿಗಳ ಶೋಷಣೆ, ದೇಶ ದೇಶಗಳ ಶೋಷಣೆ, ಪರಿಸರದ ಶೋಷಣೆ ಮತ್ತು ನಾಶ, ಅಂತಿಮವಾಗಿ ತನ್ನ ಮತ್ತು ಸೃಷ್ಟಿಯ ವಿನಾಶದ ಸಾಧ್ಯತೆಗಳು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಅಭಿವೃದ್ಧಿಯೆಂದರೆ ಮುಂದೆ ಮುಂದೆ ಸಾಗುವುದು, ಹೆಚ್ಚು ಹೆಚ್ಚು ಉತ್ಪಾದಿಸುವುದು, ಹೆಚ್ಚು ಹೆಚ್ಚು ಅನುಭೋಗಿಸುವುದು ಎಂಬ ಭಾವನೆಯ ಬದಲಾಗಿ ಎಲ್ಲರ ಹಿತದೃಷ್ಟಿಯಿಂದ ಅಭಿವೃದ್ಧಿಯೆಂದರೆ ಒಂದೆರಡು ಹೆಜ್ಜೆ ಹಿಂದೆ ಸರಿಯುವುದು, ಒಂದಷ್ಟು ಉತ್ಪಾದನೆ, ಅನುಭೋಗಗಳನ್ನು ತ್ಯಾಗ ಮಾಡುವುದು, ಐಶಾರಾಮದ ಬದಲು ಸರಳ ಸಂತೃಪ್ತಿಯ ಜೀವನ ನಡೆಸುವುದು ಎಂದೇಕಾಗಬಾರದು? ಇದು ಸಾಧ್ಯವಿಲ್ಲ, ಕೇವಲ ಭ್ರಮೆ ಎನ್ನುವವರಿಗೆ ನಮ್ಮದೇ ಬುಡಕಟ್ಟುಗಳು ನಡೆಸಿದ, ನಡೆಸುತ್ತಿರುವ ಜೀವನ ಜೀವಂತ ಉದಾಹರಣೆಯಾಗಬಲ್ಲದು. ಇಂದಿನ ಕಾಲಕ್ಕೆ ಬುಡಕಟ್ಟುಗಳೇ ಮುಖ್ಯವಾಹಿನಿಗೆ ಬರಲು ಹವಣಿಸುತ್ತಿರುವಾಗ ಮತ್ತೆ ಹಿಂದೆ ಹೋಗಲಾರದಷ್ಟು ಮುಂದೆ ಬಂದಿದ್ದೇವೆ ಎಂದುಕೊಳ್ಳು ವವರಿಗೆ ನನ್ನ ಅರಿಕೆಯೇನೆಂದರೆ, ಅವರ ಹಿಂದಿನ ಜೀವನವನ್ನು ಯಥಾವತ್ತಾಗಿ ಅನುಕರಿಸುವುದು ಸಾಧ್ಯವಾಗದಿದ್ದರೂ ಅವರ ಜೀವನದ ಉದಾತ್ತ ತತ್ವಗಳನ್ನಾದರೂ, ಅವುಗಳಲ್ಲಿ ಕೆಲವನ್ನಾದರೂ, ಅನುಸರಿಸುವುದು ಸಾಧ್ಯ ಮತ್ತು ಸಾಧು ಅಷ್ಟೇ ಅಲ್ಲ ಅನಿವಾರ್ಯವೂ ಹೌದು ಎಂದು. ಇಂದಿನ ಶ್ರೀಮಂತಿಕೆಯ ಜೀವನ ನಡೆಸುವವರಲ್ಲಿ ಕಂಡುಬರುತ್ತಿರುವ ಹತಾಶೆ, ಅಸಹನೆ, ಅಶಾಂತಿ ಇತ್ಯಾದಿಗಳು ಪ್ರಸ್ತುತ ಆರ್ಥಿಕತೆಯ ವೈಫಲ್ಯಗಳಿಗೆ ಹಿಡಿದ ಕೈಗನ್ನಡಿಗಳಾಗಿವೆ. ಅವರು ಎಲ್ಲವನ್ನೂ ತ್ಯಾಗ ಮಾಡಿ ಶಾಂತಿಯನ್ನರಸಿಕೊಂಡು ಅಲೆದಾಡುವುದನ್ನು ನೋಡಿಯಾದರೂ ನಾವು ಪಾಠ ಕಲಿಯದಿದ್ದರೆ ಮುಂದೊಂದು ದಿನ ಇಡೀ ಭೂಮಿಯೇ ನರಕವಾಗುವುದರಲ್ಲಿ ಸಂಶಯವಿಲ್ಲ.

ಹೀಗಾಗಿ ಯಂತ್ರಗಳ ಮತ್ತು ಹಣದ ಪ್ರಾಮುಖ್ಯತೆಯನ್ನು ಇಷ್ಟಿಷ್ಟೇ ಕಳಚುತ್ತಾ ಕಾಯಕ, ಶ್ರಮ, ವಿನಿಮಯಕೇಂದ್ರಿತ ನೈಸರ್ಗಿಕ, ನೈತಿಕ ಜೀವನಪದ್ಧತಿಯನ್ನು ಪುನರ್ ಸ್ಥಾಪಿಸಬೇಕಾಗಿದೆ. 'ಸಮಾಜವಾದ ಸಮತಾವಾದಗಳು ಕೂಡ ಇದನ್ನೇ 'ಶ್ರಮ ಮೌಲ್ಯ ಸಿದ್ಧಾಂತ'ದ ಮೂಲಕ ಹೇಳುತ್ತ ವಾದರೂ ಅವು ವೈಯಕ್ತಿಕ ಮನಃಪರಿವರ್ತನೆಗಿಂತ ರಾಜಕೀಯ ಅಧಿಕಾರವನ್ನು ಹಿಡಿದು ಪರಿವರ್ತನೆ ತರಲು ಒತ್ತು ನೀಡುತ್ತಿವೆ.'[೨] ಆದರೆ ರಾಜಕೀಯ ಪಕ್ಷಗಳಾಗಲೀ, ಕಾನೂನು ನಿರ್ಬಂಧಗಳಾಗಲೀ ಈ ಪರಿವರ್ತನೆ ತರಲು ವಿಫಲವಾಗಿರುವುದನ್ನು ರಷ್ಯಾ, ಚೀನಾಗಳ ಉದಾಹರಣೆಯ ಮೂಲಕ ಈಗಾಗಲೇ ಕಂಡುಕೊಳ್ಳಲಾಗಿದೆ. ಹಾಗಾಗಿ ಈ ಪರಿವರ್ತನೆ ಒಂದು ಜನಮಾನಸದ ಚಳವಳಿಯಾಗಿ ರೂಪುಗೊಳ್ಳುವುದರ ಜೊತೆಗೆ ವೈಯಕ್ತಿಕ ಮಟ್ಟದಲ್ಲಿ ಮತ್ತು ಸಾಮುದಾಯಿಕವಾಗಿ ಚರ್ಚೆ, ಮಾಹಿತಿ, ಮನಃಪರಿವರ್ತನೆಗಳ ಮೂಲಕವೇ ಆಗಬೇಕಿದೆ. ಪ್ರತಿಯೊಬ್ಬರೂ ಸ್ವ ಇಚ್ಛೆಯಿಂದ ತಮಗೆ

ಎಲ್ಲೆಲ್ಲಿ ಕೈಗಳನ್ನು ಬಳಸಲು ಸಾಧ್ಯವಿದೆಯೋ ಅಲ್ಲೆಲ್ಲ ಕೈಯನ್ನು, ಎಲ್ಲೆಲ್ಲಿ ಕಾಲುಗಳಿಂದ ಸಾಧ್ಯವಿದೆಯೋ ಅಲ್ಲೆಲ್ಲ ಕಾಲುಗಳನ್ನು ಬಳಸಿ, ಎಲ್ಲೆಲ್ಲಿ ಸಹಕಾರ, ವಿನಿಮಯ, ಕೊಡುಗೆ ಸಾಧ್ಯವಿದೆಯೋ ಅಲ್ಲೆಲ್ಲ ಅವುಗಳನ್ನೇ ಬಳಸಿ, ಒಟ್ಟಾರೆ ಯಂತ್ರದ, ಹಣದ ಬಳಕೆಯನ್ನು ತಪ್ಪಿಸಬೇಕು. ಇದನ್ನು ಪ್ರತಿಗಾಮಿಯೆಂದು ಹಣೆಪಟ್ಟಿ ಹಚ್ಚಲು ಬಹುರಾಷ್ಟ್ರೀಯ ಕಂಪನಿಗಳು, ವಿಜ್ಞಾನಿಗಳು, ಬಂಡವಾಳಶಾಹಿಗಳು, ಬುದ್ಧಿಜೀವಿಗಳು, ನಗರವಾಸಿಗಳು ಪ್ರಯತ್ನಿಸುವ ಸಾಧ್ಯತೆಗಳಿವೆಯಾದರೂ ಇದೊಂದು ರೀತಿಯ 'ಮುರಿದು ಕಟ್ಟುವ'(ಡಿಕನ್‌ಸ್ಟ್ರಕ್ಷನ್) ಪ್ರಯತ್ನವಾಗಬೇಕಿದೆ. ಇದೊಂದು ಕ್ರಾಂತಿಯಾಗದಿದ್ದರೂ ಹಂತ ಹಂತವಾಗಿ ವಿಕಸನ, ಸಂಯಮ, ಕೃತಿಗಳ ಮೂಲಕ ಪರಿವರ್ತನೆಯಾಗಬೇಕಿದೆ. ಇದರರ್ಥ ಹಳತೆಲ್ಲವೂ ಒಳ್ಳೆಯದು, ದೋಷರಹಿತವಾದದ್ದು ಎಂದಲ್ಲ. ಹಾಗಿದ್ದರೆ ಅದು ಹೊಸತರ ಮುಂದೆ ಸೋಲುತ್ತಿರಲಿಲ್ಲ. ಹಾಗೆಂದು ಹೊಸತನ್ನೂ ಕಣ್ಣುಮುಚ್ಚಿಕೊಂಡು ಅಪ್ಪಿಕೊಳ್ಳುವಂತಿಲ್ಲ ಹಾಗೂ ತಿರಸ್ಕರಿಸುವಂತಿಲ್ಲ.

ಆಧುನಿಕ ಭಾರತ ಅಥವಾ ಯೂರೋ ಅಮೆರಿಕನ್ ಜೀವನತತ್ವ ಹಾಗೂ ಅರ್ಥಶಾಸ್ತ್ರದ ಪ್ರಕಾರ ಸ್ವಹಿತಾಸಕ್ತಿ ಮತ್ತು ಭೌತಿಕ ಸುಖವೇ ಜೀವನದ ಮೂಲಧ್ಯೇಯವಾಗಿದೆ. ಕುಡಿಯುವ ನೀರನ್ನು ಮಾರಾಟ ಮಾಡಬೇಕೇ ಹೊರತು ಹಾಗೆಯೇ ಕೊಡಬಾರದು. ಹಸಿದವರಿಗೆ ಆಹಾರದ ಅವಶ್ಯಕತೆ ಹೆಚ್ಚಿರುವುದರಿಂದ ಆ ಅವಕಾಶವನ್ನು ಬಳಸಿಕೊಂಡು ಆಹಾರವನ್ನು ದುಪ್ಪಟ್ಟು ಬೆಲೆಗೆ ಮಾರಾಟ ಮಾಡಿ ಹೆಚ್ಚಿನ ಹಣ ಗಳಿಸಬೇಕು. ಅವಶ್ಯಕತೆ ಇಲ್ಲದವರಿಗೂ ಜಾಹಿರಾತು, ರಿಯಾಯಿತಿಗಳ ಆಮಿಷ ತೋರಿಸಿ ವಸ್ತುಗಳನ್ನು ಕೊಳ್ಳುವಂತೆ ಮಾಡಿ ಹಣ ಗಳಿಸಬೇಕು. ದಿನದಿನವೂ ಹೊಸ ಹೊಸ ಸರಕುಗಳನ್ನು ಮಾರುಕಟ್ಟೆಗೆ ತಂದು ಅವುಗಳನ್ನು ಹೊಂದುವುದೇ ಒಂದು ಸಾಧನೆ, ಅವುಗಳಿಲ್ಲದಿದ್ದರೆ ಜೀವನವೇ ವ್ಯರ್ಥ, ಅಕ್ಕಪಕ್ಕದವರ ಹೊಟ್ಟೆ ಉರಿಸದ ಜೀವನವೂ ಒಂದು ಜೀವನವೇ ಎಂಬುದು ಇಂದಿನ ಆರ್ಥಿಕತೆಯ ಮೂಲಮಂತ್ರ. ಇದಕ್ಕಾಗಿ ಏನು ಮಾಡಿದರೂ ತಪ್ಪಲ್ಲ. ತಂದೆ ತಾಯಿಗಳನ್ನು ಮನೆಯಿಂದ ಹೊರಹಾಕು ಇಲ್ಲವೇ ವೃದ್ಧಾಶ್ರಮಕ್ಕೆ ಸೇರಿಸು, ಮಕ್ಕಳನ್ನು ರೆಸಿಡೆನ್ಶಿಯಲ್ ಸ್ಕೂಲಿಗೆ ಹಾಕು, ಹೆಂಡತಿಗೆ ಡೈವೋರ್ಸ್ ನೀಡಿಬಿಡು, ಇಷ್ಟ ಬಂದವರೊಡನೆ ಡೇಟಿಂಗ್ ಮಾಡಿಬಿಡು, ಗ್ರಾಹಕರಿಗೆ ಮೋಸ ಮಾಡು, ಕಾರ್ಮಿಕರನ್ನು ಶೋಷಣೆ ಮಾಡು.. ಸ್ವರ್ಗ ನರಕ, ಪುನರ್ಜನ್ಮ, ದೇವರು-ದೆವ್ವ ಎಲ್ಲವೂ ಸುಳ್ಳು, ಇರುವುದೊಂದೇ ಜೀವನ, ಅದೂ ಅನಿಶ್ಚಿತ ಆದರೆ ಬಯಕೆಗಳೋ ಅಪರಿಮಿತ. ಎಷ್ಟು ಸಾಧ್ಯವೋ ಅಷ್ಟು, ತಲೆಮಾರುಗಳಿಗಾಗುವಷ್ಟು, ಹಣ ಸಂಪಾದಿಸು. ಒಟ್ಟಿನಲ್ಲಿ ಇರುವಷ್ಟು ದಿನ ನೀನು ಸುಖವಾಗಿದ್ದುಬಿಡು. ಇದು ಆಧುನಿಕ ಆರ್ಥಿಕತೆಯ ಮೂಲತತ್ವ.

ಇದಕ್ಕೆ ತದ್ವಿರುದ್ಧವಾದದ್ದೇ ಬುಡಕಟ್ಟು ಆರ್ಥಿಕತೆ. ಸಮುದಾಯ ನನಗೇನು ನೀಡಿದೆ ಎನ್ನುವುದಕ್ಕಿಂತ ನಾನು ಸಮುದಾಯಕ್ಕೆ ಏನು ನೀಡಬಲ್ಲೆ? ನನ್ನ ಸ್ವಾರ್ಥಕ್ಕಿಂತ ತ್ಯಾಗ, ನನ್ನ ಸುತ್ತಮುತ್ತಲಿನವರ ಕಲ್ಯಾಣವೇ ಮುಖ್ಯ ಸಿಕ್ಕ ಆಹಾರ, ಆದಾಯವನ್ನು ಎಲ್ಲರೊಂದಿಗೂ ಹಂಚಿಕೊಂಡು

ತಿಂದರೆ ಅದೇ ತೃಪ್ತಿ. ತಾನು ಅವರಿಗೆ ಸಹಾಯ ಮಾಡಿದರೆ ಅವರೂ ನನಗೆ, ನನ್ನ ಮಕ್ಕಳಿಗೆ ಸಹಾಯ ಮಾಡುತ್ತಾರೆ. ಸುಖಕ್ಕಿಂತ ಸಂತೋಷ, ಆತ್ಮತೃಪ್ತಿ ದೊಡ್ಡದು. ಅಕ್ಕಪಕ್ಕದವರ ಹೊಟ್ಟೆ ಉರಿಸುವುದಕ್ಕಿಂತ ಅವರ ಹೊಟ್ಟೆ ತುಂಬಿಸುವುದು ಮತ್ತು ತಣ್ಣಗಾಗಿಸುವುದೇ ಒಳಿತು. ಇನ್ನಷ್ಟು ಮತ್ತಷ್ಟು ಬೇಕು ಎಂದು ಹಲುಬುವುದಕ್ಕಿಂತ ಇದ್ದುದರಲ್ಲೇ ತೃಪ್ತಿಪಡುವುದು ಸಭ್ಯತೆ. ಅರೆಹೊಟ್ಟೆ ಉಪವಾಸವಿದ್ದರೂ ಸರಿ ತಾಯಿ ತಂದೆ, ಮಕ್ಕಳು ಎಲ್ಲರೂ ಒಂದೆಡೆ ಬದುಕುವುದು ನಿಜವಾದ ಜೀವನ. ಮುಂದಿನ ತಲೆಮಾರಿಗಾಗಿ ಹಣವನ್ನು ಗುಡ್ಡೆ ಹಾಕುವುದರ ಬದಲು ಅವರಿಗೆ ಕಾಡಿನಲ್ಲಿ ಕಾಡುಪ್ರಾಣಿಗಳ ನಡುವೆ ಬದುಕುವ ದಾರಿ, ಉದಾತ್ತ ಧ್ಯೇಯಗಳನ್ನು ಕಲಿಸುವುದೇ ಮುಖ್ಯ. ಬಯಕೆಗಳನ್ನೆಲ್ಲಾ ತೀರಿಸಿಕೊಳ್ಳಲು ಅವಿರತವಾಗಿ ಶ್ರಮಪಡುವ ಬದಲು ಬಯಕೆಗಳನ್ನೇ ಕಡಿಮೆ ಮಾಡಿಕೊಂಡು ನಿಜವಾದ ಶ್ರೀಮಂತಿಕೆ ಪಡೆಯುವುದರಲ್ಲಿ ಆನಂದವಿದೆ. ಇಂದಿನವರೆಗೆ ನಮ್ಮನ್ನು ಬದುಕಿಸಿರುವ ಪ್ರಕೃತಿಯೇ ಮುಂದೆಯೂ ನಮ್ಮನ್ನು ಬದುಕಿಸುತ್ತದೆಂಬ ಅದಮ್ಯ ನಂಬಿಕೆಯಿಂದ ಬದುಕಬೇಕು. ವಿನಿಮಯ-ಮಾರಾಟದ ಬದಲು ಕೊಡುಗೆಗಳನ್ನು ನೀಡು. ಇದು ಬುಡಕಟ್ಟು ಆರ್ಥಿಕತೆಯ ಮೂಲಸತ್ವ

ಈ ಹಿನ್ನೆಲೆಯಲ್ಲಿ ನಾವು ಆರ್ಥಿಕತೆಯ ಮೂಲಕ್ಕೆ ಮತ್ತೆ ಹೋಗಿ ಅಂದರೆ ಬುಡಕಟ್ಟು ಆರ್ಥಿಕತೆಯನ್ನು ಪುನರ್ ಅವಲೋಕಿಸಿ ಅಲ್ಲಿರುವ ಉದಾತ್ತ ತತ್ವಗಳನ್ನು ಹೆಕ್ಕಿಕೊಂಡು ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳಬಹುದೇನೋ ಎಂಬ ಚಿಂತನೆ ಹೆಚ್ಚಾಗುತ್ತಿದೆ. ಟಾಲ್‌ಸ್ಟಾಯ್‌ರ 'ಬ್ರೆಡ್ ಅಂಡ್ ಲೇಬರ್', ಮಾರ್ಕ್ಸ್‌ರ 'ಮಿಗುತೆಯ ಸಮಾನ ಹಂಚಿಕೆ', ಗಾಂಧೀಜಿಯವರ 'ಅಸಂಗ್ರಹ' ಮತ್ತು 'ಟ್ರಸ್ಟೀಶಿಪ್' ಅಂಬೇಡ್ಕರ್‌ರ 'ಸ್ಟೇಟ್ ಸೋಷಿಯಲಿಸಂ' ಮತ್ತು 'ಎಕಾನಮಿಕ್ಸ್ ಆಫ್ ಅನ್ ಟಚಬಿಲಿಟಿ', ಲೋಹಿಯಾರ 'ಗಾಂಧಿಯನ್ ಸೋಷಿಯಲಿಸಂ', ಶುಮಾಕರ್‌ರ 'ಸ್ಮಾಲ್ ಈಸ್ ಬ್ಯೂಟಿಫುಲ್' ಮುಂತಾದ ಚಿಂತನೆಗಳು ಇದೇ ಅಂಶಗಳನ್ನೇ ಹೇಳುತ್ತಿದ್ದರೂ ಅವುಗಳನ್ನು ಅರ್ಥೈಸಿಕೊಳ್ಳದೆ, ಅಳವಡಿಸಿಕೊಳ್ಳದೆ, ನಮ್ಮ ಅವನತಿಗೆ ನಾವೇ ಮುಂದಾಗುತ್ತಿದ್ದೇವೆ.

ಇದಲ್ಲದೆ ಕಣ್ಮರೆಯಾಗುತ್ತಿರುವ ಬುಡಕಟ್ಟುಗಳ ಅಭಿವೃದ್ಧಿಗೆ ಸೂಕ್ತವಾದ ಅಭಿವೃದ್ಧಿ ಮಾದರಿ ಯೊಂದನ್ನು ಕಂಡುಕೊಳ್ಳಬೇಕಾದ ಅನಿವಾರ್ಯತೆ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಇದರ ಜೊತೆಜೊತೆಗೆ ಆಧುನಿಕ ಆರ್ಥಿಕತೆಯ ಅಭಿವೃದ್ಧಿಯ ಪೊಳ್ಳುತನವೂ ಬಯಲಾಗಿದ್ದು ನಿಜವಾದ ಜನಕಲ್ಯಾಣ ಸಾಧಿಸುವಲ್ಲಿ ಅದು ವಿಫಲವಾಗಿದೆ. ಪದೇಪದೇ ವಿಫಲವಾದಾಗ 'ಕೀಪ್ ಯುವರ್ ಬೇಸಿಕ್ಸ್ ರೈಟ್' ಎಂಬ ನೀತಿಯಂತೆ ಇದುವರೆಗಿನ ಹುಸಿ ಆರ್ಥಿಕ ನೀತಿಗಳನ್ನು ಬಿಟ್ಟು ನಿಜ ಅರ್ಥದ ಅಭಿವೃದ್ಧಿಯ ಮಾದರಿ, ನೀತಿಗಳನ್ನು ರೂಪಿಸಬೇಕಾದರೆ ನಾವು ಆರ್ಥಿಕತೆಯ ಮೂಲ ಪಾಠಗಳಿಗೆ ಹಿಂತಿರುಗಿ ಕಲಿಯುವುದು ಸಾಕಷ್ಟಿದೆ ಎಂಬ ಭಾವನೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ. ಹೀಗಾಗಿ 'ಬುಡಕಟ್ಟು ಆರ್ಥಿಕತೆ' ಎಂಬ ಅರ್ಥಶಾಸ್ತ್ರದ ಶಾಖೆಯನ್ನೂ ಇದಕ್ಕೆ ಬಳಸಿಕೊಳ್ಳಬಹುದಾಗಿದೆ.

'ದೇಸಿ' ಎಂಬುದು ಆಧುನಿಕತೆಯ ಸದ್ಯದ ಮಂತ್ರವಾಗಿದೆ. ಎನ್.ಡಿ.ಟಿವಿ ಗುಡ್‌ಟೈಮ್ಸ್ ಅಥವಾ ಯಾವುದೇ ಲೈಫ್‌ಸ್ಟೈಲ್ ಚಾನೆಲ್ ಅಥವಾ ಪತ್ರಿಕೆ ನೋಡಿದರೆ ಅಲ್ಲಿ ತೋರಿಸುವ, ಅತ್ಯಂತ

ಬೇಡಿಕೆಯಲ್ಲಿರುವ, ದುಬಾರಿಯ ಫ್ಯಾಷನಬಲ್ ವಸ್ತುಗಳೆಲ್ಲಾ ಜಾನಪದ ಅಥವಾ ಬುಡಕಟ್ಟುಗಳ ಎಥ್ನಿಕ್ ಮಾದರಿಯ ವಸ್ತುಗಳೇ ಆಗಿವೆ. ಮೊದಲೆಲ್ಲ ಲಕ್ಷುರಿ ಎಂದರೆ ದೂರ ದೇಶಕ್ಕೋ ಹತ್ತಿರದ ಮಾಲ್‌ಗೋ ಹೋಗಿ ಕಷ್ಟಪಟ್ಟು ಉಳಿತಾಯ ಮಾಡಿದ ಹಣವನ್ನೆಲ್ಲಾ ಖರ್ಚು ಮಾಡಿ ತಮ್ಮ ಸ್ನೇಹಿತರ, ಸಹೋದ್ಯೋಗಿಗಳ ಬಳಿ ಇಲ್ಲದ ಬ್ರಾಂಡೆಡ್ ಫೋನ್, ಡ್ರೆಸ್ ಇತ್ಯಾದಿಗಳನ್ನು ಕೊಂಡು ಅವರ ಹೊಟ್ಟೆಕಿಚ್ಚಿಗೆ ಪಾತ್ರರಾಗುವುದಾಗಿತ್ತು. ಇತ್ತೀಚೆಗೆ ಲಕ್ಷುರಿಯ ಪರಿಕಲ್ಪನೆ ಬದಲಾಗುತ್ತಿದ್ದು, ರಜೆ ಬಂದರೆ ಪಿಜ್ಜಾ ಹಟ್, ಮೆಕ್ಡೊವೆಲ್ ಹೋಟೆಲ್, ಮಾಲ್‌ಗಳಿಗೆ ಹೋಗುತ್ತಿದ್ದ ದೊಡ್ಡ ಸಂಬಳದ ಯುವಕರು ಇದೀಗ ಜಾಬ್, ಟಾಸ್ಕ್, ಟಾರ್ಗೆಟ್ ಇತ್ಯಾದಿಗಳನ್ನೆಲ್ಲಾ ಮರೆತು ಸ್ನೇಹಿತರು, ಹೆಂಡತಿ ಮಕ್ಕಳ ಜೊತೆ ಕಾಡು, ಟ್ರೆಕ್ಕಿಂಗ್, ನದಿ, ಜಲಪಾತ ಬುಡಕಟ್ಟು ಹಾಡಿಗಳಿಗೆ ಹೋಗಿ ಸಮಯ ಕಳೆಯುವುದು ಎಂದಾಗಿದೆ. ಆರೋಗ್ಯದ ಬಗ್ಗೆ ಕಾಳಜಿ ಇರುವ ಮಧ್ಯಮ ವರ್ಗ, ಮತ್ತು ವೃದ್ಧರು ಬುಡಕಟ್ಟುಗಳ ಔಷಧಿ ಹಾಗೂ ಧಾನ್ಯಗಳನ್ನು, ಜೀವನಶೈಲಿಯನ್ನು ಅನುಸರಿಸುತ್ತಿವೆ. ಇದು ಹೊಸದೇನೂ ಅಲ್ಲದೆ ನಮ್ಮ ಬುಡಕಟ್ಟುಗಳ ಸಾಮಾನ್ಯ ಜೀವನವೇ ಆಗಿದೆ. ಅವರು ನಾಳಿನ ಚಿಂತೆಯಿಲ್ಲದೆ ತಮ್ಮ ಪರಿವಾರದೊಂದಿಗೆ ಕಾಡಿನಲ್ಲಿ ಸ್ವಚ್ಛಂದ ಜೀವನ ನಡೆಸುತ್ತಿದ್ದಾರೆ. ಡಿಸ್ಕವರಿ ವಾಹಿನಿಯಲ್ಲಿ ತೋರಿಸಿದ ಇತ್ತೀಚೆಗೆ ನಿರ್ಮಿಸಿದ ಅತ್ಯಂತ ಅದ್ದೂರಿ ಮತ್ತು ಸುಪ್ರಸಿದ್ಧ ರೆಸಾರ್ಟ್, ಹೋಟೆಲ್, ವಿಲ್ಲಾ ಅಥವಾ ಬಂಗಲೆಗಳನ್ನು ನೋಡಿದಾಗ ಅವೆಲ್ಲವೂ ಮರದಿಂದ ನಿರ್ಮಿಸಿದ ಕಾಡಿನ ನಡುವೆ ಇರುವಂತಹ ಬುಡಕಟ್ಟು ಗುಡಿಸಲುಗಳ, ಮರದ ಮನೆಗಳ ಮಾದರಿಯನ್ನೇ ಅನುಸರಿಸಿವೆ ಎಂಬುದು ಸ್ಪಷ್ಟವಾಗುತ್ತದಲ್ಲದೆ ಇಂದಿನ ಯುವಜನಾಂಗ 'ಮೂಲಕ್ಕೆ ಮರಳುವ' ಸಂಕಲ್ಪ ತೊಟ್ಟಿದೆಯೆಂದೆನಿಸುತ್ತದೆ. ಇದು ಜೀವನಶೈಲಿಗೆ ಮಾತ್ರ ಅನ್ವಯಿಸದೆ ಅವರ ಆರ್ಥಿಕತೆಗೆ ಮರಳುವ ಅನಿವಾರ್ಯತೆಯನ್ನೂ ಸೂಚಿಸುತ್ತದೆ.

ಅರ್ಥ

ಪ್ರಸ್ತುತ ಆರ್ಥಿಕತೆಯಿಂದ ಹೊರಗಿರುವವರನ್ನೇ ಅಥವಾ ಅರ್ಥವ್ಯವಸ್ಥೆ ಇಲ್ಲದವರನ್ನೇ ನಾವು ಬುಡಕಟ್ಟುಗಳೆಂದು ಅಂದುಕೊಳ್ಳುತ್ತೇವೆ. ಹೀಗಾಗಿ ಬುಡಕಟ್ಟು ಆರ್ಥಿಕತೆ ಎನ್ನುವುದೇ ತಪ್ಪು ಎಂದೂ ಕೆಲವರು ವಾದಿಸಬಹುದು. ಆದರೆ ಮನುಷ್ಯ ಅಥವಾ ಪ್ರಾಣಿಗಳು ತಮ್ಮ ಹುಟ್ಟಿನೊಡನೆ ಪಡೆದುಕೊಂಡು ಬಂದಿರುವ 'ಬೇಸಿಕ್ ಇನ್ಸ್ಟಿಂಕ್ಟ್'ನಲ್ಲೇ ಆರ್ಥಿಕತೆಯ ಮೂಲ ಎಳೆಗಳಿವೆ. ವ್ಯಕ್ತಿ ಅಥವಾ ವ್ಯಷ್ಟಿಪ್ರಧಾನವಾದ ನಾನು, ನನ್ನದು, ನನ್ನ ಸಂಸಾರ, ನನ್ನ ಪ್ರದೇಶ, ನನ್ನ ಆಸ್ತಿ ಎಂಬಿತ್ಯಾದಿಗಳು ನೀಡಿದಷ್ಟು ತೃಪ್ತಿ, ಸ್ಫೂರ್ತಿ, ಅಹಮಿಕೆಗಳನ್ನು ಬೇರಾವುದೂ ನೀಡುವುದಿಲ್ಲ. ಅದಕ್ಕಾಗಿ ಹೋರಾಡಿದಷ್ಟು ತೀವ್ರವಾಗಿ ಬೇರಾವುದಕ್ಕೂ ಹೋರಾಡುವುದಿಲ್ಲ. ಬಂಡವಾಳಶಾಹಿ ಆರ್ಥಿಕತೆಯ 'ಕಾಣದ ಕೈ' ಮೂಲತತ್ವವೂ ಇದೇ ಆಗಿದೆ. ಹೀಗಾಗಿಯೇ ಸಮಷ್ಟಿಗಾಗಿ ಹೋರಾಡುವ ಕೆಲವೇ ಕೆಲವು ವ್ಯಕ್ತಿಗಳು ನಮಗೆ ಆದರ್ಶಪ್ರಾಯರಾಗುತ್ತಾರೆ. ಆದರೆ ವ್ಯಷ್ಟಿ ಬಲಿಷ್ಠ ಪ್ರಾಣಿಗಳಿಗೆ ಮಾತ್ರ ಸೂಕ್ತವಾಗಿದ್ದು ಪ್ರಕೃತಿಯ ಬಲಹೀನ ಪ್ರಾಣಿಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಸಾಮುದಾಯಿಕ

ಅಥವಾ ಸಮಷ್ಟಿಯಿಂದ ಮಾತ್ರ ಸಾಧ್ಯವೆಂದೂ, ಸ್ವಾರ್ಥ ಅಥವಾ ಏಕಾಂಗಿತನದ ಬದುಕು ಕೊನೆಗೆ ಬಲಿಷ್ಠ ಪ್ರಾಣಿಗಳಿಗೆ ನಮ್ಮನ್ನು ಸುಲಭದ ಆಹಾರವನ್ನಾಗಿಸುತ್ತವೆಂಬುದನ್ನು ಅರಿತ ಸಣ್ಣ, ಬಲಹೀನ ಪ್ರಾಣಿಗಳು ಒಟ್ಟಾಗಿ ಸಮಾಜವನ್ನು ನಿರ್ಮಿಸಿಕೊಂಡು, ಅಸ್ತಿತ್ವವನ್ನು ಉಳಿಸಿಕೊಂಡಿವೆ. ಇರುವೆ, ಜೇನುಹುಳು, ಗೆದ್ದಲು, ಜಿಂಕೆಯಂತಹ ಪ್ರಾಣಿಗಳು ಇನ್ನೂ ಬದುಕಿರುವುದೇ ಈ ಸಮುದಾಯ ಅಥವಾ ಸಾಮಾಜಿಕ ಜೀವನದಿಂದಾಗಿ. ಸೃಷ್ಟಿಯಲ್ಲಿ ಅತ್ಯಂತ ಬಲಹೀನ ಜೀವಿಯಾದ ಮನುಷ್ಯನೂ ಇದೇ ಜೀವನದಿಂದ ಬದುಕಿರುವುದರಿಂದ ಅವನನ್ನು 'ಸಮಾಜಜೀವಿ' ಎಂದು ಕರೆಯಲಾಗುತ್ತಿದೆ. ಜುರಾಸಿಕ್ ಯುಗದ ಆದಿಮಾನವ ಅಂದಿನ ದೈತ್ಯಪ್ರಾಣಿಗಳ ನಡುವೆ ಬದುಕಲು ಸಾಮುದಾಯಿಕ ಜೀವನ ಅನಿವಾರ್ಯವಾಗಿತ್ತು. ಹೀಗಾಗಿ ವ್ಯಷ್ಟಿಯ ಜೊತೆಜೊತೆಗೇ ಸಮಷ್ಟಿಪ್ರಜ್ಞೆಯನ್ನು ಸಮರಸಗೊಳಿಸಿ ತನ್ನ ಜೀವನವನ್ನು ರೂಪಿಸಿಕೊಳ್ಳಬೇಕಾಯಿತು. ತಾನೂ ಬದುಕುವ ಇತರರನ್ನೂ ಬದುಕಲು ಬಿಡುವ ಮೂಲಕ ಮಾತ್ರವೇ ಜೀವನ ಸಾಧ್ಯ ಎಂಬುದನ್ನರಿತ ಮಾನವ, ಅದಕ್ಕಾಗಿ ತನ್ನ ಸ್ವಾರ್ಥವನ್ನು ಕೊಂಚ ಬದಿಗಿಟ್ಟು ಸಮಾಜದ ಒಳಿತಿಗಾಗಿ ಕೆಲವು ತ್ಯಾಗ, ನೀತಿ, ನಿಯಮಗಳನ್ನು ರೂಪಿಸಿಕೊಂಡು ಅವುಗಳಿಗೆ ಬದ್ಧನಾಗಿ ಜೀವಿಸಲಾರಂಭಿಸಿದ. ಈ ಆಧಾರದ ಮೇಲೆ ಸೃಷ್ಟಿಯಾದ ಮೊದಲ ಸುಸಂಘಟಿತ ಸಮಾಜವೇ ಬುಡಕಟ್ಟು ಸಮಾಜವಾಗಿದ್ದು, ಆ ಆರ್ಥಿಕತೆಯೇ ಬುಡಕಟ್ಟು ಆರ್ಥಿಕತೆಯಾಗಿದೆ.

ಬುಡಕಟ್ಟು ಆರ್ಥಿಕತೆ ಎಂದರೇನು ಎಂಬ ಪ್ರಶ್ನೆಗೆ, ಆಧುನಿಕ ಅರ್ಥವ್ಯವಸ್ಥೆಗೂ ಬುಡಕಟ್ಟು ಆರ್ಥಿಕತೆಗೂ ಇರುವ ವ್ಯತ್ಯಾಸಗಳೇನು ಎನ್ನುವುದನ್ನು ನಾವು ಅರ್ಥ ಮಾಡಿಕೊಂಡು ಅವುಗಳ ಲಕ್ಷಣಗಳನ್ನು ತೌಲನಿಕವಾಗಿ ವಿಶ್ಲೇಷಿಸಿದಾಗ ನಮಗೆ ಬುಡಕಟ್ಟು ಆರ್ಥಿಕತೆಯ ಅರ್ಥ ಗೋಚರಿಸುತ್ತದೆ. ಮೊದಲು ವಿವಿಧ ಆರ್ಥಿಕ ಪರಿಕಲ್ಪನೆಗಳು, ಲಕ್ಷಣಗಳು ಮತ್ತು ಅವುಗಳ ಅರ್ಥಗಳಲ್ಲಿನ ವ್ಯತ್ಯಾಸಗಳನ್ನು ವಿಶ್ಲೇಷಿಸುವುದು ಅಗತ್ಯ

ಬುಡಕಟ್ಟು ಆರ್ಥಿಕತೆಯ ಲಕ್ಷಣಗಳು

ಬುಡಕಟ್ಟು ಆರ್ಥಿಕತೆ: ಹಾಗೆಂದರೇನು? ಅಂತಹದೊಂದು ಅನನ್ಯತೆ ಇದೆಯೇ ಎಂಬ ಪ್ರಶ್ನೆಗೆ ಸರಳ ಉತ್ತರವೆಂದರೆ ಬುಡಕಟ್ಟುಗಳ ಲಕ್ಷಣಗಳು, ಅವರ ಸೃಷ್ಟಿಪುರಾಣಗಳು, ಅವರ ನಂಬಿಕೆಗಳು, ಆಚರಣೆಗಳು ಹಾಗೂ ಅವರ ಜೀವನ ವಿಧಾನಗಳೆ ಬುಡಕಟ್ಟು ಆರ್ಥಿಕತೆಯಾಗಿವೆ. ಶ್ರೀಯುತ ಕಿಕ್ಕೇರಿ ನಾರಾಯಣರು ತಮ್ಮ ಬುಡಕಟ್ಟು ಸಂಸ್ಕೃತಿ ಪುಸ್ತಕದಲ್ಲಿ ನೀಡಿರುವ ಬುಡಕಟ್ಟು ಜನಾಂಗಗಳ ಮುಖ್ಯ ಲಕ್ಷಣಗಳೆಂದರೆ ೧. ಭೂಮಿಯ ಮೇಲಿನ ಯಾವುದೇ ವಸ್ತುಗಳ ಮೇಲೆಯೂ ಮಾಲೀಕತ್ವ ಹೊಂದದೇ ಇರುವುದು. ೨. ಸಾಮಗ್ರಿಗಳನ್ನು ಸಂಗ್ರಹಿಸದೇ ಇರುವುದು. ೩. ಇದ್ದದ್ದನ್ನು ಸಮುದಾಯಕ್ಕೆಲ್ಲಾ ಹಂಚಿ ತಿನ್ನುವುದು. ಇವು ಬುಡಕಟ್ಟು ಆರ್ಥಿಕತೆಯ ಲಕ್ಷಣಗಳೂ ಆಗಿವೆ. ಬುಡಕಟ್ಟು ಆರ್ಥಿಕತೆಗೆ ಕೇವಲ ಆರ್ಥಿಕ ಲಕ್ಷಣಗಳು ಮಾತ್ರವಿಲ್ಲದೆ ಸಾಮಾಜಿಕ, ಧಾರ್ಮಿಕ, ಆಚರಣಾತ್ಮಕ, ನಂಬಿಕೆಯ, ನೈತಿಕ ಇತ್ಯಾದಿ ಆಯಾಮಗಳಿದ್ದು ಅವು ಒಂದರೊಳಗೊಂದು

ಹಾಸುಹೊಕ್ಕಾಗಿವೆ. ಪ್ರತಿಯೊಂದು ಬುಡಕಟ್ಟೂ ಒಂದು ಪ್ರತ್ಯೇಕ, ವಿಶಿಷ್ಟ ಲೋಕವಾಗಿದ್ದು, ಒಂದರಂತೆ ಇನ್ನೊಂದಿರುವುದಿಲ್ಲ. ಹೀಗಾಗಿ ಅವುಗಳ ನಂಬಿಕೆ, ಆಚರಣೆ, ಜೀವನದಿಂದ ಆರ್ಥಿಕ ಅಂಶಗಳನ್ನು ಮಾತ್ರ ಹೊರತೆಗೆದು ಇದು ಹೀಗೆಯೇ ಎಂದು ಹೇಳುವುದು ಕಷ್ಟ. ಆದರೂ ಈ ಎಲ್ಲ ಅಂಶಗಳಿಂದ ಕೆಲವು ಆರ್ಥಿಕ ವಿಷಯಗಳನ್ನು ಹೆಕ್ಕಿತೆಗೆದು ಆರ್ಥಿಕತೆಯ ಲಕ್ಷಣಗಳನ್ನು ಪಟ್ಟಿ ಮಾಡಲಾಗಿದೆ.

೧. ಆಧುನಿಕ ಆರ್ಥಿಕತೆಯಲ್ಲಿ ಬಯಕೆಗಳು ಅಪರಿಮಿತವಾಗಿವೆ. ಆದರೆ ಬುಡಕಟ್ಟು ಆರ್ಥಿಕತೆಯಲ್ಲಿ ಬಯಕೆಗಳು ಪರಿಮಿತವಾಗಿರುತ್ತವೆ.

೨. ಆಧುನಿಕ ಆರ್ಥಿಕತೆಯಲ್ಲಿ ಬಯಕೆಗಳಿಗೆ ಹೋಲಿಸಿದರೆ ಸಂಪನ್ಮೂಲಗಳು ಪರಿಮಿತವಾಗಿರುತ್ತವೆ. ಆದರೆ ಬುಡಕಟ್ಟು ಆರ್ಥಿಕತೆಯಲ್ಲಿ ಪ್ರಕೃತಿ ಅಪರಿಮಿತ ಸಂಪನ್ಮೂಲಗಳನ್ನು ಹೊಂದಿದೆ.

೩. ಆಧುನಿಕ ಆರ್ಥಿಕತೆ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ಸಮೃದ್ಧಿ ಸಾಧಿಸುವ ವಾಮಮಾರ್ಗ ವನ್ನನುಸರಿಸಿದರೆ, ಆದಿಮ ಸಮಾಜ ಬಯಕೆಗಳನ್ನೇ ಕಡಿಮೆ ಮಾಡುವ ಮೂಲಕ ಸಮೃದ್ಧಿ ಸಾಧಿಸುವ 'ಝೆನ್' ಮಾರ್ಗವನ್ನು ಪ್ರತಿನಿಧಿಸುತ್ತದೆ.'

೪. ಬುಡಕಟ್ಟು ಆರ್ಥಿಕತೆ ಸಹಜಗತಿಯ, ಪ್ರಕೃತಿಯ ಮಿತಿಯೊಳಗೆ ವಿಕಾಸಗೊಳ್ಳುವ ಆರ್ಥಿಕತೆ ಯಾಗಿದೆ. ಆದರೆ ಆಧುನಿಕ ಅರ್ಥಿಕತೆ ಅಸಹಜಗತಿಯ, ಕೃತಕ, ನಿರ್ಮಿತ ಮತ್ತು ಪ್ರಕೃತಿ ಯನ್ನು ಮೀರುವ ಆರ್ಥಿಕತೆಯಾಗಿದೆ.

೫. ಬುಡಕಟ್ಟು ಆರ್ಥಿಕತೆಗೆ ನೈತಿಕತೆ ಮುಖ್ಯವಾದರೆ ಆಧುನಿಕ ಆರ್ಥಿಕತೆಗೆ ಲಾಭ ಮತ್ತು ವೃತ್ತಿಪರತೆಯೇ ಮುಖ್ಯ.

೬. ಬುಡಕಟ್ಟು ಆರ್ಥಿಕತೆ ಮಾನವೀಯತೆ, ನಂಬಿಕೆ, ಮಾಂತ್ರಿಕತೆ, ಸರಳತೆ, ಸಹಕಾರಗಳನ್ನು ಅವಲಂಬಿಸಿದ್ದರೆ ಆಧುನಿಕ ಆರ್ಥಿಕತೆ ವಿಜ್ಞಾನ, ತಂತ್ರಜ್ಞಾನ, ಸ್ವಾರ್ಥ, ಲಾಭ, ಮಾರುಕಟ್ಟೆ, ಪೈಪೋಟಿ ಇತ್ಯಾದಿಗಳನ್ನು ಅವಲಂಬಿಸಿದೆ.

೭. ಆಧುನಿಕ ಆರ್ಥಿಕತೆ 'ನಿರ್ಮಾಣ'ಗೊಂಡ ಆರ್ಥಿಕತೆಯಾದರೆ ಬುಡಕಟ್ಟು ಆರ್ಥಿಕತೆ 'ವಿಕಸನ' ಗೊಂಡ ಆರ್ಥಿಕತೆಯಾಗಿದೆ. ನಿರ್ಮಾಣ, ನಿರ್ನಾಮ, ಪುನರ್ ನಿರ್ಮಾಣಗಳೇ ಆಧುನಿಕ ಮಾರುಕಟ್ಟೆಯ ಲಕ್ಷಣಗಳಾಗಿವೆ.

೮. ಆಧುನಿಕ ಆರ್ಥಿಕತೆಯಲ್ಲಿ ಆಸ್ತಿಯು ವೈಯಕ್ತಿಕ ಆಸ್ತಿಯಾಗಿರುತ್ತದೆ. ಅದನ್ನು ಅವನು ತನಗೆ ಇಷ್ಟಬಂದಂತೆ ಬಳಸಿಕೊಳ್ಳುವ ಅಧಿಕಾರವಿರುತ್ತದೆ. ಬುಡಕಟ್ಟುಗಳಲ್ಲಿ ಆಸ್ತಿಯು ಸಾಮಾನ್ಯವಾಗಿ ಬುಡಕಟ್ಟಿನ ಸಾಮೂಹಿಕ ಮಾಲೀಕತ್ವಕ್ಕೊಳಪಟ್ಟಿರುತ್ತದೆ ಮತ್ತು ಸೈದ್ಧಾಂತಿಕವಾಗಿ ಆ ಕುಲದ ಯಾವುದೇ ಸದಸ್ಯನಿಗೂ ಅದರ ಉಪಯೋಗದ ಅಧಿಕಾರವಿರುತ್ತದೆ.

೯. ಬುಡಕಟ್ಟುಗಳಲ್ಲಿ ಉತ್ಪಾದನೆ ಉತ್ಪಾದಕರಿಗಾಗಿಯೇ ಹೊರತು ವಿನಿಮಯ, ಮಾರುಕಟ್ಟೆ ಅಥವಾ ಲಾಭ ಗಳಿಸಲು ಅಲ್ಲ. ಸರಕುಗಳು ಅನುಭೋಗ ಅಥವಾ ಕೊಡುಗೆಗಾಗಿಯೇ ಹೊರತು ಮಾರಾಟ ಮಾಡಲು ಅಲ್ಲ.

೧೦. ಅನುಭೋಗ ಕೇವಲ ನೇರವಾಗಿ ವಸ್ತುಗಳನ್ನು ಉಪಯೋಗಿಸುವುದು ಮಾತ್ರವಲ್ಲದೇ ಔತಣಕೂಟ ನೀಡುವುದು. ಮೃತರ ಜೊತೆಗೆ ಅವರ ಇಷ್ಟದ ವಸ್ತುಗಳನ್ನು, ಮೃತರಾದ ಮನೆ, ಲಾಡ್ಜ್ ಮುಂತಾದವುಗಳನ್ನು ಅವರ ಜೊತೆಗೇ ಸುಡುವ-ಹೂಳುವ ಪದ್ಧತಿ ಕೂಡ ಅನುಭೋಗವಾಗಿದೆ.

೧೧. ಬುಡಕಟ್ಟುಗಳಲ್ಲಿ ಹಂಚಿಕೆಯ ಸಮಾನತೆ ಪ್ರಮುಖ ಲಕ್ಷಣವಾಗಿದೆ. ಆಧುನಿಕ ಆರ್ಥಿಕತೆಯಲ್ಲಿ ಅಸಮಾನತೆ ಸಾಮಾನ್ಯವಾಗಿದೆ.

೧೨. ಬುಡಕಟ್ಟು ಆರ್ಥಿಕತೆಯಲ್ಲಿ ಸಂಪತ್ತನ್ನು ಸ್ವಂತಕ್ಕೆ ಸಂಗ್ರಹಿಸುವವರನ್ನು ಬಡವರೆಂದು ಪರಿಗಣಿಸಲಾಗುತ್ತದೆ.

೧೩. ನಾಗರಿಕ ಜಗತ್ತು ವ್ಯಕ್ತಿಪ್ರಧಾನವಾದರೆ ಬುಡಕಟ್ಟು ಜಗತ್ತು ಸಮಷ್ಟಿ ಅಥವಾ ಸಮುದಾಯ ಪ್ರಧಾನ.

೧೪. ಆಧುನಿಕ ಅರ್ಥವ್ಯವಸ್ಥೆಯಲ್ಲಿ ಹಣ, ಭೂಮಿ, ಮನೆ, ಬ್ಯಾಂಕ್ ಡೆಪಾಸಿಟ್, ಶೇರು ಇತ್ಯಾದಿಗಳನ್ನು ಆಸ್ತಿಯೆಂದು ಪರಿಗಣಿಸಿದರೆ ಬುಡಕಟ್ಟು ಜನರ ಅರ್ಥವ್ಯವಸ್ಥೆಯಲ್ಲಿ ಬಿಲ್ಲು ಬಾಣ, ಮಂತ್ರ ತಂತ್ರಗಳೂ ಖಾಸಗಿ ಆಸ್ತಿಯೆಂದು ಪರಿಗಣಿಸಲ್ಪಡುತ್ತವೆ.

೧೫. ಬುಡಕಟ್ಟುಗಳಲ್ಲಿ ಆಸ್ತಿಹಕ್ಕನ್ನು ಕಾಗದಪತ್ರಗಳಿಂದಲ್ಲದೆ ಬೇಟೆ, ಮೀನು ಬೇಟೆ, ಹಿರಿಯರ ಪೂಜೆ ಮುಂತಾದ ಆಚರಣೆಗಳಿಂದ ಪದೇ ಪದೇ ಪುನರ್‌ಸ್ಥಾಪಿಸಲಾಗುತ್ತದೆ.

೧೬. ಬುಡಕಟ್ಟುಗಳಿಗೆ ಆಹಾರ ಕೇವಲ ಹೊಟ್ಟೆ ತುಂಬಿಸುವ ವಸ್ತುವಷ್ಟೇ ಅಲ್ಲದೆ ಅದೊಂದು ದೈವ, ದೈವದತ್ತ ಕೊಡುಗೆ, ಸಂಬಂಧಗಳನ್ನು ಬೆಳೆಸುವ, ಉಳಿಸುವ ಸಾಧನ, ಆಚರಣೆಗಳ ಅವಿಭಾಜ್ಯ ಅಂಗ, ಅಮೂಲ್ಯ ಸಂಪನ್ಮೂಲ, ಸಮುದಾಯಗಳ ನಡುವಿನ ಕಲಹಗಳನ್ನು ಬಗೆಹರಿಸುವ ವಿಧಾನ. ಅದು ಸಂಪತ್ತು ಹಾಗೂ ಹಣ, ಅಂದರೆ ವಿನಿಮಯ ಮಾಧ್ಯಮವೂ ಆಗಿದೆ. ^^

೧೭. ಇದೊಂದು ಹಣರಹಿತ ಸಾಟಿಪದ್ಧತಿಯ ಆರ್ಥಿಕತೆಯಾಗಿದೆ.

೧೮. ಬುಡಕಟ್ಟುಗಳಲ್ಲಿ ಉತ್ಪಾದನಾ ವೆಚ್ಚವೆಂದರೆ ಹಣದ ರೂಪದ ವೆಚ್ಚ ಮಾತ್ರವಾಗಿರದೆ ನೈಜ ವೆಚ್ಚವೂ, ಅಂದರೆ ಉತ್ಪಾದನೆಯಿಂದ ಸಮಾಜ, ನಿಸರ್ಗ, ಮುಂದಿನ ಜನಾಂಗದ ಮೇಲಾಗುವ ಪರಿಣಾಮವೂ ಒಳಗೊಂಡಿರುತ್ತದೆ.

೧೯. ಇದು ಪ್ರಧಾನವಾಗಿ ಬೇಟೆ, ಸಂಗ್ರಹಣೆ ಮತ್ತು ಕುಮ್ರಿ ಬೇಸಾಯದ ಪ್ರಕೃತಿ ಆಧಾರಿತ, ಪರಿಸರಸ್ನೇಹಿ, ವ್ಯರ್ಥವಿರೋಧಿ(ವೇಸ್ಟೇಜ್ ಇಲ್ಲದ) ಆರ್ಥಿಕತೆಯಾಗಿದೆ.

೨೦. ಬುಡಕಟ್ಟು ಆರ್ಥಿಕತೆ ಏಕರೂಪಿಯಾಗಿರದೆ ಬುಡಕಟ್ಟಿನಿಂದ ಬುಡಕಟ್ಟಿಗೆ, ಅವುಗಳ ನಂಬಿಕೆ, ಆಚರಣೆ, ಪರಿಸರದ ಮೇಲೆ ಬದಲಾಗುತ್ತದೆ.

ಮೇಲಿನ ಲಕ್ಷಣಗಳು ಕೇವಲ ಪ್ರಾತಿನಿಧಿಕವಾಗಿದ್ದು ಇದೇ ರೀತಿಯ ಹಲವಾರು ಲಕ್ಷಣಗಳನ್ನು ಹೊಂದಿರುವ ಆರ್ಥಿಕತೆಯೇ ಬುಡಕಟ್ಟು ಆರ್ಥಿಕತೆಯಾಗಿದೆಯೆಂದು ಹೇಳಬಹುದು. ಈ ಲಕ್ಷಣಗಳನ್ನು ಪ್ರತ್ಯೇಕವಾಗಿ ಚರ್ಚಿಸದೆ ಈ ಅಧ್ಯಾಯದ ಬುಡಕಟ್ಟು ಆರ್ಥಿಕತೆಯ ಪರಿಕಲ್ಪನೆಗಳು, ಬುಡಕಟ್ಟು ನಂಬಿಕೆಗಳು, ಮಾನವಿಕಾರ್ಥಶಾಸ್ತ್ರ, ಕೊಡುಗೆ ಆರ್ಥಿಕತೆ ಮುಂತಾದವುಗಳಲ್ಲಿ ವಿವರಿಸಲಾಗಿದೆ.

ಬುಡಕಟ್ಟು ಆರ್ಥಿಕತೆಯ ಪರಿಕಲ್ಪನೆಗಳು

ಆಧುನಿಕ ಆರ್ಥಿಕ ಪರಿಕಲ್ಪನೆಯ ಉತ್ಪಾದನೆ, ವಿತರಣೆ, ಅನುಭೋಗ, ಮಾರುಕಟ್ಟೆ, ಆರ್ಥಿಕ ಸಿದ್ಧಾಂತಗಳು, ನಿಯಮಗಳು ಇತ್ಯಾದಿಗಳನ್ನು ಯಥಾವತ್ತಾಗಿ ಬುಡಕಟ್ಟು ಆರ್ಥಿಕತೆಗೆ ಅನ್ವಯಿಸಲು ಸಾಧ್ಯವಿಲ್ಲ. ಏಕೆಂದರೆ ಅಲ್ಲಿ ಇವು ಬೇರೆಯದೇ ಅರ್ಥ, ಭಾವನೆಗಳನ್ನು ಹೊಮ್ಮಿಸುತ್ತವೆ. ಇಲ್ಲಿ ನೀಡಿರುವ ಲಕ್ಷಣಗಳು ಸಾಮಾನ್ಯವಾಗಿ ವಿಶ್ವದ ಹಲವಾರು ಬುಡಕಟ್ಟುಗಳಲ್ಲಿ ಕಂಡುಬರುವಂತಹ ವಾಗಿವೆ. ಪ್ರಸ್ತುತ ಅಧ್ಯಯನಕ್ಕೊಳಪಟ್ಟಿರುವ ಸಿದ್ದಿ ಬುಡಕಟ್ಟಿನಲ್ಲಿ ಈ ಕೆಲವು ಲಕ್ಷಣಗಳು ಕಂಡು ಬರುತ್ತಿದ್ದು ಹಲವಾರು ಲಕ್ಷಣಗಳು ಕಣ್ಮರೆಯಾಗಿರಬಹುದು ಅಥವಾ ಇಲ್ಲದೆಯೂ ಇರಬಹುದು.

ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಮಾನವರನ್ನು 'ವಿಶಾಲವಾಗಿ ಎರಡು ವಿಧಗಳಾಗಿ ವಿಂಗಡಿಸ ಬಹುದು. ೧. ನೈಸರ್ಗಿಕ ಮಾನವ ೨. ಆರ್ಥಿಕ ಮಾನವ.

ನೈಸರ್ಗಿಕ ಮಾನವ ಸ್ವಭಾವದಲ್ಲಿ ಪ್ರಾಣಿಗಳಿಗೆ ಹತ್ತಿರದವನಾಗಿದ್ದು ಅತ್ಯಂತ ಸೀಮಿತ ಬಯಕೆಗಳನ್ನು ಹೊಂದಿದ್ದು ಭವಿಷ್ಯದ ಬಗ್ಗೆ ಚಿಂತಿಸದೆ ಸದ್ಯದ ಅವಶ್ಯಕತೆಗಳ ಬಗ್ಗೆ ಮಾತ್ರ ಯೋಚಿಸುವ, ಉತ್ಪಾದಿಸುವವನಾಗಿರುತ್ತಾನೆ. ಈ ನೈಸರ್ಗಿಕ ಮಾನವನಿಂದ ಕಾಲಾಂತರದಲ್ಲಿ ವಿಕಾಸಗೊಂಡವನೇ ಆರ್ಥಿಕ ಮಾನವ. ಇವನು ಭವಿಷ್ಯದ ಬಗ್ಗೆ ಚಿಂತಿಸುವ, ಉತ್ಪಾದಿಸುವ, ಸಂಗ್ರಹಿಸುವವನಾಗಿರುತ್ತಾನೆ. ಬುಡಕಟ್ಟುಗಳು ನೈಸರ್ಗಿಕ ಮಾನವನಿಗೆ ಹತ್ತಿರವಿದ್ದರೆ ಆಧುನಿಕ ಮಾನವ ಆರ್ಥಿಕ ಮಾನವನಿಗೆ ಹತ್ತಿರವಾಗಿದ್ದಾನೆ."[೨] ಈ ಇಬ್ಬರಲ್ಲೂ ವ್ಯತ್ಯಾಸಗಳಿರುವಂತೆ ಇವರ ಆರ್ಥಿಕತೆಗಳಲ್ಲೂ ಸಾಕಷ್ಟು ವ್ಯತ್ಯಾಸಗಳಿವೆ. ಇವರಿಬ್ಬರ ತೌಲನಿಕ ಅಧ್ಯಯನದಿಂದ ಬುಡಕಟ್ಟು ಆರ್ಥಿಕತೆಯನ್ನು ಈ ಕೆಳಗಿನ ಶೀರ್ಷಿಕೆ ಹಾಗೂ ಪರಿಕಲ್ಪನೆಗಳ ಅಡಿಯಲ್ಲಿ ವಿವೇಚಿಸಲಾಗಿದೆ.

ನೈತಿಕತೆ ಮತ್ತು ಲಾಭ

ಈ ಶೀರ್ಷಿಕೆಯಡಿಯಲ್ಲಿ ಆಧುನಿಕ ಆರ್ಥಿಕತೆಯ ಕೃತಕತೆ ಮತ್ತು ಅನೈತಿಕತೆಯನ್ನು ವಿವರಿಸುವ ಮೂಲಕ ಬುಡಕಟ್ಟು ಆರ್ಥಿಕತೆ ಹೇಗೆ ನೈಸರ್ಗಿಕ ಮತ್ತು ನೈತಿಕವಾಗಿದೆ ಎನ್ನುವುದನ್ನು ಬಿಂಬಿಸಲು ಯತ್ನಿಸಲಾಗಿದೆ.

- ಬುಡಕಟ್ಟು ಆರ್ಥಿಕತೆಗೆ ನೈತಿಕತೆ ಮುಖ್ಯವಾದರೆ ಆಧುನಿಕ ಆರ್ಥಿಕತೆಗೆ ಲಾಭ ಮತ್ತು ವೃತ್ತಿಪರತೆಯೇ ಮುಖ್ಯ.

• ಆಧುನಿಕ ಆರ್ಥಿಕತೆ 'ನಿರ್ಮಾಣ'ಗೊಂಡ ಆರ್ಥಿಕತೆಯಾದರೆ ಬುಡಕಟ್ಟು ಆರ್ಥಿಕತೆ 'ವಿಕಸನ'ಗೊಂಡ ಆರ್ಥಿಕತೆಯಾಗಿದೆ. ನಿರ್ಮಾಣ, ನಿರ್ನಾಮ, ಪುನರ್‌ನಿರ್ಮಾಣಗಳೇ ಆಧುನಿಕ ಮಾರುಕಟ್ಟೆಯ ಲಕ್ಷಣಗಳಾಗಿವೆ.

• ಬುಡಕಟ್ಟು ಆರ್ಥಿಕತೆ ಸಹಜಗತಿಯ, ಪ್ರಕೃತಿಯ ಮಿತಿಯೊಳಗೆ ವಿಕಾಸಗೊಳ್ಳುವ ಆರ್ಥಿಕತೆಯಾಗಿದೆ. ಆದರೆ ಆಧುನಿಕ ಆರ್ಥಿಕತೆ ಅಸಹಜಗತಿಯ, ಕೃತಕ, ಮತ್ತು ಪ್ರಕೃತಿಯನ್ನು ಮೀರುವ ಆರ್ಥಿಕತೆಯಾಗಿದೆ.

ಬುಡಕಟ್ಟು ಆರ್ಥಿಕತೆಯಲ್ಲಿ ಬಯಕೆಗಳು ಕಡಿಮೆ ಇರುವುದರಿಂದ ಉತ್ಪಾದನೆಯೂ ಕಡಿಮೆ. ಇಲ್ಲಿ ಕೃತಕ ಸೃಷ್ಟಿಗಿಂತ ನಿಸರ್ಗದಲ್ಲಿ ಸಿಗುವ ವಸ್ತುಗಳನ್ನೇ ಬಳಸಿ ಬಯಕೆಗಳನ್ನು ತೃಪ್ತಿಗೊಳಿಸಿಕೊಳ್ಳಲು ಪ್ರಯತ್ನಿಸಲಾಗುತ್ತದೆ. ತೀರ ಅನಿವಾರ್ಯವೆನಿಸಿದಾಗ ಮಾತ್ರ ತಮ್ಮ ಜೀವನಶೈಲಿಗೆ ಹೊಂದಿಕೊಳ್ಳುವಂತೆ ಸರಳ ಸಲಕರಣೆಗಳನ್ನು ಬಳಸಿ ಉತ್ಪಾದನೆ ಮಾಡಲಾಗುತ್ತದೆ. ಸುಖ, ಐಶಾರಾಮದ ಜೀವನ ಮನುಷ್ಯನಲ್ಲಿ ಅತೃಪ್ತಿ, ಅಶಾಂತಿ ಮೂಡಿಸುತ್ತದೆಂಬ ಅರಿವು, ಭೌತಿಕ ಸರಕುಗಳು ಅವರ ಕಾಡಿನ ಜೀವನಕ್ಕೆ ತೊಡಕಾಗಿ ಜೀವಕ್ಕೇ ಅಪಾಯ ತರಬಲ್ಲವೆಂದು ತಿಳಿದು ಅವುಗಳಿಂದ ದೂರವೇ ಇದ್ದರು.

ಆಧುನಿಕ ಮಾರುಕಟ್ಟೆ ಚಾಲಿತ ಆರ್ಥಿಕತೆಯನ್ನು ಹೊಸ ವಸ್ತುಗಳನ್ನು ಸೃಷ್ಟಿಸುವ ಮತ್ತು ಅವು ಮಾರಾಟವಾಗದಿದ್ದರೆ ಹೊಸ ಬೇಡಿಕೆಗಳನ್ನು ಸೃಷ್ಟಿಸುವ, ಅದಕ್ಕಾಗಿ ಜನರ ಮನೋಭಾವನೆ ಮತ್ತು ಜೀವನಶೈಲಿಯನ್ನೇ ಬದಲಾಯಿಸುವ ಆರ್ಥಿಕತೆ ಎನ್ನಬಹುದು. ಪೂರೈಕೆ ತನ್ನದೇ ಆದ ಬೇಡಿಕೆಯನ್ನು ಸೃಷ್ಟಿಸಿಕೊಳ್ಳುತ್ತದೆ ಎಂಬ ಜೆ.ಬಿ. ಸೇನ ಮಾತು ಸುಳ್ಳೆಂದು ತಿರಸ್ಕರಿಸಲ್ಪಟ್ಟಿದ್ದರೂ ಇಂದು ಒಂದು ದೃಷ್ಟಿಯಲ್ಲಿ ನಿಜವಾಗುತ್ತಿದೆ. 'ಹಾಗೆಂದೇ ಇದನ್ನು Life Style Engineering ಎಂದೇ ಕರೆಯಲಾಗುತ್ತದೆ.'[೩] ಹೊಸಹೊಸ ವಸ್ತುಗಳನ್ನು ಮಾರುಕಟ್ಟೆಗೆ ತಂದು, ಜಾಹೀರಾತುಗಳ ಮೂಲಕ ಕೃತಕ ಬೇಡಿಕೆ ಸೃಷ್ಟಿ ಮಾಡಿ, ಜನ ಅದನ್ನು ಹೊಂದುವಂತೆ ಅವರ ಜೀವನಶೈಲಿಯನ್ನು ಮಾರ್ಪಡಿಸಲಾಗುತ್ತದೆ. ಹೊಸಹೊಸ ವಸ್ತುಗಳನ್ನು ತಂದಂತೆಲ್ಲ ಅವರ ಜೀವನಶೈಲಿ ಮಾರ್ಪಡುತ್ತಾ ಹೋಗಿ ಕೊನೆಗೆ ಸಹಜ, ವಿಕಸಿತ ಜೀವನ ಸಾಧ್ಯವೇ ಆಗದ ಹಂತಕ್ಕೆ ಹೋಗಿ, ಹೊಸ ಕೊಳ್ಳುಬಾಕ ಸಂಸ್ಕೃತಿಯನ್ನು ನಮ್ಮದನ್ನಾಗಿಸಿಕೊಳ್ಳಲಾಗುತ್ತದೆ. ಇಲ್ಲಿ ವಸ್ತುಗಳು ಮಾತ್ರ ಸೃಷ್ಟಿಯಾಗದೇ ಅದಕ್ಕೆ ಬೇಡಿಕೆಯನ್ನೂ ಸೃಷ್ಟಿಸಲಾಗುತ್ತದೆ. ಏಕೆಂದರೆ ವಸ್ತುವನ್ನು ಸೃಷ್ಟಿಸಿದ ಮಾತ್ರಕ್ಕೆ ಅದು ಮಾರಾಟವಾಗುತ್ತದೆ ಎನ್ನಲಾಗದು. ಹೀಗಾಗಿ ಅದರ ಜೊತೆಜೊತೆಗೇ ಜನರ ಮನಸ್ಸಿನಲ್ಲಿ ಆ ವಸ್ತು ಅತ್ಯಂತ ಅನಿವಾರ್ಯ, ಅದಿಲ್ಲದಿದ್ದರೆ ಜೀವನವೇ ವ್ಯರ್ಥ, ಹಾಳಾಗಿ ಹೋಗುತ್ತದೆ ಎಂಬ ಭಾವನೆಯನ್ನೂ ಮೂಡಿಸ ಬೇಕಾಗುತ್ತದೆ.

ಇದನ್ನು ದೇಸಿ ಜೀವನಪದ್ಧತಿ ಪುಸ್ತಕದಲ್ಲಿ ಪ್ರಸನ್ನ ಅವರು ಒಂದು ಟೂತ್‌ಪೇಸ್ಟ್‌ನ ಉದಾಹರಣೆಯೊಂದಿಗೆ ತುಂಬಾ ಚೆನ್ನಾಗಿ ವಿವರಿದ್ದಾರೆ. ಮೊದಲು ಜನ ನೈಸರ್ಗಿಕವಾಗಿ, ಉಚಿತವಾಗಿ ಲಭ್ಯವಿರುವ ಬೇವಿನ ಕಡ್ಡಿ, ಇದ್ದಿಲು, ಉಪ್ಪು ಇತ್ಯಾದಿಗಳನ್ನು ಬಳಸಿಕೊಂಡು ಹಲ್ಲು

ತಿಕ್ಕಿಕೊಳ್ಳುತ್ತಿದ್ದರು ಮತ್ತು ಅವರ ಹಲ್ಲುಗಳು ಗಟ್ಟಿಮುಟ್ಟಾಗಿದ್ದುವಲ್ಲದೆ ದೀರ್ಘಕಾಲ ಬಾಳಿಕೆ ಬರುತ್ತಿದ್ದವು. ಟೂತ್ ಪೇಸ್ಟ್ ತಯಾರಿಸಿದ ವ್ಯಕ್ತಿ ನಿರಂತರ ಜಾಹಿರಾತು, ಪ್ರಚಾರಗಳ ಮೂಲಕ ಟೂತ್ ಪೇಸ್ಟ್ ಎಂಬುದು ಹೇಗೆ ಅತ್ಯಂತ ಅನಿವಾರ್ಯ ವಸ್ತುವಾಗಿದೆ. ಅದನ್ನು ಬಳಸದಿದ್ದರೆ ಬಾಯಿ ದುರ್ವಾಸನೆಯಿಂದ ಸಮಾಜದಲ್ಲಿ ಹೇಗೆ ಜನರಿಂದ, ಪ್ರಿಯಕರ, ಪ್ರೇಯಸಿಯರಿಂದ ದೂರವಾಗಬೇಕಾಗುತ್ತದೆ, ಹಲ್ಲುಗಳು ಹೇಗೆ ಹಾಳಾಗಿ ಹೋಗುತ್ತವೆ. ಎನಾಮಲ್ ಎಂಬ ಅತ್ಯಂತ ಗಟ್ಟಿಯಾದ ವಸ್ತು ಉಪ್ಪು, ಇದ್ದಿಲು ಮುಂತಾದವುಗಳ ಬಳಕೆಯಿಂದ ಹೇಗೆ ಹಾಳಾಗುತ್ತದೆಂಬುದು ಗೊತ್ತಿಲ್ಲದ ಹಳ್ಳಿ ಜನ ಹೇಗೆ ಹಲ್ಲುಗಳನ್ನು ಹಾಳುಮಾಡಿಕೊಳ್ಳುತ್ತಾರೆ ಎಂಬುದನ್ನು ಪದೇ ಪದೇ ತೋರಿಸುವ ಮೂಲಕ ಒಂದು ಸುಳ್ಳನ್ನು ಸಾವಿರ ಸಲ ಹೇಳಿದರೆ ಅದೇ ಸತ್ಯವಾಗುತ್ತದೆಂಬ 'ಗೂಬೆಲ್' ತಂತ್ರವನ್ನು ಬಳಸಿ ಜನರ ಜೀವನಶೈಲಿಯನ್ನೇ ಬದಲಾಯಿಸಲಾಗುತ್ತದೆ. ಇಂದು ಪೇಸ್ಟ್, ಸೋಪ್, ಶಾಂಪೂ, ಮೊಬೈಲ್‌ಗಳ ಮಾರುಕಟ್ಟೆ ಬೆಳೆಯುತ್ತಿರುವುದೇ ಹಳ್ಳಿಗಳಲ್ಲಿ

ಮೊದಲೆಲ್ಲ ತಲೆಮಾರುಗಳವರೆಗೆ ಬೇವಿನಕಡ್ಡಿಯೊಂದನ್ನೇ ಬಳಸುತ್ತಿದ್ದ ಮನುಷ್ಯ ಈಗ ಟೂತ್ ಪೇಸ್ಟ್ ಬಳಸಲು ಆರಂಭಿಸಿದ ಮೇಲೆ, ಅವನ ಮುಂದೆ ಒಮ್ಮೆಲೇ ನೂರಾರು ಆಯ್ಕೆಗಳು ಬಂದು ನಿಂತವಲ್ಲದೆ, ಪದೇಪದೇ ಜೀವನಪರ್ಯಂತ ಅವುಗಳನ್ನು ಕೊಳ್ಳಬೇಕಾಗುತ್ತದೆ. ಆ ಪೇಸ್ಟ್‌ಗಿಂತ ಈ ಪೇಸ್ಟ್ ಉತ್ತಮ, ಆ ಬ್ರಶ್‌ಗಿಂತ ಈ ಬ್ರಶ್ ಉತ್ತಮ ಎಂಬ ವಾದಗಳು ಜನರನ್ನು ದ್ವಂದ್ವಕ್ಕೆ ತಳ್ಳುತ್ತವೆ. ಉಚಿತವಾಗಿ ಸಿಗುತ್ತಿದ್ದ ಕಡ್ಡಿ, ಇದ್ದಿಲುಗಳ ಜಾಗದಲ್ಲಿ ಈಗ ಒಂದಕ್ಕೆರಡು ಹಣ ಕೊಟ್ಟು ಕೊಳ್ಳಬೇಕಾದ ವಸ್ತುಗಳು ಬಂದು ಕುಳಿತುಕೊಳ್ಳುತ್ತವೆ. ಇಷ್ಟೆಲ್ಲ ಆದಮೇಲೆ ಅವರ ಹಲ್ಲುಗಳಾದರೂ ಗಟ್ಟಿ ಮುಟ್ಟಾಗಿವೆಯೇ ಎಂದರೆ ಅದೂ ಇಲ್ಲ. ಪದೇಪದೇ ಹಲ್ಲು ನೋವು, ಚಿಕ್ಕ ವಯಸ್ಸಿನಲ್ಲೇ ಹಲ್ಲು ಉದುರುವುದು, ಪದೇಪದೇ ಡೆಂಟಿಸ್ಟರನ್ನು ಭೇಟಿಯಾಗಿ ಹಣ ವೆಚ್ಚ ಮಾಡುವುದು ಹೆಚ್ಚಾಗುತ್ತದೆ. ಪೇಸ್ಟ್‌ಗಳನ್ನು ಇನ್ನಷ್ಟು ಮತ್ತಷ್ಟು ಸ್ಟ್ರಾಂಗ್ ಮಾಡಲು ಅದಕ್ಕೆ ಹೆಚ್ಚುಹೆಚ್ಚು ರಾಸಾಯನಿಕಗಳನ್ನು ಸೇರಿಸಬೇಕಾಗುತ್ತದೆ. ಇವು ಹಲ್ಲುಗಳ ಮೇಲೆ ಮಾತ್ರವಲ್ಲದೇ ದೇಹದ ಮೇಲೂ ತಮ್ಮ ಪರಿಣಾಮ ಬೀರಿ ಆರೋಗ್ಯ ಹದಗೆಡುತ್ತದೆ. ಜೊತೆಗೆ ಜಾಹಿರಾತುಗಳು ಮುಗ್ಧ, ಚಿಕ್ಕ ಮಕ್ಕಳನ್ನು ಬಳಸಿಕೊಂಡು ತಮ್ಮ ಪೇಸ್ಟ್ ಕೀಟಾಣುಗಳ ಜೊತೆಗೆ ಢಿಶುಂ ಢಿಶುಂ ಮಾಡಿ ಹಲ್ಲನ್ನು ರಕ್ಷಿಸುವುದರಿಂದ ಅಪ್ಪ ಅಮ್ಮನಿಗೆ ಹೆದರದೆ ನೀವು ಎಷ್ಟಾದರೂ ಐಸ್‌ಕ್ರೀಂ, ಸಿಹಿ, ಚಿಪ್ಸ್, ತಿನ್ನಬಹುದು. ಆದರೆ ಸ್ವೀಟ್ ಮತ್ತು ಕುರುಕಲು ತಿಂಡಿಗಳು ಹಲ್ಲುಗಳ ಮೇಲೆ ಮಾತ್ರವಲ್ಲದೇ ಇಡೀ ದೇಹದ ಮೇಲೆ ಪರಿಣಾಮ ಬೀರುತ್ತವೆ. ಇದರಿಂದಾಗಿ ಚಿಕ್ಕ ಮಕ್ಕಳಲ್ಲಿ ಬೊಜ್ಜು, ಸಿಹಿಮೂತ್ರ, ಉಬ್ಬುಹಲ್ಲುಗಳ ಸಮಸ್ಯೆ ಕಂಡುಬರುತ್ತಿದೆ. ಇದೆಲ್ಲ ಒಂದು ರೀತಿಯ ವಿಜ್ಞಾನ, ತಂತ್ರಜ್ಞಾನ, ಉದ್ದಿಮೆದಾರರು, ಸೆಲೆಬ್ರಿಟಿಗಳು, ಮೀಡಿಯ, ವೈದ್ಯರು ಮುಂತಾದವರ ನಡುವಿನ ಅಪವಿತ್ರ ಮೈತ್ರಿಯಾಗಿದ್ದು ಜನಸಾಮಾನ್ಯರು, ಮುಗ್ಧ ಮಕ್ಕಳು ಇದರ ಬಲಿಪಶುಗಳಾಗುತ್ತಿದ್ದಾರೆ. ನಿರಂತರವಾದ ನೈಸರ್ಗಿಕತೆಗಿಂತ ತಾತ್ಕಾಲಿಕವಾದ ಕೃತಕತೆಯೇ ಇಂದು ಮೇಲುಗೈ ಸಾಧಿಸುತ್ತಿರುವುದು ಶೋಚನೀಯ.

ಇನ್ನು ನೈತಿಕತೆಯ ಪ್ರಶ್ನೆಗೆ ಬಂದರೆ ಅರ್ಥಶಾಸ್ತ್ರ ಒಂದು ವಾಸ್ತವಿಕ ಅಂದರೆ ಪಾಸಿಟಿವ್ ವಿಜ್ಞಾನವಾಗಿದ್ದು, ಅದರ ಕೆಲಸ ಕೇವಲ ಇದು ಹೀಗಿದೆ ಎಂದು ತಿಳಿಸುವುದು ಮಾತ್ರವಾಗಿದೆಯೇ ಹೊರತು, ಇದು ಸರಿ ಇದು ತಪ್ಪು ಎಂದು ತೀರ್ಮಾನಿಸುವ ನೀತಿಶಾಸ್ತ್ರವಲ್ಲ ಎಂಬ ವಾದವೂ ಇದೆ. ಇದರಿಂದ ಉದ್ಭವಿಸಿದ ವಾಣಿಜ್ಯ, ಮಾರುಕಟ್ಟೆಗಳೂ ಇದೇ ಮನೋಭಾವನೆ ಬೆಳೆಸಿಕೊಂಡಿದ್ದು 'ಏನೇ ಆಗಲಿ ಹಣ ಮಾಡಬೇಕು, ನೈತಿಕ ಅನೈತಿಕಗಳ ವಿಮರ್ಶೆ ಅನಾವಶ್ಯಕ' ಎಂದು ಭಾವಿಸಿವೆ. ಲಾಭಕ್ಕಾಗಿ ಏನು ಬೇಕಾದರೂ ಮಾಡಲು ಬಂಡವಾಳಶಾಹಿಗಳು ಮತ್ತು ವ್ಯಾಪಾರಿಗಳು ಸಿದ್ಧರಾಗಿರುತ್ತಾರೆ.

ಇದಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ ಜೇನುಕುರುಬರ ಮುಗ್ಧಯುವಕ ರಾಜೇಶನ ದುರಂತ ಅಂತ್ಯ. ಕಾಡಿನಲ್ಲಿ ಸ್ವಚ್ಛಂದವಾಗಿ ಸಂತೋಷವಾಗಿದ್ದವನನ್ನು ಟಿ.ವಿ. ಚಾನೆಲ್‌ನವರು ತಮ್ಮ ಲಾಭಕ್ಕಾಗಿ ನಾಡಿಗೆ ಕರೆತಂದು ಅವನನ್ನು ಕೇವಲ ಸರ್ಕಸ್ ಪ್ರಾಣಿಯಂತೆ ಬಳಸಿಕೊಂಡು ಹಣವೇ ಕಾಣದವನಿಗೆ ಒಮ್ಮೆಲೇ ಲಕ್ಷಾಂತರ ರೂಪಾಯಿಗಳನ್ನು ಬಹುಮಾನವಾಗಿ ನೀಡಿದ್ದಲ್ಲದೆ, (ಅವರು ಕೋಟ್ಯಂತರ ರೂಪಾಯಿ ಗಳಿಸಿದರು ಅದು ಬೇರೆ) ಅವನಲ್ಲಿ ಇಲ್ಲಸಲ್ಲದ ಅಸ್ವಾಭಾವಿಕ ಭಾವನೆಗಳನ್ನು ಮೂಡಿಸಿ ಸೂಪರ್‌ಮ್ಯಾನ್ ಎಂಬಂತೆ ಬಿಂಬಿಸಿ ಅವನ ಮಾನಸಿಕ ಅಸ್ವಸ್ಥತೆಗೆ ಮತ್ತು ಆತ್ಮಹತ್ಯೆಗೆ ಕಾರಣರಾದರು. ಕೊನೆಗೆ ಅವನ ಸಾವನ್ನೂ ಕೆಲವು ಟಿ.ವಿ. ಚಾನೆಲ್‌ಗಳು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡವು. ಆ ಸಮಯದಲ್ಲೇ ಅವನ ಚಲನಚಿತ್ರವನ್ನೂ ಬಿಡುಗಡೆ ಮಾಡಿ 'ಹೆಣದ ಮೇಲೆ ಹಣ ಮಾಡಿಕೊಳ್ಳುವ' ಸ್ವಾರ್ಥ ಪ್ರವೃತ್ತಿಯನ್ನು ಮಾರುಕಟ್ಟೆ ಪ್ರದರ್ಶಿಸಿತು.

ಬಯಕೆಗಳು ಮತ್ತು ಸಮೃದ್ಧಿ

ಆರ್ಥಿಕತೆಯ ಮೂಲವೇ ಮಾನವನ 'ಬಯಕೆ' ಅಥವಾ 'ಆಸೆ'ಗಳು ಎಂದು ಪಠ್ಯ ಪುಸ್ತಕಗಳು ತಿಳಿಸುತ್ತವೆ. ಅರ್ಥಶಾಸ್ತ್ರದ ಮೊದಲ ವಾಕ್ಯವೇ 'ಮಾನವ ಬಯಕೆಗಳ ಆಗರ', ಅವನ ಬಯಕೆಗಳು ಅಪರಿಮಿತವಾಗಿದ್ದು ಅದನ್ನು ತೃಪ್ತಿಪಡಿಸುವ ಸಂಪನ್ಮೂಲಗಳು ತುಂಬಾ ಸೀಮಿತ. ಹೀಗಾಗಿ 'ಆಯ್ಕೆ'ಯ ಪ್ರಶ್ನೆ ಉದ್ಭವಿಸುತ್ತದೆ. ತನ್ನ ಸೀಮಿತ ಸಂಪನ್ಮೂಲಗಳಿಂದ ಹೇಗೆ ಅತಿ ಹೆಚ್ಚಿನ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಬೇಕು, ಇಲ್ಲವೇ ಸಂಪನ್ಮೂಲಗಳನ್ನು ಹೇಗೆ ಹೆಚ್ಚಿಸಿಕೊಳ್ಳಬೇಕು ಎನ್ನುವುದನ್ನು ವಿವರಿಸುವುದೇ ಅರ್ಥಶಾಸ್ತ್ರ. ಇಲ್ಲಿ ಅಭಿವೃದ್ಧಿ, ಸಂಪತ್ತು ಮತ್ತು ಸುಖಕ್ಕಾಗಿ ಹೇಗೆ ಉತ್ಪಾದನೆಯನ್ನು, ಆದಾಯವನ್ನು ಹೆಚ್ಚಿಸಿಕೊಳ್ಳಬೇಕು, ಅದಕ್ಕಾಗಿ ಲಭ್ಯವಿರುವ ನೈಸರ್ಗಿಕ, ಮಾನವ ಅಥವಾ ಇನ್ನಾವುದೇ ಸಂಪನ್ಮೂಲಗಳನ್ನು ಹೇಗೆ ಹೆಚ್ಚುಹೆಚ್ಚಾಗಿ ಬಳಸಿಕೊಳ್ಳಬೇಕು(ಇಲ್ಲಿ ಬಳಸು ಎಂಬುದಕ್ಕೆ ಶೋಷಿಸು(Exploit) ಎಂಬ ಪದವನ್ನು ಬಳಸಲಾಗುತ್ತಿದೆ) ಎಂದು ತಿಳಿಸಲಾಗುತ್ತದೆ. ಇಷ್ಟೆಲ್ಲಾ ಆದರೂ ಸಂತೃಪ್ತಿ ಎಂಬುದು ಮನುಷ್ಯನಿಗೆ ಮರೀಚಿಕೆಯಾಗಿದೆ ಹಾಗೂ ಸಾಧ್ಯವೇ ಇಲ್ಲದ ಆದರ್ಶ ಮಾತ್ರವಾಗಿದೆ. ಆದರೆ ಬುಡಕಟ್ಟು ಆರ್ಥಿಕತೆಯ ಲಕ್ಷಣ, ತತ್ವ, ಸಿದ್ಧಾಂತಗಳೇ ಬೇರೆ.

- ಆಧುನಿಕ ಆರ್ಥಿಕತೆಯಲ್ಲಿ ಬಯಕೆಗಳು ಅಪರಿಮಿತವಾಗಿವೆ. ಆದರೆ ಬುಡಕಟ್ಟು ಆರ್ಥಿಕತೆಯಲ್ಲಿ ಬಯಕೆಗಳು ಪರಿಮಿತವಾಗಿರುತ್ತವೆ.

- ಆಧುನಿಕ ಆರ್ಥಿಕತೆಯಲ್ಲಿ ಬಯಕೆಗಳಿಗೆ ಹೋಲಿಸಿದರೆ ಸಂಪನ್ಮೂಲಗಳು ಪರಿಮಿತವಾಗಿರುತ್ತವೆ. ಆದರೆ ಬುಡಕಟ್ಟು ಆರ್ಥಿಕತೆಯಲ್ಲಿ ಪ್ರಕೃತಿ ಅಪರಿಮಿತ ಸಂಪನ್ಮೂಲಗಳನ್ನು ಹೊಂದಿದೆ.
- ಆಧುನಿಕ ಆರ್ಥಿಕತೆ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ಸಮೃದ್ಧಿ ಸಾಧಿಸುವ ವಾಮಮಾರ್ಗವನ್ನನುಸರಿಸಿದರೆ, ಆದಿಮ ಸಮಾಜ ಬಯಕೆಗಳನ್ನೇ ಕಡಿಮೆ ಮಾಡುವ ಮೂಲಕ ಸಮೃದ್ಧಿ ಸಾಧಿಸುವ ಝೆನ್ ಮಾರ್ಗವನ್ನು ಪ್ರತಿನಿಧಿಸುತ್ತದೆ.

ಉದಾಹರಣೆಗೆ ಬುಡಕಟ್ಟು ಜನರು ನಮಗಿಂತಲೂ ಸುಖ ಮತ್ತು ಸಮೃದ್ಧಿಯ ಜೀವನ ನಡೆಸುತ್ತಾರೆ ಮತ್ತು ನಮಗಿಂತ ಪೌಷ್ಟಿಕ ಆಹಾರ ಸೇವಿಸುತ್ತಾರೆ. ಅವರದು ವಿಶೇಷ ರೀತಿಯ ಜೀವನಾಧಾರ ಆರ್ಥಿಕತೆಗಳಾಗಿದ್ದು ಅವು ನಿಜಕ್ಕೂ ಸಮೃದ್ಧ ಸಮಾಜಗಳಾಗಿದ್ದವು ಎಂದು ನಿರೂಪಿಸಿದವರೆಂದರೆ ಮಾರ್ಷಲ್ ಸಾಹ್ಲಿನ್ ಅವರು. '೧೯೬೬ರಲ್ಲಿ ಚಿಕಾಗೋದಲ್ಲಿ ನಡೆದ 'ಮ್ಯಾನ್ ದ ಹಂಟರ್' ಎಂಬ ಸಿಂಪೋಸಿಯಂನಲ್ಲಿ ಇದನ್ನು ನಿರೂಪಿಸಲು ಸಾಹ್ಲಿನ್ ಅವರು ಮೆಕಾರ್ಥಿ, ಮೆಕರ್ಥರ್ ಮತ್ತು ರಿಚರ್ಡ್ ಲೀ ಅವರ ದಕ್ಷಿಣ ಆಫ್ರಿಕಾದ 'ಕುಂಗ್' ಜನಾಂಗದ ಅಧ್ಯಯನವನ್ನು ಆಧಾರವಾಗಿಟ್ಟುಕೊಂಡು ಈ ಆದಿಮ ಸಮುದಾಯಗಳು ನಿಜಕ್ಕೂ ಹಿಂದುಳಿದ, ಹಸಿವೆ ಬಡತನಗಳಿಂದ ನರಳುವ, ಜೀವನಕ್ಕಾಗಿ ನಿರಂತರ ಹೋರಾಡುವ ಸಮುದಾಯಗಳಾಗಿರದೆ ನಿಜಕ್ಕೂ ಸಮೃದ್ಧ ಸಮುದಾಯಗಳಾಗಿದ್ದು ಅಲ್ಲಿ ಎಲ್ಲರ ಬಯಕೆಗಳೂ ಸಂಪೂರ್ಣವಾಗಿ ತೃಪ್ತಿ ಪಡಿಸಲ್ಪಡುತ್ತಿದ್ದವು'[೪] ಎಂದು ನಿರೂಪಿಸಿದರು. ಸಾಮಾನ್ಯ ಅರ್ಥಶಾಸ್ತ್ರದ ವಿದ್ಯಾರ್ಥಿಗಳಿಗೆ ಇದು ವಿಚಿತ್ರವೆನಿಸಿದರೂ ಸಾಹ್ಲಿನ್‌ರ ಪ್ರಕಾರ ಈ ಸಮುದಾಯಗಳು ತಮ್ಮ ಬಯಕೆಗಳನ್ನು ಮಿತವಾಗಿರಿಸಿ ಕೊಳ್ಳುವ ಮೂಲಕ ಅತುಲವಾದ ಪ್ರಾಕೃತಿಕ ಸಂಪನ್ಮೂಲಗಳನ್ನು ಮಿತವಾಗಿ ಬಳಸಿಕೊಂಡು, ಸುಖಸಮೃದ್ಧಿಯ ಜೀವನ ನಡೆಸುತ್ತಿದ್ದರು. ನಿಸರ್ಗದಲ್ಲಿ ಸಿಗುವ ವೈವಿಧ್ಯಮಯ ಹಣ್ಣು ಹಂಪಲು, ಸೊಪ್ಪು ತರಕಾರಿ, ಮಾಂಸ, ಮೊಟ್ಟೆ ಇತ್ಯಾದಿಗಳನ್ನು ಬಳಸಿಕೊಂಡು ಪೌಷ್ಟಿಕ, ಶ್ರೀಮಂತ ಆಹಾರ ಸೇವಿಸುತ್ತಿದ್ದರು.

ನಿಸರ್ಗದ ಋತುಮಾನಗಳಿಗನುಗುಣವಾಗಿ ನಮ್ಮ ಬಯಕೆಗಳನ್ನು ಹೊಂದಿಸಿಕೊಂಡು, ಪ್ರಕೃತಿ ಮಾತೆಯ ಮಡಿಲ ಮಗುವಾಗಿದ್ದರೆ ಎಂದೂ ಯಾರೂ ಹಸಿವೆ ಬಡತನಗಳಿಂದ ಬಳಲಬೇಕಾದ ಪ್ರಮೇಯವೇ ಬರುವುದಿಲ್ಲ. ಮರ ತನಗಾಗಿ ಏನನ್ನೂ ಬಚ್ಚಿಟ್ಟುಕೊಳ್ಳುವುದಿಲ್ಲ ಅಥವಾ ಶ್ರೀಮಂತ, ಸುಂದರ, ಬಲಶಾಲಿ ಪ್ರಾಣಿಗಳಿಗೆ ಮಾತ್ರ ಹಣ್ಣು, ನೆರಳು ನೀಡುವುದಿಲ್ಲ, ನದಿ ನಾಳೆಗಾಗಿ ಇಂದು ನೀರನ್ನು ಹರಿಸಲಾರೆ ಎನ್ನುವುದಿಲ್ಲ, ಗಾಳಿ ಹಣ ನೀಡಿದರೆ ಮಾತ್ರ ಬೀಸುವೆ ಎನ್ನುವುದಿಲ್ಲ, ಸೂರ್ಯ ನನ್ನಲ್ಲಿರುವ ಇಂಧನ ಕಡಿಮೆಯಾಗುತ್ತದೆಂದು ಎಂದೂ ತನ್ನ ಕೆಲಸ ನಿಲ್ಲಿಸಿಲ್ಲ, ಬೇಜಾರಾಗಿದೆಯೆಂದು ಚಂದ್ರ ಎಂದೂ ವಾರಾಂತ್ಯದ ರಜೆ ಅಥವಾ ಬೋನಸ್ ಕೇಳುವುದಿಲ್ಲ. ಇಡೀ ನಿಸರ್ಗ ತನಗಾಗಿ ಬದುಕದೆ ಇತರರಿಗಾಗಿ ತ್ಯಾಗ ಮಾಡುವುದರಿಂದಲೇ ಅದು ನಿತ್ಯನೂತನ, ಸಸ್ಯ ಶ್ಯಾಮಲ, ನವನವೋನ್ಮೇಷಶಾಲಿನಿಯಾಗಿದೆ.

'ನಮ್ಮ ಸದ್ಯದ ಆಧುನಿಕ ಅಭಿವೃದ್ಧಿಯ ಪರಿಭಾಷೆ 'ಗಾಲ್ಬ್ರೇತಿಯನ್' ಪರಿಭಾವನೆಯನ್ನು ಹೋಲುವುದಾದರೂ ಬುಡಕಟ್ಟು ಅಭಿವೃದ್ಧಿಯ ಪರಿಕಲ್ಪನೆ ಅದಕ್ಕೆ ವಿರುದ್ಧವಾಗಿದೆ. ಗಾಲ್ ಬ್ರೇತ್ ಎಂಬ ಅರ್ಥಶಾಸ್ತ್ರಜ್ಞ 'ಬಯಕೆಗಳು ಅಗಾಧವಾಗಿವೆಯೇ ಹೊರತು ಅಪರಿಮಿತವಾಗಿಲ್ಲ. ಕೈಗಾರಿಕೀಕರಣ ದಿಂದ ಉತ್ಪಾದನೆಯನ್ನು ಬೃಹತ್ ಪ್ರಮಾಣದಲ್ಲಿ ಮಾಡುವ ಮೂಲಕ ಬಯಕೆ- ಸಂಪನ್ಮೂಲಗಳ ಅಂತರ ಕಡಿಮೆ ಮಾಡಿ, ಸಮೃದ್ಧತೆಯನ್ನು ಸಾಧಿಸಬಹುದೆಂದು ಅವರು ಭಾವಿಸಿದ್ದರು. ಆದರೆ ಆದಿಮ ಸಮುದಾಯಗಳು ನಿಸರ್ಗವನ್ನು ನಾಶ ಮಾಡುವ ಅತಿ ಉತ್ಪಾದನೆಯ ಬದಲು ತಮ್ಮ ಬಯಕೆಗಳನ್ನೇ ಕಡಿಮೆ ಮಾಡಿಕೊಂಡು ಸಮೃದ್ಧಿ ಸಾಧಿಸುವ ಆದರ್ಶ ಮಾರ್ಗವನ್ನು ಆರಿಸಿ ಕೊಂಡಿದ್ದಾರೆ. ಇದನ್ನು 'ಝೆನ್ ಸಮೃದ್ಧಿ ಮಾರ್ಗ' (Zen road to affluence) ಎನ್ನಬಹುದು.'[೫] ಮೂಲತಃ ಮನುಷ್ಯನ ಭೌತಿಕ ಬಯಕೆಗಳು ಸೀಮಿತ ಹಾಗೂ ಲಭ್ಯವಿರುವ ಸಂಪನ್ಮೂಲ ಹಾಗೂ ತಂತ್ರಜ್ಞಾನಗಳು ತೃಪ್ತಿಕರವೆನ್ನುವಷ್ಟಿವೆ. ಹೀಗೆ ಸಾಹ್ಲಿನ್‌ರ ಅಭಿಪ್ರಾಯದಂತೆ ಅರ್ಥೈಸಿಕೊಂಡರೆ, ಆಧುನಿಕ ಆರ್ಥಿಕತೆ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ಸಮೃದ್ಧಿ ಸಾಧಿಸುವ ವಾಮಮಾರ್ಗ ವನ್ನನುಸರಿಸಿದರೆ, ಆದಿಮ ಸಮಾಜ ಬಯಕೆಗಳನ್ನೇ ಕಡಿಮೆ ಮಾಡುವ ಮೂಲಕ ಸಮೃದ್ಧಿ ಸಾಧಿಸುವ ರಾಜಮಾರ್ಗವನ್ನು ಪ್ರತಿನಿಧಿಸುತ್ತದೆ. ಸಂಪನ್ಮೂಲಗಳನ್ನು ಸೃಷ್ಟಿಸುವ, ಹೆಚ್ಚಿಸುವ ಸಾಮರ್ಥ್ಯ ಮಾನವನಿಗಿಲ್ಲವಾದರೂ ತನ್ನ ಬಯಕೆಗಳನ್ನು ನಿಯಂತ್ರಿಸಿಕೊಳ್ಳುವ ಸಾಮರ್ಥ್ಯ ಅವನಿಗೆ ಖಂಡಿತವಾಗಿಯೂ ಇದೆ.

ಪ್ರಕೃತಿಯನ್ನು ಆರಾಧಿಸುವ, ಆಸ್ವಾದಿಸುವ ಆದಿಮ ಮಾನವ, ತನ್ನ ಜಾಣ್ಮೆ, ಪರಿಸರದ ಪರಿಜ್ಞಾನವನ್ನು ಬಳಸಿಕೊಂಡು, ಆಧುನಿಕರ ದೃಷ್ಟಿಯಲ್ಲಿ ವ್ಯರ್ಥ, ಕೊರತೆಯ, ಅಪೌಷ್ಟಿಕ ಅರಣ್ಯದ ಸಂಪನ್ಮೂಲಗಳನ್ನು ಪೌಷ್ಟಿಕ, ಶ್ರೀಮಂತ ಸಂಪನ್ಮೂಲಗಳನ್ನಾಗಿ ಪರಿವರ್ತಿಸಿಕೊಳ್ಳುವಲ್ಲಿ ಯಶಸ್ವಿ ಯಾಗಿದ್ದನಲ್ಲದೆ, ಬೇಟೆ, ಆಹಾರ ಸಂಗ್ರಹಣೆಯ ತಂತ್ರಗಳನ್ನು ನಿರಂತರವಾಗಿ ಅಭಿವೃದ್ಧಿಪಡಿಸಿಕೊಳ್ಳುತ್ತಾ ಯಶಸ್ಸು ಸಾಧಿಸುತ್ತ ಅತ್ಯಂತ ಕಡಿಮೆ ಸಮಯ-ಶ್ರಮದಲ್ಲಿ ಅವಶ್ಯಕವಿರುವಷ್ಟು ಆಹಾರ ಸಂಗ್ರಹಿಸುವ ಮೂಲಕ ಇಂದಿನ ಪೀಳಿಗೆಗೆ, ಸಾಫ್ಟ್‌ವೇರ್‌ಗಳಿಗೆ, ಮಲ್ಟಿಮಿಲಿನಿಯರ್‌ಗಳಿಗೆ, ಸೆಲೆಬ್ರಿಟಿಗಳಿಗೆ, ಗಗನ ಕುಸುಮವಾಗಿರುವ ಶಾಂತ, ವಿಶ್ರಾಂತ, ಒತ್ತಡರಹಿತ ಮತ್ತು ಸಂತೃಪ್ತಿಯ ಜೀವನ ನಡೆಸುವಲ್ಲಿ ಯಶಸ್ವಿಯಾಗಿದ್ದನು. ತನ್ನೆಲ್ಲ ಬಯಕೆಗಳೂ ತೃಪ್ತಿಯಾದ ನಂತರ ಉಳಿದ ಬಿಡುವಿನ ಸಮಯ ಎಷ್ಟಿರುತ್ತಿತ್ತೆಂದರೆ ಅವನು ಅದನ್ನು ತನ್ನ ಕೌಶಲ್ಯ, ಕಲೆ, ಸಂಗೀತ ಇತ್ಯಾದಿಗಳ ಅಭಿವೃದ್ಧಿಗೆ ಬಳಸಿ ಸಂತೋಷಪಡುತ್ತಿದ್ದನು. ಗುಹೆಗಳ ಕಲ್ಲುಗಳ ಮೇಲೆ ಚಿತ್ರಗಳನ್ನು ಕೊರೆದು ಮಾಂತ್ರಿಕ ಶಕ್ತಿಗಳನ್ನು ಪಡೆಯಲು ಹಾಗೂ ತನ್ನ ಭಾವನೆಗಳ ಅಭಿವ್ಯಕ್ತಿಗೆ ಕಲೆಯನ್ನು ಬಳಸಿಕೊಳ್ಳುತ್ತಿದ್ದನು.

ಅವನ ಬಯಕೆಗಳು ಕಡಿಮೆ ಇದ್ದುದು ಮಾತ್ರವಲ್ಲ, ಮಿಗುತೆ ಅಥವಾ ಅತಿ ಉತ್ಪಾದನೆಗಳ ಮೂಲಕ ಅವನು ತುಂಬಾ ದೂರದ ಭವಿಷ್ಯದ ಬಗ್ಗೆ, ತಲೆ ತಲೆಮಾರಿಗಾಗಿ ಕೂಡಿಡುವ ಬಗ್ಗೆ ತಲೆಕೆಡಿಸಿಕೊಳ್ಳದೆ ಸದ್ಯದ ಅವಶ್ಯಕತೆಗಳ ಪೂರೈಕೆಗೆ ಮಾತ್ರ ಗಮನ ನೀಡುತ್ತಿದ್ದನು. ಅದಕ್ಕೆ

ಅವನಿಗೆ ಪ್ರಕೃತಿಯ ಸಮೃದ್ಧಿಯ ಮೇಲಿದ್ದ ಅಪಾರ ನಂಬಿಕೆ ವಿಶ್ವಾಸಗಳೂ ಕಾರಣ. ಸುಖವೆಂಬುದು ಭೌತಿಕ ಸರಕುಗಳಲ್ಲಿರಬಹುದಾದರೂ ಸಂತೋಷ ಮಾನಸಿಕ ಸ್ಥಿತಿ ಎನ್ನುವುದನ್ನು ಅಲ್ಲಗಳೆಯಲಾಗದು. ಕಳೆದುಹೋದ, ಮತ್ತೆ ಬಾರದ ಭೂತಕಾಲದ ಬಗ್ಗೆ ಕೊರಗುತ್ತಾ, ಗೊತ್ತಿಲ್ಲದ ಅನಿಶ್ಚಿತ ಭವಿಷ್ಯದ ಬಗ್ಗೆ ಭಯಪಡುತ್ತಾ ಇಂದಿನ ಸುಂದರ ಕ್ಷಣಗಳನ್ನು ಕಳೆದುಕೊಂಡು ಸುಖವೆಂಬ ಮರೀಚಿಕೆಯ ಬೆನ್ನು ಹತ್ತಿರುವ ಇಂದಿನ ಮಾನವನಿಗಿಂತ, ಅಂದಿನ ಮಧುರಕ್ಷಣಗಳನ್ನು ಆಸ್ವಾದಿಸುತ್ತಾ ನಿಶ್ಚಿಂತೆಯ ವರ್ತಮಾನದ ಜೀವನ ನಡೆಸುತ್ತಿದ್ದ ಆದಿಮ ಮಾನವ ಹಾಗೂ ಅವನ ವಂಶಜರಾದ ಇಂದಿನ ಬುಡಕಟ್ಟು ಸಮುದಾಯಗಳೇ ನಿಜಕ್ಕೂ ಸುಖಿ ಹಾಗೂ ಶ್ರೀಮಂತರೆಂದು ಹೇಳಬಹುದು. ಆದಿಮ ಮಾನವನಲ್ಲಿ ಆಧುನಿಕ ಅರ್ಥಶಾಸ್ತ್ರಜ್ಞರ ಭೌತಿಕ ಸಿರಿವಂತಿಕೆ ಇಲ್ಲದಿದ್ದರೂ ಕಡಿಮೆ ಸಮಯ, ಶ್ರಮ ಬಳಸಿ ತನ್ನ ಬಯಕೆಗಳನ್ನೆಲ್ಲ ಪೂರೈಸಿಕೊಳ್ಳುವ ಮೂಲಕ ನಿಜವಾದ ಸಮೃದ್ಧಿಯ ಜೀವನ ನಡೆಸುತ್ತಿದ್ದನಲ್ಲದೆ, ನಾವೆಲ್ಲ ಭಾವಿಸಿರುವಂತೆ ತುಂಬಾ ಕಷ್ಟದ, ಬಡತನದ, ಹಸಿವಿನ, ಸಂಘರ್ಷದ ಜೀವನ ನಡೆಸುತ್ತಿಲ್ಲವೆಂದು ನಿರೂಪಿಸುವ ಮೂಲಕ ಸಾಹ್ಲಿನ್ ಜನಪ್ರಿಯ ನಂಬಿಕೆಗಳನ್ನು ಮುರಿದು ಹೊಸದಾಗಿ ಪುನರ್‌ನಿರ್ಮಾಣ ಮಾಡಿದನೆಂದು ಹೇಳಬಹುದು.

ಇದೇ ಮಾತನ್ನೇ ಗಾಂಧೀಜಿಯವರ ಪ್ರಸಿದ್ಧ ಹೇಳಿಕೆ 'ಪ್ರಕೃತಿ ನಮ್ಮೆಲ್ಲರ ಆಸೆಗಳನ್ನು ಪೂರೈಸುವ ಸಾಮರ್ಥ್ಯ ಹೊಂದಿದೆಯೇ ಹೊರತು ನಮ್ಮೆಲ್ಲರ ದುರಾಸೆಯನ್ನಲ್ಲ' ಎನ್ನುವುದು ಪುಷ್ಟೀಕರಿಸುತ್ತದೆ.

ಆಧುನಿಕ ಆರ್ಥಿಕತೆ ಈ ರೀತಿ ಯೋಚಿಸುವುದೂ ಸಾಧ್ಯವಿಲ್ಲ. ಅದು ಕೇವಲ ಉತ್ಪಾದನೆಯನ್ನು ಹೆಚ್ಚಿಸಲು ಹೆಚ್ಚುಹೆಚ್ಚು ಸಂಪನ್ಮೂಲಗಳನ್ನು ಉಪಯೋಗಿಸುತ್ತದೆಯೇ ಹೊರತು ಈ ಸಂಪನ್ಮೂಲಗಳು ಸೀಮಿತ, ಇವು ಕೇವಲ ಮನುಷ್ಯನಿಗೆ ಮಾತ್ರ ಸೀಮಿತವಾಗಿಲ್ಲ, ಎಲ್ಲ ಜೀವಿಗಳಿಗೂ, ಎಲ್ಲ ಜನಾಂಗಗಳಿಗೂ ಇದರ ಮೇಲೆ ಹಕ್ಕಿದೆ, ಮುಂದಿನ ಪೀಳಿಗೆಗೂ ಇವನ್ನು ಉಳಿಸಬೇಕಿದೆ ಎಂಬ ಭಾವನೆ ಮೂಡುತ್ತಿಲ್ಲ.

ಇಲ್ಲಿ ನಾವು ಅನಾಗರಿಕರು, ಮೂಢರೆಂದು ಭಾವಿಸಿರುವ ಬುಡಕಟ್ಟುಗಳಿಂದ ಕಲಿಯಬೇಕಾದದ್ದು ಸಾಕಷ್ಟಿದೆ. 'ಸಿದ್ದಿಗಳ ಬಗೆಗೂ ಈ ರೀತಿಯ ದೂರುಗಳು ಸಾಮಾನ್ಯರಿಂದ ಕೇಳಿಬರುತ್ತವೆ. ಅವರು ಬೇಜವಾಬ್ದಾರಿಗಳು, ಸ್ವಲ್ಪ ಹಣ ಕೈಗೆ ಬಂದರೆ ಸಾಕು, ಕೆಲಸವನ್ನೇ ಮಾಡದ ಸೋಮಾರಿಗಳು, ಭವಿಷ್ಯದ ಬಗೆಗೆ ಚಿಂತೆಯೇ ಇಲ್ಲದವರು ಎಂದೆಲ್ಲಾ ಜನ ಹೇಳುತ್ತಾರೆ. ಆದರೆ ವಾಸ್ತವಿಕವಾಗಿ ಇವು ಬುಡಕಟ್ಟು ಜನರ ಲಕ್ಷಣಗಳಾಗಿದ್ದು ಅವರ ಬಯಕೆಗಳು ತುಂಬಾ ಸೀಮಿತವಾಗಿವೆ ಮತ್ತು ಅವುಗಳನ್ನು ಸುಲಭವಾಗಿ ತೃಪ್ತಿಪಡಿಸಿಕೊಳ್ಳಬಹುದು. ಅಲ್ಲದೆ ಸಿದ್ದಿಗಳು ನೂರಾರು ವರ್ಷಗಳ ಗುಲಾಮಗಿರಿಯಿಂದ ಸ್ವತಂತ್ರ ನಿರ್ಧಾರ, ಆಸ್ತಿಪಾಸ್ತಿ ಮಾಡಿಕೊಳ್ಳುವ ಮನೋಭಾವನೆಯನ್ನೇ ಬೆಳೆಸಿಕೊಂಡಿರಲಿಕ್ಕಿಲ್ಲ.

ಉತ್ಪಾದನೆ

ಸಾಮಾನ್ಯ ಅರ್ಥಶಾಸ್ತ್ರದಲ್ಲಿ ಉತ್ಪಾದನೆ ಎಂದರೆ ಸರಕು ಸೇವೆಗಳಿಗೆ ತುಷ್ಟಿಗುಣ ಸೇರಿಸುವುದು ಅಥವಾ ಹೆಚ್ಚಿಸುವುದು ಎಂದರ್ಥ. ಆದರೆ ಬುಡಕಟ್ಟು ಅರ್ಥಶಾಸ್ತ್ರದ ಪ್ರಕಾರ ಮುಕ್ತವಾಗಿ

ದೊರಕುವ, ಯಾರದೇ ಅಧೀನದಲ್ಲಿಲ್ಲದ ನಿಸರ್ಗ ಲಭ್ಯ ವಸ್ತುಗಳನ್ನು ಸಂಗ್ರಹಿಸುವ ಅಥವಾ ಸ್ವಾಧೀನಪಡಿಸಿಕೊಳ್ಳುವ ಕ್ರಿಯೆಗೆ ಉತ್ಪಾದನೆ ಎನ್ನಬಹುದು. ಅಥವಾ 'ತನಗೆ ಅವಶ್ಯವಿರುವ ರೂಪದಲ್ಲಿ, ಪ್ರಮಾಣದಲ್ಲಿ ಲಭ್ಯವಿಲ್ಲದ ಸರಕು ಸೇವೆಗಳನ್ನು ನಿರ್ಮಿಸುವ ಅಥವಾ ಹೊಂದುವ ಮಾನವ ಪ್ರಯತ್ನವನ್ನೇ ಉತ್ಪಾದನೆ ಎನ್ನಬಹುದು'[೬].

ಬುಡಕಟ್ಟುಗಳ ಪ್ರಕಾರ ಉತ್ಪಾದನೆ ಎಂದರೆ ಬೇಟೆ ಮತ್ತು ಆಹಾರ ಸಂಗ್ರಹಣೆ, ಅಡುಗೆ, ಪಶುಸಂಗೋಪನೆ, ಕೂಲಿ ಹಾಗೂ ಕುಮರಿ ಬೇಸಾಯ ಎನ್ನಬಹುದು. ನಿಸರ್ಗಲಭ್ಯ ವಸ್ತುಗಳನ್ನು ಹಾಗೆಯೇ ಅಂದರೆ ರೂಪಾಂತರಗೊಳಿಸದೆಯೇ ಬಳಸುವುದೂ ಸಹ ಉತ್ಪಾದನೆ ಎನ್ನಿಸುತ್ತದೆ. ಬಿಡುವಿನ ಸಮಯದಲ್ಲಿ ಬಂಡೆಗಳ ಮೇಲೆ, ಲೋಹದ ಮೇಲೆ ಚಿತ್ರಗಳನ್ನು ಬಿಡಿಸುವುದು, ಕೆತ್ತುವುದು, ಆಯುಧಗಳನ್ನು ತಯಾರಿಸುವುದು, ಹಾಡು, ನೃತ್ಯ, ನೂಲುವುದು, ಔಷಧಿಗಳ ಸಂಗ್ರಹ, ಮಾಂತ್ರಿಕ ಆಚರಣೆಗಳು ಇತ್ಯಾದಿಗಳನ್ನೆಲ್ಲ ಉತ್ಪಾದನೆ ಎನ್ನಬಹುದು. ಇಲ್ಲಿ ಉತ್ಪಾದನೆ ಉತ್ಪಾದಕರಿಗಾಗಿಯೇ ಹೊರತು ವಿನಿಮಯ, ಮಾರುಕಟ್ಟೆಗೆ ಅಥವಾ ಲಾಭ ಗಳಿಸಲು ಅಲ್ಲ. ಸರಕುಗಳು ಅನುಭೋಗ ಅಥವಾ ಕೊಡುಗೆಗಾಗಿಯೇ ಹೊರತು ಮಾರಾಟ ಮಾಡಲು ಅಲ್ಲ. ಇಂದಿನ ಮಾನವನಾದರೋ ತನಗೆ ಬೇಕಿಲ್ಲದ, ಬೇರೆಯವರಿಗೆ ಬೇಕಾಗುವ ಮತ್ತು ಲಾಭ ತರುವ ವಸ್ತುಗಳನ್ನೇ ಉತ್ಪಾದಿಸುತ್ತಿದ್ದಾನೆ.

ಸಿದ್ದಿಗಳ ಪ್ರಸ್ತುತ ಆರ್ಥಿಕತೆಯಲ್ಲಿ ಅವರ ಉತ್ಪಾದನೆ ಅರಣ್ಯ, ಕೃಷಿ ಮತ್ತು ಕೂಲಿಯನ್ನೇ ಅವಲಂಬಿಸಿದೆ. ತಮ್ಮೊಳಗೆ ಪರಸ್ಪರ ಹಂಚಿಕೊಳ್ಳುವ ಪದ್ಧತಿ ಮನೆ ಕಟ್ಟುವ, ಹೊಲ ಉಳುವ, ಜೀವನಚಕ್ರ ಆಚರಣೆಗಳಲ್ಲಿ ಇನ್ನೂ ಉಳಿದುಕೊಂಡಿದೆಯಾದರೂ ನಿಧಾನವಾಗಿ ಇವೂ ಮರೆಯಾಗುತ್ತಿವೆ. ಸಿದ್ದಿಗಳಲ್ಲಿ ಬೃಹತ್ ಉದ್ದಿಮೆಗಳು ಕಂಡುಬರುವುದಿಲ್ಲವಾದರೂ ಇತ್ತೀಚಿನ ದಿನಗಳಲ್ಲಿ ಜಾಗತೀಕರಣದ ಪ್ರಭಾವದಿಂದಾಗಿ ಅವರ ಕಾಡು ಮತ್ತು ಬೇಟೆ ಕಲೆಗಳು ನಾಶವಾಗುತ್ತಿದ್ದು ಬುಡಕಟ್ಟು ಜನರು ತಮ್ಮ ಜೀವನೋಪಾಯಕ್ಕಾಗಿ ಬೃಹತ್ ಉದ್ದಿಮೆಗಳಲ್ಲಿ, ಗಣಿಗಾರಿಕೆಯಲ್ಲಿ ಜೀವನೋಪಾಯಕ್ಕಾಗಿ ಕೂಲಿ ಮಾಡುತ್ತಿದ್ದಾರೆ ಮತ್ತು ಮಾರಾಟಕ್ಕಾಗಿ ಉತ್ಪಾದಿಸಲು ಕಲಿತಿದ್ದಾರೆ.

ಹಂಚಿಕೆ ಮತ್ತು ವಿನಿಮಯ

ಉತ್ಪಾದನೆ, ಅನುಭೋಗ, ಆದಾಯ ಇತ್ಯಾದಿಗಳಷ್ಟೇ ಮಹತ್ವದ ಮತ್ತೊಂದು ಆರ್ಥಿಕ ಪರಿಭಾವನೆಯೆಂದರೆ ಹಂಚಿಕೆ ಅಥವಾ ಮರುಹಂಚಿಕೆ. ಉತ್ಪಾದನೆಯನ್ನು ಅಥವಾ ಉತ್ಪಾದನೆಯಿಂದ ಬಂದ ಆದಾಯವನ್ನು ಹೇಗೆ ಮರುಹಂಚಿಕೆ ಮಾಡಲಾಗುತ್ತಿತ್ತು ಎಂದು ವಿಚಾರಿಸಿದಾಗ ಮೊದ ಮೊದಲು ಅದು ಉಡುಗೊರೆಗಳ ಮೂಲಕ(ಗಿಫ್ಟ್ ಎಕಾನಮಿ), ಅರಮನೆ ಆರ್ಥಿಕತೆಯ ಮೂಲಕ, ಇತ್ತೀಚೆಗೆ ಮಾರುಕಟ್ಟೆ ಆರ್ಥಿಕತೆ ಹಾಗೂ ಯೋಜಿತ ಅರ್ಥವ್ಯವಸ್ಥೆಯಲ್ಲಿ ಕೇಂದ್ರೀಯ ಅಧಿಕಾರದ ಮೂಲಕ ಎಂದು ತಿಳಿಯುತ್ತದೆ.

ಆಧುನಿಕ ಆರ್ಥಿಕ ಪರಿಭಾಷೆಯಲ್ಲಿ ಹಂಚಿಕೆಯೆಂದರೆ 'ರಾಷ್ಟ್ರೀಯ ವರಮಾನವನ್ನು ಅದರ ಉತ್ಪನ್ನಕ್ಕೆ ಕಾರಣವಾದ ಉತ್ಪಾದನಾಂಗಗಳಲ್ಲಿ ಅಂದರೆ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆ

ಗಳಲ್ಲಿ(ಅವುಗಳ ಪ್ರಾಮುಖ್ಯತೆ ಹಾಗೂ ಶಕ್ತಿಗನುಗುಣವಾಗಿ) ಹಂಚುವುದು ಅಥವಾ ಉತ್ಪಾದಿಸಿದ ಸರಕು ಸೇವೆಗಳನ್ನು ಮಾರುಕಟ್ಟೆ ಮತ್ತು ಬೆಲೆ ತಾಂತ್ರಿಕತೆಯ ಮೂಲಕ ಹಂಚುವುದು ಎಂದು ಅರ್ಥೈಸಬಹುದು'. ಮಾರುಕಟ್ಟೆ ಮತ್ತು ಬೆಲೆ ತಾಂತ್ರಿಕತೆಗಳು ಅತ್ಯಂತ ಪ್ರಭಾವಶಾಲಿಯಾಗಿದ್ದು ಬಹುತೇಕ ಎಲ್ಲ ಆರ್ಥಿಕ ಚಟುವಟಿಕೆಗಳನ್ನು ಇವು ನಿಯಂತ್ರಿಸುತ್ತವೆ. ಇಲ್ಲಿ ಮಾನವ ತಾನು ಅನುಭೋಗಿಸದ, ತನಗೆ ಅವಶ್ಯಕವಿಲ್ಲದ ಆದರೆ ವಿನಿಮಯದಿಂದ ಹಣಗಳಿಸಬಹುದಾದ ವಸ್ತುಗಳನ್ನು ವಿನಿಮಯಕ್ಕಾಗಿಯೇ ಉತ್ಪಾದಿಸುತ್ತಾನೆ.

ಈ ಪ್ರಾಮುಖ್ಯತೆ ಹಾಗೂ ಶಕ್ತಿ ಕಾಲದಿಂದ ಕಾಲಕ್ಕೆ, ಸಮಾಜದಿಂದ ಸಮಾಜಕ್ಕೆ ಬದಲಾಗುತ್ತದೆ. ಬುಡಕಟ್ಟುಗಳು ಪ್ರವರ್ಧಮಾನದಲ್ಲಿದ್ದ ಕಾಲದಲ್ಲಿ ನಿಸರ್ಗ ಅಥವಾ ಭೂಮಿ ಹಾಗೂ ಶ್ರಮಗಳೆಂಬ ಎರಡೇ ಉತ್ಪಾದನಾಂಗಗಳಿದ್ದು ಅವುಗಳಲ್ಲಿ ಉತ್ಪಾದನೆ ಹಂಚಿಕೆಯಾಗುತ್ತಿತ್ತು. ಕಾರ್ಲ್ ಮಾರ್ಕ್ಸ್ ಹೇಳುವಂತೆ ಕೈಗಾರಿಕಾ ಕ್ರಾಂತಿಯ ನಂತರ ಬಂಡವಾಳಕ್ಕೆ ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದರಿಂದ ಬಂಡವಾಳ ಹೂಡುವವರು ಹಾಗೂ ಸಂಘಟನಕಾರರು ಇತರ ಉತ್ಪಾದನಾಂಗಗಳನ್ನು ವಂಚಿಸಿ ಉತ್ಪನ್ನವಾದ ಆದಾಯದ ಸಿಂಹಪಾಲನ್ನು ಪಡೆಯುತ್ತಿದ್ದಾರೆ. ಹಂಚಿಕೆಯಲ್ಲಿನ ಅಸಮಾನತೆ, ಶೋಷಣೆ, ಬಡವ ಶ್ರೀಮಂತ ವರ್ಗಗಳ ಸಂಘರ್ಷ ಇತ್ಯಾದಿಗಳು ಆಧುನಿಕ ಹಂಚಿಕೆಯ ಲಕ್ಷಣಗಳಾಗಿವೆ.

'ಬುಡಕಟ್ಟು ಪರಿಭಾಷೆಯಲ್ಲಿ ಹಂಚಿಕೆಯನ್ನು ಉತ್ಪಾದಿಸಿದ ಅಥವಾ ಸಂಗ್ರಹಿಸಿದ ವಸ್ತುಗಳನ್ನು ಉತ್ಪಾದಿಸಿದ ಗುಂಪಿನ ಸದಸ್ಯರ ನಡುವೆ(ಸಮನಾಗಿ) ವಿಭಜಿಸಿಕೊಳ್ಳುವುದು ಅಥವಾ ಪಾಲು ಮಾಡಿಕೊಳ್ಳುವುದು (ಉದಾ: ಬೇಟೆಗಾರರ ಗುಂಪು, ಕುಟುಂಬ, ಬುಡಕಟ್ಟು ಇತ್ಯಾದಿ) ಎಂದರ್ಥ.'[೭] ಬುಡಕಟ್ಟುಗಳಲ್ಲಿ ಹಂಚಿಕೆಯ ಸಮಾನತೆ ಪ್ರಮುಖ ಲಕ್ಷಣವಾಗಿದೆ. ಇಲ್ಲಿ ಸಿಕ್ಕ ಬೇಟೆಯನ್ನು ಬೇಟೆಗಾರರ ಗುಂಪು ಮಾತ್ರವಲ್ಲದೆ, ಬೇಟೆಗೆ ಬಾರದೆ ಕೇವಲ ತನ್ನ ಬಿಲ್ಲು ಬಾಣಗಳನ್ನು ನೀಡಿದ ಅಥವಾ ಅನಿವಾರ್ಯ ಕಾರಣಗಳಿಂದ ಮನೆಯಲ್ಲಿರುವ ಎಲ್ಲರಿಗೂ ಉತ್ಪಾದನೆ ಹಂಚಿಕೆಯಾಗುತ್ತದೆ. ಒಬ್ಬ ವ್ಯಕ್ತಿ ಬೇಟೆಯಾಡಿದ ಪ್ರಾಣಿಯನ್ನು ಹತ್ತಿರದಲ್ಲೇ ಇರುವ, ಅವಶ್ಯಕತೆ ಇರುವ ಇನ್ನೊಬ್ಬ ವ್ಯಕ್ತಿ ತೆಗೆದುಕೊಂಡು ಹೋಗಬಹುದು. ಒಬ್ಬ ನಿಷ್ಣಾತ ಬೇಟೆಗಾರನ ಬಳಿ ಇರುವಷ್ಟೇ ಮಾಂಸ ಸಾಧಾರಣ ಬೇಟೆಗಾರನಲ್ಲಿಯೂ ಇರುತ್ತಿತ್ತು ಅಥವಾ ಬೇಟೆಗೆ ಬಾರದಿರುವವನ ಬಳಿಯೂ ಇರುತ್ತಿತ್ತು. ಏಕೆಂದರೆ ದೊರಕಿದ ಬೇಟೆ ಅಥವಾ ಬೆಳೆಯನ್ನು ಸಮುದಾಯದವರೆಲ್ಲರೂ ಸಮಾನವಾಗಿ ಹಂಚಿಕೆ ಮಾಡಿಕೊಳ್ಳುತ್ತಿದ್ದರು. ಕಿನ್‌ಶಿಪ್ ಅಥವಾ ರಕ್ತಬಾಂಧವ್ಯ, ಭವಿಷ್ಯದ ಬಗೆಗೆ ಅತಿಯಾದ ನಿರೀಕ್ಷೆ ಇಡದಿರುವುದು, ಕೊಡುಗೆಪದ್ಧತಿ, ನಿಸರ್ಗದ ಮೇಲಿನ ಅಗಾಧ ನಂಬಿಕೆ, ಸೀಮಿತ ಬಯಕೆಗಳು ಮತ್ತು ಜನಸಂಖ್ಯೆ ಇತ್ಯಾದಿಗಳು ಇದಕ್ಕೆ ಕಾರಣವಾಗಿರಬಹುದು. ಸಿದ್ದಿಗಳಲ್ಲಿಯೂ ಮೊದಲು ಈ ರೀತಿಯ ಸಮಾನ ಹಂಚಿಕೆಯಿತ್ತೆಂದೂ, ಇದೀಗ ಬೇಟೆಯನ್ನೇ ನಿಷೇಧಿಸಿರುವುದರಿಂದ ಮತ್ತು ಅಧುನೀಕರಣದ ಪ್ರಭಾವದಿಂದ ಈ ರೀತಿಯ ಸಮಾನ ಹಂಚಿಕೆ ಕಣ್ಮರೆಯಾಗಿದೆಯೆಂದು

ಬಾಬ್ ಷಾ ಸಿದ್ದಿ ತಿಳಿಸಿದರು. ಬುಡಕಟ್ಟುಗಳ ಸಂಸ್ಕೃತಿಯಂತೆ 'ಬೇಟೆಯಲ್ಲಿ ನುರಿತರಲ್ಲದವರು ಹೆಚ್ಚಾಗಿ ಬೇಟೆಯಾಡದಿದ್ದರೂ ಯಾರ ಮನೆಯಲ್ಲೂ ಮಾಂಸದ ಕೊರತೆ ಇರುವುದಿಲ್ಲ. ಏಕೆಂದರೆ ಯಾರೇ ಬೇಟೆಯಾಡಿದರೂ ಮಾಂಸವನ್ನು ಸಾಮಾನ್ಯವಾಗಿ ಹಂಚಿಕೊಳ್ಳುತ್ತಾರೆ.'[೮]

ವಿನಿಮಯ

ಆಧುನಿಕ ಆರ್ಥಿಕತೆಯಲ್ಲಿ ವಿನಿಮಯವೆಂದರೆ ಮಾರುಕಟ್ಟೆಯಲ್ಲಿ ಬೆಲೆ ತಾಂತ್ರಿಕತೆಯ ಮೂಲಕ ಒಂದು ವಸ್ತುವಿಗೆ ಬದಲಾಗಿ ಅದರ ಮೌಲ್ಯಕ್ಕೆ ಸಮನಾದ ಅಥವಾ ಹೆಚ್ಚಿನ ಮೌಲ್ಯ ಹೊಂದಿದ ಇನ್ನೊಂದು ವಸ್ತುವನ್ನು ಪಡೆಯುವುದು ಅಥವಾ ಹಣದ ಮೂಲಕ ಸರಕು ಸೇವೆಗಳನ್ನು ಕೊಟ್ಟು ಪಡೆಯುವುದಾಗಿದೆ. ಏಕೆಂದರೆ ಅದು ಅವನ ಆಸ್ತಿಯಾಗಿದ್ದು ಅವನ ಭೂಮಿಯ, ಶ್ರಮದ, ಬಂಡವಾಳದ ಅಥವಾ ಸಂಘಟನೆಯ ಫಲವಾಗಿರುತ್ತದೆಂದು ಭಾವಿಸಿಕೊಳ್ಳುತ್ತಾನೆ.

ಬುಡಕಟ್ಟು ಆರ್ಥಿಕತೆಯಲ್ಲಿ ವಿನಿಮಯವೆಂದರೆ ಪ್ರತಿಫಲಾಪೇಕ್ಷೆಯಿಲ್ಲದೆ ತನ್ನಲ್ಲಿರುವ ಸರಕುಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದಾಗಿದೆ. ಏಕೆಂದರೆ ತನ್ನಲ್ಲಿರುವ ವಸ್ತು ತನ್ನದಲ್ಲ. ಅದು ಪ್ರಕೃತಿಯ ಕೊಡುಗೆಯಾಗಿದ್ದು ಅದರ ಮೇಲೆ ಎಲ್ಲರ ಅಧಿಕಾರವಿರುತ್ತದೆ. ನಾವೊಮ್ಮೆ ಕ್ಷೇತ್ರಕಾರ್ಯಕ್ಕೆಂದು ದಾಂಡೇಲಿ ಬಳಿಯ ಸಿದ್ದಿ ಹಾಡಿಯೊಂದಕ್ಕೆ ಭೇಟಿ ನೀಡಿದಾಗ ಅವನು ನಮಗೆ ಸಾಕು ಸಾಕೆನಿಸುವಷ್ಟು ಹಲಸು ಹಾಗು ಜೇನು ನೀಡಿದ. ಅಲ್ಲದೆ ಬೇಡವೆಂದರೂ ಆಗ್ರಹದಿಂದ ನಮ್ಮ ಜೀಪ್‌ನಲ್ಲಿ ಹಲಸಿನ ಹಣ್ಣುಗಳನ್ನು ಹಾಕಿದ. ಅದಕ್ಕೆ ಪ್ರತಿಫಲವಾಗಿ ಹಣ ನೀಡಲು ಹೋದಾಗ ಹಲಸಿನ ಮರ ನಮ್ಮ ಮನೆಯ ಅಂಗಳದಲ್ಲಿಯೇ ಇರಬಹುದು. ಆದರೆ ಮಳೆ ಸುರಿಸುವುದು, ಹೂ ಬಿಡುವುದು, ಹಣ್ಣಾಗುವುದು, ಎಲ್ಲವೂ ಪ್ರಕೃತಿಯ ಕೆಲಸ. ಅದಕ್ಕೆ ನಾನು ಹಣ ತೆಗೆದುಕೊಳ್ಳುವುದು ನ್ಯಾಯವಲ್ಲವೆಂದು ನಯವಾಗಿಯೇ ನಮ್ಮ ಹಣ ಬೇಡವೆಂದು ತಿಳಿಸಿದ.

ಕಾರ್ಲ್ ಪೋಲನಿ ತಮ್ಮ ಬೃಹತ್ ಪರಿವರ್ತನೆ(Great Transformation)ಯಲ್ಲಿ ಹೇಳುವಂತೆ, 'ಬುಡಕಟ್ಟು ಅಥವಾ ರೈತಾಪಿ ಸಮಾಜಗಳಲ್ಲಿ ಉತ್ಪಾದನೆ ಉತ್ಪಾದಕರಿಗಾಗಿ, ವಿನಿಮಯಕ್ಕಾಗಿ ಅಲ್ಲ. ಅಂದರೆ ಸ್ವಯಂ ಉಪಯೋಗಕ್ಕಾಗಿ ಉತ್ಪಾದನೆ. ಬಂಡವಾಳೇತರ-ಔದ್ಯಮಿಕಪೂರ್ವ ಆರ್ಥಿಕತೆಗಳಲ್ಲಿ ಮಾರುಕಟ್ಟೆ ವಿನಿಮಯಕ್ಕಿಂತಲೂ, ಮರುಹಂಚಿಕೆ ಮತ್ತು ಪರಸ್ಪರ(ನೀಡಿಕೆ) ಹಂಚಿಕೆಗಳು ಪ್ರಮುಖವಾಗಿರುತ್ತವೆ. ಪರಸ್ಪರ ವಿನಿಮಯದಲ್ಲಿ ಜನರು ತಮ್ಮ ದೀರ್ಘಕಾಲೀನ ಸಂಬಂಧಗಳಿಗಾಗಿ ಸರಕು ಸೇವೆಗಳನ್ನು ಪರಸ್ಪರ ಹಂಚಿಕೊಳ್ಳುತ್ತಾರೆ. ಮರುಹಂಚಿಕೆಯು ರಕ್ತಸಂಬಂಧ(Kinship based) ಆಧಾರಿತ ನಾಯಕತ್ವ ಅಥವಾ ಸಶಕ್ತ ರಾಜಕೀಯ ಕೇಂದ್ರದ(ಬುಡಕಟ್ಟು) ಮೂಲಕ ಸಾಂಸ್ಕೃತಿಕವಾಗಿ ನಿರ್ದಿಷ್ಟಪಡಿಸಿದ ನಂಬಿಕೆಗಳ ಆಧಾರದಲ್ಲಿ ಜೀವನಾವಶ್ಯಕ ಸರಕುಗಳನ್ನು ಸ್ವೀಕರಿಸಿ ಮರುಹಂಚಿಕೆ ಮಾಡಲಾಗುತ್ತದೆ.'[೯] ಇಲ್ಲಿ ಲಾಭಕ್ಕಿಂತ ಇಂದಿನ ದಿನಗಳಲ್ಲಿ ಅಪರೂಪವಾಗಿರುವ ಸಂಬಂಧ, ಸಮುದಾಯ, ಸಂಸ್ಕೃತಿ ಮತ್ತು ನೀತಿ ನಿಯಮಗಳೇ ಮುಖ್ಯವಾಗಿರುವುದೊಂದು ವಿಶೇಷವಾಗಿದೆ.

ವಾಸ್ತವಿಕ ಅರ್ಥಶಾಸ್ತ್ರವು ಆರ್ಥಿಕ ಚಟುವಟಿಕೆಗಳನ್ನು ಸ್ವತಂತ್ರವೆಂದು ಪರಿಗಣಿಸದೆ ಸಮಾಜದ ಧರ್ಮ, ರಾಜಕೀಯ ಹಾಗೂ ಮೌಲ್ಯಗಳ ಒಟ್ಟಂದದಿಂದ ನಿಯಂತ್ರಿಸಲ್ಪಟ್ಟಿವೆಯೆಂದು ಒಪ್ಪಿಕೊಳ್ಳುತ್ತದೆ. 'ಮಾನವಿಕ ಅರ್ಥಶಾಸ್ತ್ರದ ಭಾಗವಾದ ವಾಸ್ತವಿಕ ಅರ್ಥಶಾಸ್ತ್ರದ ಇನ್ನೊಂದು ಮೂಲ ಪರಿಕಲ್ಪನೆಯೆಂದರೆ 'ಒಳಗೊಳ್ಳುವಿಕೆ' ಅಥವಾ 'ಆವರಿಸುವಿಕೆ'. ಅಂದರೆ ಆರ್ಥಿಕತೆಯು ಪ್ರತ್ಯೇಕವಾಗಿರದೆ ಆರ್ಥಿಕ ಮತ್ತು ಅನಾರ್ಥಿಕ ಸಂಸ್ಥೆಗಳಿಂದ ಆವರಿಸಲ್ಪಟ್ಟಿದೆ. ವಿನಿಮಯವು ಪ್ರತ್ಯೇಕ ನಿರ್ವಾತ ಅಥವಾ ಶೂನ್ಯ ಸ್ಥಿತಿಯಲ್ಲಿರದೆ ಸಮಾಜದೊಳಗೆ, ಸಮಾಜದಿಂದ ನಿಯಂತ್ರಿಸಲ್ಪಟ್ಟಿದೆ. ಉದಾಹರಣೆಗೆ ಆರ್ಥಿಕತೆಗೆ ಧರ್ಮ ಹಾಗೂ ಸರಕಾರಗಳು ಕೂಡ ಆರ್ಥಿಕ ಸಂಸ್ಥೆಗಳಷ್ಟೇ ಪ್ರಮುಖವಾಗಿವೆ. ಜನರ ಜೀವನೋಪಾಯದಲ್ಲಿ ಸಾಮಾಜಿಕ ಸಾಂಸ್ಕೃತಿಕ ನಂಬಿಕೆಗಳು, ನಿಯಮಗಳು, ಮೌಲ್ಯಗಳು ಮುಖ್ಯ ಪಾತ್ರ ವಹಿಸುತ್ತದೆ. ಆದ್ದರಿಂದಲೇ ಸಾಮಾಜಿಕ ಸಾಂಸ್ಕೃತಿಕ ಮತ್ತು ರಾಜಕೀಯ ಅಂಶಗಳಿಂದ ದೂರ ಉಳಿದ ಅಥವಾ ಏಕಾಂಗಿಯಾದ ಆರ್ಥಿಕ ವಿಶ್ಲೇಷಣೆಗಳು ಮೂಲತಃ ದೋಷಪೂರಿತವಾಗಿರುತ್ತವೆ ಎನ್ನಬಹುದು.'[೧೦]

ಇಂದಿನ ಬಹುತೇಕ ಆರ್ಥಿಕ ವಿಶ್ಲೇಷಣೆಗಳು ಈ ದೋಷದಿಂದ ನರಳುತ್ತಿರುವುದು ಕಂಡು ಬರುತ್ತಿದೆ. ಸಮಾಜದ ವಿವಿಧ ಆಯಾಮಗಳ ನಡುವಿನ ಸಂಕೀರ್ಣ ಸಂಬಂಧವನ್ನು ಬೇರ್ಪಡಿಸಿ ಅರ್ಥಶಾಸ್ತ್ರವನ್ನು ವಿಶ್ಲೇಷಿಸುವುದು ಸಾಧುವಲ್ಲ. ಮಾರುಕಟ್ಟೆ ಆಧರಿತವಲ್ಲದ ಆರ್ಥಿಕತೆಗಳಲ್ಲಿ ಸಾಮಾನ್ಯವಾಗಿ ಮರುಹಂಚಿಕೆ ಮತ್ತು ಪರಸ್ಪರ ಹಂಚಿಕೆಗಳು ಜೊತೆಯಾಗಿಯೇ ಅಸ್ತಿತ್ವದಲ್ಲಿರುತ್ತವೆ. ಆದರೆ ಆಧುನಿಕ ಆರ್ಥಿಕತೆಯಲ್ಲಿ ಮಾರುಕಟ್ಟೆ ವಿನಿಮಯವೇ ಪ್ರಧಾನವಾಗಿದ್ದು ಪರಸ್ಪರ ಹಂಚಿಕೆ ಕುಟುಂಬದೊಳಗೆ ಅಥವಾ ಕುಟುಂಬಗಳ ನಡುವಿನ ಸಂಬಂಧಗಳಲ್ಲಿ ಅಸ್ತಿತ್ವದಲ್ಲಿದ್ದು, ಮರುಹಂಚಿಕೆ ಸರ್ಕಾರ, ಅರಮನೆ ಅಥವಾ ದತ್ತಿ ಸಂಸ್ಥೆಗಳ ಮೂಲಕ ಜರುಗುತ್ತದೆ. ಈ ಎಲ್ಲ ರೀತಿಯ ಹಂಚಿಕೆ ವ್ಯವಸ್ಥೆಗಳಿಗೂ ಪ್ರತ್ಯೇಕ ವಿಶ್ಲೇಷಣಾ ಪರಿಕರಗಳ, ಪರಿಕಲ್ಪನೆಗಳ ಅವಶ್ಯಕತೆಯಿದೆ.

ಹೀಗೆ ಸಾಮಾನ್ಯ ಅರ್ಥಶಾಸ್ತ್ರ ಮತ್ತು ಬುಡಕಟ್ಟು ಆರ್ಥಿಕತೆಯ ವಿಶ್ಲೇಷಣೆಯಲ್ಲಿ ಆರ್ಥಿಕ ಪರಿಕಲ್ಪನೆಗಳಿಗೆ ವಿಭಿನ್ನ ವಿಶೇಷ ಅರ್ಥ ಕಂಡುಬರುತ್ತಿದ್ದು ಅವುಗಳನ್ನು ಬುಡಕಟ್ಟುಗಳ ಹಿನ್ನೆಲೆ ಮತ್ತು ಆಶಯಗಳೊಡನೆ ಅರ್ಥ ಮಾಡಿಕೊಳ್ಳಬೇಕಾದ ಅವಶ್ಯಕತೆಯಿದೆ. ಸಿದ್ದಿಗಳಲ್ಲಿ ಈ ರೀತಿಯ ಕುಟುಂಬದೊಳಗಿನ ಪರಸ್ಪರ ಹಂಚಿಕೆ, ಮರುಹಂಚಿಕೆಗಳೂ, ಕುಲಪಂಚಾಯಿತಿ, ಸಹಕಾರಗಳು ಇನ್ನೂ ಉಳಿದಿದ್ದು ಅದಕ್ಕೆ ಅವರ ಜನಾಂಗೀಯ ವೈಶಿಷ್ಟ್ಯ, ಅಲ್ಪಸಂಖ್ಯಾತ ಅಸ್ಮಿತೆಯೂ ಕಾರಣವಾಗಿರಬಹುದು. ಇತ್ತೀಚಿನ ಕೆಲವು ಪ್ರಸಂಗಗಳಲ್ಲಿ(ಬಾಬ್ ಶಾ ಸಿದ್ದಿ) ಹಂಚಿಕೆಯ ಕೆಲವು ವಿವಾದಗಳು ಕೋರ್ಟ್ ಮೆಟ್ಟಿಲೇರಿರುವುದು ವಿಷಾದನೀಯ.

ಅನುಭೋಗ

ಸರಕು ಸೇವೆಗಳಲ್ಲಿರುವ ತುಷ್ಟಿಗುಣವನ್ನು ಬಳಸಿಕೊಂಡು ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳುವ ಪ್ರಕ್ರಿಯೆಗೆ ಸಾಮಾನ್ಯವಾಗಿ ಅನುಭೋಗ ಎನ್ನಲಾಗುತ್ತದೆ. ಬೆಲೆ, ಸರಕುಗಳ ಸ್ವರೂಪ ಅವಶ್ಯಕ,

ಹಿತಕರ, ಐಶಾರಾಮದ ವಸ್ತುವೋ ಪ್ರದರ್ಶನದ ವಸ್ತುವೋ ಬೇಡಿಕೆ–ಪೂರೈಕೆಗಳ ಸ್ಥಿತಿಸ್ಥಾಪಕತ್ವ, ಅಕ್ಕಪಕ್ಕದವರ ಅನುಭೋಗ, ಜಾಹೀರಾತು, ಬೆಲೆ ಕಡಿತ, ಉಚಿತ ಕೊಡುಗೆಗಳ ಆಮಿಷ ಇತ್ಯಾದಿಗಳು ಅನುಭೋಗವನ್ನು ನಿರ್ಧರಿಸುತ್ತವೆ. ಬುಡಕಟ್ಟು ಆರ್ಥಿಕತೆಯಲ್ಲಿ ಅನುಭೋಗಕ್ಕೆ ವಿಶಾಲವಾದ ಅರ್ಥವಿದ್ದು ವಸ್ತುವಿನ ಉಪಯೋಗ ಮಾತ್ರವಲ್ಲದೆ ಪೂಜೆ, ಆಚರಣೆ, ಅಂತ್ಯಸಂಸ್ಕಾರ ಮುಂತಾದ ಸಮಯದಲ್ಲಿ ವಸ್ತುಗಳನ್ನು ಸುಡುವ, ಹೂಳುವ, ಸಾಮಾನ್ಯರ ದೃಷ್ಟಿಯಲ್ಲಿ ಹಾಳುಮಾಡುವ ಕ್ರಿಯೆಗಳೂ ಅನುಭೋಗವೆನಿಸುತ್ತವೆ.

ಅನುಭೋಗ ಒಂದು ಅತ್ಯಂತ ಪ್ರಮುಖ ಆರ್ಥಿಕ ಕ್ರಿಯೆಯಾಗಿದ್ದು ವಿವಿಧ ಆರ್ಥಿಕ ಪರಿಕಲ್ಪನೆಗಳನ್ನು ಬುಡಕಟ್ಟು ದೃಷ್ಟಿಕೋನದಿಂದ ವಿವೇಚಿಸಿದರೆ ಅವರ ಅನುಭೋಗ ಕೇವಲ ನೇರವಾಗಿ ವಸ್ತುಗಳನ್ನು ಉಪಯೋಗಿಸುವುದು ಮಾತ್ರವಲ್ಲದೇ ಔತಣಕೂಟ ನೀಡುವುದು. 'ಮೃತರ ಜೊತೆಗೆ ಅವರ ಇಷ್ಟದ ವಸ್ತುಗಳನ್ನು, ಮೃತರಾದ ಮನೆ, ಲಾಡ್ಜ್ ಮುಂತಾದವುಗಳನ್ನು ಅವರ ಜೊತೆಗೇ ಸುಡುವ–ಹೂಳುವ ಪದ್ಧತಿ ಹೇಗೆ ಹೊಸ ಉತ್ಪಾದನೆಗೆ ಪುನಃಶ್ಚೇತನ ನೀಡುತ್ತಿತ್ತು ಎನ್ನುವುದನ್ನು ಅಮರಿಂಡ್ ಬುಡಕಟ್ಟಿನ ಇಂತಹುದೇ ಉದಾಹರಣೆಯಿಂದ ತಿಳಿಯಬಹುದಾಗಿದೆ. ಲ್ಹೋಟಾ ಬುಡಕಟ್ಟಿನ ಇನ್ನೊಂದು ವಿಚಿತ್ರ ನಂಬುಗೆ ಎಂದರೆ ಅಕಾಲಿಕ ಹಾಗೂ ಆಕಸ್ಮಿಕ ಮರಣದ ಸಮಯದಲ್ಲಿ ಅವರಿಗೆ ಸೇರಿದ ವಸ್ತುಗಳನ್ನು ಬೇರೆ ಯಾರೂ ಬಳಸದೇ ಹಾಳಾಗಿ ಹೋಗುವುದು. ಅವರ ಹೊಲದಲ್ಲಿ ಬೆಳೆದು ನಿಂತ ಫಸಲನ್ನು ಯಾರೂ ಕೊಯ್ಯುವುದಿಲ್ಲ. ಅವರ ಪಶುಸಂಪತ್ತನ್ನು ಹಾಗೆಯೇ ಕಾಡಿಗೆ ಅಟ್ಟಲಾಗುತ್ತದೆ. ಇಲ್ಲವೇ ಬೆಟ್ಟದ ತುದಿಯಿಂದ ಅವುಗಳನ್ನು ಕೆಳಕ್ಕೆ ತಳ್ಳುತ್ತಾರೆ.'[೧೧] ಅಂದರೆ ಪುನರ್ಜನ್ಮ ಅಥವಾ ಮೃತ ವ್ಯಕ್ತಿಯ ಆತ್ಮದ ನೆರಳು ಎಂಬ ನಂಬಿಕೆಗಳು ಮೃತರ ವಸ್ತುಗಳನ್ನು ಅನುಭೋಗಿಸದಂತೆ ನಿಯಂತ್ರಿಸುತ್ತಿದ್ದವು.

'ಹಲವಾರು ನಾಗಾ ಹಳ್ಳಿಗಳಲ್ಲಿ ಅತ್ಯುತ್ತಮವಾದ ಕಸೂತಿಯ ವಸ್ತ್ರಗಳನ್ನು ಎಲ್ಲರಿಗೂ ಧರಿಸಲು ಅವಕಾಶವಿಲ್ಲ. ಅವರೆಷ್ಟೇ ಶ್ರೀಮಂತರಿದ್ದರೂ ದೊಡ್ಡ ದೊಡ್ಡ ಔತಣಕೂಟಗಳನ್ನು ಆಯೋಜಿಸುವ, ಮಾನವಬೇಟೆ(Head Hunting) ಅಥವಾ ಹುಲಿ ಬೇಟೆಯಾಡಿದವರಿಗೆ ಮಾತ್ರ ಈ ಸೌಲಭ್ಯವಿದ್ದು ಬ್ರಿಟಿಷ್ ಸರ್ಕಾರ ಮಾನವಬೇಟೆಯನ್ನು ನಿಷೇಧಿಸಿದ ಮೇಲೆ ಈ ಕಲೆ ಸಂಪೂರ್ಣ ನಶಿಸಿ ಹೋಗಿದೆ.'[೧೨]

ಬುಡಕಟ್ಟುಗಳಲ್ಲಿ ಜಾಹಿರಾತು, ಆಮಿಷಗಳ ಬದಲು ಪ್ರಕೃತಿ, ಋತುಮಾನ, ಸಾಮಾಜಿಕ ನಂಬಿಕೆ, ನಿರ್ಬಂಧ(ಟ್ಯಾಬೂ), ಕುಲಚಿಹ್ನೆ, ಆಚರಣೆ, ಅವಶ್ಯಕತೆ, ಅನಿವಾರ್ಯತೆ, ಅದೃಷ್ಟ ಇತ್ಯಾದಿಗಳು ಅನುಭೋಗವನ್ನು ನಿರ್ಧರಿಸುತ್ತವೆ. ಅಲ್ಲದೆ ಬುಡಕಟ್ಟು ಆರ್ಥಿಕತೆ ಆಧುನಿಕ ಆರ್ಥಿಕತೆಯಂತೆ ಅನುಭೋಗಕೇಂದ್ರಿತ ಅಥವಾ ಕೊಳ್ಳುಬಾಕ ಸಂಸ್ಕೃತಿಯಾಗಿಲ್ಲ. ಅನುಭೋಗ ಒಂದು ನೈಸರ್ಗಿಕ, ಜೈವಿಕ ಕ್ರಿಯೆಯಾಗಿದೆ. ಅನಾವಶ್ಯಕ ವಸ್ತುಗಳನ್ನು ಕೊಂಡು ಗುಡ್ಡೆ ಹಾಕಿಕೊಂಡು ಪ್ರದರ್ಶಿಸುವ ಪ್ರವೃತ್ತಿಯಿಲ್ಲ. ಹೀಗಾಗಿ ಬಹಳಷ್ಟು ಜನ ತುಂಬಾ ಬಡತನದಲ್ಲಿದ್ದಾರೆ, ಜೀವನ ತುಂಬಾ ಕಷ್ಟವಾಗಿರಬೇಕು ಎಂದುಕೊಳ್ಳುತ್ತಾರೆ. ಆದರೆ ಅವರು ಇದ್ದುದರಲ್ಲಿ ತೃಪ್ತಿಪಡುವ ಸಂತೃಪ್ತರು. ಸಂತೃಪ್ತರಿಗೆ ಯಾವ

ಕೊರತೆಯೂ ಅತೃಪ್ತಿ ಉಂಟುಮಾಡುವುದಿಲ್ಲ ಮತ್ತು ಅತೃಪ್ತನಿಗೆ ಯಾವ ಸಂಪತ್ತೂ ತೃಪ್ತಿ ನೀಡುವುದಿಲ್ಲ.

"ತದಾ ರಮ್ಯಾಣ್ಯ ರಮ್ಯಾಣಿ ಪ್ರಿಯಾಃ ಶಲ್ಯಂ ತದಾಸವಃ
ತದೈಕಾಕೀ ಸ ಬಂಧುಃ ಸನ್ನಿಷ್ಟೇನ ರಹಿತೋ ಯದಾ॥"

'ಇದೊಂದು ವಿಚಿತ್ರ ಸಂಗತಿ. ನಮಗೆ ಬೇಕಾದ ವಸ್ತು ಅಲ್ಲವಾದರೆ ಅದು ಸುಂದರವಾಗಿದ್ದರೂ ವಿಕಾರವಾಗಿಯೇ ತೋರುತ್ತದೆ. ಬೇಕಾದದ್ದಾಗಿದ್ದರೆ ಅದು ವಿಕಾರವಾಗಿದ್ದರೂ ಸುಂದರವಾಗಿಯೇ ಕಾಣುತ್ತದೆ. ಬೇಡವಾದರೆ ಪ್ರಿಯವಾದ ಪ್ರಾಣವೂ ಮುಳ್ಳಿನಂತೆ ಯಾತನೆ ಕೊಡುತ್ತದೆ. ಬಂಧುಗಳಿದ್ದರೂ ಬೇಡವಾದಾಗ ಒಬ್ಬಂಟಿತನ ಕಾಡುತ್ತದೆ. ಬೇಕು ಬೇಡ ಇದೆಲ್ಲವೂ ನಮ್ಮ ಮನಸ್ಸಿನ ತೀರ್ಮಾನದಂತೆ ಆಗುತ್ತದೆ.'[೧೨]

ಈ ಮಾತು ಆಧುನಿಕ ಆರ್ಥಿಕತೆಯ ಅಸಂತೃಪ್ತಿಗೆ ನಿಜವಾದ ಕಾರಣವನ್ನು ನೀಡುತ್ತದೆ. ಮಾರುಕಟ್ಟೆ ಶಕ್ತಿಗಳು ಈ ಮನಸ್ಸಿನ ತೀರ್ಮಾನವನ್ನು ತಮಗನುಕೂಲವಾಗುವಂತೆ ಬದಲಾಯಿಸಲು ಜಾಹೀರಾತಿನಂತಹ ವಿಧಾನಗಳ ಮೊರೆ ಹೋಗುತ್ತವೆ. ವಾಣಿಜ್ಯಶಾಸ್ತ್ರದ ಒಂದು ಹೇಳಿಕೆ– 'ಜಾಹಿರಾತಿಲ್ಲದ ವ್ಯವಹಾರ ಕತ್ತಲಲ್ಲಿ ನಿಂತು ಯುವತಿಗೆ ಕಣ್ಣು ಹೊಡೆದಷ್ಟೇ ನಿರರ್ಥಕ' ಎನ್ನುತ್ತದೆ. (Business without Advertisement is like winking at the girl in the darkness).

ಇದಾವುದರ ಪ್ರಭಾಕ್ಕೂ ಅಷ್ಟೊಂದು ಒಳಗಾಗದ ಸಿದ್ದಿಗಳಲ್ಲಿ ಈ ಬಗೆಯ ಭೌತಿಕತೆಗಿಂತಲೂ ಮಿಗಿಲಾದ ಮಾನಸಿಕ ಸಂತೃಪ್ತಿ ಇತ್ತು ಮತ್ತು ಈಗಲೂ ಇದೆ. ಅವರ ತುಟಿಗಳ ಮೇಲೆ ಮುಗುಳ್ನಗೆ ಮಾಸಿಲ್ಲ. ಅವರ ಮನೆಗಳು ಈಗಲೂ ಸರಳ ಮತ್ತು ಅಲ್ಲಿ ಹೆಚ್ಚಿನ ವಸ್ತುಗಳು ಇರುವುದಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಅಧುನೀಕರಣದ ಗಾಳಿಗೆ ಸಿಲುಕಿ ಅವರೂ ಭೌತಿಕ ವಸ್ತುಗಳ ಕಡೆಗೆ ಸೆಳೆಯಲ್ಪಡುತ್ತಿದ್ದಾರೆ ಮತ್ತು ಅದರಿಂದಾಗಿಯೇ ತಮ್ಮ ಸಹಜ ಸಂತೋಷದಿಂದ ದೂರ ಸರಿಯುತ್ತಿದ್ದಾರೆ ಎನಿಸುತ್ತಿದೆ.

ಬಡತನ

ಆಧುನಿಕ ಆರ್ಥಿಕತೆಯಲ್ಲಿ ಸರಕು, ಸೇವೆ, ಹಣ, ಸಂಪತ್ತನ್ನು ಇತರರಿಗೆ ದೊರೆಯದಂತೆ ತನ್ನಲ್ಲಿಯೇ ಸಂಗ್ರಹಿಸಿ, ಸಾಧ್ಯವಾದರೆ ಇತರರನ್ನು ಶೋಷಿಸಿ, ಇತರರಿಗೆ ಮೋಸ ಮಾಡಿ, ತನ್ನ ಬುದ್ಧಿಶಕ್ತಿ, ಹಣದ ಶಕ್ತಿ, ದೈಹಿಕ ಶಕ್ತಿಯನ್ನು ಬಳಸಿ ದುರ್ಬಲರನ್ನು ದಮನ ಮಾಡಲಾಗದವರನ್ನು, ತನ್ನ ಬೇಡಿಕೆಗಳಿಗಿಂತ ಕಡಿಮೆ ಆದಾಯ ಗಳಿಸುವವರನ್ನು ಬಡವ ಎನ್ನಲಾಗುತ್ತದೆ. ಸಮಾಜದಲ್ಲಿ ಅವನ ಸ್ಥಾನಮಾನ ತುಂಬಾ ನಿಕೃಷ್ಟವಾಗಿರುತ್ತದೆ. ಅರ್ಥಿಕಾಭಿವೃದ್ಧಿ, ಕೈಗಾರಿಕಾ ಕ್ರಾಂತಿ, ಜಾಗತೀಕರಣ ಇತ್ಯಾದಿಗಳ ನೇರ ಪರಿಣಾಮವೆಂದರೆ ಇಡೀ ಸಮಾಜದ, ಬಡವರು ಮತ್ತು ಶ್ರೀಮಂತರು ಎಂಬ ಸ್ಪಷ್ಟ ವಿಭಜನೆ. ಈ ಆರ್ಥಿಕ ಅಸಮತೋಲನ, ಅಸಮಾನತೆ, ವಿಷಮ ಹಂಚಿಕೆಗಳು ಇಂದಿನ

ಹಲವಾರು ಸಮಸ್ಯೆಗಳ ಮೂಲ ಕಾರಣ ಮಾತ್ರವಾಗಿರದೆ ಮೂಲ ಸಮಸ್ಯೆಗಳೂ ಆಗಿವೆ. ಈಗಾಗಲೇ ಹಂಚಿಕೆ ಮತ್ತು ವಿನಿಮಯದಲ್ಲಿ ವಿವರಿಸಿದಂತೆ ಹಂಚಿಕೆ, ವಿನಿಮಯ, ಪುನರ್ ವಿನಿಮಯದಲ್ಲಿ ಸರ್ಕಾರದ ಪಾತ್ರ ಪ್ರಮುಖವಾಗಿದ್ದು ಅದೂ ಕೂಡ ಉಳ್ಳವರ ಪರವಾಗಿಯೇ ನಿಂತಿರುವುದು ಈ ಅಂತರಕ್ಕೆ ಪ್ರಮುಖ ಕಾರಣವಾಗಿದೆ.

ಬುಡಕಟ್ಟು ಆರ್ಥಿಕತೆಯಲ್ಲಿ ಹಂಚಿಕೆ ವ್ಯಕ್ತಿಯ ನೈತಿಕತೆ, ಸಮುದಾಯದ ನೀತಿ, ನಿಯಮ ಸಂಪ್ರದಾಯಗಳಿಂದ ನಿರ್ಧಾರವಾಗುತ್ತವೆ. ಅಲ್ಲಿ ಈ ರೀತಿ ಸಂಪತ್ತನ್ನು ಸ್ವಂತಕ್ಕೆ ಸಂಗ್ರಹಿಸುವವರನ್ನು ಬಡವರೆಂದು ಪರಿಗಣಿಸಲಾಗುತ್ತದೆ. ತನಗೆ ದೊರೆತ ಬೇಟೆಯನ್ನು ಇತರರೊಂದಿಗೆ ಹಂಚಿಕೊಳ್ಳುವವರನ್ನು, ಆಕಸ್ಮಿಕವಾಗಿ ದೊರೆತ ಅಪಾರ ಹಣವನ್ನು ತನ್ನ ಕುಲಬಾಂಧವರಿಗೆ ಉಡುಗೊರೆ, ಔತಣಕೂಟ ನೀಡುವ ಮೂಲಕ ಹಣವನ್ನೆಲ್ಲ ವೆಚ್ಚ ಮಾಡುವ ಮೂಲಕ ತನ್ನ ಮೊದಲಿನ ಸ್ಥಿತಿಗೇ ಮರಳುವವರನ್ನು ಶ್ರೀಮಂತರೆಂದು ಪರಿಗಣಿಸಲಾಗುತ್ತದೆ. ಸಮುದಾಯದಲ್ಲಿ ಅವರಿಗೆ ಉನ್ನತ ಸ್ಥಾನಮಾನ ದೊರೆಯುತ್ತದೆ. ಹಾಗೆ ನೋಡಿದರೆ ಬುಡಕಟ್ಟುಗಳಲ್ಲಿ ಬಡವ ಶ್ರೀಮಂತ ಎಂಬ ವರ್ಗಗಳೇ ಇಲ್ಲ. ಇರುವುದೆಲ್ಲ ಎಲ್ಲರಿಗೂ ಸೇರಿದ್ದು ಎಂದಾಗ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಆಧುನಿಕ ದೃಷ್ಟಿಯಲ್ಲಿ ಸಿದ್ದಿಗಳು ಬಡವರಂತೆ ಕಂಡುಬಂದರೂ ಇದ್ದುದರಲ್ಲಿಯೇ ತೃಪ್ತಿಪಡುವ ಇವರ ವಿಶೇಷ ಗುಣದ ಬಗ್ಗೆ ಎಲ್ಲರೂ ಹೇಳುತ್ತಾರೆ, ಅಲ್ಪತೃಪ್ತರೆಂದೂ ಕೆಲವರು ತೆಗಳುತ್ತಾರೆ. ಆದರೆ ತಮ್ಮ ಕಷ್ಟಗಳ ನಡುವೆಯೂ ಪರಸ್ಪರ ಸಹಕರಿಸುವ, ಹಂಚಿಕೊಳ್ಳುವ, ನಾಳೆಯ ಚಿಂತೆಯಿಲ್ಲದೆ ವೆಚ್ಚ ಮಾಡುವ ಮನೋಭಾವದಿಂದಾಗಿ ಬುಡಕಟ್ಟು ದೃಷ್ಟಿಯಲ್ಲಿ ಅವರನ್ನು ಬಡವರೆನ್ನಲಾಗದು. 'ಸಿದ್ದಿನ್ಯಾಸ'ವು ಅವರ ಸಾಮೂಹಿಕ ಔತಣಕೂಟ ಮತ್ತು ಹಂಚಿಕೆಯ ಅತ್ಯುನ್ನತ ಉದಾಹರಣೆಯಾಗಿದೆ.

ಪೊಟ್‌ಲೊಚ್ ಅಥವಾ ಸಾಮೂಹಿಕ ಔತಣಕೂಟ



ಸಾಟಿಪದ್ಧತಿ

ಈ ಬುಡಕಟ್ಟು ಜನರ ಬಯಕೆಗಳೂ ಸೀಮಿತ ಹಾಗೂ ಸರಕುಗಳೂ ಸರಳ. ಮೇಲಾಗಿ 'ವಿನಿಮಯದ ಮೌಲ್ಯ ನಿರ್ಧರಿಸುವ ನಿರ್ದಿಷ್ಟ ಪ್ರಮಾಣವಿಲ್ಲದಿರುವುದು. ಕುಲ-ರಕ್ತಬಾಂಧವ್ಯದ



ಪ್ರಾಧಾನ್ಯತೆಗಳು ಈ ಆರ್ಥಿಕತೆಯನ್ನು ಸರಳವಾಗಿಟ್ಟಿವೆ. ತಮ್ಮಲ್ಲಿಲ್ಲದ ಸರಕುಗಳನ್ನು ಇನ್ನೊಬ್ಬರಿಂದ ಕೊಡುಗೆಯಾಗಿ ಪಡೆಯುವ ಮೂಲಕ ಅಥವಾ ಬೇರೆ ಪ್ರದೇಶದ ಸರಕುಗಳನ್ನು ಪಕ್ಕದ ಬುಡಕಟ್ಟುಗಳ ಸಹಾಯ-ಕೊಡುಗೆ ಮೂಲಕ ಪಡೆಯುತ್ತಾರೆ. ಇತ್ತೀಚಿಗೆ ತಂಬಾಕಿನ ಬಳಕೆ ಹೆಚ್ಚಾಗುತ್ತಿದ್ದು ಅದು ಯುರೋಪಿನಿಂದಲೇ ಬರಬೇಕಿರುವುದರಿಂದ ಆಧುನಿಕ ವ್ಯಾಪಾರದ ಪ್ರವೇಶವಾಗುತ್ತಿದೆ.'[೧೪]

ವಿಜ್ಞಾನ, ತಂತ್ರಜ್ಞಾನ, ಯಂತ್ರಗಳನ್ನು ಬಳಸಿಕೊಂಡ ಆರ್ಥಿಕತೆ ಸಮುದಾಯವನ್ನು ನಾಶ ಮಾಡಿ ವೈಯಕ್ತಿಕತೆಯನ್ನು ವೈಭವೀಕರಿಸಿವೆ. ಪರಸ್ಪರ ಸಹಕಾರ ಬಯಸುತ್ತಿದ್ದ ಸಾಟಿಪದ್ಧತಿಯನ್ನು ಅಳಿಸಿ ಹಣವೆಂಬ ದೈತ್ಯಶಕ್ತಿಯನ್ನು ಸೃಷ್ಟಿಸಿವೆ. ಏಕೆಂದರೆ ಹಣದ ಆವಿಷ್ಕಾರಕ್ಕೆ ಕಾರಣವಾದ ಸಾಟಿ ಪದ್ಧತಿ ಅಪ್ರಾಯೋಗಿಕವೆಂಬ ಹಣೆಪಟ್ಟಿ ಹೊತ್ತು ಅವಸಾನವಾದ ಈ ಪದ್ಧತಿಯಲ್ಲಿ ಸರಕು ಸೇವೆಗಳಿಗೆ ಬದಲಾಗಿ ಸರಕು ಸೇವೆಗಳನ್ನು ವಿನಿಮಯ ಮಾಡಿಕೊಳ್ಳಲಾಗುತ್ತಿತ್ತು. ಆಗ ಹಾಡಿ ಅಥವಾ ಹಳ್ಳಿಗಳಲ್ಲಿ ಎಲ್ಲರ ಬಳಿಯೂ ಎತ್ತು, ಎಮ್ಮೆ, ಬಂಡಿ, ಗಾಣಗಳಿರುತ್ತಿರಲಿಲ್ಲ. ಆದರೆ ಇದ್ದವರು ಇಲ್ಲದವರಿಗೆ ಅವರಿಗೆ ಅವಶ್ಯಕವಿದ್ದಾಗ ನೀಡುತ್ತಿದ್ದರು. ಅದಕ್ಕೆ ಬದಲಾಗಿ ಅವರ ಬಳಿ ಇರುವ ಏನನ್ನಾದರೂ ವಸ್ತು ಅಥವಾ ಸೇವೆಯನ್ನು ಇವರು ಬಳಸಿಕೊಳ್ಳುತ್ತಿದ್ದರು. ಅದಿಲ್ಲದಿದ್ದರೆ ಕೂಲಿ ಮಾಡಿ ಆ ಋಣ ತೀರಿಸುತ್ತಿದ್ದರು. ಕುಂಬಾರರು, ಕಮ್ಮಾರರು, ಬಡಗಿಗಳು ವರ್ಷವೆಲ್ಲಾ ಇತರರಿಗೆ ಸಹಾಯ ಮಾಡಿ ಸುಗ್ಗಿಗೆ ಅವರಿಂದ ದವಸ ಧಾನ್ಯ ಪಡೆಯುತ್ತಿದ್ದರು. ಇದರಿಂದ ಸಂಪತ್ತು ಹಳ್ಳಿಯಲ್ಲೇ ಹಂಚಿಕೆಯಾಗುತ್ತಿತ್ತಲ್ಲದೆ ಹಳ್ಳಿಗಳು ಸ್ವಾವಲಂಬಿಗಳಾಗಿದ್ದವು. ಹೀಗೆ ಪರಸ್ಪರ ಸಹಕಾರ ಋಣಾನುಬಂಧದ ಭಾವನೆಯಿದ್ದ ಈ ಪದ್ಧತಿಯ ನಂತರ ಬಂದ ಹಣದ ಆರ್ಥಿಕತೆಯಲ್ಲಾದರೋ ಪ್ರತಿಯೊಬ್ಬರೂ ತಮ್ಮದೇ ಆದ ಕಾರು, ಬೈಕು ಹೊಂದಿದ್ದಾರಲ್ಲದೆ ಅದರಲ್ಲಿ ಒಬ್ಬರೇ ಹೋಗುತ್ತಾರಾಗಲೀ ಅಕ್ಕ ಪಕ್ಕದವರನ್ನು, ಸಹೋದ್ಯೋಗಿಗಳನ್ನು ಹತ್ತಿಸಿಕೊಂಡು ಹೋಗುವ ಸೌಜನ್ಯವೂ ಇಲ್ಲವಾಗಿದೆ. ಒಂದೇ ಮನೆಯಲ್ಲಿರುವ ಎಲ್ಲರಿಗೂ ಒಂದೊಂದು ವೆಹಿಕಲ್, ಟಿವಿ, ಸೋಪು, ಶಾಂಪು, ಪೇಸ್ಟು ಬೇಕಾಗಿವೆ. ರಿಮೋಟ್‌ಗಾಗಿ ತಮ್ಮನನ್ನೇ ಕೊಂದ ಅಣ್ಣ, ಆತ್ಮಹತ್ಯೆ ಮಾಡಿಕೊಂಡ ತಂಗಿ, ತಾನು ಹೇಳಿದ ವಸ್ತು ತರಲಿಲ್ಲವೆಂದು ಡೈವೋರ್ಸ್ ಕೊಡುವ ಹೆಂಡತಿಯರ ಉದಾಹರಣೆಗಳೇ ಸಾಕಷ್ಟಿವೆ. ತಾವೇ ಸೃಷ್ಟಿಸಿದ ಯಂತ್ರಗಳ, ಹಣದ ದಾಸರಾಗಿದ್ದಾರೆ ಮನುಷ್ಯರು. ಗ್ರಾಮೀಣ ಪ್ರದೇಶಗಳಲ್ಲಿ, ವಿದೇಶಿ ವ್ಯಾಪಾರದಲ್ಲಿ ಇಂದಿಗೂ ಸಾಟಿಪದ್ಧತಿ ಚಲಾವಣೆಯಲ್ಲಿದೆ.

ಹಣ-ಆಸ್ತಿ-ಸಂಪತ್ತು

ಆಧುನಿಕ ಆರ್ಥಿಕತೆಯಲ್ಲಿ ಆಸ್ತಿಯು ವೈಯಕ್ತಿಕ ಆಸ್ತಿಯಾಗಿರುತ್ತದೆ. ಅದನ್ನು ಅವನು ತನಗೆ ಇಷ್ಟಬಂದಂತೆ ಬಳಸಿಕೊಳ್ಳುವ ಅಧಿಕಾರವಿರುತ್ತದೆ. ಬುಡಕಟ್ಟುಗಳಲ್ಲಿ ಆಸ್ತಿಯು ಸಾಮಾನ್ಯವಾಗಿ ಬುಡಕಟ್ಟಿನ ಸಾಮೂಹಿಕ ಮಾಲೀಕತ್ವಕ್ಕೊಳಪಟ್ಟಿರುತ್ತದೆ ಮತ್ತು ಸೈದ್ಧಾಂತಿಕವಾಗಿ ಆ ಕುಲದ ಯಾವುದೇ ಸದಸ್ಯನಿಗೂ ಅದರ ಉಪಯೋಗದ ಅಧಿಕಾರವಿರುತ್ತದೆ.

ನಮ್ಮ ಆಧುನಿಕ ಅರ್ಥವ್ಯವಸ್ಥೆಯಲ್ಲಿ ವಿನಿಮಯಕ್ಕೆ ಸಹಾಯ ಮಾಡುವ ಯಾವುದೇ ವಸ್ತುವನ್ನು ಹಣವೆಂದು ಪರಿಗಣಿಸುತ್ತೇವೆ. ಆ ಅರ್ಥದಲ್ಲಿ ಹಣ, ಬ್ಯಾಂಕ್ ಠೇವಣಿ, ಕ್ರೆಡಿಟ್ ಕಾರ್ಡ್,

ಭೂಮಿ, ಮನೆ, ಶೇರು ಇತ್ಯಾದಿಗಳನ್ನು ಆಸ್ತಿಯೆಂದು ಪರಿಗಣಿಸಿದರೆ ಬುಡಕಟ್ಟು ಜನರ ಅರ್ಥವ್ಯವಸ್ಥೆಯಲ್ಲಿ ಆಸ್ತಿಗಳೆಂದರೆ ಯಾವುವೆಂದು ವಿವೇಚಿಸುತ್ತಾ ಅಲ್ಲಿ ದೇವರು, ಹಬ್ಬ, ಆಚರಣೆ, ಹಸು, ಆಯುಧಗಳು, ತಂಬಾಕು, ಮಾತು, ಮಂತ್ರ ತಂತ್ರಗಳೂ ಹೇಗೆ ಖಾಸಗಿ ಆಸ್ತಿಯೆಂದು ಪರಿಗಣಿಸಲ್ಪಡುತ್ತವೆ, ಅವುಗಳನ್ನು ಪಡೆಯಲು ಏನೆಲ್ಲ ಬೆಲೆ ತೆರಬೇಕಾಗುತ್ತದೆ, ಆಸ್ತಿಗಳಂತೆ ಅವುಗಳನ್ನೂ ಹೇಗೆ ಕದಿಯಬಹುದೆಂಬುದನ್ನು ವಿವರಿಸಲಾಗಿದೆ. 'ಅವರ ನಂಬಿಕೆಯಂತೆ 'ಮಂತ್ರ'ಗಳು ಅತ್ಯಂತ ಖಾಸಗಿ ಆಸ್ತಿಯಾಗಿದ್ದು ಅವು ಕುಟುಂಬದಲ್ಲೇ ವಂಶಪಾರಂಪರ್ಯವಾಗಿ ಮುಂದುವರೆಸಲ್ಪಡುತ್ತವೆ. ಆದರೆ ಅದಕ್ಕಾಗಿ ಸ್ವಂತ ಮಗ ಅಥವಾ ಸೋದರಿಯ ಮಗ ಯಾವುದೇ ಬೆಲೆ ತೆರಲು, ತ್ಯಾಗ ಮಾಡಲು, ಸಿದ್ಧರಿರಬೇಕಲ್ಲದೆ ಸೂಕ್ತ ಅರ್ಹತೆಯನ್ನೂ ಹೊಂದಿರಬೇಕು. ಅವುಗಳನ್ನು ಯಾವುದೇ ಕಾರಣಕ್ಕೂ ಹೊರಗಿನವರಿಗೆ ನೀಡುವುದಿಲ್ಲ. ವಸ್ತುಗಳಂತೆ ಅವುಗಳನ್ನು ಕೊಳ್ಳಲು ಅಥವಾ ಮಾರಲು ಬರುತ್ತವೆ. ಆಚರಣೆಗಳೇ ನಿಜವಾದ ದೇಶಿ ಸಂಪತ್ತಾಗಿದ್ದು ನಿರಂತರ ಆದಾಯದ ಮೂಲಗಳೂ ಆಗಿರುವುದರಿಂದ ಮನೆ, ಆಭರಣ ಇತ್ಯಾದಿಗಳಿಗಿಂತಲೂ ಅಮೂಲ್ಯ ಸಾಮಾಜಿಕ ಸರಕುಗಳೆಂದು ಪರಿಗಣಿಸಲಾಗಿದೆ. ಮಂತ್ರಗಳಿಗೆ ಸಹಾಯಕವಾಗುವ ನಾರುಬೇರುಗಳಿಗೂ ಬಹಳ ಮೌಲ್ಯವಿದೆ. ಮಂತ್ರಗಳು ಎಷ್ಟು ಪ್ರಮುಖವೆಂದರೆ ಅವಿಲ್ಲದಿದ್ದರೆ ಗಿಡಗಳಿಗೆ ಎಷ್ಟೇ ಗೊಬ್ಬರ ಹಾಕಲಿ, ದೋಣಿ ಎಷ್ಟೇ ಗಟ್ಟಿಯಾಗಿರಲಿ, ಬಲೆ ಎಷ್ಟೇ ಹೊಸದಿರಲಿ, ಸೂಕ್ತ ಮಂತ್ರವಿಲ್ಲದಿದ್ದರೆ ಗಿಡ ಫಲ ಕೊಡುವುದಿಲ್ಲ, ದೋಣಿ ನಡೆಯುವುದಿಲ್ಲ, ಮೀನುಗಳು ಬಲೆಗೆ ಬೀಳುವುದಿಲ್ಲ. ಏಕೆ ಎಂದು ಯಾರೂ ಪ್ರಶ್ನಿಸುವಂತಿಲ್ಲ.'[೧೫]

ಆಹಾರವೆಂದರೇನು ಎಂಬ ಪ್ರಶ್ನೆಗೆ ನಮಗೆ ಬರುವ ಸಾಮಾನ್ಯ ಉತ್ತರವೆಂದರೆ ಅದೊಂದು ಮೂಲಭೂತ ಜೈವಿಕ ಬಯಕೆಯಾದ ಹಸಿವನ್ನು ತೃಪ್ತಿಪಡಿಸುವ ಸಾಧನ ಎಂದು. ಆದರೆ ಬುಡಕಟ್ಟುಗಳಿಗೆ ಆಹಾರ ಕೇವಲ ಇಷ್ಟೇ ಅಲ್ಲದೆ ಅದೊಂದು ದೈವ, ದೈವದತ್ತ ಕೊಡುಗೆ, ಸಂಬಂಧಗಳನ್ನು ಬೆಳೆಸುವ, ಉಳಿಸುವ ಸಾಧನ, ಆಚರಣೆಗಳ ಅವಿಭಾಜ್ಯ ಅಂಗ, ಅಮೂಲ್ಯ ಸಂಪನ್ಮೂಲ, ಸಮುದಾಯಗಳ ನಡುವಿನ ಕಲಹಗಳನ್ನು ಬಗೆಹರಿಸುವ ವಿಧಾನ, ಸಂಪತ್ತು ಹಾಗೂ ಹಣ ಅಂದರೆ ವಿನಿಮಯ ಮಾಧ್ಯಮವೂ ಆಗಿದೆ.

'ನ್ಯೂಗಿನಿಯಾದಲ್ಲಿ 'ಆಹಾರ' ಕೇವಲ ಪೋಷಣೆಯ ವಸ್ತು ಮಾತ್ರವಲ್ಲದೆ, ವಿನಿಮಯದ ಮಾಧ್ಯಮವೂ ಆಗಿ ಚಲಾವಣೆಯಲ್ಲಿದೆ. ಆಚರಣಾತ್ಮಕ ವಿಧಿಗಳಲ್ಲಿ ನೀಡಲು ಹಾಗೂ ಸಾಮಾಜಿಕ ಸಂಬಂಧಗಳಲ್ಲಿ ಹಣದ ಪಾತ್ರವನ್ನು ಅಲ್ಲಿ ಆಹಾರ ನಿರ್ವಹಿಸುತ್ತದೆ. ಆಹಾರಕ್ಕೆ ತಿನ್ನುವ ಮಹತ್ವ ಮಾತ್ರವಲ್ಲದೆ ಒಳ್ಳೆಯ ಆಹಾರ ಒಳ್ಳೆಯ ಆರೋಗ್ಯಕ್ಕೆ ಸಹಾಯಕ ಮತ್ತು ಒಳ್ಳೆಯ ಜೀವನಕ್ಕಾಗಿ ನಡೆಸುವ ಎಲ್ಲ ಸಾಂಪ್ರದಾಯಿಕ ವಿಧಿ-ಆಚರಣೆಗಳಲ್ಲಿ ಆಹಾರವನ್ನು ಪ್ರತಿಫಲವಾಗಿ ನೀಡುವುದು ನ್ಯೂಗಿನಿಯನ್ನರಲ್ಲಿ ಬಹಳ ಮುಖ್ಯವಾದ್ದರಿಂದ ಕುಟುಂಬಗಳು ಆಹಾರವೆಂಬ ಪ್ರಮುಖ ಸಂಪನ್ಮೂಲವನ್ನು ತುಂಬಾ ಜೋಪಾನದಿಂದ ಕಾಯ್ದುಕೊಳ್ಳುತ್ತವೆ. ಬೇರೆಲ್ಲ ವಸ್ತುಗಳಿಗಿಂತಲೂ ಆಹಾರವು ಸಾಮಾಜಿಕ ಸಂಬಂಧಗಳ ನಿರ್ವಹಣೆಯ ಅಗತ್ಯಗಳನ್ನು ಪೂರೈಸುವ ಗುಣ ಹೊಂದಿರುವುದರಿಂದ ನ್ಯೂಗಿನಿಯನ್ನರಲ್ಲಿ ಆಹಾರ ಪ್ರಮುಖ ವಿನಿಮಯ ಮಾಧ್ಯಮವಾಗಿದೆ.

ಓಮುರಾಗಳ ವಿನಿಮಯ ಆಹಾರ, ಅಮೂಲ್ಯ ವಸ್ತುಗಳು ಮತ್ತು ಹಣ ಮೂರನ್ನೂ ಒಳಗೊಂಡಿದ್ದರೂ ಆಹಾರವೇ ವಿನಿಮಯದ ಪ್ರಮುಖ ಮಾಧ್ಯಮವಾಗಿ ಉಳಿದಿದ್ದು, ಹಣ ಅದರ ಸ್ಥಾನವನ್ನು ಪಡೆಯಲು ಸಾಧ್ಯವಾಗಿಲ್ಲ. ಮಾತ್ರವಲ್ಲದೆ ವಿನಿಮಯದ ಸಹಾಯಕ ಸ್ಥಾನಕ್ಕೇ ತೃಪ್ತಿಪಟ್ಟುಕೊಂಡಿದೆ.'[೧೬] ಹೀಗಾಗಿ ಅಲ್ಲಿ ಅನಗತ್ಯ ಅಧಿಕ ಉತ್ಪಾದನೆ, ಅತಿಪ್ರಸರಣ, ಲಾಭಬಡುಕತನ, ನಿರುದ್ಯೋಗ ಶೋಷಣೆಗಳು ಅಷ್ಟಾಗಿ ಕಂಡುಬರುತ್ತಿಲ್ಲ.

ಬುಡಕಟ್ಟು ನಾಯಕನ ಮನೆತನಕ್ಕೆ ಕಾಡು, ಹೊಳೆ, ನದಿ, ಸರೋವರಗಳ ಮೇಲೆ ಅಧಿಕಾರವಿದ್ದರೂ ಅದನ್ನು ಸಮುದಾಯದೊಂದಿಗೆ ಬಳಸಬಹುದಾಗಿದೆ. ಈ ಹಕ್ಕನ್ನು ಕಾಗದಪತ್ರಗಳಿಂದಲ್ಲದೆ ಬೇಟೆ, ಮೀನುಬೇಟೆ, ಮುಂತಾದ ಆಚರಣೆಗಳಿಂದ ಪದೇಪದೇ ಪುನರ್‌ಸ್ಥಾಪಿಸಲಾಗುತ್ತದೆ.

ಉದಾಹರಣೆಗೆ 'ಮೀನುಬೇಟೆ ಕೇವಲ ಆಚರಣೆ ಅಥವಾ ಜೀವನೋಪಾಯದ ಕಾರ್ಯವಲ್ಲ. ಅದೊಂದು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಸಂಗತಿಗಳ ಸಮನ್ವಯವಾಗಿದೆ. ಕೊಳದ ಮಾಲೀಕ ಯಾಕಾದರೂ ಮೀನು ಬೇಟೆಗೆ ಕರೆ ನೀಡಬೇಕು? ಅದಕ್ಕೆ ಸಮುದಾಯದ ವಿವಿಧ ಜನ ಏಕೆ ಓಗೊಟ್ಟು ಭಾಗವಹಿಸಬೇಕು? ಅಲ್ಲಿ ಮಾಂತ್ರಿಕತೆ, ಆಚರಣೆಗಳ ಅರ್ಥವೇನು? ಎಂದು ವಿಚಾರಿಸಿದಾಗ ಸಾಮೂಹಿಕ ಮೀನುಬೇಟೆ ಸಮುದಾಯವನ್ನು ಒಗ್ಗೂಡಿಸುವ, ಒಂದಾಗಿ ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ, ನಾಯಕನ ಖಾಸಗಿ ಆಸ್ತಿಯನ್ನು ಗೌರವಿಸುವ, ಅದಕ್ಕೆ ಸೂಕ್ತ ಮೌಲ್ಯ ನೀಡಿ ಹಂಚಿಕೊಳ್ಳುವ, ಮಾಂತ್ರಿಕ ಆಚರಣೆ ಮೂಲಕ ಸಾಮೂಹಿಕ ರಕ್ಷಣೆ ನೀಡುವ, ಸಾಮೂಹಿಕವಾಗಿ ಗಂಡಾಂತರಗಳನ್ನು ಎದುರಿಸುವ ಸುಸಂಘಟಿತ ಕ್ರಿಯೆಯಾಗಿದೆ.'[೧೭] ಹೆಚ್ಚಿನ ವಿವರಗಳನ್ನು ಬುಡಕಟ್ಟು ನಂಬಿಕೆಗಳು ವಿಭಾಗದಲ್ಲಿ ನೀಡಲಾಗಿದೆ.

ಮಾರುಕಟ್ಟೆ

ಆಧುನಿಕ ಅರ್ಥಶಾಸ್ತ್ರದ ಪ್ರಕಾರ ಮಾರುಕಟ್ಟೆಯೆಂದರೆ ನಿರ್ದಿಷ್ಟ ಪ್ರದೇಶವಲ್ಲ. ಬದಲಾಗಿ ಕೊಳ್ಳುವವರು ಮತ್ತು ಮಾರುವವರು ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲೀ ಸರಕುಗಳ ಜೊತೆಗೆ ಅಥವಾ ಸರಕುಗಳಿಲ್ಲದೆ ಪರಸ್ಪರ ಸಂಪರ್ಕಿಸಿ, ಬೆಲೆ ನಿಗದಿಪಡಿಸುವ ಇಡೀ ಪ್ರಕ್ರಿಯೆ ಎಂದರ್ಥ. ಆದರೆ ಬುಡಕಟ್ಟು ಆರ್ಥಿಕತೆಯಲ್ಲಿ ಮಾರುಕಟ್ಟೆ ಎಂಬುದು ಕೊಳ್ಳುವವರು ಮತ್ತು ಮಾರುವವರು ಒಂದು ನಿರ್ದಿಷ್ಟ ಪ್ರದೇಶದಲ್ಲಿ ಸರಕುಗಳ ಜೊತೆ ಸಂಧಿಸಿ ವಿನಿಮಯ ಮಾಡಿಕೊಳ್ಳುವ ಪ್ರದೇಶ ಎಂದರ್ಥ. ಇದು ಬುಡಕಟ್ಟುಗಳ ಸಾಟಿಪದ್ಧತಿಯಿಂದ ಬಂದ ಅರ್ಥವಾಗಿದೆ.

ಪ್ರಮುಖ ಕಸುಬುಗಳು ಮಾರುಕಟ್ಟೆಯ ದೃಷ್ಟಿಯಿಂದ ಮಾತ್ರವಲ್ಲದೆ, ಸಾಮಾಜಿಕವಾಗಿಯೂ ಪ್ರಮುಖ ಪಾತ್ರ ವಹಿಸುತ್ತವೆ. ಬೇಡಿಕೆ-ಪೂರೈಕೆಗಳಂತಹ ಸಂಕೀರ್ಣ ಅಂಶಗಳು ಕೇವಲ ತಾಂತ್ರಿಕ ಅಂಶಗಳಿಂದಷ್ಟೇ ಅಲ್ಲದೆ ಮಾನವಾತೀತ, ಅಭೌತಿಕ, ಧಾರ್ಮಿಕ, ಮಾಂತ್ರಿಕ ಅಂಶಗಳಿಂದಲೂ ನಿರ್ಧಾರವಾಗುತ್ತವೆ. ಈ ಜನರ ಬಯಕೆಗಳು ಸೀಮಿತ ಹಾಗೂ ಸರಕುಗಳು ಸರಳ. ಮೇಲಾಗಿ ವಿನಿಮಯದ ಮೌಲ್ಯ ನಿರ್ಧರಿಸುವ ನಿರ್ದಿಷ್ಟ ಪ್ರಮಾಣವಿಲ್ಲದಿರುವುದು. ಕುಲ-ರಕ್ತಬಾಂಧವ್ಯದ

ಪ್ರಾಧಾನ್ಯತೆಗಳು ಈ ಆರ್ಥಿಕತೆಯನ್ನು ಸರಳವಾಗಿಟ್ಟಿವೆ. ತಮ್ಮಲ್ಲಿಲ್ಲದ ಸರಕುಗಳನ್ನು ಇನ್ನೊಬ್ಬರಿಂದ ಕೊಡುಗೆಯಾಗಿ ಪಡೆಯುವ ಮೂಲಕ ಅಥವಾ ಬೇರೆ ಪ್ರದೇಶದ ಸರಕುಗಳನ್ನು ಪಕ್ಕದ ಬುಡಕಟ್ಟುಗಳ ಸಹಾಯ, ಕೊಡುಗೆ ಮೂಲಕ ಪಡೆಯುತ್ತಾರೆ. ಇದರ ಬಗ್ಗೆ ಬುಡಕಟ್ಟು ನಂಬಿಕೆಗಳು ಭಾಗದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಮೌಲ್ಯ

ಮೌಲ್ಯದ ಪರಿಕಲ್ಪನೆ ಅರ್ಥಶಾಸ್ತ್ರದಲ್ಲಿ ಬಹಳ ಪ್ರಾಮುಖ್ಯತೆ ಪಡೆದಿದ್ದು ಕಾಲದಿಂದ ಕಾಲಕ್ಕೆ ಅದರ ವ್ಯಾಖ್ಯಾನ ಬದಲಾಗುತ್ತಿದೆ. ಏಕೆಂದರೆ ಪ್ರಸ್ತುತ ಆರ್ಥಿಕತೆಯನ್ನು ಮಾರುಕಟ್ಟೆ ಆರ್ಥಿಕತೆ ಎಂದು ಕರೆಯಲಾಗುತ್ತಿದ್ದು ಮಾರುಕಟ್ಟೆ ಬೆಲೆಯನ್ನು ನಿರ್ಧರಿಸುವ, ಬೆಲೆಯಿಂದ ಪ್ರಭಾವಿತವಾಗುವ ಸಂಸ್ಥೆಯಾಗಿದೆ.

ಬೆಲೆ ಎಂದರೇ ವಸ್ತುವಿನ ವಿನಿಮಯ ಮೌಲ್ಯವನ್ನು ಹಣದ ರೂಪದಲ್ಲಿ ವ್ಯಕ್ತಪಡಿಸುವುದು ಎಂದರ್ಥ. ಆಧುನಿಕ ಮಾರುಕಟ್ಟೆ ವಸ್ತುವಿನ ವಿನಿಮಯ ಮೌಲ್ಯವನ್ನು ಮಾತ್ರ ಪರಿಗಣಿಸುತ್ತದಲ್ಲದೆ ಅದರ ಉಪಯುಕ್ತತೆಯ ಮೌಲ್ಯವನ್ನಲ್ಲ. ಹೀಗಾಗಿಯೇ ಅರ್ಥಶಾಸ್ತ್ರದ ಪ್ರಸಿದ್ಧ ವಜ್ರ-ನೀರಿನ ವಿರೋಧಾಭಾಸದ ಚರ್ಚೆ ಇನ್ನೂ ನಡೆಯುತ್ತಿದೆ. ಜೀವ ಜಲವಾದ ನೀರಿಗೆ ಬೆಲೆ ಕಡಿಮೆ ಇದ್ದು ಜೀವನಕ್ಕೆ ಅಷ್ಟೇನೂ ಅನಿವಾರ್ಯವಲ್ಲದ ವಜ್ರಕ್ಕೆ ಬೆಲೆ ಹೆಚ್ಚಾಗಿದೆ. ಏಕೆಂದರೆ ವಜ್ರದ ಬೇಡಿಕೆ ಅದರ ಪೂರೈಕೆಗಿಂತಲೂ ಹೆಚ್ಚಾಗಿದೆ. ಅದೇ ನೀರಿನ ಬೇಡಿಕೆಗಿಂತ ಅದರ ಪೂರೈಕೆ ಹೆಚ್ಚಾಗಿದೆ. ಹೀಗೆ ಬೇಡಿಕೆ ಮತ್ತು ಪೂರೈಕೆಗಳೇ ವಸ್ತುವಿನ ಮೌಲ್ಯವನ್ನು ಆ ಮೂಲಕ ಅದರ ಬೆಲೆಯನ್ನು ಅದರಿಂದ ಅದರ ಬೇಡಿಕೆಯನ್ನು, ಅನುಭೋಗವನ್ನು, ಉತ್ಪಾದನೆಯನ್ನು ನಿರ್ಧರಿಸುತ್ತವೆ.

ಇದೆಲ್ಲದರ ಹಿಂದಿರುವ ತತ್ವವೆಂದರೆ ಮನುಷ್ಯನ ದುರಾಸೆ, ಹೊಟ್ಟೆಕಿಚ್ಚು, ಇನ್ನೊಬ್ಬರ ಏಳಿಗೆಯನ್ನು ನೋಡಿ ಕರುಬುವ, ಸಂಕಟಪಡುವ, ಇನ್ನೊಬ್ಬರ ಸಂಕಟವನ್ನು ನೋಡಿ ಸಂತೋಷಿಸುವ ವಿಘ್ನಸಂತೋಷಿ ಮನೋಭಾವನೆ. ಅತ್ಯಂತ ಕಡಿಮೆ ಪ್ರಮಾಣದಲ್ಲಿ ದೊರೆಯುವ ವಸ್ತುಗಳು ಅತ್ಯಂತ ಅಮೂಲ್ಯ. ಅವುಗಳನ್ನು ಹೊಂದುವುದೇ ನಮ್ಮ ಜೀವನದ ಅತಿ ಮುಖ್ಯ ಸಾಧನೆ. ಅಕ್ಕ ಪಕ್ಕದವರಲ್ಲಿಲ್ಲದ ವಸ್ತು ನನ್ನಲ್ಲಿದೆ ಎಂಬುದು ನನ್ನ ಅಹಂನ್ನು ತೃಪ್ತಿಪಡಿಸಿದರೆ, ನನ್ನ ಪಕ್ಕದ ಮನೆಯವನಲ್ಲಿರುವ ವಸ್ತು ನನ್ನಲ್ಲಿಲ್ಲ ಎಂಬ ಅವನ ಹತಾಶೆ ಇವನಿಗೆ ತೃಪ್ತಿ ನೀಡುತ್ತದೆ. ಹೀಗಾಗಿ ಅಮೆರಿಕದಂತಹ ದೇಶದಲ್ಲಿ ಎರಡು ಕಾರು ಹೊಂದಿರುವ ವ್ಯಕ್ತಿ ಪಕ್ಕದ ಮನೆಯವನಲ್ಲಿ ಐದು ಕಾರುಗಳಿವೆ ಆದರೆ ನನ್ನ ಬಳಿ ಎರಡೇ ಕಾರುಗಳಿವೆ, ನಾನು ಬಡವ, ಹೇಗಾದರೂ ಮಾಡಿ ನಾನೂ ಐದು ಕಾರುಗಳನ್ನು, ಸಾಧ್ಯವಾದರೆ ಆರು ಕಾರುಗಳನ್ನು ಕೊಳ್ಳಬೇಕೆಂದು ಆಸೆಪಡುತ್ತಾ, ಚಡಪಡಿಸುತ್ತಾ, ಅದು ಸಾಧ್ಯವಾಗದಿದ್ದಾಗ ಹತಾಶೆಗೊಳಗಾಗುತ್ತಾ ಇರುವುದನ್ನು ಅನುಭವಿಸದೆ, ಮಾನಸಿಕ ಶಾಂತಿಯನ್ನು ಕಳೆದುಕೊಂಡು, ಕೊನೆಗೊಂದು ದಿನ ಅಮೂಲ್ಯ ಜೀವನವನ್ನು ಆತ್ಮಹತ್ಯೆಯ ಮೂಲಕ ಕೊನೆಗಾಣಿಸಿಕೊಳ್ಳುವ ಉದಾಹರಣೆಗಳು ಸಾಕಷ್ಟು ಸಿಗುತ್ತವೆ.

ವಾಸ್ತವಿಕವಾಗಿ ಚಿಂತಿಸಿದರೆ ಇದೆಲ್ಲ ಸರಿಯೆ ಎಂದು ಪ್ರಶ್ನಿಸಿಕೊಂಡರೆ ದೊರೆಯುವ ಉತ್ತರ ಬೇರೆಯೇ ಇರಬಹುದು. ನಾವು ವಸ್ತುಗಳನ್ನು ಪ್ರೀತಿಸುತ್ತಾ ಜೊತೆಗಿರುವ ಸಹಮಾನವನನ್ನು ದ್ವೇಷಿಸುತ್ತಿದ್ದೇವೆ. ನಮ್ಮ ಬ್ಲಾಕ್ ಬೆರಿ ಫೋನನ್ನು ಅಕಸ್ಮಾತ್ತಾಗಿ ಕೆಳಗೆ ಬೀಳಿಸಿದ ಪುಟ್ಟ ಮಗಳ ಮೇಲೆ ಕೆಂಡಾಮಂಡಲ ಕೋಪ ಬಂದು ಎರಡೇಟು ಹೊಡೆದೇ ಬಿಡುತ್ತೇವಾಗಲೀ ಈ ಕಾರ್ಯದಿಂದ ಆ ಮುಗ್ಧ ಮಗುವಿನ ಮನಸ್ಸಿನ ಮೇಲೆ ಏನು ಪರಿಣಾಮವಾಗಬಹುದೆಂಬುದನ್ನು ಒಂದು ಕ್ಷಣ ಕೂಡ ಯೋಚಿಸುವುದಿಲ್ಲ. ಜೀವಂತವಾಗಿರುವ ನನ್ನ ಜೀವದ ಕುಡಿಗಿಂತ ನನ್ನ ಹಣದಿಂದ ಕೊಂಡ ಜೀವವಿಲ್ಲದ ವಸ್ತುವೇ ನಮಗೆ ಮುಖ್ಯವೆನಿಸಿಬಿಡುತ್ತದೆ.

ಉದಾಹರಣೆಗೆ ಚಿಕ್ಕವರಿದ್ದಾಗ ೫೦ ರೂಪಾಯಿಗೆ ಕೊಂಡ ಆಟಿಗೆ ಕಾರು ಮುರಿದು ಹೋದಾಗ ಜೋರಾಗಿ ಅತ್ತು ರಂಪಾಟ ಮಾಡುತ್ತೇವೆ. ನಂತರ ೫೦೦ ರೂಪಾಯಿಗೆ ಕೊಂಡ ರಿಮೋಟ್ ಕಂಟ್ರೋಲ್ ಕಾರು ಕೆಟ್ಟು ಹೋದಾಗ ಊಟ ಬಿಟ್ಟು ಮೂಲೆಯಲ್ಲಿ ಕುಳಿತು ಮುಸಿಮುಸಿ ಅಳುತ್ತೇವೆ. ನಂತರ ಸಿಕ್ಕ ೫೦೦೦ ರೂಪಾಯಿಗಳ ಹೊಸ ಸೈಕಲ್ ತೆಗೆದುಕೊಂಡು ಸ್ನೇಹಿತರ ಹೊಟ್ಟೆ ಉರಿಸಲೆಂದು ಸ್ಕೂಲಿಗೆ ತೆಗೆದುಕೊಂಡು ಹೋದ ಮೊದಲ ದಿನವೇ ಸ್ನೇಹಿತನೊಬ್ಬ ತನ್ನ ಹಳೆ ಸೈಕಲ್‌ನಿಂದ ಡಿಕ್ಕಿ ಹೊಡೆದು ರಿಮ್ ಬೆಂಡು ಮಾಡಿದಾಗ ರೋಷದಿಂದ ಅವನೊಡನೆ ಹೊಡೆದಾಡುತ್ತೇವೆ. ನಂತರ ೫೦,೦೦೦ ರೂಪಾಯಿಗೆ ಕೊಂಡ ಮೋಟಾರ್ ಬೈಕನ್ನು ಕಳ್ಳರು ಕದ್ದುಕೊಂಡು ಹೋದಾಗ ಜೀವನದ ಮೇಲೆ ಜಿಗುಪ್ಸೆ ಮೂಡಿತು. ಅದಾದ ಮೇಲೆ ಕೊಂಡ ೫ ಲಕ್ಷದ ಹ್ಯುಂಡೈ ಕಾರು ಅಪಘಾತಕ್ಕೀಡಾದಾಗ ಸದ್ಯ ನನಗೇನೂ ಆಗಲಿಲ್ಲವಲ್ಲ ಎಂದು ಸಮಾಧಾನಪಟ್ಟುಕೊಳ್ಳದೆ ಜಗತ್ತೇ ತಲೆ ಮೇಲೆ ಬಿದ್ದಂತೆ ಹತಾಶನಾಗಿದ್ದೆ. ೫೦ ಲಕ್ಷದ ಸೆಡಾನ್ ಕಾರಿನ ಮೇಲೆ ಯಾರೋ ಗೀಚಿದಾಗ ದಿಕ್ಕೇ ತೋಚದಂತಾಗಿ ದುಃಖ, ಹತಾಶೆ ಉಕ್ಕಿ ಹರಿದಿತ್ತು. ಆಟದ ಸಾಮಾನುಗಳು ಬೆಳೆದಂತೆ ನಾವು ಬೆಳೆಯಲಿಲ್ಲ. ನಮ್ಮ ಅಳು ಮಾತ್ರ ಬದಲಾಗಿ ಕೋಪ, ಹತಾಶೆ, ಜಿಗುಪ್ಸೆಗಳ ರೂಪತಾಳುತ್ತದೆ. 'The Toys have grown but we have not'. You are more important than every thing'.[18]

ಬುಡಕಟ್ಟುಗಳಲ್ಲಿ ಸಂಬಂಧಗಳು, ಬಳಿ, ತಾನು ಇಂತಹ ಶ್ರೇಷ್ಠ ಬುಡಕಟ್ಟಿಗೆ ಸೇರಿದವನು ಎಂಬ ಹೆಮ್ಮೆ, ತನ್ನ ಹಿರಿಯರು ಶೇಖರಿಸಿದ ವೈರಿಗಳ ತಲೆಬುರುಡೆಗಳು, ಅವರನ್ನು ಹೂತಿರುವ ಮಣ್ಣು, ಪ್ರಕೃತಿ, ಇತ್ಯಾದಿಗಳೆಲ್ಲಾ ಅಮೂಲ್ಯವಾದವುಗಳೇ ಆಗಿವೆ.

ಇಲ್ಲಿ ಸಿಯಾಟಲ್ ಭಾಷಣವೆಂದೇ ಪ್ರಖ್ಯಾತವಾಗಿರುವ ರೆಡ್ ಇಂಡಿಯನ್ ಮುಖಂಡನೊಬ್ಬ ೧೮೫೪ರಲ್ಲಿ ಅಮೆರಿಕದ ಅಧ್ಯಕ್ಷರಿಗೆ ಬರೆದ ಪತ್ರವನ್ನು, ಅದರ ಭಾವನೆಯನ್ನು ನೆನೆಯುವುದು ಸೂಕ್ತ.

'ಅಧ್ಯಕ್ಷರು ನಮ್ಮ ಭೂಮಿಯನ್ನು ಕೊಳ್ಳಬೇಕೆಂದು ಬಯಸಿದ್ದಾರೆ. ಆದರೆ ಆಕಾಶವನ್ನು ಕೊಳ್ಳುವುದಕ್ಕಾಗಲಿ ಮಾರುವುದಕ್ಕಾಗಲೀ ಹೇಗೆ ಸಾಧ್ಯ? ಹೀಗೆಯೇ ಭೂಮಿಯನ್ನು ಅಷ್ಟೇ ಅಲ್ಲವೇ?

ಈ ಭೂಮಿಯ ಒಂದೊಂದು ಅಂಗುಲವೂ ನನ್ನ ಜನರಿಗೆ ಪವಿತ್ರವಾದದ್ದು. ಪ್ರತಿ ಮರದ ಎಲೆ, ಮರಳಿನ ದಡ, ಮಂಜಿನ ತೆರೆ, ದುಂಬಿಯ ಝೇಂಕಾರ ಎಲ್ಲವೂ ನನ್ನವರ ನೆನಪಿನಲ್ಲಿ, ಅನುಭವದಲ್ಲಿ ಪವಿತ್ರವಾಗಿದೆ. ಮರದಲ್ಲಿ ಹರಿಯುವ ಜೀವರಸವೆಂದರೆ ನಮ್ಮ ಶರೀರದ ನರಗಳಲ್ಲಿ ಹರಿಯುವ ರಕ್ತದಂತೆಯೇ ಹೌದು. ಸುವಾಸನೆಯನ್ನು ಬೀರುವ ಹೂಗಳು ನಮ್ಮ ಸಹೋದರಿಯರು. ಕರಡಿ, ಜಿಂಕೆ, ಹದ್ದು ಇವು ನಮ್ಮ ಸಹೋದರರು. ಮುಗಿಲಿಗೆ ಮುಖಮಾಡಿರುವ ಬೆಟ್ಟ, ಹುಲ್ಲುಗಾವಲಿನ ರಸ, ಪಶುವಿನ ಕಾವು, ಮನುಷ್ಯ ಎಲ್ಲವೂ ಒಂದೇ ಕುಟುಂಬಕ್ಕೆ ಸೇರಿರುವಂಥದ್ದು. ನದಿಗಳಲ್ಲಿ ಹರಿಯುವ ನೀರು, ಅದು ಕೇವಲ ನೀರಲ್ಲ; ನಮ್ಮ ಪೂರ್ವಜರ ಧಮನಿಗಳಲ್ಲಿ ಹರಿದ ನೆತ್ತರು. ಆ ನೀರಿನ ಸದ್ದು ನನ್ನ ತಂದೆಯ ದನಿ. ನನ್ನ ಅಜ್ಜನಿಗೆ ಮೊದಲನೇ ಪ್ರಾಣವನ್ನು ನೀಡಿದ ವಾಯುವೇ ಅವನ ಕೊನೆಯ ಉಸಿರನ್ನೂ ಸ್ವೀಕರಿಸುವುದು. ನಾವು ನಿಮಗೆ ನಮ್ಮ ಭೂಮಿಯನ್ನು ಮಾರಿದರೆ ನೀವೂ ಸಹ ಇದೇ ಪವಿತ್ರ ಭಾವವನ್ನು ಉಳಿಸಿಕೊಳ್ಳುತ್ತೀರಾ? ನಮಗೆ ಗೊತ್ತಿರುವುದೆಲ್ಲಾ ಇಷ್ಟೆ: ಭೂಮಿ ಮನುಷ್ಯನಿಗೆ ಸೇರಿದ್ದಲ್ಲ: ಮನುಷ್ಯನೇ ಭೂಮಿಗೆ ಸೇರಿದವ. ಸೃಷ್ಟಿಯ ಜಾಲವನ್ನು ಹೆಣೆಯಬಲ್ಲ ಶಕ್ತಿ ಮನುಷ್ಯನಿಗೆ ಇಲ್ಲ. ಹಸುಗೂಸು ತಾಯಿಯ ಎದೆಯ ಬಡಿತವನ್ನು ಪ್ರೀತಿಸುವಂತೆ ನಾವು ಈ ಭೂತಾಯಿಯನ್ನು ಪ್ರೀತಿಸುತ್ತೇವೆ. ನೀವೂ ಹೀಗೇ ಪ್ರೀತಿಸುತ್ತೀರೆಂದು ಆಶಿಸುತ್ತೇವೆ'.[೯]

ಇಲ್ಲಿ ಮೂರ್ತವಾದ ಹಣದ ಅಥವಾ ವಿನಿಮಯ ಮೌಲ್ಯಕ್ಕಿಂತ ಅಮೂರ್ತವಾದ ಭಾವನಾತ್ಮಕ, ಜೈವಿಕ ಮತ್ತು ಸಾಂಸ್ಕೃತಿಕ ಮೌಲ್ಯಕ್ಕೆ ಮನ್ನಣೆಯಿದೆ. ಇಲ್ಲಿ ಕೊರತೆಗಿಂತ ಜೀವನಕ್ಕೆ, ಜೀವ ರಕ್ಷಣೆಗೆ ಯಾವುದು ಅವಶ್ಯಕವೋ ಅದಕ್ಕೆ ಹೆಚ್ಚಿನ ಮೌಲ್ಯವಿದೆ. ಇಲ್ಲಿನ ಮುಖ್ಯ ಪ್ರಶ್ನೆಯೆಂದರೆ ಯಾವುದು ಹೆಚ್ಚು ಮೌಲ್ಯಯುತವಾದದ್ದು? ಜೀವಂತ ಜೀವಿಗಳು ಹಾಗೂ ಮನುಷ್ಯರೋ ಅಥವಾ ನಿರ್ಜೀವ ವಸ್ತುಗಳೋ? ನಮ್ಮ ಮೌಲ್ಯದ ಪರಿಭಾವನೆ ಎಷ್ಟೊಂದು ಮೌಲ್ಯರಹಿತವಾಗುತ್ತಿದೆ.

೧. ಬುಡಕಟ್ಟು ಆರ್ಥಿಕತೆ: ಅಧ್ಯಯನದ ಸಾಧ್ಯತೆಗಳು ಮತ್ತು ಪ್ರಯೋಗಗಳು

ಬುಡಕಟ್ಟು ಆರ್ಥಿಕತೆಯ ಅಧ್ಯಯನಕ್ಕೆ ಹಲವಾರು ಪ್ರಯತ್ನಗಳು ನಡೆದಿದ್ದು ವಿವಿಧ ಶಾಸ್ತ್ರಗಳನ್ನು ಅರ್ಥಶಾಸ್ತ್ರಕ್ಕೆ ಸಮನ್ವಯಿಸಿ ವಿಶ್ಲೇಷಿಸುವ ಪ್ರಯತ್ನದ ಫಲವೇ ಮ್ಯಾಥಮೆಟಿಕಲ್ ಎಕನಾಮಿಕ್ಸ್, ಮಾನಸಿಕಾರ್ಥಶಾಸ್ತ್ರ, ಮಾನವಿಕಾರ್ಥಶಾಸ್ತ್ರ ಇತ್ಯಾದಿ. ಮಾನವಿಕಶಾಸ್ತ್ರವು ಜಗತ್ತಿನ ಎಲ್ಲ ಜನಾಂಗಗಳನ್ನೂ ಅವುಗಳ ಸಮಷ್ಟಿರೂಪದಲ್ಲಿ ಅಧ್ಯಯನ ಮಾಡುತ್ತದೆ. ಇದನ್ನೇ ಅರ್ಥಶಾಸ್ತ್ರಕ್ಕೆ ಅಳವಡಿಸಿ ವಿವಿಧ ಕಾಲಘಟ್ಟದ, ವಿವಿಧ ಜನಾಂಗಗಳ ಆರ್ಥಿಕತೆಯನ್ನು ಅಧ್ಯಯನ ಮಾಡುವ ಶಾಸ್ತ್ರವೇ ಮಾನವಿಕಾರ್ಥಶಾಸ್ತ್ರವಾಗಿದೆ. ಇದು ಈಗಷ್ಟೇ ಬೆಳಕಿಗೆ ಬಂದಿದ್ದು ಇನ್ನಷ್ಟು ಬೆಳವಣಿಗೆ ಸಾಧಿಸಬೇಕಿದೆ. ಇದರ ಬಗೆಗೆ ಹೆಚ್ಚಿನ ಗ್ರಂಥಗಳು ಅಂತರ್ಜಾಲದಲ್ಲಿ ಮಾತ್ರವೇ ಲಭ್ಯವಿವೆ.

ಇದು ಮಾನವಶಾಸ್ತ್ರವನ್ನು ಅರ್ಥಶಾಸ್ತ್ರದ ಸೂತ್ರ ಸಲಕರಣೆಗಳೊಡನೆ ಅನುಸಂಧಾನಿಸಿ ಮಾನವನ ಆರ್ಥಿಕ ಚಟುವಟಿಕೆ ಹಾಗೂ ನಡತೆಗಳನ್ನು ಅಧ್ಯಯನ ಮಾಡುವ ಶಾಸ್ತ್ರವಾಗಿದೆ.

ಇದರಲ್ಲಿ ೩ ಶಾಖೆಗಳಿವೆ: ೧. ಸಾಂಪ್ರದಾಯಿಕ ಮಾನವಿಕ ಅರ್ಥಶಾಸ್ತ್ರ(Formalism), ೨. ನೈಜ ಮಾನವಿಕಾರ್ಥಶಾಸ್ತ್ರ(Substantivism), ೩. ಸಾಂಸ್ಕೃತಿಕ ಮಾನವಿಕಾರ್ಥಶಾಸ್ತ್ರ (Culturalism).

೧. ಸಾಂಪ್ರದಾಯಿಕ ಮಾದರಿ: ಇದು ಅರ್ಥಶಾಸ್ತ್ರದ ನವ-ಸಾಂಪ್ರದಾಯಿಕ(Neoclassical) ಮಾದರಿಯನ್ನು ಅವಲಂಬಿಸಿದ್ದು, ಮಾರ್ಷಲ್‌ರ ತುಷ್ಟಿಗುಣ ವಿಶ್ಲೇಷಣೆಯನ್ನು ಆಧರಿಸಿದೆ. ಅಪರಿಮಿತ ಬಯಕೆಗಳು ಸೀಮಿತ ಸಂಪನ್ಮೂಲಗಳ ಕೊರತೆಯ ನಡುವೆ ತುಷ್ಟಿಗುಣವನ್ನು ಗರಿಷ್ಠಪಡಿಸಿಕೊಳ್ಳುವ ಆಯ್ಕೆಯ ಅರ್ಥಶಾಸ್ತ್ರವನ್ನು ಇದು ಆಧರಿಸಿದೆ.

ಪ್ರತಿ ಮನುಷ್ಯನೂ ತಾರ್ಕಿಕ ಶಕ್ತಿ ಹೊಂದಿದ್ದು ಲಭ್ಯವಿರುವ ಮಾಹಿತಿ ಬಳಸಿ ಗರಿಷ್ಠ ಲಾಭ ಪಡೆಯುವುದಾಗಿದ್ದು, ಬುದ್ಧಿಪೂರ್ವಕವಾಗಿಯೋ, ಸಂಪ್ರದಾಯಕ್ಕಾಗಿಯೋ, ಜೈವಿಕ ಬಯಕೆಯಿಂದಲೋ ಲೆಕ್ಕಾಚಾರದಿಂದ ತೀರ್ಮಾನಕ್ಕೆ ಬರುತ್ತಾನೆ. ರೆಮೆಂಡ್ ಫಿರ್ತ್ ಮತ್ತು ಹೆರಾಲ್ಡ್ ಸ್ನೈಡರ್‌ರ ಪ್ರಕಾರ ಈ ಮಾದರಿಯನ್ನು ಯಾವುದೇ ಸಮಾಜಕ್ಕೂ ಅನ್ವಯಿಸಬಹುದಾಗಿದೆ. ಏಕೆಂದರೆ ಎಲ್ಲಾ ಮಾನವ ಸಂಸ್ಕೃತಿಗಳು, ವ್ಯಕ್ತಿಗಳ ಪ್ರಜ್ಞಾಪೂರ್ವಕ ಅಥವಾ ಅಪ್ರಜ್ಞಾಪೂರ್ವಕ ಆಯ್ಕೆಗಳಾಗಿದ್ದು ಪರ್ಯಾಯ ಉಪಯೋಗದ ಸಾಧನಗಳು ಮತ್ತು ಬಹುಮುಖ ಆಯ್ಕೆಗಳ ನಡುವೆ ಗುರಿಗಳು ಸಾಂಸ್ಕೃತಿಕವಾಗಿ ನಿರ್ದೇಶಿಸಲ್ಪಟ್ಟ ಉದ್ದೇಶಗಳಾಗಿರುತ್ತವೆ. ಉದ್ದೇಶ ಅಥವಾ ಗುರಿಗಳೆಂದರೆ ಕೇವಲ ಆರ್ಥಿಕ ಮೌಲ್ಯ ಅಥವಾ ಹಣದ ಲಾಭ ಮಾತ್ರವಾಗಿರದೆ ವ್ಯಕ್ತಿಗತವಾಗಿ ಮೌಲ್ಯವೆಂದು ಪರಿಗಣಿಸಲ್ಪಟ್ಟ ಘನತೆ, ಐಕ್ಯತೆ ಅಥವಾ ವಿಶ್ರಾಂತಿಗಳಂತಹವೂ ಆಗಿರಬಹುದಾಗಿದೆ. ಸಂಪನ್ಮೂಲಗಳನ್ನು ಉಳಿತಾಯಿಸುವ ಮತ್ತು ತುಷ್ಟಿಗುಣ ತೃಪ್ತಿಯನ್ನು ಗರಿಷ್ಠಗೊಳಿಸುವ ಅಂಶಗಳನ್ನು ಈ ಮಾದರಿ ಆಧರಿಸಿರುವುದರಿಂದ ಆಯ್ಕೆಗಳು ಹಾಗೂ ಮಾಹಿತಿಗಳ ವ್ಯತ್ಯಾಸವಾದರೂ ಕೂಡ ಇದನ್ನು ಎಲ್ಲ ಸಂದರ್ಭಗಳಿಗೂ ಅನ್ವಯಿಸಬಹುದಾಗಿದೆ.

ಈ ಸಾಂಪ್ರದಾಯಿಕ ಮಾದರಿ ಆಯ್ಕೆಗಳಿಗೆ ಸಂಬಂಧಿಸಿದಂತೆ ಏನನ್ನು ಗರಿಷ್ಠಗೊಳಿಸಿಕೊಳ್ಳ ಬೇಕೆಂಬುದನ್ನು ವಿವೇಚಿಸುವುದರಿಂದ ಸಾಂಸ್ಕೃತಿಕವಾಗಿ ಮೌಲ್ಯವೆಂದು ಪರಿಗಣಿಸಿದ ಅಮೂರ್ತ ಅಂಶಗಳನ್ನು ಇದು ಒಳಗೊಳ್ಳಬಹುದು. ಈ ಮಾದರಿ ಅರ್ಥಶಾಸ್ತ್ರದ ಮೂಲ ಊಹೆಗಳಲ್ಲೊಂದಾದ ಮಾನವ ತಾರ್ಕಿಕ ವಿವೇಚನೆ ಮತ್ತು ಬುದ್ಧಿವಂತಿಕೆಯ ಪ್ರಾಣಿ ಎಂಬುದನ್ನು ಕಡ ತೆಗೆದುಕೊಂಡಿದ್ದು ಅದರನ್ವಯ ಲಭ್ಯವಿರುವ ಪೂರ್ಣ ಅಥವಾ ಅಪೂರ್ಣ ಮಾಹಿತಿ ಆಧರಿಸಿ ತಮಗೆ ಅಮೂಲ್ಯವೆನಿಸಿದ ವಸ್ತು-ಸಂಗತಿಗಳನ್ನು ಗರಿಷ್ಠಪಡಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆದ್ದರಿಂದ ಮಾನವಶಾಸ್ತ್ರೀಯ ಸಂಶೋಧಕನ ಪ್ರಮುಖ ಕಾರ್ಯವೆಂದರೆ ಪ್ರತಿಯೊಂದು ಸಂಸ್ಕೃತಿಯನ್ನು, ಆಯಾ ಸಂಸ್ಕೃತಿ ತನಗೆ ಸೂಕ್ತವೆಂದು ಪರಿಗಣಿಸಿದ, ಸಾಂಸ್ಕೃತಿಕ ಮೌಲ್ಯ, ಉದ್ದೇಶಗಳ ಈಡೇರಿಕೆಗಾಗಿ ವೈಯಕ್ತಿಕ ಇಷ್ಟಗಳಿಗಿಂತಲೂ ಸಾಮುದಾಯಿಕ ಸಾಂಸ್ಕೃತಿಕ ಇಷ್ಟಗಳು ಬೇರೆಯಾದರೂ ಕೂಡ, ವಿವೇಚನಾಯುಕ್ತ ವ್ಯಕ್ತಿಯ ಆಯ್ಕೆಗಳೂ ಸಾಂಸ್ಕೃತಿಕ ಪರಿಸರದಿಂದಲೇ ನಿರ್ದೇಶಿಸಲ್ಪಡುತ್ತವೆಂದು ತಿಳಿದು, ಈ ಹಿನ್ನೆಲೆ ಯಲ್ಲಿಯೇ ತಾರ್ಕಿಕ ತೀರ್ಮಾನದ ಪ್ರಕ್ರಿಯೆಯನ್ನು ವಿಶ್ಲೇಷಿಸಬೇಕು.

ಫಿರ್ತ್ ಮತ್ತು ಲಾಫ್ಲಿನ್‌ರು ಇದೇ ಮಾದರಿಯಲ್ಲೇ ಆರ್ಥಿಕ ಸಿದ್ಧಾಂತಗಳನ್ನು ಮಾನವಿಕ ಶಾಸ್ತ್ರಕ್ಕೆ ಹಾಗೂ ಬೆಲೆ ಯಾಂತ್ರಿಕತೆ ಇಲ್ಲದ ಸಮಾಜಗಳಿಗೂ ಅನ್ವಯಿಸಿದ್ದಾರೆ. ಸಾಂಸ್ಕೃತಿಕ ಮೌಲ್ಯ ವಲ್ಲದೆ ವಿಕಾಸಾತ್ಮಕ ಮನಃಶಾಸ್ತ್ರದ ಸಹಾಯವನ್ನು ಈ ಮಾದರಿ ಬಳಸಿಕೊಂಡಿದೆ. ಇದರ ಹೆಗ್ಗಳಿಕೆಯೆಂದರೆ ಇದು ಅರ್ಥಶಾಸ್ತ್ರದ ದೊಡ್ಡ ಸಾರ್ವತ್ರಿಕ ತಪ್ಪಾದ ತಾರ್ಕಿಕ ಮಾನವನ ಊಹೆಯ ಜೊತೆ ಜೊತೆಗೇ ಆಯಾ ಸಂಸ್ಕೃತಿ, ಮೌಲ್ಯ ಇತ್ಯಾದಿಗಳನ್ನು ಪರಿಗಣಿಸಿ ಸಾಂಸ್ಕೃತಿಕ ಪರಿಸರದಿಂದ ನಿರ್ದೇಶಿಸಲ್ಪಡುತ್ತವೆ ಎಂಬುದನ್ನು ಒಪ್ಪಿಕೊಂಡಿರುವುದಾಗಿದೆ. ಇದು ಅರ್ಥಶಾಸ್ತ್ರಕ್ಕೆ ಒಂದು ಹೊಸ ತಿರುವನ್ನು ನೀಡುತ್ತದೆ ಎಂದರೆ ತಪ್ಪಾಗಲಾರದು.

ನೈಜ ವಾಸ್ತವಿಕವಾದ: ಇದು ಸಾಂಪ್ರದಾಯಿಕ ಮಾದರಿಗಿಂತ ಉತ್ತಮವಾಗಿದ್ದು ಅದರ ಸುಧಾರಿತ ರೂಪವಾಗಿದೆ. ಇದನ್ನು 'ಕಾರ್ಲ್ ಪೊಲಾನಿ' ಅವರು ತಮ್ಮ "The Great Transformation' ಎಂಬ ಪ್ರಸಿದ್ಧ ಪುಸ್ತಕದಲ್ಲಿ ಮೊದಲು ಪ್ರತಿಪಾದಿಸಿದರು. ಇದರ ಪ್ರಕಾರ ಅರ್ಥಶಾಸ್ತ್ರಕ್ಕೆ ಎರಡು ಅರ್ಥಗಳಿವೆ. ಮೊದಲನೆಯದು ಸಾಂಪ್ರದಾಯಿಕ ಅರ್ಥ. ಅಂದರೆ ಮನುಷ್ಯ ತಾರ್ಕಿಕ ಜೀವಿ ಹಾಗಾಗಿ ಕೊರತೆಯಲ್ಲಿರುವ, ಪರ್ಯಾಯ ಬಳಕೆಯ ಸಂಪನ್ಮೂಲಗಳಲ್ಲಿಯೇ ಆಯ್ಕೆಯ ಮೂಲಕ ಹೇಗೆ ಅಪರಿಮಿತ ಬಯಕೆ ತೃಪ್ತಿಪಡಿಸಲು ಯತ್ನಿಸುತ್ತಾನೆ ಎನ್ನುವುದನ್ನು ವಿವೇಚಿಸುತ್ತದೆ. ಇದು ಸಾಮಾನ್ಯ ಅರ್ಥಶಾಸ್ತ್ರದ ಸಾಮಾನ್ಯ ಅರ್ಥವಾಗಿದೆ. ಈ ಆಯ್ಕೆಯ ಪ್ರಶ್ನೆಯೇ ಅರ್ಥಶಾಸ್ತ್ರದ ಅನೇಕ ಪ್ರಶ್ನೆಗಳಿಗೆ ಉತ್ತರ ಮಾತ್ರವಾಗಿರದೆ ಅರ್ಥಶಾಸ್ತ್ರದ ದೊಡ್ಡ ಸಮಸ್ಯೆಯೂ ಆಗಿದೆ ಎನ್ನಬಹುದು. ಈ ಆಯ್ಕೆಯ ತಪ್ಪುಗಳೇ ಪರಿಸರ ನಾಶಕ್ಕೆ, ಮಾನವೀಯತೆಯ ಅವನತಿಗೆ ಕಾರಣವೂ ಆಗಿದೆ. ಎರಡನೆಯ ವಾಸ್ತವ ಅರ್ಥಶಾಸ್ತ್ರವೆಂದರೆ ಕೊರತೆಯೂ ಅಲ್ಲ, ಆಯ್ಕೆಯೂ ಅಲ್ಲ, ತಾರ್ಕಿಕತೆಯೂ ಅಲ್ಲ. ಅವುಗಳ ಬದಲಾಗಿ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರಗಳನ್ನು ಬಳಸಿಕೊಂಡು ಮನುಷ್ಯ ಹೇಗೆ ಜೀವನೋಪಾಯದ ಮಾರ್ಗಗಳನ್ನು ಕಂಡುಕೊಳ್ಳುತ್ತಾನೆ ಎಂಬುದಾಗಿದೆ.

ಒಂದು ಸಮಾಜದ ಜೀವನೋಪಾಯದ ತಂತ್ರವು ಅವರು ಹೇಗೆ ಭೌತಿಕ–ನೈಸರ್ಗಿಕ ಪರಿಸರಕ್ಕೆ ಹೊಂದಿಕೊಂಡು ಗರಿಷ್ಠ ತುಷ್ಟಿಗುಣ ಇಲ್ಲದೆಯೂ ಬದುಕುತ್ತಾರೆ ಎನ್ನುವುದಾಗಿದೆ. ವಿಶಾಲಾರ್ಥದಲ್ಲಿ ಉಳಿತಾಯಿಸುವಿಕೆ ಅಥವಾ ತಾತ್ಕಾಲಿಕ ವಿಧಾನಗಳ ಮೂಲಕ ಭೌತಿಕ ಅವಶ್ಯಕತೆಗಳನ್ನು ತೃಪ್ತಿ ಪಡಿಸುವ ಮಾರ್ಗವಾಗಿದೆ. ಈ ಅಂಶ ಸತ್ಯಕ್ಕೆ ಮತ್ತು ವಾಸ್ತವಿಕತೆಗೆ ತುಂಬಾ ಹತ್ತಿರವಿದ್ದು ಮಾನವಿಕಾರ್ಥಶಾಸ್ತ್ರದಲ್ಲಿ ಮಾತ್ರವಲ್ಲದೆ ಅರ್ಥಶಾಸ್ತ್ರದ ಪಠ್ಯಗಳಲ್ಲೂ ಇದಕ್ಕೆ ಸ್ಥಾನ ನೀಡಬೇಕಿದೆ. ಆಗ ಮಾತ್ರ ಅರ್ಥಶಾಸ್ತ್ರಕ್ಕೆ ಅಂಟಿರುವ ಕಳಂಕ ದೂರವಾಗಬಹುದು. ಗರಿಷ್ಠ ತುಷ್ಟಿಗುಣವೆಂಬ ಕಲ್ಪಿತ ಮಿಥ್ಯೆಯನ್ನು ಒಡೆಯಲು ಇದು ಸಹಾಯಕವಾಗಿದೆ.

ಪೊಲನಿಯ 'ಬೃಹತ್ ಪರಿವರ್ತನೆ'ಯ ಪರಿಭಾಷೆಯು ಆಧುನಿಕ ಮಾರುಕಟ್ಟೆ ಆಧಾರಿತ ಸಮಾಜಗಳು ಮತ್ತು ಪಾಶ್ಚಿಮಾತ್ಯವಲ್ಲದ, ಬಂಡವಾಳಶಾಹಿಯಲ್ಲದ, ಔದ್ಯೋಗೀಕರಣ ಪೂರ್ವ ಸಮಾಜಗಳ ನಡುವಿನ ಅಂತರವನ್ನು ಪ್ರತಿನಿಧಿಸುತ್ತದೆ. ಅವರ ವಾದದಂತೆ ಎರಡನೇ ವರ್ಗದ

ಸಮಾಜಗಳ ವಿಶ್ಲೇಷಣೆಗೆ ಸಾಂಪ್ರದಾಯಿಕ ವಾಸ್ತವ ಅರ್ಥಶಾಸ್ತ್ರವೇ ಸೂಕ್ತ. ಬೆಲೆ ನಿರ್ಧರಿಸುವ ಮಾರುಕಟ್ಟೆಗಳ ಅಸ್ತಿತ್ವ ಇಲ್ಲದಿರುವಾಗ ಸಾಂಪ್ರದಾಯಿಕ ವಿಶ್ಲೇಷಣೆ ಅನ್ವಯವಾಗದು. ಏಕೆಂದರೆ ಔದ್ಯೋಗಿಕಪೂರ್ವ ಅಥವಾ ಕೇಂದ್ರೀಯ ಯೋಜಿತ ಆರ್ಥಿಕತೆಗಳಲ್ಲಿ(ಉದಾ: ಚೈನಾ, ಹಳೆ ರಷ್ಯಾ) ಆರ್ಥಿಕ ತೀರ್ಮಾನಗಳು ವೈಯಕ್ತಿಕ ಆಯ್ಕೆಗಳಿಗಿಂತಲೂ ಸಾಮಾಜಿಕ ಸಂಬಂಧಗಳು, ಸಾಂಸ್ಕೃತಿಕ ಮೌಲ್ಯಗಳು, ನೈತಿಕ ಕಾಳಜಿಗಳು, ರಾಜಕೀಯ ಧಾರ್ಮಿಕ ಅಂಶಗಳು ಅಥವಾ ಅಧಿಕಾರದ ಭಯಗಳು ಮುಂತಾದವುಗಳಿಂದ ನಿರ್ಧರಿಸಲ್ಪಡುತ್ತವೆ. ಬುಡಕಟ್ಟು ಅಥವಾ ರೈತಾಪಿ ಸಮಾಜ ಗಳಲ್ಲಿ ಉತ್ಪಾದನೆ ಉತ್ಪಾದಕರಿಗಾಗಿ, ವಿನಿಮಯಕ್ಕಾಗಿ ಅಲ್ಲ. ಅಂದರೆ ಸ್ವಯಂ ಉಪಯೋಗಕ್ಕಾಗಿ ಉತ್ಪಾದನೆ('Production for use as opposed to production for exchange'). ಜೀವನೋಪಾಯದ ಆರ್ಥಿಕತೆಗಳಲ್ಲಿ ಲಾಭ, ಮಾರುಕಟ್ಟೆ, ಬೆಲೆ ಇತ್ಯಾದಿಗಳು ಅರ್ಥ ಕಳೆದುಕೊಳ್ಳುವುದರಿಂದ ಯಾವುದೇ ಒಂದು ಸಿದ್ಧಾಂತ ಈ ಎರಡೂ ಸಮಾಜಗಳನ್ನು ವಿವರಿಸಲಾರದು. ಆಧುನಿಕ ಬಂಡವಾಳಶಾಹಿ ಆರ್ಥಿಕತೆಗಳಲ್ಲಿ ಸಾಂಪ್ರದಾಯಿಕ ಅರ್ಥಶಾಸ್ತ್ರ ಹಾಗೂ ವಾಸ್ತವಿಕವಾದ ಗಳೆರಡೂ ಅಸ್ತಿತ್ವದಲ್ಲಿರುತ್ತವೆ. ಏಕೆಂದರೆ ಇಲ್ಲಿ ಜನರ ಜೀವನಪೂರ್ವಕ ಬುದ್ಧಿಪೂರ್ವಕ ಆಯ್ಕೆ ಯನ್ನು ಆಧರಿಸಿರುತ್ತದೆ. ಆದರೆ ಬಂಡವಾಳೇತರ–ಔದ್ಯಮಿಕಪೂರ್ವ ಆರ್ಥಿಕತೆಗಳಲ್ಲಿ ಮಾರುಕಟ್ಟೆ ವಿನಿಮಯಕ್ಕಿಂತಲೂ, ಮರುಹಂಚಿಕೆ ಮತ್ತು ಪರಸ್ಪರ(ನೀಡಿಕೆ) ಹಂಚಿಕೆಗಳು ಪ್ರಮುಖವಾಗಿರುತ್ತವೆ.

ಪರಸ್ಪರ ವಿನಿಮಯದಲ್ಲಿ ಜನರು ತಮ್ಮ ದೀರ್ಘಕಾಲೀನ ಸಂಬಂಧಗಳಿಗಾಗಿ ಸರಕು ಸೇವೆ ಗಳನ್ನು ಪರಸ್ಪರ ಹಂಚಿಕೊಳ್ಳುತ್ತಾರೆ. ಮರುಹಂಚಿಕೆಯು ರಕ್ತಸಂಬಂಧ ಆಧರಿತ ನಾಯಕತ್ವ ಅಥವಾ ಸಶಕ್ತ ರಾಜಕೀಯ ಕೇಂದ್ರದ(ಬುಡಕಟ್ಟು) ಮೂಲಕ ಸಾಂಸ್ಕೃತಿಕವಾಗಿ ನಿರ್ದಿಷ್ಟಪಡಿಸಿದ ನಂಬಿಕೆಗಳ ಆಧಾರದಲ್ಲಿ ಜೀವನಾವಶ್ಯಕ ಸರಕುಗಳನ್ನು ಸ್ವೀಕರಿಸಿ ಮರುಹಂಚಿಕೆ ಮಾಡಲಾಗುತ್ತದೆ.

ಮಾರುಕಟ್ಟೆ ಆಧರಿತವಲ್ಲದ ಆರ್ಥಿಕತೆಗಳಲ್ಲಿ ಸಾಮಾನ್ಯವಾಗಿ ಮರುಹಂಚಿಕೆ ಮತ್ತು ಪರಸ್ಪರ ಹಂಚಿಕೆಗಳ ಜೊತೆಯಾಗಿಯೇ ಅಸ್ತಿತ್ವದಲ್ಲಿರುತ್ತದೆ. ಆದರೆ ಆಧುನಿಕ ಆರ್ಥಿಕತೆಯಲ್ಲಿ ಮಾರುಕಟ್ಟೆ ವಿನಿಮಯವೇ ಪ್ರಧಾನವಾಗಿದ್ದು ಪರಸ್ಪರ ಹಂಚಿಕೆ ಕುಟುಂಬದೊಳಗೆ ಅಥವಾ ಕುಟುಂಬಗಳ ನಡುವಿನ ಸಂಬಂಧಗಳಲ್ಲಿ ಅಸ್ತಿತ್ವದಲ್ಲಿದ್ದು, ಮರುಹಂಚಿಕೆ ಸರ್ಕಾರ ಅಥವಾ ದತ್ತಿಸಂಸ್ಥೆಗಳ ಮೂಲಕ ಜರುಗುತ್ತದೆ. ಈ ಎಲ್ಲ ರೀತಿಯ ಹಂಚಿಕೆ ವ್ಯವಸ್ಥೆಗಳಿಗೂ ಪ್ರತ್ಯೇಕ ವಿಶ್ಲೇಷಣಾ ಪರಿಕರಗಳ, ಪರಿಭಾವನೆಗಳ ಅವಶ್ಯಕತೆಯಿದೆ.

ವಾಸ್ತವಿಕ ಅರ್ಥಶಾಸ್ತ್ರದ ಇನ್ನೊಂದು ಮೂಲ ಪರಿಭಾವನೆಯೆಂದರೆ ಒಳಗೊಳ್ಳುವಿಕೆ ಅಥವಾ ಆವರಿಸುವಿಕೆ. ಅಂದರೆ ಆರ್ಥಿಕತೆಯು ಪ್ರತ್ಯೇಕವಾಗಿರದೆ ಆರ್ಥಿಕ ಮತ್ತು ಅನಾರ್ಥಿಕ ಸಂಸ್ಥೆಗಳಿಂದ ಆವರಿಸಲ್ಪಟ್ಟಿದೆ. ವಿನಿಮಯವು ಪ್ರತ್ಯೇಕ ನಿರ್ವಾತ ಅಥವಾ ಶೂನ್ಯಸ್ಥಿತಿಯಲ್ಲಿರದೆ ಸಮಾಜದೊಳಗೆ, ಸಮಾಜದಿಂದ ನಿಯಂತ್ರಿಸಲ್ಪಟ್ಟಿದೆ. ಉದಾಹರಣೆಗೆ ಆರ್ಥಿಕತೆಗೆ ಧರ್ಮ ಹಾಗೂ ಸರಕಾರಗಳು ಕೂಡ ಆರ್ಥಿಕ ಸಂಸ್ಥೆಗಳಷ್ಟೇ ಪ್ರಮುಖವಾಗಿವೆ. ಜನರ ಜೀವನೋಪಾಯದಲ್ಲಿ ಸಾಮಾಜಿಕ ಸಾಂಸ್ಕೃತಿಕ

ನಂಬಿಕೆಗಳು, ನಿಯಮಗಳು, ಮೌಲ್ಯಗಳೂ ಮುಖ್ಯ ಪಾತ್ರ ವಹಿಸುತ್ತದೆ. ಆದ್ದರಿಂದಲೇ ಸಾಮಾಜಿಕ ಸಾಂಸ್ಕೃತಿಕ ಮತ್ತು ರಾಜಕೀಯ ಅಂಶಗಳಿಂದ ದೂರ ಉಳಿದ ಅಥವಾ ಏಕಾಂಗಿಯಾದ ಆರ್ಥಿಕ ವಿಶ್ಲೇಷಣೆಗಳು ಮೂಲತಃ ದೋಷಪೂರಿತವಾಗಿರುತ್ತವೆ ಎನ್ನಬಹುದು. ಆದ್ದರಿಂದ ಅರ್ಥಶಾಸ್ತ್ರದ ವಾಸ್ತವಿಕತಾವಾದದ ವಿಶ್ಲೇಷಣೆಯು ಜನರ ಜೀವನೋಪಾಯಗಳು ಆಧರಿಸಿರುವ ವಿವಿಧ ಸಾಮಾಜಿಕ ಸಂಸ್ಥೆಗಳ ಅಧ್ಯಯನಕ್ಕೆ ಹೆಚ್ಚಿನ ಗಮನ ಕೇಂದ್ರೀಕರಿಸಿದೆ.

ಮಾರುಕಟ್ಟೆಯೂ ಜನರ ವ್ಯವಹಾರವನ್ನು ಪ್ರಭಾವಿಸುವ ಹಲವಾರು ಸಂಸ್ಥೆಗಳಲ್ಲಿ ಒಂದು ಸಂಸ್ಥೆಯಾಗಿದ್ದು ಪೊಲನಿ ಅವರ ಮೂಲವಾದವೆಂದರೆ ವಿವಿಧ ಸಾಂಸ್ಥಿಕ ವ್ಯವಸ್ಥೆಗಳೇ ಆರ್ಥಿಕ ಪ್ರಕ್ರಿಯೆಗಳ ಸಂಘಟನೆಯಾಗಿದ್ದು ಮನುಷ್ಯನ ಬಯಕೆಗಳನ್ನು ತೃಪ್ತಿಪಡಿಸುವ ಸರಕು ಸೇವೆಗಳ ನಿರಂತರ ಪೂರೈಕೆ ಮೂಲವೆಂದರೆ ಮಾನವ ಮತ್ತು ಪರಿಸರದ ನಡುವಿನ ಸಾಂಸ್ಥಿಕ ಸಂವಹನದ ಪ್ರಕ್ರಿಯೆಯೇ ವಾಸ್ತವಿಕ ಅರ್ಥಶಾಸ್ತ್ರವಾಗಿದೆ.

ಮಾನವಿಕಾರ್ಥಶಾಸ್ತ್ರದಲ್ಲಿ ಒಳಗೊಳ್ಳುವಿಕೆ ಅಥವಾ ಆವರಿಸುವಿಕೆಯ ಪರಿಕಲ್ಪನೆ ತುಂಬಾ ಪ್ರಭಾವಶಾಲಿ ಪರಿಕಲ್ಪನೆಯಾಗಿದೆ. ಏಕೆಂದರೆ ಶ್ರೀಯುತ ಗ್ರಾನೋವೆಟ್ಟರ್(Granovetter) ಅವರ ಇಂಡೋನೇಷ್ಯಾದಲ್ಲಿ ಚೀನೀಯರ ಪಾರಂಪರಿಕ ವ್ಯವಹಾರದ ಸಂಬಂಧಗಳು ಎಂಬ ಅಧ್ಯಯನದಲ್ಲಿ ವ್ಯಕ್ತಿಗತ ಆರ್ಥಿಕ ಪ್ರತಿನಿಧಿತ್ವದಲ್ಲಿ ವೈಯಕ್ತಿಕ ಸಂಬಂಧಗಳ ಬಲೆಯ ಆವರಿಸಿಕೊಳ್ಳುವಿಕೆ ಪ್ರಮುಖ ಪಾತ್ರವಹಿಸುತ್ತದೆ ಎಂದಿದ್ದಾರೆ. ಗಿರಾಕೀಕರಣ ಅಥವಾ ಗ್ರಾಹಕ ಸಂತುಷ್ಟೀಕರಣದ ಪ್ರಕ್ರಿಯೆಯಲ್ಲಿ ಗ್ರಾಹಕರು ಮತ್ತು ಮಾರಾಟಗಾರರ ನಡುವಿನ ಆರ್ಥಿಕ ವ್ಯವಹಾರಗಳಿಗಿಂತ ವೈಯಕ್ತಿಕ ಸಂಬಂಧಗಳನ್ನು ಬೆಳೆಸಿಕೊಳ್ಳುವಿಕೆ ಪ್ರಮುಖ ಪಾತ್ರ ವಹಿಸುತ್ತದೆ. ಆರ್ಥಿಕ ವಿನಿಮಯಗಳು ಅಪರಿಚಿತರ ನಡುವೆ ನಡೆಯುವುದಿಲ್ಲ. ಬದಲಾಗಿ ದೀರ್ಘಾವಧಿ ನಿರಂತರ ಸಂಬಂಧದ ಇಚ್ಛೆಯುಳ್ಳ ವ್ಯಕ್ತಿಗಳ ನಡುವೆ ನಡೆಯುತ್ತವೆ. ಹಿಂದಿನ ಆರ್ಥಿಕ ವಿಶ್ಲೇಷಣೆಗಳು ಆರ್ಥಿಕ ಕ್ರಿಯೆಗಳನ್ನು ಮತ್ತು ಅರ್ಥಶಾಸ್ತ್ರವನ್ನು ಸಮಾಜ ಹಾಗೂ ಸಂಸ್ಕೃತಿಯಿಂದ ಬೇರ್ಪಡಿಸಿ ನೋಡುತ್ತವೆ. ಆದರೆ ವಾಸ್ತವಿಕವಾಗಿ ಆರ್ಥಿಕ ರಂಗದ ನಟರು ಸ್ವತಂತ್ರ ಅಣುವಿನಂತೆ ಅಥವಾ ಯಾರೋ ಬರೆದ ನಾಟಕದ ಪಾತ್ರಧಾರಿ ಗಳಂತೆ ವರ್ತಿಸುವುದಿಲ್ಲ. ಬದಲಾಗಿ ಅವರ ಉದ್ದೇಶಪೂರ್ವಕ ಕ್ರಿಯೆಗಳು ಪ್ರಸ್ತುತ ಸಾರ್ವಜನಿಕ ಸಂಬಂಧಗಳೊಡನೆ ಹಾಸುಹೊಕ್ಕಾಗಿರುತ್ತವೆ.

ಸಾಂಸ್ಕೃತಿಕವಾದ – ಸಾಂಸ್ಕೃತಿಕ ವಿಶ್ಲೇಷಣಾವಾದ

ಕೆಲವು ಮಾನವಶಾಸ್ತ್ರಜ್ಞರಿಗೆ ವಾಸ್ತವಿಕತಾವಾದವೂ ಕೂಡ ಸಾಂಪ್ರದಾಯಿಕವಾದದಂತೆ ದೋಷ ಪೂರಿತವಾಗಿದ್ದು ಅದೇ ತಪ್ಪನ್ನು ಪುನರಾವರ್ತಿಸಿದೆ. ಏಕೆಂದರೆ ಸಾಂಪ್ರದಾಯಿಕತಾವಾದ–ವಾಸ್ತವಿಕತಾವಾದಗಳೆರಡೂ ಯಾವುದೋ ಒಂದು ನಿರ್ದಿಷ್ಟ ಮಾದರಿಯನ್ನು ಸಾರ್ವತ್ರೀಕರಣಗೊಳಿಸಿ ಅನ್ವಯಿಸಲು ಪ್ರಯತ್ನಿಸುತ್ತವೆ. ಗುಡೆಮನ್‌ರ ಪ್ರಕಾರ ಸಾರ್ವತ್ರಿಕ ಆರ್ಥಿಕ ಮಾನವ ಎಂಬ ಪರಿಕಲ್ಪನೆಯೇ ತಪ್ಪಾಗಿದ್ದು ಸಾಂಪ್ರದಾಯಿಕತಾವಾದವಾಗಲಿ, ವಾಸ್ತವಿಕತಾವಾದವಾಗಲಿ ಇಲ್ಲವೇ

ಮಾರ್ಕ್ಸ್‌ವಾದವೇ ಆಗಲಿ ಸಾರ್ವತ್ರೀಕರಣದ ಸಿದ್ಧಮಾದರಿಯನ್ನು ಎಲ್ಲ ಆರ್ಥಿಕತೆಗಳಿಗೆ ಅನ್ವಯಿಸುವ ತಪ್ಪನ್ನೇ ಮಾಡಿವೆ. ಏಕೆಂದರೆ ಇವು ಭೌತಿಕ ಜಗತ್ತಿನ ಅಥವಾ ನೈಸರ್ಗಿಕ ಭೌತವಿಜ್ಞಾನದ ತಾಂತ್ರಿಕ ವಿಧಾನಗಳನ್ನು ನೇರವಾಗಿ ಮಾನವಿಕ ಜಗತ್ತಿಗೆ ಅನ್ವಯಿಸುವ ಪ್ರಯತ್ನದಲ್ಲಿವೆ.

ವಿಜ್ಞಾನ, ತಂತ್ರಜ್ಞಾನ, ಯಂತ್ರಗಳನ್ನು ಬಳಸಿಕೊಂಡ ಆರ್ಥಿಕತೆ ಅಂದು ಮಂತ್ರಗಳಿಂದಾಗುತ್ತಿದ್ದ ಶೋಷಣೆಯನ್ನು ನಿವಾರಿಸಿತಾಗಲೀ ಯಂತ್ರಗಳಿಂದ ಶೋಷಣೆಯನ್ನು ಆರಂಭಿಸಿತು. ಅಂದು ಧಾರ್ಮಿಕತೆಯ ವಿರುದ್ಧ ಹೋರಾಡಿದ ಇವು ಇಂದು ನೈತಿಕತೆಯನ್ನೇ ನಾಶ ಮಾಡಿವೆ. ಅಂದು ಜಾತಿಗಳನ್ನು ನಾಶ ಮಾಡಬಹುದೆಂದುಕೊಂಡಿದ್ದ ಇವು ಇಂದು ಜಾತಿಗಳ ಜೊತೆ ವರ್ಗಗಳನ್ನೂ ಸೃಷ್ಟಿಸಿವೆ. ಅಂದು ಸತ್ಯದ ಅನ್ವೇಷಣೆಗೆ ಹೊರಟ ಇವು ಇಂದು ಸುಖದ ಹಿಂದೆ ಕಳೆದು ಹೋಗಿದೆ. ಬೃಹತ್ ಉತ್ಪಾದನೆಯಲ್ಲಿ ತೊಡಗಿದ ಇವು ಸಣ್ಣಸಣ್ಣ ವಸ್ತುಗಳು ಮತ್ತು ಸಣ್ಣಸಣ್ಣ ಸುಖಗಳನ್ನು ಹೊಸಕಿ ಹಾಕಿವೆ. ಸಮುದಾಯವನ್ನು ನಾಶ ಮಾಡಿ ವೈಯಕ್ತಿಕತೆಯನ್ನು ವೈಭವೀಕರಿಸಿವೆ. ಪರಸ್ಪರ ಸಹಕಾರ ಬಯಸುತ್ತಿದ್ದ ಸಾಟಿಪದ್ಧತಿಯನ್ನು ಅಳಿಸಿ ಹಣವೆಂಬ ದೈತ್ಯಶಕ್ತಿಯನ್ನು ಸೃಷ್ಟಿಸಿವೆ.

ಭೌತಿಕ ಜಗತ್ತಿನ ನಿರ್ಜೀವ ವಸ್ತುಗಳ ಅಥವಾ ಪ್ರಾಣಿಜಗತ್ತಿನ ನಿಯಮಗಳನ್ನು ಮಾನವ ಜಗತ್ತಿಗೆ ಯಥಾವತ್ತಾಗಿ ತರುವುದು ಎಷ್ಟು ಸಮಂಜಸವೆಂಬುದನ್ನು ಅರ್ಥಶಾಸ್ತ್ರಜ್ಞರು ಹಾಗೂ ಮಾನವಿಕಾರ್ಥಶಾಸ್ತ್ರಜ್ಞರು ಮನಗಂಡು ಪಾಶ್ಚಾತ್ಯ ಮೀಮಾಂಸಕರ ಸಿದ್ಧ-ಸಾರ್ವತ್ರಿಕ ಮಾದರಿ ಕೈಬಿಟ್ಟು, ಪ್ರತಿಯೊಂದು ಸಂಸ್ಕೃತಿ ವಿಭಿನ್ನವಾಗಿದ್ದು, ಆ ಸಂಸ್ಕೃತಿಗನುಗುಣವಾಗಿ ವಿಕಸಿಸಿರುವ ಸ್ಥಾನಿಕ ಮಾದರಿಗಳನ್ನು ಪರಿಗಣಿಸಿ ವಿಶ್ಲೇಷಿಸಬೇಕು ಎಂಬುದೇ ಸಾಂಸ್ಕೃತಿಕವಾದದ ಆಶಯವಾಗಿದೆ.

'ಜೀವನೋಪಾಯದ ಮಾದರಿಯನ್ನು ಸಾಂದರ್ಭಿಕ ಹಾಗೂ ಯಾಂತ್ರಿಕ ಕ್ರಿಯೆ ಎಂದೋ, ನೈಸರ್ಗಿಕ ಮತ್ತು ಅನಿವಾರ್ಯ ಸಂದರ್ಭವೆಂದಲ್ಲಿ ಅತಿಮಾನುಷ ಶಕ್ತಿಗಳ ಕ್ರಿಯೆಯೆಂದೋ ಅಥವಾ ಇವೆಲ್ಲವುಗಳ ಸಮಗ್ರರೂಪವೆಂದೋ ವಿಶ್ಲೇಷಿಸಬಹುದಾಗಿದೆ.'[೨೦]

ಉದಾಹರಣೆಗೆ 'ಇಬಾನ್(Iban) ಜನರು ಭತ್ತದ ಕಟಾವು ಮಾಡಲು ಸಣ್ಣ ಕೈಕತ್ತಿ ಅಥವಾ ಚಾಕು ಗಳನ್ನು ಮಾತ್ರ ಬಳಸುತ್ತಾರಲ್ಲದೆ ಕುಡುಗೋಲುಗಳನ್ನು ಬಳಸುವುದಿಲ್ಲ. ಕುಡುಗೋಲಿನಿಂದ ಕೆಲಸ ಬೇಗನೆ ಆಗುತ್ತದೆಂದು ಗೊತ್ತಿದ್ದರೂ ಕೂಡಾ ಹಾಗೆ ಮಾಡಿದರೆ ಭತ್ತದ ಆತ್ಮ ಅಥವಾ ಶಕ್ತಿ ಓಡಿಹೋಗುತ್ತದೆಂಬ ನಂಬಿಕೆ ಅವರನ್ನು ಕುಡುಗೋಲಿನ ಬಳಕೆ ಮತ್ತು ಆ ಮೂಲಕ ಸಮಯ ಶ್ರಮದ ಉಳಿತಾಯದಿಂದ ದೂರವಿರಿಸಿದೆ.'[೨೧] ಇಲ್ಲಿ ಲಾಭಕ್ಕಿಂತ ನಂಬಿಕೆ ಹಾಗೂ ಅತಿಮಾನುಷ ಶಕ್ತಿಗಳು ಹೆಚ್ಚು ಪ್ರಭಾವಶಾಲಿಯಾಗಿರುತ್ತವೆ.

ಗುಡೆಮನ್ ಅವರು ಸಾಂಸ್ಕೃತಿಕ ಸಾಪೇಕ್ಷಿತಾವಾದವನ್ನು ಅದರ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದಿದ್ದಾರೆ. ಸಾಮಾನ್ಯ ಅರ್ಥದಲ್ಲಿ ಸಾಂಸ್ಕೃತಿಕತಾವಾದವು ವಾಸ್ತವಿಕತಾವಾದದ ಮುಂದುವರಿಕೆಯಾಗಿದ್ದು ಸಾಂಸ್ಕೃತಿಕ ಸೃಜನಾತ್ಮಕತೆಗೆ ಹಾಗೂ ಪ್ರಾದೇಶಿಕ ತಿಳುವಳಿಕೆ ಮತ್ತು ಸಾಮಾಜಿಕ ಸಾಂಸ್ಕೃತಿಕ ಚಲನಾತ್ಮಕತೆಗೆ ಆರ್ಥಿಕ ಪರಿಕಲ್ಪನೆಗಳಿಗಿಂತ ಹೆಚ್ಚಿನ ಒತ್ತು ನೀಡಿದೆ.

ವಾಸ್ತವಿಕತಾವಾದಿಯು ಸಾಂಸ್ಥಿಕ ವ್ಯವಸ್ಥೆ ಹಾಗೂ ಸಂಸ್ಥೆಗಳಿಗೆ ಪ್ರಾಮುಖ್ಯತೆ ನೀಡಿದರೆ ಸಾಂಸ್ಕೃತಿಕತಾವಾದಿಯು ನಿರ್ದಿಷ್ಟ ಪ್ರಾದೇಶಿಕ ಸಮುದಾಯಗಳನ್ನು ಅಧ್ಯಯನದ ಕೇಂದ್ರವನ್ನಾಗಿಸಿ ಕೊಂಡಿದ್ದಾನೆ. ಸಾಂಪ್ರದಾಯಿಕವಾದದ ಮಾನವರ ಎಲ್ಲ ಚಟುವಟಿಕೆಗಳನ್ನು ಬುದ್ಧಿಪೂರ್ವಕ ಆಯ್ಕೆ ಮತ್ತು ನಿರ್ಧಾರ ಹಾಗೂ ತುಷ್ಟಿಗುಣ ಗರಿಷ್ಠ ಗೊಳಿಸುವಿಕೆಗಳಿಂದ ವಿವರಿಸಬಹುದೆಂಬ ವಾದವನ್ನು ವಾಸ್ತವಿಕತಾವಾದ ಮತ್ತು ಸಾಂಸ್ಕೃತಿಕವಾದಗಳೆರಡೂ ತಿರಸ್ಕರಿಸುತ್ತವೆ.

ವಿಮರ್ಶೆ: ಈ ಮೂರೂ ವಾದಗಳು ಮಾನವಿಕಾರ್ಥಶಾಸ್ತ್ರದ ಮೂರು ಸ್ತಂಭಗಳಾಗಿದ್ದು, ಹಂತಹಂತವಾಗಿ ಈ ಹೊಸಶಾಸ್ತ್ರದ ಬೆಳವಣಿಗೆಗೆ ತಮ್ಮದೇ ಕಾಣಿಕೆ ನೀಡಿವೆ. ಒಂದಕ್ಕಿಂತ ಒಂದು ಉತ್ತಮವೆನಿಸಿದರೂ ಈ ಮೂರು ವಾದಗಳಿಗೆ ತಮ್ಮದೇ ಮಿತಿಗಳಿವೆ.

ಮೊದಲನೆಯದಾಗಿ ಸಾಂಪ್ರದಾಯಿಕವಾದದ ಮುಖ್ಯ ಊಹೆಗಳಾದ ಮಾನವರೆಲ್ಲಾ ಬುದ್ಧಿವಂತರು ಮತ್ತು ತಾರ್ಕಿಕ ಶಕ್ತಿ ಉಳ್ಳವರೆಂಬುದನ್ನು ಮತ್ತು ತುಷ್ಟಿಗುಣದ ಗರಿಷ್ಠಗೊಳಿಸುವಿಕೆಗಳನ್ನು ಸಾಕಷ್ಟು ಜನ ಪ್ರಶ್ನಿಸಿದ್ದಾರಲ್ಲದೆ ಇದನ್ನೇ ಎಲ್ಲ ಕಾಲ, ಪ್ರದೇಶ, ಜನರಿಗೆ, ಸಂಸ್ಕೃತಿಗಳಿಗೆ ಸಾರ್ವತ್ರೀಕರಣ ಗೊಳಿಸುವುದನ್ನು ಟೀಕಿಸಲಾಗಿದೆ.

ಪ್ರಾಟ್ಟಿಸ್ ಹೇಳುವಂತೆ ಸಮಸೀಮಾಂತ ತುಷ್ಟಿಗುಣದ ಹೇಳಿಕೆ ಪುನರುಕ್ತಿಯಾಗಿದ್ದು ಕೆಲಸಕ್ಕೂ ವಿರಾಮಕ್ಕೂ ಎಲ್ಲಕ್ಕೂ ಅದನ್ನೇ ಅನ್ವಯಿಸಲಾಗುತ್ತದೆ. ಒಬ್ಬ ವ್ಯಕ್ತಿ ಹಣಕ್ಕಾಗಿ ಕೆಲಸ ಮಾಡದಿದ್ದಾಗಲೂ ಅದನ್ನು ಸಂತೋಷ ಅಥವಾ ಇನ್ನುವುದೋ ಮೌಲ್ಯದ ಗರಿಷ್ಠತೆಗಾಗಿ ಮಾಡಲಾಗಿದೆ ಎನ್ನಲಾಗುತ್ತದೆ. ಒಬ್ಬ ವ್ಯಕ್ತಿ ಇತರರಿಗೆ ಸಹಾಯ ಮಾಡಲು ತನ್ನೆಲ್ಲ ಹಣ, ಸಮಯ, ಆರೋಗ್ಯ ಇತ್ಯಾದಿಗಳನ್ನು ತ್ಯಾಗ ಮಾಡಿದರೂ ಸಾಂಪ್ರದಾಯಿಕವಾದಿ ಅದನ್ನು ಇತರರಿಗೆ ಸಹಾಯ ಮಾಡುವುದರಿಂದ ದೊರೆಯುವ ತೃಪ್ತಿ ಅಥವಾ ಸಮಾಜದಲ್ಲಿ ದೊರೆಯು ಪ್ರಶಂಸೆಗಳಿಗಾಗಿ ಅಥವಾ ಸಾಮಾಜಿಕ ಮೌಲ್ಯ ಗರಿಷ್ಠತೆಗಾಗಿ ಮಾಡಿದ್ದಾರೆ ಎನ್ನಬಹುದು. ಮತ್ತು ಆ ಮೂಲಕ ಉಳಿದೆಲ್ಲಾ ಗುರಿಗಳನ್ನು ತ್ಯಾಗಮಾಡಿ ತೃಪ್ತಿಯನ್ನು ಗರಿಷ್ಠಪಡಿಸಿಕೊಂಡಿದ್ದಾನೆ ಎಂದು ವಾದಿಸುತ್ತಾರೆ. ಇದು ಕೇವಲ ಊಹೆಯಾಗಿದ್ದು ಆ ವ್ಯಕ್ತಿಯ ನಿಜವಾದ ಉದ್ದೇಶಕ್ಕೆ ಹೊಂದಿಕೊಳ್ಳಬಹುದು ಅಥವಾ ಹೊಂದಿ ಕೊಳ್ಳಲಿಕ್ಕಿಲ್ಲ.

ಅದೇ ರೀತಿ ಗುಡೆಮನ್ ವಾದಿಸುವಂತೆ 'ಪಾಶ್ಚಿಮಾತ್ಯ ಮಾನವಿಕ ಅರ್ಥಶಾಸ್ತ್ರಜ್ಞರು ತಾವು ಅಧ್ಯಯನ ಮಾಡುವ ಜನರನ್ನೆಲ್ಲಾ ತಾರ್ಕಿಕ ಶಕ್ತಿಯುಳ್ಳವರೆಂದೇ ಕಂಡುಕೊಳ್ಳುತ್ತಾರೆ. ಏಕೆಂದರೆ ಅವರ ಮಾದರಿ ಅವರನ್ನು ಅದೇ ತೀರ್ಮಾನಕ್ಕೆ ಕರೆದೊಯ್ಯುತ್ತದೆ. ಅಲ್ಲದೆ ತುಷ್ಟಿಗುಣ ಗರಿಷ್ಠ ಪಡಿಸಿಕೊಳ್ಳದ ಯಾವುದೇ ಕ್ರಿಯೆಯನ್ನು ಅದು ಅತಾರ್ಕಿಕ ಎಂದು ತೀರ್ಮಾನಿಸಿಬಿಡುತ್ತದೆ. ಆದರೆ ಅದೇ ಆ ವ್ಯಕ್ತಿಗೆ ತನ್ನ ಕ್ರಿಯೆ ವೈಚಾರಿಕ ಮತ್ತು ತಾರ್ಕಿಕ, ನ್ಯಾಯಸಮ್ಮತ ಎನ್ನಿಸಬಹುದು. ಏಕೆಂದರೆ ಅವನ ಅರ್ಥೈಸುವಿಕೆ, ಹಿನ್ನೆಲೆ, ಹಾಗೂ ಉದ್ದೇಶಗಳ ಹಿನ್ನೆಲೆಯಲ್ಲಿ ತುಷ್ಟಿಗುಣ ಗರಿಷ್ಠ ಗೊಳಿಸುವಿಕೆಗಿಂತ ಈ ಕ್ರಿಯೆಯೇ ಹೆಚ್ಚು ಸಮಂಜಸ ಮತ್ತು ತಾರ್ಕಿಕ ಎನಿಸಬಹುದು.'[೨೨]

ಏನೇ ಇರಲಿ ಮಾನವಿಕಾರ್ಥಶಾಸ್ತ್ರದ ಪ್ರಯತ್ನಗಳು ತಮ್ಮ ಮಿತಿಗಳ ನಡುವೆಯೂ ಶ್ಲಾಘನೀಯವಾಗಿವೆಯೆಂದು ಹೇಳಬಹುದಾಗಿದೆ. ಇವು ಇನ್ನೂ ಶೈಶವಾವಸ್ಥೆಯಲ್ಲಿದ್ದು ಕಾಲಾಂತರದಲ್ಲಿ ಬುಡಕಟ್ಟು ಆರ್ಥಿಕತೆಯ ಅಧ್ಯಯನಕ್ಕೆ ಪ್ರಮುಖ ಕಾಣಿಕೆ ನೀಡಬಹುದಾಗಿದೆ. ಬುಡಕಟ್ಟು ಆರ್ಥಿಕತೆಯನ್ನು ವಿವರಿಸುವಲ್ಲಿ ಅರ್ಥಶಾಸ್ತ್ರ ಸಂಪೂರ್ಣ ವಿಫಲವಾಗಿಲ್ಲ. ಅದರ ಪರಿಕಲ್ಪನೆಗಳನ್ನೇ ಬಳಸಿಕೊಂಡು ಪ್ರಾಚೀನ ಸಂಸ್ಕೃತಿ ಮತ್ತು ಆರ್ಥಿಕತೆಗಳ ವಿಶ್ಲೇಷಣೆ ಸಾಧ್ಯ ಎಂಬುದನ್ನು ಇದು ನಿರೂಪಿಸುತ್ತದೆ. ಆದರೆ ಈ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಗಳು ಆಗಿಲ್ಲವೆಂಬುದೂ ನಿಜ. ಅರ್ಥಶಾಸ್ತ್ರಜ್ಞರೂ ಮತ್ತು ಸಮಾಜವಿಜ್ಞಾನಗಳ ಸಂಶೋಧಕರೂ ತಮ್ಮ ಸಾಮಾಜಿಕ ಜವಾಬ್ದಾರಿಯ ಅಂಗವಾಗಿ ಈ ರೀತಿಯ ದಮನಿತ ಮತ್ತು ಅಲಕ್ಷಿತ ವರ್ಗಗಳ ಆರ್ಥಿಕತೆಯ ಬಗ್ಗೆಯೂ ಸಂಶೋಧನೆ ನಡೆಸಬೇಕಿದೆ.

ಉಡುಗೊರೆ ಆರ್ಥಿಕತೆ

ಹಣದ ಆವಿಷ್ಕಾರಕ್ಕೂ ಮೊದಲು ಸಾಟಿಪದ್ಧತಿ ವಿನಿಮಯದ ವಿಧಾನವಾಗಿತ್ತು ಎಂಬ ಪ್ರಚಲಿತ ನಂಬಿಕೆಗಳಿಗೆ ವಿರುದ್ಧವಾಗಿ ಕೊಡುಗೆ ಆರ್ಥಿಕತೆ ಎಂಬ ಆದರ್ಶ ವಿತರಣಾ ವ್ಯವಸ್ಥೆ ಚಾಲ್ತಿಯಲ್ಲಿತ್ತು ಎಂಬುದನ್ನು ಹಲವಾರು ಮಾನವಶಾಸ್ತ್ರಜ್ಞರು ನಿರೂಪಿಸಿದ್ದಾರೆ.

"ಕೊಡುಗೆ ಅಥವಾ ಉಡುಗೊರೆ ಆರ್ಥಿಕತೆಯು ಸಮುದಾಯದ ಪ್ರತಿಯೊಬ್ಬರೂ ಸ್ವಯಂ ಪ್ರೇರಿತರಾಗಿ ಆಗಾಗ ಇತರ ಸದಸ್ಯರಿಗೆ ನೀಡುವ ಬೆಲೆ ಬಾಳುವ ಅಥವಾ ಉಪಯುಕ್ತ ವಸ್ತು ಅಥವಾ ಆಹಾರ ಅಥವಾ ಸಂತೋಷಕೂಟಗಳು ಮತ್ತು ಆ ಮೂಲಕ ತಮ್ಮ ಸಾಮಾಜಿಕ ಬಂಧಗಳನ್ನು ಸಂಬಂಧಗಳನ್ನು ಉಳಿಸಿ ಬೆಳೆಸಿಕೊಳ್ಳುವ ಹಾಗೂ ಆ ಮೂಲಕ ಸಮಾಜದ ಆದಾಯ ಮತ್ತು ಸಂಪತ್ತಿನ ಸಮಾನ ಹಂಚಿಕೆ ಮರುಹಂಚಿಕೆ ಮಾಡಿಕೊಳ್ಳುವ ಪ್ರಕ್ರಿಯೆ ಹಾಗೂ ಕರ್ತವ್ಯವೆನ್ನಬಹುದು.

ಕೇಳಲು ಸುಂದರ ಹಾಗೂ ಅಧ್ಭುತವೆನಿಸುವ ಈ ಕ್ರಿಯೆಯಲ್ಲಿ ಉಡುಗೊರೆ ಪಡೆದ ವ್ಯಕ್ತಿಗೆ ಅದನ್ನು ತಕ್ಷಣವೇ ಹಿಂತಿರುಗಿಸಬೇಕಾದ ಅವಶ್ಯಕತೆ ಇಲ್ಲವಾದರೂ ಎಂದಾದರೂ ಮರಳಿ ನೀಡಬೇಕಾದ ಜವಾಬ್ದಾರಿಯೂ ಇದ್ದು ಅದನ್ನು ಅದೇ ವ್ಯಕ್ತಿಗೆ ನೀಡಬೇಕೆಂದೇನೂ ಇಲ್ಲ. ಬದಲಾಗಿ ಬೇರೊಬ್ಬ ವ್ಯಕ್ತಿಗೆ ಅಥವಾ ಇಡೀ ಸಮುದಾಯಕ್ಕೆ ನೀಡಬೇಕಾಗುತ್ತದೆ. ಇಬ್ಬರು ಸಹೋದರಿಯರು ಅಥವಾ ಸ್ನೇಹಿತರು ಒಬ್ಬರಿಗೊಬ್ಬರು ಕೊಡುಗೆ ನೀಡಿಕೊಂಡು ತಮ್ಮ ಕರ್ತವ್ಯ ಮುಗಿಯಿತೆಂದುಕೊಳ್ಳುವಂತಿಲ್ಲ. ಒಂದು ಕಾಶ್ಮೀರಿ ಕಥೆಯಲ್ಲಿ ಹೀಗೆ ಮಾಡಿದ ಸಹೋದರಿಯರಿಬ್ಬರು ನಂತರ ವಿಷದ ಬಾವಿಗಳಾಗಿ ಜನ್ಮ ತಳೆದ ಉದಾಹರಣೆಯಿದೆ. ಕೊಡುಗೆ ಪಡೆದ ವ್ಯಕ್ತಿಯೂ ಅದನ್ನು ಲಾಭ ತರುವ ಬಂಡವಾಳವಾಗಿಸಿಕೊಳ್ಳದೆ, ಮಾರಿಕೊಳ್ಳದೆ ಸ್ವತಃ ಅನುಭೋಗಿಸಬೇಕು ಇಲ್ಲವೇ ಮತ್ತೊಬ್ಬರಿಗೆ ಕೊಡುಗೆ ನೀಡಬೇಕು. ಹಾಗೆ ಮಾಡದಿದ್ದರೆ ಅಕಾಲಿಕ ಮರಣವಾಗುವುದೆಂಬ ನಂಬಿಕೆ ಇದೆ.

'ಹೈಡ್' ಅವರ ಪ್ರಕಾರ ಒಂದು ಕೊಡುಗೆ ಸರಕಾದಾಗ ಅದರ ಉಡುಗೊರೆಯ ಶಕ್ತಿ ಮಾಯವಾಗುತ್ತದೆ. ಕೊಡುಗೆ ಪಡೆದು ಮತ್ತೆ ನೀಡದ ವ್ಯಕ್ತಿಯ ಸಾಮಾಜಿಕ ಸ್ಥಾನಮಾನ ತುಂಬಾ

ಕೆಳಮಟ್ಟದ್ದಾಗಿದ್ದು ತನಗೆ ಬಂದ ಎಲ್ಲ ಆಸ್ತಿ ಹಣವನ್ನು ಕೊಡುಗೆ ಉಡುಗೊರೆ, ಸಂತೋಷಕೂಟಗಳಿಗೆ ವೆಚ್ಚ ಮಾಡುವ ವ್ಯಕ್ತಿಯ ಸ್ಥಾನಮಾನ ತುಂಬಾ ಉನ್ನತವಾಗಿರುತ್ತದೆ.

ಬೇಟೆಯ, ಸುಗ್ಗಿಯ ನಂತರ ಸ್ವಲ್ಪ ಭಾಗವನ್ನು ದೇವರಿಗೆಂದು ಅರ್ಪಿಸುವ, ಅದನ್ನು ಪೂಜಾರಿಗೆ ನೀಡುವ ಮತ್ತು ಆ ಮೂಲಕ ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ಪ್ರಸಾದವಾಗಿ ಹಂಚಿಕೆಯಾಗುವ ಕ್ರಿಯೆಯು ಕೊಡುಗೆಪದ್ಧತಿಯ ಉದಾಹರಣೆಯಾಗಿದೆ. ಹೀಗೆ ಅರ್ಪಿಸುವ ವಸ್ತುವನ್ನು ಆ ವ್ಯಕ್ತಿ ಅಥವಾ ಅವನ ಕುಟುಂಬದವರಾರೂ ಉಪಯೋಗಿಸುವಂತಿಲ್ಲ. ಇದು ದಾನವಲ್ಲ. ಅಂದರೆ ನಾವು ಉಪಯೋಗಿಸಿ ಮಿಕ್ಕದ್ದನ್ನು ನೀಡುವುದು ಕೊಡುಗೆಯಾಗುವುದಿಲ್ಲ. ಕೊಡುಗೆಗಾಗಿಯೇ ನಿರ್ದಿಷ್ಟ ವಸ್ತುಗಳನ್ನು ಉತ್ಪಾದಿಸಿ ಹಂಚುವ ಕ್ರಿಯೆ ಬಹುತೇಕ ಬುಡಕಟ್ಟು ಹಾಗೂ ಪ್ರಪಂಚದ ಎಲ್ಲ ಧರ್ಮಗಳಲ್ಲೂ ಕಂಡುಬರುವ ಲಕ್ಷಣವಾಗಿದೆ.

ಇಸ್ಲಾಂನಲ್ಲಿ 'ಜಕಾತ್' ಎಂದು, ಜುದಾಯಿಸಂನಲ್ಲಿ ಜೆಡಕಾ (Tzedakah) ಎಂದೂ ಹಿಂದೂಗಳಲ್ಲಿ ಮುಡಿ, ಹುಂಡಿ, ಉಡುಗೊರೆ, ದಾನ ಧರ್ಮವೆಂದೂ ಕರೆಯಲ್ಪಡುವ ಈ ಪದ್ಧತಿ, ಪೆಸಿಫಿಕ್ ದ್ವೀಪಗಳಾದ ಕುಕ್ ಐಲ್ಯಾಂಡ್, ಟೊಕೆಲೂಗಳಲ್ಲಿ 'ಇನಾಟಿ' ಮತ್ತು 'ಅರೋಪ' ಎಂಬ ಪದ್ಧತಿಗಳು, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್‌ಗಳಲ್ಲಿ 'ಫಾ ಸಮೋವ', ಅಂಗ ಫಕಟುಂಗಾ, ಪಾಪುವ ನ್ಯೂಗಿನಿಯ 'ಮೊಕ ವಿನಿಮಯ', ಅಮೆರಿಕ ಮೂಲ ನಿವಾಸಿಗಳ 'ಪೋಟ್ಲೋಚ್'(ಸಾಮೂಹಿಕ ಭೋಜನ), ಮೆಕ್ಸಿಕೋದ 'ಕೊರಿಮ' ಇತ್ಯಾದಿಗಳು ಇನ್ನೂ ಕೆಲವು ಬುಡಕಟ್ಟುಗಳಲ್ಲಿ ಚಾಲ್ತಿಯಲ್ಲಿರುವ ಕೊಡುಗೆ ಪದ್ಧತಿಗಳಾಗಿವೆ.

ಕುಟುಂಬವು ಮೂಲ ಸ್ವತಂತ್ರ ಆರ್ಥಿಕ ಘಟಕವಾಗಿದ್ದು ಸಮೃದ್ಧಿ ಸಂಪನ್ಮೂಲಗಳಿದ್ದರೂ ಹೆಂಗಸರಿಗೆ ದಿನಪೂರ್ತಿ ಕೆಲಸವಿರುತ್ತದೆ. ಆದರೆ ಗಂಡಸರ ಅನಿಯಮಿತ ಕೆಲಸಕ್ಕಿಂತ ಹೆಂಗಸರ ಕೆಲಸ ಹಗುರವೆಂದೇ ಹೇಳಬಹುದು. ಉತ್ಪಾದನಾ ಸಮೃದ್ಧಿ ಹೆಚ್ಚಿಸಲು ಸಾಮಾನ್ಯವಾಗಿ ಗುಂಪುಗಳಲ್ಲೆ ಬೇಟೆ ಅಥವಾ ಮೀನುಗಾರಿಕೆ ಮಾಡುತ್ತಾರೆ. ದೊರೆತ ವಸ್ತುಗಳ ಹಂಚಿಕೆ. ಹಿಂದಿನ ಸಂಪ್ರದಾಯ ದಂತೆಯೇ ನಡೆಯುತ್ತದೆ. ಗುಂಪಿನಲ್ಲಿ ಬೇಟೆ, ಮೀನು ಹಿಡಿಯುವುದು ಉತ್ತಮವಾದರೂ ವ್ಯಕ್ತಿಯ ಕೌಶಲ್ಯ ಗಳಿಸಿಕೊಳ್ಳುವ ಬೆಳೆಸಿಕೊಳ್ಳುವ ಅವಕಾಶ ಏಕಾಂಗಿಯಾಗಿದ್ದಾಗಲೇ ಸಾಧ್ಯ. ಅಶಕ್ತರೂ, ವೃದ್ಧರೂ ಕುಶಲಕಲೆಗಳಲ್ಲಿ ಪ್ರಾವೀಣ್ಯ ಹೊಂದಿರುತ್ತಾರೆ. ಇಲ್ಲಿ ಪೈಪೋಟಿ ಇರುವುದಿಲ್ಲವಾದರೂ ಇತರರಿಗೆ ನೀಡುವ ಕೊಡುಗೆಗಳ ಮಹತ್ವದಿಂದಾಗಿ ಅತ್ಯುತ್ಕೃಷ್ಟ ವಸ್ತುಗಳನ್ನು ಉತ್ಪಾದಿಸುವಲ್ಲಿ ಹಳೆಯ ತಂತ್ರಜ್ಞಾನದ ಸುಧಾರಣೆ ಮತ್ತು ಹೊಸ ತಂತ್ರಜ್ಞಾನದ ಆವಿಷ್ಕರಣೆ ಸಾಧ್ಯವಾಗುತ್ತದೆ. ಕೆಲಸಕ್ಕಾಗಿ ಕೆಲಸ ಎನ್ನುವುದಕ್ಕಿಂತ ತಮ್ಮ ಸಂತೋಷ, ಸಾಮರ್ಥ್ಯ, ಕಲೆ, ಜವಾಬ್ದಾರಿಗಳಿಗಾಗಿ ಕೆಲಸ ಮಾಡುತ್ತಾರೆ.

ಉಡುಗೊರೆ ನೀಡುವ ವಿಧಾನ ಪರಸ್ಪರ ಸಂಬಂಧಗಳನ್ನು ಬೆಸೆಯುವುದರ ಜೊತೆಗೆ ಆರ್ಥಿಕ ಸರಕುಗಳ ಹಂಚಿಕೆಯನ್ನು ನಿರ್ಧರಿಸುತ್ತಿತ್ತು. ಇದು ಪರಸ್ಪರ ನೀಡುವಿಕೆಯನ್ನಾಧರಿಸಿದ್ದು ಪ್ರತ್ಯಕ್ಷ ಹಾಗೂ ಪರೋಕ್ಷ ಕೊಡುಕೊಳ್ಳುವಿಕೆಯನ್ನಾಧರಿಸಿದೆ.

ಫಿರ್ತ್ ಅವರು ತಮ್ಮ ಪ್ರಿಮಿಟಿವ್ ಎಕಾನಮಿಕ್ಸ್ ಆಫ್ ಮಾವೋರಿ ಕೃತಿಯಲ್ಲಿ ಹೇಳುವಂತೆ ಪರಸ್ಪರ ಕೊಡುಗೆ ನೀಡುವಿಕೆ ಶುದ್ಧಾಂಗ ಸಾಮಾಜಿಕ ಕ್ರಿಯೆಯಾದರೂ ನಿರಂತರವಲ್ಲದ ಕೊಡುಗೆಗಳನ್ನು ನೀಡುವುದು ಮತ್ತು ತೆಗೆದುಕೊಳ್ಳುವುದು ಆರ್ಥಿಕ ಕ್ರಿಯೆಯೂ ಆಗಿದೆ. ಯಿರ್‌ಯೊರಾಂಟ್‌ಗಳಲ್ಲಿ ಅನಿಯಮಿತ ಕೊಡುಗೆಪದ್ಧತಿಯ ಕಡ್ಡಾಯ ವಿನಿಮಯಕ್ಕೆ ಕಾರಣವಾಗಿದೆ. ಉದಾಹರಣೆಗೆ ತಂಬಾಕು ಬೆಳೆಯುವವನ ದೂರದ ಸಂಬಂಧಿಯೊಬ್ಬ ಅವನಿಗೆ ಏನಾದರೂ ಕೊಡುಗೆ ನೀಡಿದನೆಂದರೆ ಅದರರ್ಥ, ಅವನಿಗೆ ಪ್ರತಿಯಾಗಿ ತಂಬಾಕನ್ನು ನೀಡಬೇಕು ಎಂದು.

ಸೀಮಿತ ಸಾಮಾಜಿಕ ವೃತ್ತದಲ್ಲಿ ಈ ರೀತಿಯ ಕೊಡುಗೆಗಳು ಮುಖ್ಯವಾಗಿ ಭಾವನಾತ್ಮಕ ಹಾಗೂ ಪರೋಪಕಾರಿ ಸ್ವರೂಪದವೆನಿಸಿದರೂ ಕೊಡುಗೆ ನೀಡುವುದಕ್ಕಾದರೂ ಹಣ, ಆಸ್ತಿ ಗಳಿಸಲೇ ಬೇಕು ಮತ್ತು ಆ ಮೂಲಕ ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ ಅದನ್ನು ಕಾಪಾಡಿ ಕೊಳ್ಳಬೇಕೆಂಬ ಭಾವನೆ ಪ್ರಮುಖ ಪಾತ್ರ ವಹಿಸುತ್ತದೆ.

ಆಸ್ತಿಯು ಸಾಮಾನ್ಯವಾಗಿ ಬುಡಕಟ್ಟಿನ ಸಾಮೂಹಿಕ ಮಾಲೀಕತ್ವಕ್ಕೊಳಪಟ್ಟಿರುತ್ತದೆ ಮತ್ತು ಸೈದ್ಧಾಂತಿಕವಾಗಿ ಆ ಕುಲದ ಯಾವುದೇ ಸದಸ್ಯನಿಗೂ ಅದರ ಉಪಯೋಗದ ಅಧಿಕಾರವಿರುತ್ತದೆ. ಆದರೆ ವಾಸ್ತವಿಕವಾಗಿ ಅವುಗಳ ಮೇಲೆ ಕೆಲವೇ ಜನ ವಿವಾಹಿತ ಗಂಡು-ಹೆಣ್ಣುಗಳಿಗೆ ಮಾತ್ರ ನಿಯಂತ್ರಣವಿರುತ್ತದೆ. ಲಿಂಗದ ಆಧಾರದ ಮೇಲೂ ಕೆಲವು ವಸ್ತುಗಳ ಮೇಲೆ ಅಧಿಕಾರದ ವ್ಯತ್ಯಾಸವಿದ್ದು ಅವಶ್ಯಕತೆ ಇದ್ದಾಗ ವಿರುದ್ಧ ಲಿಂಗದವರಿಂದ ಸಾಲವಾಗಿ ಪಡೆಯುವ ಅವಕಾಶವಿರುತ್ತದೆ. ಒಂದು ರೀತಿಯಲ್ಲಿ ವ್ಯಕ್ತಿಯ ಹೋರಾಟದ ಹಾಗೂ ಇತರ ಕೌಶಲ್ಯಗಳು ಮತ್ತು ಬೇಟೆಯ ಈಟಿಗಳು ಮಾತ್ರ ವ್ಯಕ್ತಿಯ ಸ್ವಂತ ಆಸ್ತಿಗಳಾಗಿರುತ್ತವೆ. ರಕ್ತಸಂಬಂಧವನ್ನು ಆಧರಿಸಿದ ಈ ವ್ಯವಸ್ಥೆ ಯಲ್ಲಿ ಯಾವುದೇ ವಸ್ತುವೂ ಯಾರೊಬ್ಬನ ಶಾಶ್ವತ ಆಸ್ತಿ ಅಥವಾ ಇವನೇ ಇದರ ಉತ್ತರಾಧಿಕಾರಿ ಎಂದು ಹೇಳಲಾಗದು.

ಸರಕುಗಳ ವಿನಿಮಯ ಮೌಲ್ಯವನ್ನು ಮಾಪನ ಮಾಡುವ ಯಾವುದೇ ಪ್ರಮಾಣಿತ ವ್ಯವಸ್ಥೆ ಇಲ್ಲದಿದ್ದರೂ ಜನರು ಪರಸ್ಪರರ ಸರಕುಗಳನ್ನು ಮುಕ್ತವಾಗಿ, ಉಚಿತವಾಗಿ, ಇಲ್ಲವೇ ಸಾಲವಾಗಿ, ಕೆಲವೊಮ್ಮೆ ಕಳ್ಳತನದ ಮೂಲಕವು ವಿನಿಮಯ ಮಾಡಿಕೊಂಡರೂ ಒಮ್ಮೆ ನೀಡಿದ ವಸ್ತುಗಳ ಮೇಲೆ ಮತ್ತೊಮ್ಮೆ ಆಸೆಪಡದೆ ಆಸಕ್ತಿಯನ್ನು ಕಳೆದುಕೊಳ್ಳುತ್ತಿದ್ದರು. ಏಕೆಂದರೆ ಈ ಎಲ್ಲ ವಿನಿಮಯಗಳೂ ರಕ್ತಸಂಬಂಧದಿಂದಲೇ ನಿರ್ವಹಿಸಲ್ಪಡುತ್ತವೆ. ಇವರಲ್ಲಿ ಜೂಜು, ಬಾಡಿಗೆ, ಚೌಕಾಶಿ, ಮೋಸ, ನಷ್ಟ ಮಾಡುವುದು, ಲಾಭ ಇತ್ಯಾದಿ ಪರಿಭಾವನೆಗಳೇ ಇಲ್ಲ. ಒಬ್ಬ ವ್ಯಕ್ತಿ ಆಸ್ತಿಯನ್ನು(ಕೊಡುಗೆ ನೀಡುವುದಕ್ಕಾಗಿಯಾದರೂ) ಹಲವಾರು ವಿಧಾನಗಳಿಂದ ಗಳಿಸಬಹುದಿತ್ತು. ಅವುಗಳೆಂದರೆ ದುಡಿಯುವುದು, ನೇರವಾಗಿ ಬಳಸುವುದು, ಸಾಮೂಹಿಕ ಶ್ರಮದ ಫಲಗಳನ್ನು ಹಂಚಿಕೊಳ್ಳುವುದು, ಸಾಲ ಮಾಡುವುದು ಅಂದರೆ ಪರಸ್ಪರರ ಒಪ್ಪಿಗೆಯಿಂದ ತಾತ್ಕಾಲಿಕವಾಗಿ ಪಡೆಯುವುದು, ಮಾಲೀಕನ ಒಪ್ಪಿಗೆ ಇಲ್ಲದೆಯೇ ಉಪಯೋಗಿಸುವುದು, ಕೆಲವೊಮ್ಮೆ ಅಪರೂಪಕ್ಕೆ ಕದಿಯುವುದರ ಮೂಲಕ,

ಅಂದರೆ ಮಾಲೀಕನ ಒಪ್ಪಿಗೆ ಇಲ್ಲದಿದ್ದರೂ ವಿರೋಧವಿದ್ದರೂ ತೆಗೆದುಕೊಳ್ಳುವುದು, ಕೆಲವೊಮ್ಮೆ ವಂಶಪಾರಂಪರ್ಯವಾಗಿ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದ ಕೊಡುಗೆಗಳ ಮೂಲಕ, ವಿನಿಮಯ ಅಥವಾ ಕೊಳ್ಳುವ ಮೂಲಕ ಆಸ್ತಿ ಗಳಿಸಬಹುದು. ಈ ಜನರ ಬಯಕೆಗಳು ಸೀಮಿತ ಹಾಗೂ ಸರಕುಗಳು ಸರಳ. ಮೇಲಾಗಿ ವಿನಿಮಯದ ಮೌಲ್ಯ ನಿರ್ಧರಿಸುವ ನಿರ್ದಿಷ್ಟ ಪ್ರಮಾಣವಿಲ್ಲದಿರುವುದು. ಕುಲ-ರಕ್ತಬಾಂಧವ್ಯದ ಪ್ರಾಧಾನ್ಯತೆಗಳು ಈ ಆರ್ಥಿಕತೆಯನ್ನು ಸರಳವಾಗಿಟ್ಟಿವೆ. ತಮ್ಮಲ್ಲಿಲ್ಲದ ಸರಕುಗಳನ್ನು ಇನ್ನೊಬ್ಬರಿಂದ ಕೊಡುಗೆಯಾಗಿ ಪಡೆಯುವ ಮೂಲಕ ಅಥವಾ ಬೇರೆ ಪ್ರದೇಶದ ಸರಕುಗಳನ್ನು ಪಕ್ಕದ ಬುಡಕಟ್ಟುಗಳ ಸಹಾಯ ಕೊಡುಗೆ ಮೂಲಕ ಪಡೆಯುತ್ತಾರೆ. ಇತ್ತೀಚೆಗೆ ತಂಬಾಕಿನ ಬಳಕೆ ಹೆಚ್ಚಾಗುತ್ತಿದ್ದು ಅದು ಯುರೋಪಿನಿಂದಲೇ ಬರಬೇಕಿರುವುದರಿಂದ ಆಧುನಿಕ ವ್ಯಾಪಾರದ ಪ್ರವೇಶ ವಾಗುತ್ತಿದೆ. ಎಮಿಲಿ ಡರ್ಖೈಮ್‌ರ ಪ್ರಕಾರ ಈ ರೀತಿಯ ಕೊಡುಗೆಗಳು ಹಣದ ವಿನಿಮಯ ಅಥವಾ ಸರಕುಗಳ ವಿನಿಮಯಕ್ಕಿಂತ ಹೆಚ್ಚಿನ ಬಾಂಧವ್ಯ ಬೆಳೆಸಲು ಸಹಕಾರಿಯಾಗಿದ್ದು ಪರಸ್ಪರರಲ್ಲಿ ಪರಿಪೂರ್ಣತೆ ಹಾಗೂ ನಂಬಿಕೆ ಬೆಳೆಸುತ್ತವೆ. ಡುರಾನ್ ಬೆಲ್ ಅವರ ಪ್ರಕಾರ 'ವಸ್ತುಗಳನ್ನು ಇನ್ನೊಬ್ಬರಿಂದ ಕಸಿದುಕೊಂಡು ಅಥವಾ ಕೊಡದಂತೆ ಇಟ್ಟುಕೊಳ್ಳುವುದರಿಂದ ಸಮಾಜದಲ್ಲಿ ಘನತೆ, ಸಮ್ಮಾನ, ಸಂಬಂಧಗಳು ದೊರೆಯುವುದಿಲ್ಲ. ಬದಲಾಗಿ ತನ್ನದೆನ್ನುವುದನ್ನೆಲ್ಲ ತ್ಯಾಗ ಮಾಡುವುದರಿಂದ ಮಾತ್ರವೇ ಸಮಾಜದ ಮನ್ನಣೆ, ಸಂಬಂಧಗಳ ಮಾಧುರ್ಯ ದೊರೆಯುತ್ತದೆ.'[೨೩]

ಇವು ಕೇವಲ ಬುಡಕಟ್ಟುಗಳಲ್ಲಿ ಮಾತ್ರವಲ್ಲದೆ ಆಧುನಿಕ ವೈಜ್ಞಾನಿಕ ಜೀವನದಲ್ಲೂ ಮರು ಹುಟ್ಟು ಪಡೆದಿವೆ. ಕಾಪಿರೈಟ್‌ಗೆ ಬದಲಾಗಿ ಕಾಪಿಲೆಫ್ಟ್, ಪೇಟೆಂಟ್‌ಗೆ ಬದಲಾಗಿ ಜ್ಞಾನದ ಉಚಿತ ಹಂಚಿಕೆ, ಅಂತರ್ಜಾಲದಲ್ಲಿ ಉಚಿತ ಫೈಲ್ ಶೇರಿಂಗ್, ಬಿಟ್ ಟೋರೆಂಟ್, ವಿಂಡೋಸ್‌ಗೆ ಬದಲಾಗಿ ಲಿನಕ್ಸ್, ನ್ಯಾಪ್‌ಸ್ಟರ್, ಓಪನ್ ಸೋರ್ಸ್ ಸಾಫ್ಟ್‌ವೇರ್‌ಗಳು, ಉಚಿತ ರಕ್ತದಾನ, ನೇತ್ರದಾನ, ದೇಹದಾನ, ಉಚಿತ ಸಾಮೂಹಿಕ ಭೋಜನ, ಉಚಿತ ಸಾಮೂಹಿಕ ವಿವಾಹಗಳು, ಹೆಲ್ತ್ ಕ್ಯಾಂಪ್‌ಗಳು ಇತ್ಯಾದಿಗಳೆಲ್ಲ ಕೊಡುಗೆ ಆರ್ಥಿಕತೆಯ ಆಧುನಿಕ ರೂಪಗಳಾಗಿವೆ. ಇತ್ತೀಚೆಗೆ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ನೌಕರರಿಗೆ, ಮಾರಾಟಗಾರರಿಗೆ, ಗ್ರಾಹಕರಿಗೆ ಉಚಿತ ಕೊಡುಗೆ ಗಳನ್ನು ನೀಡುತ್ತಿವೆಯಾದರೂ ಇವುಗಳ ಹಿಂದೆ ಲಾಭ ಹೆಚ್ಚಿಸಿಕೊಳ್ಳುವ ಹುನ್ನಾರವಿದೆ. ಕಾರ್ಪೋರೇಟ್ ಎಥಿಕ್ಸ್, ಸೋಷಿಯಲ್ ಆಡಿಟಿಂಗ್ ಹೆಸರಿನಲ್ಲಿ ಜನರಿಗೆ ಸಹಾಯ ನೀಡಲು ಟ್ರಸ್ಟ್‌ಗಳನ್ನು ರಚಿಸಿ ಕೊಂಡು ಅದಕ್ಕೆ ಹಣ ದೇಣಿಗೆ ಕೊಡುವುದರ ಹಿಂದೆಯೂ ತೆರಿಗೆ ತಪ್ಪಿಸಿಕೊಳ್ಳುವ, ಗುಡ್‌ವಿಲ್ ಹೆಚ್ಚಿಸಿಕೊಳ್ಳುವ ಇಲ್ಲವೇ ಪಾಪಪ್ರಜ್ಞೆ ತೊಳೆದುಕೊಳ್ಳುವ ಭಾವನೆಯಿದೆ.

ಹಣ, ಮಾರುಕಟ್ಟೆಗಳ ಹಂಗಿಲ್ಲದ ಉಡುಗೊರೆ ವಿಧಾನ ಬಡತನದ, ಆರ್ಥಿಕ ಅಸಮಾನತೆಯ ನಿವಾರಣೆಗೆ ಒಂದು ಉತ್ತಮ ಸ್ವ ಇಚ್ಛೆಯ ವಿಧಾನವಾಗಿದೆ. ಬುಡಕಟ್ಟು ಆರ್ಥಿಕತೆಯಿಂದ ತೆಗೆದು ಕೊಳ್ಳಬಹುದಾದ ಅತ್ಯುತ್ತಮ ವಿಷಯಗಳಲ್ಲಿ ಇದು ಪ್ರಮುಖವಾದುದಾಗಿದ್ದು ಪ್ರಾಯೋಗಿಕ ವಾಗಿಯೂ ಯಶಸ್ವಿಯಾಗಿದೆ.


ಅರಮನೆ ಆರ್ಥಿಕತೆ

ಈ ಪರಿಭಾವನೆಯನ್ನು ಮೊದಲು ಯಾರು ಬಳಕೆಗೆ ತಂದರು ಎಂಬ ಬಗೆಗೆ ಹಲವಾರು ಗೊಂದಲಗಳಿವೆ. ವೆಂಟ್ರಿಸ್, ಗ್ರಹಂಕ್ಲಾರ್ಕ್, ಚೆಸ್ಟರ್‌ಸ್ಟಾರ್ ಮುಂತಾದವರು ಈ ಪದವನ್ನು ಬಳಸಿರಬಹುದು. ಕಾರ್ಲ್ ಪೋಲನಿ ತನ್ನ ಸಿಟಿ ಇನ್ವಿನ್ಸಿಬಲ್‌ನಲ್ಲಿ ಇದನ್ನು ಪ್ರಚಾರಕ್ಕೆ ತಂದನು.

ಹಂಚಿಕೆ ಮತ್ತು ಮರುಹಂಚಿಕೆಗಳ ಅಧ್ಯಯನದಲ್ಲಿ ಮತ್ತು ಆರ್ಥಿಕತೆಯ ಬೆಳವಣಿಗೆಯ ವಿವಿಧ ಹಂತಗಳ ಅಧ್ಯಯನದಲ್ಲಿ ಕಂಡುಬರುವ ಒಂದು ಪ್ರಮುಖ ಪರಿಕಲ್ಪನೆಯೇ ಅರಮನೆ ಆರ್ಥಿಕತೆಯಾಗಿದೆ. ಹಣದ ಉಪಯೋಗವಿನ್ನೂ ಇರದ ಕಂಚಿನ ಯುಗದ ಕಾಲದಲ್ಲಿ ಬುಡಕಟ್ಟುಗಳು ತಮ್ಮ ನಾಯಕ ಇಲ್ಲವೇ ಮಾಂತ್ರಿಕನ ನೇತೃತ್ವದಲ್ಲಿ, ಸಾಮೂಹಿಕ ಜೀವನ ನಡೆಸುತ್ತಾ ಇದ್ದರು. ಬೇಟೆ, ಆಹಾರ ಸಂಗ್ರಹಣೆಯ ಜೀವನ ಮುಂದುವರೆದು, ಕರಕುಶಲ ಕಲೆ, ಕಂಚಿನ ಬಳಕೆ ಇತ್ಯಾದಿಗಳ ನಂತರ, ಬುಡಕಟ್ಟು ನಾಯಕ ಪ್ರಬಲನಾಗಿ ಬೆಳೆದು, ಇಡೀ ಗುಂಪಿನ ಚಟುವಟಿಕೆಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು ಬೇಟೆ, ದಾಳಿ, ಬೇಸಾಯ, ಕುಶಲ ಕಲೆ, ಇತ್ಯಾದಿಗಳಿಗೆ ಬೇಕಾದ ಸಲಕರಣೆಗಳನ್ನು, ಆಹಾರ, ರಕ್ಷಣೆ ಇತ್ಯಾದಿಗಳನ್ನು ಅಂದರೆ ಬಂಡವಾಳವನ್ನು ತಾನೇ ಪೂರೈಸಿ, ನಿಯಂತ್ರಿಸಲು ಆರಂಭಿಸಿದನು. ಬರುಬರುತ್ತಾ ಅವನ ವಾಸಸ್ಥಳದ ಸುತ್ತಲೇ ಇವರೆಲ್ಲ ತಮ್ಮ ಚಟುವಟಿಕೆಗಳನ್ನು ಕೇಂದ್ರೀಕರಿಸಿದರು. ಇದು ಈಜಿಪ್ಟಿನ ಫೆರೋ ಎಂದರೆ ದೊಡ್ಡಮನೆ ಎಂದರ್ಥ. ಇತ್ತೀಚಿನ ಉತ್ಖನನಗಳು ಪಿರಮಿಡ್‌ಗಳ ಸುತ್ತ ಕೆಲಸಗಾರರ ಮನೆಗಳು ದೊರಕಿದ್ದು ಇವರನ್ನೆಲ್ಲ ಫೆರೋಗಳ ಅರಮನೆ ನಿಯಂತ್ರಿಸುತ್ತಿತ್ತೆಂಬ ಭಾವನೆ ಮೂಡುತ್ತದೆ.

ವೆಂಟ್ರಿಸ್ ಎಂಬ ವಿದ್ವಾಂಸ ದಿ ಮೈಸಿಯನ್ ವರ್ಲ್ಡ್ ಪುಸ್ತಕದಲ್ಲಿ ಹೇಳಿದಂತೆ 'ಇಲ್ಲಿ ಅರಮನೆ ಎಂದರೆ ದೊಡ್ಡದೊಡ್ಡ ಭವನಗಳೇ ಆಗಬೇಕಿಲ್ಲ. ಅವು ಆಡಳಿತದ ಕೇಂದ್ರಗಳಾಗಿದ್ದು ರಾಜ, ಸಾಮಂತ ಅಥವಾ ಪ್ರಾದೇಶಿಕ ಬುಡಕಟ್ಟು ನಾಯಕನ ಅಧೀನ ಮತ್ತು ಆಡಳಿತಕ್ಕೊಳಪಟ್ಟಿದ್ದವು. ಚೆಸ್ಟರ್‌ಸ್ಟಾರ್‌ನ ಪ್ರಕಾರ ಕುಶಲಕರ್ಮಿಗಳು ಮತ್ತು ರೈತರು ರಾಜಾಶ್ರಯದಲ್ಲಿ ಕೆಲಸ ಮಾಡುವ ವ್ಯವಸ್ಥೆಯೇ ಅರಮನೆ ಆರ್ಥಿಕತೆಯಾಗಿತ್ತು.'[೨೪]

ಕ್ರೀಟ್, ಮೇಸಿಯನ್ ಸಾಮ್ರಾಜ್ಯಗಳಲ್ಲಿ ಇದು ಪ್ರಚಲಿತದಲ್ಲಿತ್ತು ಎಂದು ಅಲ್ಲಿ ದೊರೆತಿರುವ ಸಾಮಗ್ರಿಗಳು ತಿಳಿಸುತ್ತವೆ. ಬುಡಕಟ್ಟುಗಳು ವಿಸ್ತರಿಸುತ್ತಾ ಹೋದಂತೆ ಅವುಗಳ ನಡುವಿನ ಸಂಘರ್ಷವೂ ಹೆಚ್ಚಾಗಿ ಎಲ್ಲರೂ ಒಂದೆಡೆ ಒಬ್ಬ ನಾಯಕನ ಅಡಿಯಲ್ಲಿದ್ದರೆ ಹೋರಾಡುವುದು ಹಾಗೂ ರಕ್ಷಿಸಿಕೊಳ್ಳುವುದು ಸುಲಭ ಮತ್ತು ತಮ್ಮ ಬುಡಕಟ್ಟು ಅನನ್ಯತೆಯನ್ನು ಕಾಪಾಡಿಕೊಳ್ಳಲು ಸಾಧ್ಯ ಎಂಬ ಭಾವನೆ ಮತ್ತು ದೊಡ್ಡ ಪ್ರಮಾಣದ ಉತ್ಪಾದನೆಯೂ ಸಾಧ್ಯ ಎಂಬ ಭಾವನೆ ಈ ವ್ಯವಸ್ಥೆಗೆ ಕಾರಣವಾಗಿರಬಹುದು. ಇದೇ ಮುಂದೆ ನಗರಗಳ ಮತ್ತು ಸಾಮ್ರಾಜ್ಯಶಾಹಿಗಳ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿರಬೇಕು.





Storage room, Palace of Knossos

- Palace at Alalakh

ಒಟ್ಟಾರೆಯಾಗಿ ಹೇಳಬೇಕೆಂದರೆ ಹಣದ ಆವಿಷ್ಕಾರಕ್ಕಿಂತ ಮೊದಲು ಹಂಚಿಕೆ ಮತ್ತು ಮರುಹಂಚಿಕೆಗಳು ಬುಡಕಟ್ಟುಗಳೊಳಗೆ ಮತ್ತು ಬುಡಕಟ್ಟುಗಳ ನಡುವೆ ಹೇಗೆ ಆಗುತ್ತಿತ್ತು ಮತ್ತು ಇದೇ ಮುಂದುವರೆದು ಆಧುನಿಕ ಆರ್ಥಿಕತೆಗೆ ಹೇಗೆ ಕಾರಣವಾಯಿತು ಎಂಬ ಹಿನ್ನೆಲೆಯ ವಿಶ್ಲೇಷಣೆಗೆ ಸಹಕಾರಿಯಾಗುತ್ತದೆ. ಈ ಸ್ಥಳಗಳು ಮೆಡಿಟರೇನಿಯನ್ ಸಮುದ್ರ ದಂಡೆಯಲ್ಲಿದ್ದು ಬೃಹತ್ ಪ್ರಮಾಣದ ಸಂಗ್ರಹಾಗಾರಗಳನ್ನು ಹೊಂದಿರುವುದರಿಂದ ವಿದೇಶಿ ವ್ಯಾಪಾರದ ಉಗಮವೂ ಇವೇ ಆಗಿರಬಹುದೆಂಬ ವಾದವನ್ನೂ ಮಂಡಿಸಬಹುದಾಗಿದೆ. ಈ ವಿಷಯದ ಬಗ್ಗೆ ಸಾಕಷ್ಟು ದ್ವಂದ್ವ, ಅನಿಶ್ಚಿತತೆ ಮತ್ತು ಭಿನ್ನಾಭಿಪ್ರಾಯಗಳಿರುವುದರಿಂದ ಹೆಚ್ಚಿನ ವಿಶ್ಲೇಷಣೆಗೆ ಪ್ರಯತ್ನಿಸಿಲ್ಲ.

ಬುಡಕಟ್ಟು ಆರ್ಥಿಕತೆ: ಚಾರಿತ್ರಿಕ ಪ್ರಭಾವ ಮತ್ತು ರೂಪಾಂತರಗಳು

ಡಾರ್ವಿನ್ನನ ವಿಕಾಸವಾದದ ಪ್ರಕಾರ ಜೈವಿಕವಾಗಿ ನೋಡಿದರೆ ಮೊಟ್ಟೆ ಇಡುವ ಪಕ್ಷಿ, ಉರಗ ಇತ್ಯಾದಿ ಪ್ರಾಣಿಗಳು ತನ್ನ ಗೂಡು, ತನ್ನ ಮೊಟ್ಟೆ, ತನ್ನ ಮರಿ ಎಂದು ಭಾವಿಸಿ ಅದನ್ನು ರಕ್ಷಿಸಲು ಹೋರಾಡುತ್ತವಾದರೂ ಸರೀಸೃಪಗಳಿಂದ ನೇರ ಮರಿ ಹಾಕುವ ಸಸ್ತನಿಗಳ ಉಗಮದೊಂದಿಗೆ ನನ್ನ ಮಗು, ನನ್ನ ಹೆಂಡತಿ, ನನ್ನ ಕುಟುಂಬ, ನನ್ನ ಭೂಭಾಗ, ಆಸ್ತಿ ಅಥವಾ ಗಡಿ ಗುರುತಿಸಿಕೊಳ್ಳಲು ಆರಂಭಿಸುವುದರ ಜೊತೆಗೆ ಅದನ್ನು ಕಾಯ್ದುಕೊಳ್ಳುವ, ಅದಕ್ಕಾಗಿ ಹೋರಾಡುವ, ಬೇರೆಯವರ ಗಡಿಯನ್ನು ಅತಿಕ್ರಮಿಸುವ ಸ್ವಭಾವ ಮನುಷ್ಯರಲ್ಲಷ್ಟೇ ಏಕೆ ಹುಲಿ, ಸಿಂಹ, ನಾಯಿ ಮುಂತಾದ ಪ್ರಾಣಿಗಳಲ್ಲೂ ಕಾಣಬಹುದು.

'ಸಿಂಹಗಳ ಜೀವನವನ್ನು ೨೦ ವರ್ಷಗಳ ಕಾಲ ಅಧ್ಯಯನ ಮಾಡಿ ಕಂಡುಕೊಂಡ ವಿಷಯವೆಂದರೆ 'ಜೀವಿಗಳಲ್ಲಿ ಈ ರೀತಿಯ ಸಾಘಿಕ, ಕೌಟುಂಬಿಕ ಜೀವನಕ್ಕೆ ಮೂರು ಮುಖ್ಯ ಕಾರಣಗಳಿದ್ದು ಅವುಗಳೆಂದರೆ ೧. ದೊಡ್ಡ ಪ್ರಾಣಿಗಳನ್ನು ಬೇಟೆಯಾಡುವುದು ೨. ಸಂತಾನ ಮತ್ತು ಅವುಗಳ ರಕ್ಷಣೆ ೩. ಗಡಿಗಳ ರಕ್ಷಣೆ.'[೨೫]




ಜೈವಿಕ ಬಯಕೆಗಳಾದ ಹಸಿವು, ಉಸಿರು, ನೀರು, ಮೈಥುನ, ಸಂತತಿ ವಿಸ್ತರಣೆ ಇತ್ಯಾದಿಗಳು ಪಶು ಪಕ್ಷಿ, ನರ ವಾನರರಾದಿಯಾಗಿ ಎಲ್ಲ ಜೀವಿಗಳಲ್ಲೂ ಇರುವ ಸಾಮಾನ್ಯ ಅಂಶಗಳು. ಇವೆಲ್ಲಾ ಪ್ರಕೃತಿಯಲ್ಲಿ ಉಚಿತವಾಗಿ ದೊರೆಯುತ್ತಿರುವವರೆಗೆ ಆರ್ಥಿಕತೆ ಗಣನೆಗೇ ಬಂದಿರಲಿಲ್ಲ. ಇದನ್ನೇ ಇನ್ನಷ್ಟು ಅಭಿವೃದ್ಧಿಪಡಿಸಿದ ಮಾನವನೆಂಬ ಬುದ್ಧಿವಂತ ಪ್ರಾಣಿ ಯಾವಾಗ ಆಹಾರವನ್ನು ವಿನಿಮಯದ ಸರಕನ್ನಾಗಿ ಪರಿವರ್ತಿಸಿದನೋ, ಹಸಿವಿಗೆ ಬೆಲೆಕಟ್ಟತೊಡಗಿದನೋ, ನೀರನ್ನು ಸ್ವಂತ ಆಸ್ತಿಯೆಂದು ಪರಿಗಣಿಸತೊಡಗಿದನೋ, ಮೈಥುನಕ್ಕಾಗಿ ಹೆಂಡತಿಯನ್ನೂ ಮತ್ತು ಅದರ ಉತ್ಪನ್ನವಾದ ಮಕ್ಕಳನ್ನು ತನ್ನ ಆಸ್ತಿಯೆಂದು ಪರಿಗಣಿಸತೊಡಗಿದನೋ, ಆ ಕ್ಷಣದಿಂದಲೇ ವಿನಿಮಯವೆಂಬ ಆರ್ಥಿಕ ಚಟುವಟಿಕೆ ಆರಂಭವಾಗಿ ಅದು ಸಾಟಿಪದ್ಧತಿಯಾಗಿ, ಕೊಡುಗೆಪದ್ಧತಿಯಾಗಿ, ಹಣದ ಪದ್ಧತಿಯಾಗಿ, ಸಾಲದ ಪದ್ಧತಿ. ಇತ್ಯಾದಿಗಳಾಗಿ ಕವಲೊಡೆದು ಆಧುನಿಕ ಆರ್ಥಿಕತೆಯೆಂಬ ಬೃಹತ್ ವೃಕ್ಷಕ್ಕೆ ಬೀಜಾಂಕುರವಾಯಿತು.

ಅವನ ನೆಲೆ ಬೇಟೆ ಮತ್ತು ಆಹಾರ ಸಂಗ್ರಹಣೆಯಿಂದ ಪಶುಪಾಲನೆಯ ಕಡೆಗೆ ಹೊರಳಿದಾಗ, ಪಶುಸಂಪತ್ತು ಹಣವಾಗಿ ವಿನಿಮಯವಾಗತೊಡಗಿದಾಗ ಮಾತೃಪ್ರಧಾನ ಕುಟುಂಬದ ವಿತರಣೆ ವ್ಯವಸ್ಥೆ ಹೆಣ್ಣಿನಿಂದ ಸಮುದಾಯ ಮುಖಂಡನಿಗೆ ಮತ್ತು ಅವನಿಂದ ವ್ಯಕ್ತಿಗೆ ವರ್ಗಾವಣೆಯಾಗಿ, ತನ್ನ ಪ್ರಾಬಲ್ಯ ಕಾಪಾಡಿಕೊಳ್ಳಲು ಹೆಣ್ಣು ಬಹುಪತ್ನಿತ್ವದಿಂದ ಏಕಪತ್ನೀ ವ್ಯವಸ್ಥೆಗೆ ಒಪ್ಪಿಕೊಳ್ಳುವುದರೊಂದಿಗೆ ಖಾಸಗಿ ಆಸ್ತಿಯ ಪರಿಕಲ್ಪನೆಗೆ ರೆಕ್ಕೆಮುಕ್ಕ ಬೆಳೆದು, ಹಣದ ಆವಿಷ್ಕಾರದೊಂದಿಗೆ ಆರ್ಥಿಕತೆಯೆಂಬ ಪರಿಕಲ್ಪನೆ ವಾಸ್ತವವಾಗಲು ಸಹಾಯಕವಾಯಿತು. ಈ ಹಂತದಲ್ಲಿ ಸಂಭವಿಸಿದ ಇನ್ನೊಂದು ಮುಖ್ಯ ಬದಲಾವಣೆ ಎಂದರೆ 'ಕುಟುಂಬವು ಮಾತೃಪ್ರಧಾನದಿಂದ ಪಿತೃಪ್ರಧಾನವಾಗಿ ಬದಲಾದದ್ದು, ಬೇಟೆಯ ಹಂತದಲ್ಲಿ ಆಹಾರದ ಹಂಚಿಕೆ ಸ್ತ್ರೀಯ ಕೈಯ್ಯಲ್ಲಿದ್ದದ್ದು ಪಶುಪಾಲನೆಯ ಕಾಲಕ್ಕೆ ಹೆಚ್ಚುವರಿ ಉತ್ಪಾದನೆಯ ಹಂಚಿಕೆ ಬುಡಕಟ್ಟು ಮುಖ್ಯಸ್ಥನ ಕೈ ಸೇರಿ ನಂತರ ವ್ಯಕ್ತಿಗತ ಆಸ್ತಿಯ ಆರಂಭದೊಂದಿಗೆ ಪುರುಷನ ಕೈ ಸೇರಿತು. ಸಾಮೂಹಿಕ ವಿವಾಹಗಳಿಂದ ಏಕಪತ್ನಿ ಪದ್ಧತಿಯ ಪದ್ಧತಿಗೆ ಮಾರ್ಪಾಡಾಗುವ ಈ ಸಂಕ್ರಮಣಘಟ್ಟದಲ್ಲಿ ಹೆಣ್ಣು ಬಹುಶಃ ತನ್ನ ಈ ಮಾತೃಪ್ರಧಾನ ಹಕ್ಕನ್ನು ತ್ಯಾಗ ಮಾಡಿರಬೇಕು.'[೨೬]

ಅಂದರೆ ಇಂದಿನ ಈ ಬೃಹತ್ ಆರ್ಥಿಕತೆಯ ಮೂಲ ನಮ್ಮ ಬುಡಕಟ್ಟುಗಳೇ ಆಗಿದ್ದು ಇಂದಿನ ಹಲವಾರು ಆರ್ಥಿಕ ಸಮಸ್ಯೆಗಳಿಗೆ ಪರಿಹಾರವೂ ಅಲ್ಲಿಯೇ ಸಿಗಬಹುದು. ಆಧುನೀಕರಣದ ಬೆನ್ನು ಹತ್ತಿರುವ ಮಾನವ, ಬುಡಕಟ್ಟು ಮಾನವ ಮತ್ತು ಪ್ರಕೃತಿಯ ಸಮನ್ವಯತೆಯಾಗದಿದ್ದರೆ ಆಗಬಹುದಾದ ಅನಾಹುತಕ್ಕೆ ಮ್ಯಾಸಬೇಡರ ಸಾಂಸ್ಕೃತಿಕ ನಾಯಕ 'ಗಾದ್ರಿಪಾಲನಾಯಕ'ನ ಕಥೆ ಅತ್ಯುತ್ತಮ ಉದಾಹರಣೆಯಾಗಿದೆ.

ಗಾದ್ರಿಪಾಲನಾಯಕ ಒಬ್ಬ ಪಶುಪಾಲಕನಾಗಿದ್ದು ಜರಿಮಲೆ ಸೀಮೆಯ ದಟ್ಟಾರಣ್ಯದಲ್ಲಿ ವಾಸಿಸುತ್ತಿದ್ದ. ನಿರಂತರವಾಗಿ ಹುಲಿಗಳನ್ನು ಎದುರಿಸಿ ಬೇಸತ್ತ ನಾಯಕ ಹುಲಿಗಳೊಡನೆ ಒಂದು ಒಪ್ಪಂದಕ್ಕೆ ಬರುತ್ತಾನೆ.

ಅದರಂತೆ ಅವನ ದನಗಳನ್ನು ಹುಲಿಗಳೇ ಕಾಯಬೇಕೆಂದೂ ಮತ್ತು ಹುಲಿಗಳ ಮರಿಗಳನ್ನು ನಾಯಕ ಕಾಪಾಡಬೇಕೆಂದು ಮಾತು ನೀಡುತ್ತಾರೆ. ಹೀಗೆ ಮನುಷ್ಯನನ್ನು ಪ್ರತಿನಿಧಿಸುವ ಬುಡಕಟ್ಟು ನಾಯಕ ಮತ್ತು ಪ್ರಕೃತಿಯನ್ನು ಪ್ರತಿನಿಧಿಸುವ ಹುಲಿಗಳೆರಡೂ ಪರಸ್ಪರ ಗೌರವ, ಸಮರಸದಿಂದ ಜೀವಿಸುತ್ತಿರುವಾಗ ಗಾದ್ರಿಪಾಲನಾಯಕನನ್ನು ನೋಡಲು ನಗರದ ಅವನ ಸಂಬಂಧಿಕರು ಅವನ ಮನೆಗೆ ಬರುತ್ತಾರೆ. ಆಗ ಗಾದ್ರಿಪಾಲನಾಯಕ ಮನೆಯಲ್ಲಿರಲಿಲ್ಲ ಆದರೆ ಅವನು ಕಾಯಬೇಕಿದ್ದ ಹುಲಿಮರಿಗಳನ್ನು ಕಂಡ ನಗರದ ಜನ ತಮ್ಮಲ್ಲಿದ್ದ ಕೋವಿಯಿಂದ ಅವುಗಳನ್ನು ಸುಡುತ್ತಾರೆ. ಮರಿಗಳ ಆಕ್ರಂದನ ಕೇಳಿದ ಹುಲಿ ದನಗಳನ್ನು ಕಾಯುವುದನ್ನು ಬಿಟ್ಟು ನಾಯಕನ ಮನೆಗೆ ಓಡಿಬಂದು ನೋಡಲಾಗಿ ತನ್ನ ಮರಿಗಳೆಲ್ಲಾ ಸತ್ತು ಬಿದ್ದಿರುತ್ತವೆ. ಇದರಿಂದ ಕ್ರೋಧಗೊಂಡ ಹುಲಿ 'ಈ ಮನುಷ್ಯರೇ ಹೀಗೆ, ಕೊಟ್ಟ ಮಾತಿಗೆ ತಪ್ಪುವವರು' ಎಂದುಕೊಂಡು ಇದಕ್ಕೆಲ್ಲಾ ಗಾದ್ರಿಪಾಲನಾಯಕನೇ ಕಾರಣನೆಂದು ಭಾವಿಸಿ ಅವನೊಡನೆ ಯುದ್ಧ ಮಾಡುತ್ತದೆ. ಏಳುದಿನಗಳ ಪರ್ಯಂತ ನಡೆದ ಯುದ್ಧದಲ್ಲಿ ಯಾರೊಬ್ಬರೂ ಸೋಲದೆ ಕೊನೆಗೆ ಇಬ್ಬರೂ ಸಾವನ್ನಪ್ಪುತ್ತಾರೆ.'[೨೬]

ಪ್ರಕೃತಿ ಪುರುಷರ ಸಂಘರ್ಷದಲ್ಲಿ ಯಾರಿಗೂ ಗೆಲುವಿಲ್ಲ. ಬದಲಾಗಿ ಅದು ಇಬ್ಬರ ಸರ್ವನಾಶಕ್ಕೆ ಕಾರಣವಾಗುತ್ತದೆಂಬುದನ್ನು ಗಾದ್ರಿಪಾಲನಾಯಕನ ಕತೆ ಗಾಢವಾಗಿ ನಿರೂಪಿಸುತ್ತದೆ. ಹಾಗೆಯೇ ದಾವ್ ಜಿಂಗ್ ಎಂಬ ಮತ್ತೊಂದು ಕಥೆ ಕೂಡ ಆರ್ಥಿಕತೆ ಹೇಗೆ ಹಂತಹಂತವಾಗಿ ಬೆಳೆದು ಬಂತು, ಆಸೆಗಳು ಹೆಚ್ಚಾದಂತೆ ಮನುಷ್ಯನ ಶೀಲದ ಅವನತಿ ಹೇಗಾಯಿತು, ಬೆಂಕಿ, ಪಶುಸಂಗೋಪನೆ, ವ್ಯವಸಾಯ, ಸಂಸ್ಕೃತಿ, ವಿದ್ವತ್ತು, ನಯ ನಾಜೂಕುಗಳು ಬೆಳೆದಂತೆ ಹೇಗೆ ಅವನು ಪ್ರಕೃತಿಯಿಂದ ದೂರಾಗತೊಡಗಿ ಅವನತಿಯ ದಾರಿ ಹಿಡಿದ ಎಂಬುದನ್ನು ತುಂಬ ಚೆನ್ನಾಗಿ ವಿವರಿಸುತ್ತದೆ. ಇದು ಮನುಕುಲದ ವಿಕಸನದ ಜೊತೆಗೇ ಅವನ ಅವನತಿಯ ಹಂತಗಳನ್ನೂ ಸೂಚಿಸುತ್ತದೆ. ಈ ಕಥೆ ಪ್ರತಿಮಾತ್ಮಕವಾಗಿದ್ದರೂ ವಾಸ್ತವಿಕತೆಗೆ ತುಂಬಾ ಹತ್ತಿರವಾಗಿದೆ. ಇದು ಹೇಳುವ ತತ್ವಾದರ್ಶಗಳು ನಮ್ಮೊಳಗಿನ ವಿಸ್ಮೃತಿಯ ಬಗೆಗೆ ಕಣ್ಣು ತೆರೆಸುವ ಅಪೂರ್ವ ಸಂಗತಿಗಳಷ್ಟೇ ಅಲ್ಲ. ಬುಡಕಟ್ಟು ಜನರ ಪರಮೋಚ್ಚ ಮೌಲ್ಯಗಳನ್ನು ಸಾರುವ ಅಪೂರ್ವ ಲೋಕದೃಷ್ಟಿಯೂ ಹೌದು. ಪರಿಶುದ್ಧರಾದ ಪುರಾತನರು (ಅಂದರೆ ಬುಡಕಟ್ಟು ಜನರು), ಕನಸುಗಳು ಬೀಳದಂತೆ ನಿದ್ದೆ ಮಾಡುತ್ತಿದ್ದರು, ಚಿಂತೆ ಇಲ್ಲದಂತೆ ಎಚ್ಚರಾಗಿರುತ್ತಿದ್ದರು. ಊಟದಲ್ಲಿ ಅವರಿಗೆ ನಾಲಿಗೆ ಚಪಲವಿರುತ್ತಿರಲಿಲ್ಲ. ಅವರು ಜೀವನವನ್ನು ಪ್ರೀತಿಸಬೇಕು ಎಂದುಕೊಂಡವರಲ್ಲ, ಸಾವನ್ನು ದ್ವೇಷಿಸಬೇಕು ಎಂದುಕೊಂಡವರಲ್ಲ. ಸಂತೋಷದಿಂದ ಅವರು ಇರುವ ಜೀವನವನ್ನು ಒಪ್ಪಿಕೊಂಡು ತಾವು ಬಂದಲ್ಲಿಗೆ ವಾಪಸ್ ಹೋಗಲು ಸಮಾಧಾನದಿಂದ ಕಾಯುತ್ತಿದ್ದರು. ಅವರು ತಮ್ಮಲ್ಲೇನೋ ಕೊರತೆಯಿದೆ ಎಂಬಂತೆ ವಿನಯಶೀಲರಾಗಿರುತ್ತಾರೆ. ಆದರೆ ಅನ್ಯರನ್ನು ಆಶ್ರಯಿಸುವುದಿಲ್ಲ. ಸಹಜವಾಗಿ ಸ್ವತಂತ್ರ ಮನೋವೃತ್ತಿಯವರಾದರೂ ಕಠಿಣ ಸ್ವಭಾವದವರಲ್ಲ. ತಮ್ಮಷ್ಟಕ್ಕೇ ಸಂತೋಷದಲ್ಲಿದ್ದವರಂತೆ ಮುಗುಳ್ನಗುತ್ತಾರೆ. ಸಾಮಾಜಿಕ ಸಂದರ್ಭಗಳಲ್ಲಿ ಅವರು ತಮ್ಮ ಶೀಲವನ್ನು ಬಿಟ್ಟುಕೊಡುವುದಿಲ್ಲ, ಆಗ ಯಿನ್ ಮತ್ತು ಯಾಂಗ್‌ಗಳು ಸಮರಸವಾಗಿದ್ದವು. ಪ್ರಾಣಿ ಮತ್ತು ಮನುಷ್ಯನ ಚೈತನ್ಯಗಳು

ಪರಸ್ಪರ ಹೊಂದಿಕೊಂಡಿದ್ದವು, ನಾಲ್ಕು ಋತುಗಳೂ ತಮ್ಮ ಕ್ರಮವನ್ನು ತಪ್ಪಿಸುತ್ತಿರಲಿಲ್ಲ, ಜನರು ಎಳೆ ವಯಸ್ಸಿನಲ್ಲಿ ಸಾಯುತ್ತಿರಲಿಲ್ಲ. ತಮಗೆ ಜ್ಞಾನವಿದ್ದರೂ ಅದನ್ನು ಬಳಸಬೇಕೆಂದು ಅನಿಸುತ್ತಿರಲಿಲ್ಲ. ಅದು ಒಗ್ಗಟ್ಟಿನ ಸಹಜ ಸ್ವಭಾವದ ಕಾಲ. ಇಂತಹ ಸರಳವಾಗಿ ಬದುಕುತ್ತಿದ್ದ ಜನ ಹೇಗೆ ಹಂತ ಹಂತವಾಗಿ ಅಧಃಪತನಕ್ಕೊಳಗಾದರು ಎಂಬುದನ್ನು ಈ ಪುಸ್ತಕ ವಿವರಿಸುತ್ತದೆ. ಆಸೆಗಳು ಹೆಚ್ಚಾದಂತೆ ಅವರ ದೈವಿಕಶಕ್ತಿ ಇಳಿಮುಖವಾಗುತ್ತದೆ. ತದನಂತರ ಜನರಲ್ಲಿ ಶೀಲದ ಅವನತಿ ತೋರಿತು. ಆಗ ಸೂಯಿಚೆನ್ ಮತ್ತು ಹೋಷಿ ಎಂಬ ಇಬ್ಬರು ದೊರೆಗಳು ಹುಟ್ಟಿಕೊಂಡರು. ಅವರು ಬೆಂಕಿಯ ಉಪಯೋಗವನ್ನೂ ಪ್ರಾಣಿಗಳ ಪಳಗಿಸುವಿಕೆಯನ್ನೂ ಕಂಡುಕೊಂಡರು. ಇದಾದ ನಂತರ ಪ್ರಪಂಚ ಪ್ರಕೃತಿಗೆ ಹೊಂದಿಕೊಂಡಿದ್ದರೂ ಒಗ್ಗಟ್ಟು ಇರಲಿಲ್ಲ. ಆನಂತರ ಶುನುಂಗ್ ಮತ್ತು ಹಾಂಗ್ವಿ ಎಂಬ ಚಕ್ರವರ್ತಿಗಳು ಹುಟ್ಟಿಕೊಂಡರು. ಅವರು ವ್ಯವಸಾಯ ಆರಂಭಿಸಿದರು. ರೇಶ್ಮೆಯನ್ನು ಬೆಳೆದರು. ಆಗಲೂ ಶಾಂತಿ ಇದ್ದರೂ ಪ್ರಪಂಚ ನಿಸರ್ಗದಿಂದ ದೂರವಾಗತೊಡಗಿತು. ಇದಾದ ಮೇಲೆ ಯಾವೋ ಮತ್ತು ಶುನ್ ಜಗತ್ತನ್ನಾಳತೊಡಗಿದರು. ಅವರು ಸಂಸ್ಕೃತಿಯನ್ನು ತಂದರು. ಅದರಿಂದ ಮನುಷ್ಯ ಸುಳ್ಳಾಗಲು ಶುರುವಾದ. ಅವನ ಮೂಲದ ಸರಳತೆ ಕಳೆದುಹೋಯಿತು. ತಾನು ಒಳ್ಳೆಯವನಾಗಿರಬೇಕೆಂದು ಉದ್ದೇಶಪೂರ್ವಕವಾಗಿ ಪ್ರಯತ್ನಿಸುವುದರಿಂದ ಅವನು 'ದಾವ್'ನಿಂದ ದೂರಾದ. ಹೊಗಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಒಳ್ಳೆಯ ಕೆಲಸ ಶುರುಮಾಡಿದ. ಮನಸ್ಸು ಮನಸ್ಸುಗಳ ಉಜ್ಜುವಿಕೆಯಿಂದ ಜ್ಞಾನ ಹುಟ್ಟಿತು. ಆದರೆ ಜ್ಞಾನದಿಂದ ಮಾತ್ರವೇ ಶಾಂತಿ ನೆಲೆಸಲಾರದೆಂದು ತಿಳಿದು ಸಂಸ್ಕೃತಿಯ ನಯ–ನಾಜೂಕು, ವಿದ್ವತ್ತುಗಳನ್ನು ಬೆಳೆಸಿಕೊಂಡರು. ಸಭ್ಯತೆ ಶೀಲವನ್ನೂ, ವಿದ್ವತ್ತು ಬುದ್ಧಿಯನ್ನೂ ಹಾಳುಮಾಡಿದವು. ಅಂದಿನಿಂದ ಜನ ತಮ್ಮ ದಾರಿ ಕಳೆದುಕೊಂಡು ತಮ್ಮ ನೈಜ ಸ್ವಭಾವಕ್ಕೆ ಮರಳುವ ದಾರಿ ಕಾಣದೆ ವಿಹ್ವಲಿತರಾಗಿದ್ದಾರೆ.'[೨೮]

ಬುಡಕಟ್ಟು ಆರ್ಥಿಕತೆ ಅಥವಾ ಬೇಟೆ ಮತ್ತು ಆಹಾರ ಸಂಗ್ರಹಣೆಯ ಆದಿಮ ಸಮುದಾಯಗಳು ತುಂಬಾ ಹಿಂದುಳಿದಿದ್ದು, ಹಸಿವೆ, ಬಡತನ, ಅಪೌಷ್ಟಿಕತೆಯಿಂದ ಬಳಲುತ್ತವೆ, ಅವರ ಜೀವನ ತುಂಬಾ ಅಸಹನೀಯ ಮತ್ತು ಅಪಾಯಕರ ಎಂದು ಸಾಮಾನ್ಯವಾಗಿ ಎಲ್ಲರೂ ಭಾವಿಸುತ್ತಾರೆ. ಆದರೆ ಅದು ಸುಳ್ಳು. ನಮ್ಮ ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಾಗಾರದಲ್ಲಿ ಬಂದಿದ್ದ ಬುಡಕಟ್ಟು ಜನರು ನಮಗೆ ನಿಮ್ಮ ನಾಡು, ನಾಗರಿಕತೆ, ಹಣ ಇತ್ಯಾದಿ ಯಾವುದೂ ಬೇಡ. ನಮ್ಮನ್ನು ನಮ್ಮ ಪಾಡಿಗೆ ಕಾಡಿನಲ್ಲಿ ಇರಲು ಬಿಡಿ. ಸಾಧ್ಯವಾದರೆ ನಮ್ಮ ಪ್ರದೇಶದಲ್ಲಿ ನಮಗೆ ಭೂಮಿಯ ಮೇಲೆ ಹಕ್ಕು ನೀಡಿ ಸಾಕು. ನಾವು ಕಾಡಿನಲ್ಲೇ ಸುಖವಾಗಿದ್ದೇವೆ ಎಂದು ಹೇಳುತ್ತಿದ್ದರು. ನಮಗೆ ನಮ್ಮದೇ ಆದ ನೀತಿ ನಿಯಮಗಳು, ವೈದ್ಯಕೀಯ ಪದ್ಧತಿ, ನ್ಯಾಯವ್ಯವಸ್ಥೆ ಇತ್ಯಾದಿಗಳಿದ್ದು ಕಾಡು ನಮ್ಮ ತಾಯಿ, ಅನ್ನದಾತೆ ಇದ್ದಂತೆ. ಅದನ್ನು ನಾಶ ಮಾಡಿದರೆ ನಮ್ಮ ಜೀವನವೇ ನಾಶವಾಗುತ್ತದೆ ಎಂಬ ಅರಿವಿದೆ. ಯಾರೋ ಕೆಲವರು ನಾಡಿನವರು ಬಂದು ಬೇಟೆಯಾಡಿ ಅರಣ್ಯಕ್ಕೆ ಬೆಂಕಿ ಇಟ್ಟು ಹೋದರೆ ಅರಣ್ಯ ಇಲಾಖೆಯವರು ಅದನ್ನು ನಮ್ಮ ಮೇಲೆ ಹಾಕುತ್ತಾರೆ. ಈ ಕಿರುಕುಳ ತಪ್ಪಿಸಿಬಿಡಿ ಸಾಕು ನಮಗೆ ಇನ್ನೇನೂ ಬೇಡ. ನಾವು ನಿಜಕ್ಕೂ ನಿಮಗಿಂತ ಸುಖವಾಗಿದ್ದೇವೆ

ಎಂದು ಹೇಳುತ್ತಿದ್ದರು. ಇದೆಲ್ಲ ನಿಜವೇ ಅಥವಾ ಅವರ ಮುಗ್ಧತೆಯೇ ಎಂಬ ಅನುಮಾನವಿತ್ತು. ಆದರೆ ಇದು ನಿಜ. ಅವರು ನಮಗಿಂತಲೂ ಸುಖ ಮತ್ತು ಸಮೃದ್ಧಿಯ ಜೀವನ ನಡೆಸುತ್ತಾರೆ ಮತ್ತು ನಮಗಿಂತ ಪೌಷ್ಟಿಕ ಆಹಾರ ಸೇವಿಸುತ್ತಾರೆ ಅವರದು ವಿಶೇಷ ರೀತಿಯ ಜೀವನಾಧಾರ ಆರ್ಥಿಕತೆಗಳಾಗಿದ್ದು ಅವು ನಿಜಕ್ಕೂ ಸಮೃದ್ಧ ಸಮಾಜಗಳಾಗಿದ್ದವು ಎಂದು ನಿರೂಪಿಸಿದವರೆಂದರೆ ಮಾರ್ಷಲ್ ಸಾಹ್ಲಿನ್ ಅವರು.

ಸಾಹ್ಲಿನ್ ಅವರ ಪ್ರಕಾರ, 'ಆಧುನಿಕ ಆರ್ಥಿಕತೆ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ಸಮೃದ್ಧಿ ಸಾಧಿಸುವ ವಾಮಮಾರ್ಗವನ್ನನುಸರಿಸಿದರೆ, ಆದಿಮ ಸಮಾಜ ಬಯಕೆಗಳನ್ನೇ ಕಡಿಮೆ ಮಾಡುವ ಮೂಲಕ ಸಮೃದ್ಧಿ ಸಾಧಿಸುವ ರಾಜಮಾರ್ಗವನ್ನು ಪ್ರತಿನಿಧಿಸುತ್ತದೆ'[೫]. ಸಂಪನ್ಮೂಲಗಳನ್ನು ಸೃಷ್ಟಿಸುವ, ಹೆಚ್ಚಿಸುವ ಸಾಮರ್ಥ್ಯ ಮಾನವನಿಗಿಲ್ಲವಾದರೂ ತನ್ನ ಬಯಕೆಗಳನ್ನು ನಿಯಂತ್ರಿಸಿಕೊಳ್ಳುವ ಸಾಮರ್ಥ್ಯ ಅವನಿಗೆ ಖಂಡಿತವಾಗಿಯೂ ಇದೆ. ಇದೇ ಮಾತನ್ನು 'ಅಗತ್ಯಗಳಲ್ಲಿ ಇಳಿಕೆಗಳನ್ನು ಮಾಡಿಯೇ ಮನುಷ್ಯನು ಸಂಘರ್ಷ ಮತ್ತು ಯುದ್ಧಗಳಿಗೆ ಕಾರಣವಾದ ಉದ್ವೇಗದಲ್ಲಿ ಇಳಿಕೆ ತರಲು ಸಾಧ್ಯ' ಎಂದು ಷುಮಾಕರ್ ತಮ್ಮ 'ಸಣ್ಣದು ಸುಂದರ' ಪುಸ್ತಕದಲ್ಲಿಯೂ ತಿಳಿಸಿದ್ದಾರೆ.

ಅರ್ಥಶಾಸ್ತ್ರವು ಉತ್ಪಾದನೆ, ವಿತರಣೆ, ವಿನಿಮಯ, ಅನುಭೋಗ, ಹಣ, ಮಾರುಕಟ್ಟೆ, ಲಾಭ, ಅಭಿವೃದ್ಧಿ ಇತ್ಯಾದಿಗಳ ಬಗ್ಗೆ ಅಧ್ಯಯನ ಮಾಡಿದರೂ ಈ ಎಲ್ಲ ಚಟುವಟಿಕೆಗಳ ಹಿಂದೆ ಮನುಷ್ಯನ ಮನಸ್ಸು ಹಾಗೂ ಯೋಚನೆ ಎಂಬ ಕಾಣದ ಕೈ ಕೆಲಸ ಮಾಡುತ್ತದೆ. ಪ್ರತಿ ಬಾರಿ ಆರ್ಥಿಕ ಏರಿಳಿತಗಳು ಸಂಭವಿಸಿದಾಗ ಇವೆಲ್ಲದರ ಹಿಂದೆ ಮಾನವನ ಸ್ವಾರ್ಥ, ದುರಾಸೆ ಹಾಗೂ ಅಮಾನವೀಯತೆ, ಮಿತಿಮೀರಿದ ಲಾಭದ ಆಸೆ ಇತ್ಯಾದಿಗಳೇ ನನಗೆ ಕಾಣಿಸುತ್ತಿದ್ದವು. ಏಕೆಂದರೆ ಅರ್ಥಶಾಸ್ತ್ರದ ಮೂಲವಾದ ಬಯಕೆ, ಪ್ರಯತ್ನ, ತೃಪ್ತಿ ಮತ್ತೆ ಬಯಕೆಗಳ ಆದಿ ಅಂತ್ಯಗಳಿಲ್ಲದ ಈ ವಿಷವೃತ್ತ ಎಲ್ಲಿ ಪ್ರಾರಂಭವಾಗುತ್ತದೆ, ಎಲ್ಲಿ ಮುಗಿಯುತ್ತದೆ ಎನ್ನುವುದೇ ಅರ್ಥವಾಗುವುದಿಲ್ಲ. ತೃಪ್ತಿಯ ಹಿಂದೆಯೇ ಅತೃಪ್ತಿ, ಮತ್ತೊಂದು ಬಯಕೆ... ಈ ವಿಷವೃತ್ತವನ್ನು ತುಂಡರಿಸುವುದೆಲ್ಲಿ? ತೃಪ್ತಿಯ ಕೊನೆಯಲ್ಲಿಯೇ? ಅಥವಾ ಅತೃಪ್ತಿಯ ಆರಂಭದಲ್ಲಿಯೇ? ಎಂಬುದೇ ಯಕ್ಷಪ್ರಶ್ನೆಯಾಗಿದೆ. ಅನುಭೋಗಿಸುವುದು ವಸ್ತುವನ್ನೇ ಆದರೂ ತೃಪ್ತಿ ಮಾನಸಿಕ. ಹಣ ವಸ್ತುವಾದರೂ, ಅದು ನೀಡುವ ಕಾನ್ಫಿಡೆನ್ಸ್, ಅದರ ತಾಕತ್ತು, ಅದು ಸೃಷ್ಟಿಸುವ ಭ್ರಮೆ, ಅದು ಕೆರಳಿಸುವ ಆಸೆ-ದುರಾಸೆ, ಅದು ದೂರ ಹೋದಾಗ ಉಂಟಾಗುವ ನಿರಾಸೆ, ಶೂನ್ಯ ಇತ್ಯಾದಿಗಳೆಲ್ಲಾ ಮಾನಸಿಕವಾದುವುಗಳೇ ಆಗಿವೆ. ಉದಾಹರಣೆಗೆ ಇಂದಿನ ಜಾಗತಿಕ ಅಸಮಾನತೆ ಮತ್ತು ಪದೇ ಪದೇ ಸಂಭವಿಸುತ್ತಿರುವ ಆರ್ಥಿಕ ಮುಗ್ಗಟ್ಟು ಏರಿಳಿತಗಳಿಗೆ ಅಮೆರಿಕದ ಕೊಳ್ಳುಬಾಕತನ, ಸುಖ ಲೋಲುಪತೆ, ಹಣದ ಮದ, ಕಂಪನಿಗಳು–ಬ್ಯಾಂಕುಗಳು ಸಿಗುವ ಲಾಭದಿಂದ ತೃಪ್ತರಾಗದೆ ಅತಿ ಲಾಭದ ಆಸೆಗೆ ಬಿದ್ದು ಸಾಲ ಮರುಪಾವತಿಸುವ ಸಾಮರ್ಥ್ಯವಿಲ್ಲದವರಿಗೂ ಸಾಲ ನೀಡಿ ಬದಲಾಗಿ ಕಾಸಿನ ಕಿಮ್ಮತ್ತು ಇಲ್ಲದ ಜಾಮೀನುಗಳನ್ನು ಪಡೆದುಕೊಂಡು ನಿಯಮಗಳನ್ನು ಗಾಳಿಗೆ ತೂರಿದ್ದೇ ಈ ಎಲ್ಲ ಅನಾಹುತಗಳ

ಹಿಂದಿನ ಕಾರಣವಾಗಿದೆ. ಮನುಷ್ಯನ ಆಸೆ ಎಲ್ಲಿ, ಯಾವ ಹಂತದಲ್ಲಿ ದುರಾಸೆಯಾಗಿ ಪರಿವರ್ತನೆಯಾಗುತ್ತದೆ ಎನ್ನುವುದನ್ನು ಸರಿಯಾಗಿ ಊಹಿಸಲು ಸಾಧ್ಯವಾಗುವ ಮಾದರಿಯನ್ನು ಸೃಷ್ಟಿಸಲು ಅರ್ಥಶಾಸ್ತ್ರಜ್ಞರಿಗೆ ಸಾಧ್ಯವಾಗುವುದಾದರೆ ಆಗ ಅರ್ಥಶಾಸ್ತ್ರಜ್ಞರ ಊಹೆಗಳು ಕರಾರುವಾಕ್ಕಾಗಿ, ಪರಿಹಾರ ಸಾಧ್ಯವಾಗುತ್ತದೆ. ಈ ದಿಶೆಯಲ್ಲಿ ಬುಡಕಟ್ಟುಗಳ ಆಲೋಚನೆ, ತತ್ವಗಳು ಸೂಕ್ತ ಮಾರ್ಗದರ್ಶನ ನೀಡಬಲ್ಲವು.

ಆರ್ಥಿಕತೆಯ ಬೆಳವಣಿಗೆಯ ಹಂತಗಳನ್ನು ಸ್ಥೂಲವಾಗಿ ಈ ಕೆಳಗಿನಂತೆ ವರ್ಗೀಕರಿಸಬಹುದು.

೧. ಬೇಟೆ	೨. ಆಹಾರ ಸಂಗ್ರಹಣೆ
೩. ಕುಮರಿ ಬೇಸಾಯ	೪. ಕುಶಲಕಲೆಗಳು
೫. ಗುಲಾಮಗಿರಿ	೬. ಗೃಹಕೈಗಾರಿಕೆಗಳು
೭. ಬಂಡವಾಳ ಸಂಚಯನ, ಯಾಂತ್ರೀಕರಣ ಮತ್ತು ಮಾರುಕಟ್ಟೆ.	೮. ಬೃಹತ್ ಉದ್ದಿಮೆಗಳು
೯. ವ್ಯಾಪಾರ, ವಾಣಿಜ್ಯ, ಸಾರಿಗೆ	೧೦. ಸೇವೆಗಳು.

ಆದಿಮ ಆರ್ಥಿಕತೆಯಿಂದ ಆಧುನಿಕ ಆರ್ಥಿಕತೆಯವರೆಗೆ ಕ್ರಮೇಣವಾಗಿ ಆರ್ಥಿಕತೆಯ ಉಗಮ, ಬೆಳವಣಿಗೆಗಳ ವಿವಿಧ ಹಂತಗಳನ್ನು ಫ್ರೆಡ್ರಿಕ್ ಎಂಗೆಲ್ಸ್ ಅವರು ತಮ್ಮ ಪುಸ್ತಕ ಕುಟುಂಬ, ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳು ಉಗಮ(ಲೂಯಿ ಎಚ್. ಮಾರ್ಗನ್‌ರ ಪರಿಶೋಧನೆಗಳ ಬೆಳಕಿನಲ್ಲಿ)ದಲ್ಲಿ ತುಂಬ ವೈಜ್ಞಾನಿಕವಾಗಿ, ಮನೋಜ್ಞವಾಗಿ ಚಿತ್ರಿಸಿದ್ದಾರೆ. ಕಾರ್ಲ್ ಮಾರ್ಕ್ಸ್‌ರ ಹಸ್ತಪ್ರತಿ ಪರಿಶೀಲಿಸುವಾಗ, ಅಮೆರಿಕದ ಎಲ್.ಜಿ. ಮಾರ್ಗನ್‌ರ ಆದಿಮ ಸಮಾಜ ಎಂಬ ಗ್ರಂಥದ ಮೇಲೆ ಮಾರ್ಕ್ಸ್‌ರು ಮಾಡಿದ ಟಿಪ್ಪಣಿಗಳಿಂದ ಆಕರ್ಷಿತರಾಗಿ ಎಂಗೆಲ್ಸ್‌ರು ಈ ಕೃತಿ ರಚಿಸಿದ್ದಾರೆ. ಅದರಲ್ಲಿ ಆರ್ಥಿಕತೆಯ ಬೆಳವಣಿಗೆಯನ್ನು ಸುಮಾರು ೧೬ ಹಂತಗಳಾಗಿ ವಿವರಿಸಿದ್ದಾರೆ. ಹಂತಗಳನ್ನು '[ ]' ಕಂಸಗಳಲ್ಲಿ ನೀಡಲಾಗಿದೆ.

"ಎಂಗೆಲ್ಸ್‌ರು ತಮ್ಮ ಈ ಕೃತಿಯಲ್ಲಿ ಐತಿಹಾಸಿಕ ಭೌತಿಕವಾದಿ ದೃಷ್ಟಿಕೋನದಿಂದ ಕುಟುಂಬದ ವಿಕಾಸವನ್ನು ವಿವರಿಸಿದ್ದಾರೆ. ಕುಟುಂಬವನ್ನು ಒಂದು ಐತಿಹಾಸಿಕ ಸಂವರ್ಗವೆಂದು ಪರಿಗಣಿಸಿ, ಸಮಾಜದ ಬೆಳವಣಿಗೆಯ ವಿವಿಧ ಹಂತಗಳೊಡನೆ ಇದರ ರೂಪಗಳ(ಆದಿಕಾಲದ ಸಮೂಹ ವಿವಾಹದಿಂದ ಹಿಡಿದು ಖಾಸಗಿ ಆಸ್ತಿಯ ಉಗಮದ ಫಲವಾಗಿ ಅಸ್ತಿತ್ವಕ್ಕೆ ಬಂದ ಏಕಪತ್ನಿ ಕುಟುಂಬದವರೆಗೆ) ರಚನಾತ್ಮಕ ಸಂಬಂಧವನ್ನು, ಈ ರೂಪಗಳು ಉತ್ಪಾದನಾ ವಿಧಾನಗಳ ಮೇಲೆ ಅವಲಂಬಿಸಿರುವುದನ್ನು, ಎಂಗೆಲ್ಸ್‌ರು ಬಿಡಿಸಿ ಹೇಳಿದ್ದಾರೆ. ಉತ್ಪಾದಕ ಶಕ್ತಿಯ ಬೆಳವಣಿಗೆಯೊಂದಿಗೆ ಸಮಾಜವ್ಯವಸ್ಥೆಯ ಮೇಲೆ ಗೋತ್ರಪದ್ಧತಿಯ ಪ್ರಾಬಲ್ಯ ಕಡಿಮೆಯಾಗುತ್ತಾ ಬಂದಿತು ಹಾಗೂ ಖಾಸಗಿ ಆಸ್ತಿಯ ಜಯಭೇರಿಯೊಂದಿಗೆ ಆಸ್ತಿ ಸಂಬಂಧಗಳಿಗೆ ಸಂಪೂರ್ಣ ಅಧೀನವಾದ ಕುಟುಂಬ ವ್ಯವಸ್ಥೆ ಇದ್ದಂತಹ ಸಮಾಜವು ಕಾಣಿಸಿಕೊಂಡಿತು ಎಂಬುದನ್ನು ಸಾಕ್ಷ್ಯಾಧಾರಗಳ ಸಹಿತ ಶ್ರುತಪಡಿಸಿದ್ದಾರೆ.

'ದೀರ್ಘಾವಧಿಯವರೆಗೆ ಉತ್ಪಾದನಾ ಸಾಧನಗಳು ಸಾಮಾನ್ಯ ಅಂದರೆ ಸಮುದಾಯದ (ಬುಡಕಟ್ಟುಸಮುದಾಯಗಳ) ಆಸ್ತಿಯಾಗಿದ್ದವು. ಉತ್ಪಾದಕ ಶಕ್ತಿಗಳ ಬೆಳವಣಿಗೆಯೊಂದಿಗೆ, ಶ್ರಮದ ಉತ್ಪಾದಕತೆಯ ಹೆಚ್ಚಳದೊಂದಿಗೆ ಇತರ ಜನರ ದುಡಿಮೆಯ ಫಲಗಳನ್ನು ಒಬ್ಬನೇ ವ್ಯಕ್ತಿ ಕಸಿದುಕೊಳ್ಳುವ ಅವಕಾಶವು ಹೇಗೆ ಉದ್ಭವಿಸುತ್ತದೆ. ತತ್ಫಲವಾಗಿ ಖಾಸಗಿ ಆಸ್ತಿಯೂ, ಮಾನವನಿಂದ ಮಾನವನ ಶೋಷಣೆಯೂ ಉಂಟಾದವು'[೩೦] ಎಂದು ವಿವರಿಸುತ್ತದೆ.

'ಆಸ್ತಿಯು ಸಾಮಾನ್ಯವಾಗಿ ಬುಡಕಟ್ಟಿನ ಸಾಮೂಹಿಕ ಮಾಲೀಕತ್ವಕ್ಕೊಳಪಟ್ಟಿರುತ್ತದೆ. ಮತ್ತು ಸೈದ್ಧಾಂತಿಕವಾಗಿ ಆ ಕುಲದ ಯಾವುದೇ ಸದಸ್ಯನಿಗೂ ಅದರ ಉಪಯೋಗದ ಅಧಿಕಾರವಿರುತ್ತದೆ. ಆದರೆ ವಾಸ್ತವಿಕವಾಗಿ ಅವುಗಳ ಮೇಲೆ ಕೆಲವೇ ಜನ ವಿವಾಹಿತ ಗಂಡು-ಹೆಣ್ಣುಗಳಿಗೆ ಮಾತ್ರ ನಿಯಂತ್ರಣವಿರುತ್ತದೆ. ಲಿಂಗದ ಆಧಾರದ ಮೇಲೂ ಕೆಲವು ವಸ್ತುಗಳ ಮೇಲೆ ಅಧಿಕಾರದ ವ್ಯತ್ಯಾಸವಿದ್ದು ಅವಶ್ಯಕತೆ ಇದ್ದಾಗ ವಿರುದ್ಧ ಲಿಂಗದವರಿಂದ ಸಾಲವಾಗಿ ಪಡೆಯುವ ಅವಕಾಶವಿರುತ್ತದೆ. ಒಂದು ರೀತಿಯಲ್ಲಿ ವ್ಯಕ್ತಿಯ ಹೋರಾಟದ ಹಾಗೂ ಇತರ ಕೌಶಲ್ಯಗಳು ಮತ್ತು ಬೇಟೆಯ ಈಟಿಗಳು ಮಾತ್ರ ವ್ಯಕ್ತಿಯ ಸ್ವಂತ ಆಸ್ತಿಗಳಾಗಿರುತ್ತವೆ. ರಕ್ತಸಂಬಂಧವನ್ನು ಆಧರಿಸಿದ ಈ ವ್ಯವಸ್ಥೆಯಲ್ಲಿ ಯಾವುದೇ ವಸ್ತುವೂ ಯಾರೊಬ್ಬನ ಶಾಶ್ವತ ಆಸ್ತಿ ಅಥವಾ ಇವನೇ ಇದರ ಉತ್ತರಾಧಿಕಾರಿ ಎಂದು ಹೇಳಲಾಗದು.'[೩೧]

ಬುಡಕಟ್ಟುಗಳು ಅಥವಾ ಗೋತ್ರಗಳು ಅಥವಾ ವ್ರಾತ್ಯಗಳು ಅನಾಗರಿಕ ಅವಸ್ಥೆಯನ್ನು ದಾಟಿ ಬಂದ ಸುಧಾರಿತ ಮಾನವಸಮೂಹಗಳಾಗಿದ್ದು, ಅವು ಹೇಗೆ ನಾಗರಿಕತೆಗೆ ಹಾಗೂ ಆರ್ಥಿಕ ವ್ಯವಸ್ಥೆಗೆ ಕಾರಣವಾದವೆಂಬ ಹಂತವನ್ನು ಹೀಗೆ ವಿವರಿಸಲಾಗಿದೆ.

"ಜನಸಂಖ್ಯೆ ಹೆಚ್ಚಾದಂತೆ ಬುಡಕಟ್ಟುಗಳು ಹಲವಾರು ಗೋತ್ರ, ಉಪಗೋತ್ರಗಳಾಗಿ ವಿಭಜಿತವಾದವು. ರಕ್ತಸಂಬಂಧದ ಆಧಾರದ ಮೇಲಿದ್ದ ಈ ಸರಳ ಬುಡಕಟ್ಟು ಒಕ್ಕೂಟಗಳು ತಮ್ಮ ತಮ್ಮಲ್ಲಿನ ಆಂತರಿಕ ಘರ್ಷಣೆಗಳನ್ನು ನಿವಾರಿಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದವು. ಬಾಹ್ಯ ಘರ್ಷಣೆಗಳು ಯುದ್ಧದ ಮೂಲಕ, ಅದರಲ್ಲೂ ಒಂದು ಬುಡಕಟ್ಟಿನ ವಿನಾಶದ ಮೂಲಕ ನಿರ್ಧಾರವಾಗುತ್ತಿದ್ದವು. ಬುಡಕಟ್ಟುಗಳ ಮಧ್ಯೆ ಗುಲಾಮಗಿರಿಗೆ ಒಳಪಡಿಸುತ್ತಿರಲಿಲ್ಲ. ಆಳುವ-ಆಳಿಸಿಕೊಳ್ಳುವ, ಹಕ್ಕುಗಳು, ಕರ್ತವ್ಯಗಳಿಲ್ಲದ ಸಾಮೂಹಿಕ ಜೀವನ ರಕ್ಷಣೆಯೇ ಈ ವ್ಯವಸ್ಥೆಯ 'ಆರ್ಥಿಕ ಬುನಾದಿ'ಯಾಗಿದ್ದು ತುಂಬಾ ಸರಳವಾಗಿತ್ತು. ಜನರು ದೂರ ದೂರವಾಗಿ ಹರಡಿಕೊಂಡಿದ್ದರು. ಬುಡಕಟ್ಟಿನ ವಾಸಸ್ಥಳದಲ್ಲಷ್ಟೇ ದಟ್ಟವಾಗಿ ವಾಸಿಸುತ್ತಿದ್ದರು ಮತ್ತು ಅವುಗಳ ಸುತ್ತಲೂ ವಿಶಾಲವಾದ ಬೇಟೆಯಾಡುವ ಪ್ರದೇಶ ಅಥವಾ ಗಡಿಗಳಿದ್ದು ಅವುಗಳಾಚೆಗೆ ಯಾವ ಬುಡಕಟ್ಟಿಗೂ ಸೇರದ ತಟಸ್ಥ ಕಾಡುಪ್ರದೇಶವಿತ್ತು. ನಿಸರ್ಗ ನಿರ್ದೇಶಿತ ಗಂಡು-ಹೆಣ್ಣುಗಳ ನಡುವೆ ಸರಳವಾದ ಶ್ರಮವಿಭಜನೆ ಇತ್ತು. ಪುರುಷರು ಯುದ್ಧ, ಬೇಟೆ, ಮೀನುಗಾರಿಕೆಗಳಲ್ಲಿ ತೊಡಗಿದ್ದು ಆಯುಧ, ಬಲೆ ಇತ್ಯಾದಿ ಬಳಸುತ್ತಿದ್ದರು. ಸ್ತ್ರೀಯರು ಮನೆಯ ವ್ಯವಹಾರಗಳನ್ನು, ಅಂದರೆ, ಅಡುಗೆ, ಉಡುಗೆ-ತೊಡುಗೆಗಳನ್ನು,

ಮಕ್ಕಳ ಲಾಲನೆ-ಪಾಲನೆಗಳನ್ನು ನೋಡಿಕೊಳ್ಳುತ್ತಿದ್ದರು. ಇಡೀ ಬುಡಕಟ್ಟು ವಾಸಸ್ಥಳ ಅಥವಾ ಹಾಡಿಯೂ ಒಂದೇ ಮನೆಯಂತೆ ಇದ್ದು ಇಡೀ ಪ್ರದೇಶ ಸಾಮೂಹಿಕ ಒಡೆತನಕ್ಕೆ ಸೇರಿತ್ತು. ಖಾಸಗಿ ಆಸ್ತಿ ಎಂಬುದು ತುಂಬಾ ಅಸ್ಪಷ್ಟವಾಗಿದ್ದು ಸಾಮೂಹಿಕವಾಗಿ ಉತ್ಪಾದಿಸಿದ ಮನೆ, ತೋಟ, ದೋಣಿ ಇತ್ಯಾದಿಗಳು ಸಾಮೂಹಿಕ ಆಸ್ತಿಗಳಾಗಿದ್ದು ಬಿಲ್ಲು-ಬಾಣ, ಬಲೆಗಳು ಗಂಡಸಿನ ಆಸ್ತಿಯಾಗಿದ್ದರೆ, ಪಾತ್ರೆ ಪಡಗಗಳು ಹೊರಗಿನ ಸಮುದಾಯದ ಆಸ್ತಿಯಾಗಿದ್ದವು. ಮಾತೃಪ್ರಧಾನ ಕುಟುಂಬವಿದ್ದುದರಿಂದ ಮನೆಯಲ್ಲಿ ಸ್ತ್ರೀಗೆ ಪ್ರಥಮ ಸ್ಥಾನವಿದ್ದು, ಹೊರಗೆ ಕಾಡಿನಲ್ಲಿ ಗಂಡಸಿಗೆ ಪ್ರಥಮ ಸ್ಥಾನವಿದ್ದಿತು(ಗಂಡಸು ಮನೆಯಲ್ಲಿ ದ್ವಿತೀಯ ಸ್ಥಾನಕ್ಕೇ ತೃಪ್ತಿಪಟ್ಟುಕೊಂಡಿದ್ದನು). ಆಹಾರ ಇನ್ನೂ ಬೇಟೆಯನ್ನೇ ಅವಲಂಬಿಸಿದ್ದು ಅದು ಕೂಡಾ ತುಂಬಾ ಅನಿಶ್ಚಿತತೆಯಿಂದ ಕೂಡಿದ್ದು ಸಿಕ್ಕರೆ ಶಿಕಾರಿ ಎಂಬಂತಿತ್ತು. ಹೆಣ್ಣುಮಕ್ಕಳು ಗೆಡ್ಡೆಗೆಣಸುಗಳನ್ನೇ ಸಂಗ್ರಹಿಸಿ ಆಹಾರದ ಉತ್ಪಾದನೆ ಹಾಗೂ ವಿತರಣೆ ಮಾಡುತ್ತಿದ್ದದರಿಂದ ಬಹುಶಃ ಮೂಲಭೂತ ಅವಶ್ಯಕತೆಗಳಾದ ಊಟ, ನೀರು, ಮೈಥುನಗಳೆಲ್ಲಾ ಹೆಂಗಸಿನ ನಿಯಂತ್ರಣದಲ್ಲಿದ್ದುರಿಂದಲೇ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಇದ್ದಿರಬಹುದು. ಬದಲಾವಣೆಯೊಂದೇ ಶಾಶ್ವತವಾಗಿರುವ ಜಗತ್ತಿನಲ್ಲಿ ಹಂತ ಹಂತವಾಗಿ ಬದಲಾವಣೆ ಸಂಭವಿಸಿದರೆ ಮನುಷ್ಯ ಮಾತ್ರ ತೀವ್ರವಾಗಿ ಬದಲಾಗುತ್ತಾ ಬೇಟೆಯ ಹಂತದಿಂದ ಪಶುಪಾಲನೆಯ ಹಂತಕ್ಕೆ ಜಿಗಿದ(ಇದನ್ನು ಆರ್ಥಿಕತೆಯ ೨ನೇ ಹಂತವೆನ್ನಬಹುದು). ಕಾಡೆಮ್ಮೆಗಳನ್ನು ಬೇಟೆಯಾಡುವ ಬದಲು ಪಳಗಿಸಿ ಸಾಕುವ ಇಲ್ಲವೇ ಬೇಟೆಯಲ್ಲಿ ಸಿಕ್ಕ ಚಿಕ್ಕ ಹಸು, ಮೇಕೆ, ಕುರಿಗಳ ಮರಿಗಳನ್ನು ಮನೆಗೆ ತಂದು ಸಾಕಿಕೊಳ್ಳುವ ಮೂಲಕ ಆಕಸ್ಮಿಕವಾಗಿ ಆರಂಭವಾದ ಪಶುಪಾಲನೆ ನಂತರ ಅತಿ ಶೀಘ್ರವಾಗಿ ಬೆಳವಣಿಗೆ ಹೊಂದಿ ದೊಡ್ಡದೊಡ್ಡ ಮಂದೆಗಳಾಗಿ ಹಾಲು, ಹಾಲಿನ ಉತ್ಪನ್ನಗಳು, ಮಾಂಸ, ತುಪ್ಪಳ, ಉಣ್ಣೆ, ನೂಲು, ವಸ್ತ್ರಗಳು ಇತ್ಯಾದಿಗಳ ಕಚ್ಚಾವಸ್ತುಗಳ ಮೂಲವಾಗಿ ಪಶುಪಾಲನೆ ಬೆಳೆದುಬಂತು. ಇದು ಹೆಚ್ಚುವರಿ ಉತ್ಪಾದನೆಗೆ ಹಾಗೂ ಕಡಿಮೆ ಶ್ರಮದ ಬಳಕೆಗೆ ಕಾರಣವಾಗಿದ್ದರಿಂದ ಹಾಗೂ ಬಿಡುವಿನ ಸಮಯ ಮಾನಸಿಕಶಕ್ತಿಯ ಬಳಕೆಗೆ ಅವಕಾಶ ನೀಡಿದ್ದರಿಂದ ಪ್ರಪ್ರಥಮ ಭಾರೀ ಶ್ರಮವಿಭಜನೆಗೆ ಮತ್ತು ಕ್ರಮಬದ್ಧ ವಸ್ತು ವಿನಿಮಯಕ್ಕೆ ದಾರಿ ಮಾಡಿಕೊಟ್ಟಿತು. ಮೊದಲು ಕೇವಲ ಗಂಡುಹೆಣ್ಣುಗಳ ನಡುವೆ ಮಾತ್ರ ಇದ್ದ ಶ್ರಮವಿಭಜನೆ ಪಶುಪಾಲನೆಯ ಸಮಯದಲ್ಲಿ ಕುಟುಂಬದ ಎಲ್ಲ ಸದಸ್ಯರ ನಡುವೆ ವಿಸ್ತರಿಸಿತಲ್ಲದೆ ಉಣ್ಣೆ, ನೂಲು, ವಸ್ತ್ರ, ಚರ್ಮ ಮುಂತಾದವು ಹಾಗೂ ಆಯುಧ ತಯಾರಿಕೆಗಳೆಲ್ಲಾ ಇಡೀ ಸಮುದಾಯಕ್ಕಾಗಿ ಕೆಲಸ ಮಾಡುವ ಕುಶಲಕರ್ಮಿ ಶ್ರಮಿಕವರ್ಗದ ಹುಟ್ಟಿಗೆ ಕಾರಣವಾದವು. ಅವಶ್ಯಕತೆಗಿಂತ ಹೆಚ್ಚಿನ ಉತ್ಪಾದನೆ ಹಾಗೂ ಹೆಚ್ಚು ಬಿಡುವು ಮನುಷ್ಯನನ್ನು ನಿಸರ್ಗವನ್ನೇ ಅವಲಂಬಿಸಿದ [೩] ಕೃಷಿ-ಪಶುಪಾಲನೆಯಿಂದ, ಕುಶಲಕರ್ಮಿ ಹಾಗೂ ಆಯುಧ ತಯಾರಿಕಾ ಉದ್ದಿಮೆ ಅಥವಾ ಕಾರ್ಖಾನೆಗಳ ಹಂತಕ್ಕೆ ಕರೆದೊಯ್ದಿತು. ಇದರಿಂದಾಗಿಯೇ ಅನೇಕ ಸ್ಥಳಗಳಲ್ಲಿ ನವಶಿಲಾಯುಗದ ಕಲ್ಲಿನ ಆಯುಧ ಸಲಕರಣೆಗಳನ್ನು ಮಾಡುತ್ತಿದ್ದ ಕರ್ಮಶಾಲೆಗಳ ಪ್ರಶ್ನಾತೀತವಾದಂತಹ ಉಳಿಕೆಗಳನ್ನು ಕಂಡು ಹಿಡಿಯಲಾಗಿದೆ. ಉದಾಹರಣೆಗೆ ಬಳ್ಳಾರಿಯ ಸಂಗನಕಲ್ಲು ಪ್ರದೇಶ. ಬಹುಶಃ ಇದೇ ಸಮಯದಲ್ಲೇ ಭಾರತದಲ್ಲಿ

ಗೋತ್ರಗಳಿಂದ ವರ್ಣ, ಜಾತಿಪದ್ಧತಿಗೆ ಬೀಜಾಂಕುರವಾಗಿರಬಹುದು. ಈ ಹಂತದಲ್ಲೂ ವಿನಿಮಯವು ಬುಡಕಟ್ಟಿನೊಳಗೇ ಸೀಮಿತವಾಗಿದ್ದು ಗೋತ್ರ ಮುಖ್ಯಸ್ಥನ ಮೂಲಕವೇ ನಡೆಯುತ್ತಿದ್ದಿತು. ಆದರೆ ಪಶುಪಾಲನೆ ಬೆಳೆದಂತೆ ಮಂದೆಗಳ ಸಂಖ್ಯೆ ಹೆಚ್ಚಾದಂತೆ ಈ ಮಂದೆಗಳು ಖಾಸಗಿ ಆಸ್ತಿಗಳಾಗಿ ಮಾರ್ಪಟ್ಟು ಬಿಡಿ ವ್ಯಕ್ತಿಗಳ ನಡುವೆ ವಿನಿಮಯವೂ ಆರಂಭವಾಗಿ ಅದೇ ಶಾಶ್ವತವಾಯಿತು ಮತ್ತು ಈ ಜಾನುವಾರುಗಳೇ ವಿನಿಮಯದ ಮಾಧ್ಯಮವಾಗಿ ಇತರ ಸರಕುಗಳ ಮೌಲ್ಯವನ್ನು ನಿರ್ಧರಿಸುವ ಹಣದ ರೂಪ ಪಡೆದುಕೊಂಡಿತು. ಎಲ್ಲೆಲ್ಲೂ ಅದನ್ನು ಇತರ ವಸ್ತುಗಳಿಗೆ ವಿನಿಮಯವಾಗಿ ವಿರೋಧವಿಲ್ಲದೇ ಸ್ವೀಕರಿಸಲಾಗುತ್ತಿತ್ತು[೪]. ಉದಾಹರಣೆಗೆ ಭಾರತದಲ್ಲಿ ಎಲ್ಲ ವಸ್ತುಗಳ ಮೌಲ್ಯವನ್ನು ಗೋವಿನ ಮೂಲಕ ನಿರ್ಧರಿಸಲಾಗುತ್ತಿತ್ತು. ಈ ಮಜಲಿನಲ್ಲಿ ಜಾನುವಾರು ಆಗಲೇ ಹಣದ ಪಾತ್ರ ನಿರ್ವಹಿಸತೊಡಗಿದ್ದಿತು[೫]. ಪಶುಸಂಗೋಪನೆಯ ನಂತರದ ಹಂತದಲ್ಲಿ 'ವ್ಯವಸಾಯ ಪದ್ಧತಿ'ಯು ಆರಂಭವಾಯಿತು. ಅತಿಯಾದ ಚಳಿ ಹಾಗೂ ಹಿಮದಿಂದ ಪಶುಸಂಗೋಪನೆಗಾಗಿ ಸ್ಥಳದಿಂದ ಸ್ಥಳಕ್ಕೆ ಮೇವು, ನೀರು ಹುಡುಕಿಕೊಂಡು ಹೋಗುತ್ತಾ ಅಲೆಮಾರಿಯಾಗಿದ್ದ ಬುಡಕಟ್ಟುಗಳಲ್ಲಿ ಕೆಲವರು ನೈಸರ್ಗಿಕವಾಗಿ ದೊರೆಯುತ್ತಿದ್ದ ಧಾನ್ಯಗಳನ್ನು ಕೃತಕವಾಗಿ, ಉದ್ದೇಶಪೂರ್ವಕವಾಗಿ ಏಕೆ ಬೆಳೆಯಬಾರದೆಂದು ತರ್ಕಿಸಿ ಫಲವತ್ತಾದ ಭೂಮಿಯಲ್ಲಿ ನೆಲೆ ನಿಂತು ಪಶುಸಂಗೋಪನೆಗಾಗಿ ಪ್ರಾರಂಭವಾದ ಬೇಸಾಯ ಮುಂದೆ ಮನುಷ್ಯನ ಆಹಾರದ ಮೂಲವೂ ಆಯಿತು(ಒಮ್ಮೆ ಪಶುಗಳಿಗಾಗಿ ಧಾನ್ಯ ಬೆಳೆಯಲು ಪ್ರಾರಂಭಿಸಲಾಯಿತು. ಅದು ಆದಷ್ಟು ಬೇಗ ಮಾನವರಿಗೆ ಆಹಾರವಾಗಿಯೂ ಆಯಿತು).

ಸಾಗುವಳಿ ಮಾಡಿದ ಭೂಮಿ ಮೊದಲು ಇಡೀ ಬುಡಕಟ್ಟಿನ ಆಸ್ತಿಯಾಗಿದ್ದುದು ನಂತರ ಗೋತ್ರಕ್ಕೆ, ಗೋತ್ರದಿಂದ ಕುಟುಂಬಕ್ಕೆ, ವ್ಯಕ್ತಿಗಳಿಗೆ ಹಂಚಿಕೆಯಾಯಿತು. ಇದೇ ಹಂತದಲ್ಲಿ ಅದಿರನ್ನು ಕರಗಿಸಿ ಲೋಹವನ್ನಾಗಿಸುವ ಕುಲುಮೆ ಹಾಗೂ ನೂಲನ್ನು ಹೆಣೆದು ಬಟ್ಟೆಯನ್ನಾಗಿಸುವ 'ಕೈಮಗ್ಗ'ಗಳು ಪ್ರಮುಖ ಕೈಗಾರಿಕೆಗಳಾಗಿ ಬೆಳೆಯತೊಡಗಿದವು[೬]. ಹೀಗೆ ಬೇಟೆ, ಕೃಷಿ, ಪಶುಸಂಗೋಪನೆ, ಕೈಕಸುಬು, ಬಟ್ಟೆ ಮತ್ತು ಲೋಹದ ಕೈಗಾರಿಕೆಗಳು, ಅಧಿಕ ಉತ್ಪಾದನೆ ಇತ್ಯಾದಿಗಳು ಜೊತೆಗೆ ಬುಡಕಟ್ಟುಗಳ ನಡುವಿನ ಯುದ್ಧಗಳೆಲ್ಲಾ ಸೇರಿ ಗೋತ್ರದ ಮತ್ತು ಕುಟುಂಬದ ಕೆಲಸದ ಭಾರ ತುಂಬಾ ಹೆಚ್ಚಾಗತೊಡಗಿದವು. ಮೊದಲೆಲ್ಲಾ ಬುಡಕಟ್ಟುಗಳ ನಡುವಿನ ಯುದ್ಧಗಳು ಒಂದು ಬುಡಕಟ್ಟಿನ ಸರ್ವನಾಶ ಅಥವಾ ಪಲಾಯನದೊಂದಿಗೆ ಪರ್ಯವಸಾನಗೊಳ್ಳುತ್ತಿದ್ದರೆ, ಬದಲಾದ ಕೆಲಸದ ಒತ್ತಡ ಈ ಯುದ್ಧಗಳ ಮೂಲಕ ಇತರ ಬುಡಕಟ್ಟುಗಳನ್ನು ಸೆರೆ ಹಿಡಿದು ಗುಲಾಮರನ್ನಾಗಿಸಿ ಕೊಂಡು ಅವರ ಮೂಲಕ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುವ ಗುಲಾಮಗಿರಿ ಪದ್ಧತಿ ಬೆಳೆಯಿತು. 'ಇದು ಮತ್ತೊಂದು ಮಹಾಶ್ರಮವಿಭಜನೆಯ ಹಂತವಷ್ಟೇ ಅಲ್ಲದೆ ಸಮಾಜದ ಮಹಾವಿಭಜನೆಯ ಹಂತವೂ ಹೌದು. ಅಲ್ಲಿಂದ ಗುಲಾಮರು, ಮಾಲೀಕರು, ಶೋಷಿತರು, ಶೋಷಕರು ಎಂದು ವಿಭಜನೆಗೊಂಡಿತು[೭].'[೮]

ಇಲ್ಲಿ ಕಂಚಿನ ಯುಗದ ಅರಮನೆ ಆರ್ಥಿಕತೆಯ ಪರಿಭಾವನೆಯನ್ನು ಪರ್ಯಾಲೋಚಿಸುವುದು ಸೂಕ್ತವೆನಿಸುತ್ತದೆ. ಉತ್ಪಾದನೆ, ಅನುಭೋಗ, ಆದಾಯ ಇತ್ಯಾದಿಗಳಷ್ಟೇ ಮಹತ್ವದ ಮತ್ತೊಂದು ಆರ್ಥಿಕ ಪರಿಕಲ್ಪನೆಯೆಂದರೆ ಹಂಚಿಕೆ ಅಥವಾ ಮರುಹಂಚಿಕೆ. ಉತ್ಪಾದನೆಯನ್ನು ಅಥವಾ ಉತ್ಪಾದನೆಯಿಂದ ಬಂದ ಆದಾಯವನ್ನು ಹೇಗೆ ಮರುಹಂಚಿಕೆ ಮಾಡಲಾಗುತ್ತಿತ್ತು ಎಂದು ವಿಚಾರಿಸಿದಾಗ ಮೊದಮೊದಲು ಅದು ಕೊಡುಗೆಗಳ ಮೂಲಕ(ಗಿಫ್ಟ್ ಎಕಾನಮಿ), ಅರಮನೆ ಆರ್ಥಿಕತೆಯ ಮೂಲಕ, ಇತ್ತೀಚೆಗೆ ಮಾರುಕಟ್ಟೆ ಆರ್ಥಿಕತೆ ಹಾಗೂ ಯೋಜಿತ ಅರ್ಥವ್ಯವಸ್ಥೆಯಲ್ಲಿ ಕೇಂದ್ರೀಯ ಅಧಿಕಾರದ ಮೂಲಕ ಎಂದು ತಿಳಿಯುತ್ತದೆ. ಮಾರ್ಗನ್ ಅವರು ತಮ್ಮ ಪುಸ್ತಕದಲ್ಲಿ ಇವುಗಳನ್ನು ವಿವೇಚಿಸಿಲ್ಲವಾದರೂ ಇವೂ ಕೂಡ ಬುಡಕಟ್ಟು ಆರ್ಥಿಕತೆಯ ಮೂಲ ವಿಧಾನಗಳಾಗಿವೆ. ಅರಮನೆ ಆರ್ಥಿಕತೆಯನ್ನು ವಿವರವಾಗಿ ಈ ಹಿಂದೆಯೆ ವಿವೇಚಿಸಲಾಗಿದೆ.

ಮರದ ನೇಗಿಲು, ಕಲ್ಲಿನ ಕೊಡಲಿ ಬಳಸುತ್ತಿದ್ದ ಬುಡಕಟ್ಟು ಮನುಷ್ಯ ಇತಿಹಾಸದಲ್ಲೇ ಅತ್ಯಂತ ಕ್ರಾಂತಿಕಾರಿ ಪಾತ್ರ ವಹಿಸಿದ ಒಂದು ಮುಖ್ಯ ಕಚ್ಚಾವಸ್ತುವನ್ನು ಕಂಡುಕೊಂಡ. ಅದೇ ಕಬ್ಬಿಣವು ಮಾನವನ ಸೇವಕನಾಯಿತು'[೮]. ಅದು ಕತ್ತಿಯಾಗಿ ಅದುವರೆಗೂ ತಿಳಿದಿದ್ದ ಎಲ್ಲ ಲೋಹದ ಆಯುಧಗಳನ್ನು ತುಂಡರಿಸಿ ರಕ್ಷಿಸುವ ವಜ್ರಾಯುಧವಾಯಿತು. ಅದು ಕೊಡಲಿಯಾಗಿ ಎಂತಹ ಕಾಡನ್ನೂ ಸವರಿ ಸಾಗುವಳಿ ಯೋಗ್ಯವನ್ನಾಗಿಸಲು ನೆರವಾಯಿತು. ಅದು ನೇಗಿಲಾಗಿ ಎಂತಹ ಗಟ್ಟಿಯಾದ ನೆಲವನ್ನು ಉತ್ತು ಬೆಳೆ ಬೆಳೆಯಲು ಸಹಾಯ ಮಾಡಿತು. ಹೀಗೆ ಕಬ್ಬಿಣವು ಮಾನವನ ಅಪರಿಮಿತ, ಅನಿಯಂತ್ರಿತ ಬೆಳವಣಿಗೆಗೆ ಮೂಲಾಧಾರವಾಯಿತು. ಇದೇ ವೇಳೆಗೆ ಸಂಪತ್ತು ಹೆಚ್ಚಿ ಅದನ್ನು ರಕ್ಷಿಸುವ ಅನಿವಾರ್ಯತೆ ಉಂಟಾಗಿದ್ದರಿಂದ ಕಟ್ಟಿಗೆ ಮತ್ತು ಇಟ್ಟಿಗೆಯ ಮನೆಗಳು, ನಗರಗಳು ಮತ್ತು ಅವುಗಳ ಸುತ್ತ ಕಟ್ಟಿಗೆಯ ಕಲ್ಲಿನ ಕೋಟೆಗಳೂ ಬಂದವು. ಇವು ಒಂದು ಬುಡಕಟ್ಟಿನ ಅಥವಾ ಅನೇಕ ಬುಡಕಟ್ಟುಗಳ ಸಮಷ್ಟಿ ಕೇಂದ್ರಗಳಾದವು. ಕಸುಬುಗಳು ಹೆಚ್ಚು ಉತ್ಪಾದನೆಗೆ ತೊಡಗಿದವಲ್ಲದೆ ಅವುಗಳ ಕಲಾತ್ಮಕತೆಯೂ ಹೆಚ್ಚಾಯಿತು. ಜೊತೆಗೆ ಬೇಸಾಯ ಕೇವಲ ಧಾನ್ಯ, ಮೇವು ಬೆಳೆಯಲು ಮಾತ್ರವಲ್ಲದೆ ದ್ವಿದಳ ಧಾನ್ಯ, ಹಣ್ಣು, ಹಂಪಲು, ಎಣ್ಣೆಕಾಳುಗಳು, ದ್ರಾಕ್ಷಿರಸ ಇತ್ಯಾದಿಗಳನ್ನು ನೀಡತೊಡಗಿತು. ಗುಲಾಮಗಿರಿಯು ಈ ಹೆಚ್ಚಿನ ಶ್ರಮಕ್ಕೆ ಅನಿವಾರ್ಯ ಅಗತ್ಯವಾಯಿತು. ಕೃಷಿ ಹಾಗೂ ಕೈಕಸುಬುಗಳು ವಿಂಗಡಣೆಯಾಗಿ ಹೆಚ್ಚುವರಿ ಉತ್ಪನ್ನ ವಿನಿಮಯವನ್ನು ಹೆಚ್ಚಿಸಿತು. ವಿನಿಮಯದೊಂದಿಗೆ ವ್ಯಾಪಾರ ವರ್ಗವೆಂಬ ಅತ್ಯಂತ ಸ್ವಾರ್ಥ ಆದರೆ ಬುದ್ಧಿವಂತ ವರ್ಗ ಹುಟ್ಟಿಕೊಂಡಿತು. ಇದು ಕಷ್ಟಪಡದೇ, ಉತ್ಪಾದಿಸದೆ, ಕೇವಲ ವಿನಿಯಮಕ್ಕೆ ಸಹಾಯ ಮಾಡುವ ಮೂಲಕ ಶ್ರೀಮಂತವರ್ಗವಾಗಿ ಬೆಳೆದುಬಂದಿತು. [೯]. ಅಂದು ಕೇವಲ ವ್ಯಾಪಾರ ವಿನಿಮಯಕ್ಕೆಂದು ಹುಟ್ಟಿದ ಈ ವರ್ಗ ಇಂದು ಎಲ್ಲವನ್ನೂ ಎಲ್ಲರನ್ನೂ ನಿಯಂತ್ರಿಸುವ ಅದಮ್ಯ ಶಕ್ತಿಯಾಗಿ ಬೆಳೆದುದು ಮತ್ತು ಮತ್ತಾವುದೇ ವರ್ಗ ಇದಕ್ಕೆ ಸರಿಸಾಟಿಯಾಗಿ ಬೆಳೆಯದೇ ಇರುವುದು ಒಂದು ಕುತೂಹಲಕಾರಿ ವಿಷಯವಾಗಿದೆ. ಈ ಹಂತದಲ್ಲಿ ಪಶು ಧಾನ್ಯಗಳ ರೂಪದಲ್ಲಿದ್ದ ವಿನಿಮಯದ ಹಣ, ಅಮೂಲ್ಯ ಲೋಹಗಳ ರೂಪ ತಳೆದು(ಆದರೆ ಇನ್ನೂ ನಾಣ್ಯಗಳ ರೂಪ

ಪಡೆದಿರಲಿಲ್ಲ) ವ್ಯಾಪಾರ ಬುಡಕಟ್ಟುಗಳ ನಡುವಿನ ಗಡಿದಾಟಿ ದೂರದೂರ ಪ್ರದೇಶಗಳಿಗೆ ವಿಸ್ತರಿಸಿತು. ಶ್ರೀಮಂತ ವ್ಯಾಪಾರವರ್ಗದ ಉನ್ನತಿಯೊಂದಿಗೆ ಸಮಾಜ ಇನ್ನಷ್ಟು ವಿಭಜನೆಗೊಂಡು ಮೊದಲಿನ ಗುಲಾಮರು, ಮಾಲೀಕರು ಎಂಬ ಭೇದದೊಡನೆ ಶ್ರೀಮಂತರು, ಬಡವರು ಎಂಬ ಹೊಸ ವರ್ಗಗಳಾಗಿ ವಿಭಜನೆಯಾಯಿತು. ವ್ಯಾಪಾರದೊಂದಿಗೆ ಕುಟುಂಬಗಳ ಮಧ್ಯದ ಸಂಪತ್ತಿನಲ್ಲಿ ಭಾರೀ ವ್ಯತ್ಯಾಸಗಳಾಗಿ ಸಮುದಾಯಗಳು ಒಡೆದು ಸಾಮೂಹಿಕ ಭೂಮಾಲೀಕತ್ವ ಕೊನೆಗೊಂಡು ಕುಟುಂಬಗಳ ಆಸ್ತಿಯಾಗಿ ಕುಟುಂಬವೇ ಸಮಾಜದ ಆರ್ಥಿಕ ಘಟಕವಾಗಿ, ಗೋತ್ರ, ಸಮುದಾಯ, ಬುಡಕಟ್ಟುಗಳ ಅವನತಿ ಆರಂಭವಾಯಿತು[೧೦]. ಇದನ್ನು ಆದಿಮದಿಂದ ಆಧುನಿಕತೆಯ ರಾಜ್ಯದ ಉಗಮದವರೆಗಿನ ಹತ್ತನೇ ಹಂತವೆಂದು ಕರೆಯಬಹುದು. ಉತ್ಪಾದನೆ ಹೆಚ್ಚಳ ಜನಸಂಖ್ಯೆಯ ಹೆಚ್ಚಳಕ್ಕೂ, ಇವರೆಡೂ ವ್ಯಾಪಾರ ವಿನಿಮಯ ಅಭಿವೃದ್ಧಿಗೂ ಕಾರಣವಾಗಿ ರಕ್ತಸಂಬಂಧವುಳ್ಳ ಕುಟುಂಬಗಳ ಕೂಡಿಕೆ ಅನಿವಾರ್ಯವಾಯಿತು. ಪ್ರತ್ಯೇಕವಾಗಿದ್ದ ಬುಡಕಟ್ಟು ಪ್ರದೇಶಗಳು ಒಂದೇ ಪ್ರದೇಶದಲ್ಲಿ ಮಿಲನಗೊಳ್ಳುವ ಅನಿವಾರ್ಯತೆ ಸೃಷ್ಟಿಯಾಯಿತು. ಮೊದಮೊದಲು ಹೆಚ್ಚುತ್ತಿರುವ ಸಂಪತ್ತಿನ ರಕ್ಷಣೆಗಾಗಿ ಕಟ್ಟಿಕೊಂಡ ಸೈನ್ಯ, ಸೇನಾಪತಿ, ಕೋಟೆಕೊತ್ತಲಗಳು ನಂತರ ಸೇಡಿಗಾಗಿ, ಹೆಚ್ಚುತ್ತಿರುವ ಜನಸಂಖ್ಯೆಗಾಗಿ, ಭೂಭಾಗ ವಿಸ್ತರಿಸಿಕೊಳ್ಳಲು ಉಪಯೋಗವಾದರೂ ನಂತರ ಇತರರನ್ನು ಕೊಳ್ಳೆ ಹೊಡೆಯಲು ಸೈನ್ಯ ಬಳಕೆಯಾಗತೊಡಗಿತು. ಕಷ್ಟಪಟ್ಟು ದುಡಿದು ಸಂಪತ್ತು ಗಳಿಸುವುದಕ್ಕಿಂತಲೂ ಇತರ ಬುಡಕಟ್ಟುಗಳನ್ನು ಕೊಳ್ಳೆ ಹೊಡೆಯುವುದು ಸುಲಭವಲ್ಲದೆ, ಗುಲಾಮರು ದೊರೆಯುತ್ತಾರೆಂಬ ಭಾವನೆ ಬೆಳೆದು, ಸೇನಾಪತಿಗಳ ಪ್ರಭಾವ ಹೆಚ್ಚಾಗುವುದರ ಜೊತೆಗೆ, ಬುಡಕಟ್ಟಿನಿಂದ ಆರಿಸಲ್ಪಡುತ್ತಿದ್ದ ಸೇನಾಪತಿಯ ಪಟ್ಟ ಸಂಪತ್ತಿನ ಕೇಂದ್ರೀಕರಣದೊಂದಿಗೆ ವಂಶಪಾರಂಪರ್ಯವಾಯಿತು. ಹೀಗೆ ಬುಡಕಟ್ಟು ಜನರ ರಕ್ಷಣೆ ಹಾಗೂ ಸಂಕಲ್ಪಗಳನ್ನು ಈಡೇರಿಸಲು ಆರಂಭವಾಗಿದ್ದ ಅಂಗಸಂಸ್ಥೆಗಳು ಕ್ರಮೇಣ ತಮ್ಮ ಜನರ ಮೇಲೆಯೇ ದಬ್ಬಾಳಿಕೆ ನಡೆಸುವ ಶೋಷಿಸುವ ಪ್ರಬಲಸಂಸ್ಥೆಗಳಾಗಿ ಬೆಳೆದವು[೧೧]. ಸಂಪತ್ತಿನ ದುರಾಸೆ ಸಮಾಜವನ್ನು ವಿಭಜಿಸಿತು. ಆಸ್ತಿಯ ಕೇಂದ್ರೀಕರಣ ಹಾಗೂ ಕೊರತೆಯ ಕಂದಕ ಗೋತ್ರದ ಸದಸ್ಯರ ನಡುವೆಯೇ ಪರಸ್ಪರ ವೈಷಮ್ಯ ಹುಟ್ಟಿಸಿದ್ದು, ಸ್ವತಃ ದುಡಿಯುವ ಗುಲಾಮರೇ ಕೀಳು ಹಾಗೂ ಅವರನ್ನು ಶೋಷಿಸುವವರೇ ಉತ್ತಮರು ಎಂಬ ಭಾವನೆಗಳೇ ಇದಕ್ಕೆ ಕಾರಣವಾದುವು. ಎಳೆಯ ಹಂತದಲ್ಲಿ ವ್ಯಾಪಾರಿ, ವಣಿಕವರ್ಗ ಬೆಳೆಯುತ್ತಾ ಅತ್ಯಂತ ಬಲಿಷ್ಠವಾದ ಅಸ್ತ್ರವೊಂದನ್ನು ತನ್ನ ಬತ್ತಳಿಕೆಗೆ ಸೇರಿಸಿಕೊಂಡಿತು. ಇದು ಉತ್ಪಾದಿಸಿದವನು (ಅನುಭೋಗಿ) ಮತ್ತು ಉತ್ಪಾದಿಸುವವನ ಮೇಲೂ, ಅವನ ಉತ್ಪಾದನೆಯ ಮೇಲೂ ಶಾಸನ ಮಾಡುವ ಸಾಧನವಾಯಿತು. ಇದು ಸರಕುಗಳ ಸರಕಾಯಿತು. ಇದು ಇತರೆ ಎಲ್ಲಾ ಸರಕು ಸೇವೆಗಳನ್ನು ತನ್ನೊಳಗೇ ಅಡಗಿಸಿಕೊಳ್ಳಬಲ್ಲ ಸರಕಾಯಿತು. ಸಂಕಲ್ಪ ಮಾತ್ರದಿಂದಲೇ ತನ್ನನ್ನು ಅಪೇಕ್ಷಣಾರ್ಹವಾದ ಹಾಗೂ ಅಪೇಕ್ಷಿಸಲ್ಪಟ್ಟ ಯಾವುದೇ ವಸ್ತುವನ್ನಾಗಿ ಮಾರ್ಪಡಿಸಿಕೊಳ್ಳಬಲ್ಲ ಕಾಮರೂಪಿಯಾಯಿತು. ಇದನ್ನು ಯಾರೇ ಹೊಂದಿರಲಿ ಅವರು ಜಗತ್ತಿನ ಮೇಲೆ ಶಾಸನ ಮಾಡುತ್ತಿದ್ದರು ಮತ್ತು ಆ ಅದ್ಭುತ ಶಕ್ತಿಯ ವಸ್ತುವೇ ಹಣವಾಗಿದ್ದು ಅದಕ್ಕೆ ನಾಣ್ಯದ ನಿರ್ದಿಷ್ಟ

ರೂಪವೂ ದೊರೆತು ಜಗತ್ತೇ ತನ್ನ ಕಾಲ ಕೆಳಗೆ ಬಿದ್ದು ಹೊರಳಾಡಬೇಕೆನ್ನುವಂತೆ ಮಾಡಲು ವಣಿಕ ಸೈನ್ಯವನ್ನು ಹಣ ಬಳಸಿಕೊಂಡಿತು[೧೨]. ಧನಶಕ್ತಿಯು ತನ್ನ ತಾರುಣ್ಯದ ಕಾಲಾವಧಿಯಲ್ಲಿ ಕಾಣಿಸಿಕೊಂಡಷ್ಟು ಮೂಲ ಒರಟುತನ ಹಾಗೂ ರೌದ್ರತೆಯೊಂದಿಗೆ ಮತ್ತೊಂದು ಕಾಣಿಸಿಕೊಂಡಿಲ್ಲ. ಹಣಕ್ಕಾಗಿ ಸರಕುಗಳನ್ನು ಮಾರುವ ಪದ್ಧತಿಯ ನಂತರ ಶಕ್ತಿಶಾಲಿಗಳಾದ, ಧನದಾಹಿಗಳಾದ ವಣಿಕ ವರ್ಗ ಹಣವನ್ನೇ ಸಾಲ ಕೊಡುವ ವ್ಯವಸ್ಥೆಯನ್ನು ಆವಿಷ್ಕರಿಸಿದರು. ಮೊದಲೇ ಅದಮ್ಯ ಶಕ್ತಿ ಹೊಂದಿದ ಹಣಕ್ಕೆ ಈಗ ಸಾಲ, ಬಡ್ಡಿ, ಚಕ್ರಬಡ್ಡಿಗಳೆಂಬ ಗರಿಗಳು ಸೇರಿ ಅಪರಿಮಿತಶಕ್ತಿಯ ಶೋಷಣೆಯ ಬ್ರಹ್ಮಾಸ್ತ್ರವಾಯಿತು. ಇಷ್ಟರಲ್ಲಾಗಲೇ ಗೋತ್ರದ ವಶದಲ್ಲಿದ್ದ ಕುಟುಂಬಕ್ಕೆ ತಾತ್ಕಾಲಿಕವಾಗಿ, ಪರಭಾರೆಯ ಹಕ್ಕಿಲ್ಲದೆ ನೀಡಲಾಗಿದ್ದ ಭೂಮಿಯನ್ನು ಹಣವೆಂಬ ಮಾಧ್ಯಮದ ಮೂಲಕ ಕೊಳ್ಳುವ, ಮಾರುವ, ಒತ್ತೆ ಇಡುವ ಸ್ವಂತ ಆಸ್ತಿಯೆಂಬಂತೆ ಬಳಸುವ ಪರಿಪಾಟ ಪ್ರಾರಂಭವಾಗಿ ಗೋತ್ರ ಬುಡಕಟ್ಟಿನ ಅವನತಿ ತೀವ್ರವಾಯಿತು. ಒಂದೆಡೆ ರಕ್ತಸಂಬಂಧದ ಬುಡಕಟ್ಟಿನ ಒಳಗೇ ಬಡವ–ಶ್ರೀಮಂತ, ದುಬಾರಿ ಬಡ್ಡಿಗೆ ಸಾಲ ನೀಡುವ ಸಾಲಗಾರ ಇತ್ಯಾದಿ ವೈರುಧ್ಯಗಳಿದ್ದು ವಿವಿಧ ಹಿತಗಳ ಘರ್ಷಣೆ ಪರಾಕಾಷ್ಠೆ ತಲುಪಿತು. ಇನ್ನೊಂದೆಡೆ ಪರಕೀಯರು, ಗುಲಾಮರು ಹೆಚ್ಚಿನ ಸಂಖ್ಯೆಯಲ್ಲಿದ್ದು ಇವರನ್ನು ಕ್ರಮೇಣ ರಕ್ತಸಂಬಂಧಿ ಗೋತ್ರ ಹಾಗೂ ಬುಡಕಟ್ಟುಗಳಲ್ಲಿ ಲೀನಗೊಳಿಸಿ ಕೊಳ್ಳುವುದು ಸಾಧ್ಯವಿರಲಿಲ್ಲ. ಈ ಜನರನ್ನು ನಿಯಂತ್ರಿಸಲು ಗೋತ್ರದ ಅಧೀನದ ಸಂಸ್ಥೆಗಳು ಪ್ರಯತ್ನಿಸಿದಂತೆ ಬುಡಕಟ್ಟು ಮತ್ತು ಪರಕೀಯರ ಘರ್ಷಣೆ ತಾರಕಕ್ಕೇರುವುದರ ಜೊತೆಗೆ ಬದಲಾದ ಆರ್ಥಿಕ ಪರಿಸ್ಥಿತಿ ಹಾಗೂ ಶ್ರಮವಿಭಜನೆಗಳ ಪ್ರಭಾವದಿಂದಾಗಿ ಸಮಾಜ ವಿಭಜನೆಗೊಳ್ಳಲೇ ಬೇಕಿದ್ದಿತು. ಈ ಎರಡೂ ಗುಂಪುಗಳ ಹೋರಾಟವನ್ನು ನಿಯಂತ್ರಿಸಲು ಮೂರನೆಯ ಶಕ್ತಿಯಿಂದ ಮಾತ್ರ ಸಾಧ್ಯವಿದ್ದಿತು. ಆ ಶಕ್ತಿಯೇ ರಾಜ್ಯವಾಯಿತು. ಇದು ಬಹಿರಂಗ ಘರ್ಷಣೆಯನ್ನು ಹತ್ತಿಕ್ಕಿ ಆರ್ಥಿಕ ಕ್ಷೇತ್ರದಲ್ಲಿ ಶಾಸನಾತ್ಮಕ ವರ್ಗ ಹೋರಾಟಕ್ಕೆ ಅವಕಾಶ ಮಾಡಿಕೊಟ್ಟಿತು. ಹೀಗೆ ಬುಡಕಟ್ಟು ಗೋತ್ರ ಸಂಘಟನೆಯ ಜಾಗದಲ್ಲಿ ರಾಜ್ಯವು ನೆಲೆಯೂರಿತು[೧೩]. ರಕ್ತಬಾಂಧವ್ಯದ ಮೇಲೆ ಒಂದುಗೂಡಿದ್ದ ಬುಡಕಟ್ಟು ಗೋತ್ರ ಸಮಾಜ, ದೊಡ್ಡ ಭೂಭಾಗಗಳ ಮೇಲೆ ಹಿಡಿತ ಸಾಧಿಸಲು ವಿಫಲವಾದದ್ದರಿಂದ, ಪ್ರದೇಶಕ್ಕನುಗುಣವಾಗಿ ಅವರು ಯಾವುದೇ ಗೋತ್ರ ಅಥವಾ ಬುಡಕಟ್ಟಿಗೆ ಅಥವಾ ಗುಲಾಮಗಿರಿಗೆ ಸೇರಿದ್ದರೂ ಸರಿ ವಿಂಗಡಿಸಲಾಯಿತು ಮತ್ತು ಅಲ್ಲಿಯೇ ಅವರಿಗೆ ತಮ್ಮ ಹಕ್ಕು ಹಾಗೂ ಕರ್ತವ್ಯಗಳನ್ನು ಚಲಾಯಿಸಲು ಅವಕಾಶ ನೀಡಲಾಯಿತು. ಇದು ರಾಜ್ಯದ ಪ್ರಥಮ ಹಾಗೂ ಪ್ರಮುಖ ಲಕ್ಷಣವಾಗಿದೆ. ರಾಜ್ಯದ ೨ನೇ ಮುಖ್ಯ ಲಕ್ಷಣವೆಂದರೆ ಒಂದು ಸಾರ್ವಜನಿಕ ಅಧಿಕಾರದ ಸ್ಥಾಪನೆ ಸರ್ಕಾರ[೧೪]. ಗೋತ್ರದ ಜನರು ತಮಗಿಂತ ಹೆಚ್ಚಿನ ಸಂಖ್ಯಾಬಲ ಹೊಂದಿದ್ದ ಗುಲಾಮರನ್ನು ನಿಯಂತ್ರಿಸಲು (ಉದಾಹರಣೆಗೆ ಅಥೆನ್ಸಿನಲ್ಲಿ ಮೂಲ ಅಥೇನಿಯನ್ನರು ೯೦,೦೦೦ರಷ್ಟಿದ್ದರೆ ಗುಲಾಮರ ಸಂಖ್ಯೆ ೩,೬೫,೦೦೦ರಷ್ಟಿತ್ತು) ಸೈನ್ಯದ ಜೊತೆಗೇ ಪೊಲೀಸ್ ಅವಶ್ಯವಾಯಿತು. ಬುಡಕಟ್ಟಿನಲ್ಲಿಲ್ಲದ ಸೆರೆಮನೆಗಳು, ನಾನಾ ರೀತಿಯ ಬಲಾತ್ಕಾರದ ವ್ಯವಸ್ಥೆಗಳು ಉಂಟಾದವು. ಈ ಸಾರ್ವಜನಿಕ ಅಧಿಕಾರವನ್ನು ನಡೆಸಿಕೊಂಡು ಹೋಗಲು ಪ್ರಜೆಗಳಿಂದ ತೆರಿಗೆ–

ಕಾಣಿಕೆಗಳು ಅವಶ್ಯವಾಗುತ್ತವೆ. ಬುಡಕಟ್ಟಿನಲ್ಲಿ ತಪ್ಪು ಮಾಡಿದರೆ ಮಾತ್ರ ನೀಡುತ್ತಿದ್ದ ದಂಡ ನಂತರ ನೇರ, ಪ್ರತಿಫಲಾಪೇಕ್ಷೆಯಿಲ್ಲದೆ ಪ್ರತಿಯೊಬ್ಬರೂ ಸರ್ಕಾರಕ್ಕೆ ಕಾಲಕಾಲಕ್ಕೆ ನೀಡಲೇಬೇಕಾದ ವಂತಿಗೆಯಾದ ತೆರಿಗೆಯಾಯಿತು. ಬರುಬರುತ್ತಾ ತೆರಿಗೆಯ ಹಣವೂ ಸಾಲದಾದಾಗ ಸರಕಾರ ತಾನೇ ವಾಗ್ದಾನ ಪತ್ರಗಳನ್ನು ನೀಡುವ ಮೂಲಕ ಜನರಿಂದಲೇ ಸಾಲ ಪಡೆಯುವ ರಾಜ್ಯಋಣ ಅಥವಾ ಸಾರ್ವಜನಿಕ ಸಾಲ ಇತ್ಯಾದಿಗಳ ಮೂಲಕ ಸಾರ್ವಜನಿಕ ಹಣಕಾಸಿನ ಹೊಸ ಶಾಖೆಯೊಂದು ಕವಲೊಡೆಯಲು ಆರಂಭವಾಯಿತು[೧೫]. ಬುಡಕಟ್ಟು ಮುಖ್ಯಸ್ಥನಿಗೆ ಅಧಿಕಾರ ಗೌರವಗಳು ತಾವಾಗೇ ಬಂದಿದ್ದರೆ ಸಾರ್ವಜನಿಕ ಅಧಿಕಾರ ಹಾಗೂ ತೆರಿಗೆಗಳನ್ನು ಹಾಕುವ ಅಧಿಕಾರಿಗಳು ತಮ್ಮ ಅಧಿಕಾರ ಹಾಗೂ ಗೌರವಗಳನ್ನು ಬಲಾತ್ಕಾರದ ಕಾನೂನುಗಳಿಂದ ಪಡೆದಿರುತ್ತಾರೆ. ಗೋತ್ರವ್ಯವಸ್ಥೆಯ ಮುಖ್ಯಸ್ಥನು ಸಮಾಜದ ಮಧ್ಯದಲ್ಲಿ ನಿಂತಿದ್ದರೆ, ನಾಗರಿಕತೆಯ ಅಧಿಕಾರಿಗಳು ಸಮಾಜದ ಹೊರಗೆ ಸಮಾಜಕ್ಕೂ ಮೇಲೆ ನಿಂತ ಯಾವುದೋ ವಸ್ತುವನ್ನು ಪ್ರತಿನಿಧಿಸಲು ಯತ್ನಿಸುವ ಬಲವಂತಕ್ಕೊಳಗಾಗಿರುತ್ತಾರೆ. ಮೊದಮೊದಲು ಎರಡೂ ಗುಂಪುಗಳ ನಡುವೆ ಸಮನ್ವಯ ಸಾಧಿಸಲು ಆರಂಭವಾದ ಸರ್ಕಾರ ಬರುಬರುತ್ತಾ ಒಬ್ಬರ ವಿರುದ್ಧ ಮತ್ತೊಬ್ಬರನ್ನು ಎತ್ತಿ ಕಟ್ಟಿ ತನ್ನ ಅಧಿಕಾರಗಳನ್ನು ಹೆಚ್ಚಿಸಿಕೊಳ್ಳುತ್ತಾ ಇಬ್ಬರನ್ನೂ ವಂಚಿಸಲಾರಂಭಿಸಿತು. ಅದರಲ್ಲೂ ಕೆಲವರು ಹೊಂದಿರುವ ಶಕ್ತಿ ಹಾಗೂ ಸಂಪತ್ತಿನ ಮೇಲೆಯೇ ಅವರಿಗೆ ಮಣೆ ಹಾಕುವ ಸಂಪತ್ತಿಗನುಗುಣವಾಗಿ ಹಕ್ಕುಗಳನ್ನು ಹಂಚುವ ಪ್ರಕ್ರಿಯೆ ಅಥೆನ್ಸ್ ಹಾಗೂ ರೋಮ್‌ಗಳಲ್ಲಿತ್ತು. ಮಧ್ಯಯುಗದಲ್ಲಿ ಕೂಡಾ ಜನರು ಹೊಂದಿದ್ದ ಭೂಮಿಗೆ ಅನುಗುಣವಾಗಿ ರಾಜಕೀಯ ಅಧಿಕಾರದ ಪ್ರಭಾವವಿತ್ತು. ಆಧುನಿಕ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಹಕ್ಕುಗಳು ಪ್ರತ್ಯಕ್ಷವಾಗಿ ಸಂಪತ್ತನ್ನು ಆಧರಿಸದಿದ್ದರೂ ಪರೋಕ್ಷವಾಗಿ ಆದರೆ ಖಚಿತವಾಗಿ ಸಂಪತ್ತು ತನ್ನ ಅಧಿಕಾರವನ್ನು ಚಲಾಯಿಸುತ್ತಿದೆ. ಒಂದು ಕಡೆ ಅಧಿಕಾರಿಗಳ ನೇರ ಭ್ರಷ್ಟಾಚಾರದ ರೂಪದಲ್ಲಿ, ಮತ್ತೊಂದು ಕಡೆ ಸರಕಾರ ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ಗಳ ಮೈತ್ರಿ, ಸರಕಾರ ಹಾಗೂ ಕಾಂಟ್ರಾಕ್ಟರ್‌ಗಳು, ಅಬಕಾರಿ ಕಾಂಟ್ರಾಕ್ಟರ್‌ಗಳ, ಭೂ ಮಾಫಿಯಾ, ಗಣಿ ಮಾಫಿಯಾ, ಭೂಗತ ಮಾಫಿಯಾ, ಜಾತಿ ಮಾಫಿಯಾಗಳ ನಡುವಿನ ಅಪವಿತ್ರ ಮೈತ್ರಿಗಳು ಇಡೀ ಸಮಾಜವನ್ನೇ ತಮ್ಮ ಕೈವಶ ಮಾಡಿಕೊಂಡು ರೈತರು, ಕುಶಲಕರ್ಮಿಗಳು, ಕಾರ್ಮಿಕರನ್ನು ಶೋಷಿಸುತ್ತಿವೆ. 'ದಮನಿತ ವರ್ಗಗಳು ಪ್ರಜಾಪ್ರಭುತ್ವದ ಸಾರ್ವತ್ರಿಕ ಮತದಾನದ ಲಾಭ ಪಡೆಯಲು ಒಂದಾಗಿ ಒಂದೇ ರಾಜಕೀಯ ಪಕ್ಷ ಕಟ್ಟಿಕೊಂಡು ತಮ್ಮವರನ್ನೇ ಗೆಲ್ಲಿಸಿಕೊಳ್ಳುವ ಪಕ್ವತೆ ಪಡೆಯುವವರೆಗೂ ಈಗಿರುವ ವ್ಯವಸ್ಥೆಯೇ ಮುಂದುವರಿಯಲಿದೆ[೧೬]. ಉಳ್ಳವರ ವರ್ಗವು ಇಲ್ಲದವರ ವರ್ಗದ ವಿರುದ್ಧ ತನ್ನ (ಹಿತಾಸಕ್ತಿಗಳ) ರಕ್ಷಣೆಗೆ ಹೊಂದಿರುವ ಸಾಧನವೇ ರಾಜ್ಯವಾಗಿದ್ದು ಮುಂದೆ ಗೋತ್ರ ಬುಡಕಟ್ಟುಗಳ ನಾಶದಿಂದ ಉದ್ಭವಿಸಿದ ರಾಜ್ಯವ್ಯವಸ್ಥೆಯೂ ನಾಶವಾಗಿ ಉತ್ಪಾದಕರೆಲ್ಲರೂ ಸ್ವತಂತ್ರವಾಗಿ, ಸಮಾನವಾಗಿ ಭಾಗವಹಿಸುವುದರ ಆಧಾರದ ಮೇಲೆ ಪುನಃ ಸಂಘಟಿಸುವ ಸಮಾಜವು ಇಡೀ ರಾಜ್ಯ ಯಂತ್ರವನ್ನು ಅದು ಆಗ ಎಲ್ಲಿಗೆ ಸೇರಬೇಕೋ ಅಲ್ಲಿಗೆ ಸೇರಿಸುವುದು. ನೂಲುವ ರಾಟೆ ಹಾಗೂ ಕಂಚಿನ ಕೊಡಲಿಗಳ ಬದಿಗೆ, ಪುರಾತನ ವಸ್ತುಸಂಗ್ರಹಾಲಯಕ್ಕೆ.'[೩]

ಇದುವರೆಗಿನ ಬುಡಕಟ್ಟು ಮತ್ತು ಸರ್ಕಾರಗಳ ನಡುವಿನ ಸಂಘರ್ಷಗಳನ್ನು ಗಮನಿಸಿದರೆ ಬುಡಕಟ್ಟುಗಳೆಲ್ಲಾ ಒಂದು ದಿನ ತಮ್ಮ ತಾಳ್ಮೆ ಕಳೆದುಕೊಂಡು ರಾಜ್ಯವನ್ನು ಮತ್ತೆ ವಸ್ತುಸಂಗ್ರಹಾಲಯಕ್ಕೆ ಸೇರಿಸುವ ದಿನವೂ ಬರಬಹುದೆಂದೆನಿಸುತ್ತದೆ. ಏಕೆಂದರೆ, ಪ್ರತಿಬಾರಿಯೂ ಸರ್ಕಾರಗಳು ಬುಡಕಟ್ಟುಗಳಿಗೆ ವಿರುದ್ಧವಾಗಿಯೇ ವರ್ತಿಸುತ್ತಿವೆ. ವನ್ಯಪ್ರಾಣಿಗಳ ರಕ್ಷಣೆ ನೆಪದಲ್ಲಿ ಬುಡಕಟ್ಟುಗಳನ್ನು ಕಾಡಿನಿಂದ ಹೊರಹಾಕುತ್ತಿವೆ. ಅಭಿವೃದ್ಧಿಯ ನೆಪದಲ್ಲಿ(ವಿದ್ಯುತ್ ಯೋಜನೆ, ಅಣೆಕಟ್ಟೆ, ಗಣಿಗಾರಿಕೆ) ಬುಡಕಟ್ಟುಗಳನ್ನು ನಿರ್ವಸಿತರನ್ನಾಗಿಸಿ ಕಾಣದ ಕಾಲೊನಿಗೆ ಕಳಿಸುತ್ತಿವೆ. ಆದರೆ ಅದೇ ಸಮಯದಲ್ಲಿ ಇಕೋ ಟೂರಿಸಂ ನೆಪದಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳ ಗಣಿಗಾರಿಕೆ, ರೆಸಾರ್ಟ್, ಹೋಟೆಲ್, ಸಫಾರಿಗಳಿಗೆ ಅರಣ್ಯದಲ್ಲೇ ಅವಕಾಶ ನೀಡುತ್ತಿವೆ. ಬುಡಕಟ್ಟುಗಳ ಬಳಿ ಒಗ್ಗಟ್ಟು, ಕಾನೂನು, ಮೋಸ, ವಂಚನೆ, ನಯಗಾರಿಕೆ, ಶಿಕ್ಷಣ ಇಲ್ಲವೆಂದ ಮಾತ್ರಕ್ಕೇ ನಿರಂತರವಾಗಿ ಮೋಸಕ್ಕೊಳಗಾಗುತ್ತಲೇ ಇರಬೇಕೆ? ಕಾಲಚಕ್ರ ತಿರುಗುತ್ತದೆಂಬುದನ್ನು ಯಾರೂ ಮರೆಯಬಾರದು.

ಹೀಗೆ ಮಾರ್ಗನ್‌ರ ಮತ್ತು ಎಂಗೆಲ್ಸ್‌ರ ವಿಶ್ಲೇಷಣೆ ಆದಿಕಾಲದಿಂದ ಇಂದಿನವರೆಗಷ್ಟೇ ಏಕೆ ಮುಂದೆ ಆಗಬಹುದಾದ ಬದಲಾವಣೆ, ಬೆಳವಣಿಗೆಯ ೧೬ ಹಂತಗಳನ್ನು ತುಂಬ ವೈಜ್ಞಾನಿಕವಾಗಿ ತಾರ್ಕಿಕವಾಗಿ ಮಂಡಿಸಿದ್ದಾರೆ. ಈ ಬೆಳವಣಿಗೆಗಳನ್ನು ಇದಕ್ಕಿಂತ ಚೆನ್ನಾಗಿ ವಿವರಿಸಲು ಸಾಧ್ಯವೇ ಇಲ್ಲವೇನೋ ಎಂಬಷ್ಟು ಸಾದ್ಯಂತವಾಗಿ ವಿವರಿಸಲಾಗಿದೆ. ಇದರ ಇನ್ನೊಂದು ಹೆಗ್ಗಳಿಕೆಯೆಂದರೆ ವರ್ಗಸಂಘರ್ಷವನ್ನು, ಅದಕ್ಕೆ ಕಾರಣವಾದ ರಾಜ್ಯವನ್ನು ಕೊನೆಗಾಣಿಸಲು ರಕ್ತಕ್ರಾಂತಿಯೇ ಅನಿವಾರ್ಯವಲ್ಲ, ರಾಜಕೀಯ ಅದರಲ್ಲೂ ಪ್ರಜಾಪ್ರಭುತ್ವದ ಅಡಿಯಲ್ಲಿಯೇ ರಕ್ತರಹಿತ ಕ್ರಾಂತಿಯ ಮೂಲಕ ಬದಲಾವಣೆ ತರಬಹುದು ಎಂಬುದನ್ನೂ ಇದು ನಿರೂಪಿಸುತ್ತದೆ. ಕನಿಷ್ಠಪಕ್ಷ ಬುಡಕಟ್ಟುಗಳು ಒಗ್ಗಟ್ಟಾಗಿ ಒಂದು ಶಕ್ತಿಕೇಂದ್ರವಾಗಿ ಅಥವಾ ಪಕ್ಷವಾಗಿ, ಮತದಾರರಾಗಿ ಎಚ್ಚೆತ್ತುಕೊಂಡರೆ ರಾಜ್ಯವನ್ನು ಬದಲಾಯಿಸಲಾಗದಿದ್ದರೂ ಕನಿಷ್ಠ ತಮ್ಮ ಪರಿಸ್ಥಿತಿಯನ್ನಾದರೂ ಬದಲಾಯಿಸಿಕೊಳ್ಳಬಹುದು.

೨.೪. ಬುಡಕಟ್ಟು ಆರ್ಥಿಕತೆ ಮತ್ತು ಪಾರಂಪರಿಕ ನಂಬಿಕೆಗಳು

ಈ ಭಾಗದಲ್ಲಿ ವಿವಿಧ ಬುಡಕಟ್ಟುಗಳಲ್ಲಿರುವ ನಂಬಿಕೆಗಳು ಹೇಗೆ ಅವರ ಆರ್ಥಿಕ ಚಟುವಟಿಕೆ ಗಳನ್ನು ನಿರ್ಧರಿಸುತ್ತವೆ ಮತ್ತು ನಿಯಂತ್ರಿಸುತ್ತವೆಂಬುದನ್ನು ಉದಾಹರಣೆಸಹಿತವಾಗಿ ವಿವರಿಸಲಾಗಿದೆ ಮತ್ತು ಆ ಮೂಲಕ ಪ್ರತ್ಯೇಕ ವಿಷಯವಾದ ಮಾತ್ರಕ್ಕೇ ಅರ್ಥಶಾಸ್ತ್ರ ಬದುಕಿನ ಇತರ ಅಮೂರ್ತ ಅಂಶಗಳಿಂದ ಪ್ರಭಾವಿತಗೊಳ್ಳುವುದಿಲ್ಲ, ಕೇವಲ ಆರ್ಥಿಕ ಅಂಶಗಳಿಂದ ಮಾತ್ರ ಪ್ರಭಾವಿತಗೊಳ್ಳುತ್ತದೆಂಬ ನಂಬಿಕೆಯನ್ನು ಹುಸಿಗೊಳಿಸುತ್ತದೆ. ಜೊತೆಗೆ ಅರ್ಥಶಾಸ್ತ್ರದ ಹಲವಾರು ಪರಿಕಲ್ಪನೆಗಳು, ಸಂಸ್ಥೆಗಳು ಮತ್ತು ಸಿದ್ಧಾಂತಗಳಿಗೆ ಈ ಬುಡಕಟ್ಟು ನಂಬಿಕೆಗಳೇ ಮೂಲವಾಗಿದ್ದು ಈ ಮೂಲದಿಂದ ದೂರ ಸರಿದಿರುವುದೇ ಆರ್ಥಿಕ ಸಮಸ್ಯೆಗಳಿಗೆ ಕಾರಣವೆಂದು ನಿರೂಪಿಸಲು ಪ್ರಯತ್ನಿಸಲಾಗಿದೆ.

ಕೃಷಿ ನಂಬಿಕೆಗಳು

ಸಾಕಷ್ಟು ಸಮುದಾಯಗಳಲ್ಲಿ ವಿವಿಧ ಆರ್ಥಿಕ ಚಟುವಟಿಕೆಗಳು ಹಣ, ಲಾಭ ಅಥವಾ ಬೆಲೆಗಳಿಗಿಂತಲೂ ಅವರ ಸಾಂಸ್ಕೃತಿಕ, ಧಾರ್ಮಿಕ ಮತ್ತು ಭಾವನಾತ್ಮಕ ಆಚರಣೆ ಹಾಗೂ

ನಂಬಿಕೆಗಳಿಂದ ನಿರ್ಧರಿಸಲ್ಪಡುತ್ತವೆ ಮತ್ತು ನಿಯಂತ್ರಿಸಲ್ಪಡುತ್ತವೆ. ಇಲ್ಲಿ ಭೂಮಿ, ಲೋಹ, ಸಲಕರಣೆ ಹಾಗೂ ಚಟುವಟಿಕೆಗಳು ನಿರ್ಜೀವ ವಿಷಯಗಳಾಗಿರದೆ ಜೀವಂತವಾದ ವಿಷಯಗಳಾಗಿದ್ದು ಬದುಕಿನ ಅವಿಭಾಜ್ಯ ಅಂಗಗಳೆಂದು ಪರಿಗಣಿಸಲ್ಪಡುತ್ತವೆ. ಭಾರತದ ಸಾಂಸ್ಕೃತಿಕ ಆಚರಣೆಗಳು ಮತ್ತು ಹಬ್ಬಗಳು ಕೃಷಿಯನ್ನೇ ಆಧಾರವಾಗಿರಿಸಿಕೊಂಡು ಅದರ ಸುತ್ತಲೂ ಇವು ಹೆಣೆಯಲ್ಪಟ್ಟಿವೆ.

ಉದಾಹರಣೆಗೆ ಶೀಗೆ ಹುಣ್ಣಿಮೆ ಉತ್ತರ ಕರ್ನಾಟಕದ ಪ್ರಮುಖ ಕೃಷಿಸಂಬಂಧಿ ಹಬ್ಬವಾಗಿದ್ದು ತೆನೆ ಹೊತ್ತು ಫಲಭರಿತವಾಗಿ ನಿಂತಿರುವ ಭೂತಾಯಿಗೆ ಗರ್ಭಿಣಿ ಸ್ತ್ರೀಯರಿಗೆ ಮಾಡುವಂತೆ ಸೀಮಂತವನ್ನು ನೆರವೇರಿಸಲಾಗುತ್ತದೆ. ಇಲ್ಲಿ ಭೂಮಿಯನ್ನು ನಿರ್ಜೀವಿ ಅಥವಾ ಉತ್ಪಾದನೆಗೆ ಸಹಾಯಕವಾಗುವ ಸಲಕರಣೆಯೆಂದು ಭಾವಿಸದೆ ತಮ್ಮ ಮನೆ ಮಗಳಂತೆ, ತಾಯಿಯಂತೆ ಪೂಜಿಸಲಾಗುತ್ತದೆ. ಉತ್ತರ ಭಾರತದ ಬಿಹು, ಬೈಸಾಕಿ, ಕರವಾಚೌತ್, ದೀಪಾವಳಿಗಳಂತಹ ಹಬ್ಬಗಳು ಕೇವಲ ಹಬ್ಬಗಳಾಗಿರದೆ ಹೊಸ ವಸ್ತು, ಬಟ್ಟೆ, ವಾಹನ, ಕೊಡುಗೆಗಳನ್ನು ಕೊಳ್ಳುವ, ನೀಡುವ ಮತ್ತು ಆ ಮೂಲಕ ಆರ್ಥಿಕ ಚಟುವಟಿಕೆಗಳು, ಮಾರಾಟ, ಉತ್ಪಾದನೆಗಳನ್ನು ಉತ್ತುಂಗಕ್ಕೇರಿಸುವ ಹಣಕಾಸಿನ ಚಟುವಟಿಕೆಗಳೂ ಆಗಿವೆ. ಜಾಗತೀಕರಣ ಇವುಗಳನ್ನೆಲ್ಲಾ ಹಣ ಮಾಡಿಕೊಳ್ಳುವ ಉತ್ತಮ ಅವಕಾಶಗಳನ್ನಾಗಿ ಬಿಂಬಿಸಿ ಲಾಭದಾಯಕ ದಂಧೆಯನ್ನಾಗಿ ಮಾಡಿಕೊಳ್ಳುತ್ತಿವೆ. ಒಂದು ದೇಶ ಅಥವಾ ಸಮುದಾಯದ ಸಂಸ್ಕೃತಿ, ಆಚರಣೆ, ನಂಬಿಕೆಗಳನ್ನು ಅರ್ಥ ಮಾಡಿಕೊಳ್ಳದ ಯಾವುದೇ ಕಂಪನಿ ಲಾಭದಾಯಕವಾಗಿ ನಡೆಯಲು ಸಾಧ್ಯವಿಲ್ಲ. ಹೀಗಾಗಿ, ಫೋರ್ಡ್, ಟೊಯೋಟ ದಂತಹ ವಿದೇಶಿ ಕಂಪನಿಗಳೂ ಶೂನ್ಯಮಾಸ ಅಥವಾ ಆಷಾಢದಲ್ಲಿ ತಮ್ಮ ಉತ್ಪಾದನೆಯನ್ನು ಕಡಿಮೆ ಮಾಡಿ ಶ್ರಾವಣಮಾಸದಲ್ಲಿ ಹೆಚ್ಚಿಸುವ ಅನಿವಾರ್ಯತೆಗಳನ್ನೆದುರಿಸುತ್ತಿವೆ. ಕಾರ್ ಮಾರಾಟದ ಜೊತೆಗೇ ಡ್ಯಾಶ್ ಬೋರ್ಡ್‌ನ ಮೇಲೆ ಗಣೇಶನ ವಿಗ್ರಹವನ್ನು ಮಾರಾಟಕ್ಕೆ ಮುನ್ನ ನಿಂಬೆ ಹಣ್ಣು ಹೂವುಗಳನ್ನು ಒದಗಿಸಬೇಕೆಂದು ಅರ್ಥ ಮಾಡಿಕೊಳ್ಳುತ್ತಿವೆ. ಇವೆಲ್ಲವೂ ಸೂಚಿಸುವುದೇನೆಂದರೆ ಆರ್ಥಿಕತೆ ಹಾಗೂ ಆರ್ಥಿಕ ಚಟುವಟಿಕೆಗಳು ಕೇವಲ ಆರ್ಥಿಕ ಮಾತ್ರವಾಗಿರದೆ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ನಂಬಿಕೆಗಳೂ ಆಗಿದ್ದು ನಾವೆಲ್ಲ ನಮ್ಮ ನಂಬಿಕೆಗಳಿಂದಲೇ ಜೀವಿಸುತ್ತಿದ್ದೇವೆ ಮತ್ತು ನಾವೆಷ್ಟೇ ಮುಂದುವರಿದಿದ್ದೇವೆಂದುಕೊಂಡರೂ ಬುಡಕಟ್ಟುಗಳ ಈ ನಂಬಿಕೆಗಳಿಂದ ಹೊರ ಬರಲಾಗಿಲ್ಲ.

ನಾಗಾಗಳ ಕೃಷಿ, ಉದ್ದಿಮೆ ಮತ್ತು ಕಲೆಗಳ ಮೇಲೆ ಧಾರ್ಮಿಕ ಆಚರಣೆಗಳ ಪರಿಣಾಮವನ್ನು ಈ ಉದಾಹರಣೆಗಳ ಮೂಲಕ ವಿವೇಚಿಸಲಾಗಿದೆ. "ಕೃಷಿ ನಾಗಾಗಳ ಆರ್ಥಿಕ, ಸಾಮಾಜಿಕ, ಧಾರ್ಮಿಕ ಜೀವನದ ಅವಿಭಾಜ್ಯ ಅಂಗವಾಗಿದ್ದು ಅದರ ಎಲ್ಲ ಹಂತಗಳೂ ಆಚರಣೆಗಳಿಂದಲೇ ಪ್ರಭಾವಿತವಾಗಿವೆ. ಬಿತ್ತನೆಯ ನಂತರ ಸುಗ್ಗಿಯವರೆಗೆ ಭೂತಾಯಿ ಗರ್ಭಿಣಿಯಾಗಿದ್ದು ಆ ಸಮಯದಲ್ಲಿ ಮಡಿಕೆ ಮಾಡುವುದನ್ನು, ತಟ್ಟುವುದನ್ನು ನಿಷೇಧಿಸಲಾಗಿದೆ. ಏಕೆಂದರೆ ಮಣ್ಣಿಗಾಗಿ ಭೂಮಿ ಅಗೆಯುವುದು, ಹದಗೊಳಿಸಲು ತುಳಿಯುವುದು, ತಟ್ಟುವುದು ಇತ್ಯಾದಿ ಚಟುವಟಿಕೆ, ಗದ್ದಲಗಳಿಂದ

ಗರ್ಭಿಣಿಯಾಗಿರುವ ಭೂಮಾತೆಗೆ ತೊಂದರೆಯಾಗುತ್ತದೆಂಬ ನಂಬಿಕೆಯಿಂದ, ಕೇವಲ ಹೆಂಗಸರು. ಚಳಿಗಾಲದಲ್ಲಿ ಮಾತ್ರ ಮಡಿಕೆ ಮಾಡುತ್ತಾರೆ. ಬಹುಶಃ ಕೃಷಿ ಚಟುವಟಿಕೆ ಬಿಟ್ಟು ಕೇವಲ ಮಡಿಕೆಯನ್ನೇ ಮಾಡುತ್ತಾ ಹೋಗುವುದನ್ನು ನಿಯಂತ್ರಿಸುವ ಭಾವನೆಯೂ ಇಲ್ಲಿರಬಹುದು. ನಾಗಾಗಳು ಉಪ್ಪನ್ನು ಹೊರಗಡೆಯಿಂದ ತರಿಸಿದರೂ ತಮ್ಮದೇ ಉಪ್ಪಿನಬಾವಿಗಳ ಉಪ್ಪನ್ನು ಶ್ರೇಷ್ಠವೆಂದು ಭಾವಿಸಿರುತ್ತಾರೆ. ಆದರೆ ಪೂರ್ವದ ಕಿಂಗಾಗಳ ಹಳ್ಳಿಗಳಲ್ಲಿ ಉಪ್ಪು ತೆಗೆಯುವುದನ್ನು ನಿಷೇಧಿಸಿದ್ದಾರೆ. ಒಮ್ಮೆ ಉಪ್ಪು ತೆಗೆದಾಗ ಆ ಹಳ್ಳಿಯ ಬೆಳೆಗಳು ವಿಫಲವಾಗಿದ್ದರಿಂದ ಈ ನಂಬಿಕೆ ಬೆಳೆದುಬಂತು. ಕಬ್ಬಿಣದ ಭರ್ಜಿಗಳನ್ನು ಮಾಡುವುದು ಕೂಡಾ ಅಷ್ಟೊಂದು ಶ್ರೇಯಸ್ಕರವಲ್ಲ. ಆದ್ದರಿಂದ ಕೆಲವೇ ಹಳ್ಳಿಗಳಲ್ಲಿ ಕೆಲವೇ ಕೆಳವರ್ಗದ ಜನ ಮಾತ್ರ ಇವುಗಳನ್ನು ಉತ್ಪಾದಿಸುತ್ತಾರೆ. ಹಳ್ಳಿಯಲ್ಲಿ ಮುಖ್ಯವಾದ ಆಚರಣೆಗಳಿದ್ದಾಗ ಇವುಗಳ ಕೆಲಸ ಮಾಡಲು ನಿಷೇಧವಿದೆ. ಹಾಗೆಯೇ ನೇಯ್ಗೆಯ ಕೆಲಸ ಕೇವಲ ಹೆಂಗಸರಿಗೆ ಮಾತ್ರ ಸೀಮಿತವಾಗಿದ್ದು ಪ್ರಮುಖ ಹಬ್ಬಗಳಲ್ಲಿ ಅಥವಾ ಗಂಡಸರು ಯುದ್ಧಕ್ಕೆ ಹೋದಾಗ ನೇಯ್ಗೆಗೆ ನಿಷೇಧವಿದೆ. ಹಾಗೇನಾದರೂ ದಾರದ ಮೇಲಕ್ಕೆ ಕೈ ಇಟ್ಟರೆ ಅವರ ಗಂಡಸರು ಎಡವಿ ಬಿದ್ದು ಯುದ್ಧದಲ್ಲಿ ಸಾಯುವ ಅಥವಾ ಸೆರೆಯಾಗುತ್ತಾರೆಂಬ ನಂಬಿಕೆ ಇದಕ್ಕೆ ಕಾರಣ. ಕೆಲವು ಹಳ್ಳಿಗಳಲ್ಲಿ ಬಟ್ಟೆಗಳಿಗೆ ಕೆಂಪು ಬಣ್ಣ ಅದ್ದುವುದನ್ನು ನಿಷೇಧಿಸಲಾಗಿದ್ದು ಕೆಂಪು ಬಣ್ಣದ ಬಟ್ಟೆಗಳನ್ನು ಹೊರಗಡೆಯಿಂದ ತರಿಸಲಾಗುತ್ತದೆ. ಅಲ್ಲಿ ಕೂಡಾ ಕೆಂಪು ಬಟ್ಟೆಗಳನ್ನು ಚಳಿಗಾಲದಲ್ಲಿ ಮಾತ್ರ ತುಂಬಾ ವಯಸ್ಸಾದ ಹೆಂಗಸರು ಮಾಡಲು ಅವಕಾಶವಿದೆ. ಹಲವಾರು ನಾಗಾ ಹಳ್ಳಿಗಳಲ್ಲಿ ಅತ್ಯುತ್ತಮವಾದ ಕಸೂತಿಯ ವಸ್ತ್ರಗಳನ್ನು ಎಲ್ಲರಿಗೂ ಧರಿಸಲು ಅವಕಾಶವಿಲ್ಲ. ಅವರೆಷ್ಟೇ ಶ್ರೀಮಂತರಿದ್ದರೂ ಕೂಡಾ ದೊಡ್ಡದೊಡ್ಡ ಔತಣಕೂಟಗಳನ್ನು ಆಯೋಜಿಸುವ, Head Hunting – ಮಾನವ ಅಥವಾ ಹುಲಿ ಬೇಟೆಯಾಡಿದವರಿಗೆ ಮಾತ್ರ ಈ ಸೌಲಭ್ಯವಿದ್ದು ಬ್ರಿಟಿಷ್ ಸರ್ಕಾರ ಮಾನವಬೇಟೆಯನ್ನು ನಿಷೇಧಿಸಿದ ಮೇಲೆ ಈ ಕಲೆ ಸಂಪೂರ್ಣ ನಶಿಸಿ ಹೋಗಿದೆ. ಬೇಸಿಗೆಯಲ್ಲಿ ಕಾಡಿಗೆ ಬೆಂಕಿ ಬಿದ್ದಾಗ ಬಿದಿರಿನ ಮನೆಗಳು ತುಂಬಾ ಸುಲಭವಾಗಿ ತುತ್ತಾಗುತ್ತವೆ. ಅವುಗಳ ಜೊತೆಗೇ ಆ ಮನೆಗಳಲ್ಲಿರುವ ಆಸ್ತಿಪಾಸ್ತಿ, ಅಮೂಲ್ಯ ವಸ್ತುಗಳು ನಾಶವಾಗುತ್ತವೆ. ಆದರೆ ಬೆಂಕಿಗೆ ಕಾರಣರಾದವರ ಮೇಲೆ ಯಾವುದೇ ಕಠಿಣ ಕ್ರಮ ತೆಗೆದುಕೊಳ್ಳುವುದಿಲ್ಲ. ಅವರಿಗೆ ದಂಡ ಹಾಕಿದರೂ ಆ ಹಣವನ್ನು ಯಾರೂ ಉಪಯೋಗಿಸುವುದಿಲ್ಲ. ಅಲ್ಲದೆ ಬೆಂಕಿ ಹತ್ತಿದಾಗ ಜನರು ಬೆಂಕಿ ಆರಿಸುವ, ಮನೆಗಳನ್ನು ಖಾಲಿ ಮಾಡುವ ಬದಲು ಬೆಂಕಿಗೆ ಮೊಟ್ಟೆ ಎಸೆದು ತಮಗೇನೂ ಕೇಡಾಗದಿರಲೆಂದು ಪ್ರಾರ್ಥಿಸುತ್ತಾ ಕೂರುತ್ತಾರೆ. ಅವರ ಪ್ರಾರ್ಥನೆ ಮುಗಿಸಿ ಬೆಂಕಿ ಆರಿಸುವುದರೊಳಗೆ ಇಡೀ ಊರು ಹಾಗೂ ಅದರ ಅಮೂಲ್ಯ ವಸ್ತುಗಳು ಬೆಂಕಿಗೆ ಆಹುತಿಯಾಗಿರುತ್ತವೆ. ಅವರ ದೃಷ್ಟಿಯಲ್ಲಿ ಬದುಕಿದ್ದರೆ, ಹಿರಿಯ ಆತ್ಮಗಳು ಮುನಿಸಿಕೊಳ್ಳದಿದ್ದರೆ, ಮನೆ ಸುಟ್ಟರೆ ಮತ್ತೊಂದನ್ನು ಕಟ್ಟಿಕೊಳ್ಳಬಹುದು, ವಸ್ತುಗಳು ಸುಟ್ಟರೆ ಮತ್ತೆ ತಯಾರಿಸಿಕೊಳ್ಳಬಹುದು, ಭೌತಿಕ ವಸ್ತುಗಳೇ ಎಲ್ಲ ಅಲ್ಲ ಎಂಬ ನಂಬಿಕೆ ಅವರದು. ಲ್ಹೋಟಾ ಬುಡಕಟ್ಟಿನ ಇನ್ನೊಂದು ವಿಚಿತ್ರ ನಂಬುಗೆ ಎಂದರೆ ಅಕಾಲಿಕ ಹಾಗೂ ಆಕಸ್ಮಿಕ ಮರಣದ ಸಮಯದಲ್ಲಿ ಅವರಿಗೆ ಸೇರಿದ ವಸ್ತುಗಳನ್ನು ಬೇರೆ

ಯಾರೂ ಬಳಸದೇ ಹಾಳಾಗಿ ಹೋಗುವುದು. ಅವರ ಹೊಲದಲ್ಲಿ ಬೆಳೆದು ನಿಂತ ಫಸಲನ್ನು ಯಾರೂ ಕೊಯ್ಯುವುದಿಲ್ಲ. ಅವರ ಪಶುಸಂಪತ್ತನ್ನು ಹಾಗೆಯೇ ಕಾಡಿಗೆ ಅಟ್ಟಲಾಗುತ್ತದೆ. ಇಲ್ಲವೇ ಬೆಟ್ಟದ ತುದಿಯಿಂದ ಅವುಗಳನ್ನು ಕೆಳಕ್ಕೆ ತಳ್ಳುತ್ತಾರೆ. ಅನುಭೋಗ ಒಂದು ಅತ್ಯಂತ ಪ್ರಮುಖ ಆರ್ಥಿಕ ಕ್ರಿಯೆಯಾಗಿದ್ದು ವಿವಿಧ ಆರ್ಥಿಕ ಪರಿಕಲ್ಪನೆಗಳನ್ನು ಬುಡಕಟ್ಟು ದೃಷ್ಟಿಕೋನದಿಂದ ವಿವರಿಸುತ್ತಾ ಅವರ ಅನುಭೋಗ ಕೇವಲ ನೇರವಾಗಿ ವಸ್ತುಗಳನ್ನು ಉಪಯೋಗಿಸುವುದು ಮಾತ್ರವಲ್ಲದೇ ಊತಣಕೂಟ ನೀಡುವುದು, ಮೃತರ ಜೊತೆಗೆ ಅವರ ಇಷ್ಟದ ವಸ್ತುಗಳನ್ನು, ಮೃತರಾದ ಮನೆ, ಲಾಡ್ಜ್ ಮುಂತಾದವುಗಳನ್ನು ಅವರ ಜೊತೆಗೆ ಸುಡುವ–ಹೂಳುವ ಪದ್ಧತಿ ಹೇಗೆ ಹೊಸ ಉತ್ಪಾದನೆಗೆ ಪುನಃಶ್ಚೇತನ ನೀಡುತ್ತಿತ್ತು ಎನ್ನುವುದನ್ನು ಅಮರಿಂಡ್ ಬುಡಕಟ್ಟಿನ ಇಂತಹುದೇ ಉದಾಹರಣೆಯಿಂದ ತಿಳಿಯಬಹುದಾಗಿದೆ. ಅಂದರೆ ಪುನರ್ಜನ್ಮ ಅಥವಾ ಮೃತ ವ್ಯಕ್ತಿಯ ಆತ್ಮದ ನೆರಳು ಎಂಬ ನಂಬಿಕೆಗಳು ಮೃತರ ವಸ್ತುಗಳನ್ನು ಅನುಭೋಗಿಸದಂತೆ ನಿಯಂತ್ರಿಸುತ್ತಿದ್ದವು.'[೩೪]

ಇದು ಒಂದು ರೀತಿಯಲ್ಲಿ ಅನುಭೋಗವನ್ನು ಹೆಚ್ಚಿಸುತ್ತದಲ್ಲದೆ ಸುಲಭವಾಗಿ ಸಿಗುವ ಪಿತ್ರಾರ್ಜಿತ ಆಸ್ತಿ ಹಾಗೂ ಅದಕ್ಕಾಗಿ ನಡೆಯುವ ಕಲಹಗಳನ್ನು ತಪ್ಪಿಸುತ್ತದೆ. ಜೊತೆಗೆ ಪ್ರತಿಯೊಬ್ಬರೂ ತಮ್ಮ ಸಂಪತ್ತನ್ನು ತಾವೇ ಸ್ವತಃ ದುಡಿದು ಗಳಿಸಬೇಕೆಂಬ ಪಾಠವನ್ನು ಕಲಿಸುತ್ತವೆ.

"ಡೋಬುಗಳ ಮುಖ್ಯ ಬೆಳೆ 'ಯಾಮ್' ಎಂಬ ಒಂದು ಬಗೆಯ ಆಲೂ ಅಥವಾ ಗೆಣಸಾಗಿದ್ದು ಯಾಮ್‌ಗಳನ್ನೂ ಮನುಷ್ಯರೆಂದು ಪರಿಗಣಿಸಲಾಗುತ್ತದೆ. ಲೇಖಕ ಅಲೋ ಎಂಬ ಹುಡುಗನ್ನು ಯಾಮ್‌ಗಳನ್ನು ಹೇಗೆ ಮನುಷ್ಯರೆಂದು ಹೇಳುತ್ತೀರಿ? ಎಂದಾಗ ಅವನು 'ನಮ್ಮ ಅಜ್ಜಿ ನಮ್ಮ ಆಯಿಗೆ ನಮ್ಮ ತಾಯಿ ನಮಗೆ ಜನ್ಮ ಕೊಟ್ಟಂತೆ ಯಾಮ್‌ಗಳೂ ಜನ್ಮ ನೀಡುವುದರಿಂದ ಅವೂ ಮನುಷ್ಯರಿದ್ದಂತೆ ಎಂದ. ಬರೀ ಇಷ್ಟರ ಮೇಲೆಯೇ ಮನುಷ್ಯರೆಂದು ಹೇಳಲು ಬಾರದು ಜೀವಿಗಳು ಇದ್ದಲ್ಲೇ ಇರುತ್ತಾರೆಯೆ? ಎಂದು ಲೇಖಕ ಮರುಪ್ರಶ್ನೆ ಮಾಡಿದಾಗ 'ಅಲೋ' ಹಾಗೇನಿಲ್ಲ ಯಾಮ್‌ಗಳೂ ರಾತ್ರಿ ವೇಳೆಯಲ್ಲಿ ನೆಲದಿಂದ ಮೇಲೆ ಬಂದು ತಿರುಗಾಡುತ್ತವೆ. ಆದ್ದರಿಂದಲೇ ಸೂರ್ಯ ಮೇಲೆ ಬರುವವರೆಗೂ ನಾವು ಯಾಮ್‌ಗಳನ್ನು ಅಗೆಯುವುದಿಲ್ಲ. ಏಕೆಂದರೆ ಸೂರ್ಯ ಮೇಲೆ ಬರುವಷ್ಟರಲ್ಲಿ ಅವು ರಾತ್ರಿ ತಿರುಗಾಟ ಮುಗಿಸಿ ವಾಪಸ್ ಬಂದಿರುತ್ತವೆ ಎಂದು ಉತ್ತರಿಸಿದ.'[೩೫]

ಎಲ್ಲದರಲ್ಲೂ ಜೀವವನ್ನು, ಆತ್ಮಗಳನ್ನು ಮತ್ತು ದೈವಗಳನ್ನು ಕಾಣುವ ಬುಡಕಟ್ಟುಗಳ ಭಾವನೆ ನಮಗೆ ವಿಚಿತ್ರವೆನಿಸಿದರೂ ಅವರಿಗೆ ಅದು ಸಾಮಾನ್ಯ ವಿಷಯ.

'ಡಾಹೋಮಿ ಬುಡಕಟ್ಟು ಒಂದು ಕೃಷಿ ಸಮುದಾಯವಾಗಿದ್ದು ಪಶುಸಾಕಣೆ ಮತ್ತು ಬೇಟೆ ಸಹಾಯಕ ಕಸುಬುಗಳಾಗಿವೆ. ಉತ್ಪಾದನೆ ಸ್ವಯಂ ಅನುಭೋಗಕ್ಕೆ ಮಾತ್ರವಲ್ಲದೆ ಮಾರುಕಟ್ಟೆಗೂ ತರುವಷ್ಟು ಬಲವಾಗಿದೆ. ಇತರ ಕೃಷಿ ಸಮುದಾಯಕತೆಯಂತೆ ಇಲ್ಲಿ ಕೂಡಾ ಕೃಷಿ ಭೂಮಿಯನ್ನು

ಆಯ್ಕೆ ಮಾಡುವಾಗ, ಫಲವತ್ತತೆಗಾಗಿ, ಬಿತ್ತನೆ, ಸುಗ್ಗಿ ಕ್ರಿಮಿಕೀಟ ನಿಯಂತ್ರಣ ಇತ್ಯಾದಿಗಳಿಗಾಗಿ ದೈವಾರಾಧನೆ–ಆಚರಣೆ ನಡೆಸಲಾಗುತ್ತದೆ. ಇವುಗಳೇ ನಂತರದ ಹಂತದಲ್ಲಿ ವೈಜ್ಞಾನಿಕ–ತಾಂತ್ರಿಕ–ಆರ್ಥಿಕ ರೂಪ ಪಡೆಯುತ್ತವೆ. ಇವು ಉತ್ಪಾದನೆ, ವಿತರಣೆ, ಸಂಪನ್ಮೂಲಗಳ ಹಂಚಿಕೆ ಇತ್ಯಾದಿಗಳನ್ನು ನಿರ್ಧರಿಸುವ ತಂತ್ರಗಳಾಗಿವೆ.'[೬]

ಇಂದಿಗೂ ಈ ರೀತಿಯ ಆಚರಣೆಗಳು ಬುಡಕಟ್ಟುಗಳಲ್ಲಷ್ಟೇ ಏಕೆ ಆಧುನೀಕರಣಗೊಂಡ ಹಳ್ಳಿ ಪಟ್ಟಣಗಳಲ್ಲೂ ಕಂಡುಬರುತ್ತವೆ. ಜೋಕುಮಾರನ ಹಾಗೂ ಕಾಮಣ್ಣನ ಕರಿ ಹಾಗೂ ಬೂದಿಯ ಚರಗ ಚೆಲ್ಲುವುದೂ ಇಂತಹ ಆಚರಣೆಗಳ ನೆರಳುಗಳಾಗಿವೆ.

'ಡೋಬುಗಳ ಪ್ರಕಾರ ಮಂತ್ರಗಳ ಸಹಾಯವಿಲ್ಲದಿದ್ದರೆ ಗಿಡಗಳಿಗೆ ಎಷ್ಟೇ ಗೊಬ್ಬರ ಹಾಕಲಿ, ದೋಣಿ ಎಷ್ಟೇ ಗಟ್ಟಿಯಾಗಿರಲಿ, ಬಲೆ ಎಷ್ಟೇ ಹೊಸದಿರಲಿ, ಸೂಕ್ತ ಮಂತ್ರವಿಲ್ಲದಿದ್ದರೆ ಗಿಡ ಫಲ ಕೊಡುವುದಿಲ್ಲ, ದೋಣಿ ನಡೆಯುವುದಿಲ್ಲ, ಮೀನುಗಳು ಬಲೆಗೆ ಬೀಳುವುದಿಲ್ಲ. ಏಕೆ ಎಂದು ಯಾರೂ ಪ್ರಶ್ನಿಸುವಂತಿಲ್ಲ.'[೬]

ಹೀಗೆ ಬುಡಕಟ್ಟು ಆಚರಣೆಗಳು ಕೇವಲ ಧಾರ್ಮಿಕ ಅಥವಾ ಮಾಂತ್ರಿಕ ಕ್ರಿಯೆಗಳು ಮಾತ್ರ ವಾಗಿರದೆ ಜೈವಿಕ, ಸಾಮಾಜಿಕ ಹಾಗೂ ಆರ್ಥಿಕ ಸಂಗತಿಗಳೂ ಆಗಿವೆ. ಅನಿರೀಕ್ಷಿತ ಅಪಘಾತ, ಅಕಾಲಿಕ ಸಾವು, ರೋಗರುಜಿನ, ಭೂತಪ್ರೇತಗಳಿಂದ ರಕ್ಷಣೆ, ಬೇಟೆಯಲ್ಲಿ ಯಶಸ್ಸು, ಭೂಮಿ–ಸ್ತ್ರೀ ಮತ್ತು ಪಶುಸಂಪತ್ತಿಗೆ ಫಲವತ್ತತೆ, ಆರ್ಥಿಕ ಸಮೃದ್ಧಿ ಇತ್ಯಾದಿ ನಂಬಿಕೆಗಳನ್ನೊಳಗೊಂಡ ಸಂಕೀರ್ಣ ಕ್ರಿಯೆಗಳಾಗಿವೆ.

ಮಾರುಕಟ್ಟೆ ಮತ್ತು ಬುಡಕಟ್ಟು ನಂಬಿಕೆಗಳು

ಆಧುನಿಕ ಅರ್ಥಶಾಸ್ತ್ರದ ಪ್ರಕಾರ ಮಾರುಕಟ್ಟೆಯೆಂದರೆ ನಿರ್ದಿಷ್ಟ ಪ್ರದೇಶವಲ್ಲ. ಬದಲಾಗಿ ಕೊಳ್ಳುವವರು ಮತ್ತು ಮಾರುವವರು ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲಿ ಸರಕುಗಳ ಜೊತೆಗೆ ಅಥವಾ ಸರಕುಗಳಿಲ್ಲದೆ ಪರಸ್ಪರ ಸಂಪರ್ಕಿಸಿ, ಬೆಲೆ ನಿಗದಿಪಡಿಸುವ ಇಡೀ ಪ್ರಕ್ರಿಯೆ ಎಂದರ್ಥ. ಆದರೆ ಸಾಮಾನ್ಯ ಅರ್ಥದಲ್ಲಿ ಮಾರುಕಟ್ಟೆ ಎಂಬುದು ಕೊಳ್ಳುವವರು ಮತ್ತು ಮಾರುವವರು ಒಂದು ನಿರ್ದಿಷ್ಟ ಪ್ರದೇಶದಲ್ಲಿ ಸರಕುಗಳ ಜೊತೆ ಸಂಧಿಸಿ ವಿನಿಮಯ ಮಾಡಿಕೊಳ್ಳುವ ಪ್ರದೇಶ ಎಂದರ್ಥ. ಇದು ಬುಡಕಟ್ಟುಗಳ ಸಾಟಿಪದ್ಧತಿಯಿಂದ ಬಂದ ಅರ್ಥವಾಗಿದೆ.

ಮಾರುಕಟ್ಟೆ ಒಂದು ಪ್ರಮುಖ ಆರ್ಥಿಕ ಸಂಸ್ಥೆಯಾಗಿದ್ದು ಇದು ಉತ್ಪಾದಕರು ಮತ್ತು ಅನುಭೋಗಿಗಳನ್ನು ಸಂಪರ್ಕಿಸುವ, ಬೆಲೆ ನಿಗದಿಪಡಿಸುವ ಮತ್ತು ಇಡೀ ಆರ್ಥಿಕತೆಯ ದಿಕ್ಕನ್ನು ನಿರ್ಧರಿಸುವ ಕಾರ್ಯ ಮಾಡುವುದರಿಂದ ಆಧುನಿಕ ಆರ್ಥಿಕತೆಯನ್ನು ಮಾರುಕಟ್ಟೆ ಆರ್ಥಿಕತೆ ಎನ್ನಲಾಗುತ್ತದೆ. ಇಂದು ನಮ್ಮ ವೈಯಕ್ತಿಕ, ಭಾವನಾತ್ಮಕ, ಸಾಂಸ್ಕೃತಿಕ, ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ... ಜೀವನಗಳನ್ನೆಲ್ಲಾ ಮಾರುಕಟ್ಟೆ ಪ್ರಭಾವಿಸುತ್ತಿದೆ ಮತ್ತು ನಿರ್ಧರಿಸುತ್ತಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಏಕೆಂದರೆ ಮಾರುಕಟ್ಟೆ, ವಾರದ ಸಂತೆ, ಜಾತ್ರೆ ಇತ್ಯಾದಿಗಳು

ಆರ್ಥಿಕ ಚಟುವಟಿಕೆಗಳ ಕೇಂದ್ರವಾಗಿರುವ ಜೊತೆಜೊತೆಗೇ ಸಮುದಾಯ ಸಂಪರ್ಕ, ಸಂವಹನ, ಸಾಮಾಜಿಕ, ಕೌಟುಂಬಿಕ ಬಂಧನಗಳನ್ನು ಗಟ್ಟಿಗೊಳಿಸುವ ಅವಕಾಶಗಳೂ ಆಗಿವೆ.

ಇಂದಿಗೂ ಬುಡಕಟ್ಟುಗಳಿಗೆ ವಾರದ ಸಂತೆಗೆ ಬರುವುದೆಂದರೆ ಅದೊಂದು ಹಬ್ಬ. ದಿನ ದಿನದ ದುಡಿಮೆ, ಶ್ರಮದ ಜಂಜಡಗಳಿಂದ ಹೊರಬಂದು ತಮ್ಮನ್ನು ತಾವು ಪುನಶ್ಚೇತನಗೊಳಿಸಿಕೊಳ್ಳುವ ಅವಕಾಶ.

ಸಿದ್ದಿಗಳಿಗೆ ಸಂತೆ ಎಂದರೆ, ಮನೆಯ ಯಜಮಾನನಿಗೆ ಎಲ್ಲರನ್ನೂ ಕರೆದುಕೊಂಡು ಪಟ್ಟಣಕ್ಕೆ ಹೋಗಿ ಅಲ್ಲಿನ ದೇವರ(ಗುಡಿ/ಚರ್ಚ್/ಮಸೀದಿ) ದರ್ಶನ, ಪ್ರಾರ್ಥನೆ ಮಾಡುವ ಅವಕಾಶ, ತಾನು ಬೆಳೆಸಿದ ದವಸ, ಧಾನ್ಯ, ಹಣ್ಣು ಹಂಪಲು, ಕುರಿ ಕೋಳಿ, ಮೊಟ್ಟೆ, ಸಂಗ್ರಹಿಸಿದ ಜೇನು, ಮೇಣ, ಅರಗು, ಅಂಟುವಾಳ ಇತ್ಯಾದಿಗಳನ್ನು ಮಾರಾಟ ಮಾಡಿ ಆದಾಯ ಗಳಿಸುವ, ಟೆಂಟ್‌ನ ಸಿನಿಮಾ ಎಂಬ ಮಾಯಾಲೋಕದಲ್ಲಿ ಮೂರು ತಾಸು ಎಲ್ಲವನ್ನೂ ಮರೆತು ಕೂಡುವ, ಕೃಷಿಗೆ ಬೇಕಾದ ಸಲಕರಣೆಗಳನ್ನು ಕೊಳ್ಳುವ, ಪೂಜೆಗೆ ಮಂತ್ರವಾದಿ ತಿಳಿಸಿದ ವಸ್ತುಗಳನ್ನು ಖರೀದಿಸುವ, ಗಡಂಗಿಗೆ ಹೋಗಿ ಸ್ನೇಹಿತರನ್ನು ಭೇಟಿಯಾಗಿ ಹರಟೆ ಹೊಡೆಯುತ್ತಾ ನಶೆಯ ಲೋಕದಲ್ಲಿ ತೇಲಾಡುವ ಅವಕಾಶ. ಇನ್ನು ಯಜಮಾನಿಗಾದರೋ ಮನೆ, ಅಡುಗೆ ಮನೆಯೆಂಬ ಬಂಧನದಿಂದ ಹೊರಬಂದು ಕನ್ನಡಿ, ಕುಂಕುಮ, ಪೌಡರ್, ರಿಬ್ಬನ್, ಓಲೆ, ಬಳೆಗಳನ್ನು ಕೊಳ್ಳುವ, ಸ್ನೇಹಿತೆಯರೊಂದಿಗೆ ಕಷ್ಟ ಸುಖ ಹಂಚಿಕೊಳ್ಳುವ, ಹೋಟೆಲ್‌ನ ತಿಂಡಿ ಸವಿಯುವ, ಮನೆಗೆ ಬೇಕಾದ ಉಪ್ಪು, ಬೇಳೆ, ಬೆಲ್ಲ ಇತ್ಯಾದಿಗಳನ್ನು ಕೊಳ್ಳುವ, ತವರಿನವರನ್ನು ಭೇಟಿಯಾಗುವ ಸಂಭ್ರಮದ ಸಮಯ. ಮಕ್ಕಳಿಗೆ ಕಾಡು, ಶಾಲೆ, ಮನೆಯ ಕಟ್ಟಳೆಗಳಿಂದ ಹೊರಬಂದು ಅಪರೂಪಕ್ಕೊಮ್ಮೆ ಬಸ್ಸು ಅಥವಾ ರೈಲು ಹತ್ತುವ ಸಡಗರ. ಬೀದಿ ಬದಿ ಅಂಗಡಿಯ ಬೆಂಡು ಬತ್ತಾಸು, ಕಾರ, ಮಂಡಕ್ಕಿ, ಮಿರ್ಚಿ ಸವಿಯುವ, ಸಿನಿಮಾ ನೋಡುವ, ಗಿರಗಟ್ಲೆ, ಜೋಕಾಲಿ ಹತ್ತುವ ಅದ್ಭುತಲೋಕ. ಒಟ್ಟಿನಲ್ಲಿ ಮಾರುಕಟ್ಟೆ ಒಂದು ಮಿನಿ ವಿಶ್ವವಾಗಿದೆ. ನಾಗರಿಕರು ದಿನಾಲೂ ಮಾಲ್‌ಗಳಲ್ಲಿ ಅನಾವಶ್ಯಕವಾಗಿ ಶಾಪಿಂಗ್ ಮಾಡಿದರೆ, ಬುಡಕಟ್ಟುಗಳು ವಾರಕ್ಕೊಮ್ಮೆ ಅವಶ್ಯಕತೆಗಳಿಗಾಗಿ ಮಾತ್ರ ಸಂತೆ ಮಾಡುತ್ತಾರೆ.

ಈ ಮಾರುಕಟ್ಟೆಯ ಮೂಲವನ್ನು ಹುಡುಕಿಕೊಂಡು ಹೋದರೆ ನಾವು ತಲುಪುವುದು ಆದಿಮಾನವನ ಕಾಲಕ್ಕೆ. ದಟ್ಟ ಕಾಡಿನ ಬೆಟ್ಟದ ತುದಿಯಲ್ಲಿಯೋ, ಹರಿವ ತೊರೆಯ ಮರದ ಕೆಳಗೋ ಎಲ್ಲೆಲ್ಲಿ ಸುಂದರವೆನಿಸುತ್ತದೆಯೋ, ಎಲ್ಲೆಲ್ಲಿ ಕಾಡುಪ್ರಾಣಿಗಳ ಭಯವೆನಿಸುತ್ತದೆಯೋ ಅಲ್ಲೆಲ್ಲ ಕಲ್ಲು, ಗುಂಡುಗಳನ್ನಿಟ್ಟು ಪ್ರಾರ್ಥಿಸತೊಡಗಿದ. ಗುಂಡುಗಳು ಗುಡಿ ಗುಂಡಾರಗಳಾಗಿ, ಪ್ರಾರ್ಥನೆ ಪೂಜೆಯಾಗಿ ವಿಕಾಸವಾದಾಗ ನಿಯಮಿತವಾಗಿ ಅಲ್ಲಿಗೆ ಎಲ್ಲರೂ ಭೇಟಿ ನೀಡತೊಡಗಿದರು. ಅದಿನ್ನೂ ಕೊಡುಗೆ ಆರ್ಥಿಕತೆಯಿಂದ ಸಾಟಿಪದ್ಧತಿಗೆ ಬದಲಾಗುತ್ತಿದ್ದ ಕಾಲ. ಬುಡಕಟ್ಟುಗಳು ತಮಗೆ ಸಿಕ್ಕ ಬೇಟೆಯ, ಹಣ್ಣು ಹಂಪಲುಗಳ ಒಂದು ಪಾಲನ್ನು ದೈವಕ್ಕೆ ಅರ್ಪಿಸುತ್ತಿದ್ದರು.

ಅದನ್ನೇ ಪ್ರಸಾದವೆಂದು ಹಂಚಿಕೊಳ್ಳುತ್ತಿದ್ದರು. ಹೀಗಿರುವಾಗ ಅಲ್ಲಿಗೆ ಪುರೋಹಿತರು ಅಥವಾ 'ಮಾಂತ್ರಿಕರು' ಎಂಬ ಅತಿ ಬುದ್ಧಿವಂತಿಕೆಯ, ಮಹತ್ವಾಕಾಂಕ್ಷೆಯ, ಬಂಡವಾಳಶಾಹಿ ಮನೋಭಾವನೆಯ ಜನ ಬಂದು ಸೇರಿದರು. ಈ ದೇವಸ್ಥಾನಗಳಲ್ಲಿ ನೆಲೆಸಿದರೆ ಸುಲಭವಾಗಿ ಹೊಟ್ಟೆ ಬಟ್ಟೆಯ ಸಮಸ್ಯೆ ಬಗೆಹರಿಯುವುದಲ್ಲದೆ ಭಾವನಾತ್ಮಕವಾಗಿ ಇಡೀ ಸಮುದಾಯವನ್ನು ನಿಯಂತ್ರಿಸಬಹುದೆಂದು ಅರಿತುಕೊಂಡರು. ಕೊಡುಗೆಗಳನ್ನು ಪಡೆದು ಅದನ್ನು ಮರುಹಂಚಿಕೆ ಮಾಡುವ ಅಧಿಕಾರ ಅವರಿಗೆ ಪ್ರಾಪ್ತವಾಯಿತು. ಸಾಟಿಪದ್ಧತಿಯ ಮುಖ್ಯ ಸಮಸ್ಯೆಯಾದ ಬಯಕೆಗಳ ದ್ವಿಮುಖ ಹೊಂದಾಣಿಕೆಗಾಗಿ ಜನ ತಮ್ಮಲ್ಲಿರುವ ವಿನಿಮಯ ಮಾಡಬೇಕಾದ ವಸ್ತುಗಳನ್ನು ತೆಗೆದುಕೊಂಡು ಅದರ ಅವಶ್ಯಕತೆಗಳಿರುವ ಜನರನ್ನು ಹುಡುಕಿಕೊಂಡು ದೂರದೂರ ಹೋಗಬೇಕಿತ್ತು. ಆದರೆ ಪೂಜಾಸ್ಥಳಗಳ ಬಳಿ ಸೇರುತ್ತಿದ್ದ ಜನ ಅಲ್ಲೇ ತಮ್ಮ ಸರಕುಗಳ ವಿನಿಮಯವನ್ನೂ ಮಾಡಿಕೊಳ್ಳತೊಡಗಿದರು. ಇದು ಮಾರುಕಟ್ಟೆ ವ್ಯವಸ್ಥೆಗೆ ನಾಂದಿ ಹಾಡಿತು. ಕ್ರಮೇಣ ದೇವಾಲಯಗಳಿಗೆ ಸೇವೆ ಸಲ್ಲಿಸುವ ವಿವಿಧ ವರ್ಗಗಳು ನೆಲೆಯೂರಿ ಮಾರುಕಟ್ಟೆ ಇನ್ನಷ್ಟು ವಿಶಾಲವಾಗಿ ಬೆಳೆಯಿತು, ಹೀಗಾಗಿಯೇ ಆಯಾ ದೇವಾಲಯಗಳಿಗೆ ಸಂಬಂಧಿಸಿದ ವಾರಗಳಲ್ಲಿ ಜನ ಮಾರುಕಟ್ಟೆ ಸಂತೆ ಮಾಡುತ್ತಿದ್ದುದರಿಂದ ಸೋಮವಾರಪೇಟೆ, ಸಂಡೆ ಮಾರ್ಕೆಟ್, ಶನಿವಾರಪೇಟೆ ಇತ್ಯಾದಿಗಳು ತಮ್ಮ ಹೆಸರು ಪಡೆದವು. ದೈವೀ ಸ್ಥಳವೆಂಬ ಭಯದಿಂದಲೇ ಅಲ್ಲಿ ಮೋಸ, ಅನ್ಯಾಯ ಇತ್ಯಾದಿಗಳು ನಡೆಯುತ್ತಿರಲಿಲ್ಲ. ಮೊದಲು ಪುರೋಹಿತರಿಂದ ನಿಯಂತ್ರಿಸಲ್ಪಡುತ್ತಿದ್ದ ಮಾರುಕಟ್ಟೆಗಳು ನಂತರ ಅಲ್ಲಿನ ಆಸ್ತಿ ಮತ್ತು ವ್ಯವಹಾರಗಳ ಪ್ರಮಾಣ ಹೆಚ್ಚಾದಂತೆ ರಕ್ಷಣೆಗಾಗಿ ರಾಜನ, ಸೈನ್ಯದ ನೆರವು ಪಡೆಯತೊಡಗಿದರು, ನಂತರ ರಾಜ್ಯ ಅಥವಾ ರಾಜನೇ ಅವುಗಳನ್ನು ನಿಯಂತ್ರಿಸಲಾರಂಭಿಸಿದನು, ನಂತರ ಬಂಡವಾಳಶಾಹಿ ಆರ್ಥಿಕತೆ ಪ್ರಬಲವಾದಂತೆ ಬೃಹತ್ ಕಂಪನಿಗಳು ಇಂದು ಮಾರುಕಟ್ಟೆಯನ್ನು ನಿಯಂತ್ರಿಸುತ್ತಿವೆ.

ಡಾಹೋಮಿಗಳಲ್ಲಿ ಮೀನುಬೇಟೆ ಕೇವಲ ಆಚರಣೆ ಅಥವಾ ಜೀವನೋಪಾಯದ ಕಾರ್ಯವಲ್ಲ. ಅದೊಂದು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಸಂಗತಿಗಳ ಸಮನ್ವಯವಾಗಿದೆ. ಕೊಳದ ಮಾಲೀಕ ಯಾಕಾದರೂ ಮೀನು ಬೇಟೆಗೆ ಎಲ್ಲರಿಗೂ ಕರೆ ನೀಡಬೇಕು? ಅದಕ್ಕೆ ಸಮುದಾಯದ ವಿವಿಧ ಜನ ಏಕೆ ಒಗ್ಗೊಟ್ಟು ಭಾಗವಹಿಸಬೇಕು? ಅಲ್ಲಿ ಮಾಂತ್ರಿಕತೆ, ಆಚರಣೆಗಳ ಅರ್ಥವೇನು? ಎಂದು ವಿಚಾರಿಸಿದಾಗ ಸಾಮೂಹಿಕ ಮೀನುಬೇಟೆ ಸಮುದಾಯವನ್ನು ಒಗ್ಗೂಡಿಸುವ, ಒಂದಾಗಿ ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ, ನಾಯಕನ ಖಾಸಗಿ ಆಸ್ತಿಯನ್ನು ಗೌರವಿಸುವ, ಅದಕ್ಕೆ ಸೂಕ್ತ ಮೌಲ್ಯ ನೀಡಿ ಹಂಚಿಕೊಳ್ಳುವ, ಮಾಂತ್ರಿಕ ಆಚರಣೆ ಮೂಲಕ ಸಾಮೂಹಿಕ ರಕ್ಷಣೆ ನೀಡುವ, ಸಾಮೂಹಿಕವಾಗಿ ಗಂಡಾಂತರಗಳನ್ನು ಒಟ್ಟಾಗಿ ಎದುರಿಸುವ ಸುಸಂಘಟಿತ ಕ್ರಿಯೆಯಾಗಿದೆ. ಡಾಹೋಮಿ ಬುಡಕಟ್ಟಿನಲ್ಲಿ ಒಂದು ಸ್ಪಷ್ಟವಾದ ಮಾರುಕಟ್ಟೆ ಆರ್ಥಿಕತೆ ಇದೆ ಮತ್ತು ಅದು ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳನ್ನಾಧರಿಸಿದೆ. ಅವರ ಪುರಾತನ ಬರಹಗಳಲ್ಲಿ ತುಂಬಾ ಉನ್ನತವಾದ ಪೈಪೋಟಿಯ ಮತ್ತು ಚೌಕಾಶಿಯ ಸಮಾಜ ಇದಾಗಿತ್ತೆಂಬುದಕ್ಕೆ ನಮಗೆ ಪುರಾವೆಗಳು ಸಿಗುತ್ತವೆ. 'ಪ್ರತಿಯೊಬ್ಬ ಡಾಹೋಮಿಯನ್‌ನ್ನನೂ ಮೂರು ವಿಷಯಗಳನ್ನು ತಿಳಿದಿರಬೇಕು. ೧. ಬೆಳೆಗಳನ್ನು ಕಟಾವು

ಮಾಡುವುದು ಹೇಗೆ? ೨. ಗೋಡೆ ಕಟ್ಟುವುದು ಹೇಗೆ? ೩. ಮನೆಯ ಮೇಲ್ಛಾವಣಿ ಹೊದೆಸುವುದು ಹೇಗೆ? ಅಂದರೆ ಲೌಕಿಕ ಜೀವನಕ್ಕೆ ಅಗತ್ಯವಾದ ಕಷ್ಟದ ದುಡಿಮೆಯನ್ನು ಕಲಿತಿರಲೇಬೇಕಿತ್ತು. ಜೊತೆಗೆ ಈ ಸಮುದಾಯದಲ್ಲಿ ಅಭಿವೃದ್ಧಿ ಹೊಂದಿದ ಶ್ರಮವಿಭಜನೆ ಮತ್ತು ಸುಧಾರಿತ ಉತ್ಪಾದನಾ ಮತ್ತು ವಿತರಣಾ ವ್ಯವಸ್ಥೆ ರೂಪುಗೊಂಡಿತ್ತು. ಪ್ರಮುಖ ಕಸುಬುಗಳು ಮಾರುಕಟ್ಟೆಯ ದೃಷ್ಟಿಯಿಂದ ಮಾತ್ರವಲ್ಲದೆ ಸಾಮಾಜಿಕವಾಗಿಯೂ ಪ್ರಮುಖ ಪಾತ್ರ ವಹಿಸುತ್ತವೆ. ಬೇಡಿಕೆ-ಪೂರೈಕೆಗಳಂತಹ ಸಂಕೀರ್ಣ ಅಂಶಗಳು ಕೇವಲ ತಾಂತ್ರಿಕ ಅಂಶಗಳಿಂದಷ್ಟೇ ಅಲ್ಲದೆ ಮಾನವಾತೀತ, ಅಭೌತಿಕ, ಧಾರ್ಮಿಕ, ಮಾಂತ್ರಿಕ ಅಂಶಗಳಿಂದಲೂ ನಿರ್ಧಾರವಾಗುತ್ತದೆ. ಡಾಹೋಮಿ ಮಾರುಕಟ್ಟೆಯನ್ನು ಕೇವಲ ಲಾಭದ ದೃಷ್ಟಿಯಿಂದ ಮಾತ್ರ ನೋಡಲು ಸಾಧ್ಯವಿಲ್ಲ. ಮಾರುಕಟ್ಟೆಯ(ಸಂತೆಯ) ದಿನ ದೇವತೆಗಳು ಬಂದು ತಮ್ಮ ವ್ಯವಹಾರ ಮಾಡುವ ನಂಬಿಕೆ ಇರುವುದರಿಂದ ಆ ದಿನದಂದು ಯಾವುದೇ ಧಾರ್ಮಿಕ ಹಬ್ಬದ ಆಚರಣೆಗಳನ್ನು ಮಾಡಬಾರದೆಂಬ ನಂಬಿಕೆ ಇದೆ ಹಾಗೂ ಕೃಷಿ ಕಾರ್ಯಗಳಿಗೂ ಆ ದಿನ ಶುಭವಲ್ಲ. ಈ ರೀತಿಯ ನಂಬಿಕೆಗಳು ಹೇಗೆ ಆರ್ಥಿಕ ಚಟುವಟಿಕೆಗಳಲ್ಲಿ ಬದಲಾವಣೆ ತರುತ್ತವೆಂಬುದು ಮುಖ್ಯ. ಮಾರುಕಟ್ಟೆಯ ದಿನ ಬೇರೆ ಚಟುವಟಿಕೆಗಳಲ್ಲಿ ತೊಡಗುವುದನ್ನು ನಿಷೇಧಿಸಿ ಹೆಚ್ಚಿನ ವ್ಯವಹಾರ ನಡೆಸಲಿ ಎಂಬ ಉದ್ದೇಶ ಈ ನಂಬಿಕೆಗಳ ಹಿಂದಿರುವ ಸಾಧ್ಯತೆಯೂ ಇಲ್ಲಿದೆ. ಈ ಮಾರುಕಟ್ಟೆಯಲ್ಲಿ ಯಾವನೇ ಒಬ್ಬ ವ್ಯಕ್ತಿ ನಿರಂತರವಾಗಿ ದೊಡ್ಡ ಪ್ರಮಾಣದಲ್ಲಿ ಸರಕುಗಳನ್ನು ಮಾರಲು ಅಥವಾ ಕೊಳ್ಳಲು ಸಾಧ್ಯವಿಲ್ಲದಿರುವುದರಿಂದ ಏಕಸ್ವಾಮ್ಯ ಅಥವಾ ಶೋಷಣೆ ಸಾಧ್ಯವಿಲ್ಲ. ಒಂದು ರೀತಿಯ ಪರಿಪೂರ್ಣ ಪೈಪೋಟಿಯ ಮಾರುಕಟ್ಟೆ ಇಲ್ಲಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಕೊಳ್ಳುವ ಅಥವಾ ಮಾರುವವರಿರುವುದರಿಂದ ಸಾಧಾರಣ ಲಾಭ ಎಲ್ಲರಿಗೂ ಸಿಗುತ್ತದೆ.'[೩೮]

ಆಸ್ತಿಸಂಪತ್ತು ಮತ್ತು ಬುಡಕಟ್ಟು ನಂಬಿಕೆಗಳು

ನಮ್ಮ ಆಧುನಿಕ ಅರ್ಥವ್ಯವಸ್ಥೆಯಲ್ಲಿ ಹಣ, ಭೂಮಿ, ಮನೆ, ಬ್ಯಾಂಕ್ ಡೆಪಾಸಿಟ್, ಶೇರು ಇತ್ಯಾದಿಗಳನ್ನು ಆಸ್ತಿಯೆಂದು ಪರಿಗಣಿಸಿದರೆ ಬುಡಕಟ್ಟು ಜನರ ಅರ್ಥವ್ಯವಸ್ಥೆಯಲ್ಲಿ ಆಸ್ತಿಗಳೆಂದರೆ ಯಾವುವೆಂದು ವಿವೇಚಿಸುತ್ತಾ ಮಂತ್ರ ತಂತ್ರಗಳೂ ಹೇಗೆ ಖಾಸಗಿ ಆಸ್ತಿಯೆಂದು ಪರಿಗಣಿಸಲ್ಪಡುತ್ತವೆ, ಅವುಗಳನ್ನು ಪಡೆಯಲು ಏನೆಲ್ಲ ಬೆಲೆ ತೆರಬೇಕಾಗುತ್ತದೆ, ಆಸ್ತಿಗಳಂತೆ ಅವುಗಳನ್ನೂ ಹೇಗೆ ಕದಿಯಬಹುದೆಂಬುದನ್ನು ವಿವರಿಸಲಾಗಿದೆ.

'ಅವರ ನಂಬಿಕೆಯಂತೆ ಮಂತ್ರಗಳು ಅತ್ಯಂತ ಖಾಸಗಿ ಆಸ್ತಿಯಾಗಿದ್ದು ಅವು ಕುಟುಂಬದಲ್ಲೇ ವಂಶಪಾರಂಪರ್ಯವಾಗಿ ಮುಂದುವರೆಯುತ್ತವೆ. ಆದರೆ ಅದಕ್ಕಾಗಿ ಸ್ವಂತ ಮಗ ಅಥವಾ ಸೋದರಿಯ ಮಗ ಯಾವುದೇ ಬೆಲೆ ತೆರಲು, ತ್ಯಾಗ ಮಾಡಲು, ಸಿದ್ಧರಿರಬೇಕಲ್ಲದೆ ಸೂಕ್ತ ಅರ್ಹತೆಯನ್ನೂ ಹೊಂದಿರಬೇಕು. ಅವುಗಳನ್ನು ಯಾವುದೇ ಕಾರಣಕ್ಕೂ ಹೊರಗಿನವರಿಗೆ ನೀಡುವುದಿಲ್ಲ. ವಸ್ತುಗಳಂತೆ ಅವುಗಳನ್ನು ಕೊಳ್ಳಲು ಅಥವಾ ಮಾರಲು ಬರುತ್ತವೆ. ಆಚರಣೆಗಳೆ ನಿಜವಾದ ದೇಶಿ

ಸಂಪತ್ತಾಗಿದ್ದು ನಿರಂತರ ಆದಾಯದ ಮೂಲಗಳೂ ಆಗಿರುವುದರಿಂದ ಮನೆ, ಆಭರಣ ಇತ್ಯಾದಿಗಳಿಗಿಂತಲೂ ಅಮೂಲ್ಯ ಸಾಮಾಜಿಕ ಸರಕುಗಳೆಂದು ಪರಿಗಣಿಸಲಾಗಿದೆ. ಮಂತ್ರಗಳಿಗೆ ಸಹಾಯಕವಾಗುವ ನಾರುಬೇರುಗಳಿಗೂ ಬಹಳ ಮೌಲ್ಯವಿದೆ. ಗಿಡಗಳಿಗೆ ಎಷ್ಟೇ ಗೊಬ್ಬರ ಹಾಕಲಿ, ದೋಣಿ ಎಷ್ಟೇ ಗಟ್ಟಿಯಾಗಿರಲಿ, ಬಲೆ ಎಷ್ಟೇ ಹೊಸದಿರಲಿ, ಸೂಕ್ತ ಮಂತ್ರವಿಲ್ಲದಿದ್ದರೆ ಗಿಡ ಫಲ ಕೊಡುವುದಿಲ್ಲ, ದೋಣಿ ನಡೆಯುವುದಿಲ್ಲ, ಮೀನುಗಳು ಬಲೆಗೆ ಬೀಳುವುದಿಲ್ಲ. ಏಕೆ ಎಂದು ಯಾರೂ ಪ್ರಶ್ನಿಸುವಂತಿಲ್ಲ. ಮಂತ್ರಗಳನ್ನು ಅಮೂಲ್ಯ ಆಸ್ತಿಗಳೆಂದು ಪರಿಗಣಿಸಿದ್ದರೂ ಕೂಡ ಟ್ರೊಬ್ರಿಯಾಂಡರ್‌ಗಳು ಮಂತ್ರಗಳನ್ನು ಜೋರಾಗಿ ಪಠಿಸಿದರೆ ಡೋಬುಗಳು ತುಂಬಾ ಮೆಲುದನಿಯಲ್ಲಿ ಪಠಿಸುತ್ತಾರೆ. ಏಕೆಂದರೆ ಟ್ರೊಬ್ರಿಯಂಡರ್‌ಗಳಲ್ಲಿ ಒಬ್ಬರ ಮಂತ್ರಗಳನ್ನು ಇನ್ನೊಬ್ಬರು ಕದ್ದು ಕೇಳಿ ಕಳವು ಮಾಡುವಂತಿಲ್ಲ. ಆದರೆ ಡೋಬುಗಳಲ್ಲಿ ಹಣದಂತೆಯೇ ಇವುಗಳನ್ನು ಕದಿಯಬಹುದು.'[೬]

ಆಸ್ತಿಸಂಪತ್ತಿನ ಪರಿಕಲ್ಪನೆ ಆಧುನಿಕರಿಗೆ ಮತ್ತು ಬುಡಕಟ್ಟುಗಳಿಗೆ ಹೇಗೆ ಭಿನ್ನವಾಗಿದೆ ಎನ್ನುವುದರ ಕೆಲವು ಉದಾಹರಣೆಗಳನ್ನು ಮಾತ್ರ ಮೇಲೆ ನೀಡಿದ್ದು ನಾವಂದುಕೊಂಡಂತೆ ಕೇವಲ ಭೌತಿಕ ವಸ್ತುಗಳು ಮಾತ್ರವೇ ಆಸ್ತಿಯಲ್ಲವೆಂಬುದನ್ನು ಈ ಮೂಲಕ ನಿರೂಪಿಸಬಹುದಾಗಿದೆ. ನಮಗೆ ಇದೆಲ್ಲಾ ಬಾಲಿಶವೆನಿಸಬಹುದಾದರೂ ನಂಬಿಕೆಗಳ ಮುಂದೆ ತಾರ್ಕಿಕತೆ ಹಿಂದೆ ಸರಿಯಬೇಕಾಗುತ್ತದೆ. ಇಂದು ನಾವು ಒಪ್ಪಿಕೊಳ್ಳುವ ಕಾಗದದ ಚೂರು, ಪ್ಲಾಸ್ಟಿಕ್ ಕ್ರೆಡಿಟ್ ಕಾರ್ಡ್ ಹಣವೆಂದು ಚಲಾವಣೆಯಾಗುವುದೂ ನಂಬಿಕೆಯಿಂದಲೇ!

ಹೀಗೆ ನಂಬುಗೆಗಳು ಉದ್ದಿಮೆ, ಆಸ್ತಿ, ಕೃಷಿ ಕಾರ್ಯಗಳನ್ನು ಆವರಿಸಿಕೊಂಡಿದ್ದು ಹಲವಾರು ನಂಬುಗೆಗಳು, ಮೂಢನಂಬಿಕೆಗಳಾಗಿ ಪರಿವರ್ತನೆ ಹೊಂದಿ ಇಡೀ ಸಮಾಜದ ಮೇಲೆ ತುಂಬಲಾರದ ನಷ್ಟ ಉಂಟುಮಾಡುತ್ತಿವೆ. ಇವನ್ನೆಲ್ಲ ಮೂಢನಂಬಿಕೆಗಳೆಂದು ನಾವೀಗ ಹೇಳಬಹುದಾದರೂ ಅವುಗಳಿಗೆ ಅದರದ್ದೇ ಆದ ಅರ್ಥವಿದ್ದು ಒಂದು ಕಾಲದಲ್ಲಿ, ಅಷ್ಟೇ ಏಕೆ ಇಂದೂ ಅವು ನಮ್ಮನ್ನು ಆಳುತ್ತಿವೆ. ಈ ಜಗತ್ತನ್ನು ನಿಜವಾಗಿಯೂ ಆಳುವವರಾರು? ಈ ಪ್ರಶ್ನೆಗೆ ಉತ್ತರ ಬಹುಶಃ ನಂಬುಗೆಗಳು.

ಬುಡಕಟ್ಟುಗಳಲ್ಲಿ ವಿನಿಮಯ ಮಾಧ್ಯಮ ಅಥವಾ ಹಣವಾಗಿ ಆಹಾರ

ಆಹಾರವೆಂದರೇನು ಎಂಬ ಪ್ರಶ್ನೆಗೆ ನಮಗೆ ಬರುವ ಸಾಮಾನ್ಯ ಉತ್ತರವೆಂದರೆ ಅದೊಂದು ಮೂಲಭೂತ ಜೈವಿಕ ಬಯಕೆಯಾದ ಹಸಿವನ್ನು ತೃಪ್ತಿಪಡಿಸುವ ಸಾಧನ ಎಂದು. ಆದರೆ ಬುಡಕಟ್ಟುಗಳಿಗೆ ಆಹಾರ ಕೇವಲ ಇಷ್ಟೇ ಅಲ್ಲದೆ ಅದೊಂದು ದೈವ, ದೈವದತ್ತ ಕೊಡುಗೆ, ಸಂಬಂಧಗಳನ್ನು ಬೆಳೆಸುವ, ಉಳಿಸುವ ಸಾಧನ, ಆಚರಣೆಗಳ ಅವಿಭಾಜ್ಯ ಅಂಗ, ಅಮೂಲ್ಯ ಸಂಪನ್ಮೂಲ, ಸಮುದಾಯಗಳ ನಡುವಿನ ಕಲಹಗಳನ್ನು ಬಗೆಹರಿಸುವ ವಿಧಾನ, ಸಂಪತ್ತು ಹಾಗೂ ಹಣ ಅಂದರೆ ವಿನಿಮಯ ಮಾಧ್ಯಮವೂ ಆಗಿದೆ.

ಆಹಾರ ಹಂಚಿಕೊಳ್ಳುವಿಕೆಯೇ ಆತ್ಮೀಯರು ಮತ್ತು ಹೊರಗಿನವರನ್ನು ಬೇರ್ಪಡಿಸುವ ಸಾಧನವಾಗಿದೆ. ನಮ್ಮ ಆಹಾರಪದ್ಧತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಬೇರೆ ಬೇರೆ

ಸಾಮಾಜಿಕ ಹಂತಗಳು ಕಂಡುಬರುತ್ತವೆ. ಡ್ರಿಂಕ್ಸ್ ಸೇವನೆ ಅಪರಿಚಿತರೊಂದಿಗೆ, ಕೆಲಸಗಾರರೊಂದಿಗೆ ಮತ್ತು ಕುಟುಂಬದವರೊಂದಿಗೆ ಮಾಡಬಹುದಾದರೂ 'ಊಟ' ಕುಟುಂಬ ಸದಸ್ಯರಿಗೆ, ಹತ್ತಿರದ ಸ್ನೇಹಿತರಿಗೆ ಮತ್ತು ಪ್ರತಿಷ್ಠಿತ ಅತಿಥಿಗಳಿಗೆ ಮಾತ್ರ ಸೀಮಿತ. ಇದನ್ನು ಹಣದ ಆರ್ಥಿಕತೆ ಅಷ್ಟಾಗಿಲ್ಲದ ನ್ಯೂಗಿನಿಯನ್ನರ ಸಮಾಜದ ಉದಾಹರಣೆಯೊಂದಿಗೆ ವಿವರಿಸಲಾಗಿದೆ. ಆಹಾರದ ಸಾಮಾಜಿಕ ಪ್ರಾಮುಖ್ಯತೆಯ ಬಗ್ಗೆ ಹಲವರು ಮಾನವಶಾಸ್ತ್ರಜ್ಞರು ವಿಶ್ಲೇಷಿಸಿದ್ದಾರೆ. ಅವರೆಂದರೆ ಡಗ್ಲಾಸ್ ಮತ್ತು ಫಿರ್ತ್, ರಿಯೋ, ಯಂಗ್, ವ್ಯಾಗ್ನರ್ ಷೆಫ್ಲಿನ್ ಇತ್ಯಾದಿ.

ನ್ಯೂಗಿನಿ ಸಮಾಜದಲ್ಲಿ ಆಹಾರದ ಪ್ರಮುಖ ಪಾತ್ರದ ಬಗ್ಗೆ ಸಾಕಷ್ಟು ಮಾನವಶಾಸ್ತ್ರಜ್ಞರು ಅಚ್ಚರಿಗೊಂಡಿದ್ದಾರೆ. ದಕ್ಷಿಣ ಸಮುದ್ರದ ಪ್ರಮುಖ ಬುಡಕಟ್ಟು ಮುಖಂಡರು ಪಾಶ್ಚಾತ್ಯ ನಗರಗಳಿಗೆ ಬಂದಾಗ ಮುದ್ರಿಸಿದ ಕಾಗದದ ಚೂರುಗಳು (ನೋಟು) ಮತ್ತು ದುಂಡಾದ ಲೋಹದ ವಸ್ತುಗಳನ್ನು (ನಾಣ್ಯಗಳನ್ನು) ಬಳಸಿ ಹೇಗೆ ದೈವಾರಾಧನೆ ಮಾಡುತ್ತಾರೆಂದು ಅಚ್ಚರಿಗೊಂಡಿದ್ದರು. ನ್ಯೂಗಿನಿಯಾದಲ್ಲಿ ಆಹಾರ ಕೇವಲ ಪೋಷಣೆಯ ವಸ್ತು ಮಾತ್ರವಲ್ಲದೆ, ವಿನಿಮಯದ ಮಾಧ್ಯಮವೂ ಆಗಿ ಚಲಾವಣೆಯಲ್ಲಿದೆ. ಆಚರಣಾತ್ಮಕ ವಿಧಿಗಳಲ್ಲಿ ನೀಡಲು ಹಾಗೂ ಸಾಮಾಜಿಕ ಸಂಬಂಧಗಳಲ್ಲಿ ಹಣದ ಪಾತ್ರವನ್ನು ಅಲ್ಲಿ ಆಹಾರ ನಿರ್ವಹಿಸುತ್ತದೆ. ಆಹಾರಕ್ಕೆ ತಿನ್ನುವ ಮಹತ್ವ ಮಾತ್ರವಲ್ಲದೆ ಒಳ್ಳೆಯ ಆಹಾರ ಒಳ್ಳೆಯ ಆರೋಗ್ಯಕ್ಕೆ ಸಹಾಯಕ ಮತ್ತು ಒಳ್ಳೆಯ ಜೀವನಕ್ಕಾಗಿ ನಡೆಸುವ ಎಲ್ಲ ಸಾಂಪ್ರದಾಯಿಕ ವಿಧಿ-ಆಚರಣೆಗಳಲ್ಲಿ ಆಹಾರವನ್ನು ಪ್ರತಿಫಲವಾಗಿ ನೀಡುವುದು ನ್ಯೂಗಿನಿಯನ್ನರಲ್ಲಿ ಬಹಳ ಮುಖ್ಯವಾದ್ದರಿಂದ, ಕುಟುಂಬಗಳು ಆಹಾರವೆಂಬ ಪ್ರಮುಖ ಸಂಪನ್ಮೂಲವನ್ನು ತುಂಬಾ ಜೋಪಾನದಿಂದ ಕಾಯ್ದುಕೊಳ್ಳುತ್ತವೆ. ಹಿರಿಯರಿಗೆ ಬಲಿ, ಎಡೆ ಕೊಡುವುದರ ಹಿಂದೆ ಇದನ್ನು ಸ್ವೀಕರಿಸಿ ನಮಗೆ ಒಳ್ಳೆಯದನ್ನು ಮಾಡು ಅಥವಾ ಕೆಟ್ಟದ್ದನ್ನು ಮಾಡಬೇಡ ಎಂಬ ಕೋರಿಕೆ ಇರುತ್ತದೆ. ಅಂದರೆ ಇಲ್ಲಿ ಬಲಿಗೆ ಬದಲಾಗಿ ಆಶಯಗಳನ್ನು ವಿನಿಮಯ ಮಾಡಿಕೊಳ್ಳಲಾಗುತ್ತದೆ. ಮನುಷ್ಯ ಮತ್ತು ಆತ್ಮಗಳ ನಡುವೆ ಆಹಾರ ವಿನಿಮಯ ಮಾಧ್ಯಮ ಅಥವಾ ಹಣದ ಪಾತ್ರ ವಹಿಸುತ್ತದೆ. ಮೇರಿ ಡಗ್ಲಾಸ್ ಅವರು 'ಊಟದ ಗೂಡಾರ್ಥ ಭೇದನ'(Deciphering a Meal)ದಲ್ಲಿ ಹೇಳುವಂತೆ ಆಹಾರವನ್ನು ಗೂಢಲಿಪಿ ಎಂದು ಭಾವಿಸಿದರೆ ಅದು ನೀಡುವ ಅರ್ಥ ಅದರ ಸಾಮಾಜಿಕ ಸಂಬಂಧಗಳ ವ್ಯಕ್ತಪಡಿಸುವಿಕೆಯಲ್ಲಿ ಅಡಗಿದೆ. ಅದರ ಸಂದೇಶ ವಿವಿಧ ಹಂತಗಳ ಶ್ರೇಣೀಕರಣ, ಒಳಗೊಳ್ಳುವಿಕೆ ಮತ್ತು ಬಹಿಷ್ಕರಿಸುವಿಕೆ, ಗಡಿಗಳು ಮತ್ತು ಗಡಿಯಾಚೆಗಿನ ವಿನಿಮಯಗಳು ಇತ್ಯಾದಿಗಳನ್ನು ಆಹಾರ ವ್ಯಕ್ತಪಡಿಸುತ್ತದೆ. ಮೈಥುನ(Like Sex)ದಂತೆ, ಆಹಾರ ಕೂಡಾ ಸಾಮಾಜಿಕ ಹಾಗೂ ಜೈವಿಕವಾದದ್ದು. ಆದ್ದರಿಂದ, ವಿವಿಧ ಆಹಾರಗಳು ಸಾಮಾಜಿಕ ಕ್ರಿಯೆಗಳನ್ನು ಪ್ರತಿಬಿಂಬಿಸುತ್ತವೆ. ಒಮುರಾ ಆಚರಣೆಗಳು ಪ್ರಮುಖವಾದಷ್ಟು ಅದಕ್ಕೆ ಬೇಕಾದ ಆಹಾರ ಮುಂತಾದ ಅಮೂಲ್ಯ ಸಾಮಗ್ರಿಗಳೂ ಹೆಚ್ಚೆರಬೇಕಾಗುತ್ತದೆ. ಫಿರ್ತ್ ಅವರು ತಮ್ಮ ಔದ್ಯಮಿಕ, ಪೂರ್ವ ಸಮಾಜದಲ್ಲಿ ಆಹಾರದ ಸಾಂಕೇತಿಕತೆ (Food symbolism in preIndustrial society)ಯಲ್ಲಿ ವಾದಿಸುವಂತೆ ಆಹಾರದ ಪ್ರಾಮುಖ್ಯತೆಯು ವಿವಿಧ ಸಾಮಾಜಿಕ ಸಂಬಂಧಗಳಲ್ಲಿ, ಅದು ನಿರ್ವಹಿಸುವ ವಿನಿಮಯದ

ಪಾತ್ರದಿಂದಾಗಿ ಹೆಚ್ಚಾಗಿದೆ ಎಂದಿದ್ದಾರೆ. ಅಂದರೆ ಸಾಮಾಜಿಕ ಸಂಬಂಧಗಳ ಅಭಿವ್ಯಕ್ತಿಯ ಮಾಧ್ಯಮವಾಗಿ, ವಿನಿಮಯ ಮಾಧ್ಯಮವಾಗಿಯೂ ಆಹಾರ ಪ್ರಮುಖ ಪಾತ್ರ ವಹಿಸುತ್ತದೆ. ಮಾರಿರಿಯೆ ಅವರು ಹೇಳುವಂತೆ ಬೇರೆ ಗುಂಪಿಗೆ ಸೇರಿದ ವ್ಯಕ್ತಿಗೆ ಆಹಾರ ನೀಡಿದಾಗ ಎರಡೂ ಗುಂಪುಗಳ ನಡುವಿನ ಸಾಮಾಜಿಕ ಅಂತರ ಕಡಿಮೆಯಾಗುತ್ತದೆ. ಸಮಾರಂಭದ ಮೂಲಕ ಆಹಾರ ನೀಡಿದಾಗ ನೀಡುವ ಗುಂಪಿನ ಘನತೆ ಹೆಚ್ಚಾಗುತ್ತದೆ. ನೀಡಿದ ಆಹಾರ ಕಸಿದುಕೊಂಡರೆ ವೈರತ್ವ ಹೆಚ್ಚಾಗುತ್ತದೆ. ಮೈಕಲ್ ಯಂಗ್ ತಮ್ಮ 'Fighting with food' ಪುಸ್ತಕದಲ್ಲಿ ಮೇನೆಸಿಯನ್ ಜನರಿಗೆ ಆಹಾರ ಕೇವಲ ಜೀವನಾವಶ್ಯಕ ವಸ್ತು ಮಾತ್ರವಾಗಿರದೆ ಅದಕ್ಕೆ ಹೆಚ್ಚಿನ ಆಂತರಿಕ ಮೌಲ್ಯವನ್ನು ನೀಡಿದ್ದಾರೆ. ಸಾಮಾಜಿಕ ಸಂಬಂಧಗಳನ್ನು ಸೃಷ್ಟಿಸುವ, ನಿರ್ವಹಿಸುವ ಬದಲಾಯಿಸುವ ಸಲುವಾಗಿ ಆಹಾರವನ್ನು ಬಳಸಲಾಗುತ್ತದೆ. ಆಹಾರಕ್ಕೆ ಅತಿ ಕಡಿಮೆ ಭಾಜಕ ಶಕ್ತಿ ಇದ್ದು ಅತಿ ಹೆಚ್ಚಿನ ಪರಿವರ್ತನೀಯತೆ ಇದೆ. ಸಂಪತ್ತಿನ ಸಾಧನವಾಗಿ ಪ್ರಾದೇಶಿಕ ರಾಜಕೀಯ ವ್ಯವಸ್ಥೆಗೆ ಅತ್ಯಂತ ಅವಶ್ಯಕವಾಗಿದೆ. ಡರಿಬಿ ಜನಾಂಗದಲ್ಲಿ ಆಹಾರ ಹೇಗೆ ಪ್ರಮುಖ ಪಾತ್ರ ವಹಿಸುತ್ತದೆಂದು ವ್ಯಾಗ್ನರ್ ತಿಳಿಸಿದ್ದಾರೆ. ಸಾಮಾಜಿಕ ಸಂಬಂಧಗಳನ್ನು ಆಹಾರ ವಿನಿಮಯ ಮಾಡಿಕೊಳ್ಳುವ ಮೂಲಕ ಅದರಲ್ಲೂ ಮಾಂಸ ಅಥವಾ ಜೀವಂತ ಹಂದಿಗಳನ್ನು ವಿನಿಮಯಿಸುವ ಮೂಲಕ ಹೇಗೆ ಮುಖ್ಯವೆಂದು ಬಿಂಬಿಸಲಾಗುತ್ತದೆ ಎಂದಿದ್ದಾರೆ. ಅದರಲ್ಲೂ ಮಾಂಸಕ್ಕೆ ಗಂಡು ಹೆಣ್ಣಿನ ಪ್ರಜನನ ಸಾಮರ್ಥ್ಯ ಹೆಚ್ಚಿಸುವ ಗುಣವಿರುವುದರಿಂದ ಅದಕ್ಕೆ ಹೆಚ್ಚಿನ ವಿನಿಮಯ ಮೌಲ್ಯವಿದೆ. ಬೇರೆಲ್ಲ ವಸ್ತುಗಳಿಗಿಂತಲೂ ಆಹಾರವು ಸಾಮಾಜಿಕ ಸಂಬಂಧಗಳ ನಿರ್ವಹಣೆಯ ಅಗತ್ಯಗಳನ್ನು ಪೂರೈಸುವ ಗುಣ ಹೊಂದಿರುವುದರಿಂದ ನ್ಯೂಗಿನಿಯನ್ನರಲ್ಲಿ ಆಹಾರ ಪ್ರಮುಖ ವಿನಿಮಯ ಮಾಧ್ಯಮವಾಗಿದೆ. ಒಮುರಾ ಸಮುದಾಯದಲ್ಲಿ ಆಹಾರವನ್ನು ಬೇಟೆಯಿಂದ, ಹಂದಿ ಸಾಕಣೆಯಿಂದ ಇಲ್ಲವೇ ಕೃಷಿಯಿಂದ ನಡೆಯಲಾಗುತ್ತದೆ. ಕೃಷಿಗೆ ಉನ್ನತ ಸ್ಥಾನವಿದ್ದು ಕುಮರಿ ಬೇಸಾಯವನ್ನು ಪಾಲಿಸಲಾಗುತ್ತದೆ. ಇದಕ್ಕಾಗಿ ಮರಗಳನ್ನು ಕಡಿದು ಕಾಡನ್ನು ಸವರಿ ಬೇಲಿ ಹಾಕಲು ತನ್ನ ಸಂಬಂಧಿಗಳ ನೆರವನ್ನು ಪಡೆಯುತ್ತಾರೆ. ಈ ಶ್ರಮಕ್ಕೆ, ಪ್ರತಿಫಲವಾಗಿ(ವಿನಿಮಯವಾಗಿ) ಅವರಿಗೆ 'ಹರಪಾ' ಎಂಬ ಭೋಜನ ಕೂಟವನ್ನು ಭೂಮಿಯ ಒಡೆಯ ನೀಡಬೇಕಾಗುತ್ತದೆ. ಇಲ್ಲವಾದಲ್ಲಿ ಕೆಲಸ ಮಾಡಿದವರು ಬೆಳೆಯನ್ನು ತಮ್ಮ ಪಾಲೆಂದು ತೆಗೆದುಕೊಂಡು ಹೋಗಬಹುದಾಗಿದೆ. ಹೀಗಾಗಿ ಆಹಾರವು ಸಂಬಂಧಗಳನ್ನು ಉಳಿಸುವ, ಶ್ರಮಕ್ಕೆ ಪ್ರತಿಫಲ ನೀಡುವ ಹಾಗೂ ಭೂಮಿಯ ಒಡೆಯನ ಹಕ್ಕನ್ನು ಧೃಡಪಡಿಸುವ ಸಾಧನವಾಗಿ ಕಾರ್ಯ ನಿರ್ವಹಿಸುತ್ತದೆ. ವಧುದಕ್ಷಿಣೆ, ಸಾವಿನ ಪರಿಹಾರ(ಬ್ಲಡ್ ಮನಿ) ಹಾಗೂ ಇತರ ಸಾಮಾನ್ಯ ವ್ಯವಹಾರಗಳಲ್ಲಿ ನೂಲಿನ ಚೀಲಗಳು, ಹುಲ್ಲಿನ ಸ್ಕರ್ಟ್‌ಗಳು, ತೊಗಟೆಯ ವಸ್ತ್ರಗಳು, ಸಾಕಿದ ಹಂದಿಗಳು, ಬಿಲ್ಲು, ಬಾಣಗಳು, ಕವಡೆ ಆಭರಣಗಳು, ಕಾಫಿ ಮಾರಾಟದಿಂದ ಬಂದ ಹಣ ಇತ್ಯಾದಿಗಳನ್ನು ವಿನಿಮಯ ಮಾಧ್ಯಮವಾಗಿ ಬಳಸಿದರೂ ಒಮುರಾ ಸಮಾರಂಭಗಳಲ್ಲಿ ತಯಾರಿಸಿದ ಹಂದಿ ಮಾಂಸದ ಆಹಾರವೇ ವಿನಿಮಯಕ್ಕೆ ಅತ್ಯಂತ ಶ್ರೇಷ್ಠ ಹಾಗೂ ಅಮೂಲ್ಯವೆಂದು ಆ ಜನ ಭಾವಿಸುತ್ತಾರೆ. ಬೇರೆಲ್ಲಾ ವಸ್ತುಗಳನ್ನು

ನೀಡಲು ತಡಮಾಡಬಹುದಾದರೂ ಆಹಾರವನ್ನು ಮಾತ್ರ ತಕ್ಷಣವೇ ನೀಡುವುದರಿಂದ ಅದರ ಮೌಲ್ಯ ಹೆಚ್ಚು. ಲೇಖಕರಿಗೆ ಹಣವನ್ನು ನೀಡಿ ತರಕಾರಿ ಕೊಳ್ಳುವುದು ತುಂಬಾ ಕಷ್ಟವಾಗಿತ್ತು. ಏಕೆಂದರೆ ಹಣಕ್ಕಿಂತಲೂ ತರಕಾರಿಯೇ ಹೆಚ್ಚು ಮೌಲ್ಯದ್ದು ಎಂದು ಅವರು ಭಾವಿಸಿದ್ದರು. ಹಾಗಾಗಿ ಲೇಖಕ ಬ್ರೆಡ್ಡನ್ನು ತಯಾರಿಸಿ ಅದನ್ನು ತರಕಾರಿಗಳಿಗೆ ಸುಲಭವಾಗಿ ವಿನಿಮಯ ಮಾಡಿಕೊಳ್ಳುತ್ತಿದ್ದನು. ಅಂದರೆ ಆಹಾರವನ್ನು ಆಹಾರಕ್ಕೆ ವಿನಿಮಯ ಮಾಡಿಕೊಳ್ಳುವುದು ಆಹಾರವನ್ನು ಹಣಕ್ಕೆ ವಿನಿಮಯ ಮಾಡಿಕೊಳ್ಳುವುದಕ್ಕಿಂತಲೂ ಸುಲಭ ವಿಧಾನವಾಗಿತ್ತು. ಬೇರೆ ಏನನ್ನಾದರೂ ಸುಲಭವಾಗಿ ವಿನಿಮಯ ಮಾಡಿಕೊಳ್ಳುತ್ತಿದ್ದ ಈ ಜನ ಆಹಾರವನ್ನು ಮಾತ್ರ ಸುಲಭವಾಗಿ ಅದರಲ್ಲೂ ಹೊರಗಿನವರಿಗೆ ವಿನಿಮಯ ಮಾಡಿಕೊಳ್ಳುತ್ತಿರಲಿಲ್ಲ.'[೪೦]

ಬೆಳೆ ಹುಲುಸಾಗಲು, ಪ್ರಾಣಿಗಳ ಫಲವತ್ತತೆ ಹೆಚ್ಚಿಸಲು, ಮಾಟ ಮಂತ್ರ ನಿವಾರಿಸಲು ಇತ್ಯಾದಿ ಸಮಾರಂಭಗಳಲ್ಲಿ ಇರುವ ಮುಖ್ಯ ಪೂಜಾರಿಗೆ ಹಣಕ್ಕಿಂತಲೂ ಆಹಾರವನ್ನೇ ಪ್ರತಿಫಲವಾಗಿ ನೀಡಲಾಗುತ್ತದೆ. ಇಂದಿಗೂ ನಮ್ಮ ಸಾಂಪ್ರದಾಯಿಕ ಸಭೆ ಸಮಾರಂಭಗಳಲ್ಲಿ ಜೀವನಚಕ್ರ ಸಂಬಂಧಿ ಕಾರ್ಯಗಳಲ್ಲಿ, ಅಷ್ಟೇ ಏಕೆ ರಾಜಕೀಯ ಸಭೆಗಳಲ್ಲಿ ಕೂಡಾ ಪಂಕ್ತಿಭೋಜನ, ಊಟ ಇತ್ಯಾದಿಗಳು ಪ್ರಮುಖವಾಗಿರುವುದರ ಹಿನ್ನೆಲೆ ಹಾಗೂ ಪುರೋಹಿತರಿಗೆ ದಕ್ಷಿಣೆ ನಾಮಮಾತ್ರವಾಗಿದ್ದರೂ ಪಡಿ ಹೆಸರಿನಲ್ಲಿ ಅಕ್ಕಿ-ಬೇಳೆ ಬೆಲ್ಲ ಇತ್ಯಾದಿಗಳನ್ನು ನೀಡುವುದರ ಹಿನ್ನೆಲೆಯೂ ಇದೇ ಇರಬಹುದು. ಮದುವೆಗೆ ಬಂದ ಅತಿಥಿಗಳು ನೀಡುವ ಉಡುಗೊರೆ ಆಶೀರ್ವಾದಗಳಿಗೆ ಬದಲಾಗಿ ನೀಡುವ ಊಟ ಹಾಗೂ ತಾಂಬೂಲ ಇತ್ಯಾದಿಗಳು ವಿನಿಮಯದ ರೂಪಗಳೇ ಆಗಿವೆ. ನಿಶ್ಚಿತಾರ್ಥದಂತಹ ಸಮಾರಂಭಗಳಲ್ಲಿ ಕೂಡಾ ಮಾತುಕತೆ ಫಲಪ್ರದವಾದಾಗ ಮಾತ್ರ ಸಿಹಿ ಊಟದ ವ್ಯವಸ್ಥೆ ಮಾಡುವುದು ಸಾಮಾಜಿಕ ಬಾಂಧವ್ಯ ಗಟ್ಟಿಗೊಳಿಸುವ ಒಪ್ಪಂದದ ಜೊತೆಗೇ ಎರಡೂ ಬೇರೆಬೇರೆ ಬಳಿಗಳ, ಕುಟುಂಬಗಳ ವಿನಿಮಯಕ್ಕೆ ಮುಂಗಡವೆಂಬಂತೆ ಈ ರೀತಿ ಆಹಾರದ ವಿನಿಮಯ ನಡೆಯುತ್ತದೆ. ಇದು ಬುಡಕಟ್ಟು ಆಚರಣೆಯ-ಆರ್ಥಿಕತೆಯ, ಮುಂದುವರಿಕೆ ಎನ್ನಬಹುದು. ಭಾರತದಲ್ಲಿ ಈಗಲೂ ಕೂಡ ಮದುವೆಗೆ ಮೊದಲು ನೀಡುವ ದೈವದ ಊಟದಲ್ಲಿ ಕೇವಲ ಹತ್ತಿರದ ರಕ್ತಸಂಬಂಧಿ ಹಾಗೂ ಕುಲಬಾಂಧವರನ್ನು ಕರೆಸಿ ಹಾಕುವ ಊಟದ ಹಿಂದೆ ಕೂಡಾ, ಮುಂದೆ ಮದುವೆಯ ಯಶಸ್ಸಿಗೆ ಅವರೆಲ್ಲರ ಸಹಕಾರ ಬೇಕೆಂಬ ಬೇಡಿಕೆಯ ಜೊತೆಗೆ ಸಾಮಾಜಿಕ ವಿನಿಮಯದ ಛಾಯೆ ಇದೆ. ಹಣ ಕೊಡುತ್ತೇನೆ ಬಂದು ಕೆಲಸ ಮಾಡಿ ಎಂದರೆ ಎಲ್ಲರೂ ಬರಲಿಕ್ಕಿಲ್ಲ. ಆದರೆ ಊಟವೆಂಬ ವಿನಿಮಯದ ಮಾಧ್ಯಮದ ಮೂಲಕ ಬೇಡಿಕೆ ಇಟ್ಟಾಗ ನಿರಾಕರಿಸುವುದು ಕಷ್ಟ ಹಾಗೂ ಎಲ್ಲರೂ ಭಾಗಿಯಾಗುತ್ತಾರೆ.

'ಪದೇಪದೇ ಯುದ್ಧದಲ್ಲಿ ತೊಡಗಿರುವ ಹಳ್ಳಿಗಳ ಜನರು ಇನ್ನು ಯುದ್ಧ ಸಾಕು ಶಾಂತಿ ಬೇಕು ಎಂದಾಗ ಎರಡೂ ಹಳ್ಳಿಯ ಜನ ಮಣ್ಣಿನ ಒಲೆಯಲ್ಲಿ ಬೇಯಿಸಿದ ಹಂದಿಗಳನ್ನು ತಂದು ಗಡಿಭಾಗದಲ್ಲಿರುವ ತಟಸ್ಥ ಪ್ರದೇಶದಲ್ಲಿಟ್ಟು ದೂರ ನಿಂತಿರುತ್ತಾರೆ. ಮತ್ತೊಂದು ಹಳ್ಳಿಯವರು

ತಾವು ತಂದ ಬೇಯಿಸಿದ ಹಂದಿಯನ್ನು ಅಲ್ಲಿಟ್ಟು ಇನ್ನೊಂದು ಹಂದಿಯನ್ನು ಸ್ವೀಕರಿಸಿದಾಗ ಎರಡೂ ಹಳ್ಳಿಗಳ ನಡುವಿನ ವೈರತ್ವ ಕೊನೆಗೊಂಡಂತಾಗುತ್ತದೆ. ಏಕೆಂದರೆ ಇಬ್ಬರೂ ತಮ್ಮತಮ್ಮ ಆಹಾರವನ್ನು ವಿನಿಮಯ ಮಾಡಿಕೊಂಡ ಮೇಲೆ ಬಂಧುಗಳಾದಂತೆ ಭಾವಿಸುತ್ತಾರೆ. ಅಂದರೆ ಬೇರಾವುದೇ ವಸ್ತುವನ್ನು ವಿನಿಮಯ ಮಾಡಿಕೊಳ್ಳುವುದಕ್ಕಿಂತ ಆಹಾರವನ್ನು ವಿನಿಮಯ ಮಾಡಿಕೊಂಡ ಒಪ್ಪಂದಗಳು ಹೆಚ್ಚು ಊರ್ಜಿತವಾಗುತ್ತವೆ. ಆಹಾರವನ್ನು ಹಣಕ್ಕಾಗಿ ವಿನಿಮಯ ಮಾಡಿಕೊಳ್ಳುವ ಏಕೈಕ ಸಮಾರಂಭವೆಂದರೆ Gate Singsing ಮಾತ್ರ. ಒಂದು ಹಳ್ಳಿಗೆ ಹಣದ ಅವಶ್ಯಕತೆ ಇದ್ದಾಗ ಸುತ್ತಲಿನ ಹಳ್ಳಿಗಳವರನ್ನು ಖಾನ, ಪಾನೀಯ, ನೃತ್ಯ ಸಮಾರಂಭಕ್ಕೆ ಆಹ್ವಾನಿಸಿ, ಅದಕ್ಕೆ ಬದಲಾಗಿ ಅವರಿಂದ ಪ್ರವೇಶ ಶುಲ್ಕವನ್ನು ಪಡೆಯಲಾಗುತ್ತದೆ. ಸಾಂಪ್ರದಾಯಿಕ ಉಡುಗೆ ಅಲಂಕಾರಗಳಿಂದ ಆಗಮಿಸುವ ಬೇರೆ ಹಳ್ಳಿಗಳ ಜನ ಹಣ ನೀಡಿ ರಾತ್ರಿಯೆಲ್ಲ ನೃತ್ಯ ಭೋಜನ ಸವಿಯುತ್ತಾರೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಆಹಾರ ಹೇಗೆ ಓಮುರಾಗಳ ಸಾಮಾಜಿಕ ಸಂಬಂಧಗಳಲ್ಲಿಯೂ ಅಲ್ಲದೆ ಆರ್ಥಿಕ ವಿನಿಮಯಗಳಲ್ಲಿ ಮುಖ್ಯ ಪಾತ್ರ ವಹಿಸುತ್ತದೆ ಎಂದು ತಿಳಿಯುತ್ತದೆ. ಓಮುರಾಗಳ ವಿನಿಮಯ ಆಹಾರ, ಅಮೂಲ್ಯ ವಸ್ತುಗಳು ಮತ್ತು ಹಣ ಮೂರನ್ನೂ ಒಳಗೊಂಡಿದ್ದರೂ ಆಹಾರವೇ ವಿನಿಮಯದ ಪ್ರಮುಖ ಮಾಧ್ಯಮವಾಗಿ ಉಳಿದಿದ್ದು ಹಣ ಅದರ ಸ್ಥಾನವನ್ನು ಪಡೆಯಲು ಸಾಧ್ಯವಾಗಿಲ್ಲ. ಮಾತ್ರವಲ್ಲದೆ ವಿನಿಮಯದ ಸಹಾಯಕ ಸ್ಥಾನಕ್ಕೇ ತೃಪ್ತಿ ಪಟ್ಟುಕೊಂಡಿದೆ. ಹೀಗಾಗಿ ಅಲ್ಲಿ ಅನಗತ್ಯ ಅಧಿಕ ಉತ್ಪಾದನೆ, ಅತಿಪ್ರಸರಣ, ಲಾಭಬಡುಕತನ, ನಿರುದ್ಯೋಗ ಶೋಷಣೆಗಳು ಅಷ್ಟಾಗಿ ಕಂಡುಬರುತ್ತಿಲ್ಲ.'[೯]

Money is what money does ಎಂಬ ಕ್ರೌಥರ್‌ರ ಮಾತಿನಂತೆ ಹಣದ ಕೆಲಸ ಯಾವುದು ಮಾಡುವುದೋ ಅದೇ ಹಣ ಎಂದರೆ, ಆಹಾರ ಕೂಡ ಹಣವಾಗಬಲ್ಲದೆಂಬುದನ್ನು ಈ ಉದಾಹರಣೆ ಸೂಚಿಸುತ್ತದೆ. ಕವಡೆ, ಚಿಪ್ಪು, ತಂಬಾಕು ಮುಂತಾದ ವಸ್ತುಗಳು, ಹಸು, ಹಂದಿ ಮುಂತಾದ ಪ್ರಾಣಿಗಳು, ಲೋಹದ ಚೂರುಗಳು ನಾಣ್ಯಗಳು, ಕಾಗದದ ಚೂರುಗಳು, ಪ್ಲಾಸ್ಟಿಕ್ ಚೂರು ಇತ್ಯಾದಿಗಳೆಲ್ಲ ಹಣವೆಂದು ಪರಿಗಣಿತವಾಗಿರುವಾಗ ಆಹಾರವೇಕೆ ಹಣವಾಗಬಾರದು?

ಒಟ್ಟಾರೆಯಾಗಿ ಬುಡಕಟ್ಟುಗಳು ವಿಶಿಷ್ಟ ಸಮುದಾಯಗಳಾಗಿದ್ದು ಸಾವಿರಾರು ವರ್ಷಗಳಿಂದ ತಮ್ಮದೇ ಆದ ಜೀವನಪದ್ಧತಿಯನ್ನು ಬೆಳೆಸಿಕೊಂಡು ಬಂದಿದ್ದಾರೆ ಮತ್ತು ಪ್ರಕೃತಿಯೊಡನೆ ಸಂಘರ್ಷ ಮಾಡದೆ ಅದನ್ನು ತಾಯಿಯಂತೆ, ದೇವರಂತೆ ಪರಿಭಾವಿಸಿಕೊಂಡು ಸಮನ್ವಯದ ಜೀವನ ನಡೆಸಿಕೊಂಡು ಬಂದಿದ್ದಾರೆ. ಅವರ ನಂಬಿಕೆಗಳನ್ನು ನಾವಿಂದು ಯಥಾವತ್ತಾಗಿ ಅನುಕರಿಸದಿದ್ದರೂ ಅವುಗಳ ಹಿಂದಿನ ಪಾವಿತ್ರ್ಯತೆ ಹಾಗೂ ಭಾವನೆಗಳನ್ನು ಪರಿಗಣಿಸಬಹುದಾಗಿದೆ. ಇಂದಿನ ಅವಸರದ ಅಸಂತೃಪ್ತಿಯ ಜೀವನ ಪ್ರಕೃತಿಯನ್ನು ಕಸದ ಬುಟ್ಟಿಯಂತೆ, ಕಚ್ಚಾವಸ್ತುಗಳ ಖಜಾನೆಯಂತೆ, ತನ್ನ ಉಪಯೋಗಕ್ಕಾಗಿ ಇರುವ ಜಹಗೀರಿನಂತೆ ಭಾವಿಸಿಕೊಂಡು ಬರುತ್ತಿದೆ. ಈ ಮನೋಭಾವನೆ ಬದಲಾಗಬೇಕಾದ ಕಾಲ ಬಂದಿದ್ದು ಅದಕ್ಕಾಗಿ ಹಲವಾರು ಆಯ್ಕೆಗಳಿವೆ ಯಾದರೂ ಬುಡಕಟ್ಟುಗಳ

ಬದುಕು ಒಂದು ಸಂದೇಶವಾಗಬಹುದಾಗಿದೆ. ಅದಕ್ಕಾಗಿ ಬುಡಕಟ್ಟು ಆರ್ಥಿಕತೆಯ ವಿವಿಧ ಪರಿಭಾವನೆಗಳು, ಲಕ್ಷಣಗಳು, ನಂಬಿಕೆಗಳ ಹಿನ್ನೆಲೆಯನ್ನು ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿಯಾದರೂ ವಿಶ್ಲೇಷಿಸಲಾಗಿದೆ ಎಂದು ಭಾವಿಸಿದ್ದೇನೆ.

ಅಡಿಟಿಪ್ಪಣಿಗಳು

೧. ಪ್ರಸನ್ನ ಎ.ಎಸ್., ದೇಸಿ ಜೀವನ ಪದ್ಧತಿ, ಒಂಟಿದನಿ ಪ್ರಕಾಶನ, ಹೆಗ್ಗೋಡು. ಪು.೧೪-೧೮, ೨೦೦೫.

೨. Lauriston Sharp, Ritual life and Economics of the Yir Yoront of Cape York peninsula, *Tribal religion and economic life,* Cosmo publications, P.7, 2002.

೩. ಪ್ರಸನ್ನ ಎ.ಎಸ್., ದೇಸಿ ಜೀವನ ಪದ್ಧತಿ, ಒಂಟಿದನಿ ಪ್ರಕಾಶನ, ಹೆಗ್ಗೋಡು. ಪು.೧೪-೧೮, ೨೦೦೫.

೪. ಮಾನವಿಕಾರ್ಥಶಾಸ್ತ್ರ, ವಿಕಿಪೀಡಿಯ-ಅಂತರ್ಜಾಲ.

೫. ಅದೇ.,

೬. Lauriston Sharp, Ritual life and Economics of the Yir Yoront of Cape York peninsula, Tribal religion and economic life, Cosmo publications, P.7, 2002.

೭ ಅದೇ ಪು.೪

೮. ಅದೇ. ಪು.೧೯೮

೯. ಮಾನವಿಕಾರ್ಥಶಾಸ್ತ್ರ, ವಿಕಿಪೀಡಿಯ, ಅಂತರ್ಜಾಲ.

೧೦. ಅದೇ., (Consequently any analysis of Economics as an analytically distinct entity Isolated from socio-cultural and political control is flawed from the outset).

೧೧. Mills J.P., he effects of Rituals upon Industries and Arts in the Naga Hills, Tribal Religion and Economic Life, Cosmo publications, p-17, 2002.

೧೨. ಅದೇ ಪು.೧೮.

೧೩. ಪಂಡಿತ ಸಮೀರಾಚಾರ್ಯ ಕಂಠಪಲ್ಲಿ, ಕಿರಾತಾರ್ಜುನೀಯ ಸಂಗ್ರಹ ವ್ಯಾಖ್ಯಾನ, ವಿಜಯ ವಾಣಿ, ಅಮೃತವಾಣಿ, ಪುರವಣಿ, ಪು.೨, ದಿನಾಂಕ ೨೭.೧೧.೨೦೧೩

೧೪. Lauriston Sharp, Ritual life and Economics of the Yir Yoront of Cape York peninsula, Tribal Religion and Economic Life, Cosmo publications, P.287, 2002.

೧೫. ಅದೇ, ಪು. ೨೮೮.

೧೬. ಅದೇ, ಪು. ೨೪೮, ೨೫೧.

೧೭. ಅದೇ, ಪು. ೨೫೫.

೧೮. Rangarajan T.T., Unposted letter, The voice of Ra, Frozen thoughts, Chennai, (Ed 5) p.3, 2011

೧೯. ೧೮೫೨ ರೆಡ್ ಇಂಡಿಯನ್ನರು ಅಮೆರಿಕ ಅಧ್ಯಕ್ಷರಿಗೆ ಮೂಲನಿವಾಸಿಗಳು ಬರೆದ ಪತ್ರ, ಅಂತರ್ಜಾಲ.

೨೦. ಗುಡೆಮನ್ ಮಾನವಿಕಾರ್ಥಶಾಸ್ತ್ರ, ಅಂತರ್ಜಾಲ.

೨೧. Lauriston Sharp, Ritual life and Economics of the Yir Yoront of Cape York peninsula, Tribal Religion and Economic Life, Cosmo publications, P.9, 2002.

೨೨. ಮಾನವಿಕಾರ್ಥಶಾಸ್ತ್ರ, ಅಂತರ್ಜಾಲ

೨೩. ಅದೇ,

೨೪. ಪ್ಯಾಲೇಸ್ ಎಕಾನಮಿ, ವಿಕಿಪೀಡಿಯಾ-ಅಂತರ್ಜಾಲ

೨೫. ಅನಿಮಲ್ ಪ್ಲಾನೆಟ್ ಟಿ.ವಿ. ವಾಹಿನಿ, ದಿನಾಂಕ ೧೪.೧೧.೨೦೧೨

೨೬. ಫ್ರೆಡ್ರಿಕ್ ಎಂಗೆಲ್ಸ್, ಕುಟುಂಬ, ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳು ಉಗಮ, (ಲೂಯಿ ಎಚ್. ಮಾರ್ಗನ್‌ರ ಪರಿಶೋಧನೆಗಳ ಬೆಳಕಿನಲ್ಲಿ), ಪು. ೨೩೦, ೧೯೮೦.

೨೭. ಬೋರಲಿಂಗಯ್ಯ ಹಿ.ಚಿ., ವಿಸ್ಮೃತಿ ಸಂಸ್ಕೃತಿ, ಸಿ.ವಿ.ಜಿ. ಪ್ರಕಾಶನ, ಬೆಂಗಳೂರು, ಪು.೧೮-೧೯, ೨೦೦೪.

೨೮. ಅದೇ ಪು.೨೦-೨೧

೨೯. ಮಾನವಿಕಾರ್ಥಶಾಸ್ತ್ರ, ಅಂತರ್ಜಾಲ

೩೦. ಫ್ರೆಡ್ರಿಕ್ ಎಂಗೆಲ್ಸ್, 'ಕುಟುಂಬ, ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳು ಉಗಮ, (ಲೂಯಿ ಎಚ್. ಮಾರ್ಗನ್‌ರ ಪರಿಶೋಧನೆಗಳ ಬೆಳಕಿನಲ್ಲಿ), ಪ್ರಗತಿ ಪ್ರಕಾಶನ, ಮಾಸ್ಕೋ, ಪು. ೭, ೧೯೮೦.

೩೧. Lauriston Sharp, Ritual life and Economics of the Yir Yoront of Cape York peninsula, Tribal Religion and Economic Life, Cosmo publications, P.290, 2002.

೩೨. ಫ್ರೆಡ್ರಿಕ್ ಎಂಗೆಲ್ಸ್- 'ಕುಟುಂಬ, ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳು ಉಗಮ, (ಲೂಯಿ ಎಚ್. ಮಾರ್ಗನ್‌ರ ಪರಿಶೋಧನೆಗಳ ಬೆಳಕಿನಲ್ಲಿ, ಪ್ರಗತಿ ಪ್ರಕಾಶನ, ಮಾಸ್ಕೋ, ಪು. ೭, ೧೯೮೦.

೩೩. ಅದೇ, ಪು. ೨೩೦-೨೪೭.

೩೪. Mills J.P., The effects of Rituals upon Industries and Arts in the Naga Hills, Tribal Religion and Economic Life, Cosmo publications, p-17 to 26, 2002.

೩೫. Mills J.P., The effects of Rituals upon Industries and Arts in the Naga Hills, Tribal Religion and Economic Life, Cosmo publications, p-288 to 26, 2002.

೩೬. ಅದೇ, ಪು. ೫೨.

೩೭. ಅದೇ, ಪು. ೨೮೮.

೩೮. ಅದೇ, ಪು. ೨೫.

೩೯. ಅದೇ, ಪು. ೨೮೬–೨೮೮.

೪೦. ಅದೇ, ಪು. ೨೪೭–೨೪೮

೪೧. ಅದೇ, ಪು. ೨೫೦.

ಅಧ್ಯಾಯ ಮೂರು

ಸಿದ್ದಿಗಳ ಚಾರಿತ್ರಿಕ ಹಿನ್ನೆಲೆ ಮತ್ತು ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿಗತಿಗಳು

೧. ಮೂಲ, ಗುಲಾಮಗಿರಿ ಮತ್ತು ಖಂಡಾಂತರ ಪಯಣ: ಚಾರಿತ್ರಿಕ ನೋಟ

೨. ಸಾಮಾಜಿಕ ವ್ಯವಸ್ಥೆ: ವೈಶಿಷ್ಟ್ಯತೆ ಮತ್ತು ಸ್ಥಿತ್ಯಂತರಗಳು

೩. ಸಾಮಾಜಿಕ ಏಕಾಂಗಿತನ: ಕಾರಣ ಮತ್ತು ಪರಿಣಾಮ

೪. ಸಾಂಸ್ಕೃತಿಕ ಸ್ಥಿತಿಗತಿಗಳು

೫. ಭಾರತೀಯ ಮತ್ತು ಆಫ್ರಿಕನ್ ಗುಲಾಮರ ವೈರುಧ್ಯಗಳು

ಅಧ್ಯಾಯ ಮೂರು

ಸಿದ್ದಿಗಳ ಚಾರಿತ್ರಿಕ ಹಿನ್ನೆಲೆ ಮತ್ತು ಸಾಮಾಜಿಕ-ಸಾಂಸ್ಕೃತಿಕ ಸ್ಥಿತಿಗತಿಗಳು

ಪ್ರವೇಶ

ಈ ಅಧ್ಯಾಯದಲ್ಲಿ ಸಿದ್ದಿಗಳ ಚಾರಿತ್ರಿಕ ಹಿನ್ನೆಲೆ ಹಾಗೂ ಮೂಲ, ಆಫ್ರಿಕಾದಲ್ಲಿನ ಅವರ ಸರಳ, ಸುಂದರ, ಸ್ವತಂತ್ರ ಜೀವನ ಮತ್ತು ಸಂಸ್ಕೃತಿ ಕುರಿತು ಚರ್ಚಿಸಿದ್ದೇನೆ. ಯುರೋಪಿನ ಕೈಗಾರಿಕಾ ಕ್ರಾಂತಿ, ಬೃಹತ್ ಪ್ರಮಾಣದ ಉತ್ಪಾದನೆ ಮತ್ತು ಮಾರಾಟಕ್ಕಾಗಿ ಹೊಸ ಖಂಡಗಳ ಅನ್ವೇಷಣೆ, ಕಗ್ಗತ್ತಲ ಖಂಡಕ್ಕೆ ಅರಬ್ ಮತ್ತು ಯುರೋಪಿಯನ್ನರ ಲಗ್ಗೆ, ಮನುಕುಲದ ಅಮಾನುಷ ಕೃತ್ಯವಾದ ವರ್ಣಭೇದ, ಗುಲಾಮಗಿರಿ ಇತ್ಯಾದಿಗಳನ್ನು ಚರ್ಚಿಸಲಾಗಿದೆ. ಅಲ್ಲದೆ ಗುಲಾಮರ ಭಯಾನಕ ಖಂಡಾಂತರ ಪಯಣ, ಮಾರಾಟ ಮತ್ತು ಶೋಷಣೆ, ಗುಲಾಮಗಿರಿ ನಿಷೇಧದ ಪರಿಣಾಮವಾಗಿ ಉಂಟಾದ ವಿಚಿತ್ರ ಸಾಮಾಜಿಕ ಪರಿಸ್ಥಿತಿ, ಏಕಾಂಗಿತನ, ಇವೆಲ್ಲವುಗಳಿಂದ ಛಿದ್ರಗೊಂಡ ಸಂಸ್ಕೃತಿ ಇತ್ಯಾದಿಗಳ ವಿವರಣೆ ಮತ್ತು ವಿಶ್ಲೇಷಣೆಗಳನ್ನು ನೀಡಲಾಗಿದೆ. ಜೊತೆಗೆ ಆಫ್ರಿಕನ್ ಮತ್ತು ಭಾರತೀಯ ಗುಲಾಮರ ನಡುವೆ ಇರುವ ವೈರುಧ್ಯಗಳ ಚಿಂತನೆಯನ್ನೂ ಮಾಡಲಾಗಿದೆ. ಒಟ್ಟಾರೆಯಾಗಿ ಭಾರತೀಯ ಸಿದ್ದಿಗಳ ಅಧ್ಯಯನಕ್ಕೆ ವೇದಿಕೆಯಾಗಿ ಅವರ ಮೂಲ, ಗುಲಾಮಗಿರಿಗೆ ಕಾರಣವಾದ ಅಂಶಗಳು ಮತ್ತು ಸಂಸ್ಕೃತಿ ಇತ್ಯಾದಿಗಳನ್ನು ಈ ಅಧ್ಯಾಯದಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ. ಏಕೆಂದರೆ ಒಂದು ಸಮುದಾಯದ ಸ್ವಭಾವ, ಅವರ ಸಾಮಾಜಿಕ, ಆರ್ಥಿಕ, ಪರಿಸ್ಥಿತಿಗೆ, ಅವರ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ ಕಾರಣವಾಗಿದ್ದು, ಇದನ್ನರಿಯದೆ ಆ ಸಮುದಾಯವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಹೀಗಾಗಿ ಸಿದ್ದಿ ಸಮುದಾಯದ ಚಾರಿತ್ರಿಕ ಒಳನೋಟ ಹಾಗೂ ಒಳತೋಟಿಗಳನ್ನು ಈ ಅಧ್ಯಾಯದಲ್ಲಿ ಪ್ರತಿಬಿಂಬಿಸಲಾಗಿದೆ.

೧. ಮೂಲ, ಗುಲಾಮಗಿರಿ ಮತ್ತು ಖಂಡಾಂತರ ಪಯಣ: ಚಾರಿತ್ರಿಕ ನೋಟ

ಹದಿನಾಲ್ಕು ಮಿಲಿಯನ್ ವರ್ಷಗಳ ಹಿಂದೆ ಬಿಗ್‌ಬ್ಯಾಂಗ್ ಮಹಾಸ್ಫೋಟದ ನಂತರದ ಅವಧಿಯಲ್ಲಿ ಜೀವಿಗಳ ಉಗಮ ಮತ್ತು ವಿಕಾಸದ ಇತಿಹಾಸದಲ್ಲಿ ಮಾನವ ಪ್ರಾಣಿಯ ಉಗಮ ತೀರ ಇತ್ತೀಚಿನ ಒಂದು ಪ್ರಮುಖ ಹಂತವಾಗಿದ್ದು ಅವನ ಮೊದಲ ಹೆಜ್ಜೆ ಆಫ್ರಿಕಾ ಖಂಡದಿಂದಲೇ ಆರಂಭವಾಗಿತ್ತೆಂದು ನಂಬಲಾಗುತ್ತಿದೆ. ಹೀಗೆ ಮನುಕುಲದ ಜೋಳಿಗೆ, ನಾಗರಿಕತೆಯ ತೊಟ್ಟಿಲು, ವನ್ಯಜೀವಿ ಮತ್ತು ಬುಡಕಟ್ಟುಗಳ ಸ್ವರ್ಗ, ನೈಸರ್ಗಿಕ ಸಂಪನ್ಮೂಲಗಳ ನಿಧಿ, ಪಿರಮಿಡ್ ಮತ್ತು ಸ್ಫಿಂಕ್ಸ್‌ಗಳ ಮಹಾನ್ ತಾಂತ್ರಿಕತೆಯ ನೆಲೆಯಾದ ಆಫ್ರಿಕಾ ಖಂಡವನ್ನು ಯಾರು 'ಕಗ್ಗತ್ತಲ ಖಂಡ'ವೆಂದು ಕರೆದರೋ ತಿಳಿಯದು. ಕೇವಲ ಯುರೋಪಿಯನ್ನರು ಸುಲಭವಾಗಿ ಅನ್ವೇಷಿಸಲು ಸಾಧ್ಯವಾಗಲಿಲ್ಲ, ಅವರ ಹಿಡಿತಕ್ಕೆ ದಕ್ಕಲಿಲ್ಲ ಎಂಬ ಕಾರಣಕ್ಕೆ ಅದನ್ನು ಹೀಗೆ ಕರೆದಿರಬಹುದಾದರೂ ಇದರ ಹಿಂದೆ ಯುರೋಪಿಯನ್ನರ ವಸಾಹತುಶಾಹಿ, ಮೇಲರಿಮೆಯ ಮನೋಭಾವವೂ ಕಾರಣವಾಗಿರಬಹುದು.

ಭೂಮಧ್ಯ ರೇಖೆಯ ಅಕ್ಕಪಕ್ಕ ಹರಡಿಕೊಂಡಿರುವ ಈ ಖಂಡದ ಅರ್ಧಭಾಗ ಮಳೆಯನ್ನೇ ಕಾಣದ ಅತಿದೊಡ್ಡ ಸಹರಾ ಮರುಭೂಮಿಯನ್ನು ಹೊಂದಿದ್ದರೆ, ಇನ್ನರ್ಧ ಅತಿ ಹೆಚ್ಚು ಮಳೆ ಬೀಳುವ ದಟ್ಟವಾದ ನಿತ್ಯ ಹರಿದ್ವರ್ಣ ಕಾಡನ್ನು ಮತ್ತು ಹಿಮಾಚ್ಛಾದಿತ ಕಿಲಿಮಾಂಜರೋ ಪರ್ವತವನ್ನೂ ಹೊಂದಿದೆ. ಬಿಸಿಲುಕ್ಕುವ ಮರಳುಗಾಡಿನ ನಡುವೆ ಹರಿಯುವ ನೈಲ್ ನದಿ ಹಸಿರುಕ್ಕಿಸಿ ಈಜಿಪ್ಟ್ ಮುಂತಾದ ದೇಶಗಳಿಗೆ ವರಪ್ರಸಾದವಾಗಿದೆಯಲ್ಲದೆ ನಾಗರಿಕತೆಗಳ ಹುಟ್ಟು ಬೆಳವಣಿಗೆಗಳಿಗೆ ಆಧಾರವಾಗಿದೆ. ವಿಶ್ವದ ಅತಿಹೆಚ್ಚು ಬುಡಕಟ್ಟುಗಳನ್ನು ಹೊಂದಿರುವ ಆಫ್ರಿಕಾ ಖಂಡ ಮಧ್ಯಯುಗದಲ್ಲಿ ಬೇಟೆ ಮತ್ತು ಆಹಾರ ಸಂಗ್ರಹಣೆಯ ಅರ್ಥಿಕತೆಯನ್ನೇ ಅವಲಂಬಿಸಿತ್ತು. ಬಹುಶಃ ಜನರಿಗಿಂತಲೂ ಹೆಚ್ಚಿನ ವನ್ಯಪ್ರಾಣಿಗಳನ್ನು ಹೊಂದಿರುವ ಈ ಖಂಡದ ಜನ ಮೊದಲಿನಿಂದಲೂ ಪ್ರಕೃತಿಪ್ರಿಯರು. ಕಲೆ, ಸಂಗೀತ, ನೃತ್ಯ, ಶಾಂತಿ ಇತ್ಯಾದಿಗಳನ್ನು ಆರಾಧಿಸುತ್ತಿದ್ದವರು. ಹಣದ, ಆಸ್ತಿಯ, ನಾಳಿನ ಚಿಂತೆ ಇಲ್ಲದೆ ಅಂದಂದಿನ ಜೀವನವನ್ನು ಆನಂದಿಸುತ್ತಾ ಮೋಸ, ವಂಚನೆ, ದ್ವೇಷಗಳಿಲ್ಲದ ಈ ಜನಾಂಗ ನಂತರ ಅದೇಕೋ ವಿಸ್ಮೃತಿಗೆ ಒಳಗಾದಂತೆ ಅವನತಿಯ ಹಾದಿ ಹಿಡಿಯಿತು. ಚಿಕ್ಕಚಿಕ್ಕ ಬುಡಕಟ್ಟು ಮುಖಂಡರ ಅಧೀನದಲ್ಲಿ ಭೌಗೋಳಿಕವಾಗಿ ಹರಿದು ಹಂಚಿಹೋಗಿದ್ದ ಇಡೀ ಖಂಡ ಬುಡಕಟ್ಟುಗಳ ನಡುವಿನ ಒಳಜಗಳಗಳಿಂದ ಜರ್ಜರಿತವಾಗಿ ಹೋಗಿತ್ತು. ಅನಿಶ್ಚಿತ ಬೇಟೆ, ನಿಶ್ಚಿತ ಆದಾಯವಿಲ್ಲದ ಅರಣ್ಯಉತ್ಪನ್ನಗಳ ಸಂಗ್ರಹ, ಪದೇಪದೇ ಅತಿವೃಷ್ಟಿ ಅನಾವೃಷ್ಟಿಯಿಂದ ನರಳುತ್ತಿದ್ದ ಹಿಂದುಳಿದ ಬೇಸಾಯ, ಪರ್ಯಾಯ ಆದಾಯ ಮೂಲಗಳಿಲ್ಲದ, ದೈಹಿಕವಾಗಿ ಬಲಾಢ್ಯರಾದರೂ ಮುಗ್ಧರಾದ, ಸಂಪ್ರದಾಯವಾದಿಗಳಾದ 'ಈ ಜನರು ತಾವು ಕಷ್ಟಪಟ್ಟು ಗಳಿಸಿದ್ದರಲ್ಲಿಯೇ ಹೆಚ್ಚಿನ ಭಾಗವನ್ನು ಬುಡಕಟ್ಟು ಮುಖಂಡರಿಗೆ ಕಾಣಿಕೆಯಾಗಿ ನೀಡಲೇಬೇಕಾದ ಅನಿವಾರ್ಯತೆಯಲ್ಲಿದ್ದರು. ಅರಬ್ಬರು ಹಾಗೂ ಯುರೋಪಿಯನ್ನರಿ

ಗಿಂತಲೂ ಮೊದಲೇ ಆಫ್ರಿಕಾದಲ್ಲಿ ಒಂದು ಬಗೆಯ ಗುಲಾಮಗಿರಿ ಅಸ್ತಿತ್ವದಲ್ಲಿತ್ತು. ಬರಗಾಲದಲ್ಲಿ ಬದುಕು ದುಸ್ತರವಾದಾಗ, ಆಹಾರಕ್ಕಾಗಿ ಜನ ತಮ್ಮನ್ನು ತಾವೇ ಗುಲಾಮರನ್ನಾಗಿ ಮಾರಾಟಮಾಡಿ ಕೊಳ್ಳುತ್ತಿದ್ದರು."[1] ತದನಂತರ, ಯುರೊಪಿಯನ್ನರ ಆಗಮನದೊಂದಿಗೆ ತಂಬಾಕು, ಅಫೀಮು, ಸಾಂಕ್ರಾಮಿಕ ರೋಗಗಳು, ಗನ್ನು, ಹಣ, ಮೋಸ, ವಂಚನೆ, ಗುಲಾಮಗಿರಿಯ ಹಿಂಸೆಗಳೂ ಆಗಮನವಾದವು.

ಭೂಪಟ: ಆಫ್ರಿಕಾ ಖಂಡ ಮತ್ತು ಗುಲಾಮ ವ್ಯಾಪಾರದ ಮಾರ್ಗಗಳು

(ಮೂಲ: ವಿಕಿಪೀಡಿಯಾ, ಅಂತರ್ಜಾಲ)



'ಕೈಗಾರಿಕಾ ಕ್ರಾಂತಿಯ ನಂತರ ಯುರೋಪ್‌ನಲ್ಲಿ ರಬ್ಬರ್‌ಗೆ ಬೇಡಿಕೆ ಹೆಚ್ಚಾದಾಗ ಅವರ ಕಣ್ಣು ಆಫ್ರಿಕಾದಲ್ಲಿನ ಕಾಂಗೋದ ನೈಸರ್ಗಿಕ ರಬ್ಬರ್ ಕಾಡುಗಳ ಮೇಲೆ ಬಿತ್ತು. ಕಾಂಗೋದಲ್ಲಿ ರಬ್ಬರ್‌ಗಾಗಿ(ಇದನ್ನು ಕಾಂಗೋದ ಶಾಪ(Curse of Congo) ಎಂದೂ ಕರೆಯಲಾಗುತ್ತದೆ) ಯುರೋಪಿನ ಬೆಲ್ಜಿಯಂ ದೇಶದ ದೊರೆ ಲಿಯೋಪಾಲ್ಡ್ ನಡೆಸಿದ ನರಮೇಧ, ಅಲ್ಲಿಯ ಜನರನ್ನೇ ಗುಲಾಮರನ್ನಾಗಿಸಿ, ರಬ್ಬರ್ ತೋಟಗಳಲ್ಲಿ ದುಡಿಸಿ, ತಾನು ಹೇಳಿದಷ್ಟು ರಬ್ಬರ್ ಸಂಗ್ರಹಿಸಲಾಗದ ಸಾವಿರಾರು ಜನರ ಬಲಗೈಗಳನ್ನು ಕತ್ತರಿಸಿ, ಪ್ರತಿರೋಧ ಹೆಚ್ಚಾದಾಗ ಅಲ್ಲಿನ ಜನರ ಕೈಗೇ ಬಂದೂಕು ಹಾಗೂ ಪ್ರತಿ ದಿನ ಬೊಗಸೆ ತುಂಬಾ ಬುಲೆಟ್ ನೀಡಿ, ಅವರವರನ್ನೇ ಬೇಟೆಯಾಡುವಂತೆ, ಅದಕ್ಕೆ ಸಾಕ್ಷಿಯಾಗಿ ಸತ್ತವರ ಕೈ ಕಡಿದು ತಂದು ತೋರಿಸುವಂತೆ ತಾಕೀತು ಮಾಡಿ, ನರಮೇಧ ಮಾಡಿಸಿದ ಪರಿ, ಕ್ರೌರ್ಯದ ಪರಮಾವಧಿ ಹಾಗೂ ಮಾನವೀಯತೆಯ ಅಧಃಪತನದ ಪರಾಕಾಷ್ಠೆಯೆಂದೇ ಹೇಳಬಹುದು.'[2] ಕಾಂಗೋ, ದ ಬ್ರೂಟಲ್ ಹಿಸ್ಟರಿ, ಗೂಗಲ್, ಅಂತರ್ಜಾಲದಲ್ಲಿ ಸಿಗುವ ಬಿಬಿಸಿ ನಿರ್ಮಿತ ಈ ಸಾಕ್ಷ್ಯಚಿತ್ರವನ್ನು ನೋಡಿದರೆ ಎಂತಹ ಕಲ್ಲೆದೆಯವರ ಕಣ್ಣಲ್ಲೂ ನೀರು ಬರುವುದು ಖಂಡಿತ. ಇತರ ಖಂಡಗಳಲ್ಲಿ ದೇಶಗಳ ನಡುವಿನ ಗಡಿಗಳು

ಅಂಕುಡೊಂಕಾಗಿದ್ದರೆ ಆಫ್ರಿಕಾದಲ್ಲಿ ಮಾತ್ರ ನೇರವಾಗಿ, ಕೇಕ್ ಕತ್ತರಿಸಿದಂತೆ ಗಡಿಗಳಿರುವುದರ ಹಿಂದೆ, ಒಂದು ಸಮಾವೇಶ ಮಾಡಿ, ಈ ಇಡೀ ಭೂಖಂಡವನ್ನು ಪಿತ್ರಾರ್ಜಿತ ಆಸ್ತಿಯಂತೆ ಹಂಚಿಕೊಂಡ ಯುರೋಪಿಯನ್ ರಾಷ್ಟ್ರಗಳ ಸ್ವಾರ್ಥ, ದುರಾಸೆಗಳ ನೆರಳು ಕಣ್ಣಿಗೆ ರಾಚುತ್ತದೆ.

ನೂರಾರು ಬುಡಕಟ್ಟುಗಳ ನಡುವೆ ಹರಿದು ಹಂಚಿಹೋಗಿದ್ದ ಆಫ್ರಿಕಾದಲ್ಲಿ ಬುಡಕಟ್ಟುಗಳ ನಡುವಿನ ಯುದ್ಧಗಳು ಸಾಮಾನ್ಯವಾಗಿದ್ದು ಮೊದಮೊದಲು ನರಭಕ್ಷಣೆ, ನರಬಲಿ ಅಥವಾ ತಲೆ ಬೇಟೆ(Head hunting)ಗಳಿದ್ದರೂ, ಬರುಬರುತ್ತಾ ಸೋತ ಬುಡಕಟ್ಟುಗಳವರನ್ನು ಗುಲಾಮರನ್ನಾಗಿ ಬಂಧಿಸಿಡುತ್ತಿದ್ದರು. ಇವರನ್ನು ಬಂಧಿಸಿ ಊಟ, ರಕ್ಷಣೆಗಳ ತಾಪತ್ರಯಕ್ಕಿಂತಲೂ, ಪರದೇಶೀಯರಿಗೆ ಮಾರಾಟ ಮಾಡುವುದೇ ಲಾಭದಾಯಕವೆಂದು ಅರಿತುಕೊಂಡ ಬುಡಕಟ್ಟು ರಾಜರುಗಳು, ತಮ್ಮಲ್ಲಿನ ಗುಲಾಮರನ್ನೇ ಅವರಿಗೆ ಮಾರಾಟ ಮಾಡುತ್ತಿದ್ದರು. ಬರುಬರುತ್ತಾ ತಾವೇ ಒಳನಾಡಿಗೆ ದಾಳಿ ಮಾಡಿ ಇಲ್ಲವೇ ಯುರೋಪಿಯನ್ನರಿಗೆ ದಾಳಿ ಮಾಡಲು ನೆರವು ನೀಡಿ ಗುಲಾಮ ವ್ಯಾಪಾರದಿಂದ ಲಾಭ ಮಾಡಿಕೊಳ್ಳತೊಡಗಿದರು. ಆಫ್ರಿಕಾದ ರಾಜ ಅರಬ್ಬರು ಮತ್ತು ಯುರೋಪಿಯನ್ನರು ತಮ್ಮ ನೆಲವನ್ನು ಕಸಿಯಲು ಬಂದಿಲ್ಲ, ಬದಲಾಗಿ ಕೇವಲ ಗುಲಾಮರ ವ್ಯಾಪಾರಕ್ಕಾಗಿ ಬಂದಿದ್ದಾರೆ, ಇವರಿಂದ ಐಶಾರಾಮದ ವಸ್ತುಗಳು, ಹಣ, ಅಪಿಮು, ಮದ್ದು-ಗುಂಡು, ಬಂದೂಕುಗಳು, ದೊರೆಯುತ್ತವೆಂದು ತಿಳಿದಾಗ, ತಾವೇ ಖುದ್ದಾಗಿ ಗುಲಾಮ ವ್ಯಾಪಾರವನ್ನು ಕಾನೂನುಬದ್ಧಗೊಳಿಸಿದರು.

ಇದು ಮಧ್ಯಯುಗೀನ ಆಫ್ರಿಕಾದ ಕಥೆಯಾದರೆ ಇತ್ತ ಇದೇ ಸಮಯದಲ್ಲಿ ಯುರೋಪ್‌ನಲ್ಲಿ ಬದಲಾವಣೆಯ ಸಂಕ್ರಮಣ ಕಾಲ. 'ಪುನರುಜ್ಜೀವನ' ಎಂದೇ ಹೆಸರಾದ ಈ ಕಾಲಘಟ್ಟದಲ್ಲಿ ಕಲೆ, ಸಾಹಿತ್ಯ, ಧರ್ಮ, ಆರ್ಥಿಕ, ರಾಜಕೀಯ, ವೈಜ್ಞಾನಿಕ, ಸಾಮಾಜಿಕ ಇತ್ಯಾದಿ ಎಲ್ಲ ರಂಗಗಳಲ್ಲೂ ಕ್ಷಿಪ್ರ ಮತ್ತು ಕ್ರಾಂತಿಕಾರಕ ಬದಲಾವಣೆಗಳಾದವು. ಕಗ್ಗತ್ತಲಲ್ಲಿದ್ದ ಯುರೋಪ್ ತನ್ನೆಲ್ಲ ತಾಮಸವನ್ನು ಕೊಡವಿಕೊಂಡು ಪುನರುತ್ಥಾನದೆಡೆಗೆ ಮುಖ ಮಾಡಿತ್ತು. ವೈಜ್ಞಾನಿಕ ಕ್ಷೇತ್ರದಲ್ಲಿ ಸ್ಪಿನ್ನಿಂಗ್ ಜೆನ್ನಿ, ಸ್ಟೀಮ್ ಎಂಜಿನ್ ಇತ್ಯಾದಿಗಳ ಆವಿಷ್ಕಾರದಿಂದ ಬೃಹತ್ ಪ್ರಮಾಣದ ಉತ್ಪಾದನೆಯ ಕಾರ್ಖಾನೆ ವ್ಯವಸ್ಥೆ ಆರಂಭವಾಗಿತ್ತು. ಯುರೋಪಿನ ರಾಷ್ಟ್ರಗಳಾದ ಜರ್ಮನಿ, ಇಂಗ್ಲೆಂಡ್, ಫ್ರಾನ್ಸ್‌ಗಳ ನಡುವೆ, ಹೊಸ ಹೊಸ ಆವಿಷ್ಕಾರ, ಕಚ್ಚಾಸರಕು, ಉತ್ಪಾದನೆ ಮತ್ತು ಮಾರುಕಟ್ಟೆಗಳಿಗಾಗಿ ತೀವ್ರ ಪೈಪೋಟಿ ಉಂಟಾಗಿತ್ತು. ಈ ಮಧ್ಯೆ ಯುರೋಪ್ ಮತ್ತು ತುರ್ಕಿಗಳ ವೈರತ್ವ ಉತ್ತುಂಗಕ್ಕೇರಿ ಪ್ರಮುಖ ವ್ಯಾಪಾರಿ ಕೇಂದ್ರವೂ, ಪೌರ್ವಾತ್ಯ ದೇಶಗಳ ವ್ಯಾಪಾರಕ್ಕೆ ಹೆಬ್ಬಾಗಿಲು ಎಂದೇ ಪ್ರಖ್ಯಾತವಾಗಿದ್ದ 'ಕಾನ್ಸ್ಟಾಂಟಿನೋಪಲ್' ತುರ್ಕಿಯ ಪಾಲಾಗಿತ್ತು. ಇದು ಯುರೋಪಿಯನ್ನರು ಭಾರತ ಮತ್ತು ಚೀನಾ ದೇಶಗಳೊಂದಿಗೆ ಹೊಂದಿದ್ದ ರೇಷ್ಮೆ, ಸಂಬಾರಗಳ ವ್ಯಾಪಾರಕ್ಕೆ ದೊಡ್ಡ ಹೊಡೆತ ನೀಡಿತು. ಒಂದೆಡೆ ಬೃಹತ್ ಕಾರ್ಖಾನೆಗಳ ಹೊಟ್ಟೆಗೆ ಹೆಚ್ಚುತ್ತಿರುವ ಅಗ್ಗದ ಕಚ್ಚಾಸರಕುಗಳ, ಕೂಲಿಕಾರರ ಬೇಡಿಕೆ, ಇನ್ನೊಂದೆಡೆ ಉತ್ಪಾದಿತ ಸರಕುಗಳಿಗೆ ಮಾರುಕಟ್ಟೆಯ ಬೇಡಿಕೆ ಇತ್ಯಾದಿಗಳೆಲ್ಲ ಸೇರಿ ಭಾರತಕ್ಕೆ ಜಲಮಾರ್ಗವನ್ನಾದರೂ ಹುಡುಕದಿದ್ದರೆ ಭಾರೀ ಬಂಡವಾಳ ಹೂಡಿ ಸ್ಥಾಪಿಸಿದ

ಕಾರ್ಖಾನೆಗಳೆಲ್ಲ ಮುಚ್ಚಿಹೋಗುವ, ನಿರುದ್ಯೋಗದ ಭಯ ಹೆಚ್ಚಾಗಿತ್ತು. ಹೀಗಾಗಿ ಸ್ಪೈನ್, ಪೋರ್ಚುಗಲ್, ಬ್ರಿಟನ್, ಹಾಲೆಂಡ್ ಇತ್ಯಾದಿ ದೇಶಗಳು ಪೈಪೋಟಿಗೆ ಬಿದ್ದು ಭಾರತಕ್ಕೆ ಜಲಮಾರ್ಗದ ಅನ್ವೇಷಣೆಯಲ್ಲಿ ತೊಡಗಿದವು. ಹೀಗೊಮ್ಮೆ ದಾರಿ ತಪ್ಪಿದ ಕೊಲಂಬಸ್ ಅಮೆರಿಕಾ ಖಂಡದ ಅನ್ವೇಷಣೆಗೆ ಮುನ್ನುಡಿ ಬರೆದ. ಕೊನೆಗೆ ವಾಸ್ಕೋಡಗಾಮ ಭಾರತಕ್ಕೆ ಮಾರ್ಗ ಕಂಡುಹಿಡಿಯುವಲ್ಲಿ ಯಶಸ್ವಿಯಾದನಲ್ಲದೆ ವಸಾಹತುಶಾಹಿ ಸಾಮ್ರಾಜ್ಯ ಸ್ಥಾಪನೆ, ಗುಲಾಮಗಿರಿಗಳಿಗೂ ಹೊಸ ಮಾರ್ಗ ಹುಡುಕುವಲ್ಲಿ ಯಶಸ್ವಿಯಾದನು.

'ಭಾರತಕ್ಕೆ ಮೊದಲು ಬಂದು ವಸಾಹತು ಸ್ಥಾಪಿಸಿದವರೆಂದರೆ ಪೋರ್ಚುಗೀಸರು. ೧೪೫೩ರ ಕಾನ್‌ಸ್ಟಾಂಟಿನೋಪಲ್(ಇಸ್ತಾನ್‌ಬುಲ್) ಪತನದ ನಂತರ ಐರೋಪ್ಯ ರಾಷ್ಟ್ರಗಳು ಭಾರತಕ್ಕೆ ಜಲ ಮಾರ್ಗ ಶೋಧಿಸಲು ಆರಂಭಿಸಿದಾಗ ವಾಸ್ಕೋಡಗಾಮ ೧೪೯೮ರಲ್ಲಿ ಯಶಸ್ವಿಯಾದನು. ನಂತರ ೧೫೧೦ರಲ್ಲಿ ಬಹುಮನಿ ವಶದಲ್ಲಿದ್ದ ಗೋವೆಯನ್ನು ವಿಜಯನಗರದ ಸಹಾಯದಿಂದ ಪೋರ್ಚುಗೀಸರು ವಶಪಡಿಸಿಕೊಂಡರು. ಅಕ್ಕಿ, ಕಾಳುಮೆಣಸು, ಏಲಕ್ಕಿ, ಕಬ್ಬಿಣದ ಅದಿರು, ಪೆಟ್ಲುಪ್ಪು, ಹತ್ತಿ ಬಟ್ಟೆ ಮುಂತಾದವುಗಳನ್ನು ಯುರೋಪ್‌ಗೆ ಸಾಗಿಸಿ ಅರಬ್ ಕುದುರೆಗಳು, ಆಲೂಗಡ್ಡೆ, ಶೇಂಗಾ, ತಂಬಾಕು ಮತ್ತು ಗುಲಾಮರನ್ನು ಭಾರತಕ್ಕೆ ತಂದು ಮಾರಲಾಗುತ್ತಿತ್ತು.'[೩]

'ಆವಿಷ್ಕಾರಗೊಳ್ಳುತ್ತಿದ್ದ ಹೊಸ ಖಂಡಗಳಲ್ಲಿ ದೊರೆಯುವ ಕಚ್ಚಾವಸ್ತುಗಳು, ಇತರ ಸಂಪನ್ಮೂಲಗಳನ್ನು ಅಧ್ಯಯನ ನಡೆಸಿದ ಮೇಲೆ ಅವುಗಳ ಬಳಕೆಗೆ ತಕ್ಕ ತಂತ್ರಗಾರಿಕೆಯನ್ನು ಸಮ್ರಾಜ್ಯಶಾಹಿಗಳು ರೂಪಿಸುತ್ತಿದ್ದರು. ಇದೇ ಸಿದ್ಧಾಂತದ ಹಿನ್ನೆಲೆಯಲ್ಲಿ ಆಗಲಷ್ಟೇ ಬೆಳಕಿಗೆ ಬಂದಿದ್ದ ಅಮೆರಿಕ, ವೆಸ್ಟ್ ಇಂಡೀಸ್ ದ್ವೀಪಗಳ ಸಹಜ ಸಂಪನ್ಮೂಲವೆಂದರೆ ಅಲ್ಲಿನ ಫಲವತ್ತಾದ ಮಣ್ಣಾಗಿತ್ತು. ಈ ನೆಲ ಅರಳೆ, ಕಬ್ಬು, ತಂಬಾಕು, ಗೋಧಿ, ಬಾರ್ಲಿ ಬೆಳೆಗಳಿಗೆ ಹೇಳಿ ಮಾಡಿಸಿದಂತೆ ಕಂಡವು. ಪರಿಶ್ರಮವೇ ಇಲ್ಲದೆ ಜಾಣ್ಮೆಯ ಮೂಲಕ ಸಂಪನ್ಮೂಲವನ್ನು ನಿಭಾಯಿಸುವುದನ್ನು ಕರಗತ ಮಾಡಿಕೊಂಡಿದ್ದ ಯುರೋಪಿಯನ್ನರು, ಇಲ್ಲಿನ ಸಂಪನ್ಮೂಲವನ್ನು ಸಮರ್ಥವಾಗಿ ಬಳಸಿಕೊಳ್ಳುವ ಬಗೆಯನ್ನು ಚಿಂತಿಸಿದರು. ಈ ವಿಚಾರಸರಣಿಗೆ ಕೊಂಡಿಯಂತೆ ಕೂಡಿಕೊಂಡದ್ದೆಂದರೆ ಗುಲಾಮಿ ವ್ಯಾಪಾರ. ಕತ್ತಲೆ ಖಂಡವಾಗಿದ್ದ ಆಫ್ರಿಕಾದಿಂದ ಮಾನವ ಕಚ್ಚಾವಸ್ತುವನ್ನು ಸಾಗಿಸಿದರೆ, ಸಹಜ ಸಂಪನ್ಮೂಲವನ್ನು ಬಳಸಿ ಅಪಾರ ಲಾಭದಾಯಕ ಉದ್ಯಮವನ್ನು ನಡೆಸಬಹುದೆಂದು ಈ ವಿಶ್ವವ್ಯಾಪಾರಿಗಳು ಗ್ರಹಿಸಿದರು. ಅದಕ್ಕಾಗಿ ಆಫ್ರಿಕಾ ಹಾಗೂ ಏಷ್ಯಾ ಉಪಖಂಡದಿಂದ ಗುಲಾಮರನ್ನು ಹೊಸ ಖಂಡ, ಅಮೆರಿಕಕ್ಕೆ ಒತ್ತಾಯದಿಂದ ಎತ್ತಿಹಾಕಿಕೊಂಡು ಹೋಗಲಾಯಿತು.'[೪] ಆಫ್ರಿಕಾದ ವಿಪುಲ ಮಾನವ ಮತ್ತು ಪ್ರಾಕೃತಿಕ ಸಂಪನ್ಮೂಲಗಳೇ ಅದಕ್ಕೆ ಶಾಪವಾದದ್ದೊಂದು ವಿಪರ್ಯಾಸವೇ ಸರಿ. ತನ್ನ ತಾರ್ಕಿಕ ಶಕ್ತಿಯಿಂದ ಮನುಷ್ಯ ಪ್ರಾಣಿಗಳನ್ನು ಪಳಗಿಸಿಕೊಂಡಂತೆ ತನ್ನ ಆಯುಧ, ಬುದ್ಧಿಶಕ್ತಿ, ಸ್ವಾರ್ಥದಿಂದ ತನ್ನಂತೆಯೇ ಇರುವ ಮನುಷ್ಯರನ್ನೂ ಅವನು ಪಳಗಿಸಿ ಗುಲಾಮರನ್ನಾಗಿಸಿ ಕೊಳ್ಳತೊಡಗಿದ. ಆದರೆ ಮಾತುಬಾರದ ಮೂಕಪ್ರಾಣಿಗಳಿಗೆ ತೋರಿಸಿದ ದಯೆಯ ಕಿಂಚಿತ್ತು ಪಾಲನ್ನೂ ತನ್ನಂತೆಯೇ ಇರುವ ಸಾಟಿ ಮನುಷ್ಯರಿಗೆ ತೋರಿಸಲಾರದಷ್ಟು ಕ್ರೂರಿಯಾದ.

ಅಮೆರಿಕದಲ್ಲಿ ಉತ್ಪಾದನೆ ಇನ್ನೂ ಆರಂಭಿಕ ಹಂತದಲ್ಲಿದ್ದರೂ ಭಾರತದಲ್ಲಿ ಕೃಷಿ, ಕೈಗಾರಿಕೆಗಳು ಉನ್ನತಾವಸ್ಥೆಯನ್ನು ಮುಟ್ಟಿದ್ದು ಸಾಂಬಾರ ದಿನಸಿಗಳು, ಮಸ್ಲಿನ್, ಹತ್ತಿ ಬಟ್ಟೆಗಳು, ಆಭರಣಗಳು, ಕರಕುಶಲ ವಸ್ತುಗಳು, ತಂಬಾಕು ಇನ್ನಿತರ ಸಾಮಗ್ರಿಗಳು ಹೇರಳವಾಗಿ, ಕಡಿಮೆ ಬೆಲೆಗೆ ದೊರಕುತ್ತಿದ್ದರಿಂದ ಯುರೋಪಿಯನ್ನರು ಮತ್ತು ಅರಬ್ಬರಿಗೆ ವಿನಿಮಯ ಮಾಡಿಕೊಳ್ಳಲು ಇವಕ್ಕಿಂತಲೂ ಉತ್ಕೃಷ್ಟ ವಸ್ತುಗಳು ಇಲ್ಲದ್ದರಿಂದ ತುಪಾಕಿ, ಮದ್ದು, ಗುಂಡು, ಉಣ್ಣೆ ಬಟ್ಟೆ, ಕುದುರೆಗಳ ವ್ಯಾಪಾರಕ್ಕಿಂತಲೂ ಗುಲಾಮರ ವ್ಯಾಪಾರವೇ ಅವರಿಗೆ ಅತ್ಯಂತ ಲಾಭದಾಯಕವಾಗಿ ಕಂಡುಬಂತು.

'ಬಹುಶಃ ಕ್ರಿ.ಶ. ೧೪೦೦ರಲ್ಲಿ ಆರಂಭವಾದ, ಮನುಕುಲದ ಕಳಂಕವಾದ ಈ ಗುಲಾಮ ವ್ಯಾಪಾರ ೧೯೦೦ವರೆಗೂ ಮುಂದುವರೆಯಿತು. ೧೪೧೬ರಲ್ಲಿ ಹಲವು ಹಡಗುಗಳನ್ನು ಗುಲಾಮರನ್ನು ತರಲು ಕಳಿಸಿದ ಪೋರ್ಚುಗಲ್‌ನ ರಾಜಕುಮಾರ ಪ್ರಿನ್ಸ್ ಹೆನ್ರಿ ೧೪೪೮ರಲ್ಲಿ ಗೋಲ್ಡ್ ಕೋಸ್ಟ್ ನಲ್ಲಿ(ಇಂದಿನ ಘಾನಾ) ಈ ನೀಚ ಕಾರ್ಯಕ್ಕಾಗಿಯೇ ಎಲ್ಮಿನಾ ಕೋಟೆಯನ್ನು ಕಟ್ಟಿಸಿದನು. ಇದು ಮುಂದೆ ಅಮೆರಿಕದ ಗುಲಾಮ ವ್ಯಾಪಾರಕ್ಕೆ ನಾಂದಿಯಾಯಿತು. ಮೊದಮೊದಲು ಅರಬ್ಬರು, ಡಚ್ಚರು, ಪೋರ್ಚುಗೀಸರು ಗುಲಾಮಿ ವ್ಯಾಪಾರವನ್ನು ಆರಂಭಿಸಿದರೂ ಇಂಗ್ಲೆಂಡ್ ರಾಯಲ್ ಆಫ್ರಿಕನ್ ಕಂಪನಿಯನ್ನು ಆರಂಭಿಸಿದ ಮೇಲೆ ಗುಲಾಮ ವ್ಯಾಪಾರದ ಮೇಲೆ ಹಿಡಿತ ಸಾಧಿಸಿತಲ್ಲದೆ ಸ್ಪೈನ್ ಕೂಡ ಯೂಟ್ರೆಕ್ಸ್ ಒಪ್ಪಂದದ ಮೂಲಕ ಗುಲಾಮ ವ್ಯಾಪಾರವನ್ನು ಇಂಗ್ಲೆಂಡ್‌ಗೆ ಬಿಟ್ಟುಕೊಟ್ಟ ಮೇಲೆ ಅಬಾಧಿತವಾಗಿ ಮುಂದುವರೆಸಿತು.'[೫]

ಗುಲಾಮರನ್ನು ಹೇಗೆ ಹಿಡಿಯುತ್ತಿದ್ದರು? ಅಮಾನವೀಯತೆ, ಲಾಭದ ದುರಾಸೆ ಮತ್ತು ಬಂದೂಕುಗಳ ಈ ಭಯಾನಕ ಸಂಯೋಜನೆ ಹೇಗೆ ಒಂದಿಡೀ ಖಂಡವನ್ನೇ ತನ್ನ ಕಾಲಡಿಯಲ್ಲಿ ಹೊಸಕಿಹಾಕಿತು ಎಂಬ ಚಿತ್ರಣವನ್ನು ಈ ಕೆಳಗಿನ ಘಟನೆ ಸೂಚಿಸುತ್ತದೆ.

ಲಿವಿಂಗ್ ಸ್ಟೋನ್ ದಾಖಲಿಸಿರುವಂತೆ ಅದೊಂದು ಉರಿಬಿಸಿಲಿನ ದಿನ. ನಾನು ಸಂತೆ ನಡೆಯುವ ಮೈದಾನದತ್ತ ಹೋದೆ. ಆಫ್ರಿಕಾದ ಅನೇಕ ಜನಾಂಗಗಳ ಜನ ಪ್ರತಿವಾರ ವ್ಯಾಪಾರಕ್ಕಾಗಿ ಅಲ್ಲಿಗೆ ಬರುತ್ತಿದ್ದರು. ಅಲ್ಲಿ ಸಾಮಾನ್ಯವಾಗಿ ಯಾರೂ ಆಯುಧಗಳನ್ನು ತರುತ್ತಿರಲಿಲ್ಲವಾದರೂ ಅಂದು ದುಗುಂಬೇ ಜೊತೆ ಬಂದಿದ್ದ ಮೂವರು ಅಪರಿಚಿತರು ಬಂದೂಕುಗಳನ್ನು ಹೆಗಲಿಗೆ ನೇತುಹಾಕಿಕೊಂಡು ಠಳಾಯಿಸುತ್ತಿದ್ದದ್ದನ್ನು ಕಂಡು ಬಹುಶಃ ತಿಳಿಯದೆ ಇವರು ಆಯುಧಗಳನ್ನು ತಂದಿರಬೇಕೆಂದುಕೊಂಡೆ. ಅವರಲ್ಲೊಬ್ಬ ಆಫ್ರಿಕನ್ನನಿಂದ ಕೋಳಿಯನ್ನು ಕಿತ್ತುಕೊಳ್ಳಲು ಪ್ರಯತ್ನಿಸುತ್ತಿದ್ದ. ಅಷ್ಟರಲ್ಲಿ ಗುಂಪಿನಿಂದ ಢಮಾರ್ ಢಮಾರ್ ಎಂದು ಗುಂಡುಗಳು ಹಾರಿದ ಸದ್ದು ಕೇಳಿಸಿತು. ಆಫ್ರಿಕನ್ನರು ತಮ್ಮ ಸಾಮಾನುಗಳನ್ನೆಲ್ಲಾ ಅಲ್ಲಲ್ಲೇ ಎಸೆದು ದಿಕ್ಕಾಪಾಲಾಗಿ ಓಡತೊಡಗಿದರು. ಅನೇಕರು ಪಕ್ಕದಲ್ಲೇ ಹರಿಯುತ್ತಿದ್ದ ಲುಲುಬಾ ನದಿಯತ್ತ ಓಡಿದರು. ಅಷ್ಟರಲ್ಲೇ ಗುಂಡಿನ ಸುರಿಮಳೆಯಾಗಿ ಹೆಂಗಸರು ಮಕ್ಕಳು ನೆಲಕ್ಕುರುಳಿ ವಿಲಿವಿಲಿ ಒದ್ದಾಡತೊಡಗಿದರು. ಸಿಕ್ಕಿದ ದೋಣಿಗಳನ್ನು ಹತ್ತಿ ಪಾರಾಗಲು ಯತ್ನಿಸಿದವರ ಮೇಲೂ ಗುಂಡಿನ ಸುರಿಮಳೆಯಾಗತೊಡಗಿ,

ಆ ದೋಣಿಗಳೆಲ್ಲಾ ಒಂದೊಂದಾಗಿ ಮುಳುಗತೊಡಗಿದವು. ಸುಮಾರು ಒಂದು ಮೈಲಿ ವಿಸ್ತಾರದ ಆ ನದಿ ಕೆಲವೇ ಕ್ಷಣಗಳಲ್ಲಿ ಮುಳುಗುವವರ, ತೇಲುವವರ, ಸಾಯುವವರ ಆಕ್ರಂದನಗಳಿಂದ ತುಂಬಿಹೋಯಿತು. ನದಿಯ ತುಂಬೆಲ್ಲಾ ಹೆಣಗಳು ಕೊಚ್ಚಿಹೋಗುವುದೇ ಕಾಣತೊಡಗಿತು. ಇದಾದ ನಂತರ ಧೂರ್ತ ವ್ಯಾಪಾರಿಗಳು ಅಕ್ಕಪಕ್ಕದ ಹಳ್ಳಿಗಳ ಮೇಲೆರಗಿ ಗುಂಡು ಹಾರಿಸುತ್ತಾ, ಕೈಗೆ ಸಿಕ್ಕಿದವರನ್ನು ಹೆಡೆಮುರಿಕಟ್ಟಿ ಎಳೆದೊಯ್ಯತೊಡಗಿದರು. ಈ ವರದಿಯನ್ನು ನಾನಿಲ್ಲಿ ಬರೆಯುತ್ತಿರಬೇಕಾದರೂ ದೂರದ ಹಳ್ಳಿಗಳ ಬಳಿ ಈ ಗುಲಾಮ ವ್ಯಾಪಾರಿಗಳು ಹಾರಿಸುತ್ತಿರುವ ಗುಂಡುಗಳ ಸದ್ದು, ಹಳ್ಳಿಗರ ಚೀತ್ಕಾರಗಳು ಕೇಳಿಸುತ್ತಿವೆ. 'ಓ ದೇವರೇ, ಈ ಕಗ್ಗತ್ತಲ ನಾಡೊಳಗಿನ ಕರಾಳ ಕೃತ್ಯಗಳನ್ನೆಂದು ಕೊನೆ ಮಾಡುವೆ? ಲುಲುಬಾ ನದಿ ತೀರದ ಈ ಮುಗ್ಧ ಆಫ್ರಿಕನ್ನರ ಆತ್ಮಗೌರವವನ್ನು ನೀನೇಕೆ ಕಾಪಾಡಲಾರೆ?'[೬]

ಆಫ್ರಿಕನ್ ಹಾಗೂ ಯುರೋಪಿಯನ್ ಅಥವಾ ಅರಬ್ ಸೈನಿಕರು, ನಾಯಿಗಳು, ಬಂದೂಕು, ಭರ್ಜಿ, ಕತ್ತಿ, ಬಲೆಗಳು ಹಗ್ಗಗಳು, ಸರಪಳಿಗಳೊಡನೆ ಆಫ್ರಿಕನ್ ಹಳ್ಳಿಗಳೊಳಗೆ ನುಗ್ಗಿ ಹೆಂಗಸರು, ಮಕ್ಕಳೆನ್ನದೆ ಕೈಗೆ ಸಿಕ್ಕವರನ್ನೆಲ್ಲಾ ಹಿಡಿದು, ಓಡಿಹೋಗುತ್ತಿದ್ದವರನ್ನು ಪ್ರಾಣಿಗಳಂತೆ ಬಲೆ ಹಾಕಿ ಹಿಡಿಯುತ್ತಿದ್ದರು. ಓಡಿ ಹೋಗುತ್ತಿದ್ದವರ ಮೇಲೆ ನಾಯಿಗಳನ್ನು ಛೂ ಬಿಟ್ಟು ಇಲ್ಲವೇ ಗುಂಡಿಟ್ಟು ಸಾಯಿಸುತ್ತಿದ್ದರು. ಹೀಗೆ ಹಿಡಿದವರನ್ನು ಇಬ್ಬಿಬ್ಬರನ್ನಾಗಿ ಮಾಡಿ ಕೈಗಳನ್ನು ಹಿಂದೆ ಕಟ್ಟಿ, ಕುತ್ತಿಗೆಗೆ ಚರ್ಮದ ಪಟ್ಟಿ ಹಾಕಿ, ಅದಕ್ಕೆ ಸಲಾಕೆಗಳನ್ನು ಅಥವಾ ಚೈನ್‌ಗಳನ್ನು ಕಟ್ಟಿ, ಕೂಗಿಕೊಳ್ಳದಂತೆ ಬಾಯಿಗೆ ಚರ್ಮದ ಪಟ್ಟಿಗಳನ್ನು ಕಾಲುಗಳಿಗೂ ಸಲಾಕೆ, ಸರಪಣಿ ಕಟ್ಟಿ, ನಡೆಸಿಕೊಂಡೇ ನೂರಾರು ಮೈಲು ಕರೆದೊಯ್ದು ತೀರಪ್ರದೇಶದ ಕೋಟೆಗಳಲ್ಲಿ ಬಂಧಿಸಿಡುತ್ತಿದ್ದರು.



ಚಿತ್ರ ೧. ಬಂಧಿಸಿದ ಗುಲಾಮರು ಕೂಗಿಕೊಂಡು ಇತರರನ್ನು ಎಚ್ಚರಿಸದಂತೆ
ಪ್ರಾಣಿಗಳಿಗೆ ಹಾಕಿದಂತೆ ಹಾಕಿರುವ ಮುಖಬಂಧ





ಚಿತ್ರ ೨. ಸೆರೆಹಿಡಿಯಲ್ಪಟ್ಟ ಗುಲಾಮರನ್ನು ಕೈ ಬಾಯಿ ಕಟ್ಟಿ ಅರಣ್ಯದಲ್ಲಿ ನೂರಾರು ಕಿಲೋಮೀಟರ್ ನಡೆಸಿಕೊಂಡೇ ಕರೆದೊಯ್ಯುತ್ತಿರುವುದು



ಚಿತ್ರ ೩. ಬ್ರಿಟಿಷ್ ನೌಕೆ ಬಿಡುಗಡೆಗೊಳಿಸಿದ ಗುಲಾಮರು ಮತ್ತು ಸೆರೆ ಹಿಡಿಯಲ್ಪಟ್ಟ ಅರಬ್ ವ್ಯಾಪಾರಿಗಳು(ಹೆಚ್ಚಿನ ಸಂಖ್ಯೆಯಲ್ಲಿರುವ ಪುಟ್ಟ ಮಕ್ಕಳನ್ನು ಗಮನಿಸಿ)

"ಸುದೀರ್ಘ ಹಾಗೂ ಬಳಲಿಕೆಯ ಪ್ರಯಾಣದ ನಂತರ ಗುಲಾಮರನ್ನು ತೀರದಲ್ಲಿದ್ದ ಕೋಟೆಗಳಿಗೆ ಕರೆದೊಯ್ದು, ಅವರಿಗೆಂದೇ ವಿಶೇಷವಾಗಿ ವಿನ್ಯಾಸ ಮಾಡಿದ ಸೆರೆಮನೆಗಳಲ್ಲಿ ಬಂಧಿಸಿಡಲಾಗುತ್ತಿತ್ತು. ಮಧ್ಯ ಆಫ್ರಿಕಾದಿಂದ ಬಂದ ಅನೇಕರು ಸಮುದ್ರವನ್ನೇ ನೋಡಿರಲಿಲ್ಲ. ಅಪ್ಪಳಿಸುವ ಸಮುದ್ರದ ಭಾರೀ ಅಲೆಗಳು, ನಿರ್ಭಾವುಕ ಬಿಳಿ ವ್ಯಾಪಾರಿಗಳು, ದೊಡ್ಡದೊಡ್ಡ ಹಡಗುಗಳು, ಹಡಗಿನ ಎತ್ತರದ ಹಾಯಿ ಸ್ತಂಭಗಳು, ಕರಿಯರು ಭಯದಿಂದ ತತ್ತರಿಸಿ ಹೋಗುವಂತೆ





ಮಾಡುತ್ತಿದ್ದವು. ಬಿಳಿಯರನ್ನು ನರಮಾಂಸ ಭಕ್ಷಕರೆಂದು ತಿಳಿದು ಆಘಾತಕ್ಕೊಳಗಾಗುತ್ತಿದ್ದರು. ಅವರು ಎಷ್ಟು ಮಂಕಾಗಿ ಬಿಡುತ್ತಿದ್ದರೆಂದರೆ ಆ ಭಯದಲ್ಲಿ ನೀರಿನಲ್ಲಿ ಧುಮುಕಿಯೋ ಕತ್ತನ್ನು ಹಿಸುಕಿಕೊಂಡೋ, ಇಲ್ಲವೇ ತಮ್ಮ ತಮ್ಮಲ್ಲೇ ಬಡಿದಾಡಿಕೊಂಡೋ ಆತ್ಮಹತ್ಯೆ ಮಾಡಿಕೊಂಡು ಸಾಯುವ ಪ್ರಯತ್ನಗಳು ಸಾಮಾನ್ಯವಾಗಿದ್ದವು.'[೬]

ಚಿತ್ರ ೪. ಗುಲಾಮರನ್ನು ಸಾಗಿಸಲು ಬಳಸುತ್ತಿದ್ದ ಹಾಯಿ ಹಡಗುಗಳು



"ಜಾಂಜೀಬಾರ್ ಈ ಎಲ್ಲ ಪಾಪಗಳ ಕೂಪವಾಗಿದ್ದು ಒಂದು ಅಂದಾಜಿನ ಪ್ರಕಾರ ಪ್ರತಿ ವರ್ಷ ಇಲ್ಲಿಂದ ಸುಮಾರು ೪೦,೦೦೦ ಗುಲಾಮರು ರಫ್ತಾಗುತ್ತಿದ್ದರು. ಜಾಂಜೀಬಾರ್‌ನ ಮಾರುಕಟ್ಟೆಗಳಲ್ಲಿ ಸಂಜೆಯ ಹೊತ್ತಿಗೆ 'ಬಜಾರ್ ಖುಷ್' ಎಂಬ ಗುಲಾಮರ ಮಾರಾಟ ಪ್ರಾರಂಭವಾಗುತ್ತಿದ್ದು 'ಮೈಕೈಗಳಿಗೆಲ್ಲಾ ಎಣ್ಣೆ ಹಾಗೂ ಬಣ್ಣಬಣ್ಣದ ಪಟ್ಟೆಗಳನ್ನು ಬಳಿದ ನೂರಾರು ಗುಲಾಮರನ್ನು, ಸಾಲಿನಲ್ಲಿ ಭರ್ಜಿ ಹಿಡಿದ ಹಳೆ ಗುಲಾಮರ ಕಾವಲಿನಲ್ಲಿ ಮಾರುಕಟ್ಟೆಗೆ ತಂದು ಎಲ್ಲರೆದುರಿಗೆ ಬೆತ್ತಲೆಯಾಗಿ ಪ್ರದರ್ಶಿಸಲಾಗುತ್ತಿತ್ತು. ಕೊಳ್ಳುವವರು ಅವರ ಪ್ರತಿಯೊಂದು ಅವಯವಗಳನ್ನೂ ಒಂದಿಂಚೂ ಬಿಡದೆ ಪರೀಕ್ಷಿಸುತ್ತಿದ್ದರು. ಯುರೋಪಿನ ದನದ ಮಾರುಕಟ್ಟೆಯೂ ಸಹ ಇಷ್ಟೊಂದು ಮೃಗೀಯವಾಗಿರುತ್ತಿರಲಿಲ್ಲ."[೭] ಈ ಅಸಹ್ಯ, ಅವಮಾನ ಇಷ್ಟಕ್ಕೇ ಮುಗಿಯದೆ ಹೇಗೆ ಇನ್ನೂ ಮುಂದುವರೆಯುತ್ತಿತ್ತು ಎನ್ನುವುದನ್ನು ಈ ಕೆಳಗಿನ ದಾಖಲೆಯ ಮೂಲಕ ತಿಳಿಯಬಹುದಾಗಿದೆ.

'ಗುಲಾಮರನ್ನು ಕೊಳ್ಳುವ ಹಡಗುಗಳು ಬಂದಾಗ ಗುಲಾಮರನ್ನು ಕೋಟೆಯಿಂದ ಹೊರ ತಂದು ಗಂಡುಹೆಣ್ಣೆನ್ನದೆ ಬಿಸಿಲಿನಲ್ಲಿ ಬೆತ್ತಲೆ ನಿಲ್ಲಿಸಿ ಹಿಂದೆ ಮುಂದೆ ತಿರುಗಿಸಿ ಹಲ್ಲು-ವಸಡುಗಳು, ಇತ್ಯಾದಿಗಳಲ್ಲದೆ ಗುಪ್ತಾಂಗಗಳನ್ನು ಎಲ್ಲರೆದುರೇ ಪರೀಕ್ಷಿಸಲಾಗುತ್ತಿತ್ತು. ಹೀಗೆ ತೀವ್ರ ತಪಾಸಣೆಗೊಳಗಾದ ನಂತರ ಬೆಲೆ ಕಟ್ಟಲಾಗುತ್ತಿತ್ತು. ಅಶಕ್ತ, ರೋಗಗ್ರಸ್ತ, ವೃದ್ಧ, ಅಂಗವಿಕಲರನ್ನು ತಿರಸ್ಕರಿಸಿ 'ಮೆಕ್ರಾನ್'ಗಳೆಂದು ಕರೆಯಲಾಗುತ್ತಿತ್ತು. ಗುಲಾಮರೆಂದು ಆಯ್ಕೆಯಾದವರಿಗೆ ಅರಬ್ಬರಾದರೆ ಮುಸ್ಲಿಂ ಮತಕ್ಕೆ, ಯುರೋಪಿಯನ್ನರಾದರೆ ಕ್ರಿಶ್ಚಿಯನ್ ಧರ್ಮಕ್ಕೆ ಪರಿವರ್ತಿಸಿ ದೀಕ್ಷೆ ನೀಡಿ ಅವರ ಎದೆಯ ಮೇಲೆ ಕಾದಕಬ್ಬಿಣದಿಂದ ಮಾಲೀಕರ ಮುದ್ರೆ ಹಾಕಲಾಗುತ್ತಿತ್ತು. ಎಷ್ಟೋ ಬಾರಿ ಅದರ ಉರಿ, ನೋವಿಗೆ ಹಾಗೂ ಗಾಯಗಳು ಹುಣ್ಣುಗಳಾಗಿ ಹೆಂಗಸರು, ಗುಲಾಮರು ಸತ್ತೇ ಹೋಗುತ್ತಿದ್ದರು.'[೮]




ಖಂಡಾಂತರ ಪಯಣ

ಮನುಷ್ಯನ ಕ್ರೌರ್ಯ ಇಷ್ಟು ಅಮಾನುಷವಾಗಿರಬಹುದೆಂಬುದನ್ನು ಊಹಿಸುವುದೂ ಕಷ್ಟ. ನಂತರ ಆರಂಭವಾಗುತ್ತಿದ್ದುದೇ ನರಕಯಾತನೆಯ, ಅಮಾನುಷ, ಖಂಡಾಂತರ ಪಯಣ. ಬಹುಶಃ ಮನುಕುಲದ ಇತಿಹಾಸದಲ್ಲೇ ಇಂತಹ ಅಪಮಾನಕರ, ಅಮಾನವೀಯ ಪಯಣ ಇನ್ನೊಂದಿರಲಾರದು ಅವರನ್ನು ಮತ್ತೆ ಸರಪಳಿಯಲ್ಲಿ ಬಂಧಿಸಿ ಚಿಕ್ಕಚಿಕ್ಕ ದೋಣಿಗಳ ಮೂಲಕ ಹಡಗಿಗೆ ತುಂಬಿಸಲಾಗುತ್ತಿತ್ತು. ಪ್ರಯಾಣದ ಮಧ್ಯದಲ್ಲಿ ಹಸಿವೆ, ರೋಗಗಳು, ನಿರ್ಜಲೀಕರಣ (Dehydration) ಇತ್ಯಾದಿಗಳಿಂದ ಸಾಕಷ್ಟು ಗುಲಾಮರು ಸಾಯುತ್ತಿದ್ದರಿಂದ ಗುಲಾಮರನ್ನು ಹಡಗಿನ ಕೆಳಭಾಗದ ಚಿಕ್ಕಚಿಕ್ಕ ಕೋಣೆಗಳಲ್ಲಿ ಕುರಿಗಳಂತೆ ತುಂಬಲಾಗುತ್ತಿತ್ತು.

ಕೈ, ಕಾಲು, ಕುತ್ತಿಗೆಗಳಿಗೆ ಸಲಾಕೆ ಸರಪಣಿಗಳು, ಒತ್ತೊತ್ತಾಗಿ ತುರುಕಿದ ಜನಸಂದಣಿ, ಇಕ್ಕಟ್ಟಾದ ಜಾಗ, ಇತ್ಯಾದಿಗಳಿಂದ ಮಲಮೂತ್ರ ವಿಸರ್ಜನೆ, ಊಟ, ನಿದ್ದೆ ಎಲ್ಲವೂ ಅಲ್ಲಿಯೇ ಆಗಬೇಕಾಗಿತ್ತು. ಸಾಲದ್ದಕ್ಕೆ ಕಡಿಮೆ ಪ್ರಮಾಣದ, ಶುಚಿರುಚಿ ಇಲ್ಲದ ಅಪೌಷ್ಟಿಕ ಆಹಾರ, ಜೊತೆಗೆ ಹತಾಶೆ, ಅಸಹಾಯಕತೆಯ ಕೋಪ, ಹಸಿವೆಗಳೆಲ್ಲವೂ ಸೇರಿಕೊಂಡು ಪರಸ್ಪರ ಹೊಡೆದಾಟ, ಆಹಾರಕ್ಕಾಗಿ ಕಾದಾಟಗಳು ಸಾಮಾನ್ಯವಾಗಿದ್ದವು. 'ಆಗೊಮ್ಮೆ ಈಗೊಮ್ಮೆ ನೆಲಮಾಳಿಗೆ ಶುಚಿಗೊಳಿಸಲು ಗುಲಾಮರನ್ನು ಮೇಲಂತಸ್ತಿಗೆ ಕರೆದೊಯ್ದಾಗ ಮಾತ್ರ ಅವರಿಗೆ ಮುಕ್ತವಾದ ಗಾಳಿ, ಬೆಳಕು, ಸ್ಥಳ ಸಿಗುತ್ತಿತ್ತು. ಆದರೆ ಸುತ್ತಮುತ್ತ ರಣಹದ್ದುಗಳಂತೆ ಕಾಯುತ್ತಿರುವ ಬಿಳಿಯ ಸೈನಿಕರು ವಿನಾಕಾರಣ ಅವರ ಮೇಲೆ ಹಲ್ಲೆ ಮಾಡುತ್ತಿದ್ದರು. ಹೆಣ್ಣು ಗುಲಾಮರ ಮೇಲೆ ಅತ್ಯಾಚಾರಗಳೂ ಸಾಮಾನ್ಯವಾಗಿದ್ದವು.'[೧೦] 'ಹಡಗಿನ ಸಿಬ್ಬಂದಿ ಅವರನ್ನು ಪ್ರಯಾಣದಲ್ಲಿ ಮೈ ಬೆಚ್ಚಗಿರಿಸುವ 'ಬಾಡಿ ವಾರ್ಮರ್' ಗಳಂತೆಯೂ ಬಳಸುತ್ತಿದ್ದರು.'[೧೧]

ಚಿತ್ರ ೫. ಹಡಗಿನ ನೆಲಮಾಳಿಗೆಯಲ್ಲಿ ಗುಲಾಮರನ್ನು ಬಂಧಿಸಿರುವ ಅಮಾನುಷ ರೀತಿ



"ಈ ನರಕದಿಂದ ಪಾರಾಗಲು ಅನೇಕ ಗುಲಾಮರು ನೀರಿಗೆ ಹಾರಿ, ದಂಗೆ ಎದ್ದು, ಇಲ್ಲವೇ ಪರಸ್ಪರರನ್ನು ಕೊಂದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಬಯಸುತ್ತಿದ್ದರು. ಹೀಗಾದರೂ ತಾವು ಸತ್ತ ಮೇಲೆ ತಮ್ಮ ಜನ್ಮಭೂಮಿಗೆ ಮರಳಿ ಸ್ನೇಹಿತರು, ಸಂಬಂಧಿಗಳನ್ನು ಭೇಟಿಯಾಗಬಹುದೆಂದು ಗುಲಾಮರು ನಂಬಿದ್ದರು. ಇದನ್ನು ತಪ್ಪಿಸಲು ಕುತಂತ್ರಿಗಳಾದ ನಾವಿಕರು ಸತ್ತ ಗುಲಾಮರ ತಲೆಗಳನ್ನು ಕತ್ತರಿಸಿ, ಅವರು ಸತ್ತು, ತಮ್ಮ ಸ್ಥಳಕ್ಕೆ ಮರಳಿದಾಗ ತಲೆಗಳೇ ಇರುವುದಿಲ್ಲವೆಂದು ಉಳಿದವರಿಗೆ ಹೆದರಿಸುತ್ತಿದ್ದರು."[೨]

ಮುಗ್ಧಜನರ ನಂಬಿಕೆಗಳನ್ನೂ ಕೂಡ ಹೇಗೆ ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳಬಹುದೆಂಬುದಕ್ಕೆ ಇದೊಂದು ಉದಾಹರಣೆಯಾಗಿದೆ. ಎಂಥ ಪರಿಸ್ಥಿತಿಯಲ್ಲೂ ಎದೆಗುಂದದ, ಎಂಥ ಕ್ರೂರ ಪ್ರಾಣಿಗಳಿಗೂ ಹೆದರದ, ಆತ್ಮಹತ್ಯೆಯ ಪರಿಕಲ್ಪನೆಯೇ ಇಲ್ಲದ ಈ ಆಫ್ರಿಕನ್ ಕಾಡಿನ ವೀರರು, ಅರಬ್ ಮತ್ತು ಯುರೋಪಿನ ಸ್ವಾರ್ಥ ವ್ಯಾಪಾರಿ ಪ್ರಾಣಿಗಳಿಗೆ ಬಲಿಯಾಗಿ ಆತ್ಮಹತ್ಯೆಗೆಳಸಿದರು ಎಂಬುದೇ ವಿಚಿತ್ರ.

'ಇವೆಲ್ಲದರ ನಡುವೆಯೂ ಸಾಂಕ್ರಾಮಿಕ ರೋಗಗಳು, ನೀರಡಿಕೆ, ವಿಫಲ ದಂಗೆಗಳು, ಖಿನ್ನತೆಗಳೇ ನೂರಾರು ಗುಲಾಮರ ಸಾವಿಗೆ ಕಾರಣವಾಗುತ್ತಿದ್ದವು. ಯುರೋಪಿಯನ್ನರ ಕುತಂತ್ರ, ಬಂದೂಕುಗಳ ಪಾಶವೀ ಶಕ್ತಿಯ ಎದುರು ಕೇವಲ ದೈಹಿಕ ಶಕ್ತಿಯ ಗುಲಾಮರ ದಂಗೆಗಳು ಬಹುತೇಕ ವಿಫಲವೇ ಆಗುತ್ತಿದ್ದವು. ಅಕಸ್ಮಾತ್ತಾಗಿ ಯಶಸ್ವಿಯಾದರೂ ವಿಶಾಲ ಸಮುದ್ರದಲ್ಲಿ ಹಡಗನ್ನು ನಡೆಸುವುದು ಹೇಗೆ? ಹಾಯಿಗಳನ್ನು ತಿರುಗಿಸುವುದು ಹೇಗೆ? ದಿಕ್ಸೂಚಿ ಬಳಸುವುದು ಹೇಗೆ? ಎಂದು ತಿಳಿಯದೆ ಸಮುದ್ರದ ಪಾಲಾದ ಉದಾಹರಣೆಗಳೂ ಇವೆ. ಉದಾಹರಣೆಗೆ ೧೫೩೨ರಲ್ಲಿ ಪೆಸಿಫಿಕ್ ಸಾಗರದಲ್ಲಿ ಗುಲಾಮರ ದಂಗೆಗೆ ಸಿಕ್ಕು ಕಾಣೆಯಾದ ನೌಕೆ. ಎಷ್ಟೋ ಬಾರಿ ಗುಲಾಮರು ಗುಂಡಿಗೆ ಎದೆಯೊಡ್ಡಿದರೇ ಹೊರತು ಶರಣಾಗಲಿಲ್ಲ.'[೧೩]

ಇದು ಈ ಜನರು ಸಾವಿಗೆಂದೂ ಹೆದರದ ಮನೋಭಾವವನ್ನು ಸೂಚಿಸುತ್ತದೆ. ಹುಂಬತನವೆಂದು ಕೆಲವರಿಗೆ ಅನಿಸಿದರೂ ಇದು ಬುಡಕಟ್ಟು ಸಹಜ ಮನೋಧರ್ಮ ಎಂಬುದನ್ನು ಮರೆಯಲಾಗದು. ಶರಣಾಗುವುದು, ಸ್ವಾತಂತ್ರ್ಯ ಕಳೆದುಕೊಳ್ಳುವುದು ಮರಣಕ್ಕಿಂತಲೂ ಹೇಯವೆಂದೂ, ಅದಕ್ಕಿಂತಲೂ ಹೋರಾಡಿ ಸಾಯುವುದೇ ವೀರತ್ವವೆಂದು ಭಾವಿಸಿದ ಇದೇ ಜನಾಂಗ ಶತಮಾನಗಳ ಕಾಲ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ಗುಲಾಮಗಿರಿಯಲ್ಲಿ ನರಳಬೇಕಾಗಿ ಬಂದುದೇ ವಿಪರ್ಯಾಸ. ಆದರೆ ಇವರಲ್ಲಿ ಇಂದಿಗೂ, ಎಂಥ ಪರಿಸ್ಥಿತಿಯಲ್ಲೂ ಶರಣಾಗದ ಮನೋಭಾವ ಹಾಗೆಯೇ ಉಳಿದುಕೊಂಡು ಬಂದಿರುವುದು ಲೋಕದ ಕಣ್ಣಿಗೆ ಅಹಂಕಾರ, ಬೇಜವಾಬ್ದಾರಿತನ, ಮೂರ್ಖತನದಂತೆ ಕಂಡುಬಂದರೂ, ಇದು ಬುಡಕಟ್ಟುಗಳ ಜಿಗುಟುತನ, ಅನನ್ಯತೆಗೆ ಸಾಕ್ಷಿಯಾಗಿ ನಿಂತಿದೆ.

ಗುಲಾಮರ ಮಾರಾಟ

ಇಷ್ಟೆಲ್ಲಾ ಅಗ್ನಿದಿವ್ಯಗಳನ್ನು ದಾಟಿ ಬದುಕಿ ಬಂದ ನತದೃಷ್ಟರನ್ನು ದನಗಳಿಗಿಂತಲೂ ಕೀಳಾಗಿ, ಅವುಗಳಿಗಿಂತಲೂ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುತ್ತಿತ್ತು. ಅವರ ತೀರದ ಕಷ್ಟ ಆ ತೀರದಿಂದ ಈ ತೀರಕ್ಕೆ ಬಂದರೂ ಕೊನೆಗೊಳ್ಳುತ್ತಿರಲಿಲ್ಲ. ಗುಲಾಮರು ಹಡಗಿನಲ್ಲಿ ಬರುವ ಸುದ್ದಿಯನ್ನು ವೃತ್ತಪತ್ರಿಕೆಗಳಲ್ಲಿ ಸಂಭ್ರಮದಿಂದ ಪ್ರಚಾರಪಡಿಸಲಾಗುತ್ತಿತ್ತು. ಆ ಕಾಲದ ಪಾಶ್ಚಾತ್ಯ ಕುಟುಂಬಗಳಿಗೆ, ನವಾಬರು, ರಾಜರಿಗೆ, ನೀಗ್ರೋ ಅಥವಾ ಹಬಶಿಗಳನ್ನು ಗುಲಾಮರನ್ನಾಗಿಟ್ಟು ಕೊಳ್ಳುವುದು ಪ್ರತಿಷ್ಠೆಯ, ಅಂತಸ್ತಿನ, ಸಂಕೇತವಾಗಿತ್ತು. ಹೆಚ್ಚುಹೆಚ್ಚು ಗುಲಾಮರೊಂದಿಗೆ ತಿರುಗಾಡಿದಷ್ಟೂ ಅವರ ಘನತೆ ಹೆಚ್ಚುತ್ತಿತ್ತು. ಹೀಗಾಗಿ ಅವರನ್ನು ಕೊಳ್ಳಲು ಸಾಕಷ್ಟು ಜನರು ಮುಂದೆ ಬರುತ್ತಿದ್ದರು. ಅಲ್ಲಿ ಹಡಗಿನಿಂದ ಇಳಿದ ಮೇಲೆ ಅವರಿಗೆ ಮೈಯೆಲ್ಲಾ ಎಣ್ಣೆ ಹಚ್ಚಿ, ಮುಖದ ಮೇಲೆ ಬಣ್ಣಬಣ್ಣದ ಪಟ್ಟೆ ಬಳಿದು, ಪಟ್ಟಣದ ತುಂಬಾ ಅವರನ್ನು ಬಲವಂತವಾಗಿ ಮೆರವಣಿಗೆ ಮಾಡಲಾಗುತ್ತಿತ್ತು.

ಮೊಹರಂ ಕುಣಿತದಲ್ಲಿ ಬರುವ 'ಅಚ್ಚೊಳ್ಳಿ-ಪಿಚ್ಚೊಳ್ಳಿ' ಅಥವಾ 'ಕಳ್ಳಳ್ಳಿ ಬೂವ್ವ' ಗುಲಾಮ ಮಾರಾಟವನ್ನೇ ಪ್ರತಿನಿಧಿಸುತ್ತಿರಬಹುದು. ಏಕೆಂದರೆ ಅಲ್ಲಿಯೂ ಯುರೋಪಿಯನ್ ವೇಷದವನೊಬ್ಬ ಆಟಿಕೆ ಬಂದೂಕು ಹಿಡಿದುಕೊಂಡು ಈ ಅಚ್ಚೊಳ್ಳಿ ಪಿಚ್ಚೊಳ್ಳಿಯನ್ನು ಶೂಟ್ ಮಾಡುವಂತೆ ಹಾಗೂ ಕೆರಳಿದ ಅಚ್ಚೊಳ್ಳಿ ಪಿಚ್ಚೊಳ್ಳಿ ಅವರ ಮೇಲೆ ದಾಳಿ ಮಾಡಿದಂತೆ ನಟಿಸುತ್ತಿರುತ್ತಾರೆ. ರಹಮತ್ ತರೀಕೆರೆಯವರು ಈ ವೇಷ ಸಿದ್ದಿಗಳದೇ ಇರಬೇಕೆಂದು ತಮ್ಮ 'ನಡೆದಷ್ಟೂ ನಾಡು' ಪುಸ್ತಕದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

'ಹೀಗೆ ಹಡಗಿನಿಂದ ಬಂದು ಬಿದ್ದ ಗುಲಾಮರನ್ನು ಗೋವಾದ ಕೆಲವು ಗೊತ್ತಾದ ಸ್ಥಳಗಳಲ್ಲಿ ಹರಾಜಿಗಾಗಿ ಪ್ರದರ್ಶಿಸ ಲಾಗುತ್ತಿತ್ತು. ವೃತ್ತಾಕಾರದಲ್ಲಿ ಬೆತ್ತಲಾಗಿ ನಿಂತ ಹೆಣ್ಣುಗಳು ಹಾಡಿ ಕುಣಿದು ತಮ್ಮ ಪ್ರತಿಭೆಯನ್ನು ತೋರಿಸಿಕೊಳ್ಳಬೇಕಾಗುತ್ತಿತ್ತು. ಇಷ್ಟಾಗಿಯೂ ಅತ್ಯಂತ ಮೆಚ್ಚುಗೆ ಪಡೆದ ಹೆಣ್ಣೊಬ್ಬಳಿಗೆ ಸಿಗುತ್ತಿದ್ದುದು ಬರೀ ೩೦ ಕೃಜಾಡುಗಳು ಮಾತ್ರ. ಆದರೆ ಅರೇಬಿಯಾದ ಕುದುರೆಗಳಿಗಳಿಗೆ ೫೦೦ ಕ್ರುಜಾಡುಗಳ ಬೆಲೆ ಸಿಗುತ್ತಿತ್ತು.'[೫]


ಅಶಕ್ತರನ್ನು ಅರ್ಧ ಬೆಲೆಗೆ ಮಾರಾಟ ಮಾಡಿದರೆ ರೋಗಪೀಡಿತರು, ಅಂಗವಿಕಲರನ್ನು ನಾಯಿ ನರಿಗಳಿಗೆ, ಸಮುದ್ರದ ಮೀನುಗಳಿಗೆ ಮಾಂಸಾಹಾರವಾಗಲೆಂಬಂತೆ ನದಿ ದಂಡೆಯಲ್ಲೇ ಬಿಟ್ಟು ಹೋಗಲಾಗುತ್ತಿತ್ತು.

೧೬೯೫ರಲ್ಲಿ ಗೋವಾ ಪ್ರವಾಸ ಮಾಡಿದ ಇಟಾಲಿಯನ್ ಡಾಕ್ಟರ್‌ನ ಹೇಳಿಕೆಯಂತೆ, 'ಪೋರ್ಚುಗೀಸ್ ಭಾರತದಲ್ಲಿ ಬಹಳಷ್ಟು ಗುಲಾಮರಿದ್ದಾರೆ. ಪ್ರತಿ ಶ್ರೀಮಂತನೂ ೬ರಿಂದ ೪೦ ಜನ ಗುಲಾಮರನ್ನು ಹೊಂದಿದ್ದು ಅವರನ್ನು ಎಲ್ಲ ಕಾರ್ಯಗಳಿಗೂ ಬಳಸಿಕೊಂಡರೂ ಅವರಿಗೆ ಮಧ್ಯಾಹ್ನ ಮತ್ತು ರಾತ್ರಿ ಮಾತ್ರ ಒಂದಿಷ್ಟು ಅನ್ನವನ್ನು ಹಾಕಿದರೆ ಸಾಕಿತ್ತು. ಉಡಲು ಹೇಗೂ

ತಾಯಗರ್ಭದಿಂದ ಬಂದಾಗ ತಂದ ಬೆತ್ತಲೆ ಉಡುಗೆಯೇ ಸಾಕಿತ್ತು'. ಭಾನುವಾರ ಹಾಗೂ ರಜಾದಿನಗಳನ್ನು ಹೊರತುಪಡಿಸಿ 'ರುವಾ ಡೈರೈಟಾ ರಸ್ತೆ'(Rua Direita- Straight street!)ಯಲ್ಲಿ ನಿತ್ಯವೂ ಗುಲಾಮರ ಹರಾಜು ನಡೆಯುತ್ತದೆ. ಅಮಾನವೀಯ ದೃಶ್ಯವೆಂದರೆ ಸುಂದರ ಸುಪುಷ್ಟ ಆಫ್ರಿಕನ್ ಹೆಣ್ಣುಗಳನ್ನು ರಸ್ತೆ ಮಧ್ಯದ ಚೌಕದಲ್ಲಿ ಎಲ್ಲರೆದುರೇ ನಗ್ನವಾಗಿ ನಿಲ್ಲಿಸಿ ಹರಾಜು ಹಾಕುತ್ತಿದ್ದರು. ಏಕೆಂದರೆ ಇದರಿಂದ ಅವರಿಗೆ ಹೆಚ್ಚಿನ ಹಣ ದೊರೆಯುತ್ತಿತ್ತು. ಮೊಜಾಂಬಿಕ್ ಅಥವಾ ಹಬಶಿ ಹೆಣ್ಣುಗಳಿಗೆ ಅವರ ಸೌಂದರ್ಯ ಹಾಗೂ ಪ್ರಮಾಣಬದ್ಧ ಶರೀರಗಳಿಂದಾಗಿ ಹೆಚ್ಚಿನ ಬೆಲೆ ಸಿಗುತ್ತಿತ್ತು. ದಯಾ ಭವನವೆಂಬ ನನ್‌ಗಳ ಸಂಸ್ಥೆ, ಮೋನಿಕಾ ಮೊನಾಸ್ಟ್ರಿ, ಕಾನ್ವೆಂಟ್ ಹಾಗೂ ಆಸ್ಪತ್ರೆಗಳು ಕೂಡಾ ಯಾವುದೇ ದಯಾದಾಕ್ಷಿಣ್ಯವಿಲ್ಲದೆ ಗುಲಾಮರನ್ನು ಕೊಳ್ಳುತ್ತಿದ್ದವು. ಗುಲಾಮರ ವಿಷಯದಲ್ಲಿ ಪೋರ್ಚುಗೀಸರು ಮೂರು 'ಪಿ'(P)ಗಳ ನಿಯಮವನ್ನು ಅನುಸರಿಸುತ್ತಿದ್ದರು. ೧. Pau(whip) ಛಡಿ ಏಟು, ೨. Pao, ಬ್ರೆಡ್, ೩. Pano(cloth) ಬಟ್ಟೆ. ಕರಿ ಗುಲಾಮರ ಸಧೃಢ ದೇಹಗಳು ಕೂಡ ನಿರಂತರ ಛಡಿ ಏಟು, ಅರೆಹೊಟ್ಟೆಯ ಆಹಾರ ಮತ್ತು ಬಂಧನಗಳಿಂದ ಸೊರಗಿಹೋಗುತ್ತಿದ್ದವು'[೧೫] (ಮ್ಹಾಮೈ ಕಾಮತ್ ಹೌಸ್‌ನ ದಾಖಲೆಗಳ ಆಧಾರ). ಇಂತಹದೊಂದು ಅಮಾನವೀಯ ಬದುಕು ಅವರನ್ನು ಪ್ರಾಣಿಗಳ ಬದುಕಿಗಿಂತಲೂ ಅಸಹನೀಯಗೊಳಿಸಿದ್ದರೆ ಅಚ್ಚರಿಯಿಲ್ಲ.

ಚಿತ್ರ ೬. ಖಾರ್ಟೂಮ್‌ನ ಗುಲಾಮರ ಮಾರುಕಟ್ಟೆ







ಚಿತ್ರ ೭. (ತೈಲ ವರ್ಣ ಚಿತ್ರ)–ಜೆರೋಮ್ ಗುಲಾಮರ ಮಾರುಕಟ್ಟೆ.

ಮೂಲ: ವಿಕಿಪೀಡಿಯಾ

ಮನುಷ್ಯ ಮನುಷ್ಯನನ್ನೇ ಹಿಡಿದು ಮಾರಾಟ ಮಾಡುವ ಪೈಶಾಚಿಕ ಕೃತ್ಯ ಕೇವಲ ಪೋರ್ಚುಗೀಸ್ ಹಾಗೂ ಅರಬ್ಬರು ಮಾತ್ರ ಮಾಡದೆ ನಮ್ಮದೇ ಮಹಾನ್ ಭಾರತದಲ್ಲೂ ಇಂತಹ ವ್ಯವಸ್ಥೆ ಇತ್ತು. ಇಲ್ಲಿ ಜಾತಿಯ ಜೊತೆಜೊತೆಗೇ ಗುಲಾಮಗಿರಿಯೂ ಇದ್ದು ಧರ್ಮದ ರಕ್ಷಣೆ ಮಾಡುವ ಧಾರ್ಮಿಕ ಸಂಸ್ಥೆಗಳೂ ಇದರಲ್ಲಿ ತೊಡಗಿದ್ದವು ಎಂಬುದಕ್ಕೆ ದಾಖಲೆಗಳಿವೆ.

‘ಕರ್ನಾಟಕದಲ್ಲೂ ಈ ಹೃದಯಹೀನ ಪದ್ಧತಿ ಇದ್ದುದಷ್ಟೇ ಅಲ್ಲದೆ ಮಠ ಮಾನ್ಯಗಳೂ ಇದರಲ್ಲಿ ಭಾಗವಹಿಸಿವೆ. ಅದರಂತೆ ಡಾ. ಎ.ಕೆ. ಶಾಸ್ತ್ರಿಯವರು ಪ್ರಕಟಿಸಿರುವ ‘ಶೃಂಗೇರಿ ಧರ್ಮಸಂಸ್ಥಾನ’ ಪುಸ್ತಕದ ಕಡತಗಳಲ್ಲಿ ‘ಹೆಣ್ಣಿನ ಕ್ರಯ ಚೀಟುಗಳಲ್ಲಿ’ ಶೀಲಗೆಟ್ಟ ಹೆಣ್ಣುಗಳನ್ನು ಮಠದ ಚಾವಡಿಗೆ ಕರೆಸಿ ಮಾರಾಟ ಮಾಡುತ್ತಿದ್ದ ಉಲ್ಲೇಖಗಳಿವೆ. ಆ ಹಣ ಮಠಕ್ಕೆ ಸೇರುತ್ತಿದ್ದಿತು.’[೧೬]

ಕೊಡಗಿನಲ್ಲಿ ಪ್ರಚಲಿತದಲ್ಲಿದ್ದ ಗುಲಾಮಗಿರಿ ಮತ್ತು ಅಲ್ಲಿನ ವಿವಿಧ ಸಮುದಾಯಗಳ ಗುಲಾಮರಿಗೆ ನಿಗದಿಪಡಿಸಿದ ಬೆಲೆಯ ಪಟ್ಟಿ ಹೀಗಿದೆ.

ಕ್ರಸಂ.	ಸಮುದಾಯ	ಬೆಲೆ
೧.	ಕೆಂಬಟ್ಟಿ ಹೊಲೆಯ ಮತ್ತು ಅವನ ಹೆಂಡತಿ	೧೨ ಬಹಾದ್ರಿ ಪಗೋಡ*
೨.	ಮಾರಿಂಗಿ ಹೊಲೆಯ ಮತ್ತು ಅವನ ಹೆಂಡತಿ	೧೨ ಬಹಾದ್ರಿ ಪಗೋಡ
೩.	ಬಲಗೈ ಹೊಲೆಯ(೬) ಮತ್ತು ಅವನ ಹೆಂಡತಿ(೪)	೧೦ ಬಹಾದ್ರಿ ಪಗೋಡ
೪.	ಜೇನುಕುರುಬ ಮತ್ತು ಬೆಟ್ಟಕುರುಬ	೧೦ ಬಹಾದ್ರಿ ಪಗೋಡ
೫.	ಪಣಿಯರವ ಮತ್ತು ಅವನ ಹೆಂಡತಿ	೬ ಕಂಠೀರಾಯಿ
೬.	ಮುಕ್ರಿಹೊಲೆಯ(೩) ಮತ್ತು ಅವನ ಹೆಂಡತಿ(೬)	೯ ಬಹಾದ್ರಿ ಪಗೋಡ.

(* ಒಂದು ಬಹಾದ್ರಿ ಪಗೋಡವೆಂದರೆ ೩ ರೂಪಾಯಿ ೮ ಆಣೆಗೆ ಸಮ).

ಮೂಲ: ‘ಕೊಡಗಿನ ಗುಲಾಮರು: ಸಂಸ್ಕೃತಿ ಮತ್ತು ಚರಿತ್ರೆ’, ಡಾ. ವಿಜಯ್ ಪೂಣಚ್ಚ ತಂಬಡ.

ಇದು ಪಶುಗಳಂತೆ ಮನುಷ್ಯರಿಗೆ ಮನುಷ್ಯ ಕಟ್ಟಿದ ಬೆಲೆಯಾಗಿದ್ದು ರಾಜಪ್ರಭುತ್ವ, ಊಳಿಗಮಾನ್ಯ, ಬ್ರಿಟಿಷ್ ಸೇನೆ ಇತ್ಯಾದಿಗಳ ಕುದಿಪಾತ್ರೆಯಾದ ಕೊಡಗಿನಲ್ಲಿ ಇಂದಿಗೂ ಈ ಜನಾಂಗಗಳು ಗುಲಾಮಗಿರಿಯ ಕಪಿಮುಷ್ಟಿಯಿಂದ ಸಂಪೂರ್ಣ ಹೊರಬರಲು ಆಗಿಲ್ಲವೆಂಬುದೇ ಈ ಗುಲಾಮಗಿರಿಯ ಬೇರುಗಳು ಎಷ್ಟು ಆಳಕ್ಕಿಳಿದಿವೆ ಎಂಬುದಕ್ಕೆ ದ್ಯೂತಕವಾಗಿವೆ.

ಎಡ್ಗರ್ ಥರ್ಸ್ಟನ್ ಅವರ 'Slavery. Ethnographic Notes in Southern India' ಪುಸ್ತಕವು, ಭಾರತದಲ್ಲಿ ಬೆಳೆದು ಬಂದ ಪುರಾತನ ಗುಲಾಮಗಿರಿಯ ಬಗ್ಗೆ ಮಾತ್ರವಲ್ಲದೆ ಇಲ್ಲಿನ ವಿವಿಧ ಜಾತಿಯ ಜನಗಳು ಹೇಗೆ ವಿವಿಧ ಬಗೆಗಳಲ್ಲಿ ಗುಲಾಮರಾಗುತ್ತಿದ್ದರು ಎಂಬುದನ್ನು ತಿಳಿಸುತ್ತದೆ.

'ಮಹಮಡನ್ ಮತ್ತು ಕ್ಯಾಥೋಲಿಕ್ ಕ್ರಿಶ್ಚಿಯನ್‌ರೂ ತಮ್ಮ ಜಾತಿ ಜನರ ಸಂಖ್ಯೆ ಹೆಚ್ಚಿಸಿಕೊಳ್ಳಲು ಗುಲಾಮರನ್ನು ಕೊಂಡು ಮತಾಂತರಗೊಳಿಸುತ್ತಿದ್ದರು. ಶ್ರೀ ಲೋಗನ್ ಹೇಳುವಂತೆ ಇಸ್ಲಾಂ ಧರ್ಮಕ್ಕೆ ಮತಾಂತರವಾಗುವ ಮೂಲಕ ಸಾಕಷ್ಟು ಗುಲಾಮರು ಸ್ವತಂತ್ರರಾಗಿದ್ದಾರೆ. ಅವರ ಸಾಮಾಜಿಕ ಸ್ಥಾನಮಾನವೂ ಉನ್ನತವಾಗಿದೆ. ಯಾರಾದರೂ ಅವನಿಗೆ ಹೊಡೆದು ಅವಮಾನಿಸಿದರೆ ಇಡೀ ಇಸ್ಲಾಂ ಸಮುದಾಯ ಅವನಿಗೆ ಬೆಂಗಾವಲಾಗಿ ನಿಲ್ಲುತ್ತಿತ್ತು (ಅದೇ, ಪು.೪೫೦).

ಕೇರಳದ ಪಲ್ಲಂ ಮತ್ತು ಖಚಿರಾ ಭಾಗಗಳಲ್ಲಿ ಒಂದು ವಿಚಿತ್ರ ಪದ್ಧತಿ ಇದ್ದು ನಿರ್ದಿಷ್ಟ ದಿನ ವಿವಿಧ ಜಾತಿಗಳ ಜನ ಊರ ಮುಂದಿನ ಬಯಲಲ್ಲಿ ಸೇರಿ ಪರಸ್ಪರ ಕಾದಾಡುತ್ತಾರೆ. ಈ ಸಮಯದಲ್ಲಿ ಕೆಳಜಾತಿಯ ಜನರು ಸಾಧ್ಯವಾದರೆ ಮೇಲ್ಜಾತಿಯವರ ಹೆಣ್ಣು ಮಕ್ಕಳನ್ನು ಹೊತ್ತೊಯ್ದು ಗುಲಾಮರನ್ನಾಗಿಸಿಕೊಳ್ಳಲೂ ಅವಕಾಶವಿತ್ತು. ಗುಂಡರ್ಟ್ ಅವರು ದಾಖಲಿಸಿರುವಂತೆ ಫೆಬ್ರವರಿ ಮಾರ್ಚ್ ತಿಂಗಳುಗಳಲ್ಲಿ ಮೇಲ್ಜಾತಿಯ(ಪೊಲಿಯನ್) ಪುರುಷ ಒಂಟಿ ಶೂದ್ರ ಹೆಂಗಸು ಸಿಕ್ಕಿದರೆ ಅವಳನ್ನು ಕೈವಶಮಾಡಿಕೊಂಡು ಗುಲಾಮರನ್ನಾಗಿಸಿಕೊಳ್ಳಬಹುದಿತ್ತು.

ಹಾಗೆಯೇ ಜುಲೈ ಆಗಸ್ಟ್‌ಗಳಲ್ಲಿ ಸೂರ್ಯಾಸ್ತದ ನಂತರ ಕುಲೀನ ಸ್ತ್ರೀಯರ ಮೇಲೆ ಗುಲಾಮನೊಬ್ಬ ಕಲ್ಲು ತೂರಲು ಸಾಧ್ಯವಾದರೆ, ಅವರು ಕುಲಭ್ರಷ್ಟರಾಗಿ ಗುಲಾಮರಾಗುತ್ತಿದ್ದರು. ಕೆಲವೊಮ್ಮೆ ಗುಲಾಮರು ಮೇಲ್ಜಾತಿಯ ಸ್ತ್ರೀಯರನ್ನು ಅಪಹರಿಸುತ್ತಿದ್ದರು.

ತಿರುವಾಂಕೂರಿನ ಪರಯ್ಯನ್‌ಗಳ ಬಗ್ಗೆ ರೆವರೆಂಡ್ ಎಸ್. ಮಟೀರ್ ಅವರು ಹೇಳುವಂತೆ ಟಿಪ್ಪುವಿನ ಜೊತೆಗಿನ ಯುದ್ಧದ ಸಮಯದಲ್ಲಿ ಯಾವುದೇ ಮಾಲೀಕನಿಲ್ಲದ ಪರಯ್ಯನ್(ಗುಲಾಮ)ರನ್ನು ಸರ್ಕಾರ ಸೈನ್ಯಕ್ಕೆ ಸೇರಿಕೊಂಡು ಕಠಿಣ ಕೆಲಸಗಳನ್ನು ನೀಡುತ್ತಿತ್ತು. ಇದನ್ನು ತಪ್ಪಿಸಿಕೊಳ್ಳಲು ಶ್ರೀಮಂತರ, ಪೂಜಾರಿಗಳ ಬಳಿ ಹೋಗಿ ತಾತ್ಕಾಲಿಕವಾಗಿ ನಾವು ನಿಮ್ಮ ಸೇವಕರೆಂದು ಸರ್ಕಾರಕ್ಕೆ ಹೇಳುವಂತೆ ದುಂಬಾಲು ಬೀಳುತ್ತಿದ್ದರು. ಇದಕ್ಕಾಗಿ ವರ್ಷಕ್ಕೆ ತಲಾ ಒಂದು 'ಪಣಂ' ಹಣವನ್ನು ಗುಲಾಮರು ಪೂಜಾರಿಗಳಿಗೆ ನೀಡುತ್ತಿದ್ದರು. ಇವರನ್ನು ಪೊಟ್ಟಿ ಗುಲಾಮರು(Potty slaves) ಎನ್ನಲಾಗುತ್ತಿದ್ದು ಸರ್ಕಾರ ಈ ನಂಬೂದರಿ ಬ್ರಾಹ್ಮಣರ ಗುಲಾಮರಿಗೆ ಸಾಕಷ್ಟು ಮರ್ಯಾದೆ ನೀಡುತ್ತಿತ್ತು.

ದಕ್ಷಿಣಕನ್ನಡದ ಹೊಲೆಯರು ಮತ್ತು ಕೊರಗರ ಬಗ್ಗೆ ಹೇಳುವಂತೆ ಒಬ್ಬ ಮಾಲೀಕ ತನ್ನ ಸೇವಕನನ್ನು ಇನ್ನೊಬ್ಬರಿಗೆ ಮಾರುವಾಗ ಅವನಿಗೆ ಸ್ನಾನ ಮಾಡಿಸಿ, ಮೈಗೆ ಎಣ್ಣೆ ಹಚ್ಚಿ ಹೊಸಬಟ್ಟೆ ಹಾಕಿಸಿ ಹೊಸ ಒಡೆಯನ ಬಳಿಗೆ ಕರೆದುಕೊಂಡು ಹೋಗುತ್ತಿದ್ದನು. ಆ ಹೊಸ ಮಾಲೀಕ ಒಂದು ತಟ್ಟೆಯಲ್ಲಿ ಒಂದು ಬಂಗಾರದ ಚೂರು ಮತ್ತು ನೀರನ್ನು ಹಾಕುತ್ತಿದ್ದನು. ನೀರನ್ನು ಕುಡಿದ ಹೊಲೆಯ ಒಂದು ಹಿಡಿ ಮಣ್ಣನ್ನು ತೆಗೆದುಕೊಂಡು ತನಗಿಷ್ಟ ಬಂದ ಜಾಗದಲ್ಲಿ ಹಾಕುತ್ತಿದ್ದ. ಅದನ್ನು ಕಲ್ಲುಗಳ ಮರಗಳ ಸಮೇತ ಅವನಿಗೇ ನೀಡಲಾಗುತ್ತಿತ್ತು. ಅವನಿಗೆ ಮಾಲೀಕ ಪ್ರತಿವರ್ಷ ಅಕ್ಕಿ, ಉಪ್ಪು, ಬಟ್ಟೆ ನೀಡುತ್ತಿದ್ದನು. ಹೆಚ್ಚಿನ ಗುಲಾಮರು ಅಳಿಯ ಸಂತಾನಕ್ಕೆ ಸೇರಿದವರಾಗಿದ್ದಾರೆ.

೧೮೪೧ರಲ್ಲಿ ಕ್ಯಾಲಿಕಟ್‌ನ ಜಡ್ಜ್ ಆಗಿದ್ದ ಇ.ಬಿ. ಥಾಮಸ್ ಅವರ ಪತ್ರದಂತೆ ಮಲಬಾರ್‌ನಲ್ಲಿ ಗುಲಾಮರ ಸಂಖ್ಯೆ ಹೆಚ್ಚಿದೆ. ೧೮೩೫ರಲ್ಲಿ ೧,೪೪,೦೦೦ರಷ್ಟಿದ್ದ ಗುಲಾಮರು ೧೮೪೨ರಲ್ಲಿ ೧,೫೯,೦೦೦ ಆಗಿದ್ದರು. ಗುಲಾಮ ಸ್ತ್ರೀಯರಿಗೆ ಹೆಚ್ಚು ಮಕ್ಕಳನ್ನು ಹಡೆಯಲು ಪ್ರೋತ್ಸಾಹ ನೀಡುತ್ತಿದ್ದು, ಗಂಡಸರಿಗಿಂತ ಹೆಚ್ಚಿನ ಹಣ ರೂ. ೩.೮ ನೀಡಲಾಗುತ್ತಿದೆ. ೧೦ ತಿಂಗಳ ಮಗುವನ್ನು ಕೋಟಿಗನ ಹರಾಜಿನಲ್ಲಿ ರೂ ೧.೧೦.೬ ಮಾರಲಾಗಿದೆ.

ಇದು ಗುಲಾಮಗಿರಿಯ ಒಂದು ಹಂತವಾದರೆ ಹಲವಾರು ಹೋರಾಟ ಮತ್ತು ಬಲಿದಾನಗಳಿಂದಾಗಿ ಈ ಅಮಾನವೀಯ ಪದ್ಧತಿ ಕೊನೆಗೊಳಿಸಲು ಅಂತಾರಾಷ್ಟ್ರೀಯ ಒತ್ತಡ ಹೆಚ್ಚಾದ ಹಿನ್ನೆಲೆಯಲ್ಲಿ ಗುಲಾಮಗಿರಿಯು ತನ್ನ ಅವಸಾನ ಕಂಡಿತು.


ಗುಲಾಮಗಿರಿಯ ಅವನತಿ

"೧೭೧೨ರಲ್ಲಿ ಅಮೆರಿಕದ ನ್ಯೂಯಾರ್ಕ್‌ನಲ್ಲಿ ಕುಡಿಯೊಡೆದ ಈ ಗುಲಾಮಗಿರಿಯ ವಿರುದ್ಧದ ಹೋರಾಟ ಅಬ್ರಹಾಂ ಲಿಂಕನ್‌ರಂತಹ ಮಹಾನ್ ಮಾನವತಾವಾದಿಗಳ ಹೋರಾಟ ಹಾಗೂ ಬಲಿದಾನಗಳಿಂದಾಗಿ ಕೇವಲ ಅಮೆರಿಕದಲ್ಲಿ ಮಾತ್ರವಲ್ಲದೆ ವಿಶ್ವದಾದ್ಯಂತ ಹಬ್ಬಿತು. ಬ್ರಿಟಿಷ್ ಸರ್ಕಾರ ತನ್ನ ಅಮೆರಿಕದ ಕಹಿ ಸೋಲಿನಿಂದ ಎಚ್ಚತ್ತು ಗುಲಾಮಗಿರಿಯನ್ನು ನಿಷೇಧಿಸಲು ೧೭೭೨ ರಲ್ಲಿ ಮುಂದಾಯಿತು. ಬ್ರಿಟಿಷ್ ಸರ್ಕಾರ ೧೭೯೨ರಲ್ಲೇ ಗುಲಾಮ ವ್ಯಾಪಾರವನ್ನು ನೀಷೇಧಿಸಿತಲ್ಲದೆ ೧೮೦೭ರಲ್ಲಿ ತನ್ನ ವಸಾಹತುಗಳಿಗೂ ಈ ನಿಷೇಧ ಹೇರಿತು. ನಂತರ ಫ್ರಾನ್ಸ್ ಹಾಗೂ ಇತರ ಯುರೋಪಿಯನ್ ರಾಷ್ಟ್ರಗಳು ಇದನ್ನು ನಿಷೇಧಿಸಿದರೂ ಪೋರ್ಚುಗಲ್ ಮತ್ತು ಅರಬ್ ರಾಷ್ಟ್ರಗಳು ಇದನ್ನು ಮುಂದುವರೆಸಲು ಪ್ರಯತ್ನಿಸಿದವು. ನಮ್ಮದೇ ದೇಶದ ಬನಿಯಾಗಳು ಮತ್ತು ಹವ್ಯಕರು ಇದಕ್ಕೆ ಕುಮ್ಮಕ್ಕು ನೀಡಿದರೆಂಬುದು ವಿಷಾದನೀಯ. ಅರಬ್ ರಾಷ್ಟ್ರಗಳು ೧೯ನೇ ಶತಮಾನದ ಕೊನೆಯವರೆಗೂ ಇದನ್ನು ಮುಂದುವರೆಸಿಕೊಂಡು ಬಂದರೆ, ಪೋರ್ಚುಗಲ್‌ನ ಗುಲಾಮರನ್ನು ಸಾಗಿಸುವ ಹಡಗುಗಳ ಮೇಲೆ ಬ್ರಿಟಿಷ್ ಸೈನ್ಯ ದಾಳಿ ಮಾಡಿ ಗುಲಾಮರನ್ನು ಬಿಡುಗಡೆಗೊಳಿಸ ತೊಡಗಿದವು. ಕೊನೆಗೆ ಅಂತಾರಾಷ್ಟ್ರೀಯ ಒತ್ತಡಕ್ಕೆ ಮಣಿದು ಪೋರ್ಚುಗಲ್ ಕೂಡ ೧೮೩೬ರಲ್ಲಿ ಗುಲಾಮಗಿರಿಯನ್ನು ನಿಲ್ಲಿಸಿತು.'[೧೨] ಇದಕ್ಕೆ ಅಂತಃಕರಣಕ್ಕಿಂತಲೂ ಅಂತಾರಾಷ್ಟ್ರೀಯ ಒತ್ತಡವೇ ಕಾರಣವಾದದ್ದೊಂದು ವಿಪರ್ಯಾಸ.

ಚಿತ್ರ ೮. ಗುಲಾಮಗಿರಿಯ ನಿಷೇಧಕ್ಕಾಗಿ ಪ್ರಾಣತೆತ್ತ ಮಹಾನ್ ಮಾನವತಾವಾದಿ ಅಬ್ರಹಾಂ ಲಿಂಕನ್



ಚಿತ್ರ ೯. ಗುಲಾಮಗಿರಿ ನಿಷೇಧ ಶಾಸನಕ್ಕೆ ಲಿಂಕನ್ ಸಹಿ ಮಾಡಿದ ದಾಖಲೆ



'ಮಲಬಾರ್‌ನ ಜಿಲ್ಲಾ ಕಲೆಕ್ಟರ್ ಆಗಿದ್ದ ಶ್ರೀ ಬ. ಲೋಗಾನ್‌ರ ದಾಖಲೆಗಳಂತೆ ಬ್ರಿಟಿಷ್ ಸರ್ಕಾರ ತನ್ನ ಆಳ್ವಿಕೆಯ ಪ್ರಾರಂಭದಿಂದಲೂ(೧೭೯೨) ಗುಲಾಮ ವ್ಯಾಪಾರವನ್ನು ನಿಷೇಧಿಸಿದೆ. ಗುಲಾಮರನ್ನು ಮಾರಾಟ ಮಾಡುವವರನ್ನು ಕಳ್ಳರೆಂದು ಪರಿಗಣಿಸಬೇಕು. ಅವರಿಂದ ಗುಲಾಮನನ್ನು ಬಿಡಿಸಿ ಅವನ ಮೌಲ್ಯದ ೫ ಪಟ್ಟು ಹಣವನ್ನು ದಂಡ ಹಾಕಬೇಕು. ಇದೇ ಶಿಕ್ಷೆ ಗುಲಾಮರನ್ನು ಕೊಳ್ಳುವವರಿಗೂ ಅನ್ವಯಿಸುತ್ತದೆ. ಗುಲಾಮರನ್ನು ಸಾಗಿಸುವ ಹಡುಗಗಳು ಹಾಗೂ ನಾವಿಕರನ್ನು ಬಂಧಿಸಿ ಹಡಗನ್ನು ಜಪ್ತಿ ಮಾಡಿ ಪ್ರತಿ ಗುಲಾಮನಿಗೆ ೧೦ ರೂಪಾಯಿಯಂತೆ ದಂಡ ವಸೂಲಿ ಮಾಡಬೇಕು. ಈ ಮೂಲಕ ತಿಯಾರ್ ಸಮುದಾಯದ ಮಕ್ಕಳನ್ನು ದರೋಡೆಕೋರರಿಂದ ರಕ್ಷಿಸುವ ಉದ್ದೇಶವೂ ಇತ್ತು. ೧೮೧೯ರಲ್ಲಿ ಸರ್ಕಾರ ಮತ್ತೊಮ್ಮೆ ಗುಲಾಮಗಿರಿ ನಿಯಂತ್ರಣಕ್ಕೆ ಹೊಸ ಆದೇಶ ಹೊರಡಿಸಿತು. ೧೮೨೧ರಲ್ಲಿ ಕೊಡಗು ಮಲಬಾರಿನ ಸರ್ಕಾರಿ ಜಮೀನುಗಳಲ್ಲಿರುವ ಗುಲಾಮರಿಂದ ಗಳಿಸಿದ ರೂ. ೯೨೭-೧೩.೦ ಹಣವನ್ನು ವಾಪಸ್ ನೀಡಬೇಕೆಂದೂ ಈ ಪದ್ಧತಿ ಕೈಬಿಡಬೇಕೆಂದೂ ಕೋರ್ಟ್ ಆಗ್ರಹಿಸಿತು. ಭಾರತ ಸರ್ಕಾರದ ಕಾಯಿದೆ ೫, ೧೮೪೩, ಗುಲಾಮಗಿರಿ ನಿಷೇಧಕ್ಕೆ ಮತ್ತು ಗುಲಾಮರ ಅಮಾನವೀಯ ಶೋಷಣೆ ವಿರುದ್ಧ ಒತ್ತಡ ಹೆಚ್ಚಿಸಿತು.

ಆದರೂ ಗುಲಾಮರ ವ್ಯಾಪಾರ ಗುಪ್ತವಾಗಿ ಸಾಗುತ್ತಲೇ ಇತ್ತು. ೧೮೬೦ರ ಭಾರತೀಯ ದಂಡ ಸಂಹಿತೆ ಜಾರಿಯಾಗುವುದರೊಂದಿಗೆ ಗುಲಾಮಗಿರಿಗೆ ಭಾರತದಲ್ಲಿ ಅಂತಿಮ ಪ್ರಹಾರ ಬಿತ್ತು. ಅದರಂತೆ–

೧. ಗುಲಾಮರನ್ನು ಆಮದು ರಫ್ತುಮಾಡುವ, ಕೊಳ್ಳುವ ಮಾರುವ, ವ್ಯಕ್ತಿಯನ್ನು ನಿರ್ಬಂಧಿಸುವವರಿಗೆ ೭ ವರ್ಷಗಳ ಸಜೆ ಹಾಗೂ ದಂಡ ವಿಧಿಸಬಹುದಾಗಿದೆ.

೨. ಇಲ್ಲದೇ ಅಂಥ ವ್ಯಕ್ತಿಗಳನ್ನು ಆಜೀವಪರ್ಯಂತ ಗಡಿಪಾರು ಮಾಡುವ, ೧೦ ವರ್ಷಗಳ ಸಜೆ ಹಾಗೂ ದಂಡವನ್ನು ವಿಧಿಸಬಹುದಾಗಿದೆ.




೩. ಯಾವುದೇ ವ್ಯಕ್ತಿಯನ್ನು ಅಥವಾ ಕಾರ್ಮಿಕನನ್ನು ಕಾನೂನಿಗೆ ವಿರುದ್ಧವಾಗಿ, ಅವನ ಇಷ್ಟಕ್ಕೆ ವಿರುದ್ಧವಾಗಿ ಒತ್ತಾಯಪಡಿಸಿದರೆ ಒಂದು ವರ್ಷದ ಸಜೆ ಅಥವಾ ದಂಡ ಅಥವಾ ಎರಡನ್ನೂ ಹಾಕಬಹುದಾಗಿದೆ.'[೫]

ಇಷ್ಟೆಲ್ಲ ಗುಲಾಮಗಿರಿ ಮತ್ತು ಮಾನವೀಯತೆಯ ಸಂಘರ್ಷಗಳ ನಡುವೆ ಕಡೆಗೊಮ್ಮೆ ಈ ದೈಹಿಕ ಗುಲಾಮಗಿರಿ ಕೊನೆಯಾಯಿತಾದರೂ ಅದಿನ್ನೂ ಬೇರೆ ಬೇರೆ ರೂಪಗಳಲ್ಲಿ ನಮ್ಮ ನಡುವೆಯೇ ಇದೆ. ಇದೀಗ ಅದು ಜೀತಪದ್ಧತಿ, ಜಾತಿಪದ್ಧತಿ, ಕೂಲಿಕಾರ, ಬೌದ್ಧಿಕ ಗುಲಾಮಗಿರಿ, ಧಾರ್ಮಿಕ ಗುಲಾಮಗಿರಿ, ಆರ್ಥಿಕ ಗುಲಾಮಗಿರಿ ಇತ್ಯಾದಿಗಳ ರೂಪದಲ್ಲಿ ಸಂಭವಾಮಿ ಯುಗೇ ಯುಗೇ ಎನ್ನುವಂತೆ ಮತ್ತೆ ಮತ್ತೆ ಅವತಾರವೆತ್ತುತ್ತಿದೆ. ಏಕೆಂದರೆ ಇತರರನ್ನು ಗೆಲ್ಲುವ, ಗುಲಾಮರನ್ನಾಗಿಸಿ ಕೊಳ್ಳುವ ಮತ್ತು ಕೊಲ್ಲುವ ಮತ್ತು ಆ ಮೂಲಕ ತನ್ನ ಅಹಂ ಅನ್ನು ತೃಪ್ತಿಪಡಿಸಿಕೊಳ್ಳುವ ಮನೋಭಾವನೆ ಮನುಷ್ಯನ ಜನ್ಮಜಾತ ಗುಣವೇ ಆಗಿರಬೇಕು.

ಅಮೆರಿಕದ ಆಫ್ರಿಕನ್ ಗುಲಾಮ ಸ್ತ್ರೀಯೊಬ್ಬಳು ಬರೆದ ಈ ಕವನ ಗುಲಾಮಗಿರಿಯ ಹತಾಶೆಯ ನಡುವೆಯೂ ಕಾಣುವ ಹೊಸ ಜಗತ್ತಿನ ಕನಸನ್ನು ನಮ್ಮ ಮುಂದಿಡುತ್ತದೆ. ಆ ಮೂಲಕ ಎಂದಿಗೂ ಎಂಥ ಶಕ್ತಿಗಳಿಗೂ ಜಗ್ಗದ, ಎಂಥ ಕಷ್ಟಗಳಿಗೂ ಬಗ್ಗದ ಅದಮ್ಯ 'ಮನುಷ್ಯ ಚೇತನ'ವನ್ನು ಇದು ಪ್ರತಿನಿಧಿಸುತ್ತದೆ.

'ಸೂರ್ಯನಿಗೆ ಮೋಡಗಳು ಅಡ್ಡಿಯಾದವು. ಪ್ರೀತಿ ಹತಾಶೆಯನ್ನಷ್ಟೇ ತಂದಿತ್ತು. ವಿದಾಯ ಶಾಶ್ವತವಾಗಿತ್ತು. ಮೋಡಗಳಿಗೆ ಬೆಳ್ಳಿ ರೇಕುಗಳಿರಲಿಲ್ಲ. ಆದರೆ ಸ್ವರ್ಗದಲ್ಲಿರುವುದೆಲ್ಲಾ ಬೆಳ್ಳಿಯ ಸಾಮ್ರಾಜ್ಯ ಎಂಬ ನಂಬಿಕೆ ನನಗೆ. ಧೂಳು ತುಂಬಿದ, ನಡುರಾತ್ರಿಯ ಕತ್ತಲೆ ಕವಿದ ದಾರಿಯಲ್ಲಿ ಸಂಕೋಲೆಗಳನ್ನು ಹೊತ್ತು ದಣಿಯುತ್ತಾ ದಾರಿ ಸವೆಸುವ ನನ್ನಂತಹವರು ಒಂದು ದಿನ ದಿವ್ಯ ಬೆಳಗನ್ನು ನೋಡುತ್ತೇವೆ ಎಂಬ ಆಶಾಭಾವನೆ ನನ್ನದು. ಕೊನೆಯ ಪಕ್ಷ ಸ್ಮಶಾನದಲ್ಲಿಯಾದರೂ ನಮ್ಮ ಎಲ್ಲ ಕಡುಕಷ್ಟಗಳ ಹೊರೆಯನ್ನು ಇಳಿಸಲು ಅಪ್ಪಣೆ ದೊರಕೀತು, ಹೊಸ ಜಗತ್ತಿನಲ್ಲಿ ಹೊಸ ಬದುಕಿನ ಬೆಳಕು ಕಂಡೀತು ಎನ್ನುವ ಹಂಬಲ ನನ್ನದು. ನಮ್ಮಿಂದ ಇಲ್ಲಿ ಕಸಿಯಲಾಗಿರುವ ಬೆಳಕು, ಕತ್ತಲೆ–ಸಾವುಗಳನ್ನು ಸೀಳಿ ಪ್ರವಾಹದಂತೆ ಹರಿದು ಬಂದೀತು ಎಂಬ ಕನಸು ನನಗೆ.'[೯]

ಈ ಎಲ್ಲ ಕ್ರಮಗಳಿಂದಾಗಿ ಭಾರತದಲ್ಲಿ ನಡೆಯುತ್ತಿದ್ದ ಆಂತರಿಕ ಗುಲಾಮಗಿರಿ ಹಾಗೂ ಹೊರಗಿನಿಂದ ಬರುತ್ತಿದ್ದ ಆಫ್ರಿಕನ್-ಸಿದ್ದಿ ಗುಲಾಮಗಿರಿಗಳು ಕ್ರಮೇಣ ಕಣ್ಮರೆಯಾದರೂ ಆ ಜನಾಂಗಗಳ ಕಳಂಕಿತ ಸ್ಥಿತಿ(stigma) ಮಾತ್ರ ಹಾಗೆಯೇ, ಶೋಚನೀಯವಾಗಿಯೇ ಉಳಿದುಹೋಯಿತು. ಆಫ್ರಿಕಾದ ಸಿದ್ದಿಗಳು ದೇಶದ ಪ್ರಮುಖ ಜಾತಿಗಳಲ್ಲಿ ಹಂಚಿ ಹೋಗಿದ್ದರೂ ಇನ್ನೂ ಆ ಜಾತಿಗಳವರಿಗೇ ಅಸ್ಪೃಶ್ಯರಾಗಿ ಉಳಿದಿದ್ದು ಆಯಾ ಜಾತಿಗಳ ಅತ್ಯಂತ ಕೆಳಸ್ತರಗಳಲ್ಲಿದ್ದಾರೆ.

ಗುಲಾಮಗಿರಿಯ ನಿಷೇಧದ ನಂತರವೂ ಅದರ ಮುಂದುವರಿಕೆಗೆ ಪ್ರಯತ್ನಗಳು ನಡೆದವಾದರೂ ಅವು ಯಶಸ್ವಿಯಾಗಲಿಲ್ಲ. ಗೋವಾದಲ್ಲೂ ಪೋರ್ಚುಗೀಸರು ಅಂತಾರಾಷ್ಟ್ರೀಯ ಒತ್ತಡಗಳಿಗೆ

ಹೆದರಿ ಇದನ್ನು ನಿಷೇಧಿಸಿದರು. ಇದರಿಂದ ಸಿದ್ದಿಗಳಿಗೆ ಸ್ವಾತಂತ್ರ್ಯ ದೊರೆಯಿತಾದರೂ ಯಾವುದೇ ವಿದ್ಯೆ, ತರಬೇತಿ, ಹಣ, ಆಸ್ತಿ, ಅಸ್ಮಿತೆ ಇಲ್ಲದ ಗುಲಾಮರು ಒಮ್ಮೆಲೇ ಬಿಡುಗಡೆಯಾದಾಗ ಮುಂದೇನು? ಎಂಬ ಪ್ರಶ್ನೆ ತೀವ್ರವಾಗಿ ಕಾಡಿರಬೇಕು. ಗೋವಾದಂತಹ ನಗರಗಳಲ್ಲಿ ಅವರಿಗೆ ಕೆಲಸ ಸಿಗುವುದು ದುಸ್ತರವಾದಾಗ, ಪರೋಕ್ಷ ಶೋಷಣೆ, ಮೋಸಗಳು ಹೆಚ್ಚಾದಾಗ ಅನಿವಾರ್ಯವಾಗಿ ಅವರು ತಮ್ಮ ಮೂಲಸ್ಥಾನವಾದ ಕಾಡಿಗೇ ಮರಳಿರಬೇಕು. ಯಾವುದೇ ವಿದ್ಯಾಭ್ಯಾಸ, ತರಬೇತಿ ಪತ್ರದ ಅವಶ್ಯಕತೆಯಿಲ್ಲದ ನಿಸರ್ಗದ ಮಡಿಲು ಅವರಿಗೆ ಆಶ್ರಯ ನೀಡಿರಬಹುದು. ಗೋವಾಕ್ಕೆ ಹತ್ತಿರದ, ಕರ್ನಾಟಕದ ದಟ್ಟ ಕಾಡಿನಲ್ಲಿ ಬೇಟೆ, ಹಣ್ಣು ಹಂಪಲು, ಗೆಡ್ಡೆ ಗೆಣಸು, ಜೇನು ಇತ್ಯಾದಿಗಳು ಹೇರಳವಾಗಿದ್ದುದರಿಂದ ಅವರು ಆಕರ್ಷಿತರಾಗಿ ಈ ಕಡೆ ಬಂದಿರಬಹುದು. ಇಲ್ಲವೇ ಕರ್ನಾಟಕದ ಏಲಕ್ಕಿ, ಮೆಣಸು, ಸಾಂಬಾರ ದಿನಿಸುಗಳನ್ನು ಬೆಳೆಯುತ್ತಿದ್ದ ತೋಟಗಳು ಅವರಿಗೆ ಕೂಲಿ ಹಾಗೂ ಜೀವನೋಪಾಯಕ್ಕೆ ದಾರಿಯಾಗಿ ತೋರಿರಬಹುದು. "ವಿಜಯನಗರದ ಪತನಾನಂತರ ಬಲಿಷ್ಠರಾದ ಪೋರ್ಚುಗೀಸರು ಗೋವೆಯಲ್ಲಿ ಮತಾಂತರದ ಅಟ್ಟಹಾಸವನ್ನು ಹೊಂದಿ ಇನ್‌ಕ್ವಿಜಿಷನ್‌ನಂತಹ ಧಾರ್ಮಿಕ ವಿಚಾರಣೆಗಳಿಂದ ಒತ್ತಡ ಹಾಕಲಾರಂಭಿಸಿದರು. ಇದರಿಂದ ಬೆದರಿದ ಗೌಡ ಸಾರಸ್ವತಬ್ರಾಹ್ಮಣರು, ಗುಡಿಗಾರರು, ಬಂಗಾರದ ಕೆಲಸ ಮಾಡುವ ದೈವಜ್ಞರು ಹಾಗೂ 'ಸಿದ್ದಿಗಳು' ಕರ್ನಾಟಕದ ಘಟ್ಟಪ್ರದೇಶಗಳಿಗೆ ವಲಸೆ ಬಂದರು. ಗೋವಾದಿಂದ ವಲಸೆ ಬಂದವರಿಗೆ ಕೆಳದಿ ಅರಸರು-ವೆಂಕಟಪ್ಪ ನಾಯಕ, ಶಿವಪ್ಪ ನಾಯಕ, ರಾಣಿ ಅಬ್ಬಕ್ಕ, ಕಾಳು ಮೆಣಸಿನ ರಾಣಿ ಚೆನ್ನ ಭೈರಾದೇವಿ(Pepper Queen) ಮುಂತಾದವರು ಹೀಗೆ ಆಶ್ರಯ ನೀಡಿ ಭೂಮಿಗಳನ್ನು ದಾನ ಮಾಡಿದರು. 'ಹೀಗೆ ಬಂದವರಲ್ಲಿ ಆಫ್ರಿಕನ್ ಮೂಲದ ಸಿದ್ದಿಗಳೂ ಇದ್ದು, ಉತ್ತರಕನ್ನಡ, ಬೈಲಹೊಂಗಲಗಳ ಕಡೆ ನೆಲೆಗೊಂಡರು.'[೨೦] ಹೀಗೆ ಕಾರಣಗಳ ವಿಶ್ಲೇಷಣೆ ನಡೆಯಬೇಕಿದ್ದರೂ ಅವರು ಇಲ್ಲಿ ಬಂದು ನೆಲೆ ನಿಂತದ್ದಂತೂ ಚಾರಿತ್ರಿಕ ಸತ್ಯ.

೧. ಸಾಮಾಜಿಕ ವ್ಯವಸ್ಥೆ: ವೈಶಿಷ್ಟ್ಯತೆ ಮತ್ತು ಸ್ಥಿತ್ಯಂತರಗಳು

ಆಫ್ರಿಕಾದ ಮೂಲ ಬುಡಕಟ್ಟು ಸಮಾಜ

ಮೂಲತಃ ಆಫ್ರಿಕನ್ ಬುಡಕಟ್ಟುಗಳ ಸರಳ ಸಾಮಾಜಿಕ ವ್ಯವಸ್ಥೆಯಲ್ಲಿದ್ದ ಸಿದ್ದಿಯರು ಅಲ್ಲಿನ ಕಾಡುಗಳಲ್ಲಿ ಅಕ್ಷರಶಃ ರಾಜರೇ ಆಗಿದ್ದರು. ಬೇಟೆ, ಕಾಡಿನ ಉತ್ಪನ್ನಗಳ ಸಂಗ್ರಹ, ಪಶುಸಂಗೋಪನೆ, ಗಣಿಗಾರಿಕೆ ಮತ್ತು ಬೇಸಾಯಗಳಂತಹ ಮೂಲಕಸುಬುಗಳನ್ನು ಮಾಡಿಕೊಂಡು ಸಂತೃಪ್ತ ಜೀವನ ನಡೆಸುತ್ತಿದ್ದರು. ಕಾಡುಗಳು ಅವರ ಪಾಲಿಗೆ ಅಕ್ಷಯ ಪಾತ್ರೆಗಳೇ ಆಗಿದ್ದವು. ಕಿನ್‌ಶಿಪ್ ಅಥವಾ ರಕ್ತಸಂಬಂಧದ ಗಟ್ಟಿಯಾದ ನೆಲೆಗಟ್ಟಿನ ಮೇಲೆ ನಿಂತಿದ್ದ ಈ ಬುಡಕಟ್ಟು ಸಮುದಾಯಗಳು ತಮ್ಮ ಮೂಲಸಂಸ್ಕೃತಿ, ನಂಬಿಕೆ, ಆಚರಣೆ ಮತ್ತು ಕಟ್ಟುಕಟ್ಟಳೆಗಳಿಗೆ ಬದ್ಧರಾಗಿರುತ್ತಿದ್ದರು. ಆಫ್ರಿಕಾದ ನೂರಾರು ಬುಡಕಟ್ಟುಗಳಂತೆಯೇ ಸಿದ್ದಿಗಳ ಸಮಾಜವೂ ಇದ್ದಿರಬಹುದು. ಮೇಲಾಗಿ ಸಿದ್ದಿಗಳು ಕೇವಲ ಒಂದು ನಿರ್ದಿಷ್ಟ ಬುಡಕಟ್ಟಿಗೆ ಸೇರಿರದವರಾಗಿರದೆ ಪೂರ್ವ ಕರಾವಳಿ ಹಾಗೂ ಒಳನಾಡಿನ ವಿವಿಧ ಬುಡಕಟ್ಟುಗಳಿಗೆ ಸೇರಿದವರಾಗಿದ್ದಿರಬೇಕು. ನ್ಯಾಸ ಸರೋವರ, ಶಿದಿಮಾ ಬುಡಕಟ್ಟುಗಳ

ಬಗ್ಗೆ ಸಾಕಷ್ಟು ಚರ್ಚೆಗಳಾಗಿದ್ದರೂ ಇವರ ಮೂಲದ ಬಗ್ಗೆ ಇನ್ನಷ್ಟು ಅಧ್ಯಯನದ ಅವಶ್ಯಕತೆ ಇದೆ. ನೂರಾರು ಬುಡಕಟ್ಟುಗಳಿಗೆ ಆಶ್ರಯ ನೀಡಿದ್ದ ಆಫ್ರಿಕಾ ಖಂಡ ಅವುಗಳ ನಡುವೆ ಸಾಮರಸ್ಯವನ್ನು ಕಂಡಷ್ಟೇ ತೀವ್ರವಾಗಿ ವೈಮನಸ್ಯ ಮತ್ತು ದ್ವೇಷಗಳಿಗೂ ಸಾಕ್ಷಿಯಾಗಿದೆ. ಶಾಲೆ ಕಾಲೇಜುಗಳಿಗಿಂತ ಹೆಚ್ಚಾಗಿ ನಿಸರ್ಗದಿಂದಲೇ ಕಲಿಯುವ, ಕೋರ್ಟು ಕಛೇರಿಗಳಿಗಿಂತ ನ್ಯಾಯ ಪಂಚಾಯ್ತಿಗಳೇ ಮುಖ್ಯವಾಗಿದ್ದ, ಐಶ್ವರ್ಯ ಐಶಾರಾಮಕ್ಕಿಂತ ಕ್ರೂರಪ್ರಾಣಿಗಳ, ಬುಡಕಟ್ಟು ವೈಷಮ್ಯಗಳ ನಡುವೆ ಬದುಕುಳಿಯುವುದೇ ಅನಿವಾರ್ಯವಾಗಿದ್ದ, ಊಟಕ್ಕಿಂತ ಹೋರಾಟವೇ ಆದ್ಯತೆಯಾಗಿದ್ದ ಸಮಾಜ ಅವರದಾಗಿತ್ತು. ಆದರೆ ಇದ್ಯಾವುದೂ ಅವರಿಗೆ ಕಠಿಣ, ಬೇಸರ ಎನಿಸುತ್ತಿರಲಿಲ್ಲ. ಇರುವಷ್ಟರಲ್ಲೇ ತೃಪ್ತರಾಗಿದ್ದ ಈ ನಿಸರ್ಗಸ್ವರ್ಗದ ಕಪ್ಪುದೇವತೆಗಳ ಮೇಲೆ ರಾಕ್ಷಸರಂತೆರಗಿದ ಅರಬ್ ಮತ್ತು ಪೋರ್ಚುಗೀಸ್ ವ್ಯಾಪಾರಿಗಳು, ದೂರದೃಷ್ಟಿ ಇಲ್ಲದ, ಲಾಲಸೆಯ ಬುಡಕಟ್ಟು ನಾಯಕರೊಡನೆ ಸೇರಿ, ಇಡೀ ಖಂಡವನ್ನು ಅಕ್ಷರಶಃ ನರಕವನ್ನಾಗಿಸಿದರು.

ಗುಲಾಮಗಿರಿಯ ಪರಾಧೀನ ಸಮಾಜ

ಭಾರತದಲ್ಲಿರುವ ಸಿದ್ದಿಗಳ ಬುಡಕಟ್ಟು ಸಮಾಜದ ಬಗ್ಗೆ ಇರುವ ದಾಖಲೆಗಳಿಗಿಂತಲೂ ಅವರ ಗುಲಾಮಗಿರಿಯ ಬಗೆಗೆ, ಅದರಲ್ಲೂ ಅಮೆರಿಕದ ಗುಲಾಮಗಿರಿಯ ಬಗೆಗೆ ಸಾಕಷ್ಟು ಮಾಹಿತಿಗಳು ದೊರೆಯುತ್ತವೆ. ಅವರ ಸಮಾಜ ಎನ್ನುವುದಕ್ಕಿಂತಲೂ ಅವರ ಗುಲಾಮಗಿರಿಯ ಜೀವನ ಹೇಗಿತ್ತು ಎನ್ನುವುದನ್ನು ಈ ಕೆಳಗಿನ ದಾಖಲೆಗಳ ಮೂಲಕ ತಿಳಿಯಬಹುದಾಗಿದೆ.

ಗುಲಾಮರಾದ ನಂತರದ ಅವರ ಸಾಮಾಜಿಕ ಜೀವನ ಅವರದ್ದಾಗಿರದೆ ಕೇವಲ ಮಾಲೀಕರ ಸೇವೆಗೆ ಮುಡಿಪಾದ ಪರಾಧೀನ ಜೀವನವಾಗಿತ್ತು. ಸಮಾಜದ ಅತ್ಯಂತ ಕೆಳಸ್ತರದಲ್ಲಿದ್ದ ಗುಲಾಮರು ತಮ್ಮ ಕುಟುಂಬ, ಹೆಂಡತಿ ಮಕ್ಕಳು ಹೋಗಲಿ, ತಮ್ಮ ದೇಹದ ಮೇಲೆ ಕೂಡಾ ಅಧಿಕಾರ ಹೊಂದಿರಲಿಲ್ಲ.

'೧೮೯೧ರ ಜನಸಂಖ್ಯೆ ವರದಿ(Census Report.1891) ಪ್ರಕಾರ ಮೈಸೂರಿನ ಹೊಲೆಯರು ಯಾವುದೇ ಆಸ್ತಿಗಾಗಲೀ, ತಮ್ಮ ಸ್ವಂತ ದೇಹಕ್ಕೂ ಕೂಡ ಮಾಲೀಕರಲ್ಲ. ಜಮೀನ್ದಾರನೇ ಅವರ ಮೇಲೆ ವಂಶಪಾರಂಪರ್ಯ ಅಧಿಕಾರ ಹೊಂದಿದ್ದನು(Not only as Regards his property. but also with regard to his body, He was not his own master.). ಕಾನ್ನರ್ ಅವರು ತಮ್ಮ 'ತಿರೂವಾಂಕೂರಿನ ಬೆಟ್ಟದ ಬುಡಕಟ್ಟುಗಳು' ಎಂಬ ಲೇಖನದಲ್ಲಿ ದಾಖಲಿಸಿದಂತೆ ಹಿಂದಿನ ಕಾಲದಲ್ಲಿ ಗುಲಾಮರನ್ನು ಕೊಲೆಮಾಡುವುದನ್ನೂ ಅಪರಾಧ ಎಂದೇ ಪರಿಗಣಿಸುತ್ತಿರಲಿಲ್ಲ. ಏಕೆಂದರೆ ಕರಾರು ಪತ್ರದಲ್ಲಿಯೇ ಮಾಲೀಕನಿಗೆ ಗುಲಾಮನನ್ನು ಮಾರುವ ಇಲ್ಲವೇ ಸಾಯಿಸುವ ಅಧಿಕಾರ ನೀಡಲಾಗಿತ್ತು. ಇತ್ತೀಚೆಗೆ ಕೊನೆಯ ಅಂಶವನ್ನು ತೆಗೆಯಲಾಗಿದೆ. (In an Articls in Madras Journal - 1833, on 'The hill tribes of Travancore', Mr Conner Stated That in Earlier Times, The murder of a slave was Scarcely Considerd a Crime. The Deed of Transfer goes to say- 'you may sell or kill him or her..' The latter privilage now ofcourse ceased.'[21]

ಒಡೆಯರ ಪ್ರತಿಯೊಂದು ಆಜ್ಞೆಯನ್ನು ಗುಲಾಮರು ಪಾಲಿಸಬೇಕಾಗುತ್ತಿತ್ತು. ಅಡುಗೆ, ತೋಟದ ಕೆಲಸ, ಒಡೆಯರ ಅವಶ್ಯಕತೆಗಳ ಪೂರೈಕೆ, ಮಕ್ಕಳ ಲಾಲನೆ, ಅತಿಥಿ ಸತ್ಕಾರ, ಹೀಗೆ ಇಡೀ ದಿನ ಮಾಡಿದರೂ ಮುಗಿಯದ ಕೆಲಸ, ತೋಟದ ಕೆಲಸಕ್ಕಿಂತಲೂ ಮನೆ ಚಾಕರಿ ಸುಲಭವೆಂಬ ಸಾಮಾನ್ಯ ಅಭಿಪ್ರಾಯ ವಾಸ್ತವವಾಗಿರಲಿಲ್ಲ. ಮನೆಯಲ್ಲಿ ಕೂತು ತಮಗೆ ತೋಚಿದ್ದನ್ನೆಲ್ಲಾ ಮಾಡಲು ಒಡೆಯ-ಒಡತಿ ಹೇಳುತ್ತಿದ್ದರು. ಎಷ್ಟೋ ಬಾರಿ ಅವುಗಳಿಗೆ ಯಾವ ಅರ್ಥವೂ ಇರುತ್ತಿರಲಿಲ್ಲ. ಬೆಳಗ್ಗೆ ೫ ಗಂಟೆಯಿಂದ ಪ್ರಾರಂಭವಾದ ಕೆಲಸ ರಾತ್ರಿ ೧೨ ಗಂಟೆಯಾದರೂ ಮುಗಿಯುತ್ತಿರಲಿಲ್ಲ. ಕೆಲವೊಮ್ಮೆ ಜೈಲಿನಂಥ ಮನೆಯಿಂದ ಆಚೆ ಕೆಲಸ ಹೇಳಿದಾಗ ಖುಷಿಯಾದರೂ ನೆಮ್ಮದಿಯದಾಗಿರಲಿಲ್ಲ. ಅವರ ಮಕ್ಕಳನ್ನು ಸೇವಕರಂತೆ ಬೆಳೆಸುತ್ತಿದ್ದು ಪ್ರಾಯಕ್ಕೆ ಬಂದ ತಕ್ಷಣ ಅವರೂ ಗುಲಾಮರಾಗಿ ದುಡಿಯಬೇಕಾಗುತ್ತಿತ್ತು.'[೨೨]

ಚಿತ್ರ ೧೦. ಗುಲಾಮರಿಗೆ ನೀಡುತ್ತಿದ್ದ ದಾರುಣ ಶಿಕ್ಷೆಗಳಲ್ಲೊಂದು



ಬಾಣಲೆಯಿಂದ ಬೆಂಕಿಗೆ ಎಂಬಂತೆ ಗುಲಾಮರಾದ ನಂತರ ಅವರ ಕಷ್ಟಗಳು ನೂರ್ಮಡಿಗೊಳ್ಳುತ್ತಿದ್ದವು. ತೋಟದ ಕೆಲಸ, ಮನೆಗೆಲಸವೆಂಬಂತೆ ಯಾವುದೇ ಭೇದವಿಲ್ಲದೆ ಹಗಲೂ ರಾತ್ರಿ ದುಡಿಯಬೇಕಿತ್ತು. ಅವರ ವಾಸಸ್ಥಾನಗಳಾದರೋ ಹಂದಿಗೂಡಿಗಿಂತ ಕಿಷ್ಕಿಂದೆಯಾಗಿರುತ್ತಿದ್ದವು. ಕಿಟಕಿಗಳೇ ಇಲ್ಲದ ಇಕ್ಕಟ್ಟಾದ ಮನೆಗಳಲ್ಲೇ ಗುಲಾಮರೆಲ್ಲಾ ಇರಬೇಕಾಗಿತ್ತು. ಜೀತದಾಳುಗಳಿಗಾದರೂ ತಂದೆ ತಾಯಿ ಅಥವಾ ಊರಿದ್ದು ಅವರಿಗೆ ಅನ್ಯಾಯವಾದರೆ ಅಲ್ಲಿಗೆ ಓಡಿಹೋಗಬಹುದಿತ್ತು. ಇಲ್ಲವೇ ಅವರು ಇವರ ನೆರವಿಗೆ ಧಾವಿಸಬಹುದಿತ್ತು. ಆದರೆ ಈ ಕರಿಯ ಗುಲಾಮರಿಗೆ ತಮ್ಮವರೆಂಬ ಯಾರೂ ಇರದೆ ಅಕ್ಷರಶಃ ಪರದೇಶಿಗಳಾಗಿದ್ದರು. ಕೈಗೆ, ಕಾಲಿಗೆ ಸರಪಣಿ ಹಾಕಿಕೊಂಡೇ ಕೆಲಸ




ಮಾಡಬೇಕಿತ್ತು. ಸ್ವಲ್ಪ ವ್ಯತ್ಯಾಸವಾದರೂ ಅಥವಾ ಮಾಲೀಕ ಕುಟುಂಬದವರಿಗೆ ಸ್ವಲ್ಪ ಮನಸ್ಸು ಕೆಟ್ಟರೂ ಚಾಟಿಗಳಿಂದ ಚರ್ಮ ಹರಿಯುವಂತೆ ಗುಲಾಮರಿಗೆ ಹೊಡೆಯಲಾಗುತ್ತಿತ್ತು. ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದರಂತೂ ಅವರು ಜೀವಂತ ಉಳಿಯುವುದೇ ಕಷ್ಟವಾಗುತ್ತಿತ್ತು. 'ದಿ ರೂಟ್' ಚಲನಚಿತ್ರದಲ್ಲಿ ಚಿತ್ರಿಸಿದಂತೆ ಅಮೆರಿಕದ 'ಸ್ಲೇವ್ ಕ್ಯಾಚರ್ಸ್'ಗಳಂತೂ ತಮ್ಮ ಕ್ರೂರತೆಗೆ ತುಂಬಾ ಪ್ರಸಿದ್ಧಿ. ಹೀಗೆ ತಪ್ಪಿಸಿಕೊಳ್ಳಲು ಪ್ರಯತ್ನಿಸುವ ಗುಲಾಮರನ್ನು ಅತ್ಯಂತ ಅಮಾನುಷವಾಗಿ ಚಿತ್ರಹಿಂಸೆ ಮಾಡಿ, ಕೈ ಕಾಲು ಇತ್ಯಾದಿ ಅಂಗಾಂಗಗಳನ್ನು ಕಡಿದು ಹಾಕಿ ಇತರ ಗುಲಾಮರು ಆ ಕೆಲಸಕ್ಕೆ ಕೈ ಹಾಕದಂತೆ ಬೆದರಿಸುತ್ತಿದ್ದರು. ಭಾರತದಲ್ಲೂ ಪೊಲೀಸರು, ಸೈನಿಕರು, ಬಂಡವಾಳ ಶಾಹಿಗಳ ಬಾಡಿಗೆ ಭಂಟರು, ಅವರ ಬೇಟೆನಾಯಿಗಳು ಗುಲಾಮರನ್ನು ಹರಿದು ತಿನ್ನುತ್ತಿದ್ದವು.

ಮೊದಲೇ ಹಸಿವೆ, ಅರೆಹೊಟ್ಟೆ, ಅರೆಬೆಂದ, ಹಳಸಿದ, ಅಪೌಷ್ಟಿಕ ಆಹಾರ ತಿಂದು ಹತಾಶೆ ಗಳಿಂದ, ರೋಗಗಳಿಂದ ಜರ್ಜರಿತವಾದ ದೇಹ ಮನಸ್ಸುಗಳ ಮೇಲೆ ಮಾಲೀಕರ ಘೋರ ಶಿಕ್ಷೆಗಳು ಆಘಾತವನ್ನುಂಟು ಮಾಡಿ ಎಷ್ಟೋ ಗುಲಾಮರು ತೋಟದ ಗಿಡಗಳಿಗೆ ಗೊಬ್ಬರವಾಗಿ ಕಾಣೆಯಾಗುತ್ತಿದ್ದರು. ಕೇಳಿದರೆ ಓಡಿ ಹೋಗಿರಬೇಕು ಮಾರಾಯ್ರೆ ಎಂಬ ಸಿದ್ಧ ಉತ್ತರ ಸಿಗುತ್ತಿತ್ತು. ಇದು ಗುಲಾಮರು ದುಶ್ಚಟಗಳಿಗೆ ದಾಸರಾಗುವಂತೆ ಮಾಡುತ್ತಿತ್ತು. ದುಃಖವನ್ನು ಮರೆಸಲು ದುಶ್ಚಟಗಳಿಂದ ಮಾತ್ರ ಸಾಧ್ಯವೆಂಬ ಭಾವನೆಯಿಂದಾಗಿ ಇವುಗಳಿಗೆ ದಾಸರಾದ ಮೇಲೆ ಅದು ಅವರಿಂದ ಮಾಡಬಾರದ ಕೆಲಸಗಳನ್ನು ಮಾಡಿಸಿರಬಹುದು. ಕಳವು, ನಾಟಾ ಕಳ್ಳ ಸಾಗಾಣಿಕೆ ಇತ್ಯಾದಿಗಳನ್ನೇ ಅವಲಂಬಿಸಿದವರು ಈ ಗುಲಾಮರಿಗೆ ಹೆಂಡ ಸಾರಾಯಿ ಆಮಿಷ ನೀಡಿ ಆ ಕೆಲಸಗಳಿಗೆ ಬಳಸಿಕೊಂಡಿರಲೂಬಹುದು. ಇವೆಲ್ಲವೂ ಅವರ ಆರೋಗ್ಯ, ದಕ್ಷತೆ, ಕೆಲಸ ಹಾಗೂ ಉತ್ಪಾದಕತೆಯ ಮೇಲೆ ಪರಿಣಾಮ ಬೀರುತ್ತಿದ್ದವು. ಮುಪ್ಪಿನ ಕಾಲದಲ್ಲಂತೂ ಗುಲಾಮರ ಸ್ಥಿತಿ ಅಕ್ಷರಶಃ ನಾಯಿಪಾಡಾಗುತ್ತಿತ್ತು.

ಹೆತ್ತು, ಹೊತ್ತು, ಸಾಕಿ-ಸಲಹಿದ ಸ್ವಂತ ತಂದೆತಾಯಿಗಳನ್ನೇ ಕೊನೆಗಾಲದಲ್ಲಿ ನಿಕೃಷ್ಟವಾಗಿ ಕಾಣುವ, ಹಾಲು-ಬೆಣ್ಣೆ ಕೊಟ್ಟು ಬೆಳೆಸಿದ ಹಸುಗಳನ್ನೇ ಕೊನೆಗೆ ಕಸಾಯಿಖಾನೆಗೆ ತಳ್ಳುವ ಮನುಷ್ಯ ಏನೆಂದರೆ ಏನೂ ಅಲ್ಲದ ಗುಲಾಮರನ್ನು ಮುದಿವಯಸ್ಸಿನಲ್ಲಿ ಹೇಗೆ ತಾನೆ ಚೆನ್ನಾಗಿ ನೋಡಿ ಕೊಂಡಾನು? ಮನೆಯ ಸದಸ್ಯರೆಲ್ಲಾ ಮಾಲೀಕರ ಮನೆ ಹೊಲಗಳಲ್ಲಿ ಚಾಕರಿ ಮಾಡುತ್ತ ಬೆಳಗಿನಿಂದ ರಾತ್ರಿವರೆಗೆ ಅಲ್ಲೆ ಇದ್ದರೆ ಇಲ್ಲಿ ವಯಸ್ಸಾದವರನ್ನು ನೋಡಿಕೊಳ್ಳುವವರಾದರೂ ಯಾರು? ಸಾಲದ್ದಕ್ಕೆ ಸುಸ್ತಾಗಿ ಬಂದ ಕುಟುಂಬ ಸದಸ್ಯರಿಗೂ ಹತಾಶೆಗೊಂಡ ವೃದ್ಧರಿಗೂ ಕುಡಿತ, ತಲೆಮಾರಿನ ಅಂತರದಿಂದಾಗಿ ಪದೇ ಪದೇ ಜಗಳವಾದರೆ ಮನೆಯಲ್ಲಿ ಕುಡಿಯುತ್ತಾ ಕೂತ ಮಾಲೀಕ ತನ್ನ ನಾಯಿಗೆ ಮಲಗಲು ಇವರ ಜಗಳದಿಂದ ತೊಂದರೆಯಾಗುತ್ತದೆ ಎಂದು ಎದ್ದು ಬಂದು ಚಾಟಿಯಿಂದ ಬಾರಿಸಿ ಬಾರಿಸಿ ಸುಸ್ತಾಗಿ ವಾಪಸ್ ಹೋಗುತ್ತಿದ್ದ.

ಗುಲಾಮರು ತಮ್ಮತನ, ಸ್ವಾತಂತ್ರ್ಯ, ಸಂಸ್ಕೃತಿ, ಭಾಷೆ, ಧರ್ಮ ಹಾಗೂ ಬೆಲೆಗಳನ್ನು ಮಾತ್ರ ಕಳೆದುಕೊಳ್ಳದೆ ತಮ್ಮ ಮೂಲ ಹೆಸರನ್ನೂ ಕಳೆದುಕೊಂಡು ಮಾಲೀಕರ ಇಷ್ಟದ ಹೆಸರನ್ನು

ಇಟ್ಟುಕೊಳ್ಳಬೇಕಾಗುತ್ತಿತ್ತಲ್ಲದೆ ಬಹಳಷ್ಟು ಸಾರಿ ಅವರು ಹೆಸರೇ ಇಲ್ಲದ 'ನಂಬರ್'ಗಳಾಗುತ್ತಿದ್ದರು. ಪ್ರತಿಯೊಬ್ಬ ಗುಲಾಮನಿಗೂ ಒಂದೊಂದು ಸಂಖ್ಯೆಯುಳ್ಳ ತಾಮ್ರದ ಬಿಲ್ಲೆಯನ್ನು ನೀಡಲಾಗುತ್ತಿತ್ತು ಮತ್ತು ಅವರನ್ನು ಆ ಸಂಖ್ಯೆಯಿಂದಲೇ ಗುರುತಿಸಲಾಗುತ್ತಿತ್ತು. ಮನೆಯ ನಾಯಿ, ಕುದುರೆ, ಹಸುಗಳಿಗೂ ಹೆಸರಿಡುವ ಮನುಷ್ಯ ತನ್ನ ಸಹಜೀವಿಗೆ ಮಾತ್ರ ಆ ಮಾತ್ರದ ಗೌರವವನ್ನೂ ನೀಡಲಿಲ್ಲವೆಂಬುದು ಅಮಾನವೀಯತೆಯ ಉತ್ತುಂಗವಲ್ಲದೆ ಮತ್ತೇನು?



ಚಿತ್ರ ಗುಲಾಮರಿಗೆ ನೀಡುತ್ತಿದ್ದ ನಂಬರ್ ಬಿಲ್ಲೆಗಳು

ಗುಲಾಮಗಿರಿಯ ಸಂಕಷ್ಟ ಅನುಭವಿಸಿದವರಿಗಷ್ಟೇ ಅರ್ಥವಾಗುವ ದೈಹಿಕ–ಮಾನಸಿಕ ನೋವು ಮತ್ತು ಅವಮಾನವಾಗಿತ್ತು. ಗುಲಾಮಗಿರಿಯ ಇತಿಹಾಸದ ಪುಟಗಳನ್ನು ರಕ್ತ ಮತ್ತು ಬೆವರಿನಿಂದ ಮಾತ್ರ ಬರೆಯಬಹುದಾಗಿದೆ. ಇದರ ಬಗೆಗಿನ ಕೆಲವು ಅಮೆರಿಕನ್ ಗುಲಾಮರ ಅನುಭವಗಳನ್ನು ಈ ಕೆಳಗೆ ನೀಡಲಾಗಿದ್ದು ಅವು ಅವರ ನೋವಿನ ಸಾಗರದ ಕೆಲವು ಬಿಂದುಗಳು ಮಾತ್ರವೇ ಆಗಿವೆ.

'ಧಣಿ ಭರ್ವೆಲ್ ಗುಲಾಮರ ಮುಖದಲ್ಲಿ ದುಃಖ ಕಂಡರೆ ಕಿಡಿಕಿಡಿಯಾಗುತ್ತಿದ್ದ. ಧಣಿಯಬಳಿ ಸುಮಾರು ಎಪ್ಪತ್ತು ಗುಲಾಮರಿದ್ದರು. ಅವರನ್ನು ಮಾರಿದಾಗಲೆಲ್ಲ ತಾಯಿ–ಮಗ, ಗಂಡ–ಹೆಂಡತಿ ಶಾಶ್ವತ ವಿದಾಯಕ್ಕೆ ಬಲಿಯಾಗಬೇಕಾಗುತ್ತಿತ್ತು. ಆತನ ಬಳಿ ಗುಲಾಮನಾಗಿದ್ದ ನಮ್ಮ ಸಂಬಂಧಿಯೊಬ್ಬ ನೇಗಿಲಕೊಂಡಿಯನ್ನು ಅದು ಹೇಗೋ ಕಳೆದು ಹಾಕಿದ್ದ. ಈ ವಿಷಯ ಧಣಿಗೆ ತಿಳಿದು ಹೊಸ ಕೊಂಡಿಯನ್ನೇನೊ ನೀಡಿದ. ಆದರೆ ನಮ್ಮ ಸಂಬಂಧಿಗೆ ಹೆಣ ಬೀಳುವಂತೆ ಬಾರಿಸಲಾಯಿತು. ಇದಾದ ಸ್ವಲ್ಪ ದಿನಕ್ಕೇ ಕೊಂಡಿಗಳು ಮತ್ತೆ ಕಳೆದುಹೋದವು. ಧಣಿಯ ಶಿಕ್ಷೆಗೆ ಹೆದರಿದ ನಮ್ಮ ಸಂಬಂಧಿ ಉರುಲು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದ. ಧಣಿಯ ಕೈಯ್ಯಲ್ಲಿ ಶಿಕ್ಷೆಯನ್ನು ಅನುಭವಿಸುವ ಬದಲು ಸಾವೇ ಮೇಲೆಂದು ಆತ ತಿಳಿದುಕೊಂಡಿದ್ದನೇನೋ.'[೨೩] ಶ್ರೀಮತಿ ಕಮಲಾರವರ 'ಕಪ್ಪು ಹಕ್ಕಿಯ ಬೆಳಕಿನ ಹಾಡು' ಪುಸ್ತಕದಿಂದ ಹೆಕ್ಕಿ



'ಹಳ್ಳಿಯ ಮಾಸ್ತರನಾಗಿದ್ದ ಬಿಂಗಮ್ ನನ್ನ ಧಣಿ ಭರ್ವೆಲ್‌ರ ಮನೆಗೆ ಬರುತ್ತಿದ್ದ. ಆತನ ಹೆಂಡತಿ ಅಸೂಯೆಯಿಂದ ಏನು ಹೇಳಿದ್ದಳೋ ಏನೋ, ಒಂದು ದಿನ ಆತ ನನ್ನ ಜೊತೆ ಬಾ ಎಂದ. ಆತ ಕೋಣೆಗೆ ಹೋದದ್ದೇ 'ಲಿಸ್ಸಿ ನಿನ್ನನ್ನಿಗ ಚಾವಟಿಯಿಂದ ಥಳಿಸುತ್ತೇನೆ ನಿನ್ನ ಬಟ್ಟೆ ಬಿಚ್ಚು' ಎಂದ. 'ಆಯಿತು ಬಿಂಗಮ್ ಅವರೆ ಯಾತಕ್ಕೆ ಶಿಕ್ಷೆ'? ಎಂದರೆ 'ಎಂಥದ್ದೋ ಒಂದು ತಪ್ಪಿಗೆ ನಿನಗೆ ಥಳಿಸಬೇಕು' ಎಂದ. ನೆನಪಿಡಿ ನನಗಾಗ ಹದಿನೆಂಟರ ಹರೆಯ. ಸುಪುಷ್ಟವಾಗಿ ಬೆಳೆದ ದೇಹ. ನಾನು ಆತ್ಮವಿಶ್ವಾಸದಿಂದ 'ಕ್ಷಮಿಸಿ ಬಿಂಗಮ್ ಅವರೆ ನಿಮ್ಮೆದುರು ನಾನು ಬಟ್ಟೆ ಕಳಚಲಾರೆ. ನೀವು ನನಗಿಂತ ಬಲಿಷ್ಠರೆಂದು ನಿರೂಪಿಸಿ ನಂತರ ಥಳಿಸಿ. ಇಷ್ಟಕ್ಕೂ ಶಿಕ್ಷೆ ನೀಡುವ ಹಕ್ಕಿರುವುದು ನನ್ನ ಧಣಿಗೆ ಮಾತ್ರ'. ನನ್ನ ಮಾತು ಆತನನ್ನು ರೊಚ್ಚಿಗೆಬ್ಬಿಸಿರಬೇಕು. ಆತ ಹಗ್ಗವೊಂದನ್ನು ತಂದು ನನ್ನ ಕೈಗಳನ್ನು ಕಟ್ಟಿದ. ನಂತರ ಬೆನ್ನ ಹಿಂದಿನಿಂದ ಬಟ್ಟೆ ಹರಿದ. ಕೋಲೊಂದನ್ನು ತೆಗೆದುಕೊಂಡು ಭುಜಕ್ಕೆ ಹಿಗ್ಗಾಮುಗ್ಗಾ ಹೊಡೆಯತೊಡಗಿದ. ಹೊಡೆತದ ರಭಸಕ್ಕೆ ಚರ್ಮ ಕಿತ್ತುಬರತೊಡಗಿದಂತೆ ಹಸಿ ಗಾಯದ ಮೇಲೆ ಮತ್ತೆ ಮತ್ತೆ ಬಾರಿಸತೊಡಗಿದ. ಯಾತನಾಮಯ ಕ್ಷಣಗಳವು. ಆದರೆ ನನ್ನನ್ನು ಹಿಂಸಿಸುತ್ತಿರುವವನಿಗೆ ನನ್ನ ನೋವು ತಿಳಿಯದಿರಲಿ ಎಂದು ಕಣ್ಣೀರು ಹರಿಸಲಿಲ್ಲ. ಬದಲಿಗೆ ಆತ್ಮವಿಶ್ವಾಸದಿಂದ ನೋವನ್ನು ತುಟಿಕಚ್ಚಿ ಸಹಿಸಿ ಕಲ್ಲಿನ ಮೂರ್ತಿಯಂತೆ ನಿಂತೆ. ಚರ್ಮ ಸುಲಿದು ಆಳವಾದ ಗಾಯಗಳಾದವು. ನನ್ನನ್ನು ಬಿಟ್ಟ ತಕ್ಷಣ ಮನೆಗೆ ಓಡಿಹೋಗಿ ಧಣಿಯೆದುರು ಜೋರಾಗಿ ಕಿರುಚಿದೆ. 'ಧಣಿ ನಾನು ಏನು ತಪ್ಪು ಮಾಡಿದೆ ಅಂತ ಬಿಂಗಮ್ ಹತ್ತಿರ ಶಿಕ್ಷೆ ಕೊಡಿಸಿದಿರಿ?'[೨೪] ನಂತರ ಅಬ್ರಹಾಂ ಲಿಂಕನ್ನನ ಹೆಂಡತಿಗೆ ಸಹಾಯಕಳಾಗಿದ್ದು ಅವರ ಕೊನೆಗಾಲದಲ್ಲಿ ಎಲ್ಲರೂ ಅವರನ್ನು ಶೋಷಿಸಲು ಯತ್ನಿಸಿದಾಗ ಅವರನ್ನು ಕಾಪಾಡಿದ ಈ ಗುಲಾಮ ಹೆಣ್ಣಿನ ಕಥೆ ಈ ಶೋಷಣೆಯ ಇತಿಹಾಸದ ಕೇವಲ ಒಂದು ಪುಟ ಮಾತ್ರವೆಂದು ಹೇಳಬಹುದು.

ಅಮೆರಿಕದಲ್ಲಾದರೋ ಗುಲಾಮರ ಮಕ್ಕಳು ವಯಸ್ಕರಾಗುವವರೆಗೂ ಅವರನ್ನು ಗುಲಾಮ ಕೆಲಸಗಳಿಗೆ ಹಚ್ಚುತ್ತಿರಲಿಲ್ಲ. ಆದರೆ ಭಾರತದಲ್ಲಿ ಚಿಕ್ಕ ಚಿಕ್ಕ ಮಕ್ಕಳನ್ನೂ ಕೆಲಸಕ್ಕೆ ಹಚ್ಚುತ್ತಿದ್ದರಲ್ಲದೆ ಅವರಿಗೆ ಯಾವುದೇ ವಿದ್ಯಾಭ್ಯಾಸ ನೀಡುತ್ತಿರಲಿಲ್ಲ. ಅಕಸ್ಮಾತ್ತಾಗಿ ಅವರು ವಿದ್ಯಾವಂತರಾದರೆ ತಮ್ಮ ವಿರುದ್ಧ ತಿರುಗಿ ಬೀಳಬಹುದು, ಪ್ರಶ್ನಿಸಬಹುದೆಂಬ ಭಯ ಮಾಲೀಕರನ್ನು, ಸರಕಾರಗಳನ್ನು ಕಾಡುತ್ತಿತ್ತು. ಧರ್ಮ, ದೇವರು, ಕರ್ತವ್ಯ ಇತ್ಯಾದಿಗಳ ಹೆಸರಿನಲ್ಲಿ ಪ್ರತಿರೋಧದ ಮನೋಭಾವನೆಯನ್ನೇ ಹತ್ತಿಕ್ಕಲಾಗುತ್ತಿತ್ತು.

'ಗುಲಾಮರು ವಿದ್ಯಾವಂತರಾದರೆ ತಮ್ಮ ಅಸ್ತಿತ್ವಕ್ಕೆ ಅಪಾಯಕಾರಿಯೆಂಬುದು ಬಿಳಿಯರ ಭಯವಾಗಿತ್ತು. ಒಂದೊಮ್ಮೆ ಕಪ್ಪು ಜನಾಂಗ ಸುಶಿಕ್ಷಿತವಾದರೆ ಗುಲಾಮಪದ್ಧತಿ ಕೊನೆಗೊಳ್ಳಬಹುದೆಂಬ ಆತಂಕ ಒಡೆಯರನ್ನು ಕಾಡುತ್ತಿತ್ತು. ಈ ಕಾರಣದಿಂದಾಗಿಯೇ ಸಾರ್ವಜನಿಕ ಶಾಲೆಗಳಲ್ಲಿ ಗುಲಾಮರಿಗೆ ಶಿಕ್ಷಣ ನೀಡುವುದು ಕಾನೂನುಬಾಹಿರವಾಗಿತ್ತು.'[೨೫] ಜೊತೆಗೆ ಉತ್ತರ ಕನ್ನಡದಂತಹ ಪ್ರದೇಶಗಳಲ್ಲಿ

ಕೇವಲ ಎಸ್ಟೇಟ್‌ಗಳೇ ಹೆಚ್ಚಿದ್ದವೇ ಹೊರತು ಶಾಲೆಗಳಲ್ಲ. ದೂರದೂರದ ಶಾಲೆಗಳಿಗೆ ಹೋಗಲು ವಾಹನ ಸೌಕರ್ಯ, ರಸ್ತೆಗಳ ಕೊರತೆಯ ಜೊತೆಗೆ ಮಳೆಗಾಲದಲ್ಲಿ ಇರುವ ದಾರಿಗಳೂ ಸಂಪೂರ್ಣ ಬಂದ್ ಆಗುತ್ತಿದ್ದವು. ಇತ್ತೀಚಿನ ೩೦-೪೦ ವರ್ಷ ಹಿಂದಿನವರೆಗೂ ಸಿದ್ದಿ ಮಕ್ಕಳು ಶಾಲೆಗಳಲ್ಲಿ ಅವಮಾನಕ್ಕೆ-ಗೇಲಿಗೆ ಒಳಗಾಗುತ್ತಿದ್ದುದ್ದು ಸಾಮಾನ್ಯವಾಗಿತ್ತು. ಅವರ ಹಿಂದುಳಿಯುವಿಕೆಗೆ ಕಾರಣ ಕೇಳಿದಾಗ ಯಲ್ಲಾಪುರದ LAMP ಸೊಸೈಟಿಗಳು ಆಡಳಿತ ಮಂಡಳಿಯ ಸದಸ್ಯರೊಬ್ಬರು ಈ ಅಂಶವನ್ನು ಸರಿಯಾಗಿಯೇ ಗುರುತಿಸಿದರು. ಅವರೇ ಸ್ವತಃ ಅಥವಾ ಅವರ ತಲೆಮಾರು ಶಾಲೆ ಕಲಿಯಲು ಪಟ್ಟ ಪಾಡನ್ನು ಹೇಳಿಕೊಂಡರು. ೩೦-೪೦ ವರ್ಷಗಳ ಹಿಂದಿನ ಕಥೆಯೇ ಹೀಗಿದ್ದರೆ ೫೦೦ ವರ್ಷಗಳ ಹಿಂದೆ, ಗುಲಾಮರ ಮಕ್ಕಳ ಸ್ಥಿತಿ ಹೇಗಿರಬಹುದೆಂಬುದು ಅರ್ಥ ಮಾಡಿಕೊಳ್ಳುವ ವಿಚಾರ.

ಗುಲಾಮಗಿರಿಯಿಂದ ಬಿಡುಗಡೆಯಾದ ನಂತರ ಮತ್ತೆ ಬಂಧನ ಹಾಗೂ ಗುಲಾಮಗಿರಿಗೊಳಗಾಗುವ ಭಯದಿಂದ ಕರಾವಳಿ ಮತ್ತು ಬಯಲು ಸೀಮೆಯ ಗೊಡವೆಯನ್ನು ಬಿಟ್ಟು ದಟ್ಟ ಕಾಡಿನ, ಬೆಟ್ಟದ ತುದಿಯ ಪ್ರದೇಶಗಳಿಗೆ ಹೋಗಿ ಅಡಗಿಕೊಂಡರು. ಈ ಹಂತ ಸಿದ್ದಿಯರ ದೃಷ್ಟಿಯಿಂದ ಮಾತ್ರವಲ್ಲದೆ ಅರ್ಥಶಾಸ್ತ್ರ ಮತ್ತು ಮಾನವಶಾಸ್ತ್ರೀಯ ಅಧ್ಯಯನ ದೃಷ್ಟಿಯಿಂದ ಕೂಡಾ ತುಂಬಾ ವಿಶಿಷ್ಟ ಮತ್ತು ಅಪರೂಪದ ವಿಷಯವಾಗಿದೆ. ಏಕೆಂದರೆ, ಬುಡಕಟ್ಟಾಗಿದ್ದ ಸಮುದಾಯವೊಂದು ತನಗಿಷ್ಟವಿಲ್ಲದಿದ್ದರೂ ಯಾರದೋ ಒತ್ತಾಯಕ್ಕೆ ಕಟ್ಟುಬಿದ್ದು ನಾಗರಿಕತೆಯ ತೆಕ್ಕೆಯೊಳಕ್ಕೆ ಬಿದ್ದು, ನೂರಾರು ವರ್ಷಗಳ ನಂತರ ಅದರಿಂದ ತಪ್ಪಿಸಿಕೊಂಡು ಮತ್ತೆ ಕಾಡಿನ ಮಡಿಲಿಗೆ ಓಡಿ ಹೋಗಿ ತನ್ನ ನಾಗರಿಕತೆಯ ಕುರುಹುಗಳನ್ನೆಲ್ಲಾ ಕಳಚಿಕೊಂಡು ಮತ್ತೆ ಬುಡಕಟ್ಟಾಗಿ ತನ್ನನ್ನು ತಾನು ಸಂಪೂರ್ಣ ಮಾರ್ಪಡಿಸಿಕೊಳ್ಳುವ, ಮತ್ತೆ ಹಳೆಯ ಬುಡಕಟ್ಟು ಬದುಕನ್ನು, ಸಮಾಜವನ್ನು, ಸಂಸ್ಕೃತಿಯನ್ನು ಕಾಡಿನ ನಡುವೆ ಕಟ್ಟಿಕೊಳ್ಳುವ ಪರಿ ಅನನ್ಯ. ಇಷ್ಟೇ ಅಲ್ಲದೆ ನಾಗರಿಕತೆಯ ಗೊಡವೆಯೇ ಬೇಡವೆಂದು ಕಾಡಿನ ನಡುವೆ ಇದ್ದವರನ್ನು ಅಲ್ಲಿರಲು ಬಿಡದೆ ಬಂಡವಾಳಶಾಹಿ, ಪುರೋಹಿತಶಾಹಿ ಮತ್ತು ಅಧಿಕಾರಶಾಹಿ ಶಕ್ತಿಗಳು ಅಲ್ಲಿಗೇ ನುಗ್ಗಿ ಅವರನ್ನು ಮತ್ತೆ ತನ್ನ ಅಡಿಯಾಳನ್ನಾಗಿಸಿ ನಾಗರಿಕತೆಯ ತೆಕ್ಕೆಗೆ ತೆಗೆದುಕೊಂಡ ಘಟನೆ ಇತಿಹಾಸದಲ್ಲಿ ಮತ್ತೊಂದಿಲ್ಲವೆಂದೆನಿಸುತ್ತದೆ. ಇಷ್ಟೆಲ್ಲವೂ ಸುದೀರ್ಘ ಕಾಲಘಟ್ಟದಲ್ಲಿ, ಸುದೀರ್ಘ ಅಂತರದ ಎರಡು ಖಂಡಗಳ ನಡುವೆ ನಡೆದಿರುವುದೊಂದು ವಿಶೇಷವಾಗಿದೆ.

ಕೆಲವು ಸಿದ್ದಿಯರು ತಮ್ಮ ಹಿರಿಯರಿಂದ ಕೇಳಿ ತಿಳಿದಂತೆ ಹೇಳಿದ ಮಾತೆಂದರೆ ಈ ಗುಲಾಮಗಿರಿಯಿಂದ ಬಿಡುಗಡೆಯಾದ ಹಂತದಲ್ಲಿ ದಟ್ಟ ಕಾಡಿನ ನಡುವೆ ಸುದೀರ್ಘ ಯಾನ ಮತ್ತು ಸಂಕಷ್ಟದ ಬದುಕು ನಡೆಸಬೇಕಾಗಿ ಬಂದಿತಂತೆ. ಬಿರುಗಾಳಿ, ಮಳೆ, ಹಸಿವೆ, ಅನಾರೋಗ್ಯ ಇತ್ಯಾದಿಗಳು ಅವರನ್ನು ಹಸಿಮಾಂಸ, ಗೆಡ್ಡೆ ಗೆಣಸು ತಿಂದು ಬದುಕುವ ಹಂತಕ್ಕೂ ನೂಕಿತ್ತಂತೆ. ಮೂಲತಃ ಬುಡಕಟ್ಟೇ ಆಗಿದ್ದರೂ ನೂರಾರು ವರ್ಷ ನಗರಗಳಲ್ಲಿ ಬದುಕಿ ಮತ್ತೆ ಕಾಡಿನ ನಡುವೆ

ಜೀವನ ಕಟ್ಟಿಕೊಳ್ಳುವುದು ತುಂಬಾ ಕಷ್ಟವಾದರೂ ಅವರಲ್ಲಿ ರಕ್ತಗತವಾಗಿದ್ದ, ಆದರೆ ಹತ್ತಿಕ್ಕಲ್ಪಟ್ಟಿದ್ದ ಬುಡಕಟ್ಟು ಅನನ್ಯತೆ ಮತ್ತೊಮ್ಮೆ ಹೊರಬಂದು ಅವರಿಗೆ ನೆರವಾಗಿರಬೇಕು. ಒಂದೆಡೆ ಕಾಡಿನ ಕ್ರೂರಪ್ರಾಣಿಗಳು ಮತ್ತೊಂದೆಡೆ ನಾಡಿನ ಕಾಡುವ ಪ್ರಾಣಿಗಳ ನಡುವೆ ಹೆಂಗಸರು ಮಕ್ಕಳನ್ನು ಕಟ್ಟಿಕೊಂಡು ಹೋರಾಟದ ಜೀವನ ನಡೆಸಿ ತಮ್ಮದೇ ಬದುಕನ್ನು ಕಟ್ಟಿಕೊಂಡ ಈ ಜನರ ಅದಮ್ಯ ಜೀವನಪ್ರೀತಿ ಮತ್ತು ಕೆಚ್ಚೆದೆ ಅದ್ಭುತ ಮತ್ತು ಅನುಕರಣೀಯ.

ಪ್ರಸ್ತುತ ಸಾಮಾಜಿಕ ವ್ಯವಸ್ಥೆ

ವರ್ತಮಾನದಲ್ಲಿ ಸಿದ್ದಿಯರು ಯಾವ ಬಗೆಯ ಸಾಮಾಜಿಕ ಆರ್ಥಿಕ ಸ್ಥಾನಮಾನಗಳನ್ನು ಹೊಂದಿದ್ದಾರೆ? ಅವರಲ್ಲಿ ಆದ ಬದಲಾವಣೆಗಳಿಗೆ ಯಾವ ಚಾರಿತ್ರಿಕ ಅನಿವಾರ್ಯತೆಗಳು ಕಾರಣವಾದವು? ಸಿದ್ದಿಯರ ವರ್ತಮಾನದ ಬದುಕು ಯಾವ ಬಗೆಯ ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗುತ್ತಿದೆ ಎಂಬ ಪ್ರಶ್ನೆಗಳು ಬಹು ಮುಖ್ಯವಾದವುಗಳೆಂದು ಭಾವಿಸಿದ್ದೇನೆ. ಸಾಮಾಜಿಕ ಬದಲಾವಣೆಯು ಕೇವಲ ಕಾಲದ ಒತ್ತಡದ ಅನಿವಾರ್ಯತೆಯಿಂದ ಮಾತ್ರ ಸಂಭವಿಸುವಂತಹದ್ದಲ್ಲ. ಅದಕ್ಕೆ ಆಯಾ ಸಮುದಾಯಗಳು ಪಾಲ್ಗೊಳ್ಳುವ ಒಟ್ಟು ವ್ಯವಸ್ಥೆಯ ರಾಜಕೀಯ ಆರ್ಥಿಕ ಚಲನೆಗಳೂ ಕಾರಣವಾಗುತ್ತವೆ. ಪಾರಂಪರಿಕ ಸಮಾಜಗಳು ಇನ್ನೂ ಜೀವಂತವಿರುವ ಭಾರತದಂತಹ ದೇಶದಲ್ಲಿ ಸಿದ್ದಿಯರ ಸಾಮಾಜಿಕಾರ್ಥಿಕ ಸ್ಥಾನಮಾನಗಳ ಕುರಿತ ಅಧ್ಯಯನವು ಅನೇಕ ಬಿಕ್ಕಟ್ಟುಗಳನ್ನು ಎದುರಿಸ ಬೇಕಾಗುತ್ತದೆ.

ಆಫ್ರಿಕಾದ ಪೂರ್ವಕರಾವಳಿಯ ಜಂಬೇಸಿ ನದಿಯ ಆಸುಪಾಸಿನಿಂದ ಹಿಡಿದು ತರಲಾಗಿತ್ತು ಎಂದು ನಂಬಲಾದ ಸಿದ್ದಿಗಳು ಶಿದಿ, ಶಿದಿಮಾ, ಕಾಫಿರ, ಮೂರ್ ಎಂದು ಬೇರೆ ಬೇರೆ ಹೆಸರಿನಿಂದ ಕರೆಯಲಾಗುತ್ತಿತ್ತು. ಕಪ್ಪು ಬಣ್ಣ, ಆರಡಿ ಎತ್ತರದ ನಿಲುವು, ದಪ್ಪ ತುಟಿ, ಗುಂಗುರು ಕೂದಲು, ಮಾಸದ ನಗು ಇದು ಅವರ ವಿಶಿಷ್ಟ ದೈಹಿಕ ಚಹರೆಯಾದರೆ ಹಿಂದು, ಮುಸ್ಲಿಂ, ಕ್ರೈಸ್ತ ಮೂರೂ ಧರ್ಮಗಳಲ್ಲಿ ಸಿದ್ದಿಗಳಿರುವುದು ಅವರ ಸಾಮಾಜಿಕ, ಧಾರ್ಮಿಕ ವೈಶಿಷ್ಟ್ಯತೆ. ಗುಲಾಮಗಿರಿ ಯಿಂದಾಗಿ ಅವರು ತಮ್ಮ ಮಾಲೀಕರ ಧರ್ಮವನ್ನೇ ಪಾಲಿಸತೊಡಗಿರಬಹುದಾದ್ದರಿಂದ ಅವರು ಇಲ್ಲಿನ ಮೂರು ಪ್ರಮುಖ ಧರ್ಮಗಳಲ್ಲಿ ಹಂಚಿಹೋಗಿದ್ದಾರೆ. ಆದರೆ ದುರಂತವೆಂದರೆ ನಿಗ್ರೋ ಜನಾಂಗದ ಲಕ್ಷಣ ಹೊಂದಿರುವ ಇವರನ್ನು ಯಾವ ಧರ್ಮದವರೂ 'ನಮ್ಮವರು' ಎಂದು ಪ್ರೀತಿಸಲಿಲ್ಲ, ವೈವಾಹಿಕ ಸಂಬಂಧ ಬೆಳೆಸಲಿಲ್ಲ. ಈ ಕಾರಣದಿಂದಾಗಿ ಹಿಂದುಸಿದ್ದಿಯರು ಮುಸ್ಲಿಂಸಿದ್ದಿಯರನ್ನು, ಕ್ರಿಶ್ಚಿಯನ್ ಸಿದ್ದಿಯರು ಹಿಂದೂಸಿದ್ದಿಗಳನ್ನೂ ಮದುವೆಯಾಗುವ, ಆ ಮೂಲಕ ಜಾತಿಗಳ ಹಂಗಿನಿಂದ ಹೊರಬರುವ, ಜಾತ್ಯತೀತತೆಯನ್ನು ಜಗತ್ತಿಗೆ ಸಾರುವ ಅವಕಾಶ ಸಿದ್ದಿಗಳಲ್ಲಿ ಕಂಡುಬರುತ್ತದೆ.

ಸಿದ್ದಿಗಳ ಬಳಿಗಳ ಬಗೆಗೂ ಹೆಚ್ಚಿನ ಮಾಹಿತಿಗಳಿಲ್ಲವಾದರೂ ಡಿಯೋಗ್ ಸಿದ್ದಿಯವರು ತಿಳಿಸಿದಂತೆ ಅವರಲ್ಲಿ ಮೂರು ಪ್ರಮುಖ ಬಳಿಗಳಿವೆ. ಅವುಗಳೆಂದರೆ ೧. ಕುವಾ ೨. ಮಾಕುವಾ ೩. ಮಾಕುಂಜ. ವಿವಿಧ ಜಾತಿಗಳಲ್ಲಿ ಹಂಚಿಹೋಗಿರುವುದರ ಪರಿಣಾಮವಾಗಿ ಬಳಿಗಳ ಪ್ರಾಮುಖ್ಯತೆ ಕಡಿಮೆಯಾಗುತ್ತಿದೆ.

ಮುಖ್ಯ ಪರಂಪರೆಯ(Great Tradition) ದೃಷ್ಟಿಯಿಂದ ಸಿದ್ದಿಯರು ಭಾರತೀಯ ಸಮಾಜದ ಮೂರೂ ಪ್ರಮುಖ ಧರ್ಮಗಳಲ್ಲಿ ಹಂಚಿ ಹೋಗಿದ್ದರೂ ಕೂಡ ಸೂಕ್ಷ್ಮ ಪರಂಪರೆಯ ದೃಷ್ಟಿಯಿಂದ (Little Tradition) ಇವರು ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳಲು ಹೋರಾಡುತ್ತಿದ್ದಾರೆ. ಗುಜರಾತ್‌ನ ಸಿದ್ದಿಗಳ ಆಡುಮಾತಿನಲ್ಲಿ ಇನ್ನೂ ಆಫ್ರಿಕಾದ ಸ್ವಾಹಿಲಿ ಭಾಷೆಯ ಪದಗಳು ಉಳಿದುಕೊಂಡಿರುವುದು, ಸಿದ್ದಿನ್ಯಾಸ, ಡಮಾಮಿ ಇತ್ಯಾದಿಗಳು ಇದನ್ನೇ ಸೂಚಿಸುತ್ತಿವೆ. ಇವರಲ್ಲಿ ಹಿಂದುಸಿದ್ದಿ, ಮುಸ್ಲಿಮ್ ಸಿದ್ದಿ ಮತ್ತು ಕ್ರೈಸ್ತಸಿದ್ದಿ ಎಂಬ ಮೂರು ಪಂಗಡಗಳಿವೆ. ಧರ್ಮದಿಂದ ಧರ್ಮಕ್ಕೆ ಸಂಪ್ರದಾಯದಿಂದ ಸಂಪ್ರದಾಯಕ್ಕೆ ಇವರು ಸುಲಭವಾಗಿ ಬದಲಾಗುತ್ತಾರೆ. ಇವರು ತಮ್ಮ ಮಾಲೀಕರ ಧರ್ಮವನ್ನೇ ಅಂಗೀಕರಿಸುತ್ತಾರೆ.

ಹಿಂದುಸಿದ್ದಿಗಳು ಕನ್ನಡ, ಮರಾಠಿ, ಕೊಂಕಣಿ ಸೇರಿದ ಮಿಶ್ರಭಾಷೆಯನ್ನು, ಮುಸ್ಲಿಮ್ ಸಿದ್ದಿಗಳು ಉರ್ದುವನ್ನು ಮತ್ತು ಕ್ರೈಸ್ತಸಿದ್ದಿಗಳು ಕನ್ನಡ ಮಿಶ್ರಿತ ಗೋವ ಕೊಂಕಣಿಯನ್ನು ಮಾತನಾಡುತ್ತಾರೆ.

ಇವರದು ಸರಳ ಆಹಾರ. ಅನ್ನ ಗಂಜಿ ಇವರ ಮುಖ್ಯ ಆಹಾರ, ಅಕ್ಕಿ ಮತ್ತು ಜೋಳಗಳ ಜೊತೆಗೆ ರಾಗಿಯನ್ನೂ ಬಳಸುತ್ತಾರೆ. ಕಾಡಿನಲ್ಲಿ ಸಿಗುವ ಮುರುಗಲ, ಹುಣಿಸೆ, ಅಮಟೆ, ಹಲಸು, ಕೆಸುವು, ಗೆಣಸು ಇತ್ಯಾದಿಗಳ ಸಾರು, ಹಾಲಿಲ್ಲದ ಕಾಫಿ, ಚಹ ಸಾಮಾನ್ಯ. ಉಡ, ಹಂದಿ, ಪುನುಗು ಬೆಕ್ಕು, ಚಿಗರೆ, ಕಾಡುಕೋಳಿ, ಮುಂಗುಸಿ, ಅಳಿಲು, ಮೀನು, ಆಮೆ, ಏಡಿ ಮುಂತಾದ ಪ್ರಾಣಿ ಪಕ್ಷಿಗಳ ಮಾಂಸ ಇವರಿಗೆ ಪ್ರಿಯವಾದುದು. ಉತ್ತಮ ಬೇಟೆಗಾರರಾದ ಸಿದ್ದಿಗಳು ಇದೀಗ ಬೇಟೆ ನಿಷೇಧದಿಂದಾಗಿ ಅಪರೂಪಕ್ಕೆ ಕಾಡುಹಂದಿ, ಮೊಲ, ಉಡ, ಮೀನು, ಏಡಿ ಮುಂತಾದವುಗಳನ್ನು ಬಳಸುತ್ತಾರೆ. ಆಫ್ರಿಕಾದ ಮೂಲ ಆಹಾರಪದ್ಧತಿಯ ಪಳೆಯುಳಿಕೆಯಾಗಿ ಕೆಂಪಿರುವೆ ಮತ್ತು ಚಿಗಳಿ ಚಟ್ಣಿಗಳು ಮಾತ್ರ ಬಾಣಂತಿಯರ ಆಹಾರವಾಗಿ ಇನ್ನೂ ಉಳಿದಿವೆ.

ಪುರುಷರು ಸಾಂಪ್ರದಾಯಿಕವಾಗಿ ಕಸೆ ಅಂಗಿ, ಕಚ್ಚೆ ಅಂಗಿ, ರುಮಾಲು ಅಥವಾ ಟೋಪಿ ಧರಿಸುತ್ತಾರೆ. ಮಹಿಳೆಯರು ಸೀರೆ, ಕುಪ್ಪಸ ತೊಡುತ್ತಾರೆ. ಇತೀಚೆಗೆ ಸಿದ್ದಿ ಯುವಕರು ಎಲ್ಲರಂತೆ ಜೀನ್ಸ್, ಟೀ ಶರ್ಟ್ ಮತ್ತು ಅಂಗಿ ತೊಡುತ್ತಾರೆ. ಹೆಣ್ಣು ಮಕ್ಕಳು ಸೀರೆ, ಸಲ್ವಾರ್ ಕಮೀಜ್ ನೈಟಿ ಇತ್ಯಾದಿಗಳನ್ನು ಧರಿಸುತ್ತಾರೆ.

ಹಿಂದು, ಮುಸ್ಲಿಂ ಕ್ರೈಸ್ತಸಿದ್ದಿಗಳಲ್ಲಿ ಪರಸ್ಪರ ವಿವಾಹಸಂಬಂಧವಿದೆ. ಮೊದಲು ತೆರ ಕೊಡುವ ಪದ್ಧತಿ ಇತ್ತಾದರೂ ಇತ್ತೀಚೆಗೆ ವರದಕ್ಷಿಣೆ ಪದ್ಧತಿಯೂ ಚಾಲ್ತಿಗೆ ಬರುತ್ತಿದೆ. ಇಡಿ ಅಥವಾ ಸುಲಿಯದ ತೆಂಗಿನಕಾಯಿಯನ್ನು ಇವರು ಹಿರಿಯರು ಅಥವಾ ಮನೆದೇವರು ಎಂದು ಪೂಜಿಸುತ್ತಾರೆ. ಭೂತಕ್ಕೆ ಕುರಿ ಕೋಳಿ ಬಲಿ ಕೊಡುತ್ತಾರೆ.

ಪಿತೃಪೂಜೆಯ ಮಹಾಲಯ ಅಮಾವಾಸ್ಯೆಯನ್ನು ಹಿಂದುಸಿದ್ದಿಗಳು ವಿಜೃಂಭಣೆಯಿಂದ ಆಚರಿಸಿದರೆ ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಸಿದ್ದಿಯರು ಸಾಂಕೇತಿಕವಾಗಿ ಆಚರಿಸುತ್ತಾರೆ. ಶವವನ್ನು

ಹೂಳುವ ಪದ್ಧತಿ ಇವರಲ್ಲಿದೆ. ಮಡಿ–ಮೈಲಿಗೆ ಕಟ್ಟುಪಾಡು ಇವರಲ್ಲಿಲ್ಲ. ಆದರೆ ಬೇರೆ ಬುಡಕಟ್ಟಿಗೆ ಸೇರಿದ ಹೆಣ್ಣುಗಳನ್ನು ಮದುವೆಯಾದಾಗ(ಆ ಸಾಧ್ಯತೆಗಳು ತುಂಬಾ ಕಡಿಮೆ ಎಂದರೂ ಸಹ) ಅವರನ್ನು ಮನೆಗೆ ತುಂಬಿಸಿಕೊಳ್ಳುವ ಮೊದಲು ತಾತ್ಕಾಲಿಕವಾದ ಹುಲ್ಲಿನ ಗುಡಿಸಲು ನಿರ್ಮಿಸಿ ಅದರಲ್ಲಿ ಆ ಹೆಣ್ಣನ್ನು ಕೂರಿಸಿ ನಂತರ ಅದಕ್ಕೆ ಬೆಂಕಿ ಹಚ್ಚುತ್ತಾರೆ. ಆ ಹೆಣ್ಣು ಅದರಿಂದ ಹೊರಬಂದ ಮೇಲೆ ಹಿರಿಯರು ಅದರ ಬೂದಿಯನ್ನು ಸ್ವಲ್ಪ ಆ ಹೆಣ್ಣಿನ ಬಾಯಿಗೆ ಹಾಕಿ ಶುದ್ಧೀಕರಣ ಮಾಡಿದ ನಂತರ ಮಾತ್ರ ಅವರನ್ನು ಒಳಗೆ ಕರೆದುಕೊಳ್ಳುತ್ತಾರೆ. ಇದು ಮರುಹುಟ್ಟು ಅಥವಾ ಅಗ್ನಿ ಶುದ್ಧೀಕರಣವನ್ನು ಸೂಚಿಸುತ್ತಿರಬಹುದು.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಂಗಾವಳಿ ನದಿ ದಂಡೆಯ ಮೇಲಿನ ಸಿದ್ದಿ ಹಾಡಿಗೆ ಹೋದಾಗ ಅಲ್ಲಿನ ಸಿದ್ದಿ ಮನೆಯಲ್ಲಿದ್ದ ಮುದ್ದಾದ ಒಂದು ಪುಟ್ಟ ಮಗು ನನ್ನ ಗಮನ ಸೆಳೆಯಿತು. ಏಕೆಂದರೆ ಅದು ಸಂಪೂರ್ಣ ಸಿದ್ದಿ ಲಕ್ಷಣವನ್ನೂ ಹೊಂದಿರದ, ಸಂಪೂರ್ಣ ಭಾರತೀಯ ಲಕ್ಷಣವನ್ನೂ ಹೊಂದಿರದ ಒಂದು ಅಪೂರ್ವ ಲಕ್ಷಣಗಳ ಶಿಶುವಾಗಿತ್ತು. ಕುತೂಹಲದಿಂದ ವಿಚಾರಿಸಿದಾಗ ಆ ಮಗುವಿನ ತಾಯಿ ಕುಣಬಿಯಾಗಿದ್ದು ಅವಳ ಈಗಿನ ಸಿದ್ದಿಮಾವ ಅವಳನ್ನು ಚಿಕ್ಕವಳಿದ್ದಾಗಲೇ ಹಣ ಕೊಟ್ಟು ಕೊಂಡುಕೊಂಡಿದ್ದನಂತೆ. ನಂತರ ಅವಳನ್ನೇ ತನ್ನ ಸೊಸೆಯನ್ನಾಗಿಯೂ ಮಾಡಿ ಕೊಂಡನಂತೆ. ಇತಿಹಾಸದ ವಿಶಿಷ್ಟ ಪುನರಾವರ್ತನೆಯೋ, ಕಾಲಚಕ್ರದ ಸುತ್ತುವಿಕೆಯೋ ಏನೋ, ಯಾವ ಸಿದ್ದಿಗಳನ್ನು ಒಂದೊಮ್ಮೆ ಭಾರತೀಯರು ಕೊಂಡುಕೊಳ್ಳುತ್ತಿದ್ದರೋ ಅದೇ ಸಿದ್ದಿಯರು ಇಂದು ಒಬ್ಬ ಭಾರತೀಯಳನ್ನು ಕೊಂಡುಕೊಂಡಿದ್ದಾರೆ.

ಸಿದ್ದಿಯವರು ಎತ್ತರವಾದ ಮರದ ಕೆಳಗೆ ಮಣ್ಣಿನ ಜಗುಲಿಯ ಮೇಲೆ ಹುಲ್ಲಿನ ಹೊದಿಕೆಯ, ಬಿದಿರಿನ ತಡಿಕೆಯ ಮಣ್ಣಿನ ನೆಲದ ಸರಳ ಮನೆಗಳಲ್ಲಿ ವಾಸಿಸುತ್ತಾರೆ. ಬುಟ್ಟಿ, ಚಾಪೆ ಹಾಗೂ ಮಣ್ಣಿನ ಮಡಿಕೆಗಳೇ ಮನೆಯ ಆಸ್ತಿ. ತಲೆಮಾರುಗಳ ಗುಲಾಮಗಿರಿ ಅವರಿಗೆ ಆಸ್ತಿಯ ಐಶಾರಾಮದ ಕಲ್ಪನೆಗೂ ಅವಕಾಶ ನೀಡಿರಲಿಲ್ಲ. ಇತ್ತೀಚಿನ ತಲೆಮಾರುಗಳು ಈ ಕಳಂಕ ಅಥವ ಸ್ಟಿಗ್ಮಾದಿಂದ ಹೊರಬಂದು ಸ್ವಂತ ಆಸ್ತಿ, ಮನೆ, ಮೊಬೈಲ್ ಮತ್ತು ಆಟೋಮೊಬೈಲ್‌ಗಳ ಬಗ್ಗೆ ಚಿಂತಿಸಲು ಆರಂಭಿಸಿವೆ. ಮೊದಮೊದಲು ತಾವು ಪರಕೀಯರು, ಕಪ್ಪು ಬಣ್ಣದವರು ಎಂಬ ಅನಾಥಪ್ರಜ್ಞೆ ಇತ್ತಾದರೂ ಈಗ ಅದು ಹೋಗಿ ತಾವೂ ಈ ದೇಶದವರೇ ಎಂಬ ಅಭಿಮಾನ ಮೂಡುತ್ತಿದೆ.

ಆಡಳಿತ

ಈ ಕಾಲಘಟ್ಟದಲ್ಲಿ ತಮ್ಮ ಸುತ್ತಮುತ್ತಲಿನ ಬುಡಕಟ್ಟುಗಳ ಸಹಾಯ ಪಡೆದುಕೊಂಡಿರ ಬಹುದಾದ್ದರಿಂದ ಈ ಜನರ ಸಾಮಾಜಿಕ, ಸಾಂಸ್ಕೃತಿಕ ಜೀವನದ ಮೇಲೆ ಅವರ ಪ್ರಭಾವ ಗಾಢ ವಾಗಿಯೇ ಇದೆ. ಇತ್ತೀಚಿನವರೆಗೂ ಇತರ ಬುಡಕಟ್ಟುಗಳಲ್ಲಿರುವಂತೆ 'ತಮ್ಮ ಹಾಡಿಯ ಆಡಳಿತವನ್ನು ತಾವೇ ಆರಿಸಿಕೊಂಡ ಬುದ್ವಂತ, ಕೋಲಕಾರ ಮತ್ತು ಖಜಾಂದಾರ್ ಮೂಲಕ ನಡೆಸಿಕೊಂಡು ಹೋಗುತ್ತಿದ್ದರು.'[೨೬] ತಮ್ಮದೇ ನ್ಯಾಯ ಪಂಚಾಯಿತಿ, ಆಚರಣೆ, ಕಟ್ಟುಕಟ್ಟಳೆಗಳನ್ನು ರೂಪಿಸಿಕೊಂಡಿದ್ದರು. ತಮ್ಮ ವಿಶಿಷ್ಟ ದೈಹಿಕ ಲಕ್ಷಣಗಳಿಂದಾಗಿ ಇತರ ಬುಡಕಟ್ಟುಗಳ ಜೊತೆ ಕೊಡುಕೊಳ್ಳುವಿಕೆ ಅಷ್ಟಾಗಿ

ಬೆಳವಣಿಗೆ ಹೊಂದಲಿಲ್ಲವಾದರೂ ತಮ್ಮ ದೈನಂದಿನ ಅರ್ಥಿಕ ಜೀವನ ನಡೆಸಲು ಉದ್ಯೋಗ ನೀಡಿದ ಮಾಲೀಕರ ಪ್ರಭಾವ ಅವರ ಮೇಲೆ ಸಾಕಷ್ಟಾಗಿರುವುದು ಕಂಡುಬರುತ್ತದೆ. ಇದೀಗ ಹಲವಾರು ಜಾತಿಗಳಲ್ಲಿ ಹಂಚಿ ಹೋಗಿ ಆಯಾ ಧರ್ಮಗಳ ಪುರೋಹಿತಶಾಹಿಯ ಹಿಡಿತಕ್ಕೆ ಸಿಲುಕಿರುವುದರಿಂದ ಈ ಹಿಂದಿನ ಬುದ್ವಂತ ಕೋಲಕಾರರ ವ್ಯವಸ್ಥೆ ಕಣ್ಮರೆಯಾಗಿದ್ದು ತಾವೇ ಆರಿಸಿದ ಪಂಚರ ಸಮಿತಿ ಅಥವಾ ಜಂತೆಯ ಮುಂದೆ ತಮ್ಮ ವ್ಯಾಜ್ಯಗಳನ್ನು ತೆಗೆದುಕೊಂಡು ಹೋಗುತ್ತಾರೆ.

ದೈಹಿಕ ಚಹರೆ ಹಾಗೂ ಸ್ವಭಾವ

ಪೂರ್ವ ಆಫ್ರಿಕಾದ ನೀಗ್ರೋ ಜನಾಂಗದ ಲಕ್ಷಣಗಳನ್ನು ಸಿದ್ದಿಗಳು ಹೊಂದಿದ್ದಾರೆ. ಮಿರುಗುವ ಕಡುಗಪ್ಪು ಮೈಬಣ್ಣ, ಎತ್ತರದ, ಸದೃಢ ನಿಲುವು ಹೊಂದಿದ್ದು ಅವರ ಸರಾಸರಿ ಎತ್ತರ ಸುಮಾರು ೧೬೫ ಸೆಂ.ಮೀ. ಗುಂಗುರು ಕೂದಲು ಚಪ್ಪಟೆ ಮೂಗು, ಹಣೆ ಮೂಗು ಸೇರುವಲ್ಲಿ ಆಳವಾದ ತಗ್ಗು, ದುಂಡು ಅಥವಾ ಅಂಡಾಕಾರದ ಮುಖ, ದಪ್ಪ ತುಟಿಗಳು, ನೀಳವಾದ ಕೈಕಾಲುಗಳು ಇವರ ದೇಹಚಹರೆ. ಸದಾ ನಗುಮೊಗ, ದೈತ್ಯರಾದರೂ ಎಲ್ಲರನ್ನು ನಂಬುವ ಮಗುವಿನ ಮುಗ್ಧತೆ, ಯಾರಿಗೂ ಕೇರ್ ಮಾಡದ, ಏನನ್ನೂ ಕೂಡಿಡಲು ಬಯಸದ, ಭವಿಷ್ಯದ ಬಗ್ಗೆ ಚಿಂತೆ ಮಾಡದ, ಎಲ್ಲರಿಗೂ ಸೈ ಎನ್ನುವ ಮನೋಭಾವನೆ.

'ಗುಲಾಮಗಿರಿಯಿಂದಲೇ ಈ ನಾಡಿನಲ್ಲಿ ಬದುಕನ್ನು ಆರಂಭಿಸಿದ ಸಿದ್ದಿಯರಿಗೆ ಅತ್ಯಂತ ಬಲಾಢ್ಯ ದೇಹವಿದ್ದರೂ, ಆಳುವ ವರ್ಗದ ದಬ್ಬಾಳಿಕೆಗೆ ಸಿಲುಕಿದ ಇವರು ನಲುಗಿ, ನುಗ್ಗಾಗಿ ಪ್ರತಿಭಟನೆಯ ಸತ್ವವನ್ನು ಕಳೆದುಕೊಂಡು ಪುಕ್ಕಾಗಿದ್ದಾರೆ. ಬೌದ್ಧಿಕ ಮೇಲ್ಮೆಯನ್ನು ಸಾಧಿಸಿದ ನಾಗರಿಕ ಜಗತ್ತನ್ನು ಕಂಡಾಗ ಇವರಿಗೆ ಏನೋ ಭಯ. ಆದರೆ ವನ್ಯ ಲೋಕದಲ್ಲಿ ಇವರು ನಿರ್ಭೀತ ವನರಾಜನಂತೆ. ಕಾಡಿನಲ್ಲಿ ಅವರು ನಡೆದುದೇ ದಾರಿ. ನಾಳಿನ ಚಿಂತೆಯಿಲ್ಲದೆ ತಿರುಗುವ ಇವರಿಗೆ, ಪ್ರಾಣಿಗಳಂತೆ ಇಂದು ಹೊಟ್ಟೆ ತುಂಬಿದರಾಯಿತು. ತಮ್ಮ ಭವಿಷ್ಯದ ಬದುಕಿಗಾಗಿ ಸಂಗ್ರಹಿಸಿಟ್ಟುಕೊಳ್ಳುವುದು ಇವರಿಗೆ ಗೊತ್ತಿಲ್ಲ. ಮನೆಯಲ್ಲಿ ಒಂದು ದಿನದ ಊಟಕ್ಕಿದ್ದರೂ ಸಾಕು, ದುಡಿಯಲು ಹೋಗುವುದೇ ಇಲ್ಲ. ಹಾಗಂತ ಇವರು ಸೋಮಾರಿಗಳೂ ಅಲ್ಲ. ಇವರು ಕ್ರಿಯಾಶೀಲ ರಾಗಬೇಕಾದರೆ ಇವರ ಹೊಟ್ಟೆ ಹಸಿಯಬೇಕು. ಆಗ ಕೆಲಸಕ್ಕೆ ಇವರು ಹುಲಿಗಳು. ...ನಂಬಿಗಸ್ಥರು, ಸರಳ ಸ್ವಭಾವಿಗಳು.. ಯಾವುದೋ ಕಟ್ಟು ಕಟ್ಟಳೆಗಳಿಗೆ ತಮ್ಮನ್ನು ಬದ್ಧವಾಗಿಸಿಕೊಂಡು ಒದ್ದಾಡುವ ಸ್ವಭಾವ ಇವರದಲ್ಲ. ಪರಿಸರಕ್ಕೆ ಹೊಂದಿಕೊಂಡು ಹೋಗುವ ಸರಳ ವ್ಯಕ್ತಿಗಳು...' ಇವರ ಸ್ವಭಾವವನ್ನು ಕುರಿತು ಡಾ. ಎನ್.ಆರ್. ನಾಯಕ್ ಅವರು ತಮ್ಮ 'ಉತ್ತರಕನ್ನಡ ಜಿಲ್ಲೆ ಸಿದ್ದಿ ಜನಾಂಗ' ಕೃತಿಯಲ್ಲಿ ಹೀಗೆ ಹೇಳುತ್ತಾರೆ.

ಇವರು ಸರಳರೂ ಮುಗ್ಧರೂ ಆಗಿದ್ದರೂ ಹೊರಜಗತ್ತು ಇವರನ್ನು ತುಂಬಾ ನಿಕೃಷ್ಟವಾಗಿ ಕಾಣುವುದು ಕ್ಷೇತ್ರಕಾರ್ಯದಲ್ಲಿ ನನ್ನ ಅನುಭವಕ್ಕೂ ಬಂದಿದೆ. ಕಿರಾಣಿ ಅಂಗಡಿಯ ಮಾಲೀಕರೊಬ್ಬರಲ್ಲಿ ಸಿದ್ದಿಗಳ ಬಗ್ಗೆ, ಅವರ ಸ್ವಭಾವದ ಬಗ್ಗೆ ವಿಚಾರಿಸಿದಾಗ 'ಅವರು ಮೊದಲು ನರಭಕ್ಷಕರಾಗಿದ್ದರು,

ಗೋವೆಗೆ ಹೋಗುತ್ತಿದ್ದ ಹಡಗೊಂದು ಕಾರವಾರದ ಬಳಿ ಅಪಘಾತಕ್ಕೀಡಾದಾಗ ಅದರಿಂದ ತಪ್ಪಿಸಿಕೊಂಡು ಬಂದ ಈ ನರಭಕ್ಷಕರು ಸುತ್ತಮುತ್ತಲಿನ ಜನರನ್ನು ಹಿಡಿದು ತಿನ್ನುತ್ತಿದ್ದರು. ಆಗ ಸಿದ್ದಿಕ್ ಎಂಬ ಮುಸ್ಲಿಂ ಫಕೀರ ಅವರ ಮನವೊಲಿಸಿ ನರಭಕ್ಷಣೆಯನ್ನು ಬಿಡಿಸಿದನು. ಇದಕ್ಕಾಗಿಯೇ ಅವರನ್ನು ಸಿದ್ದಿ ಎಂದು ಕರೆಯಲಾಗುತ್ತದೆ. ಇವರು ಹಿಂದೆ ಕಷ್ಟಪಡುತ್ತಿದ್ದರೂ ಇಂದು ತುಂಬಾ ಸೋಮಾರಿಗಳಾಗಿದ್ದಾರೆ, ಜೇನುಮಾರಾಟದಲ್ಲಿ ಮೋಸ ಮಾಡುತ್ತಾರೆ, ನಾಟಾ ಕಳ್ಳ ಸಾಗಾಣಿಕೆ ಮಾಡುತ್ತಾರೆ, ಸರ್ಕಾರದ ಸವಲತ್ತುಗಳು ಅವರ ದುಡಿಮೆಯ ಮನೋಭಾವವನ್ನೇ ಕಸಿದುಕೊಂಡಿವೆ' ಎಂದೆಲ್ಲಾ ತಿಳಿಸಿದರು. ನಂತರ ನಾನು ನಿಮ್ಮ ಜಾತಿ ಯಾವುದೆಂದು ಕೇಳಿದಾಗ ಅವರ ಮಾತುಗಳ ಹಿಂದಿನ ಮರ್ಮದ ಅರಿವಾಯಿತು. ಸಾಮಾನ್ಯವಾಗಿ ಎಲ್ಲ ಮೇಲ್ಜಾತಿಗಳಲ್ಲಿ ಕಂಡುಬರುವಂತೆ ಗೌಡ ಸಾರಸ್ವತಬ್ರಾಹ್ಮಣರಾಗಿದ್ದ ಅವರಲ್ಲಿ ಕೂಡ ಇರುವ ಮೇಲರಿಮೆಯ ಮನೋಭಾವನೆಯ ಪರಿಣಾಮ ಇದಾಗಿರಬಹುದಾಗಿದೆ.

'ಸಿದ್ದಿಕಾ ಬಾರಾ ಬುದ್ಧಿ'[೨೭] ಎಂಬ ಹೇಳಿಕೆ ಈ ಜನ ಎಲ್ಲರಿಗೂ ಹೊಂದಿಕೊಂಡು ಹೋಗುತ್ತಾರೆ. ಅಂದರೆ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳದೆ ಅವರಿವರ ಮಾತುಗಳನ್ನು ಕೇಳುತ್ತಾರೆಂದು ತಿಳಿಸುತ್ತದೆ. ಇದಕ್ಕೆ ಅವರ ಪರಾಧೀನತೆ, ಅನಕ್ಷರತೆ, ಹಿಂದುಳಿಯುವಿಕೆಗಳೂ ಕಾರಣವಾಗಿರಬಹುದು.

ಸಿದ್ದಿಯರ ಈ ಸ್ಥಿತಿಗೆ ಬಹುಶಃ ಅವರು ಅರ್ಥಿಕವಾಗಿ ಸಬಲರಾಗದಿರುವುದು ಮತ್ತು ಸಂಘಟಿತರಾಗದಿರುವುದೇ ಮುಖ್ಯ ಕಾರಣವೆನಿಸುತ್ತದೆ. ಇದರ ಹಿಂದೆ ಅವರು ಮೂರು ಬೇರೆ ಬೇರೆ ಜಾತಿಗಳಲ್ಲಿ ಹರಿದು ಹಂಚಿ ಹೋಗಿರುವುದು ಮತ್ತು ಅವರು ಒಂದಾಗಲು ಧಾರ್ಮಿಕ ಮತ್ತು ರಾಜಕೀಯ ಪಟ್ಟಭದ್ರ ಹಿತಾಸಕ್ತಿಗಳು ತೊಡಕಾಗಿರುವದೇ ಮುಖ್ಯ ಕಾರಣವೆನಿಸುತ್ತದೆ. ಅನಧಿಕೃತವಾಗಿ ಒಂದೊಂದು ಜಾತಿಯ ಸಿದ್ದಿಗಳಿಗೆ ಒಬ್ಬೊಬ್ಬ ನಾಯಕರಿದ್ದು ಅವರ ವಿಷಯದಲ್ಲಿ ಇನ್ನೊಬ್ಬ ಸಿದ್ದಿ ನಾಯಕ ಮೂಗು ತೂರಿಸುವಂತಿಲ್ಲವೆಂಬ ಅಲಿಖಿತ ನಿಯಮ ರೂಪುಗೊಂಡಿರುವಂತಿದೆಯೆಂದು ಅಜ್ಞಾತವಾಗಿರಬಯಸಿದ ಸಿದ್ದಿ ತಿಳಿಸಿದ.

ಎಲ್ಲ ಸಿದ್ದಿಯರನ್ನು ಒಂದು ಮಾಡುವ ಪ್ರಯತ್ನಗಳು ನಡೆದೇ ಇಲ್ಲವೆಂದೇನೂ ಇಲ್ಲ. ೧೯೫೮ರಲ್ಲಿಯೇ ಕನ್ನಡದ ಖ್ಯಾತ ಲೇಖಕರಾದ ಶ್ರೀ ದಿನಕರ ದೇಸಾಯಿ ಅವರು ಉತ್ತರ ಕನ್ನಡದ ಸಿದ್ದಿಯರನ್ನೆಲ್ಲ ಒಂದೆಡೆ ಸಂಘಟಿಸಲು ಪ್ರಯತ್ನಿಸಿದರು. ಆದರೆ ಇದು ಫಲಪ್ರದವಾಗಲಿಲ್ಲ. ಆದರೂ 'ಕೆನರಾ ವೆಲ್‌ಫೇರ್ ಟ್ರಸ್ಟ್' ನ ಅಡಿಯಲ್ಲಿ ಅವರಿಗೆ ಸಹಾಯ ಮಾಡಲು ಪ್ರಯತ್ನಿಸಲಾಯಿತು. ನಂತರ ೧೯೮೪ರಲ್ಲಿ 'ದ ಸಿದ್ದಿ ಸ್ಟೇಟ್ ಅಸೋಸಿಯೇಷನ್' ಸ್ಥಾಪಿಸಲಾಯಿತು. ಪ್ರಜಾಪ್ರಭುತ್ವದ ತತ್ವಗಳಡಿ ಸ್ಥಾಪನೆಯಾದ ಈ ಸಂಘಟನೆಯಲ್ಲಿ ೭ ಜನ ಕಾರ್ಯಕಾರಿ ಸದಸ್ಯರು ಮತ್ತು ೧೪ ಜನ ಸಾಮಾನ್ಯ ಸದಸ್ಯರಿದ್ದರು. ಇದರ ಪ್ರಾದೇಶಿಕ ಘಟಕಗಳನ್ನು ಸ್ಥಾಪಿಸಿ ಸಿದ್ದಿ ಸಮುದಾಯದವರಿಂದಲೇ ಹಣಕಾಸಿನ ವ್ಯವಸ್ಥೆ ಮಾಡಲಾಗಿತ್ತು. ಇದು ಸಿದ್ದಿಯರಿಗೆ ಎಸ್ ಸಿ, ಎಸ್ ಟಿ ಮಾನ್ಯತೆ ಪಡೆಯಲು ಹೋರಾಟ ನಡೆಸಿತು. ಹೆಗ್ಗೋಡು ನೀನಾಸಂನ ಶ್ರೀ ಚಿದಂಬರ ಜಂಬೆಯವರು ೩೦

ಜನ ಸಿದ್ದಿ ಯುವಕರನ್ನೇ ಸೇರಿಸಿಕೊಂಡು ಆಫ್ರಿಕನ್ ಲೇಖಕ ಚಿನೂ ಅಚಿಬೆಯ ಪ್ರಸಿದ್ಧ ಕಥೆ 'ಥಿಂಗ್ಸ್ ಫಾಲ್ ಅಪಾರ್ಟ್'ನ ಕನ್ನಡ ಅನುವಾದ ಕಪ್ಪು ಜನರು ಕೆಂಪು ನೆರಳು ನಾಟಕವನ್ನು ಯಶಸ್ವಿಯಾಗಿ ಆಡಿದರಲ್ಲದೆ ರಾಜ್ಯದ ವಿವಿಧ ಭಾಗಗಳಲ್ಲಿಯೂ ಪ್ರದರ್ಶನ ನೀಡಲಾಯಿತು. ಸಿದ್ದಿಯರದೇ ಕಲಾತಂಡದ 'ಸಂಗ್ಯಾಬಾಳ್ಯ' ನಾಟಕ ಕೂಡಾ ಸಾಕಷ್ಟು ಪ್ರಸಿದ್ಧಿ ಪಡೆಯಿತು[೨೮].

ಸಿದ್ದಿಯರು ಈ ನೆಲಕ್ಕೆ ಹೊರಗಿನ ಅತಿಥಿಗಳಾಗಿದ್ದರೂ ಬುಡಕಟ್ಟಿನ ಅದರಲ್ಲೂ ಪರಿಶಿಷ್ಟ ಬುಡಕಟ್ಟಿನ ಸ್ಥಾನಮಾನವನ್ನು ನಿರಂತರ ಹೋರಾಟದ ಮೂಲಕ ಪಡೆಯುವಲ್ಲಿ ಯಶಸ್ವಿಯಾಗಿದ್ದರೂ ಅವರು ಸಾಮಾಜಿಕ-ಆರ್ಥಿಕ ಸ್ಥಿತಿಗತಿ ತುಂಬಾ ಶೋಚನೀಯವಾಗಿದ್ದು, ಸಾಂಪ್ರದಾಯಿಕ ಪರಿಕಲ್ಪನೆಯಲ್ಲಿ ಹೇಳಬೇಕೆಂದರೆ ಮುಖ್ಯವಾಹಿನಿಯ ಜೊತೆಗಿದ್ದು ಅದರಲ್ಲಿ ಒಂದಾಗದೇ ಒಂದು ರೀತಿಯ "ತ್ರಿಶಂಕು ಸ್ಥಿತಿ"ಯಲ್ಲಿದ್ದಾರೆ. ಬೇರೆಲ್ಲಾ ಬುಡಕಟ್ಟುಗಳೂ ಭಾರತದ ಈ ಸಂಕೀರ್ಣ ಸಮಾಜದ ಒಳಪದರವನ್ನು ಪ್ರವೇಶಿಸಲು ಸಾಧ್ಯವಾಗಿದ್ದರೂ ತಮ್ಮ ನೀಗ್ರೋ ದೈಹಿಕತೆ, ಬಣ್ಣ ಗುಲಾಮಗಿರಿ ಹಿನ್ನೆಲೆಯಲ್ಲಿ ಈ ಸಿದ್ದಿ ಬುಡಕಟ್ಟಿಗೆ ಮಾತ್ರ ಇದು ಸಾಧ್ಯವಾಗಿಲ್ಲದಿರುವುದು ವಿಪರ್ಯಾಸವಾಗಿದೆ. ಈಗಲೂ ಹಿಂದುಳಿದಿರುವ, ಕೀಳರಿಮೆಯಲ್ಲಿ ನರಳುತ್ತಿರುವ, ಎಲ್ಲಿಯೂ ಸಲ್ಲದ ಸಾಮಾಜಿಕ ಅಸ್ಪೃಶ್ಯತೆಯಿಂದ ನರಳುತ್ತಿರುವ, ಯಾವುದೇ ನಿರ್ದಿಷ್ಟ ಜಾತಿಯ ನೆರಳು ಸಿಗದೆ ಹಿಂದು, ಮುಸ್ಲಿಂ-ಕ್ರಿಶ್ಚಿಯನ್ ಜಾತಿಗಳಲ್ಲಿ ಹರಿದು ಹಂಚಿಹೋಗಿರುವ ಇವರ ಈ ವರ್ತಮಾನದ ದುಸ್ಥಿತಿಗೆ ಕೇವಲ ಅವರ ಮೈಬಣ್ಣ ಹಾಗೂ ಹೊರದೇಶೀಯರೆಂಬ ಅಂಶಗಳು ಮಾತ್ರ ಕಾರಣವೇ ಅಥವಾ ಬೇರೆ ಯಾವ ಅಂಶಗಳು ಕಾರಣವಾಗಿರಬಹುದು ಎಂಬುದು ಚರ್ಚೆಗೊಳಗಾಗಬೇಕಿದೆ.

೧. ಸಾಮಾಜಿಕ ಏಕಾಂಗಿತನ ಕಾರಣ ಮತ್ತು ಪರಿಣಾಮ:

ಪರಿಶಿಷ್ಟ ಜಾತಿಗಳಿಗೆ 'ಕೆಳಜಾತಿ ಮತ್ತು ಅಸ್ಪೃಶ್ಯತೆ'ಗಳಂತೆಯೇ 'ಸಾಮಾಜಿಕ ಏಕಾಂಗಿತನ'ವೆನ್ನುವುದು ಬುಡಕಟ್ಟುಗಳಿಗಂಟಿದ ದೊಡ್ಡ ಶಾಪವಾಗಿದೆ. ಅದರಲ್ಲೂ ಸಿದ್ದಿಗಳೆಂಬ ವಿಶಿಷ್ಟ ಸಮುದಾಯ, ಇತರೆಲ್ಲ ಬುಡಕಟ್ಟುಗಳಿಗಿಂತಲೂ ಹೆಚ್ಚಾಗಿ ಈ ಏಕಾಂಗಿತನದಿಂದ ಬಳಲುತ್ತಿದ್ದಾರೆ. ಇದೇ ಕಾರಣಕ್ಕಾಗಿ ಅವರು ಆಧುನಿಕ ಮಾನದಂಡಗಳಿಂದ ಅಳೆದಾಗ ಆರ್ಥಿಕವಾಗಿ ತುಂಬಾ ಹಿಂದುಳಿದಿದ್ದಾರೆ.

'ಎಲ್ಲಿ ಮಾನವ ಮಾನವರ ನಡುವೆ ಸಮಾನ ಗೌರವ, ಪ್ರೀತಿ ಹಾಗೂ ಮನುಷ್ಯ ಸಂಬಂಧಗಳು ಸಾಧ್ಯವಾಗುವುದಿಲ್ಲವೋ ಅಲ್ಲಿ ಅಂಕಿ ಅಂಶಗಳು ಎಷ್ಟೇ ಎತ್ತರದ ಪ್ರಗತಿಯನ್ನು ವಿವರಿಸಿದರೂ ಅದು ಅಭಿವೃದ್ಧಿ ಎಂದಾಗುವುದಿಲ್ಲ.'[೨೯]

ಸಮಾಜದ ಬಹುಸಂಖ್ಯಾತ ಜನರು ತಮಗಿಂತಲೂ ಬಣ್ಣ, ಉಡುಗೆ ತೊಡುಗೆ, ಆಚಾರ ವಿಚಾರ, ಬಡತನ, ಜಾತಿ ಸ್ಥಾನಮಾನಗಳಲ್ಲಿ ವಿಭಿನ್ನವಾಗಿರುವ ಜನರ, ಸಮುದಾಯದ ಬಗ್ಗೆ ಪೂರ್ವಗ್ರಹ ಪೀಡಿತರಾಗಿ ಯೋಚಿಸಿ ಅವರಿಗೆ ಸೂಕ್ತ ಸ್ಥಾನಮಾನ ನೀಡದೆ ತುಚ್ಛವಾಗಿ ಕಾಣುವುದರಿಂದ ಭಿನ್ನತೆಗೊಳಗಾದ ಸಮುದಾಯದಲ್ಲಿ ಭಯ, ದ್ವೇಷ, ಮತ್ಸರ, ಅನಾಥಪ್ರಜ್ಞೆ, ಏಕಾಂಗಿತನ ಮತ್ತು ಹೊರತಳ್ಳಲ್ಪಟ್ಟ ಭಾವನೆಗಳನ್ನು ಹೊಂದಬಹುದು. ಜೊತೆಗೆ ಸಾಮಾಜಿಕವಾಗಿ

ನಿಕೃಷ್ಟ ಸ್ಥಾನಮಾನ, ಅನಾದರ, ಆರ್ಥಿಕವಾಗಿ ಉತ್ಪಾದನಾ ಸಲಕರಣೆಗಳ ಮೇಲೆ ಮಾಲೀಕತ್ವ ವಿಲ್ಲದಿರುವಿಕೆ, ಸಮಾನ ಅವಕಾಶಗಳಿಂದ ವಂಚನೆ, ನೀತಿ ನಿರೂಪಣೆಗಳಲ್ಲಿ ದನಿ ಇಲ್ಲದಿರುವಿಕೆ ಇತ್ಯಾದಿಗಳಿಂದ ಶೋಷಣೆಗೊಳಗಾಗುವ ಸಾಧ್ಯತೆ ಇರುತ್ತದೆ. ಇದಕ್ಕೆ ಕೇವಲ ತಿರಸ್ಕಾರ, ತಾರತಮ್ಯ ಅಥವಾ ಅನಾಥಪ್ರಜ್ಞೆಯಲ್ಲದೆ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ಇತ್ಯಾದಿ ಆಯಾಮಗಳಿದ್ದು ಇವೆಲ್ಲವುಗಳನ್ನು ಸರಿಪಡಿಸಿ ಅವರಿಗೆ ತಾಯ್ತನದ ಅಕ್ಕರೆ ನೀಡಿದಾಗ ಮಾತ್ರ ಇದರಿಂದ ಹೊರಬರಲು ಸಾಧ್ಯವಾಗಬಹುದು.

ಅಮೆರಿಕದ ಕೆಂಪು ಚರ್ಮದ ಯುರೋಪಿಯನ್ನರು ಕರಿಯರ ಬಗ್ಗೆ ತಿರಸ್ಕಾರ ಅಸಹನೆ ಬೆಳೆಸಿಕೊಂಡದ್ದರಲ್ಲಿ ಅವರ ಅಹಮಿಕೆ, ಮೇಲರಿಮೆ, ಭೌತಿಕ ಸಿರಿವಂತಿಕೆ ಕಾರಣವಾಗಿದ್ದಿರಬಹುದಾದರೂ ಕೂಡಾ ಭಾರತದಂತಹ ಕಪ್ಪು ಮತ್ತು ಕಂದು ಬಣ್ಣದ ಚರ್ಮದ ಸಮಾಜದಲ್ಲಿ ಕೂಡ ನೀಗ್ರೋಗಳ ಬಗ್ಗೆ ಅಸಹನೆ ಏಕಿದೆಯೋ ನಾಕಾಣೆ. ನಿಜವಾಗಿ ಹೇಳಬೇಕೆಂದರೆ ಕನಿಷ್ಠ ನಾವಾದರೂ ಅವರ ಬಗ್ಗೆ ಸಹಾನುಭೂತಿ ಹೊಂದಿರಬೇಕಿತ್ತು. ಬಹುಶಃ ಬಿಳಿ ಚರ್ಮದ ಪೋರ್ಚುಗೀಸರು, ಬ್ರಿಟಿಷರು, ಅರಬ್ಬರು, ಹವ್ಯಕ ಬ್ರಾಹ್ಮಣರು, ನವಾಬರೇ ಅವರನ್ನು ತಂದು ತಮ್ಮ ಗುಲಾಮರನ್ನಾಗಿಸಿ ಕೊಂಡದ್ದರಿಂದ ಈ ಭಾವನೆ ಬೆಳೆದಿರುವ ಸಾಧ್ಯತೆಗಳಿದ್ದಿರಬಹುದು. ಅಲ್ಲದೆ ಆರ್ಯ-ದ್ರಾವಿಡ, ಮೇಲ್ಜಾತಿ ಕೆಳಜಾತಿಗಳ ಮೇಲಾಟದಲ್ಲಿ, ವಿದೇಶಿ ದಾಳಿಗಳು, ದಾಸ್ಯ, ವಸಾಹತುಶಾಹಿಗಳಿಂದಾಗಿ ನಮ್ಮಲ್ಲೇ ಕಪ್ಪು ಬಣ್ಣ ಕೀಳು ಮತ್ತು ಶ್ವೇತ ವರ್ಣ ಶ್ರೇಷ್ಠ ಎಂಬ ಭಾವನೆ ಆಳವಾಗಿ ಬೇರೂರಿದೆ. ಕೆಂಪು ಚರ್ಮದ ಯುರೋಪಿಯನ್ನರ ಬದಲು ಆಫ್ರಿಕನ್ನರೇನಾದರೂ ನಮ್ಮನ್ನು ಆಳಿದ್ದರೆ ಆಗ ನಮ್ಮ ಯೋಚನೆ ಈಗಿನದ್ದಕ್ಕೆ ವಿರುದ್ಧವಾಗಿರುತ್ತಿತ್ತೇನೋ?

೪. ಸಾಂಸ್ಕೃತಿಕ ಸ್ಥಿತಿಗತಿಗಳು

ಇದ್ದಕ್ಕಿದ್ದಂತೆ ತಮ್ಮ ಮೂಲ ನೆಲೆಯಿಂದ ಬೇರೊಂದು ದೂರದ ಖಂಡಕ್ಕೆ ಒತ್ತಾಯಪೂರ್ವಕವಾಗಿ ಕಿತ್ತು ಬಿಸುಡಲ್ಪಟ್ಟ ಈ ಸಮುದಾಯ ಗುಲಾಮಗಿರಿಯ ಸುಳಿಗೆ ಸಿಲುಕಿ ತಮ್ಮದೆನ್ನುವುದೆಲ್ಲವನ್ನೂ ಕಳೆದುಕೊಂಡು ತಮ್ಮ ಮಾಲೀಕರ ತೊತ್ತುಗಳಾದ್ದರಿಂದ ಅವರ ಮೂಲಸಂಸ್ಕೃತಿ ವಿಸ್ಮೃತಿಗೊಂಡಿದೆಯಷ್ಟೇ ಅಲ್ಲದೆ ಅಳಿಸಿಹೋಗಿದೆ. ಆದರೂ ಬುಡಕಟ್ಟುಗಳಿಗೆ ರಕ್ತಗತವಾದ ಜಿಗುಟುತನದ ಕೆಲವು ಲಕ್ಷಣಗಳು ತಮ್ಮತನವನ್ನು ಸಂಪೂರ್ಣವಾಗಿ ನಾಶವಾಗಲು ಬಿಡದೆ ಅದನ್ನು ಮರುಸೃಷ್ಟಿಸುವ ಸಾಮರ್ಥ್ಯ ಹೊಂದಿವೆ. ಇವುಗಳ ಜೊತೆಗೆ ಸುತ್ತಮುತ್ತಲಿನ ಪ್ರಕೃತಿ, ಸಮುದಾಯ ಮತ್ತು ಪರಿಸರಗಳ ಪ್ರಭಾವ ಎಲ್ಲ ಸಮುದಾಯಗಳ ಮೇಲೆಯೂ ಆಗಿರುತ್ತದೆ. ಹೀಗೆ ಪ್ರಭಾವಕ್ಕೊಳಗಾಗಿಯೂ ತಮ್ಮದೇ ಛಾಪು ಮೂಡಿಸಿರುವ ಸಿದ್ದಿಗಳ ಸಂಸ್ಕೃತಿಯ ಕಿರುಚಿತ್ರಣ ಇಲ್ಲಿದೆ.

ಸೃಷ್ಟಿ ಪುರಾಣ

ಮೂಲತಃ ಆಫ್ರಿಕಾ ಮೂಲದವರಾದ ಸಿದ್ದಿಗಳು ಗುಲಾಮಗಿರಿಯ ಬಲಿಪಶುಗಳಾಗಿ ಒತ್ತಾಯದಿಂದ ಭಾರತಕ್ಕೆ ತಂದು ಮಾರಲ್ಪಟ್ಟವರು. ನೂರಾರು ವರ್ಷಗಳ ಗುಲಾಮಗಿರಿ ಅವರ

ಅನನ್ಯತೆ, ಭಾಷೆ, ಸಂಸ್ಕೃತಿಗಳನ್ನು ನಾಶ ಮಾಡಿದೆ. ಹಾಗೆಯೇ ಅವರ ಸೃಷ್ಟಿ ಪುರಾಣದ ಬಗೆಗೂ ನಮಗೆ ಹೆಚ್ಚಿನ ಮಾಹಿತಿ ಸಿಗುವುದಿಲ್ಲ. ಆದರೆ ನನ್ನ ಕ್ಷೇತ್ರಕಾರ್ಯದಲ್ಲಿ ಭೇಟಿ ಮಾಡಿದ ಹಳಿಯಾಳದ ಸಿದ್ದಿ ಮುಖಂಡ ಶ್ರೀಯುತ ಡಿಯೋಗ್ ಬಿ ಸಿದ್ದಿಯವರಲ್ಲಿ ಅವರ ಸೃಷ್ಟಿ ಪುರಾಣದ ಬಗ್ಗೆ ವಿಚಾರಿಸಿದಾಗ ಅವರು ತಿಳಿಸಿದ ಕಥೆ ಸ್ವಾರಸ್ಯಕರವಾಗಿದೆ.

ಅದರಂತೆ "ದೇವರು ಭೂಮಿಯನ್ನು ಸೃಷ್ಟಿಸಿ ನಂತರ ಮಣ್ಣಿನಿಂದ ಗಂಡು-ಹೆಣ್ಣಿನ ಮೂರ್ತಿಗಳನ್ನು ಮಾಡಿ ಅವುಗಳಿಗೆ ಜೀವತುಂಬಿ ಚೆನ್ನಾಗಿ ಬಾಳುವಂತೆ ಹರಸಿದನು. ಆದರೆ ಮರುದಿನ ಮುಂಜಾನೆ ಬಂದು ನೋಡಿದಾಗ ಆ ಗಂಡು ಹೆಣ್ಣುಗಳನ್ನು ಒಬ್ಬ ರಾಕ್ಷಸ ತಿಂದು ಹಾಕಿರುವುದು ಗೊತ್ತಾಯಿತು. ದೇವರು ಮತ್ತೆ ಗಂಡು ಹೆಣ್ಣುಗಳನ್ನು ಸೃಷ್ಟಿಸುವುದು ರಾಕ್ಷಸ ಅವುಗಳನ್ನು ತಿನ್ನುವುದು ಇದೇ ಪುನಾರಾವರ್ತಿತವಾದಾಗ ದೇವರು ಒಂದು ದಷ್ಟಪುಷ್ಟವಾದ, ಎತ್ತರದ ನಿಲುವಿನ ಮೂರ್ತಿಯೊಂದನ್ನು ಮಾಡಿ ಅದಕ್ಕೆ ಜೀವ ತುಂಬಿ, ಈ ಗಂಡು ಹೆಣ್ಣುಗಳನ್ನು ಕಾಯಬೇಕೆಂದು ಅಪ್ಪಣೆ ಮಾಡಿ ಅದಕ್ಕೆ ನಿನಗೇನು ಬೇಕು ಎಂದು ಕೇಳಿದಾಗ ಅವನು ಒಂದು ಕತ್ತಿ, ಡಮಾಮಿ ಮತ್ತು ಒಂದು ನಾಯಿಯನ್ನು ನೀಡಿದರೆ ಸಾಕೆಂದು ಹೇಳಿದನು. ದೇವರು ಅದರಂತೆ ಅವುಗಳನ್ನು ನೀಡಿ ಹೋದನು. ರಾತ್ರಿ ಕತ್ತಲಿನಲ್ಲಿ ರಾಕ್ಷಸ ಬಂದಾಗ ನಾಯಿ ಜೋರಾಗಿ ಬೊಗಳಿ ಸಿದ್ದಿಯನ್ನು ಎಬ್ಬಿಸಿತ್ತು. ಆಗ ರಾಕ್ಷಸನನ್ನು ತನ್ನತ ಸೆಳೆಯಲು ಡಮಾಮಿ ಬಾರಿಸಿದನು. ನಂತರ ಅವನು ರಾಕ್ಷಸನೊಡನೆ ಹೋರಾಡಿ ಕತ್ತಿಯಿಂದ ಅವನನ್ನು ಸಂಹರಿಸಿ ಗಂಡು ಹೆಣ್ಣುಗಳನ್ನು ಮತ್ತು ಆ ಮೂಲಕ ಮನುಕುಲವನ್ನು ರಕ್ಷಿಸಿದನು. ಅವನೇ ಸಿದ್ದಿಗಳ ಮೂಲ ಪುರುಷ. ಹೀಗೆ ತಾವು ಸಿದ್ದಿಗಳು ಮನುಕುಲದ ರಕ್ಷಕರು ಎಂದು ಹೆಮ್ಮೆಯಿಂದ ಡಿಯೋಗ್ ಸಿದ್ದಿಯವರು ಹೇಳಿ ಕೊಂಡರು. ಈ ಕಥೆ ಈ ಜನಾಂಗದ ಜೀವನೋಪಾಯದ ಅರ್ಥಿಕತೆಯಲ್ಲಿ ಅವರು ಮೂಲತಃ ಬೇಟೆಗಾರರೆಂಬುದನ್ನೂ ತಿಳಿಸುತ್ತದೆ.

ಸಂಸ್ಕೃತಿ

ಶತಮಾನಗಳುರುಳಿದರೂ ಯಾವ ದೈಹಿಕ ಸಂಕರದಿಂದಲೂ ಇಲ್ಲವಾಗದ ನೀಗ್ರೋ ಚಹರೆಗಳನ್ನು ಸಿದ್ದಿಯರು ಉಳಿಸಿಕೊಂಡು ಬಂದಿದ್ದಾರೆ. ಹೀಗೆ ಇವರಿಗೆ ಯಾವ ಬಗೆಯ ಚಹರೆಗಳೂ ಇಲ್ಲ ವೆಂದೇನಲ್ಲ. ಸಿದ್ದಿಯರ ಸ್ಮೃತಿಗಳಲ್ಲಿ, ಅವರ ಕೆಲವು ಆಚರಣೆ, ನೃತ್ಯಗಳಲ್ಲಿ ಆಫ್ರಿಕಾದ ನೆಲದ ಸೊಗಡಿದೆ. ಎಲ್ಲೋ ತಪ್ಪಿಹೋದ ಬದುಕಿನ ನಾದ ತನ್ನ ಲಯವನ್ನು ಇನ್ನೂ ಕ್ಷೀಣವಾಗಿ ಉಳಿಸಿಕೊಂಡಿದೆ. ಅವರ ಘುಗಡಿ ಕುಣಿತ, ಸಿದ್ದಿನ್ಯಾಸಗಳಲ್ಲಿ ಆಫ್ರಿಕಾದ ಮಣ್ಣಿನ ಗುರುತುಗಳು ಕಾಣಸಿಗುತ್ತವೆ. ಸೋತ ಸಮುದಾಯಗಳಿಗೆ ಸಹಜವಾಗಿಯೇ ಇರುವ ಒಂದು ಜಿಗುಟು ಗುಣ ಇವರಿಗಿದೆ. ತಾವು ಇನ್ನೇನು ಕಳೆದೇ ಹೋದೆವೆಂಬ ಆತಂಕದ ಘಳಿಗೆಗಳಲ್ಲಿ ಸೋತ ಸಮುದಾಯಗಳು ತಮ್ಮ ಒಳಗೆ ಅಸಾಮಾನ್ಯ ಸೃಜನಶೀಲ ಚೈತನ್ಯವನ್ನು ಉಳಿಸಿಕೊಂಡು ಬರುತ್ತವೆ. ಸಿದ್ದಿಯರ ಕೆಲವು ನಡವಳಿಕೆಗಳಲ್ಲಿ ಅವರ ಮೂಲಸಂಸ್ಕೃತಿಯ ಲಯಗಳು ಉಳಿದುಬಂದಿರುವುದು ಕಾಣಬರುತ್ತದೆ.

'ತಮ್ಮ ಮೂಲ ನೆಲದಿಂದ ಅನಾಮತ್ತಾಗಿ ತಿಳಿಯದ ಇನ್ನೊಂದು ದೂರದ ಖಂಡಕ್ಕೆ ಕಿತ್ತೆಸೆಯಲ್ಪಟ್ಟ ದ್ದಲ್ಲದೆ ನಿರಂತರ ಗುಲಾಮಗಿರಿ ಅವರ ನೆಲ, ಭಾಷೆ, ಸಂಸ್ಕೃತಿ, ಪರಂಪರೆಗಳನ್ನು ಕಿತ್ತುಕೊಂಡು ಮೂಕರನ್ನಾಗಿಸಿತು. ದಾಸ್ಯದಿಂದ ತಪ್ಪಿಸಿಕೊಂಡ ನಂತರ ನಾಡಿನಲ್ಲಿರದೆ ಮತ್ತೆ ತಮ್ಮ ಮೂಲ ಆಫ್ರಿಕಾದ ಜಂಬೇಸಿಯನ್ನೇ ಹೋಲುವ ಮಲೆನಾಡಿನ ಕಾಡಿಗೆ ಹಿಂತಿರುಗಿದ ಮೇಲೂ ಕೀಳರಿಮೆ, ಪಕ್ಷಪಾತ, ವರ್ಣಭೇದ, ಶೋಷಣೆ ಇತ್ಯಾದಿಗಳಿಂದ ನಲುಗಿದ ಈ ನತದೃಷ್ಟ ಜನಾಂಗ ಇವೆಲ್ಲದರ ನಡುವೆಯೂ ತನ್ನನ್ನು ಶೋಷಿಸಿದ, ಅಮಾನುಷವಾಗಿ ನಡೆಸಿಕೊಂಡವರಿಗೂ ಪ್ರತಿಯಾಗಿ ಹಾಡು ನೃತ್ಯಗಳ ಕೊಡುಗೆ ನೀಡಿದೆ. ಅವರ ಡಮಾಮಿ ನೃತ್ಯ ತನ್ನದೇ ಗತ್ತು, ಲಯ, ಹೆಜ್ಜೆ ಗತಿಗಳಿಂದ ದೇಶದ ಇತರ ನೃತ್ಯಗಳಿಗಿಂತ ವಿಭಿನ್ನವಾಗಿದ್ದು ಆಫ್ರಿಕನ್ ಮೂಲವನ್ನು ನೆನಪಿಸುತ್ತದೆ. ಏಕೆಂದರೆ ಈ ಡಮಾಮಿ ವಾದ್ಯ ದೇಶದ ಇನ್ನಾವುದೇ ಬುಡಕಟ್ಟುಗಳಲ್ಲೂ ಕಂಡುಬರುವುದಿಲ್ಲ. ಅಲ್ಲದೆ ಡಮಾಮಿ ಬಾರಿಸುವಾಗ ಇಬ್ಬರು ಮಹಿಳೆಯರು ಇಲ್ಲವೇ ಸೀರೆಯುಟ್ಟ ಇಬ್ಬರು ಪುರುಷರು ನವಿಲುಗರಿ ಮತ್ತು 'ಮಚಾಕೆ' ಎಂಬ ತೆಂಗಿನಕಾಯಿ ಹಿಡಿದು ಕುಣಿಯುತ್ತಾರೆ. ಈ ರೀತಿ ತೆಂಗಿನ ಬುರುಡೆ ಹಿಡಿದು ಕುಣಿಯುವುದು ಮತ್ತು ಹಿರಿಯರ ಹಬ್ಬದಲ್ಲಿ ಇದನ್ನು ಆಚರಿಸುವುದು ಇವುಗಳನ್ನೆಲ್ಲಾ ನೋಡಿದಾಗ ಇವು ಆಫ್ರಿಕನ್ ಮೂಲದ ಆಚರಣೆ ಎನಿಸುತ್ತವೆ.'[೩೦] ಇತ್ತೀಚಿನ ದಿನಗಳಲ್ಲಿ ಬಹುಬೇಡಿಕೆಯಲ್ಲಿರುವ ಈ ನೃತ್ಯ ದೇಶದ ಸಾಂಸ್ಕೃತಿಕ ಉತ್ಸವಗಳ ಅವಿಭಾಜ್ಯ ಅಂಗವಾಗಿದೆ. ಹೀಗಾಗಿ ಗುಜರಾತಿನ ಸಿದ್ದಿಗಳನ್ನೂ ಮೀರಿಸುವಂತೆ ಕರ್ನಾಟಕದ ಸಿದ್ದಿಗಳ ಕಲಾತಂಡಗಳು ಪ್ರಸಿದ್ಧಿ ಪಡೆಯುತ್ತಿದ್ದು ಕಲಾತಂಡಗಳ ಸಂಖ್ಯೆಯಲ್ಲೂ ಏರಿಕೆ ಕಂಡುಬಂದಿದೆ.

ಇನ್ನು ದೇಶೀಯ ಪರಿಸರದ ಪ್ರಭಾವದಿಂದ ಇವರು ಘುಗಡಿ ನೃತ್ಯವನ್ನೂ ತಮ್ಮದಾಗಿಸಿ ಕೊಂಡಿದ್ದಾರಲ್ಲದೆ ಅದಕ್ಕೆ ತಮ್ಮತನದ ಸ್ಪರ್ಶವನ್ನೂ ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಡಮಾಮಿ ಎದೆ ನಡುಗಿಸುವ ಗಂಡು ಕಲೆಯಾದರೆ, ಘುಗಡಿ ಕಲಾತ್ಮಕತೆ ಲಾಲಿತ್ಯದ ನವಿರಾದ ಹೆಣ್ಣುಮಕ್ಕಳ ನೃತ್ಯವಾಗಿದೆ. ಮಣ್ಣಿನ ಮಡಿಕೆ, ಮೊರ ಇತ್ಯಾದಿಗಳನ್ನು ಹಿಡಿದು ವೃತ್ತಾಕಾರದಲ್ಲಿ ಸುತ್ತುತ್ತ, ತಮ್ಮ ನಿತ್ಯಜೀವನದ ಕೆಲಸಗಳನ್ನು ಹಾಡು, ನೃತ್ಯ, ಅಭಿನಯದ ಮೂಲಕ ಅಭಿವ್ಯಕ್ತಿಗೊಳಿಸುವ ಈ ನೃತ್ಯವೂ ಇತರ ಬುಡಕಟ್ಟುಗಳ ಘುಗಡಿ ನೃತ್ಯಕ್ಕಿಂತ ವಿಭಿನ್ನವಾಗಿ ನಿಲ್ಲುತ್ತದೆ. ಉಳಿದಂತೆ ಹೋಳಿ ಸಿಗ್ಮ ಮತ್ತು ಮೊಹರಂ ಕುಣಿತಗಳು ಇವರಲ್ಲಿವೆ.

ಇವರ ಭಾಷೆ ಲಿಪಿ ಇಲ್ಲದ, ಕೊಂಕಣಿ, ಮರಾಠಿ, ತುಳು ಮತ್ತು ಕನ್ನಡಗಳ ಮಿಶ್ರಣದ 'ಸಿದ್ದಿ ಭಾಷೆ'. 'ಗುಜರಾತಿನ ಸಿದ್ದಿಗಳ ಭಾಷೆಯಲ್ಲಿ ಇಂದಿಗೂ ಆಫ್ರಿಕಾದ ಸ್ವಾಹಿಲಿ ಭಾಷೆಯ ಪದಗಳು ಉಳಿದಿವೆಯಾದರೂ ಕರ್ನಾಟಕದಲ್ಲಿ ಆ ರೀತಿಯ ಉದಾಹರಣೆಗಳಿಲ್ಲ'[೩೧] ಮೌಖಿಕವಾಗಿ ಉಳಿದು ಬಂದಿರುವ ಅವರ ಒಗಟು, ಕತೆ, ಹಾಡುಗಳಲ್ಲಿ ಕಾಡು, ಸಾಹೇಬ, ಗುಲಾಮ, ಕಾಡುಪ್ರಾಣಿಗಳು, ರಾಜ ಮುಂತಾದವರು ಹೆಚ್ಚಾಗಿ ಕಂಡುಬರುತ್ತಾರೆ. ಉಳಿದಂತೆ ಹಿಂದು ಮುಸ್ಲಿಂ ಕ್ರಿಶ್ಚಿಯನ್ ಧರ್ಮಗಳ ಕಲೆ ಸಂಸ್ಕೃತಿ ಆಚರಣೆಗಳನ್ನು ಸಿದ್ದಿಗಳು ಅನುಸರಿಸುತ್ತಾರೆ. ಹಿಂದು ಸಿದ್ದಿಗಳಲ್ಲಿ ಹವ್ಯಕ ಬ್ರಾಹ್ಮಣರ ಪ್ರಭಾವ, ಮುಸ್ಲಿಮರಲ್ಲಿ ಸುನ್ನಿಗಳ ಪ್ರಭಾವ, ಕ್ರಿಶ್ಚಿಯನ್ನರಲ್ಲಿ ಪೋರ್ಚುಗೀಸ್ ಕ್ಯಾಥೋಲಿಕ್‌ರ ಪ್ರಭಾವ ಎದ್ದು ಕಾಣುತ್ತವೆ.

ಧರ್ಮ

ಸಿದ್ದಿಗಳ ಮೂಲಧರ್ಮ ಆಫ್ರಿಕಾದ ಕಾಡುಗಳಲ್ಲೇ ಉಳಿದುಹೋಗಿ ಅರಬ್‌ರ ಪ್ರಭಾವದಿಂದಾಗಿ ಇಸ್ಲಾಮ್, ಪೋರ್ಚುಗೀಸರ ಪ್ರಭಾವದಿಂದಾಗಿ ಕ್ರಿಶ್ಚಿಯಾನಿಟಿ, ಸ್ಥಳೀಯರ ಪ್ರಭಾವದಿಂದಾಗಿ ಹಿಂದುಧರ್ಮಗಳನ್ನು ಅಪ್ಪಿಕೊಳ್ಳಬೇಕಾದ ಅನಿವಾರ್ಯತೆಗೆ ಸಿಲುಕಿದ ಸಿದ್ದಿಯರು ಮೌನವಾಗಿ ತಮ್ಮ ಪಾಲಿಗೆ ಬಂದ ಧರ್ಮಗಳನ್ನು ಸ್ವೀಕರಿಸಿ ತಮ್ಮದಾಗಿಸಿಕೊಂಡಿದ್ದಾರೆ. ಆದರೆ ಇವನ್ನೆಲ್ಲ ಹೇರಿದ ಜನ ಮಾತ್ರ ಇವರನ್ನು ತಮ್ಮವರೆಂದು ಅಪ್ಪಿಕೊಳ್ಳದೆ ಪರಕೀಯರನ್ನಾಗಿಯೇ ನೋಡಿದರಲ್ಲದೆ ಗುಡಿ, ಮಸೀದಿ ಚರ್ಚುಗಳಲ್ಲೂ ತಾರತಮ್ಯ ತೋರಿಸಿದರು. ಇದೆಲ್ಲದರಿಂದ ಬೇಸತ್ತ ಸಿದ್ದಿಗಳು ಇದೀಗ ಒಗ್ಗಟ್ಟಾಗಿ ತಮ್ಮದೇ ಆದ ಸಿದ್ದಿಧರ್ಮವನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗಾಗಿ ಸಿದ್ದಿಗಳ ಮದುವೆಗಳಲ್ಲಿ ಗೌರಿ, ಗಣಪತಿ, ಫ್ರಾನ್ಸಿಸ್, ಹುಸೇನ್ ಹೆಸರುಗಳು ಒಟ್ಟಾಗಿಯೇ ಕೇಳಿಬರುತ್ತವೆ. ಪರಸ್ಪರರ ಧರ್ಮಗಳ ಆಚರಣೆಯ ಸ್ವಾತಂತ್ರ್ಯ ಹೊಂದಿಯೂ ವೈವಾಹಿಕ ಸಂಬಂಧಗಳನ್ನು ಯಶಸ್ವಿಯಾಗಿ ನಡೆಸುವಲ್ಲಿನ ಇವರ ನಡೆ ಉಳಿದ ಧರ್ಮದವರಿಗೆ ಮಾದರಿಯಾಗಬಲ್ಲದು. ತಮ್ಮ ತಮ್ಮ ಧರ್ಮಗಳ ಹಬ್ಬಗಳನ್ನು ಆಚರಿಸುತ್ತಲೇ ಸಿದ್ದಿಯರು ತಮ್ಮ ಮೂಲ ಬುಡಕಟ್ಟುಗಳ ಹಬ್ಬ ಆಚರಣೆಗಳನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಕಾಡಿನ ದೇವರಾದ ಜಟ್ಟಿಗ, ನಾಗ ಹಾಗೂ ಸ್ತ್ರೀ ದೇವತೆ ಇತ್ಯಾದಿ ಕಾಪಾಡುವ ದೇವರುಗಳ ಪೂಜೆಯನ್ನು ಎಲ್ಲ ಸಿದ್ದಿಗಳು ಶ್ರದ್ದೆಯಿಂದ ಮಾಡುತ್ತಾರೆ. ತಮ್ಮ ಪರಿಸರದ ಇತರ ಬುಡಕಟ್ಟುಗಳ ಪ್ರಭಾವ ಇಲ್ಲಿ ದಟ್ಟವಾಗಿದೆ.

ಸಿದ್ದಿಗಳ ಅತ್ಯಂತ ಪ್ರಮುಖ ದೈವ ಹಾಗೂ ಆಚರಣೆಯೆಂದರೆ ಸಿದ್ದಿನ್ಯಾಸ. ನ್ಯಾಸ ಎನ್ನುವುದು ಆಫ್ರಿಕಾದ ನ್ಯಾಸ ಸರೋವರದ ಸ್ಮೃತಿಯಾಗಿದ್ದು ಆ ಸರೋವರದಿಂದ ತಂದ ಕಲ್ಲನ್ನು ಇಟ್ಟಿರುವ ಸ್ಥಳದಲ್ಲೇ ಸಿದ್ದಿನ್ಯಾಸ ಇಂದಿಗೂ ನಡೆಯುತ್ತಿದೆಯೆಂದು ಸಿದ್ದಿನ್ಯಾಸಕ್ಕೆ ಬಂದಿದ್ದ ಇಮಾಮ್ ಸಿದ್ದಿ ಎಂಬ ಹಿರಿಯರು ತಿಳಿಸಿದರು.

ಆದರೆ ಇದರ ಬಗ್ಗೆ ಹಲವಾರು ಕಥೆಗಳಿದ್ದು 'ಜೈನರು ಸಿದ್ದಿ ಬಾಲಕನೊಬ್ಬನನ್ನು ಆಪ್ತನನ್ನಾಗಿಸಿಕೊಂಡು ಬೆಳೆಸಿದರಂತೆ. ಆದರೆ ಅವನು ಕದ್ದು ಮುಚ್ಚಿ ಮಾಂಸ ತಿನ್ನಲು ಆರಂಭಿಸಿದನಂತೆ. ಇದನ್ನು ಸಹಿಸದ ಜೈನರು ಅವನನ್ನು ಜೀವಂತ ಸಮಾಧಿ ಮಾಡಿದರಂತೆ(ಸಲ್ಲೇಖನಕ್ಕೀಡುಮಾಡಿರಲೂ ಬಹುದು). ಇದರಿಂದ ಪ್ರಭಾವಿತರಾದ ಸಿದ್ದಿಗಳು ಆ ಸಮಾಧಿ ಸ್ಥಳದಲ್ಲಿ ಕಲ್ಲು ನೆಟ್ಟು 'ಸಿದ್ದಿನ್ಯಾಸ'ನೆಂದು ಪೂಜಿಸುತ್ತಿದ್ದಾರೆ. ಇನ್ನೊಂದು ಮೂಲದ ಪ್ರಕಾರ ಧಾರ್ಮಿಕ ಕಾರಣಗಳಿಗಾಗಿ ಬಲಿದಾನಗೊಂಡ ತಮ್ಮವನೊಬ್ಬನನ್ನೇ ದೈವವನ್ನಾಗಿ ಪೂಜಿಸುತ್ತಿದ್ದಾರೆ.'[೨] ಹಿನ್ನೆಲೆ ಏನೇ ಇದ್ದರೂ ಸಿದ್ದಿನ್ಯಾಸ ಒಮ್ಮೆಯಾದರೂ ನೋಡಲೇಬೇಕಾದ ಆಚರಣೆಯಾಗಿದೆ. ಇತ್ತೀಚಿನ ದಿನಗಳಲ್ಲಿ ಇದು ಎಲ್ಲ ಧರ್ಮಗಳ ಸಿದ್ದಿಯರೂ ಒಟ್ಟಾಗಿ ಸೇರುವ, ತಮ್ಮ ಪೂಜಾರಿ, ಮುಲ್ಲಾ, ಫಾದರ್‌ಗಳನ್ನು ದೂರವಿಟ್ಟು ತಾವೇ ಪೂಜೆ ಆಚರಣೆಗಳನ್ನು ಮಾಡುವ, ಅಹೋರಾತ್ರಿ ನಡೆಯುವ ವಿಶಿಷ್ಟ ವಾರ್ಷಿಕ ಹಬ್ಬವಾಗಿದೆ.

ತಮ್ಮ ತಮ್ಮ ಹುಂಜಗಳನ್ನು ದೈವಕ್ಕೆ ಬಲಿ ನೀಡಿ ಅಡುಗೆ ಮಾಡಿಕೊಂಡು ಹಂಚಿಕೊಂಡು ತಿನ್ನುವ ಕಾರ್ಯಕ್ರಮ ಪ್ರಮುಖವಾಗಿದೆ. ಗಂಡು ಹೆಣ್ಣುಗಳು ಸ್ವಚ್ಛಂದವಾಗಿ ಬೆರೆತು ಹಾಡಿ ಕುಣಿಯುವ, ಡಮಾಮಿ ಘುಗಡಿ ನೃತ್ಯಗಳ ಪಂದ್ಯ ನಡೆಯುವ, ತಮ್ಮ ಕಲಾತ್ಮಕತೆಯನ್ನು ಹೊರಹಾಕುವ ವಿಶಿಷ್ಟ ವೇದಿಕೆಯಾಗಿ ಸಿದ್ದಿನ್ಯಾಸ ಪರಿವರ್ತನೆಯಾಗಿದೆ.

ಕೀಳು ದೇವರು

ನ್ಯಾಸದ ಸ್ಥಳದಿಂದ ಸ್ವಲ್ಪ ಕೆಳಗೆ ಹಳ್ಳದ ದಂಡೆಯ ಮೇಲೆ ಇರುವ ದೈವವನ್ನು ಕೀಳು ದೇವರು ಎಂದು ಕರೆಯಲಾಗುತ್ತದೆ. ಸಿದ್ದಿನ್ಯಾಸಕ್ಕೆ ಮೂಲವಾದ, ಆದರೆ ಅಷ್ಟಾಗಿ ಪೂಜೆಗೊಳ್ಳದ ದೈವ ಇದಾಗಿದೆ. ನಾವು ಸಿದ್ದಿನ್ಯಾಸಕ್ಕೆ ಹೋದಾಗ ದೈವ ಆವಾಹನೆಯಾಗಿದ್ದ ಸಿದ್ದಿ ಹಿರಿಯನೊಬ್ಬ ಕೀಳು ದೇವರನ್ನು ಕಡೆಗಣಿಸುತ್ತಿರುವುದರ ವಿರುದ್ಧ ಎಚ್ಚರಿಕೆ ನೀಡಿ ಮೊದಲ ಬಲಿ ಅಲ್ಲೇ ನೀಡಬೇಕೆಂದು ತಾಕೀತು ಮಾಡಿದ್ದನ್ನು ನೋಡಿದಾಗ ನಾವೂ ವೈದಿಕತೆಯ ಪ್ರಭಾವಕ್ಕೊಳಗಾಗಿ ನಮ್ಮ ಮೂಲದೈವಗಳನ್ನು ಕಡೆಗಣಿಸುತ್ತಿರುವುದು ತಪ್ಪು ಎಂದೆನಿಸಿತು.

ಜೀವನಚಕ್ರ ಆಚರಣೆಗಳ ವಿಷಯಕ್ಕೆ ಬಂದರೆ ಸಿದ್ದಿಗಳ ಮೂಲ ಆಚರಣೆಗಳೆಲ್ಲ ಮರೆಯಾಗಿದ್ದು ಮೇಲ್ವರ್ಗದ ಅನುಕರಣೆ ಗಾಢವಾಗಿದೆ. ಕೂಳುಪೂಜೆ ಎಂಬ ಆಚರಣೆ ಮಾತ್ರ ಅಲ್ಲಿನ ಇತರ ಯಾವುದೇ ಬುಡಕಟ್ಟುಗಳಲ್ಲೂ ಕಾಣದ ವಿಶಿಷ್ಟ ಆಚರಣೆಯಾಗಿದೆ. ಮದುವೆಯಲ್ಲಿ ಗಂಡಿನ ದಿಬ್ಬಣ ಹೊರಡುವ ಮೊದಲು ಹಿರಿಯರ ಗದ್ದುಗೆಯ ಪಕ್ಕದಲ್ಲಿ ಬಾಳೆ ಎಲೆಯ ಮೇಲೆ ಅಕ್ಕಿ ಹರಡಿ ಐದು ತೆಂಗಿನ ಕಾಯಿ, ಐದು ವೀಳ್ಯ ಇಟ್ಟು ಹೊಸ ವಸ್ತ್ರ ಹೊದಿಸಿ ಅದರ ಮೇಲೆ ತಾಳಿ ಬಾಸಿಂಗ ಗಳನ್ನಿಟ್ಟು ಪೂಜಿಸುತ್ತಾರೆ. ಬಹುಶಃ ಗತಿಸಿ ಹೋದ ಹಿರಿಯರ ಆಶೀರ್ವಾದ ಪಡೆಯಲು ಈ ರೀತಿ ಆಚರಣೆ ಬಂದಿರಬಹುದು.

ಇದನ್ನು ಹೊರತುಪಡಿಸಿದರೆ ಸಿದ್ದಿಗಳು ತಮ್ಮ ಮನೆಗಳಲ್ಲಿ ತೆಂಗಿನಕಾಯಿಯನ್ನು ತಪ್ಪದೆ ಪೂಜಿಸುತ್ತಾರೆ. ಅವುಗಳನ್ನವರು ಹಿರಿಯರೆಂದು ಕರೆಯುವುದು ವಾಡಿಕೆ. ಎಲ್ಲ ಬುಡಕಟ್ಟುಗಳಲ್ಲೂ ಇರುವಂತೆ ಪಿತೃಪೂಜೆ ಇವರಲ್ಲೂ ಇದೆ. ಮೂರೂ ಧರ್ಮಗಳವರೂ ತಮ್ಮತಮ್ಮ ಧರ್ಮದಂತೆ ಮದುವೆ ಮುಂತಾದ ಏನೇ ಆಚರಣೆ ಮಾಡಿದರೂ ಕೊನೆಗೆ ಮನೆಗೆ ಬಂದು ಹಿರಿಯರ ಮುಂದೆ ತಮ್ಮ ರೀತಿಯಲ್ಲೇ ಆಚರಣೆ ಮಾಡಿಕೊಳ್ಳುತ್ತಾರೆ. ದುಷ್ಟ ಶಕ್ತಿಗಳನ್ನು ನಂಬುತ್ತಾರೆ ಮತ್ತು ಸಿದ್ದಿ ಹಿರಿಯರ ಆತ್ಮಗಳು ಕೆಲವೊಮ್ಮೆ ಬೇರೆಯವರ ಆತ್ಮಗಳ ಜೊತೆಗೂಡಿ ಅಂದರೆ ಮೇಲ್ವರ್ಗದ ಆತ್ಮಗಳ ಜೊತೆಗೂಡಿ ತೊಂದರೆ ಉಂಟುಮಾಡುತ್ತವೆಂದೂ ಆಗ ಮಂತ್ರವಾದಿಗಳು ಈ ಆತಂಕವನ್ನು ದೂರ ಮಾಡುತ್ತಾರೆಂದು ನಂಬುತ್ತಾರೆ.

ಸಿದ್ದಿಗಳ ಇನ್ನೊಂದು ವಿಶಿಷ್ಟ ಆಚರಣೆ ಶುದ್ಧೀಕರಣ ಅಥವಾ ಸಿದ್ದಿ ದೀಕ್ಷೆ ನೀಡುವುದು. ಅಪರೂಪಕ್ಕೊಮ್ಮೆ ಸಿದ್ದಿಗಳು ಬೇರೆ ಬುಡಕಟ್ಟುಗಳ ಹೆಣ್ಣುಗಳನ್ನು ಮದುವೆಯಾದಾಗ ಅವರನ್ನು ಒಳಕ್ಕೆ ಕರೆದುಕೊಳ್ಳುವ ಮೊದಲು ಒಂದು ತಾತ್ಕಾಲಿಕ ಗುಡಿಸಲು ಮಾಡಿ ಅದರಲ್ಲಿ ಆ ಹೆಣ್ಣನ್ನು

ಕೂರಿಸಿ ಬೆಂಕಿ ಹಚ್ಚುತ್ತಾರೆ. ಹೆಣ್ಣು ಅದರಿಂದ ತಪ್ಪಿಸಿಕೊಂಡು ಬಂದ ಮೇಲೆ ಸುಟ್ಟ ಬೂದಿಯನ್ನು ಹಿರಿಯರು ಆ ಹೆಣ್ಣಿಗೆ ತಿನಿಸಿದ ಮೇಲೆ ಅವಳು ಸಿದ್ದಿಯಾಗಿ ಮಾರ್ಪಡುತ್ತಾಳೆ. ಹೀಗೆ ಸಿದ್ದಿಗಳು ತಮ್ಮ ವಿದೇಶಿ ಮೂಲ, ಗುಲಾಮಗಿರಿಗಳ ನಡುವೆಯೂ ತಮ್ಮದೇ ಅನನ್ಯ ಸಂಸ್ಕೃತಿ ಮತ್ತು ಧಾರ್ಮಿಕತೆಯನ್ನು ಉಳಿಸಿಕೊಂಡಿದ್ದಾರೆ.

ಮೊಹರಂ ಕುಣಿತ

ಮುಸ್ಲಿಮ್ ಸಿದ್ದಿಯರಲ್ಲಿ ಮೊಹರಂ ಹಬ್ಬದ ವೇಳೆಯಲ್ಲಿ 'ಅಲಾದಿ ಕುಣಿತ' ಕಂಡುಬರುತ್ತದೆ. ಮೊಹರಂ ವೇಷದ ಅದರಲ್ಲೂ ಅದರಲ್ಲಿ ಹಾಕುವ ಅಚ್ಚೊಳ್ಳಿ ಪಿಚ್ಚೊಳ್ಳಿ ಅಥವಾ ಸಿದ್ದಿಕ ಬಕ್ರಾ ವೇಷ ತುಂಬಾ ವಿಶಿಷ್ಟವಾಗಿದೆ.

'.... ಕಲೆಯೊಂದರ ಈ ಖಂಡಾಂತರ ಪಯಣ ಮತ್ತು ಸಾಂಸ್ಕೃತಿಕ ರೂಪಾಂತರ ಸೋಜಿಗ ಹುಟ್ಟಿಸುತ್ತದೆ. ವೈರುಧ್ಯದ ಸಂಗತಿ ಎಂದರೆ, 'ನಾಗರಿಕ', 'ಗೌರವರ್ಣದ' 'ಕುಲೀನ' ಎನಿಸಿಕೊಂಡ ಸಮಾಜಗಳು ತಮ್ಮಂತೆಯೇ ಇರುವ ನರಮನುಷ್ಯರನ್ನು ಬೇಟೆಯಾಡಿ, ನಾವೆಗಳಲ್ಲಿ ಸಾಗಿಸಿ, ಮಾರುಕಟ್ಟೆಗಳಲ್ಲಿಟ್ಟು ಪಶುವಂತೆ ಮಾರಾಟ ಮಾಡಿದವು. ಅವರ ಬಿಟ್ಟಿ ದುಡಿಮೆ ಪಡೆದು ಮನುಕುಲದ ಚರಿತ್ರೆಯಲ್ಲಿಯೇ ಕರಾಳ ಎನ್ನಬಹುದಾದ ಕೃತ್ಯ ಎಸಗಿದವು. ಅದಕ್ಕೆ ಪ್ರತಿಯಾಗಿ 'ಅನಾಗರಿಕ', 'ಕಪ್ಪು', 'ಗುಲಾಮ' ಎನಿಸಿಕೊಂಡ ಆಫ್ರಿಕನ್ನರು ತಮ್ಮನ್ನು 'ಅಮಾನುಷವಾಗಿ' ನಡೆಸಿಕೊಂಡ ಸಮಾಜಗಳಿಗೆ ತಮ್ಮ(ಬಿಟ್ಟಿ) ದುಡಿಮೆಯ ಜೊತೆಗೆ ಹಾಡು, ನೃತ್ಯ ಇತ್ಯಾದಿಗಳನ್ನು ಉಡುಗೊರೆಯಾಗಿ ಕೊಟ್ಟವು. ಯಾರ ಹಂಗಿನಲ್ಲಿ ಯಾರಿದ್ದಾರೆ? ಯಾರನ್ನು ಯಾರು ಮೌಲ್ಯಮಾಪನ ಮಾಡುತ್ತಿದ್ದಾರೆ?'[೩]

ನಿಜಕ್ಕೂ ಮೇಲಿನ ಮಾತುಗಳು ಎಷ್ಟೊಂದು ಕಠೋರ ಸತ್ಯ ಹಾಗೂ ಅರ್ಥಪೂರ್ಣ. ಹುಲ್ಲು ಹಾಕಿದರೆ ಹಾಲು ಕೊಡುವ ಹಸುವನ್ನು 'ಗೋಮಾತೆ' ಎಂದು ಪೂಜಿಸುವ, ಕಸ ಹಾಕಿದರೆ ರಸಭರಿತ ಹಣ್ಣು ಕೊಡುವ ಮರವನ್ನು 'ಕಲ್ಪವೃಕ್ಷ' ಎಂದು ಪೂಜಿಸುವ ನಾವು ಗುಲಾಮಗಿರಿ, ಒದೆ, ಬೈಗುಳಗಳನ್ನು ತಿಂದರೂ ತಾವು ನಿಂತ ನೆಲವನ್ನು ಹಸಿರಾಗಿಸಲು ಬೆವರು ಬಸಿದು, ಬಯ್ದ ಧಣಿಗಳ ಜೀವನವನ್ನು ಹಸನಾಗಿಸಲು ಜೀವ ತೇಯ್ದು, ತೇಯುತ್ತಿರುವ ಈ ಪರದೇಸಿಗಳನ್ನೇಕೆ ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣುತ್ತಿದ್ದೇವೆ? ನರಮಾನವನ ಜೊತೆ ಬಾಳುವುದಕ್ಕಿಂತ ಹುಲಿ ಕಿರುಬಗಳ ಜೊತೆ ಬದುಕುವುದೇ ಸುಲಭವೆಂದು ತಿಳಿದು ಕಾಡಿಗೆ ಓಡಿದ ಈ ಜನಾಂಗವನ್ನು ಅವರಷ್ಟಕ್ಕೆ ಇರಲು ಬಿಡದೆ ಅಲ್ಲಿಗೂ ಹೋಗಿ ಅವರನ್ನು ಜೀತದಾಳುಗಳನ್ನಾಗಿಸಿ ನಿರಾಶ್ರಿತರನ್ನಾಗಿಸಿ, ಅಸ್ಪೃಶ್ಯ, ಅನಾಗರಿಕರನ್ನಾಗಿಸುವ ನಾಗರಿಕ ಸಮಾಜ ನಿಜಕ್ಕೂ ಮಾನವೀಯವಾಗುವುದು ಯಾವಾಗ? ಬಹುಶಃ ಈ ಪ್ರಶ್ನೆಗೆ ಕಾಲವೇ ಉತ್ತರಿಸಬೇಕು.

'ಬದುಕಿನ ತವಕ ತಲ್ಲಣಗಳನ್ನೆಲ್ಲಾ ಆವಾಹಿಸಿಕೊಂಡಂತೆ ಕಾಣುವ 'ಸಿದ್ದಿ' ವೇಷದ ಪದರುಗಳನ್ನು ಶೋಧಿಸುತ್ತಾ ಹೋದರೆ ಆಫ್ರಿಕಾದ ನಕಾಶೆ ಕಾಣಿಸುತ್ತದೆ. ವಸಾಹತುಶಾಹಿಗಳಿಗೆ ಸೆರೆಯಾಗಿ ಇಲ್ಲಿಗೆ ಬಂದಿರಬಹುದಾದ ಅಲ್ಲಿನ ಜನರು, ತಮ್ಮನ್ನು ಗುಲಾಮರನ್ನಾಗಿ ದುಡಿಸಿಕೊಂಡ ನಾಗರಿಕರಿಗೆ ಕೊಟ್ಟದ್ದು ಅತ್ಯಮೂಲ್ಯ ಹಾಡು, ನೃತ್ಯವನ್ನು.

ಮೊಹರಂ ಹಬ್ಬವು ಹಬ್ಬಗಳಲ್ಲೆಲ್ಲಾ ತುಂಬಾ Secular ಆಗಿದ್ದು ಸಮಾಜದ ಎಲ್ಲಾ ಜಾತಿ ವರ್ಗಗಳಿಗೂ ಇಲ್ಲಿ ಪಾಲ್ಗೊಳ್ಳುವ ಅವಕಾಶ ನೀಡಿದೆ. ಹುಲಿ, ಕರಡಿ, ಕೋಡಂಗಿ, ಕೊರವಂಜಿ, ಹಿಡಿಂಬೆ, ಪಾಳೇಗಾರ, ಫಕೀರ, ಬಸುರಿ, ಬಾಣಂತಿ, ಕಳ್ಳ-ಪೊಲೀಸ್ ಇತ್ಯಾದಿ ವೇಷಗಳ ಜೊತೆ ಜೊತೆಗೆ ಬರುವ ಸಿದ್ದಿವೇಷ ತುಂಬಾ ವಿಶಿಷ್ಟ. ವಾಡಿಕೆಯಂತೆ ವಿವಿಧ ಭಾಗಗಳಲ್ಲಿ ವಿವಿಧ ಹೆಸರುಗಳಿಂದ ಕರೆಯಲ್ಪಡುವ ಸಿದ್ದಿ ವೇಷ, ಗೋಕಾಕದ ಕಡೆ ಸಿದ್ದಕಶಾನಿ ಎಂದೂ, ಬೀಳಗಿಯಲ್ಲಿ ಸಿದ್ದಿಕ ಬಕರಾ ಎಂದೂ, ಅಥಣಿಯಲ್ಲಿ ಸಿದ್ದಿಕ ಬಾಬಾ ಎಂದೂ, ಬಿಜಾಪುರದಲ್ಲಿ ಅಚ್ಚೊಳ್ಳಿ-ಬಿಚ್ಚೊಳ್ಳಿ ಎಂದೂ, ಬಳ್ಳಾರಿ ಭಾಗದಲ್ಲಿ ಅಚ್ಚಳ್ಳಿ-ಪಿಚ್ಚಳ್ಳಿ ಎಂದೂ (ನಮ್ಮ ಊರಿನಲ್ಲಿ(ಗುಡೇಕೋಟೆ) ಇದನ್ನು ಕಳ್ಳಳ್ಳಿ ಬುವ್ವ ಎಂದೂ) ಕರೆಯುತ್ತಾರೆ.'[೩೪] ಚಿಕ್ಕವನಿದ್ದಾಗ ನಾನೂ ಅವರಿಂದ ಪೆಟ್ಟು ತಿಂದು ಹೆದರಿಕೊಂಡು ಓಡಿಹೋದವನೇ. ಆದರೆ ಇತ್ತೀಚಿನ ದಿನಗಳಲ್ಲಿ ಅಲ್ಲಿ ಈ ವೇಷ ಹಾಕುವವರೇ ಇಲ್ಲದಂತಾಗಿದ್ದಾರೆ. ಬಹುಶಃ ಈ ಹರಕೆ ಹೊತ್ತ ವ್ಯಕ್ತಿ ತೀರಿಹೋದ ನಂತರ ಬೇರೆ ಯಾರೂ ಈ ವೇಷ ಹಾಕುತ್ತಿಲ್ಲ.

'ಆಫ್ರಿಕಾ ಮೂಲದ ಈ ವೇಷದ ಲಕ್ಷಣಗಳೆಂದರೆ ಮುಖ ಮತ್ತು ಮೈ ಕೈಗಳಿಗೆಲ್ಲಾ ಕಪ್ಪು ಬಣ್ಣ, ತಲೆಯ ಮೇಲೆ ಗಾಢವರ್ಣಗಳ ಬಣ್ಣ ಬಣ್ಣದ ಸರ್ಕಸ್ ಬಫೂನ್ ರೀತಿಯ ಕಾಗದದ ಉದ್ದನೆಯ ಚೂಪಾದ ಟೋಪಿ, ಸೊಂಟಕ್ಕೆ ಸುತ್ತಿದ ಗೋಣಿ ತಾಟು ಇಲ್ಲವೇ ಕರಿ ಕಂಬಳಿ ತುಂಡು, ಅದರ ಮೇಲೆ ಬಿಗಿದ ಲೋಹದ ಇಲ್ಲವೇ ಮರದ ಗಂಟೆ ಸರ, ದಟ್ಟನೆಯ ಪೊರಕೆ ಮೀಸೆ ಹಾಗೂ ಗಡ್ಡ, ಕೈಯಲ್ಲಿ ದೊಣ್ಣೆ ಅಥವಾ ಪೊರಕೆ ಅಥವಾ ಹಗ್ಗದಂತೆ ಹೊಸೆದ ಟವೆಲ್, ಬೂದಿ ಬಳಿದುಕೊಂಡು ಕಪ್ಪು ಕನ್ನಡಕ ಹಾಕಿಕೊಂಡ ಈ ವೇಷಧಾರಿಗಳನ್ನು ಅಚ್ಚಳ್ಳಿ-ಬಿಚ್ಚಳ್ಳಿ, ಬೇವಿನ ಮರದಾಗ್ ಬೊಳ್ಳೊಳ್ಳಿ ಎಂದು ಮಕ್ಕಳು ಛೇಡಿಸುತ್ತಾ ಅವರ ಸೊಂಟದ ಗಂಟೆ ಸರವನ್ನು ಅಲುಗಾಡಿಸಿ ಓಡಿ ಹೋಗುತ್ತಿರುತ್ತಾರೆ.

ಮರದ ಗಂಟೆಯನ್ನು ಕೊಟ ಕೊಟ ಸದ್ದು ಮಾಡುತ್ತಾ ನಿಂತಲ್ಲಿಂದ ನೆಗೆದು, ಹಾರಿ ಸಿದ್ದಿ ಬಾಯ್ ಸಿದ್ದಿ ಎಂದು ಕರ್ಕಶವಾಗಿ ಕೂಗುತ್ತಾ, ಕೈಯಲ್ಲಿರುವ ಟವಲ್‌ನಿಂದ ಜನರ ಬೆನ್ನಿನ ಮೇಲೆ ಬಾರಿಸಿ ಹಣ ಕೇಳುತ್ತಾರೆ. ಇದು ರಂಜನೆಯ ವೇಷ ಹಾಕುವವರ ಕಥೆಯಾದರೆ ಹರಕೆಗಾಗಿ ಈ ವೇಷ ಹಾಕುವವರು ಮೌನವಾಗಿ ಶ್ರದ್ಧಾಭಕ್ತಿಯಿಂದ ಮನೆಮನೆಗೆ ಹೋಗಿ ಭಿಕ್ಷೆ ಬೇಡುತ್ತಾರೆ.'[೩೫]

ಸಿದ್ದಿಗಳು ವಾಸಿಸುವ ಕಡೆ ಈ ವೇಷವನ್ನು ಸಿದ್ದಿಗಳೇ ಹಾಕಿದರೆ ಬೇರೆ ಕಡೆ ಸ್ಥಳೀಯರೇ ಈ ವೇಷ ಹಾಕುತ್ತಾರೆ(ವಿಶೇಷವೆಂದರೆ ಸಿದ್ದಿಗಳಿರುವ ಕಡೆ ಈ ವೇಷ ಹಾಕುವುದು ಸಾಮಾನ್ಯವೆನಿಸಿದರೂ, ಸಿದ್ದಿಗಳ ಪ್ರಭಾವವೇ ಇಲ್ಲದ ಬಳ್ಳಾರಿ, ತುಮಕೂರು ಮುಂತಾದ ಕಡೆ ಈ ವೇಷವನ್ನು ಏಕೆ ಹಾಕುತ್ತಾರೆ ಎಂಬುದು ತಿಳಿಯುತ್ತಿಲ್ಲ. ಇಲ್ಲೆಲ್ಲಾ ಮೊದಲು ಸಿದ್ದಿಗಳ ಪ್ರಭಾವ ಇತ್ತು ಎಂಬುದನ್ನು ಇದು ಸೂಚಿಸುತ್ತದೆಯೋ ಏನೋ?).

'ತುಮಕೂರು ಸೀಮೆಯ ಮೊಹರಂ ಆಚರಣೆಯಲ್ಲಿ ಸಿದ್ದಿವೇಷಕ್ಕೆ ಹೋಲುವ ಕೋಡಂಗಿ ವೇಷವಿದ್ದು ಮುಖಕ್ಕೆ ಕಪ್ಪು ಬಳಿದು ಕೆನ್ನಾಲಿಗೆ ಚಾಚಿದ ಮುಖವಾಡವಿದ್ದು, ಕೈಯಲ್ಲಿ ಅಡಕೆ

ಹಾಳೆ ಸುತ್ತಿದ ದೊಡ್ಡ ಶಬ್ದ ಮಾಡುವ ಆದರೆ ಪೆಟ್ಟು ಬೀಳದ ಹುಸಿ ಪೆಟ್ಟು ಕೋಲಿದ್ದು, ಮೊಹರಂ ಸಮಯದಲ್ಲಿ ಹಳ್ಳಿಹಳ್ಳಿಗೆ ಹೋಗಿ ತಮಟೆ ಪೆಟ್ಟಿಗೆ ಹೆಜ್ಜೆ ಹಾಕುತ್ತಾ ಕುಣಿದು ಹಣ ಗಿಟ್ಟಿಸುತ್ತಾರೆ. ಕೋಡಂಗಿಯ ಹಿಂದೆ ಮಕ್ಕಳ ಹಿಂಡೇ ಇದ್ದು, ಅವು ಕೋಡಂಗಿಯ ಗಂಟೆ, ಸರ ಅಥವಾ ಗೋಣಿ ತಾಟನ್ನು ಎಳೆದು ಓಡುತ್ತವೆ. ಕೋಡಂಗಿ ಕುಣಿತ ಬಿಟ್ಟು ಮಕ್ಕಳನ್ನು ಓಡಿಸಿಕೊಂಡು ಹೋಗಿ ಹುಸಿ ಕೋಪ ತೋರಿಸುತ್ತಾ, ಹುಸಿ ಪೆಟ್ಟು ನೀಡುತ್ತಾ ಮನರಂಜಿಸುತ್ತಾನೆ. ಹೆಣ್ಣುಮಕ್ಕಳು ಅವನನ್ನು ಕರೆದು ತಮ್ಮ ಮಕ್ಕಳ ತಲೆಗೆ ಮೂರು ಪೆಟ್ಟು ನೀಡುವಂತೆ ಕೋರುತ್ತಾರೆ. ಇದರಿಂದ ಮಕ್ಕಳಿಗೆ ಭಯ ಹೋಗುತ್ತದೆ ಎಂಬ ನಂಬಿಕೆ ಇದ್ದರೂ ಇವರನ್ನು ನೋಡಿ ಪುಟ್ಟಮಕ್ಕಳು ಇನ್ನಷ್ಟು ಹೆದರಿ ಉಚ್ಚೆ ಹುಯ್ದುಕೊಳ್ಳುವ ಸಂಭವವೇ ಹೆಚ್ಚು.'[೨೬]



ಚಿತ್ರ ೧೧. ಮೊಹರಂ ಹಬ್ಬದ ಸಿದ್ದಿ ವೇಷ

ಈ ಸಿದ್ದಿ ಬಾಯ್ ಸಿದ್ದಿಯ ವೇಷದ ಜೊತೆ ಜೊತೆಗೇ ಕೆಲವು ಕಡೆ ಹ್ಯಾಟು-ಕೋಟು ತೊಟ್ಟ (ಕೈಯಲ್ಲಿ ಬಂದೂಕು ಹಿಡಿದು ಸಿದ್ದಿಗಳಿಗೆ ಶೂಟ್ ಮಾಡುವ ನಟನೆ ಮಾಡುವ), ಬಿಳಿಯ ಯುರೋಪಿಯನ್ನರ, ಬಹುಶಃ ಪೋರ್ಚುಗೀಸರ ಅಣುಕು ವೇಷದವರು ಇರುವುದು ಅವರನ್ನು ಗುಲಾಮರನ್ನಾಗಿ ತಂದು ಮಾರುತ್ತಿದ್ದ ಪೋರ್ಚುಗೀಸರ ಪ್ರತಿರೂಪವಿರಬಹುದು.

ಈ ಸಿದ್ದಿಗಳು ಉತ್ತರಭಾರತದ ಎತ್ತರ ನಿಲುವಿನ ಗೌರವರ್ಣದ ಅರಬ್-ಆಫ್ಘನ್ ಮೂಲದ ಜನರ ಜೊತೆಗಿಂತ ದಖನ್ನಿನ ನಸುಗಪ್ಪು ಬಣ್ಣದವರು ಸಿದ್ದಿಗಳಿಗೆ ಹೆಚ್ಚು ಪ್ರಿಯವೆನಿಸಿರಬೇಕು. ಬಿಜಾಪುರ ಸೀಮೆಯಲ್ಲಿ ಶತಮಾನಗಳ ವರ್ಣಸಂಕರದಿಂದಾಗಿ ಮೂಲಚಹರೆಯ ಆಫ್ರಿಕನ್ನರು ಉಳಿಯಲಿಲ್ಲ. ಆದರೆ ಉತ್ತರಕನ್ನಡದಲ್ಲಿ ಸಿದ್ದಾಪುರದ ಅರಣ್ಯವಾಸಿ ಸಿದ್ದಿಗಳು ಮೂಲ ಚಹರೆ ಉಳಿಸಿಕೊಂಡಿದ್ದಾರೆ. ತರೀಕೆರೆಯವರ ಪ್ರಕಾರ ಇದಕ್ಕೆ ಕಾರಣ ಉತ್ತರ ಕನ್ನಡದ ಸಿದ್ದಿಗಳು ಪೋರ್ಚುಗೀಸರ ಹಿಡಿತದಿಂದ ತಪ್ಪಿಸಿಕೊಂಡು ಗೋವೆಯಿಂದ ಪಲಾಯನ ಮಾಡಿ ಬಂದವರಾಗಿದ್ದುದು. ಇವರಲ್ಲಿ ಕೆಲವರಾದರೂ ಆದಿಲ್‌ಶಾಹಿ ರಾಜ್ಯವನ್ನು ಔರಂಗಜೇಬನು ನಾಶ ಮಾಡಿದ ಬಳಿಕ ಬಿಜಾಪುರದಿಂದ ಉತ್ತರಕನ್ನಡಕ್ಕೆ ಹೋಗಿ ಸೇರಿರುವ ಸಾಧ್ಯತೆಯಿದೆ. ಬಿಜಾಪುರ ಸೀಮೆಯಿಂದ ಆಫ್ರಿಕನ್ ಲಕ್ಷಣಗಳ ಸಿದ್ದಿಗಳು ಮರೆಯಾದರೂ ಅವರ ಜೊತೆ ಬಂದಿದ್ದ ಕುಣಿತವೊಂದು ಹೇಗೋ ಉಳಿದುಕೊಂಡಿದೆ. ದಖನ್ನಿನ ಸಿದ್ದಿಗಳು ತಮ್ಮ ಮೂಲ ಆಫ್ರಿಕನ್ ಆಚರಣೆಗಳನ್ನು ತಮ್ಮ ಅಸ್ಮಿತೆಯಾಗಿ ಉಳಿಸಿಕೊಂಡರೆಂದು ಕಾಣುತ್ತದೆ. ಅವರಿಗೆ ನಮಾಜು ಮಾಡುವ ಶಿಷ್ಟ ಇಸ್ಲಾಂಗಿಂತ, ಕುಣಿತ, ಹಾಡು ಹಾಗೂ



ಆಯುಧ ಪ್ರದರ್ಶನಕ್ಕೂ ಅವಕಾಶವಿದ್ದ ಮೊಹರಂನಂತಹ ಜನಪ್ರಿಯ ಆಚರಣೆಗಳು ಪ್ರಿಯವಾಗಿರಬಹುದು. ಸೊಂಟದ ಮೇಲಿನ ನಗ್ನತೆ ಮತ್ತು ಮುಖಕ್ಕೆ ಪಟ್ಟೆ ಬಳಿದುಕೊಳ್ಳುವಿಕೆ ಸಿದ್ದಿ ಸೋಗಿನ ಲಕ್ಷಣಗಳಾಗಿವೆ (ಗುಲಾಮರನ್ನು ಮಾರಾಟ ಮಾಡುವಾಗ ಕೂಡ ಈ ರೀತಿ ವೇಷಭೂಷಣ ಇದ್ದಿರಬಹುದು). ಅಚ್ಚೊಳ್ಳಿ-ಅಳ್ಳೊಳ್ಳಿ ಎಂಬ ಶಬ್ದಗಳು ಬಂದಿರಲು ಅವರು ಸೊಂಟಕ್ಕೆ ಕಟ್ಟಿಕೊಳ್ಳುವ ಗಂಟೆಗಳ ಲೊಳ್ ಲೊಳ್ ಶಬ್ದದಿಂದಿರಬಹುದು ಎಂಬುದು ಲೇಖಕರ ಅನಿಸಿಕೆ.

ಈ ವೇಷಗಳ ಮೂಲ ಯಾವುದು? ಈ ವೇಷಗಾರರು ಯಾಕೆ ಮುಖಕ್ಕೆ ಕಪ್ಪು ಬಳಿದುಕೊಂಡು ಕಾಳಮುಖಿಗಳಾಗುತ್ತಾರೆ? ಅಚ್ಚಳ್ಳಿ, ಪಿಚ್ಚಳ್ಳಿ, ಕಳ್ಳೊಳ್ಳಿ, ಅಳ್ಳೊಳ್ಳಿ, ಸಿದ್ದಿಕಸಿದ್ದಿ, ಸಿದ್ದಿಕಬಾಬಾ ಇತ್ಯಾದಿಗಳ ಹಿಂದಿನ ಅರ್ಥವೇನು? ಸಿದ್ದಿಗಳಿಗೂ ಈ ವೇಷ ಹಾಕುವ ಹೈದರಾಬಾದ್ ಕರ್ನಾಟಕದ ಜಾತಿಗಾರರಿಗೂ ಇರುವ ಸಂಬಂಧವೇನು? ಈ ವೇಷ ಯಾಕೆ ಮೊಹರಂ ಹಬ್ಬದಲ್ಲೇ ಕಾಣಬರುತ್ತದೆ? ಹರಕೆ ವೇಷಧಾರಿಗಳೇಕೆ ಮಾತನಾಡುವುದಿಲ್ಲ? ಮಕ್ಕಳೇಕೆ ಇವರನ್ನು ಛೇಡಿಸುತ್ತಾರೆ? ಈ ಪ್ರಶ್ನೆಗಳಿಗೆ ಸಮರ್ಪಕ ಜವಾಬು ಸಿಗುತ್ತಿಲ್ಲ. ಆದರೆ 'ಸಿದ್ದಿ' ಎಂಬ ಪದ ಮತ್ತು ಅವರು ಮುಖಕ್ಕೆ ಬಳಿದು ಕೊಳ್ಳುವ ಕಪ್ಪುಬಣ್ಣಗಳು ಈ ಸೋಗು ಆಫ್ರಿಕಾ ಮೂಲದಿಂದ ಕರ್ನಾಟಕ್ಕೆ ಬಂದಿರುವ ನೃತ್ಯಾಚರಣೆ ಎಂಬ ಸೂಚನೆ ನೀಡುತ್ತಿದೆ. ಅದರ ಬೆನ್ನತ್ತಿ ಹೋಗಬೇಕಷ್ಟೆ. ಕರ್ನಾಟಕದ ಚರಿತ್ರೆ, ಕಲೆ, ಸಂಗೀತ ಮತ್ತು ಧಾರ್ಮಿಕ ಆಚರಣೆಗಳಲ್ಲಿ ಆಫ್ರಿಕಾ ಮೂಲದ ಇನ್ನೂ ಯಾವ್ಯಾವ ಪಳೆಯುಳಿಕೆಗಳಿವೆಯೋ? ಅವುಗಳ ತಲಸ್ಪರ್ಶಿ ಶೋಧ ನಡೆಯಬೇಕಿದೆ. ಉತ್ತರಕನ್ನಡದ ಸಿದ್ದಿಗಳನ್ನು ಕುರಿತು ಜನಪದ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಆದರೆ ಬಿಜಾಪುರದ ಸಿದ್ದಿ ಮತ್ತು ಹಬಶಿಗಳನ್ನು ಕುರಿತು ಹೆಚ್ಚಿನ ಅಧ್ಯಯನ ನಡೆದಂತಿಲ್ಲ. ಹಲವು ಬಗೆಯ ಹುಡುಕಾಟಕ್ಕೆ ಉತ್ತರಕರ್ನಾಟಕ ಸಿದ್ದಿ ಸೋಗಂತೂ ಕೆಣಕುತ್ತಿದೆ. ಆದರೆ ಈ ಆಹ್ವಾನವನ್ನು ಯಾರು ಎತ್ತಿಕೊಳ್ಳಬೇಕು? ಈ ಎಲ್ಲ ಪ್ರಶ್ನೆಗಳ ಹಿನ್ನೆಲೆಯಲ್ಲಿ ಲೇಖಕರಿಗೆ ಶ್ರೀಯುತ ಬಿ ಎಂ ಶ್ರೀಯವರ ಮಾತು ನೆನಪಾಗುತ್ತದೆ. 'ಬೆಳೆಯೇನೋ ಬೇಕಾದ ಹಾಗಿದೆ. ಕುಯ್ಯುವವರು ಕಡಿಮೆ.

೫. ಭಾರತೀಯ ಮತ್ತು ಆಫ್ರಿಕನ್ ಗುಲಾಮರ ವೈರುಧ್ಯಗಳು

ಇಲ್ಲಿ ಗುಲಾಮರಾಗಿ ಬೇರೆ ಖಂಡ ಹಾಗೂ ದೇಶಗಳಿಗೆ ಹೋದ ಭಾರತೀಯರು ಮತ್ತು ಆಫ್ರಿಕಾದಿಂದ ಗುಲಾಮರಾಗಿ ಬೇರೆ ಬೇರೆ ಖಂಡ ಹಾಗೂ ದೇಶಗಳಿಗೆ ಹೋದ ಆಫ್ರೀಕಾನ್ನರ ನಡುವಿನ ಸಾಮ್ಯತೆ ಮತ್ತು ಭಿನ್ನತೆಗಳನ್ನು ವಿಶ್ಲೇಷಿಸಲಾಗಿದೆ.

'ಎಲ್ಲಕ್ಕಿಂತಲೂ ಅಪಾಯಕಾರಿಯಾದದ್ದು, ಮನುಷ್ಯನನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ ಬಯಕೆ. ಸುತ್ತಲೂ ಇರುವವರೊಂದಿಗೆ ಸಾಮರಸ್ಯದಿಂದ, ಘನತೆಯಿಂದ, ಸಮಾನ ಆಪ್ತತೆಯಿಂದ ವ್ಯವಹರಿಸಲು ನಮಗೆ ಸಾಧ್ಯವಾಗುವುದೇ ಇಲ್ಲ. ನಮಗೆ ಬೇಕಿರುವುದು ಮನುಷ್ಯರಲ್ಲ; ಗುಲಾಮರು. ಆರ್ಥಿಕವಾಗಿ ಮಾತ್ರವೇ ಅವರು ನಮ್ಮ ಕೈಕೆಳಗಿದ್ದರೆ ಸಾಲದು; ಬೌದ್ಧಿಕವಾಗಿಯೂ ಇರಬೇಕು. ಅವರು ಕೇವಲ ಗುಲಾಮರಾಗಿದ್ದರೂ ಸಾಲದು ನಮ್ರತೆಯಿಂದಿರಬೇಕು. ಮನುಷ್ಯನ ಸಾಧನೆಗಳಿಗೆ ಸದಾ ಇಂಬಾಗಿರುವ

ಚೈತನ್ಯವೇ ಇತರ ಮನುಷ್ಯರನ್ನು ಬಯಸಲೂ ಪೂರಕವಾಗಿರುತ್ತದೆ. ಆದರೆ ಅದು ವಿಕೃತವಾಗಿ ವರ್ತಿಸುವುದು ದೊಡ್ಡ ದುರಂತ.'[೬]

ಗುಲಾಮಗಿರಿ ಮನುಷ್ಯನ ಇತಿಹಾಸದ ಅತ್ಯಂತ ಪುರಾತನ, ಕರಾಳ ಅಧ್ಯಾಯಗಳಲ್ಲಿ ಒಂದಾಗಿದ್ದು, ಅರಿಸ್ಟಾಟಲ್‌ನಂತಹವರು ಕೂಡಾ ಇದನ್ನು ಸಹಜವೆಂದು ಅನುಮೋದಿಸಿದ್ದರು. ಗ್ರೀಕ್ ರೋಮನ್ ಸಾಮ್ರಾಜ್ಯಗಳೇ ಈ ಗುಲಾಮಗಿರಿಯ ಅಡಿಪಾಯದ ಮೇಲೆ ನಿಂತಿದ್ದವು. ಮೊದಮೊದಲು ಬುಡಕಟ್ಟುಗಳ ನಡುವಿನ ಯುದ್ಧಗಳು ಇನ್ನೊಂದು ಬುಡಕಟ್ಟಿನ ವಿನಾಶದೊಂದಿಗೆ ಕೊನೆಗೊಳ್ಳುತ್ತಿದ್ದರೆ ಬರುಬರುತ್ತಾ ಸೋತ ಬುಡಕಟ್ಟುಗಳನ್ನು ಸೆರೆ ಹಿಡಿದು ಅವರನ್ನು ತಮ್ಮ ಗುಲಾಮರನ್ನಾಗಿಸಿಕೊಂಡು ಅವರಿಂದ ದೈಹಿಕ ದುಡಿಮೆ ಮಾಡಿಸಿಕೊಂಡು ಬೃಹತ್ ಉತ್ಪಾದನೆ ಮಾಡಿ, ಲಾಭ ಗಳಿಸಿ, ಪರರ ಕಷ್ಟದಿಂದ ತಾವು ಸುಖಪಡುವ ಪ್ರವೃತ್ತಿ ಬೆಳೆದುಬಂತು.

ಗುಲಾಮಗಿರಿಗೆ ಹಲವಾರು ರಾಷ್ಟ್ರಗಳು ಒಳಗಾಗಿದ್ದರೂ ಇದು ಹೆಚ್ಚಾಗಿ ಬಾಧಿಸಿದ್ದು ಮಾತ್ರ ಆಫ್ರಿಕಾ ಮತ್ತು ಏಷ್ಯಾಖಂಡಗಳನ್ನು. ಇಲ್ಲಿನ ಜನರನ್ನು ಅಮೆರಿಕದ ಹತ್ತಿ ತೋಟಗಳಿಗೆ, ಕ್ಯೂಬಾ, ಟ್ರಿನಿಡಾಡ್ ಮತ್ತು ಟೊಬ್ಯಾಗೋದ ಕಬ್ಬಿನ ಗದ್ದೆಗಳಿಗೆ, ಶ್ರೀಮಂತರ ಪ್ರದರ್ಶನಕ್ಕೆ ಎತ್ತಿಕೊಂಡೊಯ್ದು ಮಾರಾಟ ಮಾಡಲಾಯಿತು. ಇಲ್ಲಿ ಕಂಡುಬರುವ ವೈರುಧ್ಯವೆಂದರೆ ಏಷ್ಯಾದ ಗುಲಾಮರು ತಾವು ಹೋದಲ್ಲೆಲ್ಲ ತಮ್ಮ ವೈಶಿಷ್ಟ್ಯತೆ, ಅನನ್ಯತೆಗಳನ್ನು ಕಾಪಾಡಿಕೊಂಡು ಉನ್ನತ ಸ್ಥಾನಗಳನ್ನು ಗಳಿಸಲು ಯಶಸ್ವಿಯಾದರೆ, ಆಫ್ರಿಕಾದ ಗುಲಾಮರು ಇದರಲ್ಲಿ ವಿಫಲವಾಗಿದ್ದಾರೇಕೆ? ನಮ್ಮ ಸಿದ್ದಿಯರು ಇಂದಿಗೂ ತಮ್ಮ ಕಪ್ಪು ಕಳಂಕ ಅಥವಾ 'ಸ್ಟಿಗ್ಮಾ'ದಿಂದ ಹೊರಬರಲು ಆಗದೆ, ಮುಖ್ಯವಾಹಿನಿಗೂ ಬಾರದೆ ನರಳುತ್ತಿರುವುದಕ್ಕೆ ಕಾರಣಗಳೇನು? ಈ ಪ್ರಶ್ನೆಗಳಿಗೆ ಉತ್ತರ ಹುಡುಕಲು ಹೊರಟ ನನಗೆ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ನೋಡಿದ ಲೇಖನ ಸಹಕಾರಿಯಾಯಿತು. ವೆಸ್ಟ್ ಇಂಡೀಸ್ ದ್ವೀಪಸಮೂಹದ ಟ್ರಿನಿಡಾಡ್ ಮತ್ತು ಟೊಬ್ಯಾಗೋಗಳ ಪ್ರಧಾನಿಯಾಗಿ ಭಾರತೀಯ ಮೂಲದ ಶ್ರೀಮತಿ ಕಮಲಾ ಪ್ರಸಾದ್ ಬಿಸ್ಸೇಸರ್ ಅವರು ಅಧಿಕಾರ ಸ್ವೀಕರಿಸಲಿರುವ ಬಗ್ಗೆ ಬರೆದ ಲೇಖನ ಎರಡು ವಿಷಯಗಳಿಗೆ ನನ್ನ ಗಮನ ಸೆಳೆಯಿತು. 'ಎತ್ತಣ ಮಾಮರ ಎತ್ತಣ ಕೋಗಿಲೆ' ಎಂಬಂತೆ ವೆಸ್ಟ್ ಇಂಡೀಸ್‌ನ ಪ್ರಧಾನಿಯಾಗಿ ನಮ್ಮದೇ ದೇಶ ಈಸ್ಟ್ ಇಂಡೀಸ್‌ನ ವ್ಯಕ್ತಿ, ಅದರಲ್ಲೂ ಮಹಿಳೆಯೊಬ್ಬರು ಆಯ್ಕೆಯಾಗಿರುವುದು ಭಾರತೀಯರಾದ ನಮಗೂ ಹೆಮ್ಮೆಯ ವಿಷಯವಾಗಿದೆ.

ಭಾರತದಲ್ಲಿನ 'ಸಿದ್ದಿ'ಗಳಿಗೂ ಹಾಗೂ ವೆಸ್ಟ್ ಇಂಡೀಸ್‌ನ 'ಟ್ರಿನಿ-ಭಾರತೀಯ'ರಿಗೂ ಹಲವಾರು ಸಾಮ್ಯತೆಗಳಿವೆ. ಇಬ್ಬರೂ ವಸಹಾತುಶಾಹಿ-ಗುಲಾಮಗಿರಿಗಳ ಅಮಾನವೀಯ ದುರಾಸೆಗಳ ಪಳೆಯುಳಿಕೆಗಳಾಗಿದ್ದಾರೆ. ಯಾರದೋ ಮನೆ ತೊಳೆಯಲು, ಹೊಲ ಬೆಳೆಯಲು, ತಮ್ಮ ಮೂಲಬೇರುಗಳನ್ನು ಕತ್ತರಿಸಿ ಸಾವಿರಾರು ಮೈಲಿ ದೂರದ ಅಜ್ಞಾತ ಸ್ಥಳಗಳಲ್ಲಿ ಎಸೆಯಲ್ಪಟ್ಟ ಬಳ್ಳಿಗಳಿವು. ಸ್ಥಳೀಯರಿಂದ ಮಾನಸಿಕವಾಗಿ, ದೈಹಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಎಲ್ಲ ರೀತಿಯಿಂದ ಶೋಷಿಸಲ್ಪಟ್ಟ, ತುಳಿತಕ್ಕೊಳಗಾದ ಜನಾಂಗಗಳಾಗಿವೆ.

ಈ ಎಲ್ಲ ಸಾಮ್ಯತೆಗಳಿಗಿಂತ ಭಿನ್ನತೆಗಳೇ ಮಹತ್ವದ್ದಾಗಿವೆ. ಭಾರತಕ್ಕೆ ಗುಲಾಮರಾಗಿ ಬಂದ 'ಸಿದ್ದಿಯರು' ಇನ್ನೂ ಕೂಡ ಈ ದೇಶದಲ್ಲಿ ಭದ್ರನೆಲೆ ಕಂಡುಕೊಳ್ಳಲು, ಈ ಸಮಾಜದ ಅವಿಭಾಜ್ಯ ಅಂಗವಾಗಲು ಸಾಧ್ಯವಾಗದೆ ಆದಿವಾಸಿಗಳಾಗಿ, ಪರಕೀಯರಾಗಿಯೇ ಉಳಿದಿದ್ದರೆ, ವೆಸ್ಟ್ ಇಂಡೀಸ್‌ಗೆ ಗುಲಾಮರಾಗಿಯೇ ಹೋದ 'ಭಾರತೀಯರು' ತಮ್ಮ ಎಲ್ಲ ಕಷ್ಟ, ನಷ್ಟ, ಜನಾಂಗೀಯ ತಾರತಮ್ಯ ಗಳನ್ನು ಮೆಟ್ಟಿ ನಿಂತು ಅಧಿಕಾರದ ಅತ್ಯುನ್ನತ ಪೀಠವನ್ನು ಹಿಡಿದುಕೊಳ್ಳುವ ಮಟ್ಟಕ್ಕೆ ಬೆಳೆದಿರುವುದು. ವಿಶೇಷವಾಗಿದೆ.

ಮತ್ತೊಂದು ಕಡೆ, ಸಿದ್ದಿಯರು ತಮ್ಮ ಮೂಲಸಂಸ್ಕೃತಿಯಲ್ಲಿ ಶೇ. ೯೦ರಷ್ಟನ್ನು ಕಳೆದುಕೊಂಡು ಭಾರತದ ವಿವಿಧ ಧರ್ಮಗಳಲ್ಲಿ ಹರಿದು ಹಂಚಿ ಹೋಗಿ ಆಯಾ ಧರ್ಮಗಳನ್ನೇ ಅಪ್ಪಿಕೊಂಡಿದ್ದಾರೆ. ಆದರೆ ಟ್ರಿಣಿ-ಭಾರತೀಯರು ತಮ್ಮೊಡನೆ ಕೊಂಡೊಯ್ದಿದ್ದ ತುಳಸಿ ರಾಮಾಯಣ ಹಾಗೂ ಹನುಮಾನ್ ಚಾಲೀಸ್‌ಗಳನ್ನು ಬಿಡದೆ ಎಂಥ ಕಠಿಣ ಪರಿಸ್ಥಿತಿಯಲ್ಲಿಯೂ ಧೃತಿಗೆಡದೆ ಹಿರಿಯರು ತಮ್ಮ ಮೂಲ ಪರಂಪರೆಯ ಸಾರವನ್ನು ಮಕ್ಕಳಿಗೆ ಹಲವಾರು ತಲೆಮಾರುಗಳಿಂದ ಧಾರೆ ಎರೆದಿದ್ದಾರೆ, ಇದರ ಅರ್ಥ ಅವರು ಬದಲಾಗಲೇ ಇಲ್ಲವೆಂದಲ್ಲ. ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಕ್ರಿಶ್ಚಿಯನ್ ನಂಟು ಅನಿವಾರ್ಯವೆಂದಾದಾಗ ತಮ್ಮ ಹೆಸರುಗಳನ್ನು, ಕೇವಲ ಹೆಸರುಗಳನ್ನು ಮಾತ್ರ ರಾಲ್ಫ್ ಶಿವಪ್ರಸಾದ್, ರಾಂಡಾಲ್ಫ್ ಚಂದ್ರಿಕೆ, ಅಂಥೋನಿ ರಾಮನಾರಾಯಣ್, ಶಿವನಾರಾಯಣ್ ಚಂದ್ರಪಾಲ್ ಇತ್ಯಾದಿ ಗಳಾಗಿ-ಬದಲಾಯಿಸಿಕೊಂಡರೂ ಆಂತರಿಕವಾಗಿ ತಮ್ಮತನವನ್ನು ಹಾಗೆಯೇ ಕಾಯ್ದಿಟ್ಟುಕೊಳ್ಳುವುದು ಹೇಗೆ ಸಾಧ್ಯವಾಯಿತು?

ತಮ್ಮ ಚಿಕ್ಕಚಿಕ್ಕ ದೇವಾಲಯಗಳನ್ನು ಪದೇಪದೇ ಕೆಡವಿದಾಗ್ಯೂ ಅವುಗಳನ್ನು ಮತ್ತೆಮತ್ತೆ ಕಟ್ಟಿಕೊಳ್ಳಲು, ಇದೀಗ ಪಶ್ಚಿಮ ಗೋಳಾರ್ಧದಲ್ಲಿಯೇ ಅತಿ ಎತ್ತರವಾದ ೮೫ ಅಡಿಗಳ ಕಾರ್ಯಸಿದ್ಧಿ ಹನುಮಾನ್ ಮೂರ್ತಿಯನ್ನು ನಿರ್ಮಿಸಿ ಅದನ್ನು ಪ್ರವಾಸಿ ತಾಣವನ್ನಾಗಿ ಮಾಡಲು ಹೇಗೆ ಸಾಧ್ಯ ವಾಯಿತು? ೧೮೪೫ರಲ್ಲಿ ಕಾಣದ ಕತ್ತಲ ತೀರಗಳಿಗೆ ಚಿಕ್ಕ ಹಡಗಿನಲ್ಲಿ ಪ್ರಯಾಣಿಸಿದ ಕೇವಲ ೧೯೭ ಕುಟುಂಬಗಳು, ನಂತರ ೧೯೧೭ರವರೆಗೆ ಅಲ್ಲಿಗೆ ಹೋದ ಸುಮಾರು ೧ ೧/೨ ಲಕ್ಷ ಭಾರತೀಯ ಶ್ರಮಿಕರು ಇಂದು ೬ ಲಕ್ಷದಷ್ಟು, ಅಂದರೆ ಒಟ್ಟು ಜನಸಂಖ್ಯೆಯ ೧/೩ರಷ್ಟು ಬೆಳೆದು ನಿಲ್ಲಲು ಸಾಧ್ಯವಾಯಿತಾದರೂ ಹೇಗೆ? ಕೇವಲ ಗುಲಾಮರಂತೆ ಬಂದು, ಖೈದಿಗಳಂತೆ ಬದುಕಿದ ಎರಡೂ ಜನಾಂಗಗಳಲ್ಲಿ ಒಂದು ಜನಾಂಗ ಪೂರ್ವ ಧ್ರುವದಿಂದ ಪಶ್ಚಿಮ ಧ್ರುವಕ್ಕೆ ೩೬,೦೦೦ ಕಿ.ಮೀ. ಹೋಗಿ ತಾವೂ ಅಭಿವೃದ್ಧಿ ಹೊಂದಿ ತಾವು ನೆಲೆಸಿದ ನಾಡನ್ನು ಸಮೃದ್ಧಿಗೊಳಿಸಿ ರಾಜಕೀಯವೂ ಸೇರಿದಂತೆ ಸಮಾಜದ ಎಲ್ಲ ರಂಗಗಳಲ್ಲೂ ಅಭಿವೃದ್ಧಿಯ ಹರಿಕಾರರಾದರೆ, ಇದೇ ಪರಿಸ್ಥಿತಿಯ ಇನ್ನೊಂದು ಜನಾಂಗ ತನ್ನದೆಲ್ಲವನ್ನೂ ಕಳೆದುಕೊಂಡು ತಾನಿರುವ ನಾಡಿನಲ್ಲಿ ಇನ್ನೂ ಪರಕೀಯ ವಾಗಿರುವ, ಅಭಿವೃದ್ಧಿಯನ್ನೇ ಕಾಣದಿರುವುದು ವಿಪರ್ಯಾಸ. ಇದಕ್ಕೆ ಕಾರಣಗಳೇನು?

'ಇದು ಕೇವಲ ಒಂದು ದೇಶಕ್ಕೆ ಹೋದ ಭಾರತೀಯರ ಯಶೋಗಾಥೆಯಲ್ಲ, ಫಿಜಿ, ಮಾರಿಷಸ್, ಸಿಂಗಪೂರ್, ಅಮೇರಿಕ ಇತ್ಯಾದಿ ದೇಶಗಳಲ್ಲೂ ಹೊರಗಿನವರಾದ ಭಾರತೀಯರು ತಮ್ಮ ಹೊಸ

ನೆಲೆಯಲ್ಲಿ ಬೇರು ಬಿಟ್ಟು, ಬೆಳೆದು ಫಲ ನೀಡಲು ಸಾಧ್ಯವಾದ ಪರಿ ಹಾಗೂ ಸಿದ್ದಿಯರಿಗೆ ಈ ಕಲೆ ಸಿದ್ದಿಸಿದ ಕಾರಣ ಇತ್ಯಾದಿಗಳು ಅಧ್ಯಯನಕ್ಕೆ ಅರ್ಹವೆನಿಸುತ್ತಿದೆ.'[೩೮]

ಇದರರ್ಥ ಆಫ್ರಿಕನ್ನರು ಎಲ್ಲಿಯೂ ತಮ್ಮ ಛಾಪು ಮೂಡಿಸಲೇ ಇಲ್ಲ, ಅಧಿಕಾರ ಗಳಿಸಲೇ ಇಲ್ಲ ಎಂದಲ್ಲ. ವಿಶ್ವದ ಏಕೈಕ ಸೂಪರ್ ಪವರ್ ರಾಷ್ಟ್ರ ಅಮೆರಿಕದ ಪ್ರಸ್ತುತ ಅಧ್ಯಕ್ಷ ಬರಾಕ್ ಒಬಾಮ ಕೂಡ ಒಬ್ಬ ಆಫ್ರಿಕನ್ ಮೂಲದವನು, ಅದರಲ್ಲೂ ಭಾರತದಲ್ಲಿರುವ ಸಿದ್ದಿಗಳ ಸಮುದಾಯಕ್ಕೆ ಸೇರಿದವನು. ಭಾರತಕ್ಕೆ ದಾಳಿ ಮಾಡಿದ ಮೊಗಲ್ ಸೈನ್ಯದಲ್ಲೂ ಸಿದ್ದಿಗಳು ಸಾಕಷ್ಟಿದ್ದರು. ಧೈರ್ಯ, ಶೌರ್ಯ, ಸಾಹಸಗಳಷ್ಟೇ ಅಲ್ಲದೆ ನಂಬಿದವರಿಗೆ ಪ್ರಾಣ ನೀಡುವ ಅವರ ನಿಯತ್ತು ಇವರನ್ನು ಅತ್ಯಂತ ಬೇಡಿಕೆಯ ಸೈನಿಕರನ್ನಾಗಿಸಿತ್ತು.

ದಖನ್ನಿನ ಬೇರೆ ಸುಲ್ತಾನರ ಸೇವೆಯಲ್ಲಿ ಬೇರೆಬೇರೆ ಸ್ತರಗಳಲ್ಲಿ ಸೇರಿಕೊಂಡ ಕೆಲವರು ತಮ್ಮ ಕೆಚ್ಚು, ಧೈರ್ಯ, ಶೌರ್ಯ, ಜಾಣತನ, ನಿಷ್ಠೆಗಳಿಂದ ದೊಡ್ಡದೊಡ್ಡ ಅಧಿಕಾರ ಸ್ಥಾನಕ್ಕೇರಿದರು. ಅವರಲ್ಲಿ ಬಿಜಾಪುರದ 'ಸಿದ್ದಿ ಜವಾಹರ್, ಸಿದ್ದಿ ಅಂಬರ್, ಸಿದ್ದಿ ರೇಹಾನ್, ಸಿದ್ದಿ ಮಸೂದ್ ಖಾನ್, ಸಿದ್ದಿ ಅಬಲೂಸ್ ಖಾನ್, ಸಿದ್ದಿ ಮಲ್ಲಿಕ್ ಅಂಬರ್, ಪ್ರಮುಖರು. ಬಿಜಾಪುರದ ಕಲಾವಿದರು ತಮ್ಮ ಕಾಲದ ಪ್ರಸಿದ್ಧ ಸಿದ್ದಿಗಳ ವರ್ಣಚಿತ್ರಗಳನ್ನು ಬಿಡಿಸಿಟ್ಟಿದ್ದಾರೆ. ಬಿಜಾಪುರದ ರಾಜ ಮಹಮದ್ ಆದಿಲ್ ಶಾನ ಜೊತೆ ಇಖಲಾಸ್ ಖಾನ್ ಸಿದ್ದಿ, ಗಜಸವಾರಿ ಮಾಡುವ ಚಿತ್ರಗಳು ಸಿದ್ದಿಗಳ ನಿಷ್ಠೆ ಹಾಗೂ ಪ್ರಧಾನಿಯಾದ ಅಧಿಕಾರಗಳನ್ನು ಸೂಚಿಸುತ್ತವೆ. ಅಹಮದಾಬಾದ್‌ನಲ್ಲಿರುವ ಭಾರತದ ಅತಿ ಸುಂದರ ಮಸೀದಿಗಳಲ್ಲೊಂದನ್ನು ಅಹಮದ್ ಖಾನ್ ಸುಲ್ತಾನನ ಗುಲಾಮನಾದ 'ಸಿದ್ದಿ ಸೈಯದ್' ಕಟ್ಟಿಸಿರುವುದು ಗಮನಾರ್ಹ.



ಚಿತ್ರ ೧೨: ಅಹಮದಾಬಾದ್‌ನ ಸಿದ್ದಿ ಸೈಯದ್ ಮಸೀದಿ



ದಿಲ್ಲಿಯ ಗದ್ದುಗೆ ಏರಿದ ರಜಿಯಾ ಸುಲ್ತಾನಳು 'ಯಾಖೂತ್ ಸಿದ್ದಿ'ಯನ್ನು ಮೋಹಿಸಿ ಅವನಿಗೆ ಕುದುರೆಲಾಯದ ಸರದಾರನನ್ನಾಗಿ ಮಾಡಿದ ಕಥೆ ಕೂಡ ಸಿದ್ದಿಗಳ ಅಮೋಘ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ಹಾಗೆಯೇ 'ಚಾಂದ್ ಬೀಬಿ'ಯ ಆಪ್ತ ಬಂಟನಾದ 'ಮಲಿಕ್ ಅಂಬರ್' ಕೂಡ ದಂತಕಥೆಯಾಗಿದ್ದಾನೆ. ಬಿಜಾಪುರ ಸುಲ್ತಾನನ ಸೇವೆ ತೊರೆದು ತನ್ನದೇ ಸ್ವಂತ ಸೇನೆ ಕಟ್ಟಿದ ಅಂಬರ್ ವಿವಿಧ ಯುದ್ಧಗಳಲ್ಲಿ ವಿವಿಧ ರಾಜರಿಗೆ ಸಹಾಯ ಮಾಡಿದ್ದಲ್ಲದೇ ಅಹಮದ್‌ನಗರದ ೬೦ ಸಾವಿರ ಅಶ್ವದಳಕ್ಕೆ ಸರದಾರನೂ ಆದನು. ತನ್ನ ಜೀವಿತದ ಕೊನೆಯವರೆಗೂ ಮೊಗಲರು, ಅದರಲ್ಲೂ ಜಹಾಂಗೀರ್ ದಖನ್‌ಗೆ ಪ್ರವೇಶಿಸದಂತೆ ತಡೆದನು. ಖ್ಯಾತ ಇತಿಹಾಸಕಾರ ಫೆರಿಸ್ತಾ ತನ್ನ 'ತಾರೀಖೆ ಫೆರಿಸ್ತಾ'ದಲ್ಲಿ ತನ್ನ ಹಾದಿಗೆ ಮುಳ್ಳಾಗಿದ್ದ 'ಅಂಬರ್'ನನ್ನು ಚಕ್ರವರ್ತಿ ಜಹಾಂಗೀರ್ ಆ 'ಕರಿ ಮುಖದ ಸಿದ್ದಿ' ಎಂದು ನಿಂದಿಸಿದ ಬರಹಗಳು ಸಿದ್ದಿಗಳ ಸಾಹಸದ ಸಾಕ್ಷ್ಯಗಳಾಗಿವೆ. ಅಲ್ಲದೇ 'ಶಿವಾಜಿ'ಯ ಅಜ್ಜ' 'ಮಾಲೋಜಿ' 'ಅಂಬರ ಸಿದ್ದಿ'ಯ ಬಲಗೈ ಬಂಟನಾಗಿದ್ದು 'ಗೆರಿಲ್ಲಾ' ಯುದ್ಧದ ತಂತ್ರಗಳನ್ನು ಮೊಗಲರ ಮೇಲೆ ಪ್ರಯೋಗಿಸಿ ಯಶಸ್ವಿಯಾದರಲ್ಲದೆ ಅಂಬರ ಸಿದ್ದಿಯನ್ನು ಮಿಲಿಟರಿ ಗುರುವೆಂದು ಭಾವಿಸಿದ್ದರು. ನವರಸಪುರವನ್ನು ನಾಶ ಮಾಡಿದ್ದು ಕೂಡ ಇದೇ ಅಂಬರ ಸಿದ್ದಿ. 'ರಾಜಕೀಯ ಯುದ್ಧಗಳನ್ನು ಧಾರ್ಮಿಕ ಸಮುದಾಯಗಳ ನಡುವಣ ಕದನಗಳೆಂದು ಬಿಂಬಿಸುವವರು ಚರಿತ್ರೆಯ ಈ ಪಾಠಗಳನ್ನು ಗಮನಿಸುವುದೇ ಇಲ್ಲ. ಅಂಬರಖಾನನು ಬಿಜಾಪುರದ ಸುಲ್ತಾನನನ್ನು ಕಾಡಿ, ಬೇಡಿ ತನ್ನ ಮಗನಿಗೆ ಬಿಳಿಯ ಮನೆತನದ ಹೆಣ್ಣನ್ನು ತಂದು ಮದುವೆ ಮಾಡಿದನು.'[೫]

ಇವರ ಹೋರಾಟ ಕೇವಲ ಇಷ್ಟಕ್ಕೇ ಸೀಮಿತವಾಗದೆ ಬ್ರಿಟಿಷರ ವಿರುದ್ಧದ ಹೋರಾಟಗಳಲ್ಲಿಯೂ ಅವರು ಭಾಗವಹಿಸಿ ತಮ್ಮದಲ್ಲದ, ತಮ್ಮನ್ನು ಪ್ರಾಣಿಗಳಂತೆ ಕೊಂಡು, ಅಮಾನುಷವಾಗಿ ನಡೆಸಿಕೊಂಡ ಈ ದೇಶವನ್ನು ತಮ್ಮದೆಂದೇ ಭಾವಿಸಿ ಅದಕ್ಕಾಗಿ ತಮ್ಮ ಪ್ರಾಣಾರ್ಪಣೆ ಮಾಡಿರುವುದು ಅವರ ಉದಾತ್ತತೆಗೆ ಸಾಕ್ಷಿಯಾಗಿದೆ.

'ಕಿತ್ತೂರು ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣನ ಸೈನ್ಯಗಳಲ್ಲಿ ಹಲವಾರು ಸಿದ್ದಿಗಳು ಪಾಲ್ಗೊಂಡಿದ್ದರು. ಗಜವೀರ ಎಂಬ ಸಿದ್ದಿ ಪ್ರಸಿದ್ಧಿ ಪಡೆದಿದ್ದ. ೧೮೫೭ರ ಸಿಪಾಯಿದಂಗೆಯ ಭಾಗವಾಗಿ ನಡೆದ 'ಸೂಪಾ ಬಂಡಾಯ'ದಲ್ಲಿ ಸಿದ್ದಿ ಬಸ್ತಾಂವ್, ಬೆನೋವ್ ಪಾಲ್ಗೊಂಡಿದ್ದು, ಸಿದ್ದಿ ಬಸ್ತಾಂವ್‌ನಿಗೆ ಬ್ರಿಟಿಷರು ಫಾಸಿ ಶಿಕ್ಷೆ ನೀಡಿದರು.'[೬]

'ಸಿದ್ದಿಗಳ ಸಾಧನೆ ಕೇವಲ ಸ್ವಾತಂತ್ರ್ಯಪೂರ್ವ ಕಾಲಕ್ಕೆ ಮಾತ್ರ ಸೀಮಿತವಾಗಿಲ್ಲ. ಸ್ವಾತಂತ್ರ್ಯದ ನಂತರ ಕ್ರೀಡಾರಂಗದಲ್ಲಿ ಹಲವಾರು ಸಿದ್ದಿಯರು ತಮ್ಮ ಛಾಪು ಮೂಡಿಸಿದ್ದಾರೆ. ಪ್ರಸ್ತುತ ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಮಂಚೀಕೇರಿಯ ಕಮಲಾ ಸಿದ್ದಿ ಏಷ್ಯನ್ ಗೇಮ್ಸ್‌ನಲ್ಲಿ ಒಂದು ಚಿನ್ನ ಮತ್ತು ಎರಡು ರಜತ ಪದಕಗಳನ್ನು ಗೆದ್ದಿದ್ದಾರೆ. ರಾಷ್ಟ್ರಮಟ್ಟದ ಅಥ್ಲೇಟಿಕ್ ಕೂಟದಲ್ಲಿ ಹಳಿಯಾಳದ ಫಿಲಿಪ್ ಸಿದ್ದಿ ಮ್ಯಾರಥಾನ್ ಚಿನ್ನದ ಪದಕ ಗೆದ್ದಿದ್ದಾರೆ. ಜತಗಾ ಹೊಸೂರಿನ ಮೇರಿ ಸಿದ್ದಿ ನ್ಯಾಷನಲ್ ಗೇಮ್ಸ್‌ನಲ್ಲಿ ಎಂಟು ಚಿನ್ನದ ಪದಕ ಗೆದ್ದಿದ್ದಾನೆ. ಏಕಲವ್ಯ ಪ್ರಶಸ್ತಿ ವಿಜೇತ

ಆಗ್ನೆಲ್ ಮತ್ತು ಡೇವಿಡ್ ಫಡಿ ಜೂಡೋದಲ್ಲಿ, ಸುರೇಶ್ ಸಿದ್ದಿ ಈಜಿನಲ್ಲಿ, ಗಡ್ಗೋಳ್ಳಿಯ ಕಮ್ರೇಕರ್ ಸಿದ್ದಿ ಬಾಕ್ಸಿಂಗ್‌ನಲ್ಲಿ, ಹೊಸಳ್ಳಿಯ ಜುಜೆ ಸಿದ್ದಿ ಫುಟ್ ಬಾಲ್‌ನಲ್ಲಿ, ಲುಯಿ ಸಿದ್ದಿ ಲಾಂಗ್ ಮತ್ತು ಹೈಜಂಪ್‌ನಲ್ಲಿ ಮತ್ತು ಕಲ್ಲಳ್ಳಿಯ ರೂಪಾ ನಾಗೇಶ್ ಸಿದ್ದಿ ವೆಯಿಟ್ ಲಿಫ್ಟಿಂಗ್‌ನಲ್ಲಿ ಹಲವಾರು ಸಿದ್ದಿಗಳು ಪದಕ ಗೆದ್ದಿರುವುದಲ್ಲದೆ ಕ್ರೀಡಾಕ್ಷೇತ್ರದಲ್ಲಿ ತಮ್ಮ ಪಾರಮ್ಯ ಮೆರೆದಿದ್ದಾರೆ.'[೯]

ಇಷ್ಟೆಲ್ಲದರ ನಡುವೆಯೂ ನಮ್ಮನ್ನು ಕಾಡುವ ಪ್ರಶ್ನೆಗಳೆಂದರೆ ಸಿದ್ದಿಯರಿಗೆ ನಮ್ಮ ಸಮಾಜ, ಅವರಿಗೆ ಸಿಗಬೇಕಾದ ಸೂಕ್ತ ಸ್ಥಾನಮಾನ ನೀಡಿದೆಯೇ? ತನ್ನವರೆಂದು ಅವರನ್ನು ಒಪ್ಪಿ, ಅಪ್ಪಿ ಕೊಂಡಿದೆಯೇ? ಅವರು ರಾಜಕೀಯ ಹಾಗೂ ಇತರ ಉನ್ನತ ಸ್ಥಾನಮಾನ ಗಳಿಸುವಲ್ಲಿ ಸಫಲ ರಾಗಿದ್ದಾರೆಯೇ? ಇಲ್ಲವಾದರೆ ಅದಕ್ಕೆ ಕಾರಣ ನಮ್ಮ ಸಮಾಜವೇ? ಇಲ್ಲಾ ಸ್ವತಃ ಸಿದ್ದಿ ಸಮುದಾಯವೇ? ಹೀಗೆ ಸಿದ್ದಿಗಳ ಚಾರಿತ್ರಿಕ ಹಿನ್ನೋಟವನ್ನೊಮ್ಮೆ ಗಮನಿಸಿದರೆ ಅದೊಂದು ದುರಂತಮಯವಾದ, ಯಾತನೆಯ ಜಗತ್ತಾಗಿ ಕಾಣುತ್ತದೆ. 'ತಮ್ಮ ಜೀವನದ ಪ್ರತಿಯೊಂದು ಹಂತದಲ್ಲೂ ಕ್ರೌರ್ಯದ ಹಾದಿಯಲ್ಲೇ ಸಾಗಿ ಬಂದು ಪ್ರಾಣಿಗಳಿಗಿಂತಲೂ ಕೀಳಾಗಿ ಬದುಕಿದ ಈ ಜನಾಂಗ ಇಂದಿಗೂ ಆ ದುರಂತದಿಂದ ಸಂಪೂರ್ಣ ಹೊರಬರಲಾಗಿಲ್ಲ. ಸ್ವತಂತ್ರ ಮನುಷ್ಯನಿಗೆ ಸೂಕ್ತವಾದ ಸ್ಥಾನಮಾನಗಳನ್ನು ಅವರಿಗೆ ನೀಡಿ ಸಂತೈಸಬೇಕಿದೆ.'[೧೦]

ಅಡಿಟಿಪ್ಪಣಿಗಳು

೧. ಕಮಲ ಎಂ.ಆರ್., ಕಪ್ಪು ಹಕ್ಕಿಯ ಬೆಳಕಿನ ಹಾಡು, ಕಥನ ಪ್ರಕಾಶನ, ಬೆಂಗಳೂರು, ಪು.೩, ೨೦೦೪.

೨. ಸುವರ್ಣ ನ್ಯೂಸ್ ಚಾನೆಲ್‌ನ ಕಾರ್ಯಕ್ರಮ, ೧೬ ಅಕ್ಟೋಬರ್ ೨೦೧೩, ಕಾಂಗೋ, ದ ಬ್ರೂಟಲ್ ಹಿಸ್ಟರಿ, ಗೂಗಲ್, ಅಂತರ್ಜಾಲದಲ್ಲಿ ಸಿಗುವ ಬಿಬಿಸಿ ನಿರ್ಮಿತ ಸಾಕ್ಷ್ಯಚಿತ್ರ.

೩. ಸೂರ್ಯನಾಥ ಕಾಮತ್, 'ಪೋರ್ಚುಗೀಸರು ಮತ್ತು ಕರ್ನಾಟಕ', ವಿಜಯಕರ್ನಾಟಕ, ಗಂಗಾವತಿ ಆವೃತ್ತಿ, ಅಂತರ್ಮುಖಿ ವಿಭಾಗ- ಗತಕಾಲದಿಂದ ಅಂಕಣ: (ಸಂಪುಟ–೧೧, ಸಂಚಿಕೆ–೧೯೪, ಪು. ೬), ದಿನಾಂಕ: ೦೬.೧೨.೨೦೧೧

೪. ಕಮಲ ಎಂ.ಆರ್., ಕಪ್ಪು ಹಕ್ಕಿಯ ಬೆಳಕಿನ ಹಾಡು, ಕಥನ ಪ್ರಕಾಶನ, ಬೆಂಗಳೂರು, ಪು.೧, ೨೦೦೪.

೫. ಶ್ರೀಕಾಂತ್ ವೈ. ರಮಣಿ, Slavery in portuguese India ದ The Great Siddi Controversy, ಅಂತರ್ಜಾಲ.

೬. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್, ಪುಸ್ತಕ ಪ್ರಕಾಶನ, ಮೈಸೂರು, ಪು. ೧೯೦

೭. ಕಮಲ ಎಂ.ಆರ್., ಕಪ್ಪು ಹಕ್ಕಿಯ ಬೆಳಕಿನ ಹಾಡು, ಕಥನ ಪ್ರಕಾಶನ, ಬೆಂಗಳೂರು, ಪು.೪, ೨೦೦೪.

೮. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್, ಪುಸ್ತಕ ಪ್ರಕಾಶನ, ಮೈಸೂರು ಪು.೧೯೨

೯. ಕಮಲ ಎಂ.ಆರ್., ಕಪ್ಪು ಹಕ್ಕಿಯ ಬೆಳಕಿನ ಹಾಡು, ಕಥನ ಪ್ರಕಾಶನ, ಬೆಂಗಳೂರು, ಪು.೬, ೨೦೦೪.

೧೦. ಅದೇ. ಪು.೧೧

೧೧. 'ರೂಟ್ಸ್' ಇಂಗ್ಲಿಷ್ ಚಲನಚಿತ್ರ

೧೨. ಕಮಲ ಎಂ.ಆರ್., ಕಪ್ಪು ಹಕ್ಕಿಯ ಬೆಳಕಿನ ಹಾಡು, ಕಥನ ಪ್ರಕಾಶನ, ಬೆಂಗಳೂರು, ಪು.೬, ೨೦೦೪.

೧೩. ಅದೇ, ಪು.೭

೧೪. ಬೋರಲಿಂಗಯ್ಯ ಹಿ.ಚಿ., ಸಿದ್ದಿಯರ ಸಂಸ್ಕೃತಿ, ಉಪಸಂಸ್ಕೃತಿ ಮಾಲೆ, ಕನ್ನಡ ಸಾಹಿತ್ಯ ಅಕಾಡೆಮಿ, ಪು. ೩೦, ೧೯೯೩.

೧೫. ಅಂತರ್ಜಾಲದಲ್ಲಿ ಕಂಡ Slavery in portuguese Indiaದಲ್ಲಿ ಪ್ರಕಟವಾದ The Great Siddi Controversy ಲೇಖನದಲ್ಲಿ ಶ್ರೀಕಾಂತ್ ವೈ ರಮಣಿಯವರು ದಾಖಲೆಗಳ ಆಧಾರದಲ್ಲಿ ಗೋವಾದ ಗುಲಾಮಗಿರಿಯ ಚಿತ್ರಣವನ್ನು ನೀಡಿದ್ದಾರೆ.

೧೬. ಬೋರಲಿಂಗಯ್ಯ ಹಿ.ಚಿ., ಸಿದ್ದಿಯರ ಸಂಸ್ಕೃತಿ, ಉಪಸಂಸ್ಕೃತಿ ಮಾಲೆ, ಕನ್ನಡ ಸಾಹಿತ್ಯ ಅಕಾಡೆಮಿ, ಪು. ೩೨, ೧೯೯೩.

೧೭. The New Cambridge History of India: Vol 1.1, p. 151

೧೮. Edgar Thurston, Slavery. Ethnographic Notes in Southern India, Asian Educational Services, New Delhi, p.182, 1987.

೧೯. ಕಮಲ ಎಂ.ಆರ್., ಕಪ್ಪು ಹಕ್ಕಿಯ ಬೆಳಕಿನ ಹಾಡು, ಕಥನ ಪ್ರಕಾಶನ, ಬೆಂಗಳೂರು, ಪು. ೪೫, ೨೦೦೪.

೨೦. ಸೂರ್ಯನಾಥ ಕಾಮತ್, 'ಪೋರ್ಚುಗೀಸರು ಮತ್ತು ಕರ್ನಾಟಕ', ವಿಜಯಕರ್ನಾಟಕ, ಗಂಗಾವತಿ ಆವೃತ್ತಿ, ಅಂತರ್ಮುಖಿ ವಿಭಾಗ- ಗತಕಾಲದಿಂದ ಅಂಕಣ: (ಸಂಪುಟ–೧೧, ಸಂಚಿಕೆ–೧೯೪, ಪು. ೬), ದಿನಾಂಕ: ೦೬.೧೨.೨೦೧೧

೨೧. Edgar Thurston, Slavery. Ethnographic Notes in Southern India, Asian Educational Services, New Delhi, p. 449 & 455, 1987.

೨೨. ಕಮಲ ಎಂ.ಆರ್., ಕಪ್ಪು ಹಕ್ಕಿಯ ಬೆಳಕಿನ ಹಾಡು, ಕಥನ ಪ್ರಕಾಶನ, ಬೆಂಗಳೂರು, ಪು. ೧೫, ೨೦೦೪.

೨೩. ಅದೇ ಪು. ೧೫

೨೪. ಅದೇ ಪು. ೧೬

೨೫. ಅದೇ ಪು. ೪೬

೨೬. Kiran Kamal Prasad, In Search of an Identity, Janajagruti Prakashan, Bengalore, p.33, 2005.

೨೭. ಅದೇ ಪು. ೩೬

೨೮. Hiremath R.S., Siddis and Their Organisations or Associations (With reference to The North Kanara District of Karnataka State, India.) Dharwad. (Internet)

೨೯. ಮೊಗಳ್ಳಿ ಗಣೇಶ್, (ಲೇ) ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು. ೩, ೨೦೦೬.

೩೦. ಬೋರಲಿಂಗಯ್ಯ ಹಿ.ಚಿ., ಸಿದ್ದಿಯರ ಸಂಸ್ಕೃತಿ, ಉಪಸಂಸ್ಕೃತಿ ಮಾಲೆ, ಕನ್ನಡ ಸಾಹಿತ್ಯ ಅಕಾಡೆಮಿ, ಪು.೧೧, ೧೯೯೩.

೩೧. ಹೆನ್ರಿ ಜಾನ್ ಡ್ರಿವಲ್, ಸಿದ್ದಿ ಜನಾಂಗ, ಭಾರತೀಯ ಆಫ್ರಿಕಾ ಜನ, ಐತಿಹಾಸಿಕ ಸಮೀಕ್ಷೆ, ವಿಸ್ಕೋನ್ಸಾಸ್ ವಿಶ್ವವಿದ್ಯಾಲಯ, ಅಮೆರಿಕ, ಲಯೋಲಾ ವಿಕಾಸ ಕೇಂದ್ರ, ಮುಂಡಗೋಡ, ೨೦೦೨.

೩೨. ಬೋರಲಿಂಗಯ್ಯ ಹಿ.ಚಿ., ಸಿದ್ದಿಯರ ಸಂಸ್ಕೃತಿ, ಉಪಸಂಸ್ಕೃತಿ ಮಾಲೆ, ಕನ್ನಡ ಸಾಹಿತ್ಯ ಅಕಾಡೆಮಿ, ಪು.೧೧, ೧೯೯೩.

೩೩. ರಹಮತ್ ತರೀಕೆರೆ, ನಡೆದಷ್ಟೂ ನಾಡು, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ಪು. ೬೮ ೨೦೧೨

೩೪. ಅದೇ ಪು. ೧೩೬

೩೫. ಅದೇ ಪು. ೧೩೭

೩೬. ಅದೇ ಪು. ೧೩೭

೩೭. ಅಗ್ನಿ ಶ್ರೀಧರ್, ಟಿಬೇಟಿಯನ್ನರ ಸತ್ತವರ, ಅಂಕಿತ ಪುಸ್ತಕ, ಬೆಂಗಳೂರು, ಪು.೧೮, ೨೦೧೨

೩೮. ಜಯಂತಿ ಮನೋಹರ್, ಪತ್ರಿಕಾ ಲೇಖನ, 'ಟ್ರಿನಿಡಾಡ್ ಪ್ರಧಾನಿ, ಇದು ನಮ್ಮದೇ ಹೆಮ್ಮೆಯ ಕಹಾನಿ'. ವಿಜಯ ಕರ್ನಾಟಕ. ಪು. ೧೬, ದಿನಾಂಕ: ೦೩.೦೬.೨೦೧೦.

೩೯. ರಹಮತ್ ತರೀಕೆರೆ, ನಡೆದಷ್ಟೂ ನಾಡು, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ಪು. ೭೦, ೨೦೧೨

೪೦. ಸೂರ್ಯನಾಥ ಕಾಮತ್, 'ಪೋರ್ಚುಗೀಸರು ಮತ್ತು ಕರ್ನಾಟಕ', ವಿಜಯಕರ್ನಾಟಕ, ಗಂಗಾವತಿ ಆವೃತ್ತಿ, ಅಂತರ್ಮುಖಿ ವಿಭಾಗ- ಗತಕಾಲದಿಂದ ಅಂಕಣ: (ಸಂಪುಟ–೧೧, ಸಂಚಿಕೆ–೧೯೪, ಪು. ೬), ದಿನಾಂಕ: ೦೬.೧೨.೨೦೧೧

೪೧. ಸಿದ್ದಿ ಜನವಿಕಾಸ ಸಂಘ, ಬ್ಲಾಗ್, ಅಂತರ್ಜಾಲ.

೪೨. ಬೋರಲಿಂಗಯ್ಯ ಹಿ.ಚಿ., ವಿಸ್ಮೃತಿ ಸಂಸ್ಕೃತಿ, ಸಿ.ವಿ.ಜಿ. ಪ್ರಕಾಶನ, ಬೆಂಗಳೂರು, ಪು. ೭೦, ೭೨, ೨೩೩.

ಅಧ್ಯಾಯ ನಾಲ್ಕು

ಸಿದ್ದಿಗಳ ಆರ್ಥಿಕತೆ: ಚಾರಿತ್ರಿಕ ನೋಟ

೧. ಸಿದ್ದಿಗಳ ಆರ್ಥಿಕತೆ: ಚಾರಿತ್ರಿಕ ನೋಟ

೨. ಸಿದ್ದಿಗಳ ಆರ್ಥಿಕತೆಯ ರೂಪಾಂತರಗಳು

೩. ಆರ್ಥಿಕ ರೂಪಾಂತರಗಳಿಗೆ ಕಾರಣಗಳು

೪. ಬದಲಾದ ದುಡಿಮೆಯ ಪರಿಣಾಮಗಳು

ಅಧ್ಯಾಯ ನಾಲ್ಕು

ಸಿದ್ದಿಗಳ ಆರ್ಥಿಕತೆ: ಚಾರಿತ್ರಿಕ ನೋಟ

೪.೧. ಸಿದ್ದಿಗಳ ಆರ್ಥಿಕತೆ: ಚಾರಿತ್ರಿಕ ನೋಟ

ಆಫ್ರಿಕಾದ ಜಂಬೇಸಿ ಸರೋವರದ ಸುತ್ತಲಿನ ದಟ್ಟ ಹಸಿರಿನ ಕಾನನಗಳ ಮಧ್ಯೆ ಸ್ವತಂತ್ರ, ಸಂತೋಷದ ಜೀವನ ನಡೆಸುತ್ತಿದ್ದ ಬುಡಕಟ್ಟುಗಳ ಮೇಲೆರಗಿದ ಅರಬ್-ಪೋರ್ಚುಗೀಸ್ ಜನರು ಯಾವುದೇ ಪಾಪ ಮಾಡದ ಮುಗ್ಧ ಜನರನ್ನು ತಮ್ಮ ಲಾಭಕ್ಕಾಗಿ ಹೆಡೆಮುರಿ ಕಟ್ಟಿ ಪಶುಗಳಿಗಿಂತಲೂ ಹೀನಾಯವಾಗಿ ಹಡಗುಗಳಿಗೆ ತುಂಬಿ ಕಾಣದ ಖಂಡಗಳಿಗೆ ತಂದು ಮಾರಾಟ ಮಾಡಿದ ಬಗ್ಗೆ, ಅವರ ಯಾತನಾಮಯ ಪಯಣ, ಗುಲಾಮಗಿರಿಯ ಅಮಾನುಷ ಬದುಕುಗಳನ್ನು ಈಗಾಗಲೇ ವಿವರಿಸಲಾಗಿದೆ. ಆದರೆ ಸ್ವತಂತ್ರರಾದ ಭಾರತದ, ಗೋವಾದ ಸಿದ್ದಿಗಳು ಈ ನಾಗರಿಕ ಜನರ ಸಹವಾಸವೇ ಬೇಡವೆಂದು ದಟ್ಟ ಕಾಡಿನ ನಟ್ಟನಡುವೆ ಓಡಿ ಹೋಗಿ ತಮ್ಮದೇ ಬದುಕನ್ನು ಕಟ್ಟಿಕೊಳ್ಳುವವರೆಗಿನ ಏರುಪೇರುಗಳು, ಅನಿರೀಕ್ಷಿತ ತಿರುವುಗಳ ಅಧ್ಯಾಯ ಸುಖಾಂತ್ಯವಾಯಿತೆಂಬಂತೆ ಕಂಡರೂ ಅಲ್ಲಿಂದ ಆರಂಭವಾದ ಅವರ ಜೀವನದ ಪಯಣ ಚಾರಿತ್ರಿಕ ವಿಸ್ಮೃತಿಗೊಳಗಾಗಿದ್ದು, ಹೆಚ್ಚಿನ ವಿವರಗಳು ಲಭ್ಯವಿಲ್ಲ. ಸಿದ್ದಿಯರ ವರ್ತಮಾನದ ಬದುಕಿನ ಬಗ್ಗೆ ಮತ್ತು ಗುಲಾಮಗಿರಿಯ ಬಗ್ಗೆ ಸಾಕಷ್ಟು ಅಧ್ಯಯನಗಳಾಗಿದ್ದರೂ ಇವೆರಡರ ನಡುವಿನ ಅವರ ಹೋರಾಟದ ಜೀವನದ ಬಗೆಗೆ ಹೆಚ್ಚಿನ ದಾಖಲೆಗಳು ಲಭ್ಯವಿಲ್ಲ. ಚರಿತ್ರೆಯ ದಿವ್ಯನಿರ್ಲಕ್ಷ್ಯಕ್ಕೊಳಗಾದ ಈ ಜನರ ಬದುಕು ಹೇಗಿದ್ದಿರಬಹುದು? ಯಾವ ಯಾವ ಪಲ್ಲಟಗಳಿಗೆ, ಸ್ಥಿತ್ಯಂತರಗಳಿಗೆ ಒಳಗಾಗಿರಬಹುದು? ಅವುಗಳ ಪ್ರಭಾವ ಹೇಗೆ ಸಿದ್ದಿಗಳ ವರ್ತಮಾನವನ್ನು ರೂಪಿಸಿದೆ ಎಂದು ವಿವೇಚಿಸಲಾಗಿದೆ. ಮನುಕುಲದ ಸಮಸ್ತ ತಲ್ಲಣಗಳನ್ನೇ ಆವಾಹಿಸಿಕೊಂಡಂತಿರುವ ಈ ಪುಟ್ಟ ಸಮುದಾಯದ ಮರೆತುಹೋದ ಕಾಲಘಟ್ಟದ ಬದುಕನ್ನು ಊಹಿಸಿಕೊಂಡು ಮತ್ತೆ ಕಟ್ಟಿಕೊಡುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಸಿದ್ದಿಯರು ಕರ್ನಾಟಕದ ಮಲೆನಾಡಿಗೆ ಬಂದ ಕಾರಣ ಅವರ ಮೂಲ ಅರ್ಥಿಕತೆ. ಅಂದರೆ ಆಫ್ರಿಕಾದ ಬುಡಕಟ್ಟು ಅರ್ಥಿಕತೆ ಕಾಡನ್ನೇ ಅವಲಂಬಿಸಿದ್ದದ್ದು ಹಾಗೂ ಯಾವುದೇ ವಿದ್ಯೆ, ತರಬೇತಿ ಅವಶ್ಯಕವಿಲ್ಲದೆ ಬದುಕಬಹುದಾದ ಜಾಗವೆಂದರೆ ಕಾಡೇ ಆಗಿದ್ದುದು ಮತ್ತು ಇನ್ನೊಮ್ಮೆ ನಾಗರಿಕರಿಗೆ, ಗುಲಾಮಗಿರಿಗೆ ಸೆರೆಯಾಗುವುದನ್ನು ತಪ್ಪಿಸಿಕೊಳ್ಳಲು ಅವರು ಉತ್ತರಕನ್ನಡದ ಕಾಡಿಗೆ ಓಡಿಬಂದಿರಬೇಕು. ಹೀಗೆ ಕಾಡಿಗೆ ಬಂದ ನಂತರ ಈ ಸಮುದಾಯ ಎದುರಿಸಿದ ಸಮಸ್ಯೆಗಳು, ಬದಲಾದ ಬದುಕಿಗೆ ಹೊಂದಿಕೊಂಡ ರೀತಿ, ಕಂಡುಕೊಂಡ ದಾರಿಗಳು, ಒಳಗಾದ ಸ್ಥಿತ್ಯಂತರಗಳು ವಿಶಿಷ್ಟವಾಗಿರಬೇಕು. ಮೂಲತಃ ಬುಡಕಟ್ಟೇ ಆಗಿದ್ದರೂ ನೂರಾರು ವರ್ಷಗಳ ಗುಲಾಮಗಿರಿಯ ಸಂಕೋಲೆಗಳ ಜೀವನ ಅವರ ಬುಡಕಟ್ಟು ಜ್ಞಾನವನ್ನು ಅಳಿಸಿ ಹಾಕಿರಬೇಕು. ಆದರೆ ಪರಿವರ್ತನೆ ಜಗದ ನಿಯಮ. ಅದು ಒಳ್ಳೆಯದೋ ಕೆಟ್ಟದ್ದೋ ಎಂಬುದು ಬೇರೆ ವಿಚಾರ. ಈ ಬದಲಾವಣೆಗಳೆಲ್ಲ ಅನಿವಾರ್ಯವಾದರೂ ಅದು ಅಸಹಾಯಕತೆಯಲ್ಲ, ಬದಲಾಗಿ ನಿಸರ್ಗದ ನಿಯಮ. ಯಾವುದೇ ಸಮುದಾಯ ತನ್ನೊಳಗೆ ಮತ್ತು ತನ್ನ ಸುತ್ತಲೂ ನಡೆಯುವ ಕಾಲಾಂತರದ ಬದಲಾವಣೆಗಳನ್ನು ಅವಲೋಕಿಸುತ್ತಲೂ ಪ್ರತಿಕ್ರಿಯಿಸುತ್ತಲೂ ಇರುತ್ತದೆ. ಬದಲಾಗುವ ಕಾಲಮಾನಕ್ಕೆ ತಕ್ಕಂತೆ ತನ್ನ ಸಂವೇದನೆಗಳನ್ನು ಹೊಂದಿಸಿಕೊಂಡು, ಸಮುದಾಯದ ಜೀವಂತಿಕೆಯನ್ನು ನಿರಂತರ ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. 'ಸ್ಥಿರೀಕರಣ ಮತ್ತು ಪ್ರತಿರೋಧಗಳೆರಡೂ ಇಲ್ಲಿ ಏಕಕಾಲದಲ್ಲಿ ಪರಸ್ಪರ ಮುಖಾಮುಖಿಯಾಗುತ್ತಿರುತ್ತವೆ.'[೧] ಈ ರೀತಿಯ ಒಪ್ಪಿಗೆ–ಪ್ರತಿರೋಧ–ಬೆಸುಗೆ–ಹೊಸಸೃಷ್ಟಿ–ಹೊಸಪಲ್ಲಟ–ಸ್ಮೃತಿ–ವಿಸ್ಮೃತಿಗಳ ಚಕ್ರ ವಿಶಿಷ್ಟ ಹಾಗೂ ನಿರಂತರ.

'ಅಷ್ಟಕ್ಕೂ ಸ್ಥಿತ್ಯಂತರವೆಂದರೆ ಸಂಸ್ಕೃತಿ ನಾಶವೆಂದೇ ಅರ್ಥೈಸಬೇಕಿಲ್ಲ'.[೨] ಅದು ಕಾಲದ ವಿವಿಧ ಪರ–ವಿರುದ್ಧದ ಪ್ರಭಾವಗಳೊಂದಿಗಿನ ಮುಖಾಮುಖಿಯಾಗಿದೆ. 'ಸ್ಥಿರೀಕರಿಸುವಾಗ ಸಮುದಾಯದ ಆಳದಲ್ಲಿನ ಚಾರಿತ್ರಿಕ ಹಸಿವು, ಪ್ರತಿರೋಧಿಸುವಾಗ ಕಾಡುವ ಅನನ್ಯತೆಯ ಭಯ, ಇವೆರಡೂ ಒಂದು ಸಮುದಾಯದ ಸಂಸ್ಕೃತಿ ಕೋಶದ ಮಿಡಿತವನ್ನು ಒಂದು ಅರ್ಥಪೂರ್ಣ ಲಯಕ್ಕೆ ಹೊಂದಿಸಿವೆ'[೩]. ಬಾಹ್ಯಪ್ರಭಾವದಿಂದ ಸಮುದಾಯಗಳಲ್ಲಿ ಬದಲಾವಣೆಗಳು ಅನಿವಾರ್ಯವಾದರೂ ಕೆಲವು ಅಂಶಗಳು ತತ್‌ಕ್ಷಣಕ್ಕೇ ಬದಲಾದರೂ ಇನ್ನು ಕೆಲವು ಬದಲಾಗದೇ ಹಾಗೆಯೇ ಉಳಿಯಲು, ತಮ್ಮ ಅಸ್ಮಿತೆಯನ್ನು ಕಾಪಾಡಿಕೊಳ್ಳಲು ಕಾರಣಗಳೇನು ಎನ್ನುವುದು ಆಸಕ್ತಿದಾಯಕ ಪ್ರಶ್ನೆ.

ಸಿದ್ದಿಗಳ ಸ್ಥಿತ್ಯಂತರದ ವಿವಿಧ ಹಂತಗಳು ಮತ್ತು ಕಾರಣಗಳನ್ನು ಈ ಕೆಳಗೆ ವಿವೇಚಿಸಲಾಗಿದೆ.

೪.೨. ಸಿದ್ದಿಗಳ ಅರ್ಥಿಕತೆಯ ರೂಪಾಂತರಗಳು

ಸಿದ್ದಿಗಳ ಗುಲಾಮಗಿರಿಯ ನಂತರದ ಬದುಕಿನ ಹಂತ ಹಂತದ ಸ್ಥಿತ್ಯಂತರಗಳನ್ನು ಈ ಕೆಳಗಿನಂತೆ ಸಮೀಕರಿಸಬಹುದಾಗಿದೆ. ಇಲ್ಲಿ ಸ್ಥಿತ್ಯಂತರಕ್ಕೊಳಗಾದ ಸಿದ್ದಿಗಳ ಆರ್ಥಿಕ ಮೂಲಗಳನ್ನು ಮುಖ್ಯವಾಗಿ ಪರಿಗಣಿಸಲಾಗಿದೆ. ಈ ಅರ್ಥಿಕ ಮೂಲಗಳನ್ನು ಪಾರಂಪರಿಕ ಮೂಲಗಳು ಮತ್ತು ಆಧುನಿಕ ಮೂಲಗಳೆಂದು ವಿಂಗಡಿಸಬಹುದಾಗಿದೆ.

೧. ಪಾರಂಪರಿಕ ಆರ್ಥಿಕ ಮೂಲಗಳು

೧. ಆಹಾರ ಸಂಗ್ರಹಣೆ ಅಥವಾ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ

೨. ಬೇಟೆ

೩. ಪಶುಸಂಗೋಪನೆ ಮತ್ತು ಮೀನುಗಾರಿಕೆ

೪. ಕುಮ್ರಿ ಬೇಸಾಯ

೫. ಕರಕುಶಲ ಕಲೆಗಳು

೨. ಆಧುನಿಕ ಕಸುಬುಗಳು

೧. ಸ್ಥಿರ ಕೃಷಿ

೨. ಕೂಲಿ

೩. ಮನೆಗೆಲಸ

೪. ಸರ್ಕಾರಿ ಮತ್ತು ಖಾಸಗಿ ಉದ್ಯೋಗ

೫. ಸ್ವಂತ ಉದ್ಯೋಗ ಮತ್ತು ಇತರೆ ಉದ್ಯೋಗ

ಈ ವಿಂಗಡಣೆ ನಿರ್ದಿಷ್ಟವಾಗಿರದೆ ಪರಸ್ಪರ ಪುನಾರಾವರ್ತಿತವಾಗುವ ಹೊಂದಾಣಿಕೆಯ ಸ್ಥಿತಿಸ್ಥಾಪಕತ್ವ ಗುಣವುಳ್ಳದ್ದಾಗಿದೆ. ಏಕೆಂದರೆ ಕೆಲವು ಪಾರಂಪರಿಕ ಕಸುಬುಗಳು ಇಂದಿಗೂ ಉಳಿದಿದ್ದು ದುಡಿಮೆಯ ಪರ್ಯಾಯ ಮೂಲಗಳಾಗಿವೆ. ಇನ್ನು ಕೆಲವು ಸಂಪೂರ್ಣ ಅವನತಿ ಹೊಂದಿದ್ದು ಸಾಂಕೇತಿಕ ಅಥವಾ ಆಚರಣಾತ್ಮಕ ನೆಲೆಗಳಲ್ಲಿ ಮಾತ್ರ ತಮ್ಮ ಕುರುಹುಗಳನ್ನು ಉಳಿಸಿಕೊಂಡಿವೆ. ಇನ್ನೂ ಕೆಲವು ಅವಸಾನದ ಅಂಚಿನಲ್ಲಿವೆ. ಇವುಗಳ ಉಪಯೋಗ, ಪ್ರಾಮುಖ್ಯತೆ ಮತ್ತು ಕಾರಣಗಳನ್ನು ಈ ಕೆಳಗೆ ವಿವರಿಸಲಾಗಿದೆ.

೧. ಬೇಟೆ: ಮೂಲಕಸುಬು–ಮಾಂಸ, ಚರ್ಮ, ಕೊಬ್ಬು ಮತ್ತು ಔಷಧಿಗಳು, ಮನರಂಜನೆ, ಆಚರಣೆ ಇತ್ಯಾದಿ ಹಿನ್ನೆಲೆ.

೨. ಆಹಾರ ಮತ್ತು ಅರಣ್ಯ ಕಿರು ಉತ್ಪನ್ನಗಳ ಸಂಗ್ರಹಣೆ–ಮೂಲಕಸುಬು–ಹಣ್ಣು ಹಂಪಲು, ಜೇನು, ಮೇಣ, ಅರಗು, ಉರುವಲು, ಮುರುಗಲ, ಉಪ್ಪಾಗೆ, ನೆಲ್ಲಿಕಾಯಿ, ಗೇರು ಹಣ್ಣು ಮತ್ತು ಬೀಜ, ಅಂಟುವಾಳ, ಅಂಟು, ರಾಳ, ಔಷಧಿ ಸಸ್ಯಗಳು, ಎಲೆಗಳು ಬೀಡಿ ಮತ್ತು ತಟ್ಟೆ– ದೊನ್ನೆ ಮುಂತಾದವುಗಳು.

೩. ಪಶುಸಂಗೋಪನೆ–ಹಾಲು, ಹೈನು, ಮಾಂಸ, ಚರ್ಮ, ಗೊಬ್ಬರ, ಆಪತ್ಕಾಲದ ಹಣ.

೪. ಮೀನುಗಾರಿಕೆ–ನಿರಂತರ ಆಹಾರದ ಪೂರೈಕೆ, ಆಹಾರ ವೈವಿಧ್ಯ, ಮಾರಾಟದ ಸರಕು.

೫. ಬೇಸಾಯ – ೧. ಕುಮ್ರಿ ಬೇಸಾಯ–ನೈಸರ್ಗಿಕ, ಮೂಲಕಸುಬು.

೨. ಸ್ಥಿರ ಬೇಸಾಯ–ನಿರಂತರ ಆಹಾರದ ಪೂರೈಕೆ, ವಾಣಿಜ್ಯ ಬೆಳೆಗಳಿಂದ ಹಣ, ಹಣ್ಣು–ತರಕಾರಿ.

೬. ಕೃಷಿಕೂಲಿ – ಜೀತ, ನಿರಂತರ ಆದಾಯ, ಸಾಲದ ಬಲೆ, ಒತ್ತಡ ಮತ್ತು ಅನಿವಾರ್ಯತೆ, ಪರ್ಯಾಯ ಮೂಲಗಳಿಲ್ಲದಿರುವಿಕೆ.

೭. ಮನೆಗೆಲಸ – ಜೀತ, ಪೂರಕ ಆದಾಯ, ಅನಿವಾರ್ಯತೆ.

೮. ಅರಣ್ಯ ಇಲಾಖೆಯ ದಿನಗೂಲಿ – ಪರ್ಯಾಯ ಜೀವನೋಪಾಯ, ಹೆಚ್ಚಿನ ಕೂಲಿ.

೯. ಇತರ ಕೆಲಸಗಳು – ಕೌದಿ ಹೊಲಿಯುವುದು, ಬೆತ್ತದ ಬುಟ್ಟಿ, ಡ್ರೈವರ್, ಮೆಕ್ಯಾನಿಕ್, ವಾಚ್‌ಮನ್, ಪ್ಯೂನ್, ನರ್ಸ್, ಸೈನಿಕ ಇತ್ಯಾದಿ.

ಹೀಗೆ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಸ್ವಇಚ್ಛೆಯಿಂದಲೋ, ಒತ್ತಾಯದಿಂದಲೋ ಸಿದ್ದಿಗಳ ಬದುಕು ಪಲ್ಲಟವಾಗುತ್ತಾ ಬಂದಿದೆ. ಪಲ್ಲಟಗಳನ್ನೆಲ್ಲಾ ಮುಂದಿನ ಅಧ್ಯಾಯಗಳಲ್ಲಿ ಸಂಖ್ಯಾತ್ಮಕ ಪರಿಕರಗಳ ಮೂಲಕ ವಿವರಿಸಲಾಗಿದೆ.

೪.೩ ಆರ್ಥಿಕ ರೂಪಾಂತರಗಳಿಗೆ ಕಾರಣಗಳು

೧. ಇತಿಹಾಸ–ಗುಲಾಮಗಿರಿ ಮತ್ತು ಮತಾಂತರ

೨. ಭೌಗೋಳಿಕತೆ ಮತ್ತು ಅದರಲ್ಲಿನ ಬದಲಾವಣೆಗಳು–ಕಾಡು ಮತ್ತು ಕಾಡು ನಾಶ

೩. ಋತುಮಾನಗಳಿಗೆ ಸೀಮಿತವಾದ ಕಸುಬುಗಳು

೪. ಬಡತನ

೫. ಸಾಲದ ಬಾಧೆ

೬. ಭೂ ಅನ್ಯಾಕ್ರಾಂತತೆ

೭. ಸರ್ಕಾರ – ಅ. ಕಾನೂನುಗಳು

ಆ. ಅರಣ್ಯ ಇಲಾಖೆ

ಇ. ಪೊಲೀಸ್ ಇಲಾಖೆ

ಈ. ಬುಡಕಟ್ಟು ಕಲ್ಯಾಣ ಯೋಜನೆಗಳು

೮. ರಾಷ್ಟ್ರೀಯ ಉದ್ಯಾನಗಳು

೯. ಬೃಹತ್ ಉದ್ದಿಮೆಗಳು ಮತ್ತು ಗಣಿಗಾರಿಕೆ

೧೦. ಜಲವಿದ್ಯುತ್ ಯೋಜನೆಗಳು

೧೧. ಮುಖ್ಯವಾಹಿನಿ ಮತ್ತು ಆಧುನಿಕತೆಯೊಡನೆ ಮುಖಾಮುಖಿ

೧೨. ಸಾಂಪ್ರದಾಯಿಕತೆ ಮತ್ತು ಕೀಳರಿಮೆ

೧೩. ಜಾಗತೀಕರಣ ಮತ್ತು ಮಾರುಕಟ್ಟೆ

೧೪. ರಾಜಕೀಯ ಸ್ಥಾನಮಾನಗಳ ಕೊರತೆ

೧೫. ಅಭಿವೃದ್ಧಿಶೀಲ ಮನೋಭಾವದ ಕೊರತೆ

೧೬. ವಿದ್ಯಾಭ್ಯಾಸ ಮತ್ತು ಇತರ ಸೌಕರ್ಯಗಳ ಲಭ್ಯತೆ

೧೭. ಜಾಗೃತಿ

೧೮. ಮೀಸಲಾತಿ

೧೯. ನಗರೀಕರಣದ ಆಕರ್ಷಣೆಗಳು ಇತ್ಯಾದಿ

ಯಾವುದೇ ಸಮುದಾಯದ ಸ್ಥಿತ್ಯಂತರಗಳಿಗೆ ಮೇಲಿನ ಹಲವಾರು ಕಾರಣಗಳಿದ್ದು ಅವುಗಳಲ್ಲಿ ಕೆಲವು, ಸಮುದಾಯದ 'ಒಳಗಿನ' ಮತ್ತು ಬದಲಾವಣೆಯ ಕಡೆಗಿನ 'ಐಚ್ಛಿಕ' ಕಾರಣಗಳಾಗಿದ್ದರೆ ಇನ್ನೂ ಕೆಲವು ವ್ಯವಸ್ಥೆಯ ನಿಯಂತ್ರಕ ಶಕ್ತಿಗಳ 'ಬಾಹ್ಯ ಒತ್ತಡದ ಅನೈಚ್ಛಿಕ', ಅನಿವಾರ್ಯ ಸ್ವರೂಪದ ಕಾರಣಗಳಾಗಿರುತ್ತವೆ. ಇವೆರಡಕ್ಕೂ ಒಂದು ಸಮುದಾಯ ಹೇಗೆ ಒಳಗಾಗುತ್ತದೆ ಮತ್ತು ಹೇಗೆ ಪ್ರತಿಕ್ರಿಯಿಸುತ್ತದೆ ಎನ್ನುವುದು ಆ ಸಮುದಾಯದ ಸ್ವರೂಪ ಮತ್ತು ಸ್ಥಾನಮಾನಗಳನ್ನು ನಿರ್ಧರಿಸುತ್ತದೆ. ಸಿದ್ದಿಯರು ನಿರಂತರವಾಗಿ ಬಾಹ್ಯ ಒತ್ತಡಗಳಿಗೊಳಗಾಗುತ್ತಲೇ ಬಂದಿದ್ದು ಘಟನೆಗಳು ಅವರ ಇಚ್ಛೆಗೆ ವಿರುದ್ಧವಾಗಿಯೇ ಜರುಗಿವೆ. ಸರಕಾರ ಹಾಗೂ ಕಾನೂನುಗಳಿಂದಾದ ಗುಲಾಮಗಿರಿಯ ನಿಷೇಧ, ಪರಿಶಿಷ್ಟ ಬುಡಕಟ್ಟಿನ ಸ್ಥಾನಮಾನ ದೊರೆತದ್ದು, ಪೌಷ್ಟಿಕ ಆಹಾರ ಯೋಜನೆ ಮತ್ತು ಸ್ತ್ರೀ ಶಕ್ತಿಗುಂಪುಗಳು ಮಾತ್ರ ಅವರ ಪರವಾಗಿ ಆದ ಸ್ಥಿತ್ಯಂತರಗಳೆಂದು ಹೇಳಬಹುದು. ಇವುಗಳಿಂದ ಅವರ ಬದುಕಿಗೆ ಹೊಸ ಶಕ್ತಿ ಬಂದಿದೆ. ಇನ್ನುಳಿದಂತೆ ಇವೇ ಸರಕಾರ ಹಾಗೂ ಕಾನೂನುಗಳು ಅವರ ಬೇಟೆ, ಆಹಾರ ಸಂಗ್ರಹಣೆ, ಕುಮ್ರಿ ಬೇಸಾಯ, ವಸತಿ ಹಾಗೂ ಅನ್ನವನ್ನು ಕಿತ್ತುಕೊಂಡಿವೆ. ಅಭಿವೃದ್ಧಿ ಯೋಜನೆಗಳೂ ಕೂಡ ಇವರ ಪಾಲಿಗೆ ಕರಾಳ ಶಾಸನಗಳಾಗಿವೆ. ಇನ್ನು ಮಾಲೀಕರು, ಲೇವಾದೇವಿದಾರರು, ಅರಣ್ಯ ಇಲಾಖೆ, ಪೋಲೀಸ್ ಇಲಾಖೆ ಇತ್ಯಾದಿ ಎಲ್ಲರಿಂದಲೂ ಶೋಷಣೆಗೊಳಗಾಗಿದ್ದಾರೆ. ನಿರಂತರವಾದ ಆಘಾತಗಳು ಅವರ ಪ್ರತಿಭಟನೆಯ ಶಕ್ತಿಯನ್ನೇ ಕುಗ್ಗಿಸಿದ್ದು ಪಾಲಿಗೆ ಬಂದದ್ದನ್ನು ಸ್ವೀಕರಿಸುವ ಮನೋಭಾವನೆ ಬೆಳೆಯಲು ಕಾರಣವಾಗಿವೆ.

೪.೪. ಬದಲಾದ ದುಡಿಮೆಯ ಪರಿಣಾಮಗಳು

ಬಾಹ್ಯ ಪ್ರಭಾವದಿಂದ ಸಮುದಾಯಗಳಲ್ಲಿ ಬದಲಾವಣೆಗಳು ಅನಿವಾರ್ಯವಾದರೂ ಕೆಲವು ಅಂಶಗಳು ತತ್‌ಕ್ಷಣಕ್ಕೆ ಬದಲಾದರೂ ಇನ್ನು ಕೆಲವು ಬದಲಾಗದೇ ಹಾಗೆಯೇ ಉಳಿಯಲು, ತಮ್ಮ ಅಸ್ಮಿತೆಯನ್ನು ಕಾಪಾಡಿಕೊಳ್ಳಲು ಕಾರಣಗಳೇನು ಎನ್ನುವುದು ಆಸಕ್ತಿದಾಯಕ ಪ್ರಶ್ನೆ.

ಕಾಡಿಂದ ನಾಡಿಗೆ, ನಾಡಿಂದ ಕಾಡಿಗೆ, ಸ್ವಾತಂತ್ರ್ಯದಿಂದ ಗುಲಾಮಗಿರಿಗೆ, ಗುಲಾಮಗಿರಿಯಿಂದ ಸ್ವಾತಂತ್ರ್ಯಕ್ಕೆ ಸ್ಥಿತ್ಯಂತರಕ್ಕೆ ಒಳಗಾದ ಸಿದ್ದಿಯರ ಬದುಕು ಹೂವಿನ ಹಾಸಿಗೆಯೇನೂ ಆಗಿರಲಿಲ್ಲ. ಸೈನ್ಯದೊಡನೆ ಬಂದ, ರಾಜ ಮಹಾರಾಜರುಗಳೊಡನಿದ್ದ ಸಿದ್ದಿಗಳು ಅಲ್ಲಿಯೇ ಉಳಿದು, ಅಳಿದು ಸಂಕರಣಕ್ಕೊಳಗಾಗಿರಬಹುದಾದರೂ ಕಾಡಿಗೆ ಓಡಿ ಬಂದ ಸಿದ್ದಿಗಳಿಗೆ ತಮ್ಮ ಇಡೀ ಬದುಕನ್ನು ಪುನರ್‌ರೂಪಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿತ್ತು. ಸಿದ್ದಿಗಳಲ್ಲಿ ರಕ್ತಗತವಾಗಿದ್ದ ಬುಡಕಟ್ಟು ಅಸ್ಮಿತೆ ಅವರಿಗೆ ಆ ಕಾಲಘಟ್ಟದಲ್ಲಿ ಆಸರೆಯಾಗಿರಬೇಕು. ಹಣ್ಣು, ಹಂಪಲು, ಗೆಡ್ಡೆ ಗೆಣಸು ಜೇನುಗಳಂತಹ ಆಹಾರ ಸಂಗ್ರಹಣಾ ಜೀವನ ಆರಂಭಿಸಿದ ಸಿದ್ದಿಗಳು ಸ್ವಯಂರಕ್ಷಣೆಗಾಗಿ ಹಾಗೂ ಆಹಾರಕ್ಕಾಗಿ ಬೇಟೆಯನ್ನು ಅವಲಂಬಿಸಿರಬೇಕು. ಇಂದಿಗೂ ಸಿದ್ದಿಯರು ಜೇನು ಸಂಗ್ರಹಣೆ ಮತ್ತು ಬೇಟೆಯಲ್ಲಿ ನಿಷ್ಣಾತರಾಗಿರುವುದಕ್ಕೆ ಇದೇ ಕಾರಣವಿರಬೇಕು. ಕಬ್ಬಿಣ ಮುಂತಾದ ಲೋಹಗಳ ಬಳಕೆ ಅದಾಗಲೇ ತಿಳಿದಿದ್ದರಿಂದ ಬಾಣ, ಭರ್ಜಿ, ಕತ್ತಿಗಳ ಬಳಕೆಯಿಂದ ಸಾಕಷ್ಟು ಬೇಟೆ ದೊರಕಿ, ಸಹಜ ಸಮೃದ್ಧ ಜೀವನ ಸಾಧ್ಯವಾಗಿರಬೇಕು ಇತರರ ಸಂಪರ್ಕವನ್ನು ತಪ್ಪಿಸಿಕೊಳ್ಳಲು ದಟ್ಟ ಅರಣ್ಯದ ಮಧ್ಯದಲ್ಲೇ ಇದ್ದುದರಿಂದ ಅವರಲ್ಲಿ ಬುಡಕಟ್ಟು ಏಕತೆ ಗಟ್ಟಿಯಾಗಿತ್ತು. ಸಾಮೂಹಿಕ ಬೇಟೆ ಮತ್ತು ಸಮಾನ ಹಂಚಿಕೆಗಳೂ ಅಸ್ತಿತ್ವದಲ್ಲಿರಬೇಕು.

ಇದೇ ಹಂತದಲ್ಲಿ ಗೋವಾ, ಮಹಾರಾಷ್ಟ್ರಗಳಿಂದ ಬಂದು ಪಶ್ಚಿಮಘಟ್ಟಗಳ ಕಾಡಿನಲ್ಲಿ ನೆಲೆಸಿದ ಗೌಳಿಗರ ಪರಿಚಯವಾಗಿ ಪಶುಸಂಗೋಪನೆಯು ಆರಂಭವಾಗಿರಬೇಕು ಮತ್ತು ಅರಣ್ಯೋತ್ಪನ್ನಗಳ ವಿನಿಮಯವೂ ಆರಂಭವಾಗಿರಬೇಕು. ಇದು ಸಿದ್ದಿ ಸ್ತ್ರೀಯರಿಗೆ ಒಂದು ನಿಶ್ಚಿತ ಆದಾಯವನ್ನು ವರ್ಷದ ಕೆಲಕಾಲವಾದರೂ ನೀಡುವಲ್ಲಿ ಯಶಸ್ವಿಯಾಯಿತು. ಸಿದ್ದಿಗಳಿಗೆ ಪಶುಸಂಗೋಪನೆಯ ವೃತ್ತಿ ಅಷ್ಟಾಗಿ ಹೊಂದಿಕೆಯಾಗಲಿಲ್ಲವೆನಿಸುತ್ತದೆ. ಹಾಗಾಗಿ ಇಂದಿಗೂ ಹಸುಗಳ ಸಾಕಾಣಿಕೆ ಹವ್ಯಕರ ಪ್ರಭಾವವಿರುವ ಅಂಕೋಲ-ಯಲ್ಲಾಪುರ ನಡುವಿನ ಭಾಗದಲ್ಲಿ ಮಾತ್ರ ಹೆಚ್ಚಾಗಿದ್ದು ಉಳಿದಂತೆ ಕುರಿ, ಮೇಕೆ ಸಾಕಾಣಿಕೆಯು ತುಂಬಾ ಕಡಿಮೆ ಇದೆ. ಇದರಿಂದಾಗಿಯೇ ಈ ಭಾಗದಲ್ಲಿ ದಟ್ಟಕಾಡು ಇನ್ನೂ ಉಳಿದಿದೆ. ಬೇಟೆ, ಆಹಾರ ಸಂಗ್ರಹಣೆ ಮತ್ತು ಪಶುಸಂಗೋಪನೆಗಳು ಪ್ರಕೃತಿ ಮತ್ತು ಋತುಮಾನ ಆಧರಿತವಾಗಿದ್ದರೂ ಅವು ಮುಂದೆ ಕುಮ್ರಿ ಬೇಸಾಯಕ್ಕೆ ದಾರಿ ಮಾಡಿಕೊಟ್ಟಿರಬೇಕು. ಜನಸಂಖ್ಯೆ ಹೆಚ್ಚಿದಂತೆ ಕಾಡು ಸವರಿ ಕುಮ್ರಿ ಬೇಸಾಯ ಆರಂಭಿಸಿದಾಗಲೂ ಸಾಮೂಹಿಕ ಉತ್ಪಾದನೆ ಮತ್ತು ಸಮಾನ ಹಂಚಿಕೆ ಮುಂದುವರೆದಿರಬೇಕು. ವೃತ್ತಿ ವೈವಿಧ್ಯತೆಯ ಕೊರತೆ, ಮತ್ತೆ ಗುಲಾಮಗಿರಿಗೊಳಗಾಗುವ ಭಯಗಳು ಅವರ ಚಲನೆಯನ್ನು ನಿರ್ಬಂಧಗೊಳಿಸಿದ್ದವಾದರೂ ಕುಮ್ರಿ ಬೇಸಾಯ ಅವರಿಗೆ ಬೇರೆಬೇರೆ ಪ್ರದೇಶಗಳಿಗೆ ಹೋಗಲು ಪ್ರೇರೇಪಿಸಿರಬೇಕು. ಭೌಗೋಳಿಕತೆ ಮತ್ತು ಇತಿಹಾಸಗಳು ಯಾವುದೇ ಸಮುದಾಯದ ಸ್ಥಿತ್ಯಂತರದಲ್ಲಿ ಅತ್ಯಂತ ಪ್ರಭಾವ ಬೀರುವ ಅಂಶಗಳಾಗಿವೆ.

'ವೃತ್ತಿ ವೈವಿಧ್ಯತೆಯ ಕೊರತೆ ಇರುವ ಜೀವನಾಧಾರ ಕೃಷಿ ಆಧಾರಿತ ಆರ್ಥಿಕತೆಯಲ್ಲಿ ಜನರ ಚಲನೆ ಸೀಮಿತವಾಗಿರುವುದರಿಂದ ಪರಸ್ಪರ ಸಹಕಾರ ಅನಿವಾರ್ಯವಾಗಿ ಏಕರೂಪದ ವ್ಯವಸ್ಥೆ

ಬೆಳೆದುಬರುತ್ತದೆ ಹಾಗೂ ಭೌಗೋಳಿಕ ಸಂಕೀರ್ಣತೆಗಳೂ ಬುಡಕಟ್ಟುಗಳ ಸ್ವಾವಲಂಬನೆ ಮತ್ತು ಏಕತೆಗಳನ್ನು ಪ್ರಭಾವಿಸುತ್ತವೆಂದು ಹೇಳಬಹುದು."[೪] ಇದೇ ಪ್ರದೇಶದಲ್ಲಿರುವ ಗೌಳಿಗರು ಹಾಗೂ ಕುಮ್ರಿ ಮರಾಠಿಗರು ತಮ್ಮದೇ ಭೂಮಿಯನ್ನು ಹೊಂದುವುದು, ಉಳಿಸಿಕೊಳ್ಳುವುದು ಸಾಧ್ಯವಾಗಿದೆ ಯಾದರೂ ಬಹುತೇಕ ಸಿದ್ದಿಗಳಿಗೆ ಇದು ಸಾಧ್ಯವಾಗಿಲ್ಲವೇಕೆ? ಇದಕ್ಕೆ ಅವರ ಅಸಂಗ್ರಹಣಾ ಮನೋಭಾವನೆ ಕಾರಣವೋ ಅಥವಾ ಅವರು ಹೊರದೇಶದವರು, ಗುಲಾಮರು ಎಂಬ ಐತಿಹಾಸಿಕ ಹಿನ್ನೆಲೆ ಕಾರಣವೋ ವಿವೇಚಿಸಬೇಕಿದೆ.

ಯಾವುದೇ ಆದಿಮ ಸಂಸ್ಕೃತಿ ರೂಪುಗೊಳ್ಳುವುದೇ ಭೂಮಿಯ ಜೊತೆಗಿನ ಅನನ್ಯ ಅನುಸಂಧಾನದಿಂದ. ಅವರ ಆಚರಣೆ, ಅಭಿವ್ಯಕ್ತಿಗಳು ಇದೇ ಭೂಮಿಯ ಜೊತೆಗಿನ ಅನುಸಂಧಾನದ ಫಲಗಳಾಗಿವೆ. ಹಾಗಾಗಿ ಭೂಮಿ ಕೇವಲ ಆರ್ಥಿಕ ಸಂಪನ್ಮೂಲ ಮಾತ್ರವಲ್ಲದೆ, ಜೀವನದ ಎಲ್ಲ ಆಯಾಮಗಳನ್ನು ಸೃಷ್ಟಿಸುವ, ನಿರ್ದೇಶಿಸುವ ಒಂದು ಜೀವಂತ ಶಕ್ತಿಯಾಗಿದೆ. ಪ್ರಕೃತಿಯ ಯಾವುದೇ ಸೃಷ್ಟಿಯ ಮೇಲೂ ಖಾಸಗಿ ಮಾಲೀಕತ್ವ ಸ್ಥಾಪಿಸುವುದು ಪಾಪ ಮತ್ತು ನಿಸರ್ಗವಿರೋಧಿ ಎಂಬ ಅವರ ನಂಬಿಕೆಯೇ ಮುಂದೆ ಈ ಅಮೂಲ್ಯ ಸಂಪನ್ಮೂಲ ಅವರ ಕೈತಪ್ಪಲು ಕಾರಣವಾಯಿತು.

ಪ್ರತಿಯೊಬ್ಬ ಸಿದ್ದಿಯ ಜೀವನದ ಏಕೈಕ ಕನಸೆಂದರೆ ಒಂದಿಷ್ಟು ಭೂಮಿ ಮತ್ತು ಒಂದು ಜೊತೆ ಎತ್ತುಗಳನ್ನು ಹೊಂದುವುದಾಗಿತ್ತು. ಬುಡಕಟ್ಟುಗಳಲ್ಲಿ ವ್ಯಕ್ತಿಯ ಸ್ಥಾನಮಾನ ಅವನು ಹೊಂದಿರುವ ಹಣಕ್ಕಿಂತಲೂ ಅವನ ಭೂಮಿ ಮತ್ತು ಪಶುಸಂಪತ್ತಿನ ಮೇಲೆ ನಿರ್ಧಾರವಾಗುತ್ತಿತ್ತು. ಬುದ್ವಂತನನ್ನು ಆರಿಸುವಾಗಲೂ ಕೂಡಾ ಇದೇ ಮಾನದಂಡ ಪ್ರಮುಖವಾಗಿತ್ತು. ಆದರೆ ಸಿದ್ದಿಗಳ ವಿಷಯದಲ್ಲಿ ಇದು ಕೈಜಾರಿದ ಕನಸಾಗಿಯೇ ಉಳಿದಿದೆ. ತಮ್ಮ ದೈತ್ಯ ದೈಹಿಕ ಶಕ್ತಿಯಿಂದ ಎಂತಹ ದಟ್ಟ ಕಾಡನ್ನು ಸವರಿ ನೆಲ ಹದಗೊಳಿಸಿ ಕುಮ್ರಿ ಬೇಸಾಯ ಮಾಡುತ್ತಿದ್ದ ಸಿದ್ದಿಗಳು ಆ ದಟ್ಟ ಕಾಡಿನ ನಡುವೆ ತಮ್ಮದೇ ಆದ ಪುಟ್ಟ ಸ್ವರ್ಗವನ್ನು ಸೃಷ್ಟಿಸಿಕೊಂಡಿದ್ದರು. ಅಲ್ಲಿ ಹಣ, ಋಣ, ಐಶಾರಾಮದ ಸಮಸ್ಯೆಗಳಿರಲಿಲ್ಲ. ಬುಡಕಟ್ಟಿನ ಅಭಿಮಾನ, ದೈಹಿಕ ಶ್ರಮ ಮತ್ತು ಸಮ ಹಂಚಿಕೆಯ ಆದಿಮ ಸಮಾಜವಾದಿ ಸಮಾಜ ಅದಾಗಿತ್ತು, ಸಮುದಾಯದ ಎಲ್ಲ ಕಾಯಕಗಳನ್ನು ಅವರೇ ಮಾಡಿಕೊಳ್ಳಬೇಕಿದ್ದುದರಿಂದ ಪರಸ್ಪರರ ಅವಲಂಬನೆ, ಅವಲೋಕನೆ ಮತ್ತು ಶ್ರಮಗೌರವ ಅವರಲ್ಲಿತ್ತು.

ಹೀಗಿದ್ದ ಸಿದ್ದಿಗಳು ಯಾವ ಹಂತದಲ್ಲಿ ಮತ್ತೆ ಬೇರೆಬೇರೆ ಧರ್ಮಗಳಲ್ಲಿ ವಿಭಜನೆಗೊಂಡರು, ಏಕೆ ಮತ್ತು ಹೇಗೆ ಎಂಬ ಬಗ್ಗೆ ಮಾಹಿತಿಗಳಿಲ್ಲವಾದರೂ ಶ್ರೀ ಡಿಯೋಗ್ ಸಿದ್ದಿಯವರ ಪ್ರಕಾರ 'ಗೋವಾದಿಂದ ಬಂದ ವಿವಿಧ ಧರ್ಮಗಳ ಸಿದ್ದಿಗಳು ವಿವಿಧ ಪ್ರದೇಶಗಳಲ್ಲಿ ನೆಲೆ ನಿಂತು ಅದೇ ಧರ್ಮ ಅನುಸರಿಸಿದರು'. ಆದರೆ ಶ್ರೀ ಕಿಕ್ಕೇರಿ ನಾರಾಯಣರ ಪ್ರಕಾರ 'ಯಾವ ಯಾವ ಧರ್ಮದವರ ಬಳಿ ಸಿದ್ದಿಗಳು ಕೆಲಸಕ್ಕೆ ಸೇರಿಕೊಂಡರೋ ಅದೇ ಧರ್ಮವನ್ನು ಅವರು ಅನುಸರಿಸಿದರು.

ಅವರು ತಮ್ಮ ಭೂಮಿಯನ್ನು ಹೇಗೆ ಕಳೆದುಕೊಂಡಿರಬಹುದೆಂದು ಖಚಿತವಾಗಿ ತಿಳಿದಿಲ್ಲವಾದರೂ ಕಾರಣಗಳನ್ನು ಊಹಿಸಬಹುದಾಗಿದೆ. ಗೋವಾದಿಂದ ಕರ್ನಾಟಕಕ್ಕೆ ಬಂದ ಹವ್ಯಕರು, ದೈವಜ್ಞರು, ಮತಾಂತರಕ್ಕೆ ಬಂದ ಕ್ರಿಶ್ಚಿಯನ್ ಪಾದ್ರಿಗಳು, ಮುಸ್ಲಿಮರು, ಸಿದ್ದಿಗಳನ್ನು ಸೈನ್ಯದ ಮೂಲಕ, ಧಾರ್ಮಿಕವಾಗಿ, ಸಾಮಾಜಿಕವಾಗಿ ಶೋಷಿಸಿ ಮತ್ತೆ ಜೀತವೆಂಬ ಗುಲಾಮಗಿರಿಗೆ ತಳ್ಳಿದರು. ರಾಜಶಾಹಿ, ಪುರೋಹಿತಶಾಹಿ, ವಸಾಹತುಶಾಹಿ ಮತ್ತು ಬಂಡವಾಳಶಾಹಿಗಳೊಡನೆ ಕೈ ಜೋಡಿಸಿದ ಮಧ್ಯಮವರ್ಗಗಳು ಬುಡಕಟ್ಟುಗಳ ಭೂಮಿಯ ಜೊತೆಗಿನ ಪಾರಂಪರಿಕ ಅವಲಂಬನೆಯನ್ನೇ ಕತ್ತರಿಸಿ ಹಾಕಿದವು. ಇದರ ವಿರುದ್ಧ ಬಂಡೆದ್ದ, ಶರಣಾಗದ 'ಆದಿವಾಸಿಗಳ ಮತ್ತು ಭೂಮಿಯ ನಡುವಿನ ಕೊಂಡಿಯಂತಿದ್ದ ದೈವಗಳನ್ನು ಅಪಹರಿಸಿ, ನಾಶಪಡಿಸಿ ಇಲ್ಲವೇ ಪರಿವರ್ತಿಸುವ ಮೂಲಕ ಸಮುದಾಯದ ಉತ್ಪಾದನಾ ಸಂಬಂಧ ಮತ್ತು ಉತ್ಪಾದನಾ ಚಟುವಟಿಕೆಗಳನ್ನು ನಿಯಂತ್ರಿಸಲಾಯಿತು. ಈ ಕಾರಣಕ್ಕಾಗಿ ಸಾಮಾಜಿಕ ಮತ್ತು ಆರ್ಥಿಕ ಅಧಿಕಾರಗಳೆರಡೂ ಈ ಸಮುದಾಯದಿಂದ ದೂರಸರಿದವು.'[೫] ಈ ಮಾತು ಸಿದ್ದಿಗಳ ವಿಷಯದಲ್ಲೂ ಅಕ್ಷರಶಃ ನಿಜವಾಗಿರಬೇಕು. ಹೀಗಾಗಿಯೇ ಇಂದು ಸಿದ್ದಿಗಳ ಸಿದ್ದಿನ್ಯಾಸವೆಂಬ ದೈವ, ಖಾಲಿ ಜಗುಲಿಗೆ ಇಲ್ಲವೇ ಜಗುಲಿಯ ಮೇಲಿನ ತೆಂಗಿನ ಕಾಯಿಗಳಿಗೆ ಸೀಮಿತವಾಗಿ ಅವರ ಮನೆಯ ಗೋಡೆಗಳ ಮೇಲೆ ಗಣೇಶ, ಶಿವ, ಕೃಷ್ಣ, ಮೆಕ್ಕಾ, ಶಿಲುಬೆಗಳ ಪಟಗಳೇ ರಾರಾಜಿಸುತ್ತಿವೆ.

ಸಿದ್ದಿಗಳ ಕುಮ್ರಿ ಬೇಸಾಯದ ಭೂಮಿ ಹೊರಗಿನಿಂದ ಬಂದ ಪುರೋಹಿತಶಾಹಿಗಳಿಗೆ, ವ್ಯಾಪಾರಿಗಳಿಗೆ ಚಿನ್ನದ ಗಣಿಯಂತೆ ಕಂಡಿರಬೇಕು. ಇವರಿಗೆ ಸಿದ್ದಿಗಳಂತೆ ಕಾಡು ಕಡಿದು ಹದ ಮಾಡುವ ದೈಹಿಕಶಕ್ತಿ ಇಲ್ಲದಿದ್ದರೂ ಬೌದ್ಧಿಕವಾಗಿ ಎಂಥದೇ ಸಮುದಾಯವನ್ನು ಧಾರಾಶಾಯಿ ಗೊಳಿಸುವ ಶಕ್ತಿಯಿತ್ತು. ಈ ಶಕ್ತಿಯ ಬಲದಿಂದ ಸಿದ್ದಿಗಳನ್ನು, ತಾವೇ ಕಡಿದು ಹಸನು ಮಾಡಿದ ಭೂಮಿಯಲ್ಲಿ ತಾವೇ ಗುಲಾಮರಾಗುವ ಸ್ಥಿತಿಗೆ ತಂದರು. ಈ ಸ್ಥಿತ್ಯಂತರಗಳಿಗೆ ಎರಡು ಪ್ರಮುಖ ಕಾರಣಗಳನ್ನು ಊಹಿಸಬಹುದು.

೧. ಆರ್ಥಿಕ ಕಾರಣ, ೨. ಪ್ರಭುತ್ವಶಾಹಿ ಕಾರಣ

೧. ಆರ್ಥಿಕ ಕಾರಣವೆಂದರೆ ಸಿದ್ದಿಗಳ ದೈಹಿಕ ಶಕ್ತಿಯನ್ನು ಬಳಸಿಕೊಂಡು ಅವರನ್ನು ಕೂಲಿಯಾಳುಗಳನ್ನಾಗಿ ಮಾಡಿಕೊಂಡು ಕಾಡು ಸವರಿ ಭೂಮಿ ಮಾಡಿಕೊಂಡು ಅಲ್ಲೇ ಅವರನ್ನು ಕೂಲಿಗಳನ್ನಾಗಿ ಮಾಡಿಕೊಳ್ಳುವುದು. ಇಲ್ಲವೇ ಹಣದ ಪರಿಕಲ್ಪನೆಯೇ ಇಲ್ಲದ ಈ ಮುಗ್ಧ ಜನರಿಗೆ ಹಣವನ್ನು ಪರಿಚಯಿಸಿ ಮೊದಮೊದಲು ಸುಲಭವಾಗಿ ಸಾಲ ನೀಡಿ ಅವರಿಗೆ ಸಾಲದ ರುಚಿ ಹತ್ತಿಸುವುದು. ನಂತರ ಅವರಿಂದ ಕಾಗದಪತ್ರಗಳಿಗೆ ಅಥವಾ ಖಾಲಿಹಾಳೆಗಳಿಗೆ ಹೆಬ್ಬೆರಳು ಒತ್ತಿಸಿಕೊಂಡು ಒಂದಕ್ಕೆರಡು ಪಟ್ಟು ಸಾಲ ಬರೆದುಕೊಳ್ಳುವುದು. ಅನಕ್ಷರಸ್ಥರು, ಹಣದ ನಿರ್ವಹಣೆ ಬಡ್ಡಿ, ಲೆಕ್ಕಾಚಾರಗಳ ಸಂಕೀರ್ಣತೆ ಅರಿಯದ ಸಿದ್ದಿಗಳು ಈ ಸಾಲದ ಬಲೆಗೆ ಸುಲಭವಾಗಿ ಸಿಲುಕಿ ನಂತರ ತಮ್ಮ ಭೂಮಿಯನ್ನು ಕಳೆದುಕೊಳ್ಳುವುದು. ಅನಾವಶ್ಯಕ, ಅನುತ್ಪಾದಕ ಸಾಲ, ಅತಿ ಹೆಚ್ಚಿನ ಬಡ್ಡಿ,

ಪ್ರಕೃತಿವಿಕೋಪಗಳಿಂದಾಗಿ ಸಾಲ, ಅಸಲು, ಬಡ್ಡಿ ಚಕ್ರಬಡ್ಡಿಗಳ ಬಲೆಗೆ ಸಿಲುಕಿ ಜೀತದ ಸಂಕೋಲೆಯಲ್ಲಿ ಬಂಧಿತರಾಗಿರಬೇಕು. 'ಕಾಡುಕಡಿದು ಭೂಮಿ ಮಾಡಿದವರು ನಾವೇ ಆದರೂ ಅದರ ಫಲ ಉಣ್ಣುತ್ತಿರುವವರು ಬೇರೆಯವರು.'[೬] ಎಂಬ ಸಿದ್ದಿಯ ಅಳಲಿನಲ್ಲಿ ಈ ಎಲ್ಲ ಮೋಸ ವಂಚನೆಗಳನ್ನು ಸಮೀಕರಿಸಬಹುದಾಗಿದೆ. ಇದಕ್ಕೆ ಸಿದ್ದಿಗಳ ಬಿಡುಬೀಸಾದ, ತಿರಸ್ಕಾರದ ಮನೋಭಾವನೆಯೂ ಪೂರಕವಾಗಿರಬೇಕು.

ಎರಡನೆಯ ಪ್ರಭುತ್ವಶಾಹಿ ಕಾರಣವೆಂದರೆ 'ಗೋವಾದಿಂದ ಕರ್ನಾಟಕಕ್ಕೆ ಬಂದ ಹವ್ಯಕರು, ದೈವಜ್ಞರಿಗೆ, ಇಲ್ಲಿನ ಕೆಳದಿ, ಇಕ್ಕೇರಿ ಅರಸರು ಮತ್ತು ರಾಣಿಯರು ರಕ್ಷಣೆ, ಆಶ್ರಯ ನೀಡಿದ್ದರು.'[೭] ಹೀಗೆ ರಾಜಾಶ್ರಯ ಪಡೆದ ಈ ವರ್ಗಗಳಿಗೆ ಭೂಮಿಗಳನ್ನು ದಾನ ಅಥವಾ ಉಂಬಳಿಯಾಗಿ ನೀಡುವಂತೆ ಮನವೊಲಿಸಿದ ಪುರೋಹಿತಶಾಹಿಗಳು ಸಿದ್ದಿಗಳ ಭೂಮಿಗಳನ್ನು ಕಸಿದುಕೊಂಡು ತಮಗೆ ನೀಡುವಂತೆಯೂ ಮಾಡಿರುವ ಸಾಧ್ಯತೆಗಳಿರಬಹುದು. ಇದೇ ಕೆಲಸವನ್ನು ಆದಿಲ್‌ಶಾಹಿ ಸೈನಿಕರು ಹಾಗೂ ಬ್ರಿಟಿಷ್ ಸರ್ಕಾರಗಳೂ ಮಾಡಿರಬಹುದು. ವ್ಯತ್ಯಾಸವೆಂದರೆ ಇವುಗಳ ಲಾಭಗಳನ್ನು ಹವ್ಯಕರು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ ನಾಗರಿಕರು, ಮಧ್ಯಮವರ್ಗದವರು ಪಡೆದಿರಬೇಕು. ಇದ್ದ ತುಂಡು ಭೂಮಿಯೂ ಕೈತಪ್ಪಿ ಹೋದ ನಂತರ ಸಾಲ ತೀರಿಸಲೇಬೇಕಾದ ಅನಿವಾರ್ಯತೆಯಲ್ಲಿ ಪದೇಪದೇ ಸಾಲದಬಲೆಯಲ್ಲಿ ಸಿಲುಕಿ ತಮ್ಮ ಜಮೀನಿನಲ್ಲಿ ತಾವೇ ಕೂಲಿಗಳಾಗಿ, ಜೀತದಾಳುಗಳಾಗಿ ಇನ್ನೊಂದು ರೀತಿಯ ಗುಲಾಮಗಿರಿಗೆ ಪಕ್ಕಾದದ್ದು ಚರಿತ್ರೆಯ ವಿಪರ್ಯಾಸಗಳಲ್ಲೊಂದು. ಕೂಲಿಯೂ ಬಡ್ಡಿ ಚಕ್ರಬಡ್ಡಿಗಳಿಗೆ ಜಮೆಯಾದಾಗ ಜೀವನೋಪಾಯಕ್ಕಾಗಿ ಅರಣ್ಯಗಳ ಮೊರೆಹೊಕ್ಕು ಅಲ್ಲಿನ ಹಣ್ಣು ಹಂಪಲು, ಗೆಡ್ಡೆ ಗೆಣಸುಗಳ ಸಂಗ್ರಹಣೆ, ಜೇನು, ಅರಗು, ಮೇಣ ಮುಂತಾದ ಅರಣ್ಯೋತ್ಪನ್ನಗಳು ಅವರ ಜೀವನಕ್ಕೆ ಸಹಾಯ ಮಾಡಿರಬೇಕು. ಈ ಹಂತದಲ್ಲಿ ಸಿದ್ದಿ ಹೆಣ್ಣುಮಕ್ಕಳು ಪ್ರಮುಖ ಪಾತ್ರ ವಹಿಸಿರಬೇಕು. ತಮ್ಮ ಮನೆ-ಮಕ್ಕಳ, ಮಾಲೀಕರ ಮನೆಗೆಲಸಗಳ ನಂತರವೂ ಅರಣ್ಯ ಉತ್ಪನ್ನಗಳ ಸಂಗ್ರಹ ಮಾಡಿ ಸಂಸಾರವನ್ನು ತೂಗಿಸಲು ಅವರು ಪಟ್ಟಕಷ್ಟ, ಮಾಡಿದ ತ್ಯಾಗಗಳು ಇತಿಹಾಸಕ್ಕೆ ನಗಣ್ಯವೆನಿಸಿರಬಹುದಾದರೂ ಅವು ಸಿದ್ದಿಗಳ ಬದುಕಿಗೆ ಇಂದಿಗೂ ಅತ್ಯಮೂಲ್ಯ.

ಮೂಲತಃ ವ್ಯಾಪಾರಿಗಳಾದ ಬ್ರಿಟಿಷರು ಅತಿಯಾದ ಲಾಭ ತರುವ ಸಾಂಬಾರ ಜಿನಸುಗಳನ್ನು ಬೆಳೆಯಲು ಸೂಕ್ತವಾದ ಪಶ್ಚಿಮಘಟ್ಟದ ಕಾಡುಗಳನ್ನು ಸವರಿ ತಮ್ಮದೇ ಆದ ಎಸ್ಟೇಟ್‌ಗಳನ್ನು ಮಾಡಲು ಕೂಡಾ ಸಿದ್ದಿಗಳ ಭೂಮಿಗಳನ್ನು ತೆಗೆದುಕೊಂಡಿರಬಹುದಾಗಿದೆ. ವಿದೇಶಿ ವ್ಯಾಪಾರಿಗಳ ಕೈಗೊಂಬೆ ಸರ್ಕಾರಗಳು ತಮ್ಮ ಲಾಭಕ್ಕಾಗಿ ಸಾಂಬಾರ ದಿನಿಸು, ಮರಮುಟ್ಟು ದೊರೆಯುವ ಉತ್ತರಕನ್ನಡದ ದಟ್ಟಕಾಡುಗಳಲ್ಲಿ ರೈಲ್ವೆ ಹಳಿ ಹಾಕಿ ಅಲ್ಲಿನ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯ ಲಾರಂಭಿಸಿದರು. ಕಾಡುಗಳನ್ನು ಸವರಿ ಕಾಫಿ ಟೀ ಮಸಾಲೆಗಳ ಎಸ್ಟೇಟ್‌ಗಳನ್ನಾಗಿ ಮಾಡಲು ಪ್ರಯತ್ನಿಸಿದಾಗ ಸಹಜವಾಗಿಯೇ ಕಾಡಿನಲ್ಲಿದ್ದ ಆದಿವಾಸಿಗಳಿಂದ ವಿರೋಧ ಎದುರಿಸಬೇಕಾಯಿತು. ಇದನ್ನು ಹತ್ತಿಕ್ಕಲು ವಸಾಹತುಶಾಹಿ ಸರ್ಕಾರಗಳು ಕಾನೂನುಗಳನ್ನು ಮಾಡಿ ಆಹಾರ ಸಂಗ್ರಹಣೆ

ಮತ್ತು ಕುಮ್ರಿ ಬೇಸಾಯಗಳನ್ನು ನಿಷೇಧಿಸಿದವು. ಇದು ಬುಡಕಟ್ಟುಗಳ ಪರಂಪರಾಗತ ಆರ್ಥಿಕತೆಗೆ ಭಾರಿ ಹೊಡೆತವನ್ನೇ ನೀಡಿತು. ಸ್ವಾತಂತ್ರ್ಯನಂತರ ಬಂದ ನಮ್ಮ ಸರ್ಕಾರಗಳು ಈ ನೀತಿಯನ್ನು ಮುಂದುವರೆಸಿದಲ್ಲದೆ ಒಂದು ಹೆಜ್ಜೆ ಮುಂದೆ ಹೋಗಿ ಮೂಲನಿವಾಸಿಗಳನ್ನು ಅವರ ಮೂಲಸ್ಥಳ ದಿಂದಲೇ ಎತ್ತಂಗಡಿ ಮಾಡಿ ವಿವಿಧ ಯೋಜನೆಗಳನ್ನು ಜಾರಿಗೆ ತಂದವು. ಅದರಲ್ಲೂ ಉತ್ತರಕನ್ನಡ ಜಿಲ್ಲೆ ಈ ಯೋಜನೆಗಳಿಗೆ ಸುಲಭವಾಗಿ ತುತ್ತಾಯಿತು. ಹೀಗಾಗಿ ಇಲ್ಲಿನ ಬುಡಕಟ್ಟುಗಳ ಪಾರಂಪರಿಕ ಆರ್ಥಿಕತೆ ತೀವ್ರವಾಗಿ ಕಣ್ಮರೆಯಾಗಿ, ಹೊಸ ಸಮಸ್ಯೆಗಳಿಗೆ ಸ್ಥಿತ್ಯಂತರಗಳಿಗೆ ಈಡಾಗಿ, ಹೊಸ ಆರ್ಥಿಕ ಮೂಲ ಹಾಗು ನೆಲೆಗಳನ್ನು ಹುಡುಕುವ ಸಂಕಷ್ಟಕ್ಕೆ ಒಳಗಾದರು. ನಾಡಿನವರಿಗೆ ಈ ಬದಲಾವಣೆ ಪ್ರಗತಿಯಾದರೆ ಬುಡಕಟ್ಟುಗಳ ಪಾಲಿಗೆ ಇದು ಅವನತಿಯಾಯಿತು. ಸಿದ್ದಿಗಳು ಈ ಬಗೆಯ ಸ್ಥಿತ್ಯಂತರದ ಒತ್ತಡಕ್ಕೆ ಬಲಿಯಾಗಿದ್ದು ಇತ್ತ ಪಾರಂಪರಿಕ ಆರ್ಥಿಕ ಮೂಲಗಳೂ ಇಲ್ಲದೆ ಅತ್ತ ನಾಗರಿಕತೆಯ ಉತ್ಪದನಾ ಸಾಧನಗಳ ಮೇಲೆ ನಿಯಂತ್ರಣವೂ ಇಲ್ಲದ ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಅರಣ್ಯರಕ್ಷಣೆ ಕಾನೂನುಗಳು, ಬೇಟೆ ನಿಷೇಧ, ನ್ಯಾಷನಲ್‌ಪಾರ್ಕ್ ಸ್ಥಾಪನೆ(ಅಣಶಿ), ಇತ್ಯಾದಿಗಳು ಅವರ ಬದುಕನ್ನೇ ಅತಂತ್ರಗೊಳಿಸಿವೆ. ಇವುಗಳ ಬಗ್ಗೆ ಮುಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ.

ನಂತರದ ಆಧುನಿಕ ಕಾಲಘಟ್ಟದಲ್ಲಿ ಮೀನುಗಾರಿಕೆ, ಅರಣ್ಯ ಇಲಾಖೆಯ ದಿನಗೂಲಿ, ಮನೆಗೆಲಸ ಇತ್ಯಾದಿಗಳು ಅವರ ಬದುಕಿಗೆ ಆಸರೆಯಾಗಿರಬೇಕು. ಆಧುನಿಕತೆಯ ಪ್ರಭಾವ ಹೆಚ್ಚಾದಂತೆ, ವಿದ್ಯಾಭ್ಯಾಸದ ಅರಿವು ಮೂಡಿದಂತೆ ಡ್ರೈವರ್, ಮೆಕ್ಯಾನಿಕ್, ಪ್ಯೂನ್, ನರ್ಸ್, ವಾಚ್‌ಮೆನ್ ಇತ್ಯಾದಿ ಉದ್ಯೋಗಗಳಿಗೆ ಸಿದ್ದಿಗಳು ಹೊರಳಿದರಾದರೂ ಇಂತಹವರ ಸಂಖ್ಯೆ ಅತ್ಯಲ್ಪ. ಅವರ ನಾಚಿಕೆ ಸ್ವಭಾವ, ಕೀಳರಿಮೆ, ವಿದ್ಯಾಭ್ಯಾಸದ ಕೊರತೆ, ಕರಕುಶಲ ಕಲೆಗಳ ಹಿನ್ನೆಲೆ ಇಲ್ಲದಿರುವಿಕೆ, ಮೇಲ್ವರ್ಗಗಳ ಶೋಷಣೆ; ಉದ್ದಿಮೆ, ಜಲವಿದ್ಯುತ್ ಯೋಜನೆಗಳು ಇತ್ಯಾದಿಗಳಿಂದಾಗಿ ನಿಶ್ಚಿತ ಆದಾಯ, ಆಸ್ತಿ, ಉದ್ಯೋಗಗಳಿಲ್ಲದ ಸಿದ್ದಿಗಳ ಬದುಕು ಅತಂತ್ರವಾಗಿಯೇ ಉಳಿದಿದೆ. ಲ್ಯಾಂಪ್ ಸೊಸೈಟಿಗಳು, ಸರ್ಕಾರೇತರ ಸಂಸ್ಥೆಗಳು, ಮಹಿಳಾ ಸ್ವಸಹಾಯ ಸಂಘಗಳು, ಪರಿಶಿಷ್ಟವರ್ಗದ ಸ್ಥಾನಮಾನ ಇತ್ಯಾದಿಗಳು ಸಿದ್ದಿಗಳ ಬದುಕಿನ ಇತ್ತೀಚಿನ ಸಿತ್ಯಂತರಗಳಾಗಿದ್ದು ಅವರ ಸಾಮಾಜಿಕಾರ್ಥಿಕ ಬದುಕಿಗೆ ನೆಮ್ಮದಿ, ಸ್ಥಾನಮಾನ, ಸ್ಥಿರತೆಗಳನ್ನು ನೀಡಿವೆ. ಜಾಗತೀಕರಣವು ಅವರಿಗೆ ವಿವಿಧ ಉದ್ಯೋಗಗಳ ಸಾಧ್ಯತೆಗಳನ್ನು ಕಲ್ಪಿಸಿದೆ. ಅವರ ಆದಾಯ ಹೆಚ್ಚಿಸಿದೆ. ಅವರಲ್ಲಿ ಸ್ವಾವಲಂಬನೆ, ವಿದ್ಯಾಭ್ಯಾಸದ ಆಕಾಂಕ್ಷೆ, ಸ್ವಾಭಿಮಾನ, ತಿಳುವಳಿಕೆ ಹೆಚ್ಚಿಸಿದೆ.

೪.೫. ಬುಡಕಟ್ಟು ಸ್ಥಿತ್ಯಂತರ ಮತ್ತು ಶಿಕ್ಷಣ

ಸ್ಥಿತ್ಯಂತರದ ಹಲವಾರು ಕಾರಣ ಹಾಗೂ ಪರಿಣಾಮಗಳನ್ನು ಈ ಹಿಂದಿನ ಅಧ್ಯಾಯಗಳಲ್ಲಿ ವಿಶ್ಲೇಷಿಸಿದ್ದು ಮುಂದಿನ ಅಧ್ಯಾಯಗಳಲ್ಲೂ ಈ ಬಗ್ಗೆ ವಿವರಿಸಲಾಗುವುದು. ಪ್ರಸ್ತುತ ಸಿದ್ದಿಯರು ಹೊರಗಿನ ಬದುಕಿಗೆ ತೆರೆದುಕೊಂಡ ನಂತರದಲ್ಲಿ ಅವರ ಬದುಕಿನಲ್ಲಾದ ಪ್ರಮುಖ ಸ್ಥಿತ್ಯಂತರಗಳ ಲ್ಲೊಂದಾದ ಸಾಕ್ಷರತೆ ಅಥವಾ ಶಿಕ್ಷಣದ ಬಗೆಗಿನ ಅಂಕಿ ಅಂಶಗಳನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ.

ಬಡತನ-ಹಸಿವು ಶೋಷಣೆ ಅನಕ್ಷರತೆಗಳಿಗೆ ಮುಖ್ಯ ಕಾರಣವೇ ವಿದ್ಯಾಭ್ಯಾಸದ ಕೊರತೆ ಮತ್ತು ಭಾಷೆಯ ಸಮಸ್ಯೆ. ಬುಡಕಟ್ಟುಗಳು ಇನ್ನೂ ಅನಕ್ಷರಸ್ಥರಾಗಿರುವುದಕ್ಕೆ ಮುಖ್ಯ ತೊಡಕೆಂದರೆ ಭಾಷೆ. ಪ್ರತಿಯೊಂದು ಬುಡಕಟ್ಟು ತನ್ನದೇ ಆದ ಭಾಷೆ ಹೊಂದಿದ್ದು, ಶಾಲೆಗಳಲ್ಲಿ ಬೋಧನೆ ಹಾಗೂ ಪುಸ್ತಕಗಳು ಬೇರೆಯದೇ ಭಾಷೆಯಲ್ಲಿರುವುದು. ಬೋಧನೆಯ ರೀತಿ ಮತ್ತು ಪಠ್ಯಕ್ಕೇ ಸೀಮಿತವಾದ ಜ್ಞಾನ ಇತ್ಯಾದಿಗಳು ಬುಡಕಟ್ಟು ವಿದ್ಯಾರ್ಥಿಗಳಿಗೆ ಸಾಕಷ್ಟು ಸಮಸ್ಯೆ ಒಡ್ಡಿವೆ. ವಿವಿಧ ಪ್ರಾಣಿ ಪಕ್ಷಿಗಳ ಭಾಷೆ ಕಲಿತು ಗಿಡಮರಗಳ ಜ್ಞಾನ ಹೊಂದಿರುವ ಬುಡಕಟ್ಟುಗಳಿಗೆ ಮನುಷ್ಯನ ಭಾಷೆಯೇ ಸಮಸ್ಯೆಯಾಗಿರುವುದೊಂದು ವಿಪರ್ಯಾಸ. ನಾಲ್ಕು ಗೋಡೆಗಳ ನಡುವಿನ ಪಠ್ಯಪುಸ್ತಕಕ್ಕಿಂತ ನಿಸರ್ಗದ ಮಡಿಲಿನ ಪ್ರಾಯೋಗಿಕ ಬೋಧನೆ ಅವರಿಗೆ ಸುಲಭವಾಗಿ ಜೀರ್ಣವಾಗಬಲ್ಲುದು. ಹೀಗಾಗಿ ಬುಡಕಟ್ಟುಗಳಿಗೆ ಅವರದೇ ಮಾತೃಭಾಷೆಯಲ್ಲಿ ಅವರದೇ ವಿಧಾನದಲ್ಲಿ ಶಿಕ್ಷಣ ನೀಡಿ ನಂತರ ಮುಖ್ಯವಾಹಿನಿಯ ಶೈಕ್ಷಣಿಕತೆಗೆ ಒಡ್ಡಿಕೊಳ್ಳುವಂತೆ ಮಾಡುವುದು ಉತ್ತಮವೇ ಹೊರತು ನೇರವಾಗಿ ಅವರನ್ನು ಇತರರ ಜೊತೆ ಸೇರಿಸಿ ಶಿಕ್ಷಣ ನೀಡಿದಾಗ ಡ್ರಾಪೌಟ್‌ಗಳು ಹೆಚ್ಚಾಗುವ, ಸಹಪಾಠಿಗಳಿಂದ ಹೀಯಾಳಿಕೆಗೊಳಗಾಗುವ, ಶಿಕ್ಷಕರಿಂದ ತಿರಸ್ಕರಿಸಲ್ಪಡುವ, ನಪಾಸಾಗುವ, ಅಪಮಾನ-ಕೀಳರಿಮೆಗಳಿಂದ ನರಳುವ ಸಾಧ್ಯತೆಗಳೇ ಹೆಚ್ಚಾಗಿವೆ. ಸಿದ್ದಿಗಳ ವಿಷಯದಲ್ಲಂತೂ ಇದು ಹದಿನಾರಾಣೆ ಭಾಗ ಸತ್ಯ ಅವರ ದೈಹಿಕ ಚಹರೆ, ಬಣ್ಣ, ಭಾಷೆಗಳಿಂದಾಗಿ ಶಾಲೆಗಳಲ್ಲಿ ಅಪಹಾಸ್ಯ ಅಪಮಾನಕ್ಕೆ ತುತ್ತಾಗುವ ಉದಾಹರಣೆಗಳು ಸಾಕಷ್ಟಿವೆ, ಕೊಂಕಣಿ-ಮರಾಠಿ-ಕನ್ನಡ ಮಿಶ್ರಿತ ಭಾಷೆಯಲ್ಲಿ ಕಲಿಸುವ ಶಿಕ್ಷಕರಾಗಲಿ, ಶಾಳೆಗಳಾಗಲೀ, ಪುಸ್ತಕಗಳಾಗಲೀ ಇಲ್ಲವೇ ಇಲ್ಲ. ಕ್ಲಿಷ್ಟಾತಿಕ್ಲಿಷ್ಟ ರೇಖಾಗಣಿತಾತ್ಮಕ ಮಾದರಿಗಳನ್ನು ಹಸೆ-ರಂಗೋಲಿ, ಚಿತ್ರಕಲೆಗಳ ಹೆಸರಿನಲ್ಲಿ ಲೀಲಾಜಾಲವಾಗಿ ಮೂಡಿಸುವ ಬುಡಕಟ್ಟು ಬಾಲೆಯರಿಗೆ ಕಂಪಾಸ್, ಕೈವಾರ, ಕೋನಮಾಪಕದಿಂದಲೇ ಇವುಗಳನ್ನು ಬಿಡಿಸಬೇಕೆಂದು ಒತ್ತಾಯಿಸುವುದರಿಂದ ಅವರ ಪಾರಂಪರಿಕ ಕಲೆ ನಾಶವಾಗುವುದಲ್ಲದೆ ಹೊಸವಿಧಾನ ಅವರಿಗೆ ಹಿಡಿಸದೆ ವಿಫಲವಾಗುತ್ತದೆ. ಕೇವಲ Reading–Writing-Remembering & Recalling ನಂತಹ ಸೀಮಿತ ಕೌಶಲ್ಯಗಳಿಗೆ ಮಾತ್ರ ಪ್ರಾಮುಖ್ಯತೆ ನೀಡುವ ಪ್ರಸ್ತುತ ವಿದ್ಯಾಭ್ಯಾಸಕ್ಕೆ ಒಗ್ಗಿಕೊಳ್ಳಲು ಒರಿಸ್ಸಾದ M.V. ಫೌಂಡೇಶನ್ ನಡೆಸುತ್ತಿರುವ Bridge Schoolಗಳ ಪರಿಭಾವನೆಯನ್ನು ಇನ್ನಷ್ಟು ಪರಿಷ್ಕರಿಸಿ ದೇಶದೆಲ್ಲೆಡೆ ಪ್ರಯೋಗಿಸುವ ಅನಿವಾರ್ಯತೆ ಇದೆ." ಬುಡಕಟ್ಟುಗಳ ಶೈಕ್ಷಣಿಕ ಅಭಿವೃದ್ಧಿಗೆ ಯಾವುದೇ 'ಒಂದು' ನಿರ್ದಿಷ್ಟ ನೀತಿ-ತಂತ್ರವಿಲ್ಲ. ಆಯಾ ಬುಡಕಟ್ಟು, ಸಂಸ್ಕೃತಿ, ಪ್ರದೇಶ ಭಾಷೆ, ಸಮಸ್ಯೆಗಳಿಗನುಗುಣವಾಗಿ ಪ್ರತ್ಯೇಕ ಸರಳ ಮಾದರಿಗಳ್ನು ಅಭಿವೃದ್ಧಿ ಪಡಿಸಬೇಕಾಗಿರುವುದು ಇಂದಿನ ಅಗತ್ಯವಾಗಿದೆ.

'ಆದಿವಾಸಿ ಅಭಿವೃದ್ಧಿ ಕಾರ್ಯಕರ್ತರ ಪ್ರಮುಖ ದ್ವಂದ್ವವೆಂದರೆ ಈ ವಿಶಿಷ್ಟ ಸಮುದಾಯಗಳು ಬೇಟೆ, ಕುಮರಿ ಮತ್ತು ಆಹಾರ ಸಂಗ್ರಹಕಾರರಾಗಿಯೇ ಇರಬೇಕೇ ಅಥವಾ ಆಧುನಿಕ ಬಂಡವಾಳ ಬಯಸುವ ವೈಜ್ಞಾನಿಕ ಬೇಸಾಯಕ್ಕೆ ಬದಲಾಗಬೇಕೆ? ಹೊಸ ತಾಂತ್ರಿಕ ವೃತ್ತಿಗಳು, ಹೊಸ ವೈದ್ಯಕೀಯ ಪದ್ಧತಿ-ಔಷಧಗಳು ಹಾಗೂ ಒಂದೇ ಭಾಷೆಯ ಪ್ರಭುತ್ವವಿರುವ ಆಧುನಿಕ ಶಿಕ್ಷಣಗಳಿಗೆ

ಒಗ್ಗಿಕೊಳ್ಳಬೇಕೆ ಅಥವಾ ಅವರದೇ ಪಾರಂಪರಿಕ ಪದ್ಧತಿಯಲ್ಲಿಯೇ ಇರಬೇಕೆಂಬ ದ್ವಂದ್ವ ಇಂದಿಗೂ ಕಾಡುತ್ತಿವೆ."[೯]

ಈ ಹಿನ್ನೆಲೆಯಲ್ಲಿ ಅಧ್ಯಯನದ ಅಂಗವಾಗಿ ಕೈಗೊಂಡ ಕೌಟುಂಬಿಕ ಸಮೀಕ್ಷೆಯಲ್ಲಿ ದೊರೆತ ಮಾಹಿತಿಯ ಆಧಾರದಲ್ಲಿ ಸಿದ್ದಿಗಳ ಶೈಕ್ಷಣಿಕ ಸ್ಥಿತಿಗತಿಗಳ ನೈಜ ಚಿತ್ರಣ ನೀಡಲಾಗಿದೆ.

ಶೈಕ್ಷಣಿಕ ಸ್ಥಿತಿಗತಿ

ಉತ್ತರಕನ್ನಡ ಜಿಲ್ಲೆಯಲ್ಲಿ ಸಿದ್ದಿ ಬುಡಕಟ್ಟು ಜನರು ಸ್ಥಿರವಾಗಿ ಎಲ್ಲಿ ವಾಸ ಮಾಡಿದ್ದಾರೆಯೋ ಅಂತಹ ಕಡೆಯಲ್ಲಿ ಶಿಕ್ಷಣ ಪಡೆದಿದ್ದಾರೆ. ಎಲ್ಲಿ ಶಾಶ್ವತ ನೆಲೆಯಿಲ್ಲದ ಜೀವನವನ್ನು ಅನುಸರಿಸಿದ್ದಾರೆಯೋ ಅಂತಹ ಕಡೆಗಳಲ್ಲಿ ಶಿಕ್ಷಣದಲ್ಲಿ ಪ್ರವೇಶ ಪಡೆದಿರುವುದು ತುಂಬಾ ಕಡಿಮೆ.

ಕಡುಬಡತನದ ಬುಡಕಟ್ಟು ಸಮುದಾಯಗಳಿಗೆ ಶಿಕ್ಷಣ ಕಲಿಯಲು ಬೇಕಾದ ವಾತಾವರಣ ನಿರ್ಮಾಣವಾಗಿಲ್ಲ. ಆದ್ದರಿಂದ ಅವರ ನೆಲೆಸುವಿಕೆ ಮತ್ತು ಶಿಕ್ಷಣ ಹಾಗೂ ಆಧುನಿಕತೆಯ ಮುಖ್ಯವಾಹಿನಿಗೆ ಕರೆತರುವುದರ ಜೊತೆಗೆ ವರ್ತಮಾನದೊಂದಿಗೆ ಜೀವನ ನಡೆಸುವುದರ ಜಾಗೃತಿಯ ಅರಿವು ಮೂಡಿಸುವುದು ಅತ್ಯವಶ್ಯಕವಾಗಿದೆ.

ಈ ಅಧ್ಯಯನಕ್ಕಾಗಿಯೇ ಉತ್ತರಕನ್ನಡ ಜಿಲ್ಲೆಯ ಏಳು ತಾಲೂಕುಗಳ ವ್ಯಾಪ್ತಿಯೊಳಗೆ ಬರುವ ಪಂಚಾಯಿತಿಯನ್ನೊಳಗೊಂಡಂತೆ ಸಿದ್ದಿ ಬುಡಕಟ್ಟುಗಳ ಕುರಿತು ಒಟ್ಟಾರೆಯಾಗಿ ಸಮೀಕ್ಷೆಯಲ್ಲಿ ಕಂಡುಬಂದ ಅಂಕಿ ಅಂಶಗಳು ಈ ಕೆಳಗಿನ ಕೋಷ್ಟಕ ೪.೫.೧ರಂತೆ ಇವೆ. ಸಿದ್ದಿ ಸಮುದಾಯದಲ್ಲಿ ಶಿಕ್ಷಣಕ್ಕೆ ಅರ್ಹವಾದವರ ಸಂಖ್ಯೆಯಲ್ಲಿ ಪುರುಷರು ಶೇ. ೪೯.೮೨(೮೨೧)ರಷ್ಟು ಹಾಗೂ ಮಹಿಳೆಯರು ಶೇ. ೫೦.೧೮(೮೨೭)ರಷ್ಟು ಇದ್ದಾರೆ. ಆದರೆ ಸಾಕ್ಷರತೆಯನ್ನು ಹೊಂದಿದವರ ಲಿಂಗವಾರು ಪ್ರಮಾಣ ಗಮನಿಸಿದಾಗ ಪುರುಷರು ಶೇ. ೭೬.೮೬(೬೩೧)ರಷ್ಟು ಹಾಗೂ ಮಹಿಳೆಯರು ಶೇ. ೬೭.೩೫(೫೫೭)ರಷ್ಟು ಒಟ್ಟು ಜನರಿದ್ದಾರೆ. ನಿರಕ್ಷರಿ(ಅನಕ್ಷರಸ್ಥರ)ಗಳು ಪುರುಷರಲ್ಲಿ ಶೇ. ೨೩.೧೪(೧೯೦)ರಷ್ಟು ಹಾಗೂ ಮಹಿಳೆಯರು ಶೇ. ೩೨.೬೫(೨೭೦)ರಷ್ಟಿದ್ದಾರೆ.

ಕೋಷ್ಟಕ ೪.೫.೧. ಉತ್ತರಕನ್ನಡ ಜಿಲ್ಲೆಯ ಒಟ್ಟಾರೆ ಸಿದ್ದಿ ಬುಡಕಟ್ಟಿನ ಸಾಕ್ಷರರ್ಹ, ಸಾಕ್ಷರಸ್ಥ ಮತ್ತು ನಿರಕ್ಷರಿಗಳ ಲಿಂಗವಾರು ಪ್ರಮಾಣ

ವಿವರ	ಗಂಡು	ಹೆಣ್ಣು	ಒಟ್ಟು
ಸಾಕ್ಷರತೆ ಹೊಂದಲು ಅರ್ಹವಾದವರು	೮೨೧	೮೨೭	೧೬೪೮
ಸಾಕ್ಷರತೆ ಹೊಂದಿದವರು	೬೩೧	೫೫೭	೧೧೮೮
ಅನಕ್ಷರಸ್ಥರು	೧೯೦	೨೭೦	೪೬೦

ಸಿದ್ದಿ ಬುಡಕಟ್ಟಿನ ಶೈಕ್ಷಣಿಕ ಮಟ್ಟ

ಪ್ರತ್ಯೇಕವಾಗಿ ಉತ್ತರಕನ್ನಡ ಜಿಲ್ಲೆಯ ಕ್ಷೇತ್ರಕಾರ್ಯಕ್ಕೆ ಅಳವಡಿಸಿಕೊಂಡಿರುವ ಏಳು ತಾಲೂಕು (ಅಂಕೋಲಾ, ಕಾರವಾರ, ಜೋಯಿಡಾ, ಮುಂಡಗೋಡ, ಯಲ್ಲಾಪುರ, ಶಿರಸಿ ಮತ್ತು ಹಳಿಯಾಳ)ಗಳ ಪಂಚಾಯಿತಿ ನೆಲೆಗಳಲ್ಲಿ ಸಿದ್ದಿ ಸಮುದಾಯಗಳ ಲಿಂಗವಾರು ಸಾಕ್ಷರರ್ಹರು, ಸಾಕ್ಷರಸ್ಥರು, ಅನಕ್ಷರಸ್ಥರ ಪ್ರಮಾಣ ಹಾಗೂ ಶೈಕ್ಷಣಿಕ ಮಟ್ಟದ ಪ್ರಮಾಣವನ್ನು ಅವಲೋಕಿಸಿ ಅಂಕಿ–ಅಂಶಗಳನ್ನು ನೀಡಲಾಗಿದೆ.

ಸಾಕ್ಷರತೆಯ ಪ್ರಮಾಣ: ಸಾಕ್ಷರತೆಯನ್ನು ಪಡೆದವರಲ್ಲಿ ಮೆಟ್ರಿಕ್‌ಪೂರ್ವ ಶಿಕ್ಷಣವನ್ನು ಪಡೆದವರು ಹಾಗೂ ಮೆಟ್ರಿಕ್ ನಂತರದ ಶಿಕ್ಷಣ ಪಡೆದವರು ಎಂದು ವಿಂಗಡಿಸಲಾಗಿದೆ. ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲಾ ಶಿಕ್ಷಣ ಪಡೆದವರನ್ನು ಮೆಟ್ರಿಕ್‌ಪೂರ್ವ ಶಿಕ್ಷಣದಲ್ಲಿಯೂ, ಪದವಿಪೂರ್ವ, ಪದವಿ, ಸ್ನಾತಕೋತ್ತರ ಶಿಕ್ಷಣ ಪಡೆದವರನ್ನು ಮೆಟ್ರಿಕ್ ನಂತರದ ಶಿಕ್ಷಣದಲ್ಲಿ ಸೇರಿಸಲಾಗಿದೆ.

ಕೋಷ್ಟಕ: ೪.೫.೨ ಉತ್ತರಕನ್ನಡ ಜಿಲ್ಲೆಯ ಸಿದ್ದಿಗಳ ಲಿಂಗವಾರು, ಶೈಕ್ಷಣಿಕ ಮಟ್ಟ

ವಿವರಗಳು	ಪುರುಷ	ಮಹಿಳೆ	ಒಟ್ಟು
ಒಟ್ಟು ಜನಸಂಖ್ಯೆ	೯೨೦	೯೨೯	೧೮೪೯
೧ ರಿಂದ ೫ ವರ್ಷದೊಳಗಿನವರು	೯೯	೧೦೨	೨೦೧
೬ ರಿಂದ ೬೧ ವರ್ಷ ಮೇಲ್ಪಟ್ಟವರು	೮೨೧	೮೨೭	೧೬೪೮
ಸಾಕ್ಷರರು			
ಮೆಟ್ರಿಕ್‌ಪೂರ್ವ ಸಾಕ್ಷರತೆ	೫೯೨	೫೧೬	೧೧೦೮
ಪ್ರಾಥಮಿಕ ಶಿಕ್ಷಣ	೨೪೯	೨೪೪	೪೯೩
ಮಾಧ್ಯಮಿಕ	೧೮೦	೧೬೦	೩೪೦
ಪ್ರೌಢ ಶಿಕ್ಷಣ	೧೬೩	೧೧೨	೨೭೫
ಮೆಟ್ರಿಕ್ ನಂತರ ಸಾಕ್ಷರತೆ	೩೯	೪೧	೮೦
ಪದವಿಪೂರ್ವ	೨೯	೩೫	೬೪
ಪದವಿ	೮	೧	೯
ಇತರೆ	೨	೫	೭
ಅನಕ್ಷರಸ್ಥರು	೧೯೦	೨೭೦	೪೮೯

ಸಾಕ್ಷರತೆಗೆ ಅರ್ಹವಾದ ವ್ಯಕ್ತಿಗಳ ವಿವರ: ಉತ್ತರಕನ್ನಡ ಜಿಲ್ಲೆಯ ಸಿದ್ದಿ ಸಮುದಾಯದ ಒಟ್ಟು ಜನಸಂಖ್ಯೆ ೧೮೪೯ರಲ್ಲಿ ಪುರುಷರು ಪ್ರಮಾಣವು ಶೇ. ೪೯.೭೬(೯೨೦) ಹಾಗೂ ಮಹಿಳೆಯರು ಪ್ರಮಾಣ ಶೇ. ೫೦.೨೪(೯೨೯)ರಷ್ಟಿದೆ. ಇದರಲ್ಲಿ ೦–೬ರ ಪ್ರಮಾಣದ ಮಕ್ಕಳು ಒಟ್ಟು ಶೇ. ೧೦.೮೭ (೨೦೧)ರಷ್ಟಿದ್ದಾರೆ. ಈ ಮಕ್ಕಳನ್ನು ಶಿಕ್ಷಣ ಪಡೆಯಲು ಅರ್ಹರಲ್ಲದವರು ಎಂದು ಭಾವಿಸಲಾಗಿದೆ. ಸಾಕ್ಷರತೆ ಪಡೆಯಲು ಅರ್ಹವಾದವರ ಪ್ರಮಾಣದಲ್ಲಿ ಶೇ. ೮೯.೧೩(೧೬೪೮)ರಷ್ಟಿದ್ದಾರೆ. ಸಾಕ್ಷರತೆಯನ್ನು

ಹೊಂದಿರುವ ಪ್ರಮಾಣವನ್ನು ಲಿಂಗವಾರು ಗಮನಿಸಿದಾಗ, ಪುರುಷ ಪ್ರಮಾಣವು ಶೇ. ೭೬.೮೬ರಷ್ಟಿದ್ದಾರೆ. ಮಹಿಳೆಯರ ಪ್ರಮಾಣ ಶೇ. ೬೫.೦೭ರಷ್ಟಿದೆ. ಅನಕ್ಷರಸ್ಥರ ಪ್ರಮಾಣದಲ್ಲಿ ಪುರುಷ ಪ್ರಮಾಣವು ಶೇ. ೨೩.೧೪ರಷ್ಟಿದ್ದರೆ. ಮಹಿಳೆಯರ ಪ್ರಮಾಣ ಶೇ. ೩೪.೯೩ರಷ್ಟಿದ್ದಾರೆ.

ಇಂತಹ ಸಮುದಾಯಗಳಿಗೆ ಅಗತ್ಯವಾಗಿ ಶಿಕ್ಷಣ ನೀಡಬೇಕಾಗಿದೆ. ಪ್ರಾಥಮಿಕ ಶಿಕ್ಷಣ, ಸಾರ್ವತ್ರಿಕ ಶಿಕ್ಷಣ, ಕಡ್ಡಾಯ ಹಾಗೂ ಉಚಿತವಾಗಿ ದೊರೆಯುವಂತಾಗಬೇಕು. ಈಗಾಗಲೇ ಕೇಂದ್ರ ಸರ್ಕಾರ ಅಂಗನವಾಡಿ, ಬಾಲವಾಡಿ ಕೇಂದ್ರಗಳನ್ನು ಹಾಗೂ ೬ರಿಂದ ೧೪ ವರ್ಷದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಪಡೆಯುವ ಹಕ್ಕನ್ನು ಕಾನೂನಿನ ಮೂಲಕ ನೀಡಿರುವುದು ಸ್ವಾಗತಾರ್ಹ. ಕಾನೂನು ಮಾಡಿ ಕೈತೊಳೆದುಕೊಂಡು ಬಿಟ್ಟರೆ ಕೆಲಸವಾಯಿತೆಂದಲ್ಲ. ಅದನ್ನು ಇಂತಹ ಹಿಂದುಳಿದ ಬುಡಕಟ್ಟುಗಳವರೆಗೆ ಬರುವ ರೀತಿಯಲ್ಲಿ ಅನುಷ್ಠಾನದಲ್ಲಿ ತರಲು ಸರ್ಕಾರದ ಅಧಿಕಾರಿಗಳು ಮತ್ತು ಸಮುದಾಯದ ವಿದ್ಯಾವಂತರ ಪ್ರಾಮಾಣಿಕ ಪ್ರಯತ್ನ ನಡೆಯಬೇಕಾಗಿದೆ.

ಕೋಷ್ಟಕ ೪.೫.೩. ಉತ್ತರಕನ್ನಡ ಜಿಲ್ಲೆಯ ಸಿದ್ದಿಗಳ ತಾಲೂಕು, ಪಂಚಾಯಿತಿವಾರು ಸಾಕ್ಷರರ್ಹ, ಸಾಕ್ಷರಸ್ಥ ಮತ್ತು ನಿರಕ್ಷರಿಗಳ ಲಿಂಗವಾರು ಪ್ರಮಾಣ

ತಾಲೂಕುಗಳು	ಪಂಚಾಯಿತಿಗಳು	ಸಾಕ್ಷರಸ್ಥರು			ಅನಕ್ಷರಸ್ಥರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಅಂಕೋಲಾ	ಕೊಡ್ಲಗದ್ದೆ	೩	೨	೫	೧	೩	೪
	ಡೊಂಗ್ರಿ	೭೩	೬೬	೧೩೯	೨೧	೩೬	೫೮
	ಸುಂಕನಾಳ	೧೦	೪	೧೪	೬	೪	೧೦
		೮೬	೭೨	೧೫೮	೨೮	೪೩	೭೨
ಕಾರವಾರ	ಮೇಲ್‌ಮಖೇರಿ	೧೦	೩	೧೩	೩	೭	೧೦
ಜೋಯಿಡಾ	ಇರನೊಳ್ಳಿ	೨೧	೧೪	೩೫	೬	೧೧	೧೭
ಮುಂಡಗೋಡ	ಉಗಿನಕೇರಿ	೩೯	೧೮	೫೭	೮	೨೦	೨೮
	ಬಸರೆಜಡ್ಡಿ	೧೫	೨೪	೩೯	೯	೧೧	೨೦
		೫೪	೪೨	೯೬	೧೭	೩೧	೪೮
ಯಲ್ಲಾಪುರ	ಉಮ್ಮಚಗಿ	೭೫	೬೧	೧೩೬	೬	೧೧	೧೭
	ಕಣ್ಣಿಗೇರಿ	೫೮	೪೫	೧೦೩	೨೧	೩೮	೫೯
	ಕುಂದರಗಿ	೫೬	೫೮	೧೧೪	೫	೫	೧೦
	ಹಾಸಣಗಿ	೨೦	೨೬	೪೬	೧	೦	೧
	ಹಿತ್ಲಳ್ಳಿ	೧೧	೯	೨೦	೦	೨	೨
		೨೨೦	೧೯೯	೪೧೯	೩೩	೫೬	೮೯

ಶಿರಸಿ	ದೇವನಳ್ಳಿ	೨೦	೧೪	೩೪	೩	೩	೬
	ಕಕ್ಕನಳ್ಳಿ	೨೦	೧೨	೩೨	೮	೧೨	೨೦
		೪೦	೨೬	೬೬	೧೧	೧೫	೨೬
ಹಳಿಯಾಳ	ಕೆಸರೊಳ್ಳಿ	೩೪	೩೨	೬೬	೮	೧೨	೨೦
	ಗುಂಡೊಳ್ಳಿ	೧೭	೧೫	೩೨	೫	೯	೧೪
	ಭಾಗವತಿ	೫೯	೪೪	೧೦೩	೩೫	೫೧	೧೦೧
	ಸಾಂಬ್ರಾಣಿ	೮೯	೮೧	೧೬೮	೪೮	೫೭	೧೦೭
		೧೯೯	೧೭೨	೩೬೯	೯೬	೧೨೯	೨೪೨
ಉತ್ತರಕನ್ನಡ ಒಟ್ಟು		೬೩೧	೫೨೮	೧೧೫೫	೧೯೩	೨೯೨	೫೦೫

ಕೋಷ್ಟಕ ೪.೫.೩ರಲ್ಲಿ ಉತ್ತರಕನ್ನಡ ಜಿಲ್ಲೆಯ ತಾಲೂಕುವಾರು ಅಧ್ಯಯನದ ವ್ಯಾಪ್ತಿಗೆ ಸಂಬಂಧಪಟ್ಟ ಪಂಚಾಯಿತಿವಾರು ಸಾಕ್ಷರಸ್ಥರ ಹಾಗೂ ಅನಕ್ಷರಸ್ಥರ ಶೇಕಡವಾರನ್ನು ಗಮನಿಸಿದಾಗ

ಅಂಕೋಲಾ ತಾಲೂಕುವಾರು ಸಾಕ್ಷರಸ್ಥರ ಪ್ರಮಾಣ ಪುರುಷರು ಶೇ. ೭೫.೪೪ರಷ್ಟು ಮಹಿಳೆಯರು ಶೇ. ೬೨.೬೧ರಷ್ಟಿದ್ದಾರೆ, ಅನಕ್ಷರಸ್ಥರ ಪ್ರಮಾಣ ಪುರುಷರು ಶೇ. ೨೪.೫೬ರಷ್ಟು, ಮಹಿಳೆಯರು ಶೇ. ೩೭.೩೯ರಷ್ಟಿದ್ದಾರೆ.

ಕಾರವಾರ ತಾಲೂಕುವಾರು ಸಾಕ್ಷರಸ್ಥರ ಪ್ರಮಾಣ ಪುರುಷರು ಶೇ. ೭೬.೯೨ರಷ್ಟು ಮಹಿಳೆಯರು ಶೇ. ೩೦.೦೦ರಷ್ಟಿದ್ದಾರೆ, ಅನಕ್ಷರಸ್ಥರ ಪ್ರಮಾಣ ಪುರುಷರು ಶೇ. ೨೩.೦೮ರಷ್ಟು, ಮಹಿಳೆಯರು ಶೇ. ೭೦.೦೦ರಷ್ಟಿದ್ದಾರೆ.

ಜೋಯಿಡಾ ತಾಲೂಕುವಾರು ಸಾಕ್ಷರಸ್ಥರ ಪ್ರಮಾಣ ಪುರುಷರು ಶೇ. ೭೭.೭೮ರಷ್ಟು ಮಹಿಳೆಯರು ಶೇ. ೫೬.೦೦ರಷ್ಟಿದ್ದಾರೆ, ಅನಕ್ಷರಸ್ಥರ ಪ್ರಮಾಣ ಪುರುಷರು ಶೇ. ೨೨.೨೨ರಷ್ಟು, ಮಹಿಳೆಯರು ಶೇ. ೪೪.೦೦ರಷ್ಟಿದ್ದಾರೆ.


ಮುಂಡಗೋಡ ತಾಲೂಕುವಾರು ಸಾಕ್ಷರಸ್ಥರ ಪ್ರಮಾಣ ಪುರುಷರು ಶೇ. ೭೬.೦೬ರಷ್ಟು ಮಹಿಳೆಯರು ಶೇ. ೫೭.೫೩ರಷ್ಟಿದ್ದಾರೆ, ಅನಕ್ಷರಸ್ಥರ ಪ್ರಮಾಣ ಪುರುಷರು ಶೇ. ೨೩.೯೪ರಷ್ಟು, ಮಹಿಳೆಯರು ಶೇ. ೪೨.೪೭ರಷ್ಟಿದ್ದಾರೆ.

ಯಲ್ಲಾಪುರ ತಾಲೂಕುವಾರು ಸಾಕ್ಷರಸ್ಥರ ಪ್ರಮಾಣ ಪುರುಷರು ಶೇ. ೮೭.೩೫ರಷ್ಟು ಮಹಿಳೆಯರು ಶೇ. ೭೮.೦೪ರಷ್ಟಿದ್ದಾರೆ, ಅನಕ್ಷರಸ್ಥರ ಪ್ರಮಾಣ ಪುರುಷರು ಶೇ. ೧೨.೬೫ರಷ್ಟು, ಮಹಿಳೆಯರು ಶೇ. ೨೧.೯೬ರಷ್ಟಿದ್ದಾರೆ.

ಶಿರಸಿ ತಾಲೂಕುವಾರು ಸಾಕ್ಷರಸ್ಥರ ಪ್ರಮಾಣ ಪುರುಷರು ಶೇ. ೭೮.೪೩ರಷ್ಟು ಮಹಿಳೆಯರು ಶೇ. ೬೩.೪೧ರಷ್ಟಿದ್ದಾರೆ, ಅನಕ್ಷರಸ್ಥರ ಪ್ರಮಾಣ ಪುರುಷರು ಶೇ. ೨೧.೫೭ರಷ್ಟು, ಮಹಿಳೆಯರು ಶೇ. ೩೬.೫೯ರಷ್ಟಿದ್ದಾರೆ.

ಹಳಿಯಾಳ ತಾಲೂಕುವಾರು ಸಾಕ್ಷರಸ್ಥರ ಪ್ರಮಾಣ ಪುರುಷರು ಶೇ. ೬೭.೪೬ರಷ್ಟು ಮಹಿಳೆಯರು ಶೇ. ೫೭.೧೪ರಷ್ಟಿದ್ದಾರೆ, ಅನಕ್ಷರಸ್ಥರ ಪ್ರಮಾಣ ಪುರುಷರು ಶೇ. ೩೨.೫೪ರಷ್ಟು, ಮಹಿಳೆಯರು ಶೇ. ೪೨.೮೬ರಷ್ಟಿದ್ದಾರೆ.

ಲಂಬಚಿತ್ರ ೪.೫.೧. ಉತ್ತರಕನ್ನಡ ಜಿಲ್ಲೆಯ ಸಿದ್ದಿಗಳ ಶೈಕ್ಷಣಿಕ ಹಂತಗಳ ಪ್ರಮಾಣ



ಶೈಕ್ಷಣಿಕ ಹಿಂದುಳಿದಿರುವಿಕೆ

ಕರ್ನಾಟಕದ ಉತ್ತರಕನ್ನಡ ಜಿಲ್ಲೆಯ ಅಧ್ಯಯನಕ್ಕೆ ಒಳಪಟ್ಟ ಕ್ಷೇತ್ರಕಾರ್ಯದ ಅಂಕಿಅಂಶಗಳಲ್ಲಿ ಒಟ್ಟಾರೆ ಸಿದ್ದಿ ಬುಡಕಟ್ಟಿನಲ್ಲಿ ಪುರುಷರಿಗಿಂತ ಮಹಿಳೆಯರ ಸಾಕ್ಷರತಾ ಪ್ರಮಾಣ ತುಂಬಾ ಕಡಿಮೆ ಇರುವುದು ಸಮೀಕ್ಷೆಯ ಮೂಲಕ ತಿಳಿದುಬರುತ್ತದೆ.

ಮೆಟ್ರಿಕ್‌ಪೂರ್ವ (ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ) ಶಿಕ್ಷಣದವರೆಗೆ ಮಾತ್ರ ಕೆಲವರು ಕಲಿತಿದ್ದಾರೆ. ಉಳಿದಂತೆ ಮೆಟ್ರಿಕ್ ನಂತರ(ಪದವಿಪೂರ್ವ, ಪದವಿ ಹಾಗೂ ಸ್ನಾತಕೋತ್ತರ)ದ ಸಾಕ್ಷರತೆ ಮುಂದಿನ ವಿದ್ಯಾಭ್ಯಾಸಕ್ಕೆ ಹೋದವರ ಸಂಖ್ಯೆ ಕಾಣಬರುವುದಿಲ್ಲ. ಅದರಲ್ಲಿ ಲಿಂಗವಾರು ಸಾಕ್ಷರತೆ ಮತ್ತು ಅನಕ್ಷರಸ್ಥರ ಪ್ರಮಾಣವನ್ನು ಗಮನಿಸಿದಾಗ, ಮೆಟ್ರಿಕ್‌ಪೂರ್ವ ಸಾಕ್ಷರತೆ ಒಟ್ಟು ಪ್ರಮಾಣ ಶೇ. ೯೩.೨೭ರಷ್ಟಿದೆ. ಇದರಲ್ಲಿ ಲಿಂಗವಾರು ಗಂಡು ಶೇ. ೯೩.೮೨ರಷ್ಟಿದ್ದಾರೆ. ಹೆಣ್ಣುಮಕ್ಕಳು ಶೇ. ೯೨.೬೪ರಷ್ಟು ಕಂಡುಬರುತ್ತಾರೆ. ಆದರೆ ಮೆಟ್ರಿಕ್ ನಂತರದ ಸಾಕ್ಷರತೆ ಒಟ್ಟು ಪ್ರಮಾಣ ಶೇ. ೬.೭೩ರಷ್ಟಿದೆ. ಇದರಲ್ಲಿ ಗಂಡು ಶೇ. ೬.೧೮ರಷ್ಟು ಕಂಡುಬಂದರೆ, ಹೆಣ್ಣು ಶೇ. ೭.೩೬ರಷ್ಟಿರುವುದು ಅಂಕಿಅಂಶಗಳಿಂದ ಕಂಡುಬರುತ್ತದೆ. ಇದರಿಂದ ಮೆಟ್ರಿಕ್ ನಂತರದ ಸಾಕ್ಷರತೆಯ ಕಡೆ ಹೋದಂತೆಲ್ಲಾ ಓದುತ್ತಿರುವವರಲ್ಲಿ ಪುರುಷರ ಹಾಗೂ ಮಹಿಳೆಯರ ಪ್ರಮಾಣವು ಕಡಿಮೆಯಾಗುತ್ತಲೇ ಸಾಗಿದೆ.

ಒಟ್ಟಾರೆಯಾಗಿ ಗಮನಿಸಿದರೆ ಇತ್ತೀಚೆಗೆ ಸಿದ್ದಿ ಬುಡಕಟ್ಟು ಮಕ್ಕಳಲ್ಲಿ ಶಾಲೆಗೆ ಹೋಗುವವರ ಪ್ರಮಾಣ ಹೆಚ್ಚಾಗುತ್ತಿದೆ. ಆದರೆ ಅದೇ ಪ್ರಮಾಣವನ್ನು ಮೇಲಿನ ಹಂತಗಳಿಗೆ ಹೋದಂತೆಲ್ಲಾ ಕಾಣಲು ಸಾಧ್ಯವಾಗುವುದಿಲ್ಲ. ಅದರಲ್ಲೂ ಮಹಿಳೆಯರ ಸಾಕ್ಷರತಾ ಪ್ರಮಾಣವು ಉತ್ತಮ ಸ್ಥಿತಿಯಲ್ಲಿದೆ. ಶಾಲೆಗೆ ಹೋಗದೇ ಹಿಂದುಳಿದು ಅನಕ್ಷರಸ್ಥರಾಗಿರುವವರ ಸಂಖ್ಯೆ ಗಮನಾರ್ಹ ಸಂಗತಿಯಾಗಿದೆ.



ಕೋಷ್ಟಕ ೪.೫.೪. ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟುಗಳ ತಾಲೂಕುವಾರು ಶೈಕ್ಷಣಿಕ ಹಂತಗಳ ಲಿಂಗವಾರು ಪ್ರಮಾಣ

ಶೈಕ್ಷಣಿಕ ಹಂತ	ಅಂಕೋಲಾ			ಕಾರವಾರ			ಜೋಯಿಡಾ			ಮುಂಡಗೋಡ			ಯಲ್ಲಾಪುರ			ಶಿರಸಿ			ಹಳಿಯಾಳ		
	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ
ಪ್ರಾಥಮಿಕ	೩೪	೩೦	೬೪	೧	–	೧	೩	೩	೬	೧೪	೧೬	೩೦	೮೫	೮೯	೧೭೪	೧೬	೧೧	೨೭	೯೬	೬೬	೧೬೨
ಮಾಧ್ಯಮಿಕ	೨೧	೨೦	೪೧	೨	–	೨	೯	೪	೧೩	೧೧	೧೩	೨೪	೭೭	೬೪	೧೪೧	೧೪	೯	೨೩	೪೬	೫೦	೯೬
ಪ್ರೌಢಶಾಲೆ	೨೭	೧೩	೪೦	೩	–	೩	೭	೫	೧೨	೨೪	೯	೩೩	೪೩	೩೫	೭೮	೭	೬	೧೩	೫೨	೪೪	೯೬
ಡಿಪ್ಲೋಮಾ	–	–	–	೧	–	೧	–	–	–	–	–	–	೧	–	೧	–	–	–	–	–	–
ಪದವಿಪೂರ್ವ	೩	೭	೧೦	೨	೩	೫	೨	೨	೪	೫	೪	೯	೧೦	೮	೧೮	೩	–	೩	೪	೧೧	೧೫
ಪದವಿ	೧	೧	೨	೧	–	೧	–	–	–	–	–	–	೫	–	೫	–	–	–	೧	೦	೧
ಇತರೆ	–	೧	೧	–	–	–	–	–	–	–	–	–	–	೩	೩	–	–	–	೦	೧	೧
ಒಟ್ಟು	೮೬	೭೨	೧೫೮	೧೦	೩	೧೩	೨೧	೧೪	೩೫	೫೪	೪೨	೯೬	೨೨೧	೧೯೯	೪೨೦	೪೦	೨೬	೬೬	೧೯೯	೧೭೨	೩೭೧

ಶಿಕ್ಷಣದ ನಂತರ ಜಾಗತೀಕರಣ ಸಿದ್ದಿಗಳ ಸಾಂಸ್ಕೃತಿಕ ಶ್ರೀಮಂತಿಕೆಯನ್ನು, ಮುಖ್ಯವಾಗಿ ಅವರ ಡಮಾಮಿ, ಪುಗಡಿ ನೃತ್ಯಗಳನ್ನು ಜಗತ್ತಿನೆದುರು ಅನಾವರಣಗೊಳಿಸಲು ವೇದಿಕೆ ಕಲ್ಪಿಸಿತು. ಈ ಕಲಾವಿದರಿಗೆ ಹೆಚ್ಚಿನ ಗೌರವ-ಮನ್ನಣೆ ನೀಡಿದೆಯಲ್ಲದೆ ಒಳ್ಳೆಯ ಸಂಭಾವನೆಯ ದೊರೆಯುವಂತೆ ಮಾಡಿದೆ. ಅವರ ದೈಹಿಕ ಚಹರೆ ಮೊದಲು ತಿರಸ್ಕಾರಕ್ಕೊಳಗಾಗಿದ್ದರೂ ಇಂದು ವಿವಿಧ ಟಿ.ವಿ. ಧಾರಾವಾಹಿ ಹಾಗೂ ರಿಯಾಲಿಟಿ ಷೋಗಳಲ್ಲಿ ಅವಕಾಶ ಕಲ್ಪಿಸಿದೆ. ಸಿನೆಮಾಗಳಲ್ಲಿಯೂ ಅವಕಾಶ ದೊರೆಯುತ್ತಿದೆ.

ಆದರೆ ಇವೆಲ್ಲವುಗಳ ಜೊತೆಜೊತೆಗೇ ಇದೇ ಜಾಗತೀಕರಣ ಸಿದ್ದಿಯರ ಸಂಸ್ಕೃತಿಯನ್ನು ಸಂಪೂರ್ಣವಾಗಿ ಬದಲಾಯಿಸಿದೆ. ಧಾರ್ಮಿಕ ಆಚರಣೆ ಮತ್ತು ಸಂತೋಷದ ಅಭಿವ್ಯಕ್ತಿಯಾಗಿದ್ದ ಡಮಾಮಿ, ಪುಗಡಿಗಳನ್ನು ಮಾರಾಟದ ಸರಕನ್ನಾಗಿಸಿದೆ. ಹಣದ ಆಸೆ ತೋರಿಸಿ ಪಟ್ಟಣಗಳಿಗೆ ಕರೆಸಿ ಅವರಿಗೆ ಇಷ್ಟವಿರಲಿ ಬಿಡಲಿ ವೇದಿಕೆಯ ಮೇಲೆ ನೃತ್ಯ ಮಾಡಲೇಬೇಕಾದ ಕೃತಕತೆಗೆ ನೂಕಿವೆಯಲ್ಲದೆ ಆಧುನಿಕ ಹಾಡುಗಳನ್ನು ಅವರಿಗೆ ಒತ್ತಾಯದಿಂದ ಕಲಿಸಲಾಗುತ್ತಿದೆ. ಇದು ಅವರು ಕಲೆಯ ನೈಸರ್ಗಿಕ ಓಘ, ಲಾಲಿತ್ಯ, ಗಂಡುಗಾರಿಕೆಗೆ ಸಂಚಕಾರ ತಂದಿದೆ. ಜೊತೆಗೆ ಬಂಡವಾಳಶಾಹಿಯ ಬಳಸು-ಬಿಸಾಡು ಸಂಸ್ಕೃತಿ ಎಂದು ಇವರನ್ನು ನಡುನೀರಿನಲ್ಲಿ ಬಿಟ್ಟು ಇನ್ನೊಂದು ಬುಡಕಟ್ಟಿನ ಬೆನ್ನು ಹತ್ತುತ್ತದೆಯೋ ತಿಳಿಯದು. ಏಕೆಂದರೆ ಅವರಿಗೆ ಮಾರುಕಟ್ಟೆ ಆಕರ್ಷಣೆ ಕಳೆದುಕೊಂಡ ವಸ್ತುಗಳ ಬಗ್ಗೆ ಯಾವುದೇ ಕನಿಕರವೂ ಇರುವುದಿಲ್ಲ. ಮತ್ತೆ ತಿರುಗಿ ಬುಡಕಟ್ಟಿಗೆ ಹಿಂತಿರುಗುವಷ್ಟರಲ್ಲಿ ಬುಡಕಟ್ಟುಗಳೇ ಬದಲಾಗಿ ಹೋಗುವ ಸಾಧ್ಯತೆಗಳಿವೆ.

ಇದೇ ಜಾಗತೀಕರಣ ಅವರ ಪಾರಂಪರಿಕ ವೈದ್ಯಪದ್ಧತಿ, ಗೃಹವಿನ್ಯಾಸ, ಅರಣ್ಯಜ್ಞಾನ, ನೈತಿಕತೆ ಮತ್ತು ಸರಳತೆಗಳನ್ನು ನಾಶಪಡಿಸಿದೆಯೆಂದು ಹೇಳಲಾಗದಿದ್ದರೂ ಅವು ಸಂಪೂರ್ಣ ಪಲ್ಲಟಗೊಂಡು ಕುರೂಪಗೊಳಿಸಲ್ಪಟ್ಟಿವೆ. ವಿವಿಧ ಉದ್ದಿಮೆಗಳು, ಗಣಿಗಾರಿಕೆ, ಜಲಾಶಯಗಳ ನಿರ್ಮಾಣದಿಂದ ಅವರ ಮೂಲ ನೆಲೆ ಹಾಗೂ ಬದುಕಿನ ಸೆಲೆ ನಿರಂತರವಾಗಿ ಸ್ಥಿತ್ಯಂತರವಾಗಿ ಅವರಿಗೆ ಸೂಕ್ತ ಪುನರ್ವಸತಿ ಸಿಗದೆ ಬದುಕು ಇನ್ನಷ್ಟು ಅತಂತ್ರವಾಗುತ್ತದೆ. ಅದರಲ್ಲೂ ಸಿದ್ದಿಗಳ ನೆಲೆಯಾದ ಉತ್ತರಕನ್ನಡ ಈ ಬಗೆಯ ಹಲವಾರು ಯೋಜನೆಗಳಿಗೆ ಒಳಗಾಗಿ ಅಲ್ಲಿನ ಕಾಡು, ಪರಿಸರ, ಜನಜೀವನದ ಮೇಲೆ ವಾಸಿ ಮಾಡಲಾಗದಷ್ಟು ಗಾಯಗಳನ್ನು ಮಾಡಿವೆ. ಇವೆಲ್ಲವೂ ಸಿದ್ದಿಗಳ ಆರ್ಥಿಕತೆಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಈ ಅಧ್ಯಯನದ ಉದ್ದೇಶ ಗಳಲ್ಲೊಂದಾದ 'ಸಿದ್ದಿಯರ ವರ್ತಮಾನದ ಸ್ಥಿತಿಗತಿಗೆ ಅವರ ಪಾರಂಪರಿಕ ಆರ್ಥಿಕ ವ್ಯವಸ್ಥೆ ಕಾರಣವೋ ಅಥವಾ ಆ ಪಾರಂಪರಿಕ ಆರ್ಥಿಕ ವ್ಯವಸ್ಥೆಯನ್ನು ಪೋಷಣೆ ಮಾಡಿಕೊಂಡು ಬಂದ ರೂಢಿಗತ ರಾಜಕೀಯಾರ್ಥಿಕ, ಸಾಮಾಜಿಕ ಅಂಶಗಳು ಕಾರಣವೋ? ಜೊತೆಗೆ ತಮ್ಮ ಮೂಲ ಅರ್ಥಿಕತೆಯಿಂದ ದೂರ ಸರಿಯುತ್ತಿರುವುದೇ ಕಾರಣವೋ? ಎಂಬ ಪ್ರಶ್ನೆಗೆ ಉತ್ತರ ಬಹುಶಃ ಇದೆಲ್ಲವೂ ಹೌದು. ಜಾಗತೀಕರಣದ ಈ ಯುಗದಲ್ಲಿ ಇನ್ನೂ ಪಾರಂಪರಿಕ ಆರ್ಥಿಕ ವ್ಯವಸ್ಥೆಗೆ ಅಂಟಿಕೊಂಡೇ ಬದುಕುವುದೆಂದರೆ ಅದು ಶೋಷಣೆಗೊಳಗಾಗುವುದಕ್ಕೆ, ಹಿಂದುಳಿಯುವಿಕೆಗೆ ಅವಕಾಶ ಮಾಡಿ

ಕೊಡುವುದೇ ಆಗಿದೆ. ಕೆಲವು ಪಟ್ಟಭದ್ರಹಿತಾಸಕ್ತಿಗಳು ಅವರನ್ನು ಮುಂದುವರೆಯಲು ಬಿಡದೇ ಅದೇ ಸ್ಥಿತಿಯಲ್ಲಿಟ್ಟು ಶೋಷಣೆಯನ್ನು ನಿರಂತರಗೊಳಿಸಲು ಪ್ರಯತ್ನಿಸುತ್ತಿವೆ. ರಾಜಕಾರಣಿಗಳೂ ಇವರನ್ನು ಈಗಿರುವ ಸ್ಥಿತಿಯಲ್ಲೇ ಇಟ್ಟು ತಾವು ಮಾತ್ರವೇ ಇವರನ್ನು ಉದ್ಧಾರ ಮಾಡುತ್ತೇವೆನ್ನುತ್ತಾ ಅಕ್ಕಿ, ಗೋದಿ, ಮೊಟ್ಟೆ ನೀಡಿ ಬದುಕಿಗೆ ಯಾವುದೇ ನಿರ್ದಿಷ್ಟ ಮೂಲಗಳನ್ನು ಸೃಷ್ಟಿಸದೆ ಕಾಲಹರಣ ಮಾಡುತ್ತಿವೆ. ಇವೆಲ್ಲದರ ನಡುವೆ ತಮ್ಮ ಪಾಡಿಗೆ ತಾವು ಕಾಡಿನಲ್ಲೇ ಇರುತ್ತೇವೆಂದರೆ ಅದಕ್ಕೂ ಆಸ್ಪದ ನೀಡುತ್ತಿಲ್ಲ. ಇವುಗಳ ಬಗ್ಗೆಯೂ ಮುಂದಿನ ಅಧ್ಯಾಯಗಳಲ್ಲಿ ವಿಶದವಾಗಿ ಚಿಂತನೆ ನಡೆಸಲಾಗಿದೆ.

ಹೀಗೆ ಸಿದ್ದಿಗಳ ಬದುಕಿನ ಸ್ಥಿತ್ಯಂತರಗಳಿಗೆ ಹಲವಾರು ಕಾರಣಗಳಿದ್ದು ಅವುಗಳ ಪರಿಣಾಮ ಧನಾತ್ಮಕ ಹಾಗೂ ಋಣಾತ್ಮಕವಾಗಿ ಸಿದ್ದಿಗಳ ಬದುಕಿನ ಮೇಲೆ ಆಗಿದೆ. ಇಷ್ಟೆಲ್ಲದರ ನಡುವೆಯೂ ಅವರ ಬದುಕು ಇನ್ನೂ ಕೈಯಿಂದ ಬಾಯಿಗೆ ಸಾಲುವಷ್ಟು ಇಲ್ಲ. ಆದಾಯವೇ ಕಡಿಮೆ ಇದ್ದ ಮೇಲೆ ಮಿಗುತೆ, ಉಳಿತಾಯಗಳೂ ಇಲ್ಲ. ಜೊತೆಗೆ ಉಳಿತಾಯ ಮಾಡುವ, ಲಾಭ ಗಳಿಸುವ ಮನಸ್ಸೂ ಇಲ್ಲ. ಆದರೂ ಇದು ಸಿದ್ದಿಯರ ಬದುಕಿನ ಅಂತ್ಯವೇನೂ ಅಲ್ಲ. ಇತಿಹಾಸದುದ್ದಕ್ಕೂ ರಕ್ತ ಕಣ್ಣೀರಿನ ಹಾದಿಯಲ್ಲಿ ಹೋರಾಟದ ಜೀವನ ನಡೆಸಿದ ಈ ಸಮುದಾಯ ನಿರಂತರ ಸ್ಥಿತ್ಯಂತರಗಳಿಗೆ ಒಳಗಾಗುತ್ತಲೇ ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿದೆ. ಕಷ್ಟಗಳ ಕಣ್ಣೀರಿನ ನಡುವೆಯೂ ಅವರ ತುಟಿಗಳ ಮೇಲಿನ ಮುಗುಳ್ನಗೆ ಮಾತ್ರ ಮಾಸಿಲ್ಲ.

ಅಡಿಟಿಪ್ಪಣಿಗಳು

೧. ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೩, ೨೦೦೪.

೨. ಅದೇ, ಪು. ೩

೩. ಅದೇ, ಪು. ೧೧

೪. ಯಾಂಗ್, Chage and Continuty In Tribal Village - Long Kumar J., ೧೯೫೫, ೮೦ ಪು. ೩೫. ಪು.೨೦, ೨೦೦೯.

೫. ಪ್ರಭಾಕರ್ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೧, ೨೦೦೪.

೬. ಕಿರಣ್ ಕಮಲ್ ಪ್ರಸಾದ್, ಇನ್‌ಸರ್ಚ್ ಆಫ್ ಐಡೆಂಟಿಟಿ, ಜನಜಾಗೃತಿ ಪ್ರಕಾಶನ, ಬೆಂಗಳೂರು, ಪು.೩೦, ೨೦೦೫.

೭. ಸೂರ್ಯನಾಥ ಕಾಮತ್, ಪೋರ್ಚುಗೀಸರು ಮತ್ತು ಕರ್ನಾಟಕ, ಗತಕಾಲದಿಂದ–ಅಂಕಣ, ವಿಜಯಕರ್ನಾಟಕ, ದಿ: ೬.೧೨.೨೦೧೧.

೮. Lawrence Surindro, Kikkeri Narayan and Ritambhara Hebbar, Adivasis of India and Development Strategies. A policy working paper on progress, P.30, 2004.

೯. ಅದೇ, ಮುನ್ನುಡಿ

ಅಧ್ಯಾಯ ಐದು

ಸಿದ್ಧಿಗಳ ವರ್ತಮಾನದ ಆರ್ಥಿಕತೆ

೧. ಸಿದ್ದಿಗಳ ಆರ್ಥಿಕತೆ: ವರ್ತಮಾನದ ಸ್ಥಿತಿಗತಿಗಳು

೨. ಪಾರಂಪರಿಕ ದುಡಿಮೆ ಮತ್ತು ಬಹುರೂಪಗಳು

ಅ. ಕೃಷಿ

ಆ. ಕೃಷಿ ಕೂಲಿ

ಇ. ಅರಣ್ಯ ಉಪಉತ್ಪನ್ನಗಳ ಸಂಗ್ರಹ

ಈ. ಪಶುಪಾಲನೆ

ಇ. ಆಧುನಿಕ ಉದ್ಯೋಗಗಳು

೩. ಸಿದ್ದಿಯರ ದುಡಿಮೆಯ ಲಿಂಗಸಂಬಂಧಿ ಆಯಾಮಗಳು

೪. ಸಿದ್ದಿಯರ ಆರ್ಥಿಕತೆಯ ಸ್ವರೂಪ

ಅಧ್ಯಾಯ ಐದು

ಸಿದ್ದಿಗಳ ವರ್ತಮಾನದ ಆರ್ಥಿಕತೆ

೫.೧. ಸಿದ್ದಿಗಳ ಆರ್ಥಿಕತೆ: ವರ್ತಮಾನದ ಸ್ಥಿತಿಗತಿಗಳು

ಹಿಂದಿನ ಅಧ್ಯಾಯಗಳಲ್ಲಿ ಸಿದ್ದಿಗಳ ಹಿನ್ನೆಲೆ ಮತ್ತು ಚಾರಿತ್ರಿಕ ಆರ್ಥಿಕತೆಗಳ ವಿಶ್ಲೇಷಣೆಯ ನಂತರ ಅವರ ವರ್ತಮಾನದ ಆರ್ಥಿಕ ಸ್ಥಿತಿಗತಿಗಳನ್ನು ಅವಲೋಕಿಸುವುದು ಈ ಅಧ್ಯಾಯದ ಉದ್ದೇಶವಾಗಿದೆ. ಜಗತ್ತಿನ ಯಾವುದೇ ಸಮುದಾಯಕ್ಕಿಂತಲೂ ಹೆಚ್ಚಿನ ಸ್ಥಿತ್ಯಂತರಗಳಿಗೆ ಮತ್ತು ಶೋಷಣೆಗಳಿಗೆ ಈ ಸಿದ್ದಿ ಸಮುದಾಯ ಒಳಗಾಗಿದೆ. ವಿಪರ್ಯಾಸವೆಂದರೆ ಈ ಯಾವುದೇ ಸ್ಥಿತ್ಯಂತರಗಳೂ ಸಿದ್ದಿಗಳಿಗೆ ಒಳಿತನ್ನು ಮಾಡದೇ ಇರುವುದು. ಆಫ್ರಿಕಾದ ಕಾಡಿನಿಂದ ಅರಬ್, ಪೋರ್ಚುಗೀಸ್‌ರ ಹಡಗಿಗೆ ಅಲ್ಲಿಂದ ವಿವಿಧ ಖಂಡಗಳ ಪ್ರಮುಖ ನಗರಗಳಿಗೆ, ಸಿರಿವಂತರ ತೋಟಗಳಿಗೆ, ಗುಲಾಮರಾಗಿ ಅವರ ಆರ್ಥಿಕತೆಯನ್ನು ಕಟ್ಟಿಕೊಟ್ಟ ಈ ಸಮುದಾಯಕ್ಕೆ ತನ್ನದೇ ಆದ ಧೃಡವಾದ ಆರ್ಥಿಕತೆಯನ್ನು ಕಟ್ಟಿಕೊಳ್ಳಲು ಇನ್ನೂ ಸಾಧ್ಯವಾಗಿಲ್ಲ. ಪ್ರತಿಬಾರಿ ಈ ಪ್ರಯತ್ನಕ್ಕೆ ಕೈ ಹಾಕಿದಾಗಲೂ ಅದಕ್ಕೆ ಅನೇಕ ಅಡೆತಡೆಗಳು ಎದುರಾಗಿ ಅವರನ್ನು ಇನ್ನಷ್ಟು ಬಲಹೀನಗೊಳಿಸಿವೆ. ಗುಲಾಮಗಿರಿಯಿಂದ ತಪ್ಪಿಸಿಕೊಂಡು ತಮ್ಮ ಪಾರಂಪರಿಕ ಬುಡಕಟ್ಟು ಆರ್ಥಿಕತೆಗೆ ಹಿಂದಿರುಗಿ ಬೇಟೆ ಮತ್ತು ಆಹಾರ ಸಂಗ್ರಹಣೆಗೆ ತೊಡಗಿದಾಗ ಬ್ರಿಟಿಷ್ ಸರಕಾರ ಮತ್ತು ಕಂಟ್ರಾಕ್ಟುದಾರರು ಸೇರಿ ಅದರಿಂದಲೂ ದೂರ ಮಾಡಿದರು. ನಮ್ಮದೇ ಸರ್ಕಾರ ಅಣೆಕಟ್ಟುಗಳು, ಗಣಿಗಳು, ಉದ್ದಿಮೆಗಳು ನಗರವಾಸಿಗಳನ್ನು ಅಭಿವೃದ್ಧಿ ಮಾಡಿದವಾದರೂ ಸಿದ್ದಿಗಳ ಬದುಕನ್ನು ಅತಂತ್ರ ಗೊಳಿಸಿದವು. ಅವರ ವಸತಿಗಾಗಿ ಇವರು ನಿರ್ವಸಿತರಾದರು. ಕೇವಲ ದೈಹಿಕ ಶ್ರಮವನ್ನಷ್ಟೇ ನಂಬಿಕೊಂಡು ವಿದ್ಯಾಭ್ಯಾಸ, ಕುಶಲಕಲೆ, ವ್ಯಾಪಾರಗಳನ್ನು ಕೈಗೊಳ್ಳಲಾಗದೇ ಇರುವುದು ಇವರ ಸದ್ಯದ ಸ್ಥಿತಿಗೆ ಕಾರಣವಾಗಿದೆ. ಒಬ್ಬ ಬಡಗಿ ಒಂದು ಉಳಿ ಮತ್ತು ಸುತ್ತಿಗೆ ತೆಗೆದುಕೊಂಡು ಎಲ್ಲಿ ಬೇಕಾದರೂ ಬದುಕಬಲ್ಲ. ಒಬ್ಬ ಗಾರೆ ಕೆಲಸದವನು ಹಳ್ಳಿಯಲ್ಲಿಯೋ, ಪಟ್ಟಣದಲ್ಲಿಯೋ ತನ್ನ ಬದುಕನ್ನು

ಕಟ್ಟಿಕೊಳ್ಳಬಲ್ಲ. ಆದರೆ ಕೇವಲ ಅರಣ್ಯ ಮತ್ತು ದೈಹಿಕ ಶ್ರಮ ಪ್ರಧಾನವಾದ ಸಿದ್ದಿಗಳ ಆರ್ಥಿಕತೆ, ಅರಣ್ಯ ಹಾಗೂ ಕೃಷಿ ಮೂಲವನ್ನೇ ಕಳೆದುಕೊಳ್ಳುವಂತಾಗಿರುವುದು ಅವರ ಸಮಸ್ಯೆಯ ಮೂಲವಾಗಿದೆ. ಗುಲಾಮಗಿರಿಯಿಂದಾಗಿಯೋ ಏನೋ ಅವರು ಬೆತ್ತದ ಹಾಗೂ ಕೌದಿಯ ಕಲೆಗಳನ್ನು ಹೊರತುಪಡಿಸಿ ಬೇರೆ ಕರಕುಶಲ ಕಲೆಗಳಲ್ಲಿ ಪರಿಣತರಾಗಲೇ ಇಲ್ಲ.

ಆರ್ಥಿಕವಾಗಿ ಸಬಲರಾಗಲೇಬೇಕೆಂಬ ಬಲವಾದ ಇಚ್ಛಾಶಕ್ತಿ ಇವರಲ್ಲಿ ಅಷ್ಟಾಗಿ ಕಂಡುಬರುತ್ತಿಲ್ಲ. ಇದ್ದುದರಲ್ಲೇ ತೃಪ್ತಿಪಡುವ ಮಹತ್ವಾಕಾಂಕ್ಷೆಗಳಿಲ್ಲದ, ಹಿಂಜರಿಕೆಯ ಮನೋಭಾವವೂ, ಸಾಂಪ್ರದಾಯಿಕತೆಯೂ ಇವರು ಆಧುನಿಕ ದೃಷ್ಟಿಯಿಂದ ಹಿಂದುಳಿಯಲು ಕಾರಣವಾಗಿದೆ. ಇತರ ಸಮುದಾಯಗಳು ಇವರೊಡನೆ ವೈವಾಹಿಕ ಇತ್ಯಾದಿ ಗಾಢ ಸಂಬಂಧ ಹೊಂದದೆ ಇರುವುದು. ಇವರಲ್ಲಿ ಏಕಾಂಗಿತನ ಮತ್ತು ಅನಾಥಪ್ರಜ್ಞೆಯನ್ನು ಬೆಳೆಸಿದೆ. ಇತ್ತೀಚಿನ ದಿನಗಳಲ್ಲಿ ಈ ಸ್ಥಿತಿ ಅಷ್ಟಾಗಿ ಇಲ್ಲವಾದರೂ ಸಂಪೂರ್ಣ ನಶಿಸಿಲ್ಲ. ಸರ್ಕಾರದ ಯೋಜನೆಗಳ ರೂಪುರೇಷೆ ನಿರ್ಧರಿಸುವಲ್ಲಿ ಇವರ ಪಾಲ್ಗೊಳ್ಳುವಿಕೆಗೆ ಅವಕಾಶವೇ ಇಲ್ಲದಿರುವುದು, ಅಧಿಕಾರಶಾಹಿ ದರ್ಪ ಮತ್ತು ಅಸಡ್ಡೆ, ಯೋಜನೆಗಳ ಬಗ್ಗೆ ಈ ಜನಾಂಗದಲ್ಲಿ ಮಾಹಿತಿ ಮತ್ತು ಜಾಗೃತಿ ಇಲ್ಲದಿರುವುದು, ಯೋಜನೆಯ ಫಲಗಳು ಸಂಪೂರ್ಣವಾಗಿ ತಲುಪದೆ ಇರುವುದು, ಸಾಲಬಾಧೆ ಮತ್ತು ಬ್ಯಾಂಕುಗಳಿಂದ ಸಾಲ ದೊರೆಯದೇ ಇರುವುದು, ಇವರ ಅರಣ್ಯೋತ್ಪನ್ನ ಸಂಗ್ರಹಕ್ಕೆ ಅರಣ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆಗಳಿಂದ ತೊಂದರೆಯಾಗುತ್ತಿರುವುದು, ಅವರ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಮತ್ತು ಮಾರಾಟ ತಂತ್ರಗಳ ಕೊರತೆ ಇತ್ಯಾದಿಗಳೆಲ್ಲಾ ಸೇರಿ ತಮ್ಮ ಮೂಲ ಮತ್ತು ಪಾರಂಪರಿಕ ಅರ್ಥವ್ಯವಸ್ಥೆಯೇ ಚೆನ್ನಾಗಿತ್ತು ಎಂಬ ಭಾವನೆ ಬಹುತೇಕ ಹಿರಿಯ ತಲೆಮಾರಿನ ಸಿದ್ದಿಗಳಲ್ಲಿ ಇನ್ನೂ ಇದೆ. ಇಷ್ಟು ವರ್ಷಗಳ ನಂತರವೂ ಅವರ ಆರ್ಥಿಕತೆ ಕೈಯಿಂದ ಬಾಯಿಗೆ ಸಾಲುವಷ್ಟಕ್ಕೇ ಸೀಮಿತವಾಗಿದೆ. ಆದರೆ ಹೊಸ ತಲೆಮಾರಿನವರಲ್ಲಿ ತಮ್ಮ ಆರ್ಥಿಕತೆಯನ್ನು ಇನ್ನೂ ಉತ್ತಮಪಡಿಸಿಕೊಳ್ಳಬೇಕು ಎಂಬ ತುಡಿತವಿದೆ. ಸಿದ್ದಿಗಳ ಒಟ್ಟಾರೆ ಆರ್ಥಿಕತೆಯನ್ನು ಹಂತಹಂತವಾಗಿ ಇಲ್ಲಿ ವಿವರಿಸಲಾಗಿದೆ.

೫.೨. ಪಾರಂಪರಿಕ ದುಡಿಮೆ ಮತ್ತು ಬಹುರೂಪಗಳು

ಭಾರತದ ಯಾವುದೇ ಬುಡಕಟ್ಟಿನ ಆರ್ಥಿಕತೆಯ ಅಧ್ಯಯನಕ್ಕೆ ಮೂಲವಾಗಿ ನಾವು ತಿಳಿದುಕೊಳ್ಳಬೇಕಾಗಿರುವುದೆಂದರೆ ಮೊಗಲರ ಕಾಲದವರೆಗೂ ಯಾವುದೇ ದೊಡ್ಡ ಬದಲಾವಣೆಗೊಳಗಾಗದ ಬುಡಕಟ್ಟುಗಳ ಜೀವನ, ನಂತರ ಸೂತ್ರ ಕಿತ್ತ ಗಾಳಿಪಟದಂತೆ ಅತಂತ್ರವಾಗಲು ಕಾರಣವೇನು ಎಂಬುದು. ಇದಕ್ಕೆ ನಾವು ಇತಿಹಾಸದ ಪುಟಗಳಲ್ಲಿ ಉತ್ತರ ಹುಡುಕಬೇಕು. ಶತಮಾನಗಳಿಂದ ನಿಸರ್ಗದ ಮಡಿಲಲ್ಲಿ ಭೂಮಿತಾಯಿಯ ಮಕ್ಕಳಂತೆ ಬೆಳೆದ ಬುಡಕಟ್ಟುಗಳಿಗೆ ಈ ದೇಶವನ್ನಾಳಿದ ರಾಜಮಹಾರಾಜರುಗಳೆಲ್ಲ ಸ್ವತಂತ್ರ ಹಾಗೂ ಸ್ವಾಯತ್ತತೆಗಳನ್ನು ನೀಡಿ ಗೌರವಿಸಿದ್ದರು. ಯಾವುದೇ ಕಾರಣಕ್ಕೂ ಅವರ ಸ್ವಾತಂತ್ರ್ಯ ಹರಣಕ್ಕೆ ಕೈ ಹಾಕದೆ ಬುಡಕಟ್ಟುಗಳದೇ ಆದ ಸೈನ್ಯದ ಸಹಾಯ ಪಡೆದು ಸಾಮ್ರಾಜ್ಯ ರಕ್ಷಣೆ ಮಾಡಿಕೊಳ್ಳುತ್ತಿದ್ದರು. ಬುಡಕಟ್ಟುಗಳನ್ನು ನಾಶ ಮಾಡಲು ಪ್ರಯತ್ನಿಸಿದ

ಅತಿರಥ ಮಹಾರಥರು ಮತ್ತವರ ಸೈನ್ಯಗಳೆಲ್ಲ ಹೇಳಹೆಸರಿಲ್ಲದಂತೆ ನಾಮಾವಶೇಷವಾದವು. ಆದರೆ ಸಿಪಾಯಿದಂಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಬುಡಕಟ್ಟುಗಳ ಶಕ್ತಿಯನ್ನು ಕಂಡು ದಿಗಿಲಾದ ವಸಾಹತುಶಾಹಿ ಸರ್ಕಾರ ಅವರನ್ನು ಅಶಕ್ತರನ್ನಾಗಿಸಲು ಯೋಜನೆ ಹೆಣೆಯತೊಡಗಿತು. 'ಲೇಖನಿಗಿಂತ ಕತ್ತಿ ಹರಿತ' ಎಂಬಂತೆ ಸಾವಿರಾರು ಕತ್ತಿ–ತುಪಾಕಿಗಳು ಮಾಡಲಾಗದ ಕೆಲಸವನ್ನು ಬ್ರಿಟಿಷರ ಪೆನ್ನು ಮಾಡಿದ್ದು ವಿಚಿತ್ರ ಆದರೂ ಸತ್ಯ. ಅವರ ೧೮೬೫ರ 'Crown's control over forest Act'[1] ಎಂಬ ಕಾನೂನು ಭಾರತದ ಬುಡಕಟ್ಟುಗಳ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಕಾಡುಗಳ ರಾಜರಾಗಿ, ಸಂರಕ್ಷಕರಾಗಿ, ಭೂಮಿಯ ಒಡೆಯರಾಗಿದ್ದ ಬುಡಕಟ್ಟುಗಳನ್ನು ಅವರದೇ ಕಾಡುಗಳಲ್ಲಿ Encroaches–Trespasserಗಳೆಂದು ಪರದೇಶಿಗಳನ್ನಾಗಿ ಮಾಡುವಲ್ಲಿ ಯಶಸ್ವಿಯಾಯಿತು. ತಲೆತಲಾಂತರಗಳಿಂದ ತಮ್ಮದೇ ಎಂದುಕೊಂಡಿದ್ದ ಕಾಡು ಇದೀಗ ತಮ್ಮದಲ್ಲ, ತಮ್ಮನ್ನು ಎತ್ತಿ ಜೋಗುಳ ಹಾಡಿದ್ದ ಕಾಡಿನಲ್ಲಿ ತಾವೇ ಪರಕೀಯರು, ಅತಿಕ್ರಮಣಕಾರರಾದದ್ದು ನಾಗರಿಕತೆಯ ವಿಪರ್ಯಾಸವಲ್ಲದೇ ಬೇರೇನು? ತಮ್ಮ ತಾಯಿ ತಂದೆಯಂತಿದ್ದ ಕಾಡು ಇದೀಗ ಭೋಗಿಗಳ ಆಡುಂಬೊಲದ ಸರಕಾಯಿತು. ತಾವು ದೇವರೆಂದು ತಿಳಿದಿದ್ದ ಭೂಮಿತಾಯಿ ಕಂಡವರ ಖಾಸಗಿ ಆಸ್ತಿಯಾಯಿತು. ರಾಜಕಾರಣಿಗಳು–ವ್ಯಾಪಾರಿಗಳು–ಅಧಿಕಾರಿಗಳು–ಜಮೀನುದಾರರ ದುಷ್ಟ ಚತುಷ್ಟಯ ಅಮಾಯಕ ಆದಿವಾಸಿಗಳ ಬದುಕನ್ನು ಹುರಿದು ಮುಕ್ಕಿ, ಹಸನಾಗಿದ್ದ ಅವರ ಬಾಳು ವ್ಯಸನವಾಗುವಂತೆ ಮಾಡಿತು. ಇದಿಷ್ಟೇ ಸಾಲದೆಂಬಂತೆ ತಮ್ಮದೇ ಆದ ಆಚಾರ–ವಿಚಾರ, ಸಾಮಾಜಿಕ–ನ್ಯಾಯಿಕ ವ್ಯವಸ್ಥೆ ಹೊಂದಿದ್ದ ಆದಿವಾಸಿಗಳ ಮೇಲೆ ಬ್ರಿಟಿಷರು ವಿಧಿಸಿದ ಅವರದೇ ವಿದೇಶಿ ಕಾನೂನುಗಳು ಸರಳ–ಸ್ವಾಭಾವಿಕ ನ್ಯಾಯವ್ಯವಸ್ಥೆಯನ್ನು ನಾಶ ಮಾಡಿ ಗಿರಿಜನರನ್ನು ಕುರಿಗಳಂತೆ ಮಾಡಿ ಜೈಲಿಗೆ ತಳ್ಳಲು, ಆಸ್ತಿ ಕಬಳಿಸಲು ಅನುವು ಮಾಡಿಕೊಟ್ಟವು. 'ಕ್ರಿಮಿನಲ್ ಟ್ರೈಬ್ಸ್ ಆಕ್ಟ್' ಕೂಡಾ ಇಂತಹ ಕಾನೂನುಗಳಲ್ಲಿ ಪ್ರಮುಖವಾದುದಾಗಿದೆ. ಇವೆಲ್ಲವುಗಳ ಪರಿಣಾಮವಾಗಿ ಸರ್ವತಂತ್ರ, ಸ್ವತಂತ್ರವಾಗಿ ಸ್ವಾಭಿಮಾನ ಸಮಾಧಾನದಿಂದ ಬದುಕುತ್ತಿದ್ದ ಆದಿವಾಸಿಗಳ ಬದುಕು ನರಕಸದೃಶವಾಯಿತು. ಕಾಡಿನಲ್ಲೂ ಇರಲಾಗದೆ, ನಾಡಿನವರೊಡನೆ ಏಗಲಾರದೆ ಗುಲಾಮರು, ಪ್ರಾಣಿಗಳಿಗಿಂತಲೂ ಕೀಳಾದ ಜೀವನ ನಡೆಸುತ್ತಾ ತಮ್ಮ ಸ್ವಂತಿಕೆಯನ್ನು ಕಳೆದುಕೊಂಡು Identity Crisisಗೆ ಸಿಕ್ಕಿ ತೊಳಲಾಡುತ್ತಿದ್ದಾರೆ.

ವಿದೇಶಿಯರಾದ ಬ್ರಿಟಿಷರಿಗೆ ನಮ್ಮ ದೇಶವನ್ನು ಕೊಳ್ಳೆ ಹೊಡೆಯುವ ಹುನ್ನಾರವಿತ್ತೇ ವಿನಾ ಉದ್ಧಾರ ಮಾಡುವ ಮನಸ್ಸಿರಲಿಲ್ಲ. ಹಾಗಾಗಿ ಅವರು ಆದಿವಾಸಿಗಳನ್ನು ಕೇವಲ ಕೂಲಿಕಾರರಂತೆ ಕಾಡಿನ ಸಂಪತ್ತು ದೋಚಲು ಬಳಸಿಕೊಂಡು ಅವರ ಅಭಿವೃದ್ಧಿಗೆ ಕಿಂಚಿತ್ತೂ ಪ್ರಯತ್ನಿಸಲಿಲ್ಲ. ಸಿದ್ದಿಗಳನ್ನು ಅವರು ಇದೇ ರೀತಿ ಅರಣ್ಯಗಳಿಂದ ಒಕ್ಕಲೆಬ್ಬಿಸಿದರು ಮತ್ತು ಅವರ ದೈಹಿಕ ಶ್ರಮವನ್ನು ಬಳಸಿಕೊಂಡು ತಮ್ಮ ಹಡಗು ಮತ್ತು ರೈಲುಗಳಿಗೆ ಬೇಕಾದ ಮರ ಮುಟ್ಟುಗಳನ್ನು ದೋಚಿದರು. ಈ ಎಲ್ಲ ಹಿನ್ನೆಲೆಗಳಲ್ಲಿ ನಾವು ಸಿದ್ದಿಗಳ ಪ್ರಸ್ತುತ ಆರ್ಥಿಕತೆಯನ್ನು ವಿಶ್ಲೇಷಿಸಬೇಕಿದೆ.

ಇತರ ಆದಿಮ ಬುಡಕಟ್ಟುಗಳಂತೆ ಸಿದ್ದಿಗಳು ಕೂಡ ಪಾರಂಪರಿಕವಾಗಿ ಬೇಟೆ, ಆಹಾರ ಸಂಗ್ರಹಣೆ ಮತ್ತು ಕುಮ್ರಿ ಬೇಸಾಯವನ್ನೇ ಆಧರಿಸಿದ ನಿಸರ್ಗಾವಲಂಬಿ ಆರ್ಥಿಕತೆಯನ್ನೇ

ಆಧರಿಸಿ ಜೀವಿಸುತ್ತಿದ್ದರು. ಆದರೆ ವಸಾಹತುಶಾಹಿ ಹಾಗೂ ಸ್ವಾತಂತ್ರ್ಯಾನಂತರದ ಸರ್ಕಾರಗಳ ತಪ್ಪು ಕಲ್ಪನೆ, ಕಾನೂನು ಹಾಗೂ ನೀತಿಗಳು, ವಿವಿಧ ಅಭಿವೃದ್ಧಿ ಯೋಜನೆಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಈ ಇಡೀ ವ್ಯವಸ್ಥೆಯನ್ನೇ ನಾಶ ಮಾಡಿವೆ. ಹೀಗಾಗಿ ಇತರ ಅರಣ್ಯವಾಸಿ ಸಮುದಾಯ ಗಳಂತೆಯೇ ಸಿದ್ದಿಗಳು ಈ ಬಗೆಯ ಸ್ಥಿತ್ಯಂತರದ ಒತ್ತಡಕ್ಕೆ ಬಲಿಯಾಗಿದ್ದು ಇತ್ತ ಪಾರಂಪರಿಕ ಆರ್ಥಿಕ ಮೂಲಗಳೂ ಇಲ್ಲದೆ ಅತ್ತ ನಾಗರಿಕತೆಯ ಉತ್ಪದನಾ ಸಾಧನಗಳ ಮೇಲೆ ನಿಯಂತ್ರಣವೂ ಇಲ್ಲದೆ ತ್ರಿಶಂಕು ಸ್ಥಿತಿಯಲ್ಲಿದ್ದಾರೆ.

೧. ಆಹಾರ ಮತ್ತು ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ

ಇದು ಮಾನವನ ಅತಿ ಪ್ರಾಚೀನ ಮತ್ತು ಬಹುಶಃ ಮೊದಲ ಆರ್ಥಿಕ ಕಸುಬಾಗಿದೆ. ಬಲಹೀನನಾಗಿದ್ದ ಮಾನವ ಇನ್ನೂ ಆಯುಧ ಸಲಕರಣೆಗಳ ಬಳಕೆಯನ್ನು ತಿಳಿಯದಿದ್ದ ಕಾಲದಿಂದಲೂ ಅರಣ್ಯೋತ್ಪನ್ನಗಳ ಸಂಗ್ರಹಣೆಯೇ ಬದುಕಿಗೆ ಆಸರೆಯಾಗಿತ್ತು. ಮೂಲತಃ ಬುಡಕಟ್ಟುಗಳಾದ ಸಿದ್ದಿಗಳು ಗುಲಾಮಗಿರಿಯ ಸಂಕೋಲೆಗಳಿಂದ ತಪ್ಪಿಸಿಕೊಂಡು ಉತ್ತರಕನ್ನಡದ ಕಾಡಿಗೆ ಬಂದ ನಂತರ ಆಹಾರ ಸಂಗ್ರಹಣೆಯೇ ಅವರ ಜೀವ ಉಳಿಸಿರಬೇಕು. ಅರಣ್ಯೋತ್ಪನ್ನಗಳ ಅಕ್ಷಯಭಂಡಾರವಾಗಿರುವ ಉತ್ತರಕನ್ನಡ, ಸಿದ್ದಿಗಳಂತೆಯೇ ಅಲ್ಲಿನ ಎಲ್ಲ ಬುಡಕಟ್ಟುಗಳ ಆರ್ಥಿಕತೆಯನ್ನು ನಿರ್ಧರಿಸುವ ಪ್ರಮುಖ ಮೂಲವಾಗಿದೆ.

ಜೇನು: ಇಲ್ಲಿನ ಸಿದ್ದಿಗಳ ಹಣ ಗಳಿಕೆಯ ಆಪದ್ಬಾಂಧವ ಎಂದರೆ ಜೇನು. ಜೇನುಕುರುಬ ರಂತೆಯೇ ಸಿದ್ದಿಗಳೂ ಜೇನುಸಂಗ್ರಹಣೆಯಲ್ಲಿ ನಿಸ್ಸೀಮರು. ಎಂತಹ ದೊಡ್ಡ ಮರವೇ ಇರಲಿ, ದೈತ್ಯ ಬಂಡೆಗಳೇ ಇರಲಿ, ಜೇನಿನ ಜಾಡು ಹಿಡಿದು ಸರಳವಾಗಿ ಅದನ್ನು ಇಳಿಸುವ ಕಲೆ ಸಿದ್ದಿಗಳಿಗೆ ಪ್ರಕೃತಿದತ್ತವಾಗಿ ಬಂದ ಕೊಡುಗೆಯಾಗಿದೆ. ರೇಷನ್ ಅಥವಾ ಹಣ ಬೇಕೆಂದಾಗಲೆಲ್ಲ ಒಂದೊಂದು ಬಾಟಲಿ ಜೇನನ್ನು ವಿನಿಮಯ ಮಾಡಿಕೊಂಡು ಸಾಮಾನು ಪಡೆಯುತ್ತಾರೆ. ಒಂದು ರೀತಿಯಲ್ಲಿ ಜೇನು ಸಿದ್ದಿಗಳ ಕರೆನ್ಸಿಯಾಗಿದೆ. ಮೊದಲೆಲ್ಲಾ ಖಾಸಗಿ ಅಂಗಡಿಗಳಿಗೆ, ಸ್ವಯಂಸೇವಾ ಸಂಸ್ಥೆಗಳಿಗೆ ಜೇನನ್ನು ನೀಡುತ್ತಿದ್ದ ಸಿದ್ದಿಯರಿಗೆ ಸಿಗುತ್ತಿದ್ದದು ಪುಡಿಗಾಸು ಮತ್ತು ಮಾಲು ಚೆನ್ನಾಗಿಲ್ಲವೆಂಬ ಕುಹಕ. ಇಲ್ಲಿನ ಜೇನು ಹಾಗೂ ಮೇಣಕ್ಕೆ ಹೊರ ರಾಜ್ಯಗಳಲ್ಲಿಯೂ ಬೇಡಿಕೆ ಇದ್ದು ಸಿದ್ದಿಗಳ ಮುಗ್ಧತೆಯನ್ನು ಬಳಸಿಕೊಂಡು ಅವರಿಗೆ ಮೋಸ ಮಾಡುತ್ತಿದ್ದವರೇ ಹೆಚ್ಚು. ಜೇನುಗಳಿಗಾದರೋ ಕಚ್ಚಲಾದರೂ ಬರುತ್ತದೆ. ಆದರೆ ಮುಗ್ಧ ಸಿದ್ದಿಗಳಿಗೆ ಅದೂ ಬರುವುದಿಲ್ಲ. ಆದರೆ ಹಳಿಯಾಳ ಮತ್ತು ಯಲ್ಲಾಪುರಗಳಲ್ಲಿ ಸಿದ್ದಿಗಳದೇ ಆದ ಲ್ಯಾಂಪ್ಸ್ ಸೊಸೈಟಿಗಳು(Large scale Multipurpose co-operative Society limited) ಆರಂಭವಾದ ನಂತರ, ಈ ಇಡೀ ಸಮುದಾಯದ ಶೋಷಣೆಗೆ ಕಡಿವಾಣ ಬಿದ್ದಿದ್ದು ಸಿದ್ದಿಗಳೂ ನಾಲ್ಕಾರು ಕಾಸು ಕಾಣಲು ಸಾಧ್ಯವಾಗಿದೆ.

ಮಲೆನಾಡಿನ ದಟ್ಟ ಕಾಡುಗಳು ನೂರಾರು ಬಗೆಯ ಹಣ್ಣು, ಗೆಡ್ಡೆಗೆಣಸು, ಔಷಧಿ ಸಸ್ಯಗಳ ಆಗರವಾಗಿದೆ. ದೇಶ ವಿದೇಶಗಳಲ್ಲಿ ಮಾರಾಟವಾಗುತ್ತಿರುವ ಹಲವಾರು ಪೇಯ, ಪಾನೀಯಗಳು

ನಮ್ಮದೇ ಹಿತ್ತಲಿನ ಮೂಲದವೆಂದು ಬಹಳ ಜನರಿಗೆ ತಿಳಿಯದು. ಯಾರೂ ಉತ್ತು ಬಿತ್ತದೆ, ನೈಸರ್ಗಿಕವಾಗಿ ತಾನೇತಾನಾಗಿ ಬೆಳೆಯುವ ಈ ಅಮೂಲ್ಯ ಸಸ್ಯ ಪ್ರಭೇದಗಳು, ಪ್ರಕೃತಿಯ ಆಹಾರ ಸರಪಳಿಯ ಅಪರೂಪದ ಕೊಂಡಿಗಳಾಗಿವೆ. 'ಕರಡಿಗೆ ಜೇನು, ಹಲಸು, ಆನೆಗೆ ಆಲದ ಸೊಪ್ಪು, ಕೋತಿಗಳಿಗೆ ಅತ್ತಿ, ಸೀತಾಫಲ, ಪೇರಲ, ಕೆಂದಳಿಲಿಗೆ ಹೆಬ್ಬಲಸು, ಅಳಿಲಿಗೆ ಕರಿಮಾದಲ, ನರಿಗೆ ಬೇಲ, ಬಾವಲಿಗೆ ಗೋಣಿ ಹಣ್ಣು, ಹೀಗೆ ಒಂದಕ್ಕೊಂದು ಪೂರಕವಾಗಿರುವ ಈ ಜೀವಜಾಲ ಮನುಷ್ಯನಿಗೂ ಸಾಕಷ್ಟು ನೀಡಿದೆ. ಅವುಗಳೆಂದರೆ, ಧೂಪ, ಅರಗು, ಮರಪಾಚಿ, ನಾರು, ಅಂಟು, ರಾಳ, ಅಣಬೆ, ಸಾಗುವಾನಿ, ಔಷಧಿ, ಪ್ರಾಣಿಜನ್ಯ ವಸ್ತುಗಳು, ಬಿಲ್ವ, ಗೇರು, ರಾಮಫಲ, ಸೀತಾಫಲ, ಚಳ್ಳೆ, ಹಲಸು, ವಾಟೆ, ಕರಿಮಾದಲ, ಕವಳೆ, ಹಾಲೆ, ಚಕ್ಕೋತ, ಸಳ್ಳೆ, ನೆಲ್ಲಿ, ಬೇಲ, ಅತ್ತಿ, ಅಂಜೂರ, ಉಪ್ಪಾಗೆ, ಮುರುಗಲ, ಬಿಕ್ಕೆ, ಮಾವು, ಜಾಯಿಕಾಯಿ, ಜ್ಯೂಸ್ ಪ್ರೂಟ್, ಬಟರ್ ಪ್ರೂಟ್, ನೆಲ್ಲಿ, ಪೇರಲ, ನೇರಳೆ, ಅಮಟೆ, ಹುಣಿಸೆ, ಬಾದಾಮಿ, ಬೋರೆ, ಅರಿಶಿಣ ಇತ್ಯಾದಿ.'[೨] ಇವು ಸಿದ್ದಿಗಳ ದೇಹಕ್ಕೆ ವಿಟಾಮಿನ್ ಮನಸ್ಸಿಗೆ ಆಹ್ಲಾದ, ದಣಿವಿಗೆ ನೆರಳು ಮತ್ತು ತಂಗಾಳಿ, ಜಡ್ಡಿಗೆ ಔಷಧಿಯಾಗಿ ಮಾತ್ರವಲ್ಲದೆ ಆರ್ಥಿಕ ಸಂಕಷ್ಟಗಳಿಗೆ ಸಂಜೀವಿನಿಯಾಗಿದೆ. ಇತ್ತೀಚಿಗೆ ಬೇಡಿಕೆ ಹೆಚ್ಚಿಸಿಕೊಂಡಿರುವ ಉಪ್ಪಾಗ ಮತ್ತು ಮುರುಗಲುಗಳು ಸಿದ್ದಿಗಳ ಆಹಾರ ಮತ್ತು ಆದಾಯದ ಮೂಲಗಳೂ ಆಗಿವೆ.

ಉಪ್ಪಾಗೆ: "ಮಲಬಾರ್ ಟ್ಯಾಮರಿಂಡ್, ಗಾರ್ಸೀನಿಯಾ, ಕಾಂಬೋಗಿಯಾ ಎಂದು ಕರೆಯಲ್ಪಡುವ ಕಲ್ಲಾಸಿಯೇಸಿ ಕುಟುಂಬದ ಈ ಹಣ್ಣು ಕೇರಳೀಯರ ಆಹಾರದ ಅವಿಭಾಜ್ಯ ಸಂಬಾರು ಪದಾರ್ಥವಾಗಿದೆ. ಸಿಹಿಮಿಶ್ರಿತ ಹುಳಿಯ, ಸಣ್ಣ ಸೇಬಿನ ಗಾತ್ರದ, ಕೆಂಪು ಹಳದಿ ಬಣ್ಣದ ಈ ಹಣ್ಣು ಪೋಷಕಾಂಶಭರಿತ ವಾಗಿದ್ದು, ಉಪ್ಪಿನಕಾಯಿ, ಮಸಾಲೆ, ಉಪ್ಪಾಗೆ ತುಪ್ಪಗಳಾಗಿ ಬಳಕೆಯಾಗುತ್ತಿದೆ. ಸಂಧಿವಾತ, ಕೊಲ್‌ಸ್ಟ್ರಾಲ್, ಬೊಜ್ಜು, ಅಜೀರ್ಣ, ಮಲಬದ್ಧತೆ, ಜಂತುಹುಳು, ಚರ್ಮರೋಗಗಳಿಗೂ ಇದು ಸಿದ್ಧೌಷಧಿ. ಜುಲೈ–ಸೆಪ್ಟೆಂಬರ್‌ನಲ್ಲಿ ದೊರೆಯುವ ಹಣ್ಣುಗಳನ್ನು ಇಲ್ಲಿನ ಎಲ್ಲ ಬುಡಕಟ್ಟುಗಳು ಸಂಗ್ರಹಿಸಿ ಬೆಂಕಿಯಲ್ಲಿ ಒಣಗಿಸಿ ಸಂಗ್ರಹಿಸಿಟ್ಟುಕೊಂಡು ನಂತರ ಮಾರಾಟ ಮಾಡುತ್ತವೆ.'[೩] ಇತ್ತೀಚೆಗೆ ಇದರ ಬೆಲೆ ಹೆಚ್ಚಾದಾಗ ಬುಡಕಟ್ಟುಗಳ ಜನರು ಮೋಟಾರ್ ಸೈಕಲ್, ಮೊಬೈಲ್ ಟಿವಿ ಮುಂತಾದವುಗಳನ್ನು ದೊಡ್ಡ ಪ್ರಮಾಣದಲ್ಲಿ ಖರೀದಿಸಿದರು.

ಮುರುಗಲು (ಕೋಕಂ) : ದೇಶ ವಿದೇಶಗಳಲ್ಲಿ ಆರೋಗ್ಯ ಪೇಯವೆಂದೇ ಪ್ರಸಿದ್ಧವಾಗಿರುವ ಕೋಕಂ ಜ್ಯೂಸ್ ನಿತ್ಯ ಜೀನವದ ಅವಿಭಾಜ್ಯ ಅಂಗವಾಗಿದೆ. ಪುನರ್ಪುಳಿ, ಜರಜಿ, ದೇವನಹುಳಿ ಎಂದೆಲ್ಲಾ ಕರೆಯಲ್ಪಡುವ ಈ ಸಸ್ಯದ ಸಸ್ಯಶಾಸ್ತ್ರೀಯ ಹೆಸರು ಗಾರ್ನೀನಿಯಾ ಇಂಡಿಕಾ, ಕ್ಲೂಸಿಯೇನಿ ಕುಟುಂಬ ಗಾರ್ನಿನಿಯಾ ಸಹೋದರರೆಂದೇ ಖ್ಯಾತವಾದ ಉಪ್ಪಾಗೆ ಮತ್ತು ಮುರುಗಲು ಪಾನಕ, ಸಾರು, ಕಷಾಯ, ಬೆಣ್ಣೆ, ಒಣಸಿಪ್ಪೆ ಇತ್ಯಾದಿಗಳ ರೂಪದಲ್ಲಿ ಬಳಕೆಯಾಗುತ್ತದೆ. ಬಯಲು ನಾಡಿನ ಹುಣಿಸೆಗೆ ಪರ್ಯಾಯವಾಗಿ ಮಲೆನಾಡಿನ ಜನ ಇದನ್ನು ಬಳಸುತ್ತಾರೆ. ಜ್ವರ, ರಕ್ತಭೇದಿ,

ಚರ್ಮರೋಗ, ವಾಯು, ಅಜೀರ್ಣ, ಬೊಜ್ಜು, ಕ್ಯಾನ್ಸರ್ ಮತ್ತು ಹೃದ್ರೋಗಗಳಿಗೆ ಔಷಧಿಯಾಗಿ ಬಳಕೆಯಾಗುತ್ತಿದೆ.'[೩]

ಗೋವಾದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಇದಕ್ಕೆ ತುಂಬಾ ಬೇಡಿಕೆ ಮತ್ತು ಮಾರುಕಟ್ಟೆ ಇದೆ. ಸಿದ್ದಿ ಹಾಗೂ ಇತರ ಬುಡಕಟ್ಟುಗಳಿಂದ ಕಚ್ಚಾ ರೂಪದಲ್ಲಿ, ಕಡಿಮೆ ಬೆಲೆಗೆ ಕೊಂಡು, ವಿದೇಶಿಯರಿಗೆ ಅತಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಇದರ ಸಂಸ್ಕರಣ ತಂತ್ರಜ್ಞಾನ ಮತ್ತು ಸಾಲ ಸೌಲಭ್ಯವನ್ನು ಬುಡಕಟ್ಟುಗಳಿಗೆ ನೀಡಿ ಅವರಿಗೆ ನೇರವಾದ ಮಾರುಕಟ್ಟೆ ಸಂಪರ್ಕ ಕಲ್ಪಿಸಿದರೆ ಈ ಸಮುದಾಯಗಳ ಆರ್ಥಿಕ ಸಬಲೀಕರಣವಾಗುವುದರಲ್ಲಿ ಸಂಶಯವಿಲ್ಲ. 'ರಾಜ್ಯದಲ್ಲಿ ವಾರ್ಷಿಕ ೧೦ ಸಾವಿರ ಟನ್ ಕೋಕಂನ ವ್ಯಾಪಾರ ನಡೆಯುತ್ತದೆ. ದೇಶದ ಕಿರು ಅರಣ್ಯೋತ್ಪನ್ನಗಳಿಗೆ ತುಂಬಾ ಬೇಡಿಕೆ ಇದ್ದು ಕೇವಲ ೧೩ ಉತ್ಪನ್ನಗಳ ವಾರ್ಷಿಕ ವಹಿವಾಟು ೩೬೦೦ ಕೋಟಿ ಎಂದು ಅಂದಾಜಿಸಲಾಗಿದೆ. ರಾಜ್ಯದ ವಹಿವಾಟು ೧ ಸಾವಿರ ಕೋಟಿಗಿಂತಲೂ ಅಧಿಕ. ಇವುಗಳ ಅನಧಿಕೃತ ವ್ಯಾಪಾರವೇ ಹೆಚ್ಚಿರುವುದರಿಂದ ಈ ವಹಿವಾಟು ಇನ್ನು ಹೆಚ್ಚಿರುವ ಸಾಧ್ಯತೆ ಇದೆ. ಕರ್ನಾಟಕ ರಾಜ್ಯ ಲ್ಯಾಂಪ್ಸ್ ಗಿರಿಜನ ಸಹಕಾರ ಮಹಾಮಂಡಳ ರಾಜ್ಯದ ೨೩ ಸ್ಥಳಗಳಲ್ಲಿ ಕಿರು ಅರಣ್ಯೋತ್ಪನ್ನಗಳನ್ನು ಖರೀದಿಸುತ್ತಿದೆ. ಇವುಗಳಲ್ಲಿ ಪ್ರಮುಖ ಉತ್ಪನ್ನಗಳೆಂದರೆ, ಜೇನು, ಮೇಣ, ಮರಪಾಚಿ, ಅಂಟುವಾಳ ಕಾಯಿ, ಸೀಗೆಕಾಯಿ, ಗೋಂದು, ರಾಮಪತ್ರೆ, ದಾಲ್ಚಿನ್ನಿ ಅಲೆ, ಮರಾಠಿಮೊಗ್ಗು, ಅಳಲೆಕಾಯಿ, ಕಾಡು ಅರಿಶಿಣ, ಕಾಡುಶುಂಠಿ, ಕಾಡುಮೆಣಸು, ವಾಟಿ, ಉಪ್ಪಗೆ, ಮುರುಗಲು, ನೆಲ್ಲಿಕಾಯಿ, ಧೂಪ, ತಾರೆಕಾಯಿ, ಸುರಗಿ ಹೂವು, ಜುಮ್ಮನ ಕಾಯಿ, ಮುತ್ತುಗದ ಎಲೆ ಇತ್ಯಾದಿ. ರಾಜ್ಯದಲ್ಲಿ ೪೦೦ಕ್ಕೂ ಹೆಚ್ಚು ಕೇಂದ್ರಗಳಲ್ಲಿ ಉತ್ಪನ್ನಗಳ ವ್ಯಾಪಾರ ನಡೆಯುತ್ತಿದೆಯೆಂಬ ಅಂದಾಜಿದ್ದು, ಇವುಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲು ಕೃಷಿ ಅರ್ಥಶಾಸ್ತ್ರಜ್ಞ ಟಿ. ಹಕ್ ಮತ್ತು ಯೋಜನಾ ಆಯೋಗದ ಸದಸ್ಯ ಕಾರ್ಯದರ್ಶಿ ಸುಧಾಪಿಳ್ಳೈ ಸಮಿತಿಗಳು ಪ್ರತ್ಯೇಕ ವರದಿ ಸಲ್ಲಿಸಿವೆ. ಅದರಲ್ಲಿ ಕೇವಲ ೧೩ ಉತ್ಪನ್ನಗಳಿಗೆ ಮಾತ್ರ ಬೆಂಬಲ ಬೆಲೆ ನಿಗದಿಪಡಿಸಲು ಶಿಫಾರಸ್ಸು ಮಾಡಿದ್ದು ಅದರಲ್ಲಿ ಕರ್ನಾಟಕದ ಗೋಂದು, ಹುಣಿಸೆ ಮತ್ತು ಜೇನುತುಪ್ಪ ಮಾತ್ರ ಸೇರಿವೆ. ರಾಜ್ಯ ಸರ್ಕಾರ ಇನ್ನಾದರೂ ಎಚ್ಚೆತ್ತು ಸೂಕ್ತ ಅಂಕಿಅಂಶಗಳ ಸಮೇತ ಕೇಂದ್ರಕ್ಕೆ ಇನ್ನಷ್ಟು ಉತ್ಪನ್ನಗಳನ್ನು ಇದರಲ್ಲಿ ಸೇರಿಸಲು ಮನವಿ ಮಾಡಬೇಕಿದೆ.'[೪]

ಹಳಿಯಾಳದ ವನಶ್ರೀ ಲ್ಯಾಂಪ್ಸ್ ಸೊಸೈಟಿ

೨೦೦೫ರಿಂದ ಕಾರ್ಯ ನಿರ್ವಹಿಸುತ್ತಿರುವ ಹಳಿಯಾಳದ ವನಶ್ರೀ ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶಗಳ ಸಹಕಾರಿ ಸಂಘ ಇಂದು ವಾರ್ಷಿಕ ಸುಮಾರು ೨೫,೦೦೦.೦೦ ರೂಪಾಯಿಗಳಷ್ಟು ವ್ಯವಹಾರ ನಡೆಸುತ್ತಿದೆ. ಜೇನು–ಮೇಣಗಳ ಜೊತೆಗೆ, ಅಂಟುವಾಳ, ವಾಟೆಹುಳಿ, ಉಪ್ಪಾಗೆ, ನೇರಳೆ, ಔಷಧಿ ಸಸ್ಯಗಳಾದಿಯಾಗಿ ಸುಮಾರು ೨೦ ವಸ್ತುಗಳನ್ನು ಸಿದ್ದಿಗಳಿಂದ ನ್ಯಾಯಯುತ ಬೆಲೆಗೆ ಕೊಂಡು ಬೇರೆಬೇರೆ ಕಡೆ ಮಾರಾಟ ಮಾಡುತ್ತಿದೆ. ಹುಬ್ಬಳ್ಳಿಯಲ್ಲಿ ಈ ಉತ್ಪನ್ನಗಳಿಗೆ

ಬಹಳಷ್ಟು ಬೇಡಿಕೆ ಇದೆ. ೧೪೬೫ ಸದಸ್ಯರನ್ನು, ಅದರಲ್ಲೂ ಬಹುತೇಕ ಸಿದ್ದಿ ಹೆಂಗಸರನ್ನು ಹೊಂದಿರುವ ಈ ಸಂಸ್ಥೆ ರೂ. ೧೨೦ರಿಂದ ೧೫೦ ರೂ.ಗಳಿಗೆ ಕೆ.ಜಿ.ಯಂತೆ ಜೇನನ್ನು ಕೊಂಡು ೨೫೦-೩೦೦ ರೂಪಾಯಿಗಳಿಗೆ ಬೇರೆಯವರಿಗೆ ಮಾರಾಟ ಮಾಡುತ್ತಿದೆ. ಬಂದ ಲಾಭವನ್ನು ಸಮುದಾಯದ ಸದಸ್ಯರ ಜೊತೆ ಹಂಚಿಕೊಳ್ಳುತ್ತದೆ. 'ಜೇನು ಖರೀದಿಗೆ ಮುಂಗಡ, ಹೈನುಗಾರಿಕೆ, ವಿಮೆ, ಉದ್ಯೋಗ ನೀಡಿಕೆ ಮುಂತಾದ ಸಹಾಯ ಮಾಡುತ್ತಿರುವ ಈ ಸಂಸ್ಥೆ ಸಿದ್ದಿಗಳ ಪಾಲಿಗೆ ಕಾಮಧೇನುವಾಗಿದೆ. ಶ್ರೀ ಡಿಯೋಗ್ ಬಿ ಸಿದ್ದಿಯವರ ಅಧ್ಯಕ್ಷತೆಯಲ್ಲಿ ಮತ್ತು ಶ್ರೀ ಸಾವೇರ ಸಿದ್ದಿಯವರ ಕಾರ್ಯದರ್ಶಿತ್ವದಲ್ಲಿ ದಕ್ಷವಾಗಿ ನಡೆಯುತ್ತಿರುವ ಈ ಸಂಸ್ಥೆಯಲ್ಲಿ ಇನ್ನೂ ೧೨ ಜನ ಕಾರ್ಯಕಾರಿ ಸದಸ್ಯರಿದ್ದಾರೆ. ರಾಜ್ಯ ಸರ್ಕಾರದಿಂದ ಶೇರು ಹಣ(೧,೬೦,೦೦೦), ಸಾಲ (೭೯,೩೦೦), ವಿಶೇಷ ಘಟಕ ಸಾಲ(೭೨,೦೦೦) ಪಡೆದಿದೆ.'[೫]

ಈ ಸಂಸ್ಥೆಗಳಿಗೆ ದೊಡ್ಡ ನಗರಗಳಲ್ಲಿ ಆಧುನಿಕ ಮಾರಾಟ ಮಳಿಗೆಗಳನ್ನು ಸರ್ಕಾರ ಒದಗಿಸಿದರೆ ಇವುಗಳ ವ್ಯವಹಾರ ಹೆಚ್ಚಾಗುವುದರಲ್ಲಿ ಸಂಶಯವಿಲ್ಲ. ಹೀಗೆಯೇ ಯಲ್ಲಾಪುರದಲ್ಲಿರುವ ಸಿದ್ದಿಗಳ ಲ್ಯಾಂಪ್ಸ್ ಸೊಸೈಟಿಯು ಇನ್ನೂ ದೊಡ್ಡ ಪ್ರಮಾಣದಲ್ಲಿ ಅರಣ್ಯೋತ್ಪನ್ನ ಸಂಗ್ರಹ ಮಾಡಿ ಆರ್ಥಿಕ ಸ್ವಾವಲಂಬನೆಗೆ ನೆರವಾಗುತ್ತದೆ.

ಬೇಟೆ: ಬೇಟೆಯು ಸಿದ್ದಿಯರ ಪಾರಂಪರಿಕ ಕಸುಬಾಗಿದ್ದು ಸಿದ್ದಿಗಳು ಹುಟ್ಟು ಬೇಟೆಗಾರರು. ಶಬ್ದ, ಹೆಜ್ಜೆ ಗುರುತು, ಹಿಕ್ಕೆ, ಮುರಿದ ಗಿಡಮರಗಳು ಹಾಗೂ ವಾಸನೆಯಿಂದಲೇ ತಮ್ಮ ಬೇಟೆಯ ಅಂದಾಜು ಮಾಡಿ ಅದರಲ್ಲಿ ಯಶಸ್ವಿಯಾಗುತ್ತಿದ್ದರು. ಆದರೆ ಸರ್ಕಾರಗಳು ಬೇಟೆಯನ್ನು ನಿಷೇಧಿಸಿದ ನಂತರ ಅವರ ಈ ಕಸುಬು ಇದೀಗ ಕಣ್ಮರೆಯಾಗಿದೆಯೆಂದರೂ ತಪ್ಪೇನಿಲ್ಲ. ಸಣ್ಣ ಪುಟ್ಟ ಉಡ, ಮೊಲ, ಹಂದಿ ಇತ್ಯಾದಿಗಳನ್ನಷ್ಟೇ ಆಗೊಮ್ಮೆ ಈಗೊಮ್ಮೆ ಬೇಟೆಯಾಡುವ ಇವರಿಗೆ ಹಂದಿ ಬೇಟೆ ಸಿಕ್ಕ ದಿನ ಹಾಡಿಯಲ್ಲೆಲ್ಲಾ ಹಬ್ಬ. ಪ್ರಾಣಿಗಳ ಅಂಗಾಂಶಗಳಿಂದ ಹಾಗೂ ಸಸ್ಯಮೂಲಗಳಿಂದ ಅತ್ಯುತ್ತಮ ಔಷಧಿಗಳನ್ನು ಇವರು ತಯಾರಿಸಬಲ್ಲರು. ಆಲೋಪಥಿಯಲ್ಲಿ ಗುಣಪಡಿಸಲಾಗದ ಹಲವಾರು ರೋಗಗಳನ್ನು ಸಿದ್ದಿ ವೈದ್ಯರು ಗುಣಪಡಿಸಬಲ್ಲರೆಂಬುದನ್ನು ಸಿರಸಿಯ ಸ್ಕೋಡ್‌ವೇಸ್ ಸಂಸ್ಥೆಯ ಶ್ರೀ ವೆಂಕಟೇಶ್ ನಾಯಕ್ ತಿಳಿಸಿದರು.

ಇದರಿಂದ ಈ ಸಮುದಾಯಗಳ ಪಾರಂಪರಿಕ ಕಸುಬುಗಳ ನಾಶದ ಬವಣೆಯನ್ನು ಅರ್ಥ ಮಾಡಿ ಕೊಳ್ಳಬಹುದೆಂಬ ಉದ್ದೇಶದಿಂದ ಅರಣ್ಯ ಕಾನೂನುಗಳು, ಬುಡಕಟ್ಟು ಜನರ ಅರಣ್ಯ ಹಕ್ಕುಗಳು, ಅವುಗಳ ಜಾರಿಗೊಳಿಸುವಿಕೆಯ ವಿಳಂಬಗಳು, ತಾರತಮ್ಯ ಇತ್ಯಾದಿಗಳ ಬಗೆಗೆ ಉದಾಹರಣೆಗಳನ್ನು ನೀಡಲಾಗಿದೆ. ಇವು ಬೇರೆ ಪ್ರದೇಶಗಳಿಗೆ ಸಂಬಂಧಿಸಿದ್ದರೂ ಬುಡಕಟ್ಟುಗಳ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತವೆ. ಇವುಗಳಲ್ಲಿನ ವಿರೋಧಾಭ್ಯಾಸಗಳನ್ನು ಕೊನೆಯಲ್ಲಿ ಚರ್ಚಿಸಲಾಗಿದೆ.

ಮೂಲ ನಿವಾಸಿಗಳ ಹಕ್ಕುಪತ್ರ: 'ಬುಡಕಟ್ಟುಗಳಿಗೆ ಆಸರೆಯಾಗಿರುವ ಭಾರತದ ವಿಶಿಷ್ಟ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದ್ದು, ಇಲ್ಲಿನ ಪಶ್ಚಿಮ ಘಟ್ಟಗಳು ಜೇನುಕುರುಬರು, ಕೊರಗರು

ಮುಂತಾದ ಘೋಷಿತ ಬುಡಕಟ್ಟು ಸಮುದಾಯಗಳಲ್ಲದೆ ಎರವ, ಬೆಟ್ಟಕುರುಬ, ಸೋಲಿಗ, ಇರುಳಿಗ, ಅಸಲ, ಮಲೆಕುಡಿಯ, ಗೌಡ್ಲು, ಸಿದ್ದಿಗಳು ಇತ್ಯಾದಿ ೧೨ ಪ್ರಾಚೀನ ಮೂಲನಿವಾಸಿಗಳಿಗೆ ಆಸರೆ ನೀಡಿವೆ. ಇವರೆಲ್ಲ ಅರಣ್ಯಗಳನ್ನು ತಲೆಮಾರುಗಳಿಂದ ತಮ್ಮ ಸಾಂಪ್ರದಾಯಿಕ ಹಾಗೂ ಪಾರಂಪರಿಕ ನೆಲೆಗಳನ್ನಾಗಿಸಿ ಕೊಂಡು ಅನುಭವಿಸುತ್ತಾ ಬಂದಿದ್ದಾರೆ. ಇವರು ಮಾಡಿದ ತಪ್ಪೆಂದರೆ ಅರಣ್ಯಗಳಿಗೆ ಬೇಲಿ ಹಾಕಿಕೊಂಡು ತಮ್ಮ ಆಸ್ತಿಯೆಂದು ದಾಖಲೆ ಸೃಷ್ಟಿಸಿಕೊಳ್ಳದೆ ಇರುವುದು. ಈ ಒಂದೇ ಕಾರಣಕ್ಕಾಗಿ ಅರಣ್ಯ ರಕ್ಷಣಾ ಕಾಯ್ದೆ, ಭೂಸ್ವಾಧೀನ ಕಾಯ್ದೆ, ವನ್ಯಜೀವಿ ಸಂರಕ್ಷಣಾ ಕಾಯ್ದೆ, ಇತ್ಯಾದಿಗಳ ಹೆಸರಿನಲ್ಲಿ ಅವರನ್ನು ಅವರ ಮೂಲನೆಲೆಯಿಂದ ಒತ್ತಾಯದಿಂದ ಹೊರಹಾಕಿ ಅತಂತ್ರಗೊಳಿಸಿ ಕಡುಬಡತನಕ್ಕೆ ತಳ್ಳಲಾಗಿದೆ. ಬ್ರಿಟಿಷರ ವಸಾಹತುಶಾಹಿ ಧೋರಣೆಯನ್ನೇ ಸ್ವಾತಂತ್ರ್ಯ ನಂತರವೂ ಮುಂದುವರೆಸಿಕೊಂಡು ಬಂದ ನಮ್ಮ ಘನ ಸರ್ಕಾರ ಆದಿವಾಸಿಗಳಿಗಾದ ಚಾರಿತ್ರಿಕ ಅನ್ಯಾಯದ ಬಗ್ಗೆ ಕೊನೆಗೂ ಎಚ್ಚೆತ್ತುಕೊಂಡು, ಆದ ಅನ್ಯಾಯವನ್ನು ಸರಿಪಡಿಸಲು ಐತಿಹಾಸಿಕ ಕಾಯ್ದೆಯನ್ನು ಇತ್ತೀಚೆಗೆ ಜಾರಿಗೊಳಿಸಿದೆ.

ಭಾರತ ಸರ್ಕಾರ ೨೦೦೬ರಲ್ಲಿ 'ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ(ಅರಣ್ಯ ಹಕ್ಕುಗಳ ಮಾನ್ಯತಾ) ಅಧಿನಿಯಮ'ವನ್ನು ಜಾರಿಗೊಳಿಸಿ ೨೦೦೮ರಲ್ಲಿ ನಿಯಮಗಳನ್ನು ರೂಪಿಸಿದೆ.

ಈ ಹಿಂದಿನ ವಸಾಹತು ಧೋರಣೆಗೆ ಹೊರತಾದ ದೇಶೀಯ ಪಾರಂಪರಿಕ ನೆಲೆಗಳನ್ನು ಗೌರವಿಸಿ ಮಾಡಿರುವ ವಿಶೇಷ ಅಧಿನಿಯಮ ಇದಾಗಿದ್ದು, 'ಆದಿವಾಸಿಗಳಿಗಾದ ಐತಿಹಾಸಿಕ ಅನ್ಯಾಯ ಸರಿಪಡಿಸಲು ತಲೆ ತಲಾಂತರಗಳಿಂದ ಅರಣ್ಯದಲ್ಲೇ ವಾಸಿಸುತ್ತಿರುವ, ಆದರೆ ಹಕ್ಕುಗಳನ್ನು ದಾಖಲಿಸದ ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ಅರಣ್ಯಭೂಮಿಗೆ ಹಕ್ಕುಪತ್ರ ನೀಡಲು ಈ ಅಧಿನಿಯಮ ಅವಕಾಶ ನೀಡಿದೆ. ಅಲ್ಲದೆ ಸರ್ಕಾರದ ಅಭಿವೃದ್ಧಿ ಯೋಜನೆಗಳಿಂದ(ಅಣೆಕಟ್ಟುಗಳು, ಕಾರ್ಖಾನೆಗಳು, ಗಣಿಗಾರಿಕೆ, ರಕ್ಷಿತಾರಣ್ಯ, ರಾಷ್ಟ್ರೀಯ ಉದ್ಯಾನ ಇತ್ಯಾದಿ) ನಿರ್ವಸಿತರಾದ ಮೂಲನಿವಾಸಿಗಳಿಗೆ ಪರ್ಯಾಯ ನೆಲೆ ದೊರಕಿಸಲು ಹಕ್ಕುಪತ್ರ ನೀಡುವ ಉದ್ದೇಶವನ್ನು ಈ ಕಾಯ್ದೆ ಹೊಂದಿದೆ. ಇದರ ಮತ್ತೊಂದು ಬಹುಮುಖ್ಯ ಉದ್ದೇಶವೆಂದರೆ ಹಾಡಿ ಮಟ್ಟದ ಗ್ರಾಮ ಸಭೆಗಳಿಗಿರುವ ಅಧಿಕಾರವನ್ನು ಗೌರವಿಸಿ ಅವರವರ ಸಾಂಪ್ರದಾಯಿಕ ಗಡಿ ವ್ಯಾಪ್ತಿಯಲ್ಲಿ ಅರಣ್ಯಗಳನ್ನು ಹಾಗೂ ವನ್ಯಜೀವಿಗಳನ್ನು ರಕ್ಷಿಸುವ, ನಿರ್ವಹಿಸುವ ಹೊಣೆಗಾರಿಕೆಯನ್ನು ಗ್ರಾಮಸಭೆಗೆ ವಹಿಸಿ ಪರಿಸರ ಸಂರಕ್ಷಣೆಯಲ್ಲಿ ಜನ ಸಮುದಾಯಗಳನ್ನು ಕಾನೂನುಬದ್ಧವಾಗಿ ಭಾಗಿಯಾಗಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದೆ.'

ಕರ್ನಾಟಕದ ರಾಮನಗರ, ಚಾಮರಾಜನಗರ, ಮೈಸೂರು, ಕೊಡಗು, ದಕ್ಷಿಣಕನ್ನಡ, ಉತ್ತರಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹಾಡಿ ಮಟ್ಟದ ಅರಣ್ಯ ಹಕ್ಕುಗಳ ಸಮಿತಿಗಳನ್ನು ಗ್ರಾಮ ಪಂಚಾಯಿತಿಗಳು ರಚಿಸಿವೆ. ಉಪವಿಭಾಗದ ಮತ್ತು ಜಿಲ್ಲಾ ಮಟ್ಟದ ಅರಣ್ಯ ಹಕ್ಕುಗಳ ಸಮಿತಿಗಳನ್ನು ರಾಜ್ಯ ಸರ್ಕಾರ ರಚಿಸಿದೆ.

ಮೂಲನಿವಾಸಿ ಕುಟುಂಬಗಳು 'ನಮೂನೆ-ಬಿ'ಯಲ್ಲಿ ಅರಣ್ಯಾಧಾರಿತ ಕೃಷಿ ಭೂಮಿಗಾಗಿ ಮತ್ತು ಪಾರಂಪರಿಕ ಅರಣ್ಯಗಳ ಮೇಲಿನ ಹಕ್ಕಿಗಾಗಿ ಗ್ರಾಮಸಭೆ ಮೂಲಕ ಠರಾವು ಮಾಡಿ ಪ್ರತಿ ಕುಟುಂಬಕ್ಕೆ ೧೦ ಎಕರೆ ಅರಣ್ಯ ಭೂಮಿ, ವಾಸದ ನೆಲೆಗಳ ಮೇಲಿನ ಹಕ್ಕು, ಕಾಡಿನ ಕಿರು ಸಂಪನ್ಮೂಲಗಳ ಮೇಲಿನ ಹಕ್ಕು ಇತ್ಯಾದಿಗಳನ್ನು ಅರಣ್ಯ ಹಕ್ಕುಗಳ ಕಾಯಿದೆ ಗೌರವಿಸುತ್ತದೆ.

ಆದರೆ ದೇಶದ ಅತ್ಯುನ್ನತ ಸಂಸ್ಥೆಯಾದ ಲೋಕಸಭೆ ಪಾಸು ಮಾಡಿದ ಇಂತಹ ಅತ್ಯುತ್ತಮ ಕಾಯ್ದೆಯನ್ನು ಅಷ್ಟೇ ಪ್ರಾಮಾಣಿಕವಾಗಿ, ದೃಢನಿಶ್ಚಯದಿಂದ ಜಾರಿಗೊಳಿಸುವ ಜವಾಬ್ದಾರಿ ರಾಜ್ಯ ಹಾಗೂ ಪ್ರಾದೇಶಿಕ ಸರ್ಕಾರಗಳ ಮೇಲಿದೆ. ಭರತವರ್ಷದ ದೌರ್ಭಾಗ್ಯವೆಂದರೆ ಈ ಐತಿಹಾಸಿಕ ಕಾನೂನು ಜಾರಿಗೆ ಬಂದು ೩ ವರ್ಷಗಳೇ ಕಳೆದರೂ ಮೂಲನಿವಾಸಿಗಳಿಗೆ ವೈಯಕ್ತಿಕ ಹಾಗೂ ಸಾಮೂಹಿಕ ಹಕ್ಕುಪತ್ರ ನೀಡಲು ನಿರ್ಲಕ್ಷ್ಯ ತೋರಲಾಗುತ್ತಿದೆ. ಮೈಸೂರು ಜಿಲ್ಲೆಯೊಂದರಲ್ಲೇ ಉಪವಿಭಾಗ ಅರಣ್ಯ ಸಮಿತಿ ನಿಯಮಗಳನ್ನು ಗಾಳಿಗೆ ತೂರಿ ೪೫೦೦ ಅರ್ಜಿಗಳನ್ನು ತಿರಸ್ಕರಿಸಿದ ಆಪಾದನೆಗಳಿವೆ. ಗ್ರಾಮಸಭೆ ಠರಾವುಗಳನ್ನು ಕಡೆಗಣಿಸಿ ಕಾನೂನು ಉಲ್ಲಂಘಿಸಲಾಗಿದೆ. ಈ ಸಂಬಂಧ ಜಿಲ್ಲಾ ಅರಣ್ಯ ಹಕ್ಕುಗಳ ಸಮಿತಿಗೆ ೧೯೦೦ ಮೇಲ್ಮನವಿಗಳನ್ನು ಸಲ್ಲಿಸಲಾಗಿದೆ. ಅಲ್ಲೂ ಕೂಡ ಸಾಕಷ್ಟು ವಿಳಂಬವಾಗುತ್ತಿದೆ. ಇದರಿಂದಾಗಿ ಈ ಜನ ನಿರಾಶರಾಗಿ ಗುಳೆ ಹೋಗುತ್ತಿರುವುದು ಕಂಡುಬರುತ್ತಿದೆ. ಈ ಸಂಬಂಧ ಕೊಡಗು, ಮೈಸೂರು, ಚಾಮರಾಜನಗರಗಳಲ್ಲಿ ಪ್ರತಿಭಟನೆ ನಡೆದಿದೆ.

ರಾಜ್ಯ ಸರ್ಕಾರಗಳು ಅರಣ್ಯ ರಕ್ಷಣಾ ಕಾಯಿದೆ, ವನ್ಯಜೀವಿ ಸಂರಕ್ಷಣಾ ಕಾಯ್ದೆ ಇತ್ಯಾದಿಗಳನ್ನು ಜಾರಿಗೊಳಿಸುವಲ್ಲಿ ತೋರಿಸಿದ ಉತ್ಸಾಹವನ್ನು ಅರಣ್ಯ ಹಕ್ಕುಗಳ ಮಾನ್ಯತಾ ಕಾಯ್ದೆ ಜಾರಿಗೊಳಿಸಲು ತೋರುತ್ತಿಲ್ಲ. ಇದರ ಜಾರಿಗೆ ಇರುವ ತೊಂದರೆಗಳೇನು ಎಂಬುದೇ ತಿಳಿಯುತ್ತಿಲ್ಲ. ಶತಮಾನಗಳ ಕಾಲ ಅನ್ಯಾಯ, ತುಳಿತಕ್ಕೊಳಗಾದ ಈ ಮೂಲನಿವಾಸಿಗಳ ಶಾಪ ಕಳೆಯಲು ಬಂದ ಈ ಕಾಯ್ದೆ ಎಂಬ ವರ ಅಧಿಕಾರಶಾಹಿಗಳೆಂಬ ಭಸ್ಮಾಸುರರ ಕೈಗೆ ಸಿಕ್ಕು ಬೂದಿಯಾಗುವ ಮೊದಲೇ ಸರ್ಕಾರ ಎಚ್ಚೆತ್ತು ಆದಿವಾಸಿಗಳ ಹಕ್ಕುಗಳನ್ನು ಗೌರವಿಸಿ ಗ್ರಾಮಸಭೆಗಳ ಠರಾವನ್ನು ಗೌರವಿಸಿ ನ್ಯಾಯ ಒದಗಿಸಬೇಕಾಗಿದೆ. ಏಕೆಂದರೆ ಈ ಪ್ರಾಚೀನ ಬುಡಕಟ್ಟು ಸಮುದಾಯಗಳೇ ಈ ನೆಲದ 'ಮೂಲ'ನಿವಾಸಿಗಳು ಹಾಗೂ ಹಕ್ಕುದಾರರಾಗಿದ್ದು, ಅವರ ಪ್ರಕೃತಿ ಆರಾಧನೆ, ತಾಳ್ಮೆ, ಸ್ವಾವಲಂಬನೆಯ ಸಂಸ್ಕೃತಿಯೇ ಭಾರತದ ಮೂಲ ಸಂಸ್ಕೃತಿಯಾಗಿದೆ.'[೬]

ಇಲ್ಲಿ ಅರಣ್ಯ ಹಕ್ಕು ಮಾನ್ಯತಾ ಕಾಯ್ದೆಯಡಿ ಚಾಮರಾಜನಗರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ 'ಕಿರು ಅರಣ್ಯ ಉತ್ಪನ್ನ'ಕ್ಕೆ ಅನುಮತಿ ದೊರೆಯದ ಕಾರಣ ಗಿರಿಜನರು ಉದ್ಯೋಗ ಹುಡುಕಿಕೊಂಡು ವಲಸೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿರುವುದಕ್ಕೆ ವಿವೇಚಿಸಲಾಗಿದೆ.

ಅನುಸೂಚಿತ ಬುಡಕಟ್ಟುಗಳ ಮತ್ತು ಇತರೇ ಪಾರಂಪರಿಕ ಅರಣ್ಯ ವಾಸಿಗಳ(ಅರಣ್ಯ ಹಕ್ಕು ಮಾನ್ಯತೆ) ಕಾಯ್ದೆ-೨೦೦೬ ಮತ್ತು ನಿಯಮಗಳು-೨೦೦೮ರ ಅನ್ವಯ 'ಗಿರಿಜನರಿಗೆ ಅವರು ವಾಸಿಸುವ ಅರಣ್ಯ ಪ್ರದೇಶದಲ್ಲೇ ಮೂಲ ಸೌಕರ್ಯ ಒದಗಿಸಬೇಕು.' ಕಾಯ್ದೆಯ ಅಧ್ಯಾಯ ೨ರ

ಅನುಚ್ಛೇದ–೩(ಸಿ)ದಲ್ಲಿ ಕಿರು ಅರಣ್ಯ ಉತ್ಪನ್ನ ಸಂಗ್ರಹ ಕುರಿತು ಉಲ್ಲೇಖಿಸಲಾಗಿದೆ. ಆದರೆ ಇಲ್ಲಿಯವರೆಗೆ ಭೂ ಒಡೆತನ ಮಾತ್ರವೇ ದಕ್ಕಿದ್ದು ೧೩೮೭ ಗಿರಿಜನರಿಗೆ ಹಕ್ಕುಪತ್ರ ವಿತರಿಸಲಾಗಿದೆ. ಅರಣ್ಯ ವಾಸಿಗಳ ಹಕ್ಕಿನ ಬಗ್ಗೆ ಸ್ಪಷ್ಟಪಡಿಸಿದ್ದರೂ ಕೂಡ ಅನುಮತಿ ನೀಡಲು ಜಿಲ್ಲಾಧಿಕಾರಿ ಮಟ್ಟದ ಜಿಲ್ಲಾ ಸಮಿತಿ ಹಿಂದೇಟು ಹಾಕಿದೆ.

ಹಿಂದೆ ಬಿ ಆರ್ ಟಿ ಹುಲಿ ರಕ್ಷಿತಾರಣ್ಯ, ಬಂಡಿಪುರ ರಾಷ್ಟ್ರೀಯ ಉದ್ಯಾನ ಹಾಗೂ ಕಾವೇರಿ ವನ್ಯಜೀವಿ ವಿಭಾಗದ ವ್ಯಾಪ್ತಿಯಲ್ಲಿ ಕಿರು ಅರಣ್ಯ ಉತ್ಪನ್ನ ಸಂಗ್ರಹಕ್ಕೆ ಅನುಮತಿ ದೊರಕಿತ್ತು. ಜೇನುತುಪ್ಪ, ಮಾಗಳಿ ಬೇರು, ಹೊಂಗೆ ಕಾಯಿ, ಮುತ್ತುಗದ ಎಲೆಗಳು, ಮರಪಾಚಿ, ಅಂಟುವಾಳ, ನೆಲ್ಲಿಕಾಯಿ, ಸೀಗೇಕಾಯಿ, ಕಾಡು ಶುಂಠಿ ಸೇರಿದಂತೆ ೨೮ ಬಗೆಯ ಉತ್ಪನ್ನಗಳನ್ನು ಗಿರಿಜನರು ಸಂಗ್ರಹಿಸಿ ಶೇ. ೬೦ರಷ್ಟು ಆದಾಯ ಪಡೆಯುತ್ತಿದ್ದರು. ಸರ್ಕಾರವೇ ಸ್ಥಾಪಿಸಿದ 'ಲ್ಯಾಂಪ್ಸ್' ಸಹಕಾರಿ ಸಂಸ್ಥೆಗೆ ವಾರ್ಷಿಕ ರೂ. ೧.೫೦ ಕೋಟಿ ವಹಿವಾಟು ನೀಡುತ್ತಿದ್ದರು. ಇದರಲ್ಲಿ ಲ್ಯಾಂಪ್ಸ್ ಹಾಗೂ ಗಿರಿಜನರು ಆದಾಯವನ್ನು ಸಮಾನವಾಗಿ ಹಂಚಿಕೆ ಮಾಡಿಕೊಳ್ಳುತ್ತಿದ್ದರು.

ಆದರೆ ೨೦೦೩ರಲ್ಲಿ 'ವನ್ಯಜೀವಿ ಸಂರಕ್ಷಣಾ ಕಾಯ್ದೆ'ಗೆ ತಂದ ತಿದ್ದುಪಡಿಯಿಂದ 'ಅಭಯಾರಣ್ಯದಲ್ಲಿ ಹಣಗಳಿಕೆ ಉದ್ದೇಶಕ್ಕಾಗಿ ಕಿರು ಅರಣ್ಯ ಉತ್ಪನ್ನ ಸಂಗ್ರಹಿಸುವಂತಿಲ್ಲ.' ೨೦೦೪ರಲ್ಲಿ ಉತ್ಪನ್ನ ಸಂಗ್ರಹವನ್ನು ಸಂಪೂರ್ಣ ನಿಷೇಧಿಸಲಾಯಿತು. ಬಳಿಕ ೨೦೦೬ರಲ್ಲಿ ಕೇಂದ್ರ ಸರ್ಕಾರ 'ಅರಣ್ಯ ಹಕ್ಕು ಮಾನ್ಯತಾ ಕಾಯ್ದೆ' ಜಾರಿಗೊಳಿಸಿ ಗಿರಿಜನರಿಗೆ ಸೌಲಭ್ಯ ಕಲ್ಪಿಸುವ ಭರವಸೆ ನೀಡಿತು. ಆದರೆ ಕಾಯ್ದೆ ಜಾರಿಗೊಂಡಿದ್ದರೂ ಜಿಲ್ಲಾ ಮಟ್ಟದಲ್ಲಿ ಅದರ ವ್ಯಾಖ್ಯಾನ ಹಾಗೂ ಜಾರಿಗೊಳಿಸುವಿಕೆ ಆಗಿಲ್ಲದೇ ಇರುವುದರಿಂದ ಗಿರಿಜನರು ಹೊಟ್ಟೆಪಾಡಿಗಾಗಿ ಕಾಫಿ ತೋಟ ಮುಂತಾದ ಕಡೆ ವಲಸೆ ಹೋಗುವುದು ಅನಿವಾರ್ಯವಾಗಿದೆ. MGNAREGA ಯೋಜನೆಯಡಿ ಕೂಡ ಗಿರಿಜನರಿಗೆ ಕೆಲಸ ನೀಡುವ ಕಾರ್ಯ ಸರಿಯಾಗಿ ನಡೆಯುತ್ತಿಲ್ಲ. ಬಿಳಿಗಿರಿರಂಗನ ಬೆಟ್ಟದ ಸೋಲಿಗರು ಈ ಯೋಜನೆಯಡಿ ಕೆಲಸ ಮಾಡಿದರೂ ಕಾಮಗಾರಿ ವಿವರ ಮಾಹಿತಿ ನಿರ್ವಹಣಾ ವ್ಯವಸ್ಥೆಯಡಿ ದಾಖಲಾಗದೆ ಇರುವುದರಿಂದ, ಸೋಲಿಗರಿಗೆ ಬರಬೇಕಾದ ರೂ.೪.೪೩ ಲಕ್ಷಗಳು ಇನ್ನೂ ಪಾವತಿಯಾಗಿಲ್ಲ.

ಜಿಲ್ಲಾ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದ ಕಾರ್ಯದರ್ಶಿ ಶ್ರೀ ಸಿ. ಮಾದೇಗೌಡರು ಹೇಳುವಂತೆ ಈಗಾಗಲೇ ಉಪವಿಭಾಗ ಮಟ್ಟದ ಸಮಿತಿ ಸಭೆಯಲ್ಲಿ ಗಿರಿಜನರಿಗೆ ಕಿರು ಅರಣ್ಯ ಉತ್ಪನ್ನ ಸಂಗ್ರಹಕ್ಕೆ ಅನುಮತಿ ನೀಡುವ ಬಗ್ಗೆ ನಿರ್ಧರಿಸಲಾಗಿದ್ದು, ಈ ಕುರಿತು ಜಿಲ್ಲಾ ಮಟ್ಟದ ಸಮಿತಿಗೆ ವರದಿ ಸಲ್ಲಿಸಲಾಗಿದ್ದರೂ ಇನ್ನೂ ಅನುಮತಿ ಮಾತ್ರ ಮರೀಚಿಕೆಯಾಗಿದೆ. ಅಲ್ಲದೇ ಅರಣ್ಯ ಹಕ್ಕು ಮಾನ್ಯತಾ ಕಾಯ್ದೆಯಡಿ ಶಿಕ್ಷಣ, ಆರೋಗ್ಯ ಸೇವೆ ಇತ್ಯಾದಿಗಳನ್ನೂ ಕಲ್ಪಿಸಬೇಕೆಂಬುದು ಗಿರಿಜನರ ಹಾರೈಕೆಯಾಗಿದೆ.'[೭]

ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕಿನ ರಂಗಯ್ಯನದುರ್ಗ ಕುರುಚಲು ಅರಣ್ಯ ಪ್ರದೇಶ ಅನೇಕ ಔಷಧಿ ಸಸ್ಯಗಳ ಆಗರವಾಗಿದ್ದು, ಅಳಿವಿನಂಚಿನ 'ಕೊಂಡುಕುರಿ'ಯಂತಹ ಅಪರೂಪದ

ಪ್ರಾಣಿಸಂಕುಲವನ್ನು ಹೊಂದಿದ್ದು, ಮಾನವನ ದುರಾಸೆ, ಅರಣ್ಯ ಇಲಾಖೆಯ ಶಾಮೀಲು, ಸರ್ಕಾರಗಳ ನಿರ್ಲಕ್ಷ್ಯದಿಂದಾಗಿ ಇಂದು ಲೂಟಿಕೋರರ ದಾಳಿಗೆ ತುತ್ತಾಗಿದೆ. ೮೦ ಚ.ಕಿ.ಮೀ ವಿಸ್ತೀರ್ಣದ ಈ ಪ್ರದೇಶದಲ್ಲಿ ಶ್ರೀಗಂಧ, ಹೊಳೆ ಮತ್ತಿ, ಕಮರಾ, ದಿಂಡಗ, ಕಾಚು, ಮರಾಲೆ, ಪಚಾಲಿ, ಜಾಗೆ, ಹೊನ್ನೆ, ನಗರಿ, ಬೆಟ್ಟದ ತಾವರೆಗಳಿದ್ದು, ಔಷಧಿಸಸ್ಯಗಳಾದ ಬೆಟ್ಟದ ನೆಲ್ಲಿ, ಕಾಡುಕೊತ್ತಂಬರಿ, ಮಧುನಾಶಿನಿ, ಮೆಕ್ಕೆಗಿಡ(ಹೃದ್ರೋಗಕ್ಕೆ ದಿವ್ಯ ಔಷಧಿ), ಕಾಡು ಈರುಳ್ಳಿ(ಪಶು ಚಿಕಿತ್ಸೆಗೆ ಸೂಕ್ತ), ಆಲಿಕಾ, ಉಳಿಕಾ, ತೊಟ್ಲುಕಾಯಿ, ಅಳಿಲುಕಾಯಿ, ಧೂಪ ಇತ್ಯಾದಿಗಳಲ್ಲದೆ ಅಪರೂಪದ 'ಲೆಮೆನ್ ಗ್ರಾಸ್'ಗಳು ಸಮೃದ್ಧವಾಗಿದ್ದವು.

ನಕ್ಷತ್ರ ಆಮೆ, ದರವಾಯಿನದಂತಹ ಅಪರೂಪದ ಪ್ರಾಣಿಗಳಿರುವ ಇಲ್ಲಿ, ಕಳೆದೆರಡು ವರ್ಷಗಳಿಂದ ಅರಣ್ಯ ಇಲಾಖೆ ಕಾವಲುಗಾರರಿಲ್ಲದಿರುವುದರಿಂದ ರಾತ್ರೋ ರಾತ್ರಿ ಪ್ರಾಣಿಗಳ ಬೇಟೆ ಹಾಗೂ ಹಗಲಿನಲ್ಲಿ ರಾಜಾರೋಷವಾಗಿ ವೃಕ್ಷ ಸಂಹಾರ ಅವ್ಯಾಹತವಾಗಿ ನಡೆಯುತ್ತಿದೆ. ಇಟ್ಟಿಗೆ ಭಟ್ಟಿ, ಸುಣ್ಣದ ಭಟ್ಟಿ ಹಾಗೂ ಇತರ ವಾಣಿಜ್ಯ ಉದ್ದೇಶಗಳಿಗೆ ಈಗಾಗಲೇ ಸುಮಾರು ೫೦೦೦ ಹೆಕ್ಟೇರ್ ಅರಣ್ಯ ನಾಶವಾಗಿದೆ ಎಂದು ಕೊರಗುವ ಪರಿಸರವಾದಿಗಳಿಗೆ ಬಹುರಾಷ್ಟ್ರೀಯ ಕಂಪನಿಗಳ ಬೃಹತ್ ಗಾಳಿಯಂತ್ರಗಳಿಂದಾಗಿ ಅಳಿದುಳಿದಿರುವ ಅರಣ್ಯವೂ ಕಣ್ಮರೆಯಾಗುವುದಕ್ಕೆ ಹೆಚ್ಚು ಕಾಲಬೇಕಿಲ್ಲ ಎಂಬ ಭಯ ಕಾಡುತ್ತದೆ.'[೮]

ಮೇಲಿನ ೨ ಮತ್ತು ೩ನೇ ಉದಾಹರಣೆಗಳಲ್ಲಿರುವ ವಿಪರ್ಯಾಸವನ್ನು ಗಮನಿಸಬೇಕು. ಆದಿವಾಸಿಗಳು ತಲೆತಲಾಂತರಗಳಿಂದ ಅರಣ್ಯದಲ್ಲೇ ವಾಸಿಸುತ್ತಿದ್ದು, ಭೂಮಿಯ ಮೂಲ, ನೈಜ ವಾರಸುದಾರರಾಗಿದ್ದಾರೆ. ಆದರೂ ಅವರು ತಮ್ಮ ಜೀವನೋಪಾಯಕ್ಕಾಗಿ ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಲು ನೂರೆಂಟು ಇಲಾಖೆಗಳು, ನೂರೆಂಟು ಕಾನೂನುಗಳು ಅಡ್ಡಿಯಾಗಿವೆ. ಇತ್ತೀಚಿನ ಅರಣ್ಯ ಹಕ್ಕು ಕಾಯಿದೆ ಜಾರಿಯಾದ ನಂತರವೂ ಅವರ ನ್ಯಾಯಬದ್ಧ ಅಧಿಕಾರ ನೀಡಲು ಸರ್ಕಾರ ಹಿಂಜರಿಯುತ್ತಿದೆ. ಇದರ ವಿರುದ್ಧ ಹೋರಾಡಲಾಗದೇ ಆದಿವಾಸಿಗಳು ಅತಂತ್ರರಾಗಿದ್ದು, ಹತಾಶೆಯಿಂದ ಕಾಡಿನಿಂದ ನಾಡಿಗೆ ವಲಸೆ ಬರುತ್ತಿದ್ದಾರೆ.

ಆದರೆ ವಿಪರ್ಯಾಸವೆಂದರೆ ಜೀವನೋಪಾಯದ ಹಲವಾರು ಮಾರ್ಗಗಳಿದ್ದೂ ಕೂಡಾ, ದುರಾಸೆಯಿಂದ, ಇರುವ ಅಲ್ಪಸ್ವಲ್ಪ ಅರಣ್ಯವನ್ನು, ಅದರ ಪ್ರಾಣಿ ಮತ್ತು ಔಷಧ ಸಂಪತ್ತಿನೊಂದಿಗೆ ನಾಶ ಮಾಡುತ್ತಿರುವ ನಾಗರಿಕ ಜನರ ಮೇಲೆ ಅರಣ್ಯ ಇಲಾಖೆಯಾಗಲೀ, ಪೊಲೀಸ್ ಇಲಾಖೆಯಾಗಲೀ, ಕಾನೂನುಗಳಾಗಲೀ ಏನನ್ನೂ ಮಾಡುತ್ತಿಲ್ಲ. ಇವರು ಮಾಡುತ್ತಿರುವುದು ಅನ್ಯಾಯವೇ ಆದರೂ ಅವರು ಜಾಣತನದಿಂದ ತಪ್ಪಿಸಿಕೊಳ್ಳುತ್ತಿದ್ದರೆ, ಇನ್ನೊಂದು ಕಡೆ ಆದಿವಾಸಿಗಳ ಪರವಾಗಿ ಕಾನೂನು ಪಾಸು ಮಾಡಿದ್ದರೂ ಕೂಡ ಅದನ್ನು ಜಾರಿಗೆ ತರಲು, ಅವರ ಹಕ್ಕನ್ನು ಅವರಿಗೆ ನೀಡಲು ನಾಗರಿಕ ಜಗತ್ತು ಮುಂದಾಗುತ್ತಿಲ್ಲ.

ಈ ತಾರತಮ್ಯ ಏಕೆ? ಜೀವನೋಪಾಯಕ್ಕಾಗಿ ಅರಣ್ಯ ಉತ್ಪನ್ನ ಸಂಗ್ರಹಿಸುವುದು ತಪ್ಪು, ಆದರೆ ದುರಾಸೆಗಾಗಿ ಗಿಡ, ಮರ, ಪ್ರಾಣಿಗಳನ್ನು ಸಂಹರಿಸುವುದು ಸರಿ ಎಂದಾದರೆ, ನಾಡಿನ

ನ್ಯಾಯಕ್ಕಿಂತ ಕಾಡಿನ ನ್ಯಾಯವೇ ಒಳ್ಳೆಯದಲ್ಲವೇ? ಈ ದಿಸೆಯಲ್ಲಿ ನಾವು, ನಮ್ಮ ಬುಡಕಟ್ಟು ಅಧ್ಯಯನ ವಿಭಾಗ ಹಾಗೂ ವಿಶ್ವವಿದ್ಯಾಲಯ ಏನನ್ನು ಮಾಡಬಹುದು ಎನ್ನುವುದು ಚಿಂತನಾರ್ಹ.

ಈ ಎಲ್ಲ ಹಿನ್ನೆಲೆಯಲ್ಲಿ ಸಿದ್ದಿಗಳ ಜೊತೆ ಒಡನಾಡಿ, ಸಮೀಕ್ಷೆ ನಡೆಸಿ ಕಂಡುಕೊಂಡ ಅವರ ಆರ್ಥಿಕತೆಯ ವಿವಿಧ ಆಯಾಮಗಳನ್ನು ಅಂಕಿಅಂಶ, ಕೋಷ್ಟಕ ಮತ್ತು ಚಿತ್ರಗಳ ಮೂಲಕ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಈಗಾಗಲೇ ತಿಳಿಸಿದಂತೆ ಈ ಅಧ್ಯಯನ ಸಾಂಪ್ರದಾಯಿಕ ಅಥವಾ ಸಾಮಾನ್ಯ ಆರ್ಥಿಕ ವಿಶ್ಲೇಷಣೆಗಳನ್ನು ಅನುಸರಿಸದೆ ಬುಡಕಟ್ಟುಗಳ ಮೂಲ ಆರ್ಥಿಕತೆಯ ಸಂತೋಷ, ಆನಂದ, ಜೀವನ ಪ್ರೀತಿ, ಮೌಲ್ಯಗಳು, ನಂಬಿಕೆಗಳು, ಹಂಚಿ ಉಣ್ಣುವ ವೈಶಾಲ್ಯತೆ, ಅಸಂಗ್ರಹದ ಕಲ್ಪನೆ ಇತ್ಯಾದಿ ಅಮೂರ್ತ ಅಂಶಗಳು ಮತ್ತು ಆದರ್ಶಗಳಿಗೆ ಒತ್ತು ನೀಡುವ ಅಧ್ಯಯನವಾಗಿದೆ. ಆದರೆ ಕೇವಲ ಭಾವನಾತ್ಮಕ ಹಾಗೂ ಗುಣಾತ್ಮಕ ಅಂಶಗಳಿಂದಷ್ಟೇ ಜೀವನ ನಡೆಸಲಾಗದು. ಅದರಲ್ಲೂ ಜಾಗತೀಕರಣದ ಈ ಕಾಲಘಟ್ಟದಲ್ಲಿ ಗುಣಕ್ಕಿಂತಲೂ ಪರಿಮಾಣಕ್ಕೇ ಆದ್ಯತೆ ಇರುವುದರಿಂದ, ಸಿದ್ದಿಗಳ ಪ್ರಸ್ತುತ ಆರ್ಥಿಕ ಪರಿಸ್ಥಿತಿಯ ಸಮಗ್ರ ಚಿತ್ರಣ ನೀಡಲು ಅಂಕಿ ಅಂಶಗಳನ್ನು ವಿಶ್ಲೇಷಿಸಲೇಬೇಕಾದ ಅವಶ್ಯಕತೆ ಮತ್ತು ಅನಿವಾರ್ಯತೆಯಿಂದಾಗಿ ಸಮೀಕ್ಷೆಯಲ್ಲಿ ದೊರೆತ ಪರಿಮಾಣಾತ್ಮಕ ಅಂಶಗಳನ್ನು ಇಲ್ಲಿ ಮಂಡಿಸಲಾಗಿದೆ.

ಸಮುದಾಯವೆಂದರೇನೇ ಒಂದು ನಿರ್ದಿಷ್ಟ ಪ್ರದೇಶದಲ್ಲಿ ನೆಲೆಸಿರುವ ಸಮಾನ ಧರ್ಮ, ಜಾತಿ, ಆಚರಣೆ, ನಂಬಿಕೆಗಳಿರುವ ಜನರ ಗುಂಪು ಎನ್ನಬಹುದು. ಹೀಗಾಗಿ ಅವರ ಜನಸಂಖ್ಯೆ, ಪ್ರಾದೇಶಿಕ ಹಂಚಿಕೆ, ಲಿಂಗವಾರು ಪ್ರಮಾಣಗಳನ್ನು ವಿಶ್ಲೇಷಿಸುವುದು ಅಗತ್ಯ. ಬುಡಕಟ್ಟುಗಳ ಸಾಮಾನ್ಯ ಸಮಸ್ಯೆಯೆಂದರೆ ಅವರ ಜನಸಂಖ್ಯೆಯ ಬಗ್ಗೆ ನಿಖರ ಅಂಕಿ ಅಂಶಗಳು ದೊರೆಯುವುದಿಲ್ಲ. ಸರ್ಕಾರದ ಲೆಕ್ಕಕ್ಕೂ ವಾಸ್ತವಿಕತೆಗೂ ಸಾಮಾನ್ಯವಾಗಿಯೇ ಬಹಳಷ್ಟು ವ್ಯತ್ಯಾಸಗಳಿರುತ್ತವೆ. ದಟ್ಟವಾದ ಕಾಡಿನ ನಡುವೆ, ರಸ್ತೆಗಳಲ್ಲದ ರಸ್ತೆಗಳಲ್ಲಿ, ವಾಹನ ಸಂಚಾರವೇ ವಿರಳವಾದ, ಸುರಿಯುವ ಮಳೆಯ, ಕಾಡುವ ಇಂಬಳಗಳ ನಡುವೆ ಅಲ್ಲೊಂದು ಇಲ್ಲೊಂದಿರುವ ಮನೆಗಳನ್ನು ಹುಡುಕಿಕೊಂಡು ಹೋಗಿ ಲೆಕ್ಕ ಹಾಕುವುದು ಸಂಬಳಕ್ಕಾಗಿ ಕೆಲಸ ಮಾಡುವ ಸರ್ಕಾರಿ ನೌಕರರಿಂದಾಗದ ಕೆಲಸ. ಸರ್ಕಾರಕ್ಕೂ ಕಡಿಮೆ ಸಂಖ್ಯೆ ತೋರಿಸಿ ಎಲ್ಲರಿಗೂ ಸೌಲಭ್ಯ ಒದಗಿಸಿದ್ದೇವೆಂದು ಹೇಳಿಕೊಳ್ಳುವ ಅನಿವಾರ್ಯತೆ. ಇನ್ನು ಎನ್.ಜಿ.ಓ.ಗಳಿಗೆ ಇರುವುದಕ್ಕಿಂತಲೂ ಹೆಚ್ಚು ಜನರನ್ನು ತೋರಿಸಿ ಹೆಚ್ಚಿನ ಅನುದಾನ ಪಡೆಯುವ ಅನಿವಾರ್ಯತೆ. ಈ ನಡುವೆ ಆಗೊಮ್ಮೆ ಈಗೊಮ್ಮೆ ಕ್ಷೇತ್ರಕಾರ್ಯಕ್ಕಾಗಿ ತೆರಳುವ ಸಂಶೋಧಕರಿಗೆ, ದಿನ ಪೂರ್ತಿ ಕೆಲಸಕ್ಕೆ ಹೋಗುವ, ರಾತ್ರಿಗಳಲ್ಲಿ ಬೇಟೆಗೂ ಹೋಗುವ, ಹೊಟ್ಟೆ ಪಾಡಿಗಾಗಿ ವಲಸೆ ಹೋಗುವ ನಿರಕ್ಷರ ಜನರಿಂದ ಮಾಹಿತಿ ಹೊರತೆಗೆಯುವುದು ತುಂಬಾ ಸಂಕೀರ್ಣ ಕೆಲಸವಾಗುತ್ತದೆ. ಮೇಲಾಗಿ ಪ್ರತಿಯೊಬ್ಬರಿಗೂ ಸಿಗುವ ಮಾಹಿತಿ ಭಿನ್ನ ಭಿನ್ನವಾಗಿದ್ದು ಪ್ರತಿಯೊಬ್ಬರಿಗೂ ತಮ್ಮದೇ ಅಧಿಕೃತ ಅಂಕಿ ಅಂಶವೆಂಬ ಹೆಮ್ಮೆ ಬೇರೆ. ಆಯಾ ಜನಾಂಗದ ಮುಖಂಡರಿಗೆ ತಮ್ಮದು ದೊಡ್ಡ ಸಮುದಾಯ, ಸಾಕಷ್ಟು ಮತದಾರರಿರುವ ಸಂಘಟಿತ ಗುಂಪಾಗಿದ್ದು ತಮ್ಮನ್ನು ಕಡೆಗಣಿಸುವಂತಿಲ್ಲವೆಂಬ ಸಂಕೇತ ನೀಡುವ ಬಯಕೆ. ಇತರ ಅಂಕಿ

ಅಂಶಗಳನ್ನು ಪಡೆಯುವಾಗಲೂ ಇದೇ ರೀತಿಯ ಸಮಸ್ಯೆಗಳು ಕಂಡುಬರುವುದು ಸಹಜ. ಹೀಗಾಗಿ ಇಲ್ಲಿನ ಅಂಕಿ ಅಂಶದ ಆಧಾರದ ಮೇಲಿನ ತೀರ್ಮಾನಗಳು 'ಪ್ರಸ್ತುತ ಸಮೀಕ್ಷೆಗೆ ಸಂಬಂಧಿಸಿದಂತೆ ಕಂಡುಕೊಂಡ ಅಂಶಗಳ ಆಧಾರದ ಮೇಲೆ ತೆಗೆದುಕೊಂಡ ತೀರ್ಮಾನಗಳು' ಎಂಬ ಹೇಳಿಕೆಯೊಂದಿಗೆ ಪರಿಗಣಿಸಬೇಕೆಂದು ಅರಿಕೆ ಮಾಡುತ್ತೇನೆ. ಅರ್ಥಶಾಸ್ತ್ರದ ಸಿದ್ಧಾಂತಗಳಲ್ಲಿ ಸಾಮಾನ್ಯವಾಗಿ ಕಂಡುಬರುವ 'ಇತರ ಸ್ಥಿತಿಗತಿಗಳು ಸ್ಥಿರವಾಗಿದ್ದಾಗ' ಎಂಬ ಚೌಕಟ್ಟನ್ನು ಅಥವಾ ಊಹೆಯನ್ನು ಇಲ್ಲಿ ಪರಿಗಣಿಸಬಹುದಾಗಿದೆ.

೨೦೧೧ರ ಜನಗಣತಿಯ ಅಂತರ್ಜಾಲದ ಅಧಿಕೃತ ಮಾಹಿತಿಯಂತೆ ಉತ್ತರಕನ್ನಡ ಜಿಲ್ಲೆಯ ಒಟ್ಟು ಜನಸಂಖ್ಯೆ ೧೪,೩೭,೧೬೯ ಆಗಿದ್ದು, ಪರಿಶಿಷ್ಟ ಬುಡಕಟ್ಟುಗಳ ಒಟ್ಟು ಜನಸಂಖ್ಯೆ ೩೪,೨೩೯ ಆಗಿದೆ. ಅದರಲ್ಲಿ ಸಿದ್ದಿಗಳೇ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಅಂದಾಜಿನ ಪ್ರಕಾರ ಅವರ ಜನಸಂಖ್ಯೆ ೨೫ ರಿಂದ ೩೦ ಸಾವಿರಗಳಿರಬಹುದು. ಸಿದ್ದಿ ಮುಖಂಡ, ಡಿಯೋಗ್ ಸಿದ್ದಿಯವರ ಪ್ರಕಾರ ೩೩,೦೦೦ಕ್ಕಿಂತಲೂ ಹೆಚ್ಚಿದೆ. ಮತ್ತೊಬ್ಬ ಎಂ.ಎಸ್.ಡಬ್ಲ್ಯೂ ಮಾಡಿದ ಸಿದ್ದಿಯುವಕ ಮೋಹನ್ ಸಿದ್ದಿಯವರ ಪ್ರಕಾರ ಸಿದ್ದಿಗಳ ಜನಸಂಖ್ಯೆ ೨೪,೦೦೦ದಷ್ಟಿರಬಹುದು. ನಮ್ಮ ಕೌಟುಂಬಿಕ ಸಮೀಕ್ಷೆಯ ನಿಲುಕಿದ ಸಿದ್ದಿಗಳು ಹೆಚ್ಚಾಗಿರುವ ಏಳು ತಾಲೂಕುಗಳ ೪೩೭ ಸಿದ್ದಿ ಕುಟುಂಬಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

೫.೩. ಸಿದ್ದಿ ಸಮುದಾಯದ ಜನಸಂಖ್ಯೆ

ಸಂಶೋಧನಾ ಸಮೀಕ್ಷೆಯ ಅಂಕಿ-ಅಂಶಗಳಲ್ಲಿ ಉತ್ತರಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಅಂಕೋಲಾ, ಕಾರವಾರ, ಜೋಯಿಡಾ, ಮುಂಡಗೋಡ, ಯಲ್ಲಾಪುರ, ಶಿರಸಿ ಮತ್ತು ಹಳಿಯಾಳ ತಾಲೂಕುವಾರು ಪಂಚಾಯಿತಿಗಳಲ್ಲಿ ಬರುವ ಸಿದ್ದಿ ಸಮುದಾಯದ ಕೌಟುಂಬಿಕ ಸಮೀಕ್ಷೆಯಿಂದ ಈ ಕೆಳಗಿನಂತೆ ಜನಸಂಖ್ಯೆ ಪ್ರಮಾಣವನ್ನು ದಾಖಲಿಸಲಾಗಿದೆ.

ಕೋಷ್ಟಕ: ೫.೩.೧. ಉತ್ತರಕನ್ನಡ ಜಿಲ್ಲೆಯ ಸಿದ್ದಿಗಳ ತಾಲೂಕುವಾರು, ಕುಟುಂಬವಾರು, ಲಿಂಗವಾರು ಜನಸಂಖ್ಯೆ


ಸಂ.	ತಾಲೂಕು	ಕುಟುಂಬ	ಒಟ್ಟು	ಗಂಡು	ಹೆಣ್ಣು
೧.	ಅಂಕೋಲಾ	೫೮	೨೪೩	೧೨೧	೧೨೨
೨.	ಕಾರವಾರ	೦೫	೨೬	೧೪	೧೨
೩.	ಜೋಯಿಡಾ	೧೩	೫೭	೩೦	೨೭
೪.	ಮುಂಡಗೋಡ	೩೬	೧೫೭	೭೬	೮೧
೫.	ಯಲ್ಲಾಪುರ	೧೪೭	೫೫೬	೨೭೮	೨೭೮
೬.	ಶಿರಸಿ	೨೦	೯೯	೫೩	೪೬
೭.	ಹಳಿಯಾಳ	೧೫೮	೭೧೧	೩೪೮	೩೬೩
	ಒಟ್ಟು	೪೩೭	೧೮೪೯	೯೨೦	೯೨೯

ಕೋಷ್ಟಕ ೫.೩.೧ರಲ್ಲಿ ಉತ್ತರಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಮೇಲಿನ ತಾಲೂಕುವಾರು ಗಳನ್ನೊಳಗೊಂಡಂತೆ ಒಟ್ಟಾರೆಯಾಗಿ ಲಭ್ಯವಾದ ೪೩೭ ಸಿದ್ದಿ ಬುಡಕಟ್ಟುಗಳ ಕುಟುಂಬಗಳು ಒಟ್ಟು ಜನಸಂಖ್ಯೆ ೧೮೪೯. ಇದರಲ್ಲಿ ಲಿಂಗವಾರು ಪುರುಷರು ಶೇ. ೪೯.೭೬ರಷ್ಟು, ಮಹಿಳೆಯರು ಶೇ. ೫೦.೨೪ರಷ್ಟು ಇದ್ದಾರೆ.


ಇನ್ನು ಉತ್ತರಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಕೊಡ್ಲಗದ್ದೆ, ಡೋಂಗ್ರಿ, ಸುಂಕನಾಳ ಪಂಚಾಯಿತಿಗಳ ಅಡಿಯಲ್ಲಿ ಬರುವ ಸಿದ್ದಿ ಬುಡಕಟ್ಟಿನ ಕೆಲವು ನೆಲೆಗಳನ್ನು ಕ್ಷೇತ್ರಕಾರ್ಯಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇದೇ ರೀತಿ ಕಾರವಾರ ತಾಲೂಕಿನ ಮೇಲ್‌ಮಖೇರಿ ಪಂಚಾಯಿತಿ, ಜೋಯಿಡಾ ತಾಲೂಕಿನ ಇರನೊಳ್ಳಿ ಪಂಚಾಯಿತಿ, ಮುಂಡಗೋಡ ತಾಲೂಕಿನ ಉಗಿನಕೇರಿ, ಬಸರೆಜಡ್ಡಿ ಪಂಚಾಯತ, ಯಲ್ಲಾಪುರ ತಾಲೂಕಿನ ಉಮ್ಮಚಗಿ, ಕಣ್ಣಿಗೇರಿ, ಕುಂದರಗಿ, ಹಾಸಣಗಿ, ಹಿತ್ಲಳ್ಳಿ ಪಂಚಾಯಿತಿನ ಕೆಲವು ನೆಲೆಗಳನ್ನು, ಶಿರಸಿ ತಾಲೂಕಿನ ದೇವನಳ್ಳಿ, ಕಕ್ಕನಳ್ಳಿ ಪಂಚಾಯಿತಿ ಮತ್ತು ಹಳಿಯಾಳ ತಾಲೂಕಿನ ವ್ಯಾಪ್ತಿಯೊಳಗೆ ಬರುವ ಕೆಸರೊಳ್ಳಿ, ಗುಂಡೊಳ್ಳಿ, ಭಾಗವತಿ, ಸಾಂಬ್ರಾಣಿ ಪಂಚಾಯಿತಿನ ಕೆಲವು ನೆಲೆಗಳನ್ನು ಸೇರಿದಂತೆ ಒಟ್ಟಾರೆ ಉತ್ತರಕನ್ನಡ ಜಿಲ್ಲೆಯಲ್ಲಿ ೧೮ ನೆಲೆಗಳಲ್ಲಿ ಕ್ಷೇತ್ರಕಾರ್ಯವನ್ನು ಮಾಡಲಾಗಿದೆ. ಇಲ್ಲಿ ತಿಳಿಸಿರುವ ನೆಲೆ ಮತ್ತು ಕುಟುಂಬಗಳ ಸಂಖ್ಯೆಯೇ ಅಂತಿಮವೆಂದು ಭಾವಿಸಬಾರದು. ಏಕೆಂದರೆ ಮೇಲೆ ತಿಳಿಸಿದ ಸಿದ್ದಿ ಸಮುದಾಯದವರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಾಗೂ ನಗರ ಭಾಗದ ಪ್ರದೇಶಗಳಲ್ಲಿ ಹಂಚಿ ಹೋಗಿದ್ದರಿಂದ ಹೆಚ್ಚಿನ ಕುಟುಂಬಗಳನ್ನು ಕ್ಷೇತ್ರಕಾರ್ಯ ಅಧ್ಯಯನ ವ್ಯಾಪ್ತಿಗೆ ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಈ ಸಮುದಾಯದವರನ್ನು ಕೇವಲ ಆನುಷಂಗಿಕವಾಗಿ ಪರಿಗಣಿಸಲಾಗಿದೆ. ಆದರೆ ಯಾವುದೇ ನಿರ್ವಂಚನೆಯಿಲ್ಲದೆ ಗ್ರಾಮೀಣ ಭಾಗದಲ್ಲಿ ವಾಸಿಸುವವರನ್ನು ಹೆಚ್ಚು ವೈಜ್ಞಾನಿಕ ಸಮೀಕ್ಷೆಗೆ ಒಳಪಡಿಸಲಾಗಿದೆ. ಅತಿ ಹೆಚ್ಚಿನ ಸಿದ್ದಿ ಬುಡಕಟ್ಟುಗಳ ಕುಟುಂಬಗಳನ್ನು ಹೊಂದಿರುವ ತಾಲೂಕು ಹಳಿಯಾಳ ಆಗಿದೆ, ಇಲ್ಲಿ ಒಟ್ಟಾರೆ ೧೫೮ ಕುಟುಂಬಗಳು ವಾಸಿಸುತ್ತವೆ. ಅದರಂತೆ ಅಂಕೋಲ ತಾಲೂಕಿನಲ್ಲಿ ಒಟ್ಟಾರೆ ೫೮ ಕುಟುಂಬಗಳು ಹಾಗೂ ಕಾರವಾರ ತಾಲೂಕಿನಲ್ಲಿ ೫ ಕುಟುಂಬಗಳು, ಜೋಯಿಡಾ ತಾಲೂಕಿನಲ್ಲಿ ೧೩ ಕುಟುಂಬಗಳು, ಮುಂಡಗೋಡ ತಾಲೂಕಿನಲ್ಲಿ ೩೬ ಕುಟುಂಬಗಳು, ಯಲ್ಲಾಪುರ ತಾಲೂಕಿನಲ್ಲಿ ೧೪೭ ಕುಟುಂಬಗಳು, ಶಿರಸಿ ತಾಲೂಕಿನಲ್ಲಿ ೨೦ ಕುಟುಂಬಗಳ ನೆಲೆಗಳನ್ನು ಕೋಷ್ಟಕ ೧ರಲ್ಲಿ ಕಾಣಬಹುದಾಗಿದೆ.

ಪ್ರತ್ಯೇಕವಾಗಿ ಉತ್ತರಕನ್ನಡ ಜಿಲ್ಲೆಯ ಏಳು ತಾಲೂಕು(ಅಂಕೋಲಾ, ಕಾರವಾರ, ಜೋಯಿಡಾ ಮುಂಡಗೋಡ, ಯಲ್ಲಾಪುರ, ಶಿರಸಿ ಹಾಗೂ ಹಳಿಯಾಳ)ಗಳ ನೆಲೆಗಳಲ್ಲಿ ಸಿದ್ದಿ ಸಮುದಾಯಗಳ ಜನಸಂಖ್ಯಾ ಪ್ರಮಾಣವನ್ನು ಪಂಚಾಯಿತಿವಾರು ಅವಲೋಕಿಸಿ ವಿಶ್ಲೇಷಿಸಲಾಗಿದೆ. ಕೋಷ್ಟಕ ೨ನ್ನು ಗಮನಿಸಿದಾಗ ಬೆಳಗಾವಿ ಜಿಲ್ಲೆಯ ದಕ್ಷಿಣಭಾಗದಲ್ಲಿ ಬರುವ ಅಂಕೋಲಾ, ಕಾರವಾರ, ಜೋಯಿಡಾ, ಮುಂಡಗೋಡ, ಯಲ್ಲಾಪುರ, ಶಿರಸಿ ತಾಲೂಕಿನ ಪಂಚಾಯಿತಿಗಳಾದರೆ ಪಶ್ಚಿಮಭಾಗದ ಹಳಿಯಾಳ

ಲಂಬಚಿತ್ರ ೫.೩.೧. ಸಿದ್ದಿ ಬುಡಕಟ್ಟುಗಳ ತಾಲೂಕುವಾರು, ಕುಟುಂಬವಾರು, ಲಿಂಗವಾರು ಜನಸಂಖ್ಯೆ ಪ್ರಮಾಣ



ವೃತ್ತಚಿತ್ರ ೫.೩.೧. ಸಿದ್ದಿ ಬುಡಕಟ್ಟುಗಳ ತಾಲೂಕುವಾರು ಜನಸಂಖ್ಯೆ ಪ್ರಮಾಣ



ತಾಲೂಕಿನ ವ್ಯಾಪ್ತಿಗೊಳಪಡುವ ಪಂಚಾಯಿತಿ ನೆಲೆಗಳನ್ನು ಆಯ್ದು ಸಿದ್ದಿ ಸಮುದಾಯಗಳನ್ನು ಸಮೀಕ್ಷಿಸಲಾಗಿದೆ.





ಕೋಷ್ಟಕ ೫.೩.೨. ಉತ್ತರಕನ್ನಡ ಜಿಲ್ಲೆಯ ಸಿದ್ದಿ ಸಮುದಾಯದ ಪಂಚಾಯಿತ್‌ವಾರು, ಕುಟುಂಬವಾರು ಹಾಗೂ ಲಿಂಗವಾರು ಜನಸಂಖ್ಯೆ ಪ್ರಮಾಣ

ತಾಲೂಕುಗಳು	ಪಂಚಾಯಿತಿಗಳು	ಕುಟುಂಬಗಳು	ಜನಸಂಖ್ಯೆ		
			ಗಂಡು	ಹೆಣ್ಣು	ಒಟ್ಟು
ಅಂಕೋಲಾ	ಕೊಡ್ಲಗದ್ದೆ	೨	೫	೫	೧೦
	ಡೊಂಗ್ರಿ	೫೦	೯೯	೧೦೯	೨೦೮
	ಸುಂಕನಾಳ	೬	೧೭	೮	೨೫
	ಒಟ್ಟು	**೫೮**	**೧೨೧**	**೧೨೨**	**೨೪೩**
ಕಾರವಾರ	ಮೇಲ್‌ಮಖೇರಿ	೫	೧೪	೧೨	೨೬
ಜೋಯಿಡಾ	ಇರನೊಳ್ಳಿ	೧೩	೩೦	೨೭	೫೭
ಮುಂಡಗೋಡ	ಉಗಿನಕೇರಿ	೨೧	೫೦	೩೮	೮೮
	ಬಸರೆಜಡ್ಡಿ	೧೫	೨೬	೪೩	೬೯
	ಒಟ್ಟು	**೩೬**	**೭೬**	**೮೧**	**೧೫೭**
ಯಲ್ಲಾಪುರ	ಉಮ್ಮಚಗಿ	೪೪	೯೦	೭೫	೧೬೫
	ಕಣ್ಣಿಗೇರಿ	೪೮	೮೮	೯೫	೧೮೩
	ಕುಂದರಗಿ	೩೬	೬೪	೬೬	೧೩೦
	ಹಾಸಣಗಿ	೧೪	೨೪	೨೮	೫೨
	ಹಿಟ್ಲಳ್ಳಿ	೫	೧೨	೧೪	೨೬
	ಒಟ್ಟು	**೧೪೭**	**೨೭೮**	**೨೭೮**	**೫೫೬**
ಶಿರಸಿ	ದೇವನಳ್ಳಿ	೧೦	೨೩	೧೭	೪೦
	ಕಕ್ಕನಳ್ಳಿ	೧೦	೩೦	೨೯	೫೮
	ಒಟ್ಟು	**೨೦**	**೫೩**	**೪೬**	**೯೮**
ಹಳಿಯಾಳ	ಕೆಸರೊಳ್ಳಿ	೨೨	೫೦	೫೫	೧೦೫
	ಗುಂಡೊಳ್ಳಿ	೧೭	೩೦	೩೫	೬೫
	ಭಾಗವತಿ	೪೬	೧೦೯	೧೧೩	೨೨೨
	ಸಾಂಬ್ರಾಣಿ	೭೩	೧೫೯	೧೬೦	೩೧೯
	ಒಟ್ಟು	**೧೫೮**	**೩೪೮**	**೩೬೩**	**೭೧೧**
ಉತ್ತರಕನ್ನಡ ಜಿಲ್ಲೆ ಒಟ್ಟು		**೪೩೨**	**೯೨೦**	**೯೨೯**	**೧೮೪೯**

ಕೋಷ್ಟಕ ೫.೩.೨ ನ್ನು ಗಮನಿಸಿದಾಗ ಅಂಕೋಲಾ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಕೊಡ್ಲಗದ್ದೆ(೨), ಡೋಂಗ್ರಿ(೫೦), ಸುಂಕನಾಳ(೬) ಪಂಚಾಯಿತಿಗಳ ಒಟ್ಟು ೫೮ ಕುಟುಂಬಗಳಲ್ಲಿ ಜನಸಂಖ್ಯಾ ಪ್ರಮಾಣವನ್ನು ಲಿಂಗವಾರು ಗಮನಿಸಿದಾಗ ಪುರುಷರು ಶೇ. ೪೯.೭೯ರಷ್ಟು, ಮಹಿಳೆಯರು

ಶೇ. ೫೦.೪೧ರಷ್ಟು ಕಂಡುಬಂದರೆ, ಕಾರವಾರ ತಾಲೂಕಿನ ಮೇಲ್‌ಮಖೇರಿ(೫) ಪುರುಷರು ಶೇ. ೫೩.೮೫ರಷ್ಟು, ಮಹಿಳೆಯರು ಶೇ. ೪೬.೧೫ರಷ್ಟಿದ್ದಾರೆ. ಜೋಯಿಡಾ ತಾಲೂಕಿನ ಇರನೊಳ್ಳಿ(೧೩) ಪುರುಷರು ಶೇ. ೫೨.೬೩ರಷ್ಟು, ಮಹಿಳೆಯರು ಶೇ. ೪೭.೩೭ರಷ್ಟಿರುವುದು. ಮುಂಡಗೋಡ ತಾಲೂಕಿನ ಉಗಿನಕೇರಿ(೨೧), ಬಸರೆಜಡ್ಡಿ(೧೫) ಪಂಚಾಯಿತಿಗಳ ಒಟ್ಟು ೩೬ ಕುಟುಂಬಗಳಲ್ಲಿ ಪುರುಷರು ಶೇ. ೪೮.೪೧ರಷ್ಟು, ಮಹಿಳೆಯರು ಶೇ.೫೧.೫೯ರಷ್ಟಿದ್ದಾರೆ. ಯಲ್ಲಾಪುರ ತಾಲೂಕಿನ ಉಮ್ಮಚಗಿ(೪೪), ಕಣ್ಣಿಗೇರಿ(೪೮), ಕುಂದರಗಿ(೩೬), ಹಾಸಣಗಿ(೧೪), ಹಿಟ್ಲಳ್ಳಿ(೫) ಪಂಚಾಯಿತಿಗಳ ಒಟ್ಟು ೧೪೭ ಕುಟುಂಬಗಳಲ್ಲಿ ಪುರುಷರು ಶೇ. ೫೦.೦೦ರಷ್ಟು ಮಹಿಳೆಯರು ಶೇ. ೫೦.೦೦ರಷ್ಟಿರುವುದಾಗಿದೆ. ಶಿರಸಿ ತಾಲೂಕಿನ ದೇವನಳ್ಳಿ(೧೦), ಕಕ್ಕನಳ್ಳಿ(೧೦) ಪಂಚಾಯಿತಿಗಳ ಒಟ್ಟು ೨೦ ಕುಟುಂಬಗಳಲ್ಲಿ ಪುರುಷರು ಶೇ. ೫೪.೦೮ರಷ್ಟಿದ್ದಾರೆ, ಮಹಿಳೆಯರು ಶೇ. ೪೬.೯೪ರಷ್ಟಿದೆ. ಹಳಿಯಾಳ ತಾಲೂಕಿನ ವ್ಯಾಪ್ತಿಯೊಳಗೆ ಬರುವ ಕೆಸರೊಳ್ಳಿ(೨೨), ಗುಂಡೊಳ್ಳಿ(೧೭), ಭಾಗವತಿ(೪೬), ಸಾಂಬ್ರಾಣಿ(೭೩) ಪಂಚಾಯಿತಿಗಳ ಒಟ್ಟು ೧೫೮ ಕುಟುಂಬಗಳಲ್ಲಿ ಪುರುಷರು ಶೇ. ೪೮.೯೫ರಷ್ಟು, ಮಹಿಳೆಯರು ಶೇ. ೫೧.೦೫ರಷ್ಟು ಕಂಡುಬರುತ್ತಾರೆ.

ಸಿದ್ದಿ ಸಮುದಾಯದ ವಯೋಗುಂಪುವಾರು ಜನಸಂಖ್ಯೆ

ಒಂದು ಸಮುದಾಯದ ಶೈಕ್ಷಣಿಕ ಮತ್ತು ಆರ್ಥಿಕ ಅಂಶಗಳನ್ನು ಅರಿಯಲು ಆ ಸಮುದಾಯದ ಜನರ ವಯೋಗುಂಪುಗಳನ್ನು ತಿಳಿಯುವುದು ಅಗತ್ಯವಾಗಿರುತ್ತದೆ. ಸಿದ್ದಿ ಬುಡಕಟ್ಟುಗಳ ಈ ಅಂಶಗಳನ್ನು ಅರಿಯಲು ಆರು ವರ್ಷದೊಳಗಿರುವ ಅಂಕಿ-ಅಂಶಗಳನ್ನು ಕಲೆ ಹಾಕಲಾಗಿದೆ. ಈ ವಯೋಗುಂಪಿನವರನ್ನು ಹೊರಗಿಟ್ಟು ಸಾಕ್ಷರತೆಯ ಪ್ರಮಾಣವನ್ನು ಪಡೆಯಲಾಗಿದೆ.

ಕೋಷ್ಟಕ: ೫.೩.೩. ಉತ್ತರಕನ್ನಡ ಜಿಲ್ಲೆಯ ಸಿದ್ದಿಗಳ ವಯೋಗುಂಪುವಾರು ಲಿಂಗವಾರು ಜನಸಂಖ್ಯೆ ಪ್ರಮಾಣ

ಸಂ.	ವಯೋಗುಂಪು	ಗಂಡು	ಹೆಣ್ಣು	ಒಟ್ಟು
೧	೦-೦೬	೯೯	೧೦೨	೨೦೧
೨	೭-೧೭	೨೨೫	೨೩೫	೪೬೦
೩	೧೮-೪೦	೪೦೧	೪೧೦	೮೧೧
೪	೪೧-೬೦	೧೫೩	೧೪೧	೨೯೪
೫	೬೧ರ ಮೇಲ್ಪಟ್ಟು	೪೨	೪೧	೮೩
	ಒಟ್ಟು	೯೨೦	೯೨೯	೧೮೪೯

ಕೊಷ್ಟಕ ೫.೩.೩ ರಲ್ಲಿ ಇವರ ಒಟ್ಟು ಜನಸಂಖ್ಯೆಯಲ್ಲಿ ೦-೬ ವರ್ಷದೊಳಗಿನ ವಯೋಗುಂಪಿನವರ ಪ್ರಮಾಣ ಶೇ. ೧೦.೮೭ರಷ್ಟಿದೆ. ೭-೧೭ ವರ್ಷದೊಳಗಿನ ವಯೋಗುಂಪನ್ನು ಸಾಕ್ಷರಸ್ಥರ ಗುಂಪು ಎಂದು ಅವರ ಪ್ರಮಾಣ ಶೇ. ೨೪.೮೮ರಷ್ಟಿದೆ. ೧೮ರಿಂದ ೪೦ ವಯೋಗುಂಪನ್ನು ಕಾಯಕಾರ್ಹ

ಗುಂಪು ಎಂದು ಗ್ರಹಿಸಲಾಗುವುದು. ಇವರ ಪ್ರಮಾಣವು ಶೇ. ೪೩.೮೬ರಷ್ಟಿರುವುದು. ೪೧ರಿಂದ ೬೦ರ ವಯೋಗುಂಪನ್ನು ಅನುಭವಿ ಗುಂಪೆಂದು ಪರಿಗಣಿಸಿದ್ದು ಇವರ ಪ್ರಮಾಣವು ಶೇ. ೧೫.೯೦ರಷ್ಟಿದೆ. ೬೧ರ ಮೇಲ್ಪಟ್ಟ ವಯೋಗುಂಪು ಅವಲಂಬಿತ, ಅಸಹಾಯಕ ಹಾಗೂ ಕಾಯಕ ಅರ್ಹವಲ್ಲದ ಗುಂಪೆಂದು ಪರಿಗಣಿಸಲಾಗಿರುವುದು. ಈ ಗುಂಪಿನಲ್ಲಿಯ ಇವರ ಪ್ರಮಾಣವು ಶೇ. ೪.೪೯ರಷ್ಟಿದೆ.

ಇತ್ತ ಹೆಚ್ಚಾಗಿ ಬಯಲು ಪ್ರದೇಶವೂ ಅಲ್ಲದ, ಅತ್ತ ಕಡಲ ತೀರವೂ ಅಲ್ಲದ, ದಟ್ಟ ಕಾಡಿನ ಬೆಟ್ಟಗಳ ಇಳಿಜಾರಿನಲ್ಲೇ ಇವರ ವಾಸ ಹೆಚ್ಚಾಗಿರುವುದು ಕಂಡುಬರುತ್ತದೆ. ಇದು ಅವರ ಅರಣ್ಯಮೂಲದ ಆರ್ಥಿಕತೆ ಹಾಗೂ ಅಷ್ಟಾಗಿ ಜನಬಳಕೆ ಒಲ್ಲದ, ತಮ್ಮಷ್ಟಕ್ಕೆ ತಾವು ಇರಬಯಸುವ ಸಮುದಾಯದ ಲಕ್ಷಣವನ್ನು ಸೂಚಿಸುತ್ತದೆ. ಐತಿಹಾಸಿಕವಾಗಿ ಗುಲಾಮಗಿರಿಯಿಂದ ತಪ್ಪಿಸಿಕೊಳ್ಳಲು ದಟ್ಟ ಕಾಡಿನೊಳಕ್ಕೆ ಬಂದಿರಬೇಕು.

ಸಿದ್ದಿಗಳ ಶ್ರಮಶಕ್ತಿ ಹಾಗೂ ಕಸುಬುಗಳು

ಬುಡಕಟ್ಟುಗಳ ಮುಖ್ಯ ಉತ್ಪಾನಾಂಗವಾದ ಶ್ರಮ ಹಾಗೂ ಕಸುಬುಗಳನ್ನು ಅವಲೋಕಿಸುವುದು ಸೂಕ್ತ. ಇಲ್ಲಿ ಶ್ರಮವೆಂದರೆ ಕಷ್ಟಪಟ್ಟು ದುಡಿಯುವುದಷ್ಟೇ ಅಲ್ಲದೆ ಜನಸಂಖ್ಯಾವಾರು ವಯೋಗುಣ ಪ್ರಮಾಣ ಎಷ್ಟಿದೆ? ದುಡಿಯುವವರೆಷ್ಟು? ಅವಲಂಬಿತರೆಷ್ಟು? ಎನ್ನುವುದಾಗಿದೆ. ಬುಡಕಟ್ಟುಗಳ ಉತ್ಪಾದನಾ ವಿಧಾನ ಸರಳವಾಗಿದ್ದು ಕುಟುಂಬದ ಗಂಡು–ಹೆಣ್ಣು ಹಾಗೂ ಸಣ್ಣ ಮಕ್ಕಳಾದಿಯಾಗಿ ಎಲ್ಲರೂ ಸಾಮೂಹಿಕವಾಗಿ ಸಾಮರ್ಥ್ಯಕ್ಕೆ ತಕ್ಕಂತೆ ಪಾಲ್ಗೊಳ್ಳುತ್ತಾರೆ. ಆದರೂ ೦–೧೭ ವರ್ಷದವರನ್ನು ಹಾಗೂ ೬೦ವರ್ಷ ಮೇಲ್ಪಟ್ಟವರನ್ನೂ ದುಡಿಮೆಯಿಂದ ಹೊರಗಿದ್ದಾರೆಂದು ಸರ್ಕಾರ ಭಾವಿಸಿದರೂ ಬುಡಕಟ್ಟುಗಳು ಅದರಲ್ಲೂ ಸಿದ್ದಿಗಳು ಹಾಗೆ ಭಾವಿಸಿಲ್ಲ. ಸಿದ್ದಿಗಳ ಒಟ್ಟಾರೆ ತಾಲೂಕುವಾರು, ಲಿಂಗವಾರು ವಯೋಗುಣ ಪ್ರಮಾಣ ಹಾಗೂ ವೃತ್ತಿವಾರು ಹಂಚಿಕೆಯನ್ನು ಈ ಕೆಳಗೆ ನೀಡಲಾಗಿದೆ.

ಉತ್ತರಕನ್ನಡ ಜಿಲ್ಲೆಯ ಏಳು ತಾಲೂಕು(ಅಂಕೋಲಾ, ಕಾರವಾರ, ಜೋಯಿಡಾ, ಮುಂಡಗೋಡ, ಯಲ್ಲಾಪುರ, ಶಿರಸಿ ಹಾಗೂ ಹಳಿಯಾಳ)ಗಳ ನೆಲೆಗಳಲ್ಲಿ ಸಿದ್ದಿ ಸಮುದಾಯಗಳ ಲಿಂಗವಾರು ಕಸುಬುಗಳ ಪ್ರಮಾಣವನ್ನು ಅವಲೋಕಿಸಿ ಈ ಮುಂದಿನಂತೆ ವಿಶ್ಲೇಷಿಸಲಾಗಿದೆ.

ಕಾಯಕಾರ್ಹವಲ್ಲದ ವಯೋಗುಂಪು

ಸರ್ಕಾರವು ಸಾಮಾನ್ಯವಾಗಿ ೦ ಯಿಂದ ೧೭ ವಯೋಮಾನದವರು ಯಾವುದೇ ವೃತ್ತಿ ಅಥವಾ ನೇಮಕಾತಿಗಳಿಗೆ ಅನರ್ಹವೆಂದು ಹಾಗೂ ೬೧ರ ಮೇಲ್ಪಟ್ಟವರು ವೃದ್ಧರೆಂದು, ದೈಹಿಕ ದೌರ್ಬಲ್ಯ ದಿಂದಾಗಿ ಯಾವುದೇ ಕೆಲಸ ಮಾಡಲು ಅಸಮರ್ಥರೆಂದು ಭಾವಿಸಲಾಗಿದೆ. ಹೀಗಾಗಿ ೦ ರಿಂದ ೧೭ರ ವಯೋಮಾನದವರು ಹಾಗೂ ೬೧ ವರ್ಷ ಮೇಲ್ಪಟ್ಟ ವಯೋಮಾನದವರನ್ನು ಅವಲಂಬಿತ ವರ್ಗವೆಂದು ಮತ್ತು ಕೆಲಸ ನಿರ್ವಹಿಸಲು ಶ್ರಮಿಕವರ್ಗಕ್ಕೆ ಅನರ್ಹರೆಂದು ಪರಿಗಣಿಸಿ ಕಾಯಕಾರ್ಹ ವಲ್ಲದ ಗುಂಪೆಂದು ಪರಿಗಣಿಸಿದೆ.

ಆದರೆ, ಇಲ್ಲಿ ಕಂಡುಬರುವ ಸಿದ್ದಿಗಳಲ್ಲಿ ಇದು ಅಪವಾದವೆಂಬಂತೆ ತೋರುತ್ತದೆ. ಅಂದರೆ ಸರಕಾರದ ಲೆಕ್ಕದಲ್ಲಿ ಕಾಯಕಾರ್ಹವಲ್ಲದವರು ಸಹ ಇವರಲ್ಲಿ ಕಾಯಕ ಮಾಡುವುದನ್ನು ಕಾಣಬಹುದಾಗಿದೆ. ಈ ವಯೋಗುಂಪಿನವರೂ ಒಂದಿಲ್ಲೊಂದು ಕಾಯಕಗಳಲ್ಲಿ ತೊಡಗಿಸಿಕೊಂಡಿರುವುದರಿಂದ ನಿರುದ್ಯೋಗಿಗಳು ಕಾಣಸಿಗರು ಮತ್ತು ಕಾಯಕಾರ್ಹರಿಗಿಂತ ಹೆಚ್ಚಿನವರು ಕೆಲಸ ಮಾಡುವುದನ್ನು ಗಮನಿಸಬಹುದು. ಕುಟುಂಬ ನಿರ್ವಹಣೆಗೆ ಲಿಂಗಭೇದ ಮತ್ತು ವಯೋಭೇದವಿಲ್ಲದೇ ಇವರು ವೃತ್ತಿಯಲ್ಲಿ ತೊಡಗುವುದು ಸಹಜ. ಆದ್ದರಿಂದ ಈ ಅವಲಂಬಿತವರ್ಗದವರು ದುಡಿಯುವ ವರ್ಗದೊಂದಿಗೆ ಕೈಜೋಡಿಸಿ ಕೆಲಸಗಳನ್ನು ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಕಾಯಕಸ್ಥರ ಪ್ರಮಾಣದಲ್ಲಿ ಈ ಅವಲಂಬಿತವರ್ಗವು ಸೇರಿಕೊಂಡಿರುವುದಿಲ್ಲ. ಇಲ್ಲಿ ಕಾಯಕಸ್ಥರ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಇತರೆ ಕೆಲಸಗಳಲ್ಲಿ ನಿರತವಾಗಿರುವ ಅವಲಂಬಿತ ಹಾಗೂ ಕಾಯಕಾರ್ಹರಲದ ವಯೋಮಾನದವರು ಗಣನೀಯವಾಗಿ ಕೆಲಸ ನಿರ್ವಹಿಸುತ್ತಿರುವುದು ಕಂಡುಬಂದರೂ ಸರ್ಕಾರದ ದೃಷ್ಟಿಯಲ್ಲಿ ಇವರು ಕೈಗೊಂಡಿರುವ ಕಾಯಕಗಳಿಗೆ ಯಾವುದೇ ಮಾನ್ಯತೆಗಳಿರುವುದಿಲ್ಲ.

ಸಿದ್ದಿ ಬುಡಕಟ್ಟುಗಳ ದುಡಿಮೆಗಾರರ ಪ್ರಮಾಣ

ಉತ್ತರಕನ್ನಡ ಜಿಲ್ಲೆಯ ಒಟ್ಟಾರೆ ಸಿದ್ದಿ ಬುಡಕಟ್ಟುಗಳ ಪಂಚಾಯಿತಿವಾರು ೪೩೭ ಕುಟುಂಬಗಳನ್ನು ಅವಲೋಕಿಸಲಾಗಿ ಒಟ್ಟು ಜನಸಂಖ್ಯೆ ೧೮೪೯ರಷ್ಟಿದೆ. ಇದರಲ್ಲಿ ೦-೧೭ ವಯೋಮಾನದವರು ಒಟ್ಟು ಶೇ. ೩೫.೭೫ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇ. ೩೫.೨೨ರಷ್ಟು ಹಾಗೂ ಮಹಿಳೆಯರು ಶೇ. ೩೬.೨೮ರಷ್ಟಿದ್ದಾರೆ. ಹಾಗೂ ೬೧ರ ಮೇಲ್ಪಟ್ಟ ವಯೋಮಾನದವರು ಒಟ್ಟು ಶೇ. ೪.೪೯ರಷ್ಟಿದ್ದಾರೆ. ಇದರಲ್ಲಿ ಪುರುಷರು ೪.೫೭ರಷ್ಟು ಹಾಗೂ ಮಹಿಳೆಯರು ೪.೪೧ರಷ್ಟಿದ್ದಾರೆ. ದುಡಿಮೆಗಾರರ ಪ್ರಮಾಣದಲ್ಲಿರುವ ೧೮-೬೦ರ ವಯೋಮಾನದವರು ಶೇ. ೫೯.೭೬ರಷ್ಟಿದ್ದು, ಲಿಂಗವಾರು ಪುರುಷರು ಶೇ. ೬೦.೨೨ರಷ್ಟು, ಮಹಿಳೆಯರು ಶೇ. ೫೯.೩೧ರಷ್ಟಿದ್ದಾರೆ.

ಕೋಷ್ಟಕ ೫.೩.೧.ರಲ್ಲಿ ಉತ್ತರಕನ್ನಡ ಜಿಲ್ಲೆಯ ತಾಲೂಕುವಾರು ಅಧ್ಯಯನದ ವ್ಯಾಪ್ತಿಗೆ ಸಂಬಂಧಪಟ್ಟ ಪಂಚಾಯಿತಿವಾರು ಕಾಯಕಾರ್ಹರಲ್ಲದವರು(೦-೧೭ ವಯೋಮಾನದವರು), ಕೋಷ್ಟಕ ೫.೩.೨.ರಲ್ಲಿ ಅವಲಂಬಿತರ(೬೧ರ ಮೇಲ್ಪಟ್ಟ ವಯೋಮಾನದವರು) ಹಾಗೂ ಕೋಷ್ಟಕ ೫.೩.೩.ರಲ್ಲಿ ದುಡಿಮೆಯ ವರ್ಗ(೧೮-೬೦ರ ವಯೋಮಾನದವರು)ದವರ ಶೇಕಡಾವಾರನ್ನು ಗಮನಿಸಿದಾಗ ಅಂಕೋಲಾದಲ್ಲಿ ತಾಲೂಕುವಾರು ಕಾಯಕಾರ್ಹರಲ್ಲದವರ ಪ್ರಮಾಣ ಶೇ. ೩೧.೬೯ರಷ್ಟು ಲಿಂಗವಾರು ಪುರುಷರು ಶೇ. ೩೪.೭೧ರಷ್ಟು ಮಹಿಳೆಯರು ಶೇ. ೨೮.೬೯ರಷ್ಟಿದ್ದಾರೆ, ಅವಲಂಬಿತರ ಪ್ರಮಾಣ ಶೇ. ೪.೫೩ರಷ್ಟು ಲಿಂಗವಾರು ಪುರುಷರು ಶೇ. ೪.೯೬ರಷ್ಟು, ಮಹಿಳೆಯರು ಶೇ. ೪.೧೦ರಷ್ಟಿದ್ದಾರೆ. ಕಾಯಕಾರ್ಹರಾದವರ ಪ್ರಮಾಣ ಶೇ. ೬೩.೭೮ರಷ್ಟು ಲಿಂಗವಾರು ಪುರುಷರು ಶೇ. ೬೦.೩೩ರಷ್ಟು, ಮಹಿಳೆಯರು ಶೇ. ೬೭.೨೧ರಷ್ಟಿದ್ದಾರೆ.

ಕಾರವಾರದಲ್ಲಿ ತಾಲೂಕುವಾರು ಕಾಯಕಾರ್ಹರಲ್ಲದವರ ಪ್ರಮಾಣ ಶೇ. ೧೫.೩೮ರಷ್ಟು ಲಿಂಗವಾರು ಪುರುಷರು ಶೇ. ೧೪.೨೯ರಷ್ಟು ಮಹಿಳೆಯರು ಶೇ. ೧೬.೬೭ರಷ್ಟಿದ್ದಾರೆ, ಅವಲಂಬಿತರ

ಪ್ರಮಾಣ ಶೇ. ೭.೬೯ರಷ್ಟು ಲಿಂಗವಾರು ಪುರುಷರು ಶೇ. ೧೪.೨೯ರಷ್ಟು, ಮಹಿಳೆಯರು ಶೇ. ೦ ರಷ್ಟಿದ್ದಾರೆ. ಕಾಯಕಾರ್ಹರಾದವರ ಪ್ರಮಾಣ ಶೇ. ೭೬.೯೨ರಷ್ಟು, ಲಿಂಗವಾರು ಪುರುಷರು ಶೇ. ೭೧.೪೩ರಷ್ಟು, ಮಹಿಳೆಯರು ಶೇ. ೮೩.೩೩ರಷ್ಟಿದ್ದಾರೆ.

ಜೋಯಿಡಾ ತಾಲೂಕುವಾರು ಕಾಯಕಾರ್ಹರಲ್ಲದವರ ಪ್ರಮಾಣ ಪ್ರಮಾಣ ಶೇ. ೩೬.೮೪ರಷ್ಟು ಲಿಂಗವಾರು ಪುರುಷರು ಶೇ. ೪೩.೩೩ರಷ್ಟು ಮಹಿಳೆಯರು ಶೇ. ೨೯.೬೩ರಷ್ಟಿದ್ದಾರೆ, ಅವಲಂಬಿತರ ಪ್ರಮಾಣ ಶೇ. ೩.೫೧ರಷ್ಟು ಲಿಂಗವಾರು ಪುರುಷರು ಶೇ. ೦ ರಷ್ಟು, ಮಹಿಳೆಯರು ಶೇ. ೭.೪೧ರಷ್ಟಿದ್ದಾರೆ. ಕಾಯಕರ್ಹರಾದವರ ಪ್ರಮಾಣ ಶೇ. ೫೯.೬೫ರಷ್ಟು ಲಿಂಗವಾರು ಪುರುಷರು ಶೇ. ೫೬.೬೭ರಷ್ಟು, ಮಹಿಳೆಯರು ಶೇ. ೬೨.೯೬ರಷ್ಟಿದ್ದಾರೆ.

ಮುಂಡಗೋಡ ತಾಲೂಕುವಾರು ಕಾಯಕರ್ಹರಲ್ಲದವರ ಪ್ರಮಾಣ ಶೇ. ೨೮.೦೩ರಷ್ಟು ಲಿಂಗವಾರು ಪುರುಷರು ಶೇ. ೨೨.೩೭ರಷ್ಟು ಮಹಿಳೆಯರು ಶೇ. ೩೩.೩೩ರಷ್ಟಿದ್ದಾರೆ, ಅವಲಂಬಿತರ ಪ್ರಮಾಣ ಶೇ. ೩.೮೨ರಷ್ಟು ಲಿಂಗವಾರು ಪುರುಷರು ಶೇ. ೩.೯೫ರಷ್ಟು, ಮಹಿಳೆಯರು ಶೇ. ೩.೭೦೦ರಷ್ಟಿದ್ದಾರೆ. ಕಾಯಕಾರ್ಹರಾದವರ ಪ್ರಮಾಣ ಶೇ. ೬೮.೧೫ರಷ್ಟು ಲಿಂಗವಾರು ಪುರುಷರು ಶೇ. ೭೩.೬೮ರಷ್ಟು, ಮಹಿಳೆಯರು ಶೇ. ೬೨.೯೬ರಷ್ಟಿದ್ದಾರೆ.

ಯಲ್ಲಾಪುರ ತಾಲೂಕುವಾರು ಕಾಯಕಾರ್ಹರಲ್ಲದವರ ಪ್ರಮಾಣ ಶೇ. ೩೧.೮೯ರಷ್ಟು ಲಿಂಗವಾರು ಪುರುಷರು ಶೇ. ೩೧.೩೨ರಷ್ಟು ಮಹಿಳೆಯರು ಶೇ. ೩೨.೪೮ರಷ್ಟಿದ್ದಾರೆ, ಅವಲಂಬಿತರ ಪ್ರಮಾಣ ಶೇ. ೪.೫೦ರಷ್ಟು ಲಿಂಗವಾರು ಪುರುಷರು ಶೇ. ೪.೯೮ರಷ್ಟು, ಮಹಿಳೆಯರು ಶೇ. ೪.೦೧ರಷ್ಟಿದ್ದಾರೆ. ಕಾಯಕಾರ್ಹರಾದವರ ಪ್ರಮಾಣ ಶೇ. ೬೩.೬೦ರಷ್ಟು ಲಿಂಗವಾರು ಪುರುಷರು ಶೇ. ೬೩.೭೦ರಷ್ಟು, ಮಹಿಳೆಯರು ಶೇ. ೬೩.೫೦ರಷ್ಟಿದ್ದಾರೆ.


ಶಿರಸಿ ತಾಲೂಕುವಾರು ಕಾಯಕಾರ್ಹರಲ್ಲದವರ ಪ್ರಮಾಣ ಶೇ. ೩೮.೩೮ರಷ್ಟು ಲಿಂಗವಾರು ಪುರುಷರು ಶೇ. ೩೫.೮೫ರಷ್ಟು ಮಹಿಳೆಯರು ಶೇ. ೪೧.೩೦ರಷ್ಟಿದ್ದಾರೆ, ಅವಲಂಬಿತರ ಪ್ರಮಾಣ ಶೇ. ೮.೦೮ರಷ್ಟು ಲಿಂಗವಾರು ಪುರುಷರು ಶೇ. ೭.೫೫ರಷ್ಟು, ಮಹಿಳೆಯರು ಶೇ. ೮.೭೦ರಷ್ಟಿದ್ದಾರೆ. ಕಾಯಕಾರ್ಹರಾದವರ ಪ್ರಮಾಣ ಶೇ. ೫೩.೫೪ರಷ್ಟು ಲಿಂಗವಾರು ಪುರುಷರು ಶೇ. ೫೬.೬೦ರಷ್ಟು, ಮಹಿಳೆಯರು ಶೇ. ೫೦.೦೦ರಷ್ಟಿದ್ದಾರೆ.

ಹಳಿಯಾಳ ತಾಲೂಕುವಾರು ಕಾಯಕಾರ್ಹರಲ್ಲದವರ ಪ್ರಮಾಣ ಶೇ. ೪೧.೩೫ರಷ್ಟು ಲಿಂಗವಾರು ಪುರುಷರು ಶೇ. ೪೧.೫೦ರಷ್ಟು ಮಹಿಳೆಯರು ಶೇ. ೪೧.೬೭ರಷ್ಟಿದ್ದಾರೆ, ಅವಲಂಬಿತರ ಪ್ರಮಾಣ ಶೇ. ೪.೬೪ರಷ್ಟು ಲಿಂಗವಾರು ಪುರುಷರು ಶೇ. ೩.೭೫ರಷ್ಟು, ಮಹಿಳೆಯರು ಶೇ. ೪.೪೪ರಷ್ಟಿದ್ದಾರೆ. ಕಾಯಕಾರ್ಹರಾದವರ ಪ್ರಮಾಣ ಶೇ. ೫೪.೦೧ರಷ್ಟು ಲಿಂಗವಾರು ಪುರುಷರು ಶೇ. ೫೪.೭೬ರಷ್ಟು, ಮಹಿಳೆಯರು ಶೇ. ೫೩.೮೯ರಷ್ಟಿದ್ದಾರೆ.


ಕೋಷ್ಟಕ ೫.೩.೪. ಉತ್ತರಕನ್ನಡ ಜಿಲ್ಲೆಯ ಸಿದ್ದಿಗಳ ತಾಲೂಕುವಾರು ದುಡಿಮೆಗೆ ಅರ್ಹರು, ದುಡಿಯುತ್ತಿರುವವರು ಹಾಗೂ ಅವಲಂಬಿತರ ಲಿಂಗವಾರು ಪ್ರಮಾಣ

ಕ್ರ.ಸಂ.	ತಾಲೂಕುಗಳು	ಒಟ್ಟು ಜನಸಂಖ್ಯೆ			ಕಾಯಕಾರ್ಹಲದವರು			ಅವಲಂಬಿತರು			ಕಾಯಕಾರ್ಹದವರು			ಕಾಯಕಸ್ಥರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಅಂಕೋಲಾ	೧೨೧	೧೨೨	೨೪೪	೪೨	೩೫	೭೭	೬	೫	೧೧	೭೩	೮೨	೧೫೫	೭೩	೮೨	೧೫೫
೨	ಕಾರವಾರ	೧೪	೧೨	೨೬	೨	೨	೪	೨		೨	೧೦	೧೦	೨೦	೧೦	೧೦	೨೦
೩	ಜೋಯಿಡಾ	೩೦	೨೭	೫೭	೧೩	೮	೨೧		೨	೨	೧೭	೧೭	೩೪	೧೭	೧೭	೩೪
೪	ಮುಂಡಗೋಡ	೭೬	೮೧	೧೫೭	೧೭	೨೭	೪೪	೩	೩	೬	೫೬	೫೧	೧೦೭	೫೬	೫೧	೧೦೭
೫	ಯಲ್ಲಾಪುರ	೨೭೮	೨೭೮	೫೫೬	೮೮	೮೯	೧೭೭	೧೪	೧೧	೨೫	೧೭೯	೧೭೪	೩೫೩	೧೭೯	೧೭೪	೩೫೩
೬	ಶಿರಸಿ	೫೩	೪೬	೯೮	೧೯	೧೯	೩೮	೪	೪	೮	೩೦	೨೩	೫೩	೩೦	೨೩	೫೩
೭	ಹಳಿಯಾಳ	೩೪೮	೩೬೩	೭೧೧	೧೪೪	೧೫೦	೨೯೪	೧೩	೧೬	೩೩	೧೯೦	೧೯೪	೩೮೪	೧೯೦	೧೯೪	೩೮೪
ಉತ್ತರ ಕನ್ನಡ ಒಟ್ಟು		೯೨೦	೯೨೯	೧೮೪೯	೩೨೫	೩೩೦	೬೫೫	೪೨	೪೧	೮೭	೫೫೫	೫೫೧	೧೧೦೬	೫೫೫	೫೫೧	೧೧೦೬


ಲಂಬಚಿತ್ರ ೫.೩.೨. ಸಿದ್ದಿ ಬುಡಕಟ್ಟುಗಳ ಕಾಯಕಾರ್ಹರಲ್ಲದವರ ಲಿಂಗವಾರು ಪ್ರಮಾಣ



ಲಂಬಚಿತ್ರ ೫.೩.೩. ಸಿದ್ದಿ ಬುಡಕಟ್ಟುಗಳ ಅವಲಂಬಿತರ ಲಿಂಗವಾರು ಪ್ರಮಾಣ



ಲಂಬಚಿತ್ರ ೫.೩.೪. ಸಿದ್ದಿ ಬುಡಕಟ್ಟುಗಳ ದುಡಿಮೆವರ್ಗದವರ ಲಿಂಗವಾರು ಪ್ರಮಾಣ









ಕೋಷ್ಟಕ ೫.೩.೪ನ್ನು ಗಮನಿಸಿದಾಗ ಉತ್ತರಕನ್ನಡ ಜಿಲ್ಲೆಯ ಒಟ್ಟಾರೆ ಸಿದ್ದಿ ಬುಡಕಟ್ಟುಗಳ ಕಾಯಕಾರ್ಹರು ಹಾಗೂ ಕಾಯಕಸ್ಥರ ಪ್ರಮಾಣವು ಒಂದೇ ಆಗಿರುವುದು. ಮೊದಲಿಗೆ ಹೇಳಿರುವಂತೆ ಕಾಯಕಾರ್ಹರಲದ ಹಾಗೂ ಅವಲಂಬಿತವರ್ಗವು ತಮ್ಮ ಜೀವನ ನಿರ್ವಹಣೆಗಾಗಿ ಕುಟುಂಬದೊಂದಿಗೆ ಯಾವುದೇ ಲಿಂಗವಾರು ತಾರತಮ್ಯವಿಲ್ಲದೇ ಕೆಲಸಗಳನ್ನು ಮಾಡುತ್ತಾರೆ. ಅದರೆ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ದೊರೆತಿರುವ ಮಾಹಿತಿಯ ಅಂಕಿಅಂಶಗಳನ್ವಯ ಅವರ ಶ್ರಮವು ಇಲ್ಲಿ ಎಲೆಮರೆ ಕಾಯಿ ಆಗಿರುವುದು ಕೋಷ್ಟಕದಿಂದ ತಿಳಿದುಬರುತ್ತದೆ. ಜೀವನ ನಿರ್ವಹಣೆಯಲ್ಲಿ ಶ್ರಮದ ಅನಿವಾರ್ಯತೆ ಹಾಗೂ ಪ್ರಾಮುಖ್ಯತೆಯನ್ನು ಹಾಗೂ ಕೂತು ಉಣ್ಣುವ ಸಂಸ್ಕೃತಿ ಸಿದ್ದಿಗಳಲ್ಲಿ ಇಲ್ಲದಿರುವುದನ್ನು ಇದು ಸೂಚಿಸುತ್ತದೆ. ಬುಡಕಟ್ಟುಗಳಿಂದ ನಾವು ಕಲಿಯಬೇಕಾದ ವಿಷಯಗಳಲ್ಲಿ ಇದು ಒಂದಾಗಿದೆ.

೫.೪. ಭೂಹಿಡುವಳಿ

ಬುಡಕಟ್ಟುಗಳ ಜೀವನ ಮತ್ತು ಸಂಸ್ಕೃತಿ ಭೂಮಿಯ ಜೊತೆಗಿನ ಸಜೀವಸಂಬಂಧದ ಅನುಸಂಧಾನವಾಗಿದೆ. ಅದೇ ಅವರ ತಂದೆ-ತಾಯಿ ಎಲ್ಲ. ಭೂಮಿಯನ್ನು ಮಾರಾಟ ಮಾಡುವು ದೆಂದರೇ ಆಶ್ಚರ್ಯದ ವಿಷಯ. ಆಕಾಶವನ್ನು ಹೇಗೆ ಮಾರಾಟ ಮಾಡುವುದು? ಹಾಗೆಯೇ ಭೂಮಿ ನಮಗೆ ಸೇರಿದ್ದಲ್ಲ, ಬದಲಾಗಿ ನಾವು ಭೂಮಿಗೆ ಸೇರಿದ್ದೇವೆ ಎಂಬ ರೆಡ್ ಇಂಡಿಯನ್ ನಾಯಕನ ಮಾತು ಎಲ್ಲ ಬುಡಕಟ್ಟುಗಳಿಗೂ ಅನ್ವಯಿಸುತ್ತದೆ. ಭೂಮಿ ಅವರ ಜೀವನೋಪಾಯದ ಮಾರ್ಗ ಮಾತ್ರವಲ್ಲದೆ ಜೀವ, ಜೀವನವೂ ಆಗಿದೆ. ತಲೆತಲಾಂತರಗಳಿಂದ ಕುಮ್ರಿ ಬೇಸಾಯ ಮಾಡುತ್ತಾ ಬಂದವರಿಗೆ ಇಷ್ಟೇ ಜಮೀನಿಗೆ ಬೇಲಿ ಹಾಕಿಕೊಂಡು ತನ್ನದೆಂಬ ದಾಖಲೆ ಇಟ್ಟುಕೊಳ್ಳ ಬೇಕೆಂದು ಎಂದೂ ಅಂದುಕೊಳ್ಳದ, ಸಾಮೂಹಿಕ ಒಡೆತನದ, ಈ ಸಮುದಾಯಗಳಿಗೆ ಇದೇ ಮುಂದೆ ತಮ್ಮ ಜೀವನಕ್ಕೇ ಕಂಟಕ ಎಂದು ಕನಸಿನಲ್ಲಿಯೂ ಊಹಿಸಿರಲಿಕ್ಕಿಲ್ಲ. ತಾವೇ ಸಾಮೂಹಿಕವಾಗಿ ಅರಣ್ಯ ಸವರಿ ಉತ್ತು ಬಿತ್ತಿ ಹಂಚಿಕೊಳ್ಳುತ್ತಿದ್ದ ಸಿದ್ದಿಗಳು ಮುಂದೆ ಅರಣ್ಯ ಕಾನೂನುಗಳು, ಹಣ, ಸಾಲ ಇತ್ಯಾದಿಗಳ ಬಲೆಯಲ್ಲಿ ಸಿಲುಕಿ ಇರುವ ಭೂಮಿಯನ್ನು ಕಳೆದುಕೊಂಡ ನಂತರ ಇದೀಗ ಭೂರಹಿತ ಕೃಷಿಕಾರ್ಮಿಕರಾಗಿ ಅದೇ ಭೂಮಿಯಲ್ಲಿ ದುಡಿಯಬೇಕಾದ ಸ್ಥಿತಿಯಲ್ಲಿದ್ದಾರೆ. ಈ ಸಮುದಾಯದ ಅಳಿದುಳಿದ ಭೂಹಿಡುವಳಿ ಎಷ್ಟಿದೆ? ಎಂತಹ ಭೂಮಿ ಇದೆ? ಎಂಬ ಮಾಹಿತಿಯನ್ನು ಈ ಕೆಳಗೆ ನೀಡಲಾಗಿದೆ.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಉತ್ತರಕನ್ನಡ ಜಿಲ್ಲೆಯ ಏಳು ತಾಲೂಕುಗಳ ಪಂಚಾಯಿತಿ ವಾರು ೪೩೭ ಕುಟುಂಬಗಳ ಸಿದ್ದಿ ಬುಡಕಟ್ಟಿನ ಭೂಹಿಡುವಳಿಗಳನ್ನು ಹೊಂದಿರುವ ಅಂಕಿಅಂಶಗಳನ್ನು ಹಾಗೂ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ಕೋಷ್ಟಕ ೫.೪.೧.ರಲ್ಲಿ ನೋಡಬಹುದು.

ಉತ್ತರಕನ್ನಡ ಜಿಲ್ಲೆಯ ತಾಲೂಕುವಾರಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಸಿದ್ದಿ ಬುಡಕಟ್ಟಿನ ಪಂಚಾಯಿತಿವಾರು ಭೂಹಿಡುವಳಿಗಳನ್ನು ನೋಡಲಾಗಿ ಕಂಡುಬಂದ ಅಂಶಗಳು ಈ


ಕೆಳಗಿನಂತಿವೆ. ಒಟ್ಟಾರೆ ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟಿನ ಸಮುದಾಯದ ೪೩೭ ಕುಟುಂಬಗಳನ್ನು ಅವಲೋಕಿಸಲಾಗಿ ಒಣಭೂಮಿಗಳನ್ನು ಕೃಷಿಭೂಮಿಗಳನ್ನಾಗಿ ಕುಟುಂಬಗಳು ಜೀವನ ನಿರ್ವಹಣೆಯ ಆರ್ಥಿಕತೆಯ ಮೂಲವಾಗಿ ಕಂಡುಕೊಂಡಿರುತ್ತದೆ. ಒಟ್ಟಾರೆ ಉತ್ತರಕನ್ನಡ ಜಿಲ್ಲಾವಾರು ೧೫೨ ಎಕರೆ ಒಣಭೂಮಿ ಹಾಗೂ ೧೨.೭ ಎಕರೆಯನ್ನು ನೀರಾವರಿ ಭೂಹಿಡುವಳಿ ಹೊಂದಿದ್ದು, ಶ್ರೇಣಿವಾರು ಎ* (ದೊಡ್ಡ ಭೂಹಿಡುವಳಿದಾರರು) = ಶೇ. ೦, ಬಿ* (ಮಧ್ಯಮ ಭೂಹಿಡುವಳಿದಾರರು) = ಶೇ. ೦, ಸಿ* (ಅರೆಮಧ್ಯಮ ಭೂಹಿಡುವಳಿದಾರರು)= ಶೇ. ೧ರಷ್ಟು, ಡಿ* (ಸಣ್ಣ ಭೂಹಿಡುವಳಿದಾರರು) = ಶೇ. ೫ರಷ್ಟು, ಇ* (ಅತಿಸಣ್ಣ ಭೂಹಿಡುವಳಿದಾರರು) = ಶೇ. ೧೪ರಷ್ಟು, ಎಫ್* = ಶೇ. ೮೦ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ (ಅನುಬಂಧದಲ್ಲಿ ಗಮನಿಸಿ).

ಕೋಷ್ಟಕ ೫.೪.೧. ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟಿನ ಭೂಹಿಡುವಳಿ ಪ್ರಮಾಣ

	ಕುಟುಂಬ	ಭೂಹಿಡುವಳಿ (ಎಕರೆಗಳಲ್ಲಿ)			ಭೂ ಹಿಡುವಳಿ ಶ್ರೇಣಿಗಳಲ್ಲಿ					
					೧೫ ಎ. ಮೇಲ್ಪಟ್ಟು	೭.೫-೧೫.೦೦	೫.೦೦-೭.೫೦	೨.೫-೫.೦೦	೦.೫-೨.೫೦	ಭೂ ರಹಿತ
ತಾಲೂಕುಗಳು	ಗಳು	ಒಣ	ನೀರಾವರಿ	ಒಟ್ಟು	ಎ *	ಬಿ *	ಸಿ *	ಡಿ *	ಇ *	ಎಫ್ *
ಅಂಕೋಲಾ	೫೮	೫೮	೦	೫೭.೮೨			೧	೧೦	೧೨	೩೫
ಕಾರವಾರ	೫	೦	೦	೦						೫
ಜೋಯಿಡಾ	೧೩	೨	೦	೨					೧	೧೨
ಮುಂಡಗೋಡ	೩೬	೪	೦	೪				೧	೧	೩೪
ಯಲ್ಲಾಪುರ	೧೪೭	೧೯	೩	೨೧.೫					೨೮	೧೧೯
ಶಿರಸಿ	೨೦	೭	೯.೭	೧೬.೭				೩	೭	೧೦
ಹಳಿಯಾಳ	೧೫೮	೬೨	೦	೬೨.೩೨			೨	೮	೧೩	೧೩೫
ಒಟ್ಟು	೪೩೭	೧೫೨	೧೨.೭	೧೬೪.೩೪			೩	೨೨	೬೨	೩೫೦

ಸಿದ್ದಿ ಬುಡಕಟ್ಟಿನ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಿದಾಗ ಅಂಕೋಲಾ, ಕಾರವಾರ, ಜೋಯಿಡಾ, ಮುಂಡಗೋಡ, ಯಲ್ಲಾಪುರ, ಶಿರಸಿ ಹಾಗೂ ಹಳಿಯಾಳ ತಾಲೂಕುವಾರು ಪಂಚಾಯಿತಿಗಳ ನೆಲೆಗಳು ಸೇರಿದಂತೆ ೩೫೦ ಭೂರಹಿತ ಕುಟುಂಬಗಳು ಕಂಡುಬರುತ್ತವೆ. ಮಳೆಯಾಧಾರಿತ ಭೂಮಿಗಳನ್ನು ಹೊಂದಿರುವ ಕುಟುಂಬಗಳಾಗಿದ್ದರಿಂದ ಮುಂಗಾರು ಮತ್ತು ಹಿಂಗಾರು ಮಳೆಯನ್ನು ಆಶ್ರಯಿಸಿ ಬೆಳೆಗಳನ್ನು ಬೆಳೆದುಕೊಳ್ಳುತ್ತಾರೆ. ಹೆಚ್ಚಿನ ಲಾಭವನ್ನು ಕಾಣದ ಈ ಭೂಮಿಗಳ ಕೃಷಿಯಿಂದ ಇವರ ಬಡತನದ ಸ್ವರೂಪ, ಆರ್ಥಿಕಮಟ್ಟ ಇವರ ಬದುಕನ್ನು ಈ ಭೂಹಿಡುವಳಿಗಳ ಪ್ರಮಾಣ ತೋರಿಸುತ್ತಿದೆ(ವೃತ್ತಚಿತ್ರ: ೫.೪.೧.ರಲ್ಲಿ).

ವೃತ್ತಚಿತ್ರ ೫.೪.೧. ಸಿದ್ದಿ ಬುಡಕಟ್ಟಿನ ಭೂಹಿಡುವಳಿ ಪ್ರಮಾಣ



ಹೆಚ್ಚಿನ ಜನ ಭೂಮಿಯ ಬಗ್ಗೆ ಸರಿಯಾದ ಮಾಹಿತಿ ನೀಡಲು ಹಿಂಜರಿಯುತ್ತಾರೆ. ಭೂಮಿ ಹೆಚ್ಚಿದೆ ಎಂದರೆ ಸಿಗುವ ಸೌಲಭ್ಯಗಳಿಂದಲೂ ವಂಚಿತರಾಗಬಹುದು ಅಥವಾ ತಾವು ಒತ್ತುವರಿ ಮಾಡಿರುವ ಜಮೀನಿನಿಂದ ಹೊರಹಾಕಬಹುದು ಎಂಬ ಭಯವೂ ಇವರನ್ನು ಕಾಡುತ್ತಿರಬಹುದು. ಇತ್ತೀಚಿನ ದಿನಗಳಲ್ಲಿ 'ಅರಣ್ಯಭೂಮಿ ಹಕ್ಕುಪತ್ರ'ದ ಅಡಿಯಲ್ಲಿ ಸರ್ಕಾರ ಬುಡಕಟ್ಟುಗಳು ಒತ್ತುವರಿ ಮಾಡಿದ ಭೂಮಿಯನ್ನು ಸಕ್ರಮ ಮಾಡುತ್ತಿರುವುದು ಸ್ವಾಗತಾರ್ಹ. ಆದರೆ ಇದರ ಬಗ್ಗೆ ಸಿದ್ದಿಗಳಲ್ಲಿ ಸೂಕ್ತ ಮಾಹಿತಿ ಮತ್ತು ಜಾಗೃತಿಯ ಕೊರತೆ ಇದೆ. ಹೀಗಾಗಿಯೇ ಭೂರಹಿತರ ಸಂಖ್ಯೆ ಇಲ್ಲಿ ಹೆಚ್ಚಾಗಿದೆ. ೨೦೧೧ರ ಜಿಲ್ಲಾಧಿಕಾರಿಗಳ ಕಚೇರಿಯ ದಾಖಲೆಯಂತೆ ಒಟ್ಟು ೧೮೯೬ ಸಿದ್ದಿಗಳು ಹಕ್ಕುಪತ್ರಕ್ಕೆ ಅರ್ಜಿಹಾಕಿದರೆ ಕೇವಲ ೬೧೫ ಜನರಿಗೆ ಮಾತ್ರ ಹಕ್ಕುಪತ್ರ ನೀಡಲಾಗಿದೆ. ಇದರ ಮಾಹಿತಿಯನ್ನು ಮುಂದಿನ ಅಧ್ಯಾಯದಲ್ಲಿ ನೀಡಲಾಗಿದೆ. ಭೂಮಿ ಎಂಬ ಮೂಲ ಉತ್ಪಾದನಾ ಪರಿಕರದ(ಬುಡಕಟ್ಟುಗಳಿಗಿರುವ ಉತ್ಪಾದನಾ ಮೂಲಗಳು ಕೇವಲ ಎರಡೇ- ಭೂಮಿ ಮತ್ತು ಶ್ರಮ) ಮೇಲೆ ಯಾವುದೇ ಮಾಲೀಕತ್ವವೂ ಇಲ್ಲದೆ, ಇದನ್ನು ನಿಯಂತ್ರಿಸುವವರಲ್ಲಿ ಜೀತ ಮಾಡುವ, ಶೋಷಣೆಗೊಳಗಾಗುವ ಸಿದ್ದಿ ಸಮುದಾಯಕ್ಕೆ ನ್ಯಾಯ ದೊರೆಯಬೇಕಿದ್ದರೆ ಪ್ರತಿಯೊಂದು ಕುಟುಂಬಕ್ಕೂ ಕೊಂಚವಾದರೂ ಜಮೀನು ಮತ್ತು ವಾಸಸ್ಥಳದ ಮೇಲಿನ ಹಕ್ಕು ಇರಬೇಕಾದದ್ದು ನ್ಯಾಯ.

೫.೫. ಸಿದ್ದಿ ಬುಡಕಟ್ಟು ಅವಲಂಬಿಸಿದ ವೃತ್ತಿಗಳು

ಪ್ರಸ್ತುತ ಉತ್ತರಕನ್ನಡ ಜಿಲ್ಲೆಯ ಅಂಕೋಲಾ, ಕಾರವಾರ, ಜೋಯಿಡಾ, ಮುಂಡಗೋಡ, ಯಲ್ಲಾಪುರ, ಶಿರಸಿ ಹಾಗೂ ಹಳಿಯಾಳ ತಾಲೂಕಿನ ಪಂಚಾಯಿತಿವಾರು ಸಿದ್ದಿ ಸಮುದಾಯಗಳು



ತಮ್ಮ ಜೀವನ ನಿರ್ವಹಣೆಗೆ ಪರಂಪರಾಗತವಾದ ಮತ್ತು ಆಧುನಿಕವಾದ ಹಲವು ಬಗೆಯ ಕಸುಬುಗಳನ್ನು ಅಳವಡಿಸಿಕೊಂಡಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಬದಲಾದ ಆರ್ಥಿಕ ಪರಿಸ್ಥಿತಿಯಲ್ಲಿ ಇವರ ಜೀವನಕ್ರಮ ಬದಲಾವಣೆಗೆ ಒಳಪಡುತ್ತಿದೆ.

ಇತ್ತೀಚೆಗೆ ಸ್ವಲ್ಪ ಪ್ರಜ್ಞಾವಂತರಾದ ಸಿದ್ದಿ ಸಮುದಾಯಗಳು ಕೃಷಿಕೂಲಿ, ಇತರೆ ಕೂಲಿಕಾರ್ಮಿಕರಾಗಿ, ದಿನಗೂಲಿ, ಮನೆಗೆಲಸ, ಸರ್ಕಾರಿ, ಖಾಸಗಿ ಹಾಗೂ ಇತರೆ ವೃತ್ತಿಗಳಲ್ಲಿ ಗೌಂಡಿಕೆಲಸ, ವಾಹನ ಚಾಲಕರಾಗಿ, ಅರಣ್ಯ ಕಾವಲುಗಾರ, ಕುರಿ, ಮೇಕೆ, ಕೋಳಿ ಸಣ್ಣ ಪ್ರಮಾಣದ ಸಾಕಾಣಿಕೆ ಇತ್ಯಾದಿಗಳಲ್ಲಿ ತೊಡಗಿಕೊಂಡಿದ್ದಾರೆ. ಅಲ್ಲದೇ ಪಶುಪಾಲನೆಯಾಗಿ ಅವುಗಳನ್ನು ತಮ್ಮ ಆರ್ಥಿಕತೆಯ ರಕ್ಷಣೆಯ ದೃಷ್ಟಿಯಿಂದ ಸಾಕುತ್ತಾರೆ. ಹೀಗೆ ಒಟ್ಟಾರೆ ಉತ್ತರಕನ್ನಡ ಜಿಲ್ಲೆಯ ಕ್ಷೇತ್ರಕಾರ್ಯದಲ್ಲಿ ಸಿದ್ದಿ ಸಮುದಾಯಗಳು ಅನುಸರಿಸುವ ವೃತ್ತಿಗಳ ಅಂಕಿಅಂಶಗಳನ್ನು ಗಮನಿಸೋಣ.


ಕೋಷ್ಟಕ: ೫.೫.೧. ಉತ್ತರಕನ್ನಡ ಜಿಲ್ಲೆಯ ಸಿದ್ದಿ ಸಮುದಾಯಗಳ ಲಿಂಗವಾರು ಕಸುಬುಗಳು

ಕ್ರಸಂ.	ವಿವರ	ಗಂಡು	ಹೆಣ್ಣು	ಒಟ್ಟು
೧.	ಕೃಷಿಕರು	೪೪	೩೦	೭೪
೨.	ಕೃಷಿಕೂಲಿ	೪೮೩	೪೫೭	೯೪೦
೩.	ಮನೆಗೆಲಸ	೦	೨೫	೨೫
೪.	ಸರ್ಕಾರಿ	೫	೨	೭
೫.	ಖಾಸಗಿ	೨	೦	೨
೬.	ಇತರೆ	೩	೨	೫
	ಒಟ್ಟು	೫೩೭	೫೧೬	೧೦೫೩

ಕೋಷ್ಟಕ ೫.೫.೧ ರಲ್ಲಿ ಸಿದ್ದಿ ಸಮುದಾಯದವರಿಗೆ ಕೃಷಿಭೂಮಿ ಇದ್ದರೂ ಅದು ಒಣಭೂಮಿಗಳಾಗಿ ಶೇ. ೧೪ರಷ್ಟು ಅತಿಸಣ್ಣ ಭೂಹಿಡುವಳಿಯನ್ನು ಹೊಂದಿದ ಕುಟುಂಬಗಳಾಗಿದ್ದು, ಶೇ. ೫ರಷ್ಟು ಸಣ್ಣ ಭೂಹಿಡುವಳಿಯನ್ನು ಹೊಂದಿರುವ ಕುಟುಂಬಗಳಾಗಿವೆ. ಹೀಗಾಗಿ ಅಲ್ಪ ಪ್ರಮಾಣದಲ್ಲಿರುವ ಭೂಹಿಡುವಳಿಯ ಕುಟುಂಬಗಳು ಮಾತ್ರ ಕೃಷಿಕರಾಗಿದ್ದರೂ ಕೆಲವು ಕುಟುಂಬಗಳು ಆರ್ಥಿಕ ಹಿನ್ನಡೆಯಿಂದ ಸ್ವಂತ ಭೂಮಿಗಳನ್ನು ಉಳುಮೆ ಮಾಡುವುದರ ಜೊತೆಗೆ ಇತರೆ ಭೂಮಿಗಳಲ್ಲಿ ಕೃಷಿಕೂಲಿಗಳಾಗಿರುವುದು ಕಂಡುಬರುತ್ತದೆ. ಕೃಷಿಕರು ಒಟ್ಟು ಶೇ. ೭.೦೩(೭೪)ರಷ್ಟಾಗಿದ್ದು, ಅದರಲ್ಲಿ ಲಿಂಗವಾರು ಗಂಡು ಶೇ. ೮.೧೯ರಷ್ಟಿದ್ದಾರೆ. ಮಹಿಳೆಯರು ಶೇ. ೫.೮೧ರಷ್ಟು ಇರುವುದಾಗಿದೆ. ಕೂಲಿ ಪ್ರಮಾಣ ಒಟ್ಟು ಶೇ. ೮೯.೨೭(೯೪೦)ರಷ್ಟಿದೆ. ಅದರಲ್ಲಿ ಗಂಡು ಶೇ. ೮೯.೯೪ ರಷ್ಟಿದ್ದಾರೆ. ಮಹಿಳೆಯರು ಶೇ. ೮೮.೫೭ರಷ್ಟು. ಮನೆಕೆಲಸದಲ್ಲಿ ಕೇವಲ ಮಹಿಳೆಯರೇ ಹೆಚ್ಚಾಗಿದ್ದು ಒಟ್ಟು ಪ್ರಮಾಣವು ಶೇ. ೨.೩೭(೨೫)ರಷ್ಟಿದೆ. ಮಹಿಳೆಯರು ಶೇ. ೪.೮೪ರಷ್ಟು ಇರುವುದು ಕಂಡುಬರುತ್ತದೆ. ಸರ್ಕಾರಿ ವೃತ್ತಿಗಳಲ್ಲಿ ಬರುವ ಪೊಲೀಸ್, ನರ್ಸ್, ಸೈನಿಕ, ಡಿ.ದರ್ಜೆಯ ನೌಕರಿಯಲ್ಲಿ ತೊಡಗಿಸಿ

ಕೊಂಡಿರುವವರ ಒಟ್ಟು ಪ್ರಮಾಣವು ಶೇ. ೦.೬೬(೭)ರಷ್ಟಿದೆ. ಇದರಲ್ಲಿ ಗಂಡು ಶೇ. ೦.೯೩ರಷ್ಟಿದ್ದಾರೆ. ಮಹಿಳೆಯರು ಶೇ. ೦.೩೯ರಷ್ಟು ಇರುವುದು ಕಂಡುಬರುತ್ತದೆ. ಖಾಸಗಿ ಕೆಲಸದಲ್ಲಿ ಪುರುಷರ ಒಟ್ಟು ಪ್ರಮಾಣವು ಶೇ. ೦.೧೯(೨)ರಷ್ಟಿದೆ. ಇದರಲ್ಲಿ ಗಂಡು ಶೇ. ೦.೩೭ರಷ್ಟು ಇರುವುದು. ಹಾಗೂ ಇತರೆ ವೃತ್ತಿಗಳಲ್ಲಿ ಬರುವ ಗೌಂಡಿಕೆಲಸ, ವಾಹನ ಚಾಲಕ, ಅರಣ್ಯ ಕಾವಲುಗಾರ ಇತ್ಯಾದಿಗಳನ್ನು ತೊಡಗಿಸಿಕೊಂಡಿರುವವರ ಒಟ್ಟು ಶೇ. ೦.೪೭(೫)ರಷ್ಟಿದೆ. ಇವರಲ್ಲಿ ಪುರುಷರು ಶೇ. ೦.೫೬ರಷ್ಟಿದ್ದಾರೆ. ಮಹಿಳೆಯರು ಶೇ. ೦.೩೯ರಷ್ಟಿರುವುದು ಮೇಲಿನ ಕೋಷ್ಟಕ ಮತ್ತು ವೃತ್ತಚಿತ್ರ ದಿಂದ ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟಿನ ಒಟ್ಟಾರೆ ಕಸುಬುಗಳನ್ನು ಗಮನಿಸಬಹುದಾಗಿದೆ (ಅನುಬಂಧದಲ್ಲಿ ಗಮನಿಸಿ).

ವೃತ್ತಚಿತ್ರ ೫.೫.೧ ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟಿನ ಕಸುಬುಗಳ ಪ್ರಮಾಣ



ಈಗಾಗಲೇ ತಿಳಿಸಿದಂತೆ ಬುಡಕಟ್ಟುಗಳಲ್ಲಿ ಕಾಯಕಾರ್ಹರು, ಅಲ್ಲದವರೆಂಬ ವಿಂಗಡಣೆ ಇಲ್ಲ. ಇಲ್ಲಿ ಎಲ್ಲರೂ ಕೂಡಿ ತಂತಮ್ಮ ಕೈಲಾದ ಕೆಲಸ ಮಾಡಬೇಕು. ಹೀಗಾಗಿ ಸಿದ್ದಿಗಳಲ್ಲಿ ಕೆಲಸ ಮಾಡುವವರ ಸಂಖ್ಯೆ ಹೆಚ್ಚಾಗಿರುವಂತೆ ಕಂಡುಬಂದರೂ ಮೂಡುವ ಪ್ರಶ್ನೆಯೆಂದರೆ 'ಇಷ್ಟೆಲ್ಲಾ ಜನ ಕೆಲಸ ಮಾಡಿದರೂ ಈ ಸಮುದಾಯವೇಕೆ ಆರ್ಥಿಕವಾಗಿ ಇನ್ನೂ ಮುಂದುವರೆದಿಲ್ಲ? ಇದಕ್ಕೆ ಉತ್ತರ ಅವರ ಉತ್ಪಾದನಾ ಸಂಬಂಧಗಳು ಮತ್ತು ಉತ್ಪಾದನಾ ಸಾಧನಗಳ ಮೇಲೆ ಮಾಲೀಕತ್ವವಿಲ್ಲ ದಿರುವುದೇ ಆಗಿದೆ. ಬಾಲಕಾರ್ಮಿಕರು, ಜೀತಪದ್ದತಿ, ಸಾಲಬಾಧೆ ಇತ್ಯಾದಿಗಳೆಲ್ಲವೂ ಇಲ್ಲಿ ನಿಷೇಧಗೊಂಡಿಲ್ಲ, ಬದಲಾಗಿ ನಿತ್ಯಜೀವನದ ಅಂಗಗಳಾಗಿವೆ. ಜೀತದ ದುಡಿಮೆಯ ಫಲ ಸಾಲ–ಬಡ್ಡಿಗಳಿಗೇ ಹೊಂದಾಣಿಕೆಯಾದಾಗ ದುಡಿದಿರುವುದು ನಿಜವಾದರೂ ಪ್ರತಿಫಲ ಇವರಿಗೇ ಸಿಗುವುದಿಲ್ಲ.



೫.೬. ಪಶುಪಾಲನೆ

ಪಶುಪಾಲನೆಯೂ ಬೇಟೆ ಹಾಗೂ ಕೃಷಿಯಂತೆ ಬುಡಕಟ್ಟುಗಳ ಪಾರಂಪರಿಕ ಕಸುಬಾಗಿದೆ. ಕೆಲವು ಸಮುದಾಯಗಳು ಸಂಪೂರ್ಣವಾಗಿ ಪಶುಪಾಲಕ ಸಮುದಾಯಗಳಾಗಿ ಮಾರ್ಪಟ್ಟರೆ ಇನ್ನೂ ಕೆಲವು ಸಮುದಾಯಗಳಿಗೆ ಇದು, ಕೃಷಿಗೆ ಪೂರಕವಾದ ಆನುಷಂಗಿಕ ಕಸುಬಾಗಿದೆ. ಸಿದ್ದಿಗಳು ಮೂಲತಃ ಬೇಟೆ ಮತ್ತು ಆಹಾರ ಸಂಗ್ರಹಣೆಯ ಬುಡಕಟ್ಟಾಗಿದ್ದು ಪಶುಪಾಲನೆ ಅವರ ಮುಖ್ಯ ಕಸುಬೇನೂ ಆಗಿಲ್ಲ. ಇದಕ್ಕೆ ಕಾರಣ ಅವರ ಚಾರಿತ್ರಿಕತೆ, ಭೌಗೋಳಿಕತೆ ಮತ್ತು ಆರ್ಥಿಕತೆಗಳಾಗಿವೆ. ಸಿದ್ದಿಗಳು ಕಡಿದಾದ ಬೆಟ್ಟಗುಡ್ಡಗಳ ದಟ್ಟ ಅರಣ್ಯದಲ್ಲಿ ವಾಸಿಸುತ್ತಿರುವುದರಿಂದ ಆ ಪ್ರದೇಶ ಹುಲ್ಲುಗಾವಲು ಅಥವಾ ಮೈದಾನದಂತೆ ಪಶುಪಾಲನೆಗೆ ಸೂಕ್ತವಾಗಿಲ್ಲ. ಆರ್ಥಿಕವಾಗಿ ಪಶುಗಳನ್ನು ಕೊಂಡು ಸಾಕುವಷ್ಟು ಬಂಡವಾಳವೂ ಸಿದ್ದಿಗಳಿಗಿಲ್ಲ. ಆದರೆ ಸಿದ್ದಿಗಳ ಪಶುಸಂಪತ್ತಿನ ಪ್ರಮುಖ ಲಕ್ಷಣವೆಂದರೆ ಕೋಳಿಗಳನ್ನು ಸಾಕಿಕೊಳ್ಳುವುದು. ಬಹುತೇಕ ಕುಟುಂಬಗಳು ಕೋಳಿಗಳನ್ನು ಹೊಂದಿವೆ. ಇದು ಆಹಾರ, ಆಚರಣೆ ಮತ್ತು ಆಪದ್ಧನ ಎಲ್ಲವೂ ಆಗಿರುವುದೇ ಇದಕ್ಕೆ ಕಾರಣವಿರಬಹುದು. ಸರ್ಕಾರದ ಪಶುಸಂಗೋಪನಾ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಇನ್ನಷ್ಟು ಅರಿವು ಮೂಡಿಸುವ ಅವಶ್ಯಕತೆ ಕಂಡುಬರುತ್ತಿದೆ.

ಸಿದ್ದಿ ಬುಡಕಟ್ಟು ಅವಲಂಬಿಸಿದ ಪಶುಪಾಲನೆ

ಬೇಟೆಗಾರಿಕೆಯಿಂದ ವಿಮುಖರಾದ ಸಿದ್ದಿ ಬುಡಕಟ್ಟು ಗುಡ್ಡಗಾಡಿನ ದಟ್ಟ ಕಾಡುಗಳಲ್ಲಿ ಸುಲಭವಾಗಿ ಜೀವನ ನಿರ್ವಹಣೆ ಮಾಡಲು ಕೃಷಿಯೊಂದಿಗೆ ಅನುಕೂಲವಾಗುವ ಪಶುಪಾಲನೆ ಯೊಂದಿಗೆ ಜೀವನ ನಿರ್ವಹಣೆ ಮಾಡತೊಡಗಿದರು. ಬಹುತೇಕ ಸಿದ್ದಿಗಳು ಗುಲಾಮಗಿರಿಯಿಂದಲೇ ಹೊಟ್ಟೆ ಹೊರೆದುಕೊಳ್ಳುತ್ತಿದ್ದುದಾಗಿ ತಿಳಿದುಬರುತ್ತದೆ. ಗುಲಾಮಗಿರಿ ನಿಷೇಧ ಕಾಯ್ದೆ ಬಂದ ತರುವಾಯ ಗುಲಾಮಗಿರಿಯಿಂದ ಇವರಿಗೆ ಮುಕ್ತಿ ದೊರೆಯಿತು. ಅವರ ಸ್ವಂತ ಹಾಗೂ ಇತರೆ ವರ್ಗದವರ ಭೂಮಿಗಳಲ್ಲಿ ಉಳುಮೆ ಮಾಡಲು ಎತ್ತು ಮತ್ತು ಎಮ್ಮೆಗಳನ್ನು ಕೃಷಿ ಸಾಧನಗಳಲ್ಲೊಂದಾಗಿ ಬಳಸಿ ಕೆಲಸ ನಿರ್ವಹಿಸುತ್ತಿದ್ದರು.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಉತ್ತರಕನ್ನಡ ಜಿಲ್ಲೆಯ ಪ್ರತಿ ತಾಲೂಕಿನ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರುವ ನೆಲೆಗಳ ೪೩೭ ಕುಟುಂಬಗಳಲ್ಲಿ ಪಶುಪಾಲನೆಯನ್ನು ಹೊಂದಿರುವ ಹಲವಾರು ಕುಟುಂಬಗಳ ಅಂಕಿ ಅಂಶಗಳನ್ನು ಈ ಕೆಳಕಂಡಂತೆ ನೋಡಬಹುದು.

ಕೋಷ್ಟಕ: ೫.೬೧. ಉತ್ತರಕನ್ನಡ ಜಿಲ್ಲೆಯ ಸಿದ್ದಿ ಸಮುದಾಯಗಳ ಲಿಂಗವಾರು ಕಸುಬುಗಳು

ತಾಲೂಕುಗಳು	ಪಶುಸಂಪತ್ತು(ಸಂಖ್ಯೆಗಳಲ್ಲಿ)					
	ಎತ್ತು	ಆಕಳು	ಎಮ್ಮೆ	ಕುರಿ	ಮೇಕೆ	ಕೋಳಿ
ಅಂಕೋಲಾ	೨೨	೪೦	೧೧	–	–	೨೩೮
ಕಾರವಾರ	–	–	–	–	–	೨೨
ಜೋಯಿಡಾ	೨	೨	–	–	–	೩೧
ಮುಂಡಗೋಡ	೮	–	–	–	–	೬೭
ಯಲ್ಲಾಪುರ	೪೧	೬೭	೬೧	–	–	೮೬೮
ಶಿರಸಿ	೨	೯	೬	–	–	–
ಹಳಿಯಾಳ	೫೯	೧೯	೭	೧	–	೧೨೧
ಒಟ್ಟು	೧೩೪	೧೩೭	೮೫	೧	–	೧೩೪೭


ಅಂಕೋಲಾ ತಾಲೂಕುವಾರು ಆಯ್ಕೆ ಮಾಡಿಕೊಂಡ ಪಂಚಾಯಿತಿಗಳ ನೆಲೆಗಳವಾರು ಪಶುಪಾಲನೆಯನ್ನು ನೋಡಲಾಗಿ ಒಟ್ಟಾರೆ ೫೮ ಕುಟುಂಬಗಳನ್ನು ಅವಲೋಕಿಸಲಾಗಿ ಪಶುಸಂಗೋಪನೆಯ ಒಟ್ಟು ಪ್ರಮಾಣ ಶೇ.೧೮.೨೫(೩೧೧)ರಷ್ಟಿದ್ದು, ಅವುಗಳಲ್ಲಿ ಎತ್ತು ಶೇ.೭.೦೭ರಷ್ಟು, ಆಕಳು ಶೇ.೧೨.೮೬ರಷ್ಟು, ಎಮ್ಮೆ ಶೇ. ೩.೫೪ರಷ್ಟು, ಕೋಳಿ ಶೇ. ೭೬.೫೩ರಷ್ಟಿದ್ದು ಪಶುಸಂಗೋಪಾನೆಯಿಂದ ಕುಟುಂಬಗಳು ಜೀವನ ನಿರ್ವಹಣೆಯ ಆರ್ಥಿಕ ಭದ್ರತೆಯ ಮೂಲವನ್ನು ಕಂಡುಕೊಂಡಿರುವುದು ಕೋಷ್ಟಕ ಮತ್ತು ವೃತ್ತಚಿತ್ರದಲ್ಲಿ ಗಮನಿಸಬಹುದು.

ಕಾರವಾರ ತಾಲೂಕುವಾರು ಆಯ್ಕೆ ಮಾಡಿಕೊಂಡ ಪಂಚಾಯಿತಿಗಳ ನೆಲೆಗಳವಾರು ಪಶುಪಾಲನೆಯನ್ನು ನೋಡಲಾಗಿ ಒಟ್ಟಾರೆ ೫ ಕುಟುಂಬಗಳನ್ನು ಅವಲೋಕಿಸಲಾಗಿ ಕೇವಲ ಕೋಳಿ ಸಾಕಾಣಿಕೆಯು ಮಾತ್ರ ಹೊಂದಿದೆ. ಒಟ್ಟು ಪ್ರಮಾಣ ಶೇ. ೧.೩೦(೨೨)ರಷ್ಟಿದೆ.

ಜೋಯಿಡಾ ತಾಲೂಕುವಾರು ಆಯ್ಕೆ ಮಾಡಿಕೊಂಡ ಪಂಚಾಯಿತಿಗಳ ನೆಲೆಗಳವಾರು ಪಶುಪಾಲನೆಯನ್ನು ನೋಡಲಾಗಿ ಒಟ್ಟಾರೆ ೧೩ ಕುಟುಂಬಗಳನ್ನು ಅವಲೋಕಿಸಲಾಗಿ ಪಶುಸಂಗೋಪನೆಯ ಒಟ್ಟು ಪ್ರಮಾಣ ಶೇ.೨.೦೫(೩೫)ರಷ್ಟಿದ್ದು, ಅವುಗಳಲ್ಲಿ ಎತ್ತು ಶೇ. ೫.೭೧ರಷ್ಟು, ಆಕಳು ಶೇ.೫.೭೧ರಷ್ಟು, ಕೋಳಿ ಶೇ. ೮೮.೫೭ರಷ್ಟಿದೆ.

ಮುಂಡಗೋಡ ತಾಲೂಕುವಾರು ಆಯ್ಕೆ ಮಾಡಿಕೊಂಡ ಪಂಚಾಯಿತಿಗಳ ನೆಲೆಗಳವಾರು ಪಶುಪಾಲನೆಯನ್ನು ನೋಡಲಾಗಿ ಒಟ್ಟಾರೆ ೩೬ ಕುಟುಂಬಗಳನ್ನು ಅವಲೋಕಿಸಲಾಗಿ ಪಶುಸಂಗೋಪನೆಯ ಒಟ್ಟು ಪ್ರಮಾಣ ಶೇ.೪.೪೦(೭೫)ರಷ್ಟಿದ್ದು, ಅವುಗಳಲ್ಲಿ ಎತ್ತು ಶೇ. ೧೦.೬೭ರಷ್ಟು, ಕೋಳಿ ಶೇ. ೮೯.೩೩ರಷ್ಟಿದೆ.

ವೃತ್ತಚಿತ್ರ ೫.೬.೧. ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟಿನ ಪಶುಸಂಪತ್ತು ಪ್ರಮಾಣ



ಯಲ್ಲಾಪುರ ತಾಲೂಕುವಾರು ಆಯ್ಕೆ ಮಾಡಿಕೊಂಡ ಪಂಚಾಯಿತಿಗಳ ನೆಲೆಗಳವಾರು ಪಶುಪಾಲನೆಯನ್ನು ನೋಡಲಾಗಿ ಒಟ್ಟಾರೆ ೧೪೭ ಕುಟುಂಬಗಳನ್ನು ಅವಲೋಕಿಸಲಾಗಿ ಪಶುಸಂಗೋಪನೆಯ ಒಟ್ಟು ಪ್ರಮಾಣ ಶೇ. ೬೦.೮೬(೧೦೩೭)ರಷ್ಟಿದ್ದು, ಅವುಗಳಲ್ಲಿ ಎತ್ತು ಶೇ. ೩.೯೫ರಷ್ಟು, ಆಕಳು ಶೇ. ೬.೪೬ರಷ್ಟು, ಎಮ್ಮೆ ಶೇ. ೫.೮೮ರಷ್ಟು, ಕೋಳಿ ಶೇ. ೮೩.೭೦ರಷ್ಟಿದೆ.

ಶಿರಸಿ ತಾಲೂಕುವಾರು ಆಯ್ಕೆ ಮಾಡಿಕೊಂಡ ಪಂಚಾಯಿತಿಗಳ ನೆಲೆಗಳವಾರು ಪಶುಪಾಲನೆಯನ್ನು ನೋಡಲಾಗಿ, ಒಟ್ಟಾರೆ ೨೦ ಕುಟುಂಬಗಳನ್ನು ಅವಲೋಕಿಸಲಾಗಿ ಪಶುಸಂಗೋಪನೆಯ ಒಟ್ಟು ಪ್ರಮಾಣ ಶೇ. ೦.೯೯(೧೭)ರಷ್ಟಿದ್ದು, ಅವುಗಳಲ್ಲಿ ಎತ್ತು ಶೇ. ೧೧.೭೬ರಷ್ಟು, ಆಕಳು ಶೇ. ೫೨.೯೪ರಷ್ಟು, ಎಮ್ಮೆ ಶೇ. ೩೫.೨೯ರಷ್ಟಿದೆ.

ಹಳಿಯಾಳ ತಾಲೂಕುವಾರು ಆಯ್ಕೆ ಮಾಡಿಕೊಂಡ ಪಂಚಾಯಿತಿಗಳ ನೆಲೆಗಳವಾರು ಪಶುಪಾಲನೆಯನ್ನು ನೋಡಲಾಗಿ ಒಟ್ಟಾರೆ ೧೫೮ ಕುಟುಂಬಗಳನ್ನು ಅವಲೋಕಿಸಲಾಗಿ ಪಶುಸಂಗೋಪನೆಯ ಒಟ್ಟು ಪ್ರಮಾಣ ಶೇ. ೧೨.೧೫(೨೦೭)ರಷ್ಟಿದ್ದು, ಅವುಗಳಲ್ಲಿ ಎತ್ತು ಶೇ. ೨೮.೫೦ರಷ್ಟು, ಆಕಳು ಶೇ. ೯.೧೮ರಷ್ಟು, ಎಮ್ಮೆ ಶೇ. ೩.೩೮ರಷ್ಟು, ಕುರಿ ಶೇ. ೦.೪೮ರಷ್ಟು, ಕೋಳಿ ಶೇ. ೫೮.೪೫ರಷ್ಟಿದೆ (ಅನುಂಬಧವನ್ನು ಗಮನಿಸಿ).

ಒಟ್ಟಾರೆ ಸಿದ್ದಿ ಬುಡಕಟ್ಟಿನ ಪಶುಪಾಲನೆಯನ್ನು ನೋಡಿದಾಗ ಇಲ್ಲಿಯೂ ಬಡತನದ ಸ್ವರೂಪ, ಆರ್ಥಿಕಮಟ್ಟ ಇವರ ಬದುಕನ್ನು ತೋರಿಸುತ್ತದೆ. ಪಶುಸಂಗೋಪನೆ ಇಲ್ಲಿ ಅವರ ಕುಟುಂಬ ನಿರ್ವಹಣೆಯಲ್ಲಿ ಒಂದು ಭಾಗವಾಗಿರುವುದು. ಎತ್ತು, ಎಮ್ಮೆ, ಆಕಳುಗಳನ್ನು ಕೆಲವು ಕುಟುಂಬಗಳು ಹೊಂದಿರುವುದು ಕಂಡುಬಂದರೂ ಅವುಗಳ ಪ್ರಮಾಣ ತುಂಬಾ ಸಣ್ಣ ಪ್ರಮಾಣದಲ್ಲಿರುವುದು. ಕೆಲವು ಭೂಹಿಡುವಳಿಯನ್ನು ಹೊಂದಿರುವ ಕುಟುಂಬಗಳು ತಮ್ಮ ಭೂಮಿಯನ್ನು ಉಳುಮೆ ಹಾಗೂ ಕೃಷಿಯ ಕೆಲಸಗಳಲ್ಲಿ ಒಂದು ಸಾಧನವಾಗಿ ಬಳಸಿಕೊಳ್ಳುವುದರ ಜೊತೆಗೆ ಅವುಗಳ ಹೈನುಗಾರಿಕೆಯಿಂದ ತಮ್ಮ ದಿನನಿತ್ಯದ ಆಹಾರವಾಗಿ ಹಾಲು, ಮೊಸರು, ಬೆಣ್ಣೆ, ತುಪ್ಪವನ್ನು ಬಳಸಿಕೊಳ್ಳುವುದಾಗಿದೆ. ಜೊತೆಗೆ ಕೋಳಿ ಸಾಕಾಣಿಕೆಯು ಇವರಲ್ಲಿ ಶೇ. ೭೯ರಷ್ಟು ಪ್ರಮಾಣದಲ್ಲಿರುವುದು



ಕಂಡುಬರುವುದು. ಕೋಳಿಯನ್ನು ಇವರು ತಮ್ಮ ಧಾರ್ಮಿಕ ಆಚರಣೆಗಳಿಗೂ ಹಾಗೂ ಆರ್ಥಿಕ ಅವಲಂಬನೆಯ ಒಂದು ಭಾಗವಾಗಿ ಇವುಗಳನ್ನು ಬಳಸಿಕೊಳ್ಳುತ್ತಾರೆ.

೫.೭. ಸಿದ್ದಿಯರ ದುಡಿಮೆಯ ಲಿಂಗಸಂಬಂಧಿ ಆಯಾಮಗಳು

ಇತ್ತೀಚಿನವರೆಗೆ ಶೋಷಣೆಯೆಂದರೆ ಮುಂದುವರಿದ ಮತ್ತು ಹಿಂದುಳಿದ ಸಮುದಾಯಗಳ ನಡುವೆ ಮಾತ್ರ ಇರುತ್ತದೆ ಎಂದು ಭಾವಿಸಲಾಗಿತ್ತು. ಆದರೆ ಇದು ಲಿಂಗಸಂಬಂಧಿಯಾಗಿ ಎಲ್ಲ ಜನಾಂಗಗಳಲ್ಲೂ, ಎಲ್ಲರ ಮನೆಗಳಲ್ಲೂ ಇರುತ್ತದೆಂದು ಕಂಡುಕೊಂಡ ಮೇಲೆ ಲಿಂಗಸಂಬಂಧಗಳಿಗೆ ಹೊಸ ಆಯಾಮ ದೊರೆಯಿತು. ಸಿದ್ದಿಗಳಲ್ಲಿ ಪಿತೃಪ್ರಧಾನ ಕುಟುಂಬವಿದ್ದು 'ದುಡಿಮೆ ಮತ್ತು ಕಷ್ಟ'ಗಳಲ್ಲಿ ಹೆಚ್ಚಿನ ಪಾಲಿರುವುದನ್ನು ಬಿಟ್ಟರೆ ಸಿದ್ದಿ ಹೆಣ್ಣುಮಕ್ಕಳಿಗೆ ಯಾವುದೇ ಸ್ವಾತಂತ್ರ್ಯ, ಸಮಾನತೆ, ನೀತಿ ನಿರ್ಧಾರಗಳಲ್ಲಿ ಪಾಲು ಇತ್ಯಾದಿಗಳಿಲ್ಲ. ವಿವಾಹದ ನಂತರ ಬೇರೆ ಮನೆ ಮಾಡಿಕೊಂಡು ಹೋಗಬೇಕಾದದ್ದು ಗಂಡುಮಕ್ಕಳ ಕರ್ತವ್ಯವಾಗಿದೆ. ಇಲ್ಲಿ ಗಂಡ-ಹೆಂಡತಿ ಪರಸ್ಪರ ಒಬ್ಬರನ್ನೊಬ್ಬರು ಅರಿತುಕೊಳ್ಳಲು ಮುಕ್ತ ಸ್ವಾತಂತ್ರ್ಯ ಸಿಗುವುದಲ್ಲದೆ ಸ್ವತಂತ್ರವಾಗಿ ಬದುಕಲು ಕಲಿಯುವುದು ಮುಖ್ಯ ಆಶಯವಾಗಿದೆ. ಆದರೂ ಲಿಂಗಸಂಬಂಧಿ ಅಸಮಾನತೆ ಭಾರತದ ಇತರ ಸಮುದಾಯಗಳಂತೆ ಸಿದ್ದಿಗಳಲ್ಲೂ ಸಾಮಾನ್ಯವಾಗಿದೆ. ಬಹುತೇಕ ಸಿದ್ದಿಯರಿಗೆ ತಮ್ಮ ದೈಹಿಕ ಶಕ್ತಿಯೇ ಬಂಡವಾಳವಾಗಿದ್ದು ಕೂಲಿಯನ್ನು ಬಿಟ್ಟರೆ, ಬೇರಾವುದೇ ಉತ್ಪಾದನಾ ಮೂಲಗಳೂ ಇಲ್ಲ. ಗಂಡು-ಹೆಣ್ಣುಗಳಿಬ್ಬರೂ ಕೂಲಿ ಮಾಡಿಯೇ ಜೀವನ ಮಾಡಬೇಕಿರುವುದು ಅನಿವಾರ್ಯವೇ ಆದರೂ ಕೂಲಿಯಲ್ಲಿಯೂ ತಾರತಮ್ಯ ಇದೆ. ಏಕಪತ್ನಿತ್ವ ಕುಟುಂಬಗಳಿಗಾಗಿ ಹೆಣ್ಣು ತನ್ನ ಮಾತೃಪ್ರಧಾನ ಕುಟುಂಬದ ಹಕ್ಕು ಅಧಿಕಾರಗಳನ್ನು ಬಿಟ್ಟು ಕೊಟ್ಟಿರಬೇಕೆಂದು ಶ್ರೀ ಡಿ.ಡಿ. ಕೊಸಾಂಬಿಯವರು ಅಭಿಪ್ರಾಯಪಟ್ಟಿದ್ದಾರಾದರೂ ಇದಕ್ಕೊಂದು ಬಲವಾದ ಆರ್ಥಿಕ ಆಯಾಮವೂ ಇರಬೇಕು. ಅಂದರೆ ಮೊದಮೊದಲು ಅರಣ್ಯವಾಸಿಗಳಾಗಿದ್ದಾಗ ಆಹಾರ ಸಂಗ್ರಹಣೆ ಸಂಸ್ಕರಣೆ ಮತ್ತು ವಿತರಣೆಗಳೆಲ್ಲಾ ಹೆಣ್ಣಿನ ಕೈಯಲ್ಲೇ ಕೇಂದ್ರೀಕೃತವಾಗಿತ್ತು. ಗಂಡು ಶಿಕಾರಿಗೆ ಹೋಗುತ್ತಿದ್ದನಾದರೂ ಅದು 'ಸಿಕ್ರೆ ಶಿಕಾರಿ' ಎಂಬ ಅನಿಯಮಿತ, ಖಾತ್ರಿ ಇಲ್ಲದ ಮತ್ತು ಅಪಾಯಕಾರಿ ಕಸುಬಾಗಿತ್ತು. ಅಂದರೆ ಬೇಟೆಗಿಂತಲೂ ಆಹಾರ ಸಂಗ್ರಹಣೆ ಕುಟುಂಬದ ನಿಶ್ಚಿತ ಮೂಲವಾಗಿತ್ತು. ಬೇಟೆಯ ಸಮಯದಲ್ಲಿ ಗಂಡು ಕ್ರೂರಪ್ರಾಣಿಗಳಿಗೆ ತಾನೇ ಬೇಟೆಯಾಗುವ, ದಾಳಿಗೊಳಗಾಗುವ ಮತ್ತು ಅಂಗವೈಕಲ್ಯಕ್ಕೀಡಾಗುವ ಅಪಾಯವೂ ಹೆಚ್ಚಿತ್ತು. ಇಂತಹ ಸಂದರ್ಭದಲ್ಲಿ ಹೆಣ್ಣಿನ ಆಹಾರ ಸಂಗ್ರಹಣೆಯೇ ಪ್ರಮುಖ ಅರ್ಥಿಕಮೂಲವಾದ್ದರಿಂದ ಮತ್ತು ತಂದದ್ದನ್ನು ಹಂಚುವವಳು ಹೆಣ್ಣೇ ಆದ್ದರಿಂದ ಮಾತೃಪ್ರಧಾನ ಕುಟುಂಬವ್ಯವಸ್ಥೆ ಇದ್ದಿರಬೇಕು. ಆದರೆ ಪಶುಸಂಗೋಪನೆ ಮತ್ತು ಕುಮ್ರಿ ಬೇಸಾಯಗಳಲ್ಲಿ ಬೇಟೆಯಲ್ಲಿರುವಷ್ಟು ಅಪಾಯಗಳಿಲ್ಲದಿದ್ದರಿಂದ ಮತ್ತು ಇವು ಸಾಮೂಹಿಕವಾಗಿ ನಡೆಸುವ ಕ್ರಿಯೆಗಳಾದ್ದರಿಂದ ರಕ್ತಸಂಬಂಧಿ ಗುಂಪುಗಳ ಬುಡಕಟ್ಟಿನ ನಾಯಕ ಪ್ರಧಾನ ಪಾತ್ರ ವಹಿಸಲಾರಂಭಿಸಿರಬೇಕು. ಬುಡಕಟ್ಟುಗಳ ನಡುವೆ ದ್ವೇಷ ಮತ್ತು ವಿನಿಮಯಗಳೆರಡೂ ಆರಂಭವಾದ್ದರಿಂದ

ಪಶುಸಂಪತ್ತು ಹಣವಾಗಿಯೂ ಚಲಾವಣೆಯಾಗಲಾರಂಭಿಸಿತು. ಈ ಅಧಿಕಾರ ಸಮುದಾಯದ ಮುಖಂಡನ ಕೈಸೇರಿದ ನಂತರ ಹೆಣ್ಣುಮಕ್ಕಳ ಆರ್ಥಿಕ ಸ್ವಾತಂತ್ರ್ಯ ಕಡಿಮೆಯಾಗ ತೊಡಗಿರಬೇಕು. ಬುಡಕಟ್ಟುಗಳ ಗಡಿ ರಕ್ಷಿಸಿಕೊಳ್ಳುವಲ್ಲಿ ಯುದ್ಧಗಳು ಹೆಚ್ಚಾಗತೊಡಗಿದ್ದು ಮತ್ತು ಇವುಗಳಲ್ಲಿ ಗಂಡಸಿನ ಪಾತ್ರ ಹೆಚ್ಚಾಗತೊಡಗಿದ್ದು, ಸ್ತ್ರೀಪ್ರದಾನ ಕುಟುಂಬಗಳ ಅವನತಿಗೆ ಕಾರಣವಾಗಿರಬೇಕು.

ಸಿದ್ದಿಗಳಲ್ಲಿ ಕಂಡುಬರುವ ಆಶಾದಾಯಕ ಅಂಶಗಳೆಂದರೆ ಬೇರೆ ಸಮುದಾಯಗಳಿಗೆ ಹೋಲಿಸಿದರೆ ಇಲ್ಲಿ ಲಿಂಗಾನುಪಾತ ಮಹಿಳೆಯರ ಪರವಾಗಿದೆ. ನಮ್ಮ ಸಮೀಕ್ಷೆಯ ೪೩೭ ಕುಟುಂಬಗಳಲ್ಲಿ ೯೨೦ ಪುರುಷರಿದ್ದರೆ ೯೭೫ ಮಹಿಳೆಯರಿದ್ದಾರೆ. ಸ್ತ್ರೀ ಶಕ್ತಿ ಸಂಘಗಳ ಹೆಚ್ಚಳ, ತಮ್ಮ ಸಮುದಾಯದಲ್ಲೇ ಮದುವೆಯಾಗಬೇಕಾದ ಅನಿವಾರ್ಯತೆ ಇತ್ಯಾದಿಗಳಿಂದ ಆರ್ಥಿಕ ಸಬಲೀಕರಣ ಮತ್ತು ಸಾಮಾಜಿಕ ಜಾಗೃತಿ ಮೂಡುತ್ತಿದೆ. ಶಿಕ್ಷಣದಲ್ಲಿಯೂ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ. ಸಿದ್ದಿಗಳು ಇತರ ಜಾತಿಗಳೊಡನೆ ಸಂಪರ್ಕ ಸಾಧಿಸಿದ ಮೇಲೆ ಆಯಾ ಜಾತಿಗಳಲ್ಲಿ ಕೂಡ ಸ್ತ್ರೀಯರ ಸ್ಥಾನಮಾನ ಕಡಿಮೆ ಇರುವುದು. ಈ ರೀತಿಯ ಲಿಂಗತಾರತಮ್ಯದ ಮೇಲೆ ಪ್ರಭಾವ ಬೀರಿದೆ. ಹೀಗೆ ಐತಿಹಾಸಿಕವಾದ ಗುಲಾಮಗಿರಿ, ಭೌಗೋಳಿಕವಾದ ಕಠಿಣ ಪರಿಸ್ಥಿತಿಗಳು, ಜೈವಿಕವಾಗಿ ಸ್ತ್ರೀಯರ ಬಲಹೀನತೆ, ಸಂಕೋಚ ಸ್ವಭಾವ, ಋತುಚಕ್ರ, ಗರ್ಭಧಾರಣೆ, ಶಿಶುಪಾಲನೆಗಳು, ಸಾಮಾಜಿಕವಾಗಿ ಇತರ ಸಮುದಾಯಗಳ ಪ್ರಭಾವ, ಧಾರ್ಮಿಕವಾಗಿ ಸ್ತ್ರೀಯರ ಮೇಲಿನ ನಿಷೇಧಗಳು ಇತ್ಯಾದಿಗಳೆಲ್ಲಾ ಸ್ತ್ರೀಯರನ್ನು ಮೂಲೆಗುಂಪು ಮಾಡಲು ಕಾರಣವಾಗಿವೆ. ಈ ಎಲ್ಲ ಸ್ಥಿತ್ಯಂತರಗಳು ಮಾತೃಪ್ರಧಾನ ಕುಟುಂಬದಿಂದ ಪಿತೃಪ್ರಧಾನ ಕುಟುಂಬಕ್ಕೆ ಮತ್ತು ಸ್ತ್ರೀಯರ ಪ್ರಸ್ತುತ ಸಮಸ್ಯೆಗಳಿಗೆ ಕಾರಣವಾಗಿವೆ. ಆದರೆ ಸ್ಥಿತ್ಯಂತರ ಇಲ್ಲಿಗೇ ಕೊನೆಗೊಳ್ಳದೇ ನಿರಂತರವಾದ ಪ್ರಕ್ರಿಯೆಯಾಗಿರುವುದರಿಂದ ಜಾಗತೀಕರಣ, ಶಿಕ್ಷಣ, ಸ್ತ್ರೀಶಕ್ತಿ ಸಂಘಗಳ ಪ್ರಭಾವ ವರ್ತಮಾನದ ಸಿದ್ದಿ ಸಮುದಾಯದ ಮೇಲಾಗುತ್ತಿದ್ದ ಸ್ತ್ರೀಯರ ಸ್ಥಾನಮಾನ ಸುಧಾರಿಸುವ ಸಾಧ್ಯತೆಗಳು ಗೋಚರಿಸುತ್ತಿವೆ. ಸಮಾನ ಸ್ಥಾನಮಾನವನ್ನು ಬೇಡಿ ತೆಗೆದುಕೊಳ್ಳುವ ಭಿಕ್ಷೆ ಎಂದುಕೊಳ್ಳದೆ ಹಕ್ಕೆಂದು ಗಳಿಸಿಕೊಂಡಾಗ ಪರಿಸ್ಥಿತಿ ಬದಲಾಗುತ್ತದೆ.

ಸಿದ್ದಿಗಳಲ್ಲಿ ಕುಟುಂಬದ ಆದಾಯದ ಮೇಲಿನ ಒಡೆತನ ಪುರುಷರ ಕೈಯಲ್ಲೇ ಕೇಂದ್ರಿಕೃತವಾಗಿದೆ. ಹೀಗಾಗಿ ಸಾಮಾಜಿಕ ಮತ್ತು ಆರ್ಥಿಕ ವಿಷಯಗಳಲ್ಲಿ ಸ್ತ್ರೀಯರಿಗೆ ದನಿ ಇಲ್ಲದಂತಾಗಿದೆ. ಸಂಸಾರ ನಿರ್ವಹಣೆಯ ಜವಾಬ್ದಾರಿ ಸಂಪೂರ್ಣ ಪುರುಷನದ್ದೇ ಎಂದು ಕಾಣಿಸಿದರೂ ಸಮಸ್ಯೆಗಳು ಬಂದಾಗ ಅದಕ್ಕೆ ಸ್ತ್ರೀಯೇ ಕಾರಣವೆಂದು ದೂರಲಾಗುತ್ತದೆ. ಆಪತ್ಕಾಲದಲ್ಲಿ ಅವರಿವರನ್ನು ಕಾಡಿಬೇಡಿ ದುಡಿದು ಕುಟುಂಬದ ಸದಸ್ಯರ ಹೊಟ್ಟೆ ತುಂಬಿಸುವ ಅನಿವಾರ್ಯತೆ ಹೆಣ್ಣಿಗಿದ್ದರೂ ಹೊರಗಡೆಯ ಪಾರುಪತ್ಯವೆಲ್ಲಾ ಗಂಡಿನದೇ ಆಗಿದೆ. ೭೦ ವರ್ಷಗಳ ಹಿಂದೆ ಧಾರವಾಡದ ಮಾನವಶಾಸ್ತ್ರ ವಿಭಾಗದವರು ಭೇಟಿಯ ದಾಖಲೆಗಳಲ್ಲಿರುವಂತೆ ಸಿದ್ದಿ ಹೆಂಗಸರು ಪುರುಷರೊಡನೆ ಮಾತನಾಡುವ ಬಗ್ಗೆ ನಿರ್ಬಂಧಗಳು ಇಂದು ಇಲ್ಲವಾದರೂ ಸ್ತ್ರೀಯರ ಪರಿಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆಗಳೇನು ಕಂಡುಬರುತ್ತಿಲ್ಲ.

ಸಿದ್ದಿ ಮಹಿಳೆಯರ ಸಬಲೀಕರಣದ ಸರಳವಾದ ಅಸ್ತ್ರವೆಂದರೆ ಸರ್ಕಾರ ಇವರಿಗೆ ಉಚಿತವಾಗಿ ಸೈಕಲ್‌ಗಳನ್ನು ನೀಡುವುದು. ವಿಚಿತ್ರವೆನಿಸಿದರೂ ಇದು ಸತ್ಯ. ಪತ್ರಕರ್ತ ಪಿ. ಸಾಯಿನಾಥ್ ತಮ್ಮ 'ಬರ ಎಂದರೆ ಎಲ್ಲರಿಗೂ ಇಷ್ಟ' ಪುಸ್ತಕದಲ್ಲಿ(ವಾಸ್ತವಿಕವಾಗಿ ಟೈಮ್ಸ್ ಆಫ್ ಇಂಡಿಯಾ ವೃತ್ತ ಪತ್ರಿಕೆಯಲ್ಲಿ) ತಮಿಳುನಾಡಿನ ಪುದುಕೋಟ್ಟೈನ ಉದಾಹರಣೆ ಎಲ್ಲರಿಗೂ ಮಾದರಿಯಾಗಬಲ್ಲದು. ಏಕೆಂದರೆ,

೧. ಇದು ಸ್ತ್ರೀಯರಿಗೆ ಮುಕ್ತಚಲನೆಯ ಸ್ವಾತಂತ್ರ್ಯವನ್ನು ನೀಡುತ್ತದೆ.

೨. ಪುರುಷರ ಮೇಲಿನ ಅವಲಂಬನೆಯಿಂದ ಮುಕ್ತಿ.

೩. ಯಾವಾಗಲೋ ಒಮ್ಮೆ ಬರುವ ಬಸ್‌ಗಳಿಗೆ ಕಾಯುವ ಸಮಯ ಶ್ರಮದ ಉಳಿತಾಯ.

೪. ರಸ್ತೆಗಳ್ಳಿಲ್ಲದ ಕಗ್ಗಾಡಿನ ರಸ್ತೆಗಳಲ್ಲೂ ಸುಗಮ ಸಂಚಾರ.

೫. ಮಕ್ಕಳ ವಿದ್ಯಾಭ್ಯಾಸಕ್ಕೆ, ಶಾಲೆಗೆ ಕರೆದೊಯ್ಯಲು ವಾಪಸ್ ಕರೆತರಲು ಅನುಕೂಲ.

೬. ತಮ್ಮ ವಸ್ತುಗಳನ್ನು ಮನೆ ಮನೆಗೆ ಮಾರಾಟ ಮಾಡಲು ಸೂಕ್ತ.

೭. ಪಟ್ಟಣದ ಮಾರುಕಟ್ಟೆಯ ಬೇಡಿಕೆ ಪೂರೈಕೆ, ವ್ಯಾಪ್ತಿ, ನಿರ್ವಹಣೆ ಸುಲಭ.

೮. ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ.

೯. ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಶಕ್ತಿ ನೀಡಿದೆ.

ಹೀಗಾಗಿ ಸಬಲೀಕರಣದ ಸುಲಭ ಅಸ್ತ್ರ ಇದಾಗಿದ್ದು, ಈ ಮೂಲಕವೂ ಲಿಂಗಸಂಬಂಧಿ ಶೋಷಣೆ ಮತ್ತು ತಾರತಮ್ಯಗಳನ್ನು ನಿವಾರಿಸಬಹುದಾಗಿದೆ.

ಸ್ತ್ರೀ ಶಕ್ತಿ ಅಥವಾ ಮಹಿಳಾ ಸ್ವಸಹಾಯ ಸಂಘಗಳು

'ಸಮಾನ ಮನಸ್ಕರಾದ ೧೦-೨೦ ಬಡ ಮತ್ತು ಮಧ್ಯಮ ವರ್ಗದ ಮಹಿಳೆಯರು ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾದಂತೆ, ಸ್ವಯಂ ಬಂಡವಾಳದೊಂದಿಗೆ, ಸಮಾನತೆಯ ಆಧಾರದಲ್ಲಿ ಸಂಘಟಿತರಾಗಿ, ಚರ್ಚೆ, ತೀರ್ಮಾನ, ಸಹಭಾಗಿತ್ವದ ಮೂಲಕ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ, ಅಭಿವೃದ್ಧಿ ಸಾಧಿಸಿಕೊಳ್ಳುವ ಸ್ವ ಇಚ್ಛೆಯ ಸಂಘಟನೆಗೆ ಮಹಿಳಾ ಸ್ವಸಹಾಯ ಗುಂಪು ಎನ್ನಬಹುದು'.

ಸಿದ್ದಿ ಮಹಿಳೆಯರು ಇತ್ತೀಚೆಗೆ ಇಂತಹ ಸ್ವಸಹಾಯ ಗುಂಪುಗಳನ್ನು ಕಟ್ಟಿಕೊಂಡು ಜಾಗೃತಿ ಮೂಡಿಸುತ್ತಿರುವುದು ಸ್ವಾಗತಾರ್ಹ. ನಾನು ಗ್ರೀನ್ ಇಂಡಿಯಾದ ಮಹೇಂದ್ರಕುಮಾರ್ ಅವರ ಜೊತೆ ಭೇಟಿ ನೀಡಿದ ಅಂಕೋಲದ ಬಳಿಯ ಇಂತಹ ಹಲವರು ಸಂಘಟನೆಗಳಲ್ಲಿ ಸಿದ್ದಿ ಮಹಿಳೆಯರು ತುಂಬಾ ಕ್ರಿಯಾಶೀಲರಾಗಿದ್ದರು. ಅವರಿಗಿನ್ನೂ ಅನುಭವ ಆಗಬೇಕಿದೆಯಾದರೂ ಅವರ ಉತ್ಸಾಹ ಮತ್ತು ನಂಬಿಕೆಗಳು ಅದಮ್ಯವಾಗಿದ್ದವು. ಇವರಿಗೆ ಶ್ರೀ ಮಹೇಂದ್ರಕುಮಾರ್ ಅವರು ಹಾಗೂ ಅವರ ಪತ್ನಿ ಶ್ರೀಮತಿ ಸಿಂಚನಾ ನೀಡುತ್ತಿದ್ದ ಸಲಹೆಗಳು ಕೇವಲ ಅವರ ಆರ್ಥಿಕ

ಸ್ಥಿತಿ ಮಾತ್ರವಲ್ಲದೆ ಹೋರಾಟದ ಕೆಚ್ಚನ್ನು ಮೂಡಿಸುವಂತಿದ್ದವು. ತಮ್ಮ ಹಕ್ಕುಗಳಿಗಾಗಿ ಹೇಗೆ ಸಕಾಲ, ಮಾಹಿತಿ ಹಕ್ಕು, ಸೇವಾನಿಯಮಾವಳಿಗಳನ್ನು ಬಳಸಬೇಕೆಂದು ತಿಳಿಸಿಕೊಡುತ್ತಿದ್ದರು. ನಿಮ್ಮ ಗುಂಪನ್ನು ಬಿಟ್ಟು ಬೇರೆ ಯಾರಿಗೂ ಸಾಲ ನೀಡಬಾರದು. ಅವರೆಷ್ಟೇ ಆತ್ಮೀಯರೂ, ಪ್ರಭಾವಶಾಲಿಗಳಾಗಿದ್ದರೂ ಸರಿ ಎಂಬ ಕಿವಿ ಮಾತನ್ನೂ ಅವರು ಹೇಳಿದರು. ಇವರಿಗೆ ಬ್ಯಾಂಕುಗಳು ಇನ್ನಷ್ಟು ಪ್ರೋತ್ಸಾಹ ಹಾಗೂ ಆರ್ಥಿಕ ನೆರವು ಮತ್ತು ವೃತ್ತಿಪರತೆಯ ತರಬೇತಿ ನೀಡಿದರೆ ಇವು ಕ್ರಾಂತಿಕಾರಿ ಬದಲಾವಣೆಗಳನ್ನು ತರಬಲ್ಲವು. ಇವುಗಳ ಸಾಧನೆಯ ಸಾಧ್ಯತೆಗಳು ಅಪಾರವಾದರೂ ಅವು ಕೆಲವು ದೋಷ ಹಾಗೂ ಮಿತಿಗಳನ್ನು ಹೊಂದಿವೆ.

ಮಿತಿಗಳು

ಸ್ತ್ರೀ ಶಕ್ತಿ ಸಂಘಗಳು ಮಹಿಳೆಯರ ಮತ್ತು ದೇಶದ ಒಟ್ಟಾರೆ ಅಭಿವೃದ್ಧಿಗೆ ಅತ್ಯಂತ ಸೂಕ್ತ ಮಾರ್ಗವಾದರೂ ಅವು ಎಲ್ಲ ಕಡೆ ಅಷ್ಟಾಗಿ ಯಶಸ್ವಿಯಾಗಿಲ್ಲ. ಅವುಗಳ ಮಿತಿಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದಾಗಿದೆ.

೧. ಸದಸ್ಯರ ಕೊರತೆ

೨. ಗೈರುಹಾಜರಿ

೩. ತರಬೇತಿಗೆ ನಿರ್ಲಕ್ಷ್ಯ

೪. ಬಂಡವಾಳದ ಕೊರತೆ

೫. ನಾಯಕತ್ವದ ಕೊರತೆ

೬. ರಾಜಕೀಯ ಹಸ್ತಕ್ಷೇಪ

೭. ವಾಣಿಜ್ಯ ಬ್ಯಾಂಕುಗಳ ಕಠಿಣ ಕಾನೂನುಗಳು

೮. ಸಾಮೂಹಿಕ ಬೇಸಾಯದ ಅವಗಣನೆ

೯. ಒಗ್ಗಟ್ಟಿನ ಕೊರತೆ

೧೦. ಅನುತ್ಪಾದಕ ಸಾಲಗಳ ಹೆಚ್ಚಳ

೧೧ ಪುರುಷಪ್ರಧಾನ ಕುಟುಂಬದ ಅಸಹನೆಗಳು ಇತ್ಯಾದಿ.[೯]

ರಾಜಕೀಯ ಕ್ಷೇತ್ರದಲ್ಲಿ ಸಿದ್ದಿ ಮಹಿಳೆಯರು ಪುರುಷರಿಗಿಂತಲೂ ಹೆಚ್ಚು ಪ್ರಾಬಲ್ಯ ಸಾಧಿಸಿದ್ದು, ಒಟ್ಟು ೨೫ ಸಿದ್ದಿ ಸದಸ್ಯರಿರುವ ಗ್ರಾಮಪಂಚಾಯಿತಿಗಳಲ್ಲಿ ೨೨ ಕಡೆಗಳಲ್ಲಿ ಸಿದ್ದಿ ಸ್ತ್ರೀಯರೇ ಚುನಾಯಿತರಾಗಿರುವುದು ಕನಿಷ್ಠ ಅವರ ರಾಜಕೀಯ ಸಬಲೀಕರಣವನ್ನು ಸೂಚಿಸುತ್ತದೆ. ಈ ದಿಶೆಯಲ್ಲಿ ಪುರುಷರ ಸಹಕಾರವೂ ಹೆಚ್ಚಾಗಬೇಕಿದೆ.

ಆದರೂ ಕೆಲವು ಕುಟುಂಬಗಳಲ್ಲಿ ಮದ್ಯಪಾನ ವ್ಯಸನಕ್ಕೆ ಒಳಗಾಗಿರುವ ಸಿದ್ದಿ ಪುರುಷರಿಂದ ಸ್ತ್ರೀಯರಿಗೆ ಕಿರುಕುಳ ಹೆಚ್ಚಾಗುತ್ತಿದ್ದು, ಸ್ತ್ರೀಯರ ದುಡಿಮೆಯನ್ನೆಲ್ಲಾ ಅಪಹರಿಸುತ್ತಿದ್ದಾರೆ. ಅಲ್ಲದೇ

ಪೌಷ್ಟಿಕ ಆಹಾರ ಯೋಜನೆಯಲ್ಲಿ ಸರ್ಕಾರ ನೀಡುವ ಆಹಾರಧಾನ್ಯಗಳನ್ನು ಒತ್ತಾಯದಿಂದ ತೆಗೆದುಕೊಂಡು ಹೋಗಿ ಮದ್ಯದಂಗಡಿಗಳಿಗೆ ಹಾಕುತ್ತಿದ್ದಾರೆ. ಇದರ ವಿರುದ್ಧವೂ ಸಿದ್ದಿ ಮಹಿಳೆಯರು ಹೋರಾಟ, ಚಳವಳಿ ಹಮ್ಮಿಕೊಳ್ಳಬೇಕಿದೆ. ಜೊತೆಗೆ ಯಾವುದೇ ಸ್ಥಿತ್ಯಂತರ ಅಥವಾ ನಿರಾಶ್ರಿತ ಸ್ಥಿತಿಗಳಲ್ಲಿ ಹೆಚ್ಚು ಕಷ್ಟಕ್ಕೀಡಾಗುವವರು ಮಹಿಳೆಯರೇ ಆದರೂ ಅವರಿಗೆ ಪುನರ್ವಸತಿಯ ಪರಿಹಾರದ ಹಣದಲ್ಲಿ ಯಾವುದೇ ನೇರ ಪಾವತಿ ಇರುತ್ತಿರಲಿಲ್ಲ. ಆದರೆ ೧೯೮೦–೮೪ರ ನಡುವಿನ ಪುನರ್ವಸತಿ ಕಾಯಿದೆಗಳಲ್ಲಿ ಸ್ತ್ರೀಯರಿಗೆ ಈ ಹಕ್ಕು ನೀಡಲಾಗಿದೆಯಲ್ಲದೆ ೨೦೦೭ರ ಕಾಯಿದೆಯಲ್ಲಿ ವಿಧವೆ, ಅನಾಥ ಹಾಗೂ ಅವಿವಾಹಿತ ಹೆಣ್ಣುಮಕ್ಕಳಿಗೆ ಪರಿಹಾರ ಪಿಂಚಣಿ ಕಲ್ಪಿಸಲಾಗಿದೆ.

೫.೮. ಸಿದ್ದಿಯರ ಪ್ರಸ್ತುತ ರಾಜಕೀಯ ಸ್ಥಾನಮಾನ

ರಾಜಕೀಯ ಎಂದಾಕ್ಷಣ ಜಿಗುಪ್ಸೆ ಮೂಡುವಂತೆ ನಮ್ಮ ರಾಜಕಾರಣಿಗಳು ಮಾಡಿದ್ದಾರಾದರೂ ಪ್ರಜಾಪ್ರಭುತ್ವದ ಮೂಲ ಅರ್ಥ ಹಾಗೂ ಅದರ ನಾಲ್ಕು ಸ್ತಂಭಗಳಲ್ಲೊಂದಾದ ಶಾಸಕಾಂಗದ ಭಾಗವಾಗುವುದೆಂದರೆ ನಮ್ಮನ್ನು ನಾವು ಆಳಿಕೊಳ್ಳುವ ಅಧಿಕಾರವಷ್ಟೇ ಅಲ್ಲದೆ ಜವಾಬ್ದಾರಿಯೂ ಆಗಿದೆ. ಶಾಸನ ಮಾಡುವಲ್ಲಿ ನಮ್ಮದೂ ಒಂದು ದನಿ ಸೇರಿಸಲು, ಶೋಷಣೆ ತಪ್ಪಿಸಲು ಇರುವ ಅವಕಾಶ ಇದಾಗಿದೆ. ಇದುವರೆಗೂ ಒಬ್ಬನೇ ಒಬ್ಬ ಸಿದ್ದಿ ಜಿಲ್ಲಾ ಪಂಚಾಯಿತಿಯ ಮೆಟ್ಟಿಲನ್ನು ಹತ್ತಲಾಗದಿರುವುದು ಈ ಸಮುದಾಯಕ್ಕೆ ಆದ ಅನ್ಯಾಯವೆನ್ನಬಹುದು. ಪ್ರಜಾಪ್ರಭುತ್ವದಲ್ಲಿ ಇವರ ಪ್ರಜಾಸಂಖ್ಯೆ ಅಥವಾ ಮೆಜಾರಿಟಿ ಕಡಿಮೆ ಇರುವುದು, ಇವರಲ್ಲೂ ರಾಜಕೀಯಕ್ಕೆ ಬೇಕಾದ ನಯವಂಚನೆ, ಕಪಟ, ಹಣಬಲ, ತೋಳ್ಬಲ ಇಲ್ಲದಿರುವುದು, ರಾಜಕೀಯ ಪಕ್ಷಗಳು ಇವರನ್ನು ಬೇಕಾದಾಗಷ್ಟೇ ಬಳಸಿಕೊಂಡು ಕಡೆಗಣಿಸಿರುವುದು ಇವೆಲ್ಲಾ ಕಾರಣಗಳೂ ಇರಬಹುದು. ಪ್ರಜಾತಂತ್ರದಲ್ಲಿ ಇಂದು ಪ್ರಜೆಗಳಿಗಿಂತ ತಂತ್ರವೇ ಮುಖ್ಯವಾಗಿದೆ.

ಇದೀಗ ತಾಲೂಕು ಪಂಚಾಯಿತಿ ಮಟ್ಟದಲ್ಲಿ ಇಬ್ಬರು ಸಿದ್ದಿಯರು ಅದರಲ್ಲೂ ಸಿದ್ದಿ ಮಹಿಳೆಯರು ಸದಸ್ಯರಾಗಿರುವುದು ಒಳ್ಳೆಯ ಚಿಹ್ನೆಯಾಗಿದೆ. ಜಿಲ್ಲೆಯ ಒಟ್ಟು ೧೧ ತಾಲೂಕುಗಳಲ್ಲಿ ಕಾರವಾರದಿಂದ ಶ್ರೀಮತಿ ಸವಿತಾ ಶಂಕರ ಸಿದ್ದಿ ಮತ್ತು ಅಂಕೋಲದಿಂದ ಶ್ರೀಮತಿ ವಿದ್ಯಾ ನಾರಾಯಣ ಸಿದ್ದಿ ತಾಲೂಕು ಪಂಚಾಯಿತಿ ಸದಸ್ಯರಾಗಿ ಚುನಾಯಿತರಾಗಿದ್ದಾರೆ. ಹಾಗೆಯೇ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸುಮಾರು ೨೫ ಜನ ಸಿದ್ದಿಯರು ಚುನಾಯಿತರಾಗಿದ್ದಾರೆ. ಅವರ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕೋಷ್ಟಕ ೫.೮.೧. ಸಿದ್ದಿ ಗ್ರಾಮಪಂಚಾಯಿತಿ ಸದಸ್ಯರ ವಿವರ[೧೮]

ಕ್ರಸಂ.	ತಾಲೂಕುಗಳು	ಪಂಚಾಯಿತಿ	ಸದಸ್ಯರ ಹೆಸರು	ವಿದ್ಯಾಭ್ಯಾಸ	ಉದ್ಯೋಗ
೧.	ಅಂಕೋಲ	ಕುಂಟಕಣಿ	ಲಲಿತಾ ಮೋಹನ	ಬಿ.ಎ.	ರೈತಾಪಿ
೨.	ಕಾರವಾರ	ಶಿರವಾಡ	ಅನಸೂಯ ಫ್ರಾನ್ಸಿಸ್	೧ನೇ	ಕೂಲಿ
೩.	ಯಲ್ಲಾಪುರ	ಮಾಲಕೊಪ್ಪ	ಲಕ್ಷ್ಮೀನಾರಾಯಣ	೪ನೇ	ಕೃಷಿ


		ಬಿಳಕಿ	ಶೋಭಾಜುವನಾವ್	೮ನೇ	ಕೃಷಿ
		ಹಿತ್ಲಳ್ಳಿ	ಸುಶೀಲಾ ಶಾಂತರಾಮ	೫ನೇ	ಕೂಲಿ
		ಕಂಪ್ಲಿ	ಲಲಿತಾ ಪ್ರಭಾಕರ	–	ಮನೆಗೆಲಸ
		ಕೊಲಿಕೆರೆ	ಅಂಜಲಿನಾ ಅಂತ್ರೋಜ	–	ಕೂಲಿ
		ಭರತನಹಳ್ಳಿ	ಸಾವಿತ್ರಿ ಗಿಡ್ಡ ಸಿದ್ದಿ	–	ಕೂಲಿ
		ಇಡಗುಂದಿ	ಶೀಲಾ ಕೃಷ್ಣ ಸಿದ್ದಿ	೭ನೇ	ಕೂಲಿ
		ಮಾದೇವಕೊಪ್ಪ	ಮೊದಿನಬಿ ಅದಂಸಾಬ್	೪ನೇ	ಕೃಷಿ
		ಹುತ್ಕಂಡ	ಗೀತಾ ದುರ್ಗಾ ಸಿದ್ದಿ	–	ಕೂಲಿ
		ಚಿಮ್ನಳ್ಳಿ	ಲಕ್ಷ್ಮೀ ನಾಗಪ್ಪ	೫ನೇ	ಕೃಷಿ
		ಬೆಡಸಗಾಂವ	ಭಾಗೀರಥಿ ರಾಮಾ	–	ಕೂಲಿ
		ಅನಗೋಡ	ಪಾರ್ವತಿ ಬಾಬು	೧ನೇ	ಕೃಷಿ
		ಬಳಗಾರ	ಮಾದೇವಿ ಶಂಕರ	೫ನೇ	ಕೂಲಿ
೪.	ಹಳಿಯಾಳ	ಜನಗಾ	ರುಸ್ತುಂಬಿ ಬುಡ್ಡೇಸಾಬ	೫ನೇ	ಮನೆಗೆಲಸ
		ಚಿಬ್ಬಲಗೇರಿ	ನೀಲಾ ಢಾಕುನಿ	೫ನೇ	ಕೃಷಿ
		ಸಾಂಬ್ರಾಣಿ	ನಸರೀನ್ ಮಹಮದ್	೫ನೇ	ಕೂಲಿ
		ಸಾಂಬ್ರಾಣಿ	ಬಡೇಸಾಬ್ ಹುಸೇನ್	೭ನೇ	ಕೃಷಿ
		ಕೆಸರೊಳ್ಳಿ	ಅಂತೋನಿ ಫ್ರಾನ್ಸಿಸ್	೭ನೇ	ಕೃಷಿ
		ಯಡೋಗಾ	ಅಂತೋನಿ ಫ್ರಾನ್ಸಿಸ್	೭ನೇ	ಕೃಷಿ

೨೫ ಜನ ಪಂಚಾಯಿತಿ ಸದಸ್ಯರಲ್ಲಿ ಕೇವಲ ಮೂರು ಜನ ಮಾತ್ರ ಪುರುಷರಿದ್ದು, ೨೨ ಜನ ಮಹಿಳೆಯರು ಇರುವುದು, ಅದರಲ್ಲೂ ಬಹುಸಂಖ್ಯಾತರು ಕಡಿಮೆ ವಿದ್ಯಾಭ್ಯಾಸ ಹೊಂದಿದವರಾಗಿದ್ದರೂ ರಾಜಕೀಯದಲ್ಲಿ ಸಿದ್ದಿ ಮಹಿಳೆಯರ ಕ್ರಿಯಾಶೀಲತೆ ಮತ್ತು ಯಶಸ್ಸನ್ನು ಸೂಚಿಸುತ್ತದೆ. ಅದರೂ ಇನ್ನೂ ಕೆಲವು ತಾಲೂಕುಗಳಲ್ಲಿ ಸಿದ್ದಿಗಳು ಆಯ್ಕೆಯಾಗಿಲ್ಲ. ಒಟ್ಟಾರೆಯಾಗಿ ಇತ್ತೀಚಿನ ದಿನಗಳಲ್ಲಿ ಸಿದ್ದಿಯರು ರಾಜಕೀಯದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವುದು ಸಂತೋಷದ ವಿಷಯ. ರಾಜ್ಯ ಮತ್ತು ರಾಷ್ಟ್ರಮಟ್ಟದ ಶಾಸನ ಸಭೆಗಳಲ್ಲಿ ಆಂಗ್ಲೋ ಇಂಡಿಯನ್ನರಿಗೆ ಸ್ಥಾನ ಮೀಸಲಾಗಿಟ್ಟು ನಾಮಕರಣ ಮಾಡುತ್ತಿರುವ ರೀತಿಯಲ್ಲಿಯೇ ಸಿದ್ದಿಗಳಿಗೂ ಆಫ್ರೋ ಇಂಡಿಯನ್ ಎಂದು ಪರಿಗಣಿಸಿ ನಾಮಕರಣ ಮಾಡುವುದು ಈ ಅಪರೂಪದ ಬುಡಕಟ್ಟಿನ, ಅಷ್ಟೇ ಏಕೆ ಎರಡೂ ಖಂಡಗಳ ಬಾಂಧವ್ಯಕ್ಕೆ ಪೂರಕವಾಗಬಲ್ಲದು.


೫.೯. ಸಿದ್ದಿಯರ ಆರ್ಥಿಕತೆಯ ಸ್ವರೂಪ

ಈ ಎಲ್ಲ ಹಿನ್ನೆಲೆಯಲ್ಲಿ ಸಿದ್ದಿಗಳ ಪ್ರಸ್ತುತ ಆರ್ಥಿಕತೆಯನ್ನು ಅವಲೋಕಿಸಲಾಗಿ ಹೊರನೋಟಕ್ಕೆ ಅವರು ಬದಲಾಗಿದ್ದಾರೆನಿಸಿದರೂ ಆಂತರಿಕವಾಗಿ ಇನ್ನೂ ಬುಡಕಟ್ಟಿನ ಚಾರಿತ್ರಿಕ ಸ್ವಭಾವ ಹಾಗೂ ಗುಲಾಮಗಿರಿಯ ಸಂಕೋಲೆಗಳಿಂದ ಹೊರಬಂದಿಲ್ಲವೆನಿಸುತ್ತದೆ. ಇದಕ್ಕೆ ಕಾರಣ ಬಹುತೇಕ ಸಿದ್ದಿಯರು ಇನ್ನೂ ಅರಣ್ಯಾಧಾರಿತ ಪಾರಂಪರಿಕ ಆರ್ಥಿಕತೆಯನ್ನೇ ನಂಬಿಕೊಂಡಿದ್ದು ಆರ್ಥಿಕವಾಗಿ ಸಬಲರಾಗಬೇಕೆಂಬ ಇಚ್ಛೆ ಅಷ್ಟಾಗಿಲ್ಲ. ಇದ್ದಷ್ಟರಲ್ಲೇ ತೃಪ್ತಿಪಡುತ್ತಿದ್ದ ಇವರು ಭೌತಿಕ ಸುಖಗಳಿಗಿಂತಲೂ ತಮ್ಮ ಪಾಡಿಗೆ ತಾವಿರುವುದರಲ್ಲೇ ನೆಮ್ಮದಿ ಕಾಣುತ್ತಿದ್ದರು. ಇದೀಗ ಆಧುನಿಕತೆಯ ಪ್ರಭಾವಕ್ಕೆ ಸಿಲುಕಿ ವೆಚ್ಚಗಳು ಹೆಚ್ಚಾಗಿವೆಯಾದರೂ ಆದಾಯ ಮತ್ತು ಆದಾಯ ಮೂಲಗಳು ಹೆಚ್ಚಾಗಿಲ್ಲ. ಇದುವರೆಗೂ ತಾವು ಸುಖವಾಗಿದ್ದೇವೆ, ಅದಕ್ಕಾಗಿ ದೇವರಿಗೆ ಕೃತಜ್ಞರಾಗಿರೋಣ ಎಂದುಕೊಳ್ಳುತ್ತಿದ್ದವರಿಗೆ ಟಿ ವಿ ಎಂಬ ಮಾಯಾಪೆಟ್ಟಿಗೆಯ ಆಗಮನದಿಂದ ನಮ್ಮಲ್ಲಿ ಏನೆಲ್ಲ ಇಲ್ಲ ಎಂಬ ಅರಿವು ಮೂಡಿ ಇದ್ದ ನೆಮ್ಮದಿಯೂ ಮಾಯವಾಗುತ್ತಿದೆ. ಇದು ತಲೆಮಾರುಗಳ ಅಂತರ ಮತ್ತು ಕಲಹಗಳಿಗೂ ಕಾರಣವಾಗುತ್ತಿದೆ. ಅಂದು ಮತ್ತು ಇಂದು ಇದ್ದ ಮತ್ತು ಇರುವ ಆದಾಯ ಮತ್ತು ಬಯಕೆಗಳ ಅಂತರವನ್ನು ಈ ಕೆಳಗಿನ ಚಿತ್ರದ ಮೂಲಕ ತೋರಿಸಬಹುದಾಗಿದೆ. ಅಂದು ಬಯಕೆಗಳು ಕಡಿಮೆ ಇದ್ದುದರಿಂದ ಆದಾಯ ಸಾಕಷ್ಟೆನಿಸುತ್ತಿದ್ದರೆ ಇಂದು ಬಯಕೆಗಳ ಹೆಚ್ಚಳದಿಂದಾಗಿ ಎಷ್ಟೇ ಆದಾಯ ಬಂದರೂ ಕಡಿಮೆ ಎನಿಸುತ್ತಿದೆ.

ಅಂದು



ಇಂದು



ಪ್ರಸ್ತುತ ಸಿದ್ದಿಗಳ ಆರ್ಥಿಕತೆಯನ್ನು ಹಿಂದಿನ ಕಾಲಕ್ಕೆ ಹೋಲಿಸಿದರೆ, ಇಂದು ಬಹಳಷ್ಟು ಬದಲಾಗಿದೆ, ಅಭಿವೃದ್ಧಿಯಾಗಿದೆ ಎನ್ನಬಹುದು. ಮೊದಲನೆಯದಾಗಿ, ಹಸಿವಿನ ಪ್ರಶ್ನೆಗೆ ಬಂದರೆ, ಸಿದ್ದಿಗಳಲ್ಲಿ ಹಸಿವಿನಿಂದ ಮರಣ ಹೊಂದಿದ ಉದಾಹರಣೆಗಳು ದೊರೆತಿಲ್ಲ ಮತ್ತು ಯಾವುದೇ ಸಿದ್ದಿ ಪ್ರಸ್ತುತ ಕ್ಷೇತ್ರಕಾರ್ಯದಲ್ಲಿ ಭಿಕ್ಷೆ ಬೇಡುವುದು ಕಂಡುಬಂದಿಲ್ಲ. ಮಳೆಗಾಲದಲ್ಲಿ ಕೆಲಸವೂ ಇಲ್ಲದೆ ಬೇಟೆಯೂ ಇಲ್ಲದೆ ಕಷ್ಟಪಡುವ ಸ್ಥಿತಿ ಇತ್ತಾದರೂ ಮೀನುಗಾರಿಕೆ ಮತ್ತು ಪೌಷ್ಟಿಕ ಆಹಾರದ ಯೋಜನೆ ಅವರ ಸ್ಥಿತಿ ಸುಧಾರಿಸಿವೆ. ವಸತಿ ಸಮಸ್ಯೆ ಇದೆಯಾದರೂ ವಸತಿಹೀನರು ಕಂಡುಬಂದಿಲ್ಲ. ಮೊದಲೆಲ್ಲಾ ಗುಡಿಸಲುಗಳಲ್ಲೇ ಬದುಕುತ್ತಿದ್ದ ಸಿದ್ದಿಗಳಲ್ಲಿ ಈಗ ಅಂತಹವರ ಸಂಖ್ಯೆ ಶೇಕಡ ೬ರಷ್ಟು ಮಾತ್ರವಿದೆ. ಉಳಿದವರೆಲ್ಲಾ ಹೆಂಚಿನ ಹಾಗೂ ಜನತಾಮನೆಗಳಲ್ಲಿ ವಾಸಿಸುತ್ತಿದ್ದಾರೆ. ವಿವಿಧ ವಸತಿ ಯೋಜನೆಗಳು ಈ ಸಮಸ್ಯೆಯನ್ನು ಸಿದ್ದಿಗಳ ವಿಷಯದಲ್ಲಿ

ಚೆನ್ನಾಗಿಯೇ ನಿಭಾಯಿಸಿವೆ. ಹಿಂದಿನ ತಲೆಮಾರುಗಳು ಬಟ್ಟೆಗೆ ಪ್ರಾಮುಖ್ಯತೆ ನೀಡಿರಲಿಲ್ಲವಾದರೂ ಇಂದಿನ ಯುವಕರು ಇದ್ದುದರಲ್ಲಿಯೇ ಒಳ್ಳೆಯ ಬಟ್ಟೆ ತೊಡುತ್ತಿದ್ದಾರೆ. ಶೇಕಡ ೪೦ರಷ್ಟು ಮನೆಗಳಲ್ಲಿ ಶೌಚಾಲಯಗಳಿವೆ, ಶೇಕಡ ೩೦ರಷ್ಟು ಮನೆಗಳಲ್ಲಿ ಟಿ ವಿ ಇದೆ, ಶೇ ೨೫ರಷ್ಟು ಜನ ಮೊಬೈಲ್ ಬಳಸುತ್ತಿದ್ದಾರೆ ಇತ್ಯಾದಿಗಳೆಲ್ಲಾ ನಿಜವೇ! ಆದರೂ ಇವೆಲ್ಲವೂ ಇಂದು ಅವಶ್ಯಕ, ತೋರಿಕೆಯ ವಸ್ತುಗಳಾಗಿವೆಯೇ ಹೊರತು ಹಿತಕರ ಹಾಗೂ ಐಶಾರಾಮದ ವಸ್ತುಗಳಲ್ಲ. ಹಳ್ಳಿಗಾಡಿನಲ್ಲೂ ಇದಕ್ಕಿಂತ ಹೆಚ್ಚಿನ ಸೌಕರ್ಯಗಳು ದೊರೆಯುತ್ತವೆ. ವಾಸ್ತವಿಕವಾಗಿ ಅವರಿಗೆ ಆ ಪ್ರದೇಶದ ಸಮೃದ್ಧ ಉತ್ಪಾದನಾ ಚಟುವಟಿಕೆ, ಉತ್ಪಾದನೆ, ಮಾರುಕಟ್ಟೆ, ವಿತರಣೆ, ಆದಾಯ, ಅನುಭೋಗ ಇತ್ಯಾದಿಗಳ ಮೇಲೆ ಹಕ್ಕು, ನಿಯಂತ್ರಣ ಇದೆಯೇ? ಏಕೆಂದರೆ ಇವೆಲ್ಲವುಗಳ ನಿಜವಾದ ಪಾಲುದಾರರಾದ ಸಿದ್ದಿಗಳಿಗೆ ಇದುವರೆಗೂ ಹೇಳಿಕೊಳ್ಳುವಂತಹ ನಿರ್ದಿಷ್ಟ ಆದಾಯದ ಮೂಲಗಳಿಲ್ಲ. ಇರುವ ಮೂಲಗಳಿಂದ ಬರುವ ಆದಾಯವೂ ತುಂಬಾ ಕಡಿಮೆ. ನಿರಂತರ ಶೋಷಣೆ, ಸಾಲಬಾಧೆ, ಉಳಿತಾಯ ಮತ್ತು ಹೂಡಿಕೆಗಳ ಪ್ರಶ್ನೆಯೇ ಇಲ್ಲದಿರುವಿಕೆ, ಸರಕಾರದ ಸೌಲಭ್ಯಗಳ ಮೇಲೆಯೇ ಅವಲಂಬಿಸಿರುವಿಕೆ ಇತ್ಯಾದಿಗಳು ಅವರ ಸಾಪೇಕ್ಷ ಬಡತನ ಹಾಗೂ ಶೋಚನೀಯ ಆರ್ಥಿಕ ಸ್ಥಿತಿಯನ್ನು ಸೂಚಿಸುತ್ತವೆ, ಭೂಒಡೆತನ, ಸ್ಥಿರ ಉದ್ಯೋಗ ಅಥವಾ ಆದಾಯದ ಮೂಲವಿಲ್ಲದಿರುವ ಯಾವುದೇ ಸಮುದಾಯಕ್ಕೂ ಭವಿಷ್ಯವಿಲ್ಲ. ಆದರೆ ಅವರ ನಿರಕ್ಷರತೆ, ಕೌಶಲ್ಯರಾಹಿತ್ಯತೆ, ಬಂಡವಾಳದ ಕೊರತೆ ಇತ್ಯಾದಿಗಳು ಅವರನ್ನು ಕೃಷಿ ಅಥವಾ ಅರಣ್ಯ ಆಧಾರಿತ ಅರ್ಥಿಕತೆಯಿಂದ ಹೊರಕ್ಕೆ ಬರಲು ಅವಕಾಶವೇ ನೀಡುತ್ತಿಲ್ಲ. ಇಂತಹುದರಲ್ಲಿ ಕೇವಲ ಕೂಲಿಯನ್ನು ಮಾತ್ರ ಅವಲಂಬಿಸಿರುವುದು ಈ ಸಮುದಾಯದ ಸೀಮಿತ ಆರ್ಥಿಕ ಕೌಶಲ್ಯವನ್ನು ಸೂಚಿಸುತ್ತದೆಯಲ್ಲದೆ ಮುಂದಿನ ದಿನಗಳಲ್ಲಿ ಅವರು ಎದುರಿಸಬೇಕಾದ ಕಷ್ಟಗಳ ಪರಂಪರೆಯನ್ನು ನೆನಪಿಸುತ್ತದೆ. ಉತ್ತರಕನ್ನಡದಲ್ಲಿ ಕೃಷಿಯೋಗ್ಯ ಭೂಮಿಯ ಪ್ರಮಾಣವೇ ಕಡಿಮೆ ಇದ್ದು ಹೆಚ್ಚು ಭಾಗ ಅರಣ್ಯಗಳಿಂದ ಆವೃತ್ತವಾಗಿದ್ದು ಅರಣ್ಯ ಇಲಾಖೆಗೆ ಸೇರಿದೆ. ಅಣಶಿಯಂತಹ ಹಲವಾರು ವನ್ಯಧಾಮಗಳೂ, ರಕ್ಷಿತಾರಣ್ಯಗಳು ಇನ್ನೂ ಹೆಚ್ಚಾಗುವ ಸಾಧ್ಯತೆಗಳಿವೆ. ಕಸ್ತೂರಿ ರಂಗನ್ ವರದಿ ಸರ್ಕಾರಗಳ ಇಷ್ಟಕ್ಕೆ ತಕ್ಕಂತೆ ವರದಿ ನೀಡಿ ಇನ್ನಷ್ಟು ಉದ್ಯಮ ಮತ್ತು ಅಭಿವೃದ್ಧಿ ಯೋಜನೆಗಳಿಗೆ ಕೆಂಪು ಹಾಸು ಹಾಸಿದೆ. ಸಿದ್ದಿಯರು ಇನ್ನೂ ಉತ್ತರಕನ್ನಡದ ಎಲ್ಲ ಭಾಗಗಳಲ್ಲೂ ನೆಲಸಲು ಸಾಧ್ಯವಾಗಿಲ್ಲ. ಇನ್ನು ಮುಂದಿನ ದಿನಗಳಲ್ಲಿ ಬೇರೆಡೆ ವಲಸೆ ಹೋಗುವ ಅನಿವಾರ್ಯತೆ ಎದುರಾದರೆ ಅವರಿಗೆ ಬದುಕುವ ಎಲ್ಲ ದಾರಿಗಳೂ ಮುಚ್ಚಿದಂತಾಗುತ್ತವೆ. ಹೀಗಾಗಿ ಭವಿಷ್ಯದ ತಲೆಮಾರಿನ ಜೀವನವನ್ನು ಇನ್ನಷ್ಟು ಸಂಘರ್ಷಗಳಿಗೆ ಸಿದ್ಧ ಮಾಡುವ ಕರ್ತವ್ಯ ಪ್ರಸ್ತುತ ಜನಾಂಗದ ಸಿದ್ದಿಯರ ಮೇಲಿದೆ. ಇದಕ್ಕಾಗಿ ದುಡಿಮೆಯ ಪರ್ಯಾಯ ಮೂಲಗಳನ್ನು ಹುಡುಕಿಕೊಳ್ಳಬೇಕಿದೆ. ಮಕ್ಕಳಿಗೆ ವಿದ್ಯಾಭ್ಯಾಸ, ತಾಂತ್ರಿಕ ನೈಪುಣ್ಯತೆ, ಶೊಷಣೆಯ ವಿರುದ್ಧ ಹೋರಾಡುವ ಕೆಚ್ಚು ಹಾಗೂ ಮನೋಧರ್ಮವನ್ನು ಬೆಳೆಸಬೇಕಿದೆ. ಜಾಗತೀಕರಣದ ಹಿನ್ನೆಲೆಯಲ್ಲಿ ಸರ್ಕಾರಿ ಸೌಲಭ್ಯಗಳ ಆಯುಷ್ಯ ಇಷ್ಟೇ ಎಂದು ಹೇಳಲಾಗದು. 'ಸಮಾಜದ ಬಹುಸಂಖ್ಯಾತ ಬಡವರು ನಮ್ಮ ರಾಜಕೀಯ ಪಕ್ಷ ಅಥವಾ ಸರ್ಕಾರಗಳು ನೀಡುವ

ಅಕ್ಕಿ, ನೀರು, ವಸತಿ, ಹಣ, ಹೆಂಡ ಇತ್ಯಾದಿಗಳಿಗೆ ಆಕರ್ಷಿತರಾಗಿ ಮತದಾನದಲ್ಲಿ ಭಾಗವಹಿಸಿ ಚುನಾವಣೆಯಲ್ಲಿ ಗೆಲ್ಲಿಸುತ್ತಾರೆ. ಇದಕ್ಕೆ ಕಾರಣವೆಂದರೆ ಅವರಲ್ಲಿ ಇವುಗಳ ತೀವ್ರ ಕೊರತೆಯಿದೆ ಮತ್ತು ಅವುಗಳನ್ನು ಸುಲಭವಾಗಿ ಪೂರೈಸುವವರೆಡೆಗೆ ಅವರ ಒಲವಿದೆ. ಉದ್ಯೋಗ, ಮೂಲ ಸೌಕರ್ಯಗಳ ಅಭಿವೃದ್ಧಿ, ಕೃಷಿ ಮತ್ತು ಕೈಗಾರಿಕೆಗಳಿಗೆ ಉತ್ತೇಜನ ಇವು ಯಾವತ್ತೂ ನಮ್ಮ ಆದ್ಯತೆಗಳಾಗಿಲ್ಲ. ಉತ್ಪಾದನಾ ಸಂಪನ್ಮೂಲಗಳ ಸೂಕ್ತ ಹಂಚಿಕೆ ಹಾಗೂ ಒಡೆತನದಲ್ಲಿ ಪಾಲು ನೀಡುವುದು, ಅದರಲ್ಲೂ ಭೂಮಿ, ಬಂಡವಾಳ, ಶಿಕ್ಷಣ ಹಾಗೂ ಕೌಶಲ್ಯಗಳ ಒಡೆತನ ಕೆಲವರಲ್ಲೇ ಮಡುಗಟ್ಟಿ ನಿಂತಿದೆ. ಇಂತಹ ಅಗ್ಗದ ಜನಪ್ರಿಯ ಕಾರ್ಯಕ್ರಮಗಳಿಂದ ಬಡತನ ನಿವಾರಣೆ ಯಾಗುತ್ತದೆಯೇ? ಖಂಡಿತವಾಗಿಯೂ ಇಲ್ಲ. ಈ ಎಲ್ಲ ಕಾರ್ಯಕ್ರಮಗಳು ಹಸಿದವರಿಗೆ ಒಪ್ಪೊತ್ತಿನ ಊಟ ಕೊಡಬಹುದು. ಆದರೆ ಅವರ ಊಟವನ್ನು ಅವರೇ ದುಡಿದು ಗಳಿಸುವ ಸಂಪನ್ಮೂಲಗಳ ಒಡೆತನವನ್ನು ಇವು ಒದಗಿಸುವುದಿಲ್ಲ. ಆದರೆ ದುರದೃಷ್ಟವಶಾತ್ ನಮ್ಮ ಬೇಡಿಕೆಗಳೇನಿದ್ದರೂ ಇಂದು–ಈಗ–ತಕ್ಷಣ. ಮುಂದಿನ ವ್ಯವಸ್ಥೆಯನ್ನು ಬದಲಾಯಿಸುವ ದೂರದೃಷ್ಟಿ ನಮ್ಮಲ್ಲಿಲ್ಲ. ಹೀಗಾಗಿ ವ್ಯವಸ್ಥೆಯನ್ನು ಪರಿವರ್ತಿಸುವ ಪ್ರಶ್ನೆ ನಮಗೆ ಮತ್ತು ರಾಜಕೀಯ ಪಕ್ಷಗಳಿಗೆ ಪರಕೀಯವಾಗಿಬಿಟ್ಟಿವೆ.'[೧೧] ಅದು ಅವರ ಬುಡಕಟ್ಟು ವೈಶಿಷ್ಟ್ಯತೆ ಕಲೆ, ಅರಣ್ಯಜ್ಞಾನ ಇತ್ಯಾದಿಗಳಿರುವವರೆಗೆ ಮಾತ್ರ. ಆದರೆ ತಮ್ಮ ಕಲೆ, ಸಂಸ್ಕೃತಿ, ಪರಂಪರೆಯ ಹಿರಿಮೆ ಮತ್ತು ಮೂಲ ಸ್ವರೂಪವನ್ನು ಕಾಯ್ದುಕೊಳ್ಳುವ ಬಗ್ಗೆ ಹಿರಿಯರು ತುಂಬಾ ಸಾಂಪ್ರದಾಯಿಕವಾಗಿದ್ದರಾದರೂ, ಕಿರಿಯರಲ್ಲಿ ವಿಭಿನ್ನ ನಿಲುವುಗಳಿವೆ. ಅನಕ್ಷರಸ್ಥ ಕಲಾವಿದರು ಆಧುನಿಕತೆಗೆ ತಕ್ಕಂತೆ ಬದಲಾವಣೆ ತರಲು ಪಟ್ಟಣದ ಥಳುಕು ಬಳುಕಿನ ವೇದಿಕೆ, ಸಿನಿಮಾ ಹಾಡು ಮತ್ತು ವೇಷಗಳನ್ನು ಬಳಸಲು ಉತ್ಸುಕರಾಗಿದ್ದಾರೆ. ಆದರೆ ಪಟ್ಟಣಗಳಲ್ಲಿದ್ದು ಇವುಗಳನ್ನೆಲ್ಲ ನೋಡಿರುವ ವಿದ್ಯಾವಂತ, ಪ್ರಜ್ಞಾವಂತರಾದ ಮೋಹನ್ ಸಿದ್ದಿ ಅಂಥವರಿಗೆ ತಮ್ಮ ಪರಂಪರೆ ಹೀಗೆ ಬದಲಾಗುವುದರ ಬಗ್ಗೆ ಆತಂಕವಿದೆ. ಅದನ್ನು ಸಾಧ್ಯವಾದಷ್ಟು ಮೂಲಸ್ವರೂಪ ದಲ್ಲೇ ಉಳಿಸಿಕೊಳ್ಳುವುದರಲ್ಲೇ ಸ್ವಂತಿಕೆ ಇದೆ ಎಂದು ಭಾವಿಸುತ್ತಾರೆ. ಒಂದೊಮ್ಮೆ ಇವೆಲ್ಲವುಗಳನ್ನೂ ಕಳೆದುಕೊಂಡು ನಮ್ಮಂತೆಯೇ ಸಾಮಾನ್ಯ ಹಳ್ಳಿ ಅಥವಾ ನಗರದ ಜನರಾದರೆ ಆಗ ಅವರಿಗೆ ವಿಶೇಷ ಸೌಲಭ್ಯಗಳೇಕೆ ಬೇಕು? ಎಂಬ ಪ್ರಶ್ನೆ ಬರುತ್ತದೆ. ಈಗಾಗಲೇ ಹಲವಾರು ಬಹುಸಂಖ್ಯಾತ ನಾಡುವಾಸಿ ಬುಡಕಟ್ಟುಗಳನ್ನು ಮೀಸಲಾತಿಯಿಂದ ಹೊರಗಿಡುವಂತೆ ಹೋರಾಟಗಳು ಪ್ರಾರಂಭವಾಗಿವೆ. ಇಲ್ಲಿರುವ ಪ್ರಶ್ನೆಯೆಂದರೆ ತಮ್ಮ ಅನನ್ಯತೆ, ವೈಶಿಷ್ಟ್ಯತೆಗಳನ್ನು ಉಳಿಸಿಕೊಳ್ಳುತ್ತಲೇ ಹೇಗೆ ಆಧುನೀಕರಣದ ಬಿರುಗಾಳಿಯನ್ನು ಎದುರಿಸಬೇಕು ಎಂಬುದು? ಈ ದಿಕ್ಕಿನಲ್ಲಿ ತೀವ್ರ ಹೋರಾಟ ಮಾಡಿ ತಮ್ಮ ಪ್ರದೇಶದ ಮೇಲೆ ಸ್ವಾಯತ್ತತೆ ಹಾಗೂ ಅಧಿಕಾರ ಪಡೆದುಕೊಂಡು ನಿರ್ಧಾರಗಳನ್ನು ಕೈಗೊಳ್ಳುವ ಹಕ್ಕನ್ನು ತಮ್ಮಲ್ಲೇ ಉಳಿಸಿಕೊಳ್ಳುವುದಾಗಿದೆ. ಹೆಚ್ಚೂ ಕಡಿಮೆ ನಿರ್ನಾಮವಾಗಿದ್ದ ರೆಡ್ ಇಂಡಿಯನ್ನರು ತಮ್ಮ ನಿರಂತರ ಹೋರಾಟದ ಫಲವಾಗಿ ಇಂದು ಸಾರ್ವಭೌಮ ಸರ್ಕಾರಕ್ಕೆ ಸಮಾನವಾದ ಅಧಿಕಾರ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ(ಇದರ ಬಗ್ಗೆ ಮುಂದಿನ ಅಧ್ಯಾಯದಲ್ಲಿ ವಿವರಣೆ ನೀಡಲಾಗಿದೆ). ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಬಲಾಢ್ಯರಾದಾಗ ಸಿದ್ದಿಗಳಿಗೆ ಅಧಿಕಾರ ಸಿಗಲು ಸಾಧ್ಯ.

ಒಟ್ಟಾರೆಯಾಗಿ ಹೇಳಬೇಕೆಂದರೆ ಸಿದ್ದಿಗಳ ವರ್ತಮಾನದ ಆರ್ಥಿಕತೆ ಪಾರಂಪರಿಕ ಹಂತದಿಂದ ಆಧುನಿಕತೆಯೆಡೆಗೆ ಸ್ಥಿತ್ಯಂತರಗೊಳ್ಳುತ್ತಿದೆಯಾದರೂ ಅದಕ್ಕಾಗಿ ಸಾಕಷ್ಟು ಹೋರಾಟ ಮತ್ತು ತ್ಯಾಗಗಳನ್ನು ಮಾಡಬೇಕಾಗಿದೆ. ಅಬಾಲ ವೃದ್ಧರಾಗಿ ಎಲ್ಲರೂ ದುಡಿಮೆಯಲ್ಲಿ ತೊಡಗಿದ್ದರೂ ಕೂಡ ಅವರ ಜೀವನಮಟ್ಟ ಆಧುನಿಕ ಅಳತೆಗೋಲಿನಿಂದ ಅಷ್ಟೇನು ಉತ್ತಮವಾಗಿಲ್ಲ. ಪುರುಷ ಪ್ರಧಾನ್ಯತೆಯಿಂದಾಗಿ ಸ್ತ್ರೀಯರ ಸ್ಥಾನಮಾನವೂ ಉತ್ತಮವಾಗಿಲ್ಲ. ಆದರೆ ಸ್ವಸಹಾಯ ಸಂಘ ಹಾಗೂ ರಾಜಕೀಯ ಮೀಸಲಾತಿಗಳಿಂದಾಗಿ ಅವರಲ್ಲಿ ಜಾಗೃತಿ ಮೂಡುತ್ತಿದೆ. ಸಿದ್ದಿಗಳಿಗೇ ವಿಶಿಷ್ಟವಾದ ಬೆತ್ತದ ಕುಶಲಕಲೆಗೆ ಮತ್ತು ಕೌದಿ ಹೊಲಿಯುವಿಕೆಗೆ ಲಂಬಾಣಿಗಳ ಕಲೆಗೆ ನೀಡುವಂತೆ ವಿಶೇಷ ಸಂಸ್ಥೆಗಳನ್ನು ಸ್ಥಾಪಿಸಿ ಪ್ರೋತ್ಸಾಹ ನೀಡಬೇಕಿದೆ. ಅರಣ್ಯಹಕ್ಕು ಮತ್ತು ಕಿರು ಅರಣ್ಯ ಸಂಗ್ರಹಣೆಗಳ ಅರಿವು ಇವರಲ್ಲಿ ಮೂಡಿಸಬೇಕಿದೆ. ಹೀಗಾದಾಗ ಮಾತ್ರ ಸಿದ್ದಿಗಳ ವರ್ತಮಾನದ ಆರ್ಥಿಕತೆಗೆ ಸಧೃಡತೆ ದೊರೆಯಲು ಸಾಧ್ಯ.

ಅಡಿಟಿಪ್ಪಣಿಗಳು

೧. Sibi Zakarias, The Microlevel Impact of Tribal Development Programmes Among the Kadar Tribe of Kerala, Project Report, Centere for Development Studies, Thiruvanthapuram, P. 272, 2003.

೨. ವಿನಾಯಕ ಭಟ್, ಡಾ. ಅನಿಲ್ ಅಬ್ಬಿ (ಸಂ), ಪಶ್ಚಿಮ ಘಟ್ಟದ ಕಾಡು ಹಣ್ಣುಗಳು, ಟ್ರಾಪಿಕಲ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಸೆಂಟರ್, ಬೆಂಗಳೂರು, ಪು.೨೪–೨೫, ೨೦೦೭.

೩. ಅದೇ ಪು. ೨೫

೪. ಗಜಾನನ ಹೆಗಡೆ ಬೆಟ್ಟಣ್ಣೆ, ಅಪಾಯದಲ್ಲಿ ಕಿರು ಅರಣ್ಯ ಉತ್ಪನ್ನ ಕ್ಷೇತ್ರ– ಮುಂದೇನು? ಸುಗ್ಗಿ ಪುರವಣಿ, ಪು.೪, ವಿಜಯವಾಣಿ, ದಿನಾಂಕ ೨೭ ಮೇ, ೨೦೧೩

೫. ಹಳಿಯಾಳ ಲ್ಯಾಂಪ್ಸ್ ಸೊಸೈಟಿಯ ಅಡಾವೆ ಪತ್ರ, ೨೦೧೧

೬. ಶ್ರೀಕಾಂತ್ ಎಸ್., ಯೋಜನಾ, ಪು.೨೬–೨೭, ಏಪ್ರಿಲ್–೨೦೧೧.

೭. ಓಬಳೇಶ್ ಕೆ.ಹೆಚ್., ಕಿರು ಅರಣ್ಯ ಉತ್ಪನ್ನ ಸಂಗ್ರಹಿಸಲು ಅನುಮತಿ ವಿಳಂಬ, ಉದ್ಯೋಗಕ್ಕಾಗಿ ಗಿರಿಜನರ ವಲಸೆ, ಪು.೪, ಪ್ರಜಾವಾಣಿ ದಿನಪತ್ರಿಕೆ, ದಿ: ೨೯.೦೪.೨೦೧೧.

೮. ಮಲ್ಲೇಶ್ ಓ ನಾಯ್ಕನಹಟ್ಟಿ, ರಂಗಯ್ಯನದುರ್ಗ: ಗಿಡಮೂಲಿಕೆ ಸಂಪತ್ತು ಲೂಟಿ– ಪು.೪, ಪ್ರಜಾವಾಣಿ ದಿನಪತ್ರಿಕೆ, ದಿ: ೨೯.೦೪.೨೦೧೧.

೯. ರವಿ. ಎಚ್.ಎಲ್., ಕೊಡಗು ಜಿಲ್ಲೆಯ ಬುಡಕಟ್ಟು ಮಹಿಳಾ ಸ್ವಸಹಾಯ ಸಂಘಗಳಲ್ಲಿ ಅರ್ಥಿಕ ಚಟುವಟಿಕೆಗಳನ್ನು ಕುರಿತು ಅರ್ಥಶಾಸ್ತ್ರೀಯ ಹಿನ್ನೆಲೆಯಲ್ಲಿ ಅಂತರ್‌ಶಿಸ್ತೀಯ ಅಧ್ಯಯನ(ವಿರಾಜಪೇಟೆ ತಾಲೂಕನ್ನು ಅನುಲಕ್ಷಿಸಿ) ಅಪ್ರಕಟಿತ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೫೫, ೨೦೦೮.

೧೦. ಆಧಾರ–ಕಾರವಾರ ಜಿಲ್ಲಾ ಪಂಚಾಯಿತಿಯ ದಾಖಲೆಗಳು, ೨೦೦೨.

೧೧. ಚಂದ್ರ ಪೂಜಾರಿ ಎಂ., ಅಭಿವೃದ್ಧಿ ಮತ್ತು ಚುನಾವಣೆಯ ಗೆಲುವು (ಅಂಕಣ), ಪು. ೮, ವಿಜಯಕರ್ನಾಟಕ ದಿನಪತ್ರಿಕೆ, ದಿ: ೧೧.೦೧.೨೦೧೩

ಅಧ್ಯಾಯ ಆರು

ವರ್ತಮಾನದ ಆರ್ಥಿಕತೆ ಮತ್ತು ಸಿದ್ಧಿಗಳು

೧. ಉತ್ತರಕನ್ನಡದ ಬುಡಕಟ್ಟುಗಳ ಆರ್ಥಿಕತೆ: ಒಂದು ತೌಲನಿಕ ಚರ್ಚೆ

೨. ಬುಡಕಟ್ಟು ಅಭಿವೃದ್ಧಿ ಯೋಜನೆಗಳು ಹಾಗೂ ಪರಿಣಾಮಗಳು

೩. ಜಾಗತೀಕರಣದ ಸವಾಲುಗಳು

೪. ಅಭಿವೃದ್ಧಿಯ ಸವಾಲುಗಳು ಮತ್ತು ಸಾಧ್ಯತೆಗಳು

ಅಧ್ಯಾಯ ಆರು

ವರ್ತಮಾನದ ಆರ್ಥಿಕತೆ ಮತ್ತು ಸಿದ್ದಿಗಳು

ಈ ಅಧ್ಯಾಯದಲ್ಲಿ ವರ್ತಮಾನದೊಡನೆ ಸಿದ್ದಿಗಳ ಮುಖಾಮುಖಿಯನ್ನು ಕುಣಬಿ ಹಾಗೂ ಗೌಳಿಗ ಸಮುದಾಯಗಳ ಜೊತೆ ಸಿದ್ದಿ ಸಮುದಾಯದ ತೌಲನಿಕ ಅಧ್ಯಯನದ ಮೂಲಕ ಉತ್ತರ ಕನ್ನಡ ಜಿಲ್ಲೆಯ ಅರ್ಥವ್ಯವಸ್ಥೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ. ಜೊತೆಗೆ ಅಭಿವೃದ್ಧಿ ಯೋಜನೆಗಳು ಮತ್ತು ಅವುಗಳ ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳನ್ನು, ಜಾಗತೀಕರಣದ ಸವಾಲುಗಳು ಮತ್ತು ತಳಸಮುದಾಯಗಳ ಮೇಲೆ ಅದರ ಪರಿಣಾಮಗಳನ್ನು ವಿಶ್ಲೇಷಿಸಲಾಗಿದೆ. ಇದರ ಜೊತೆಗೆ ಅಭಿವೃದ್ಧಿಯ ಸವಾಲುಗಳು ಮತ್ತು ಬುಡಕಟ್ಟು ಅರ್ಥಶಾಸ್ತ್ರ, ಸ್ಥಳಾಂತರ, ಪುನರ್ವಸತೀಕರಣ, ಪರಿಸರ ವಿನಾಶದ ಹಿನ್ನೆಲೆಯಲ್ಲಿ ಗಾಯಗೊಂಡ ಸಮುದಾಯಗಳ ಅಭಿವೃದ್ಧಿಯ ಹೊಸ ಸಾಧ್ಯತೆಗಳನ್ನು ವಿವರಿಸಲಾಗಿದೆ.

'ವರ್ತಮಾನ ಎನ್ನುವುದು ಬುಡಕಟ್ಟು ಸಮುದಾಯಗಳಿಗೆ ಭೂತವೇ ಆಗಿದೆ. ನಿರ್ದಿಷ್ಟ ಧೋರಣೆ, ಸಮರ್ಪಕ ಸಂಘಟನೆ ಇಲ್ಲದೆ ಈ ಸಮುದಾಯಗಳ ಸಾಮಾಜಿಕಾರ್ಥಿಕ ಬದುಕು ಚೆಲ್ಲಾಪಿಲ್ಲಿಯಾಗಿದೆ. ಸರ್ಕಾರದ ಯೋಜನೆಗಳಿಂದ ಪ್ರಯೋಜನವಾಗುತ್ತಿಲ್ಲ. ಉತ್ಪಾದನೆಯ ಪರಂಪರಾಗತ ನೆಲೆಗಳನ್ನು ಕಳೆದುಕೊಂಡು ಹೊಸ ಉತ್ಪಾದನಾ ನೆಲೆಗಳನ್ನು ಪಡೆಯಲಾಗದೆ ನರಳುವ ಈ ಸಮುದಾಯಗಳದು ಕತ್ತಲೆಯ ಲೋಕ. ಅಸ್ಥಿರವಾಸದ ನೆಲೆಗಳು, ದುರ್ಬಲ ಆರ್ಥಿಕ ಹಿನ್ನೆಲೆ, ಬುಡಕಟ್ಟುಗಳ ನಡುವೆಯೇ ಇರುವ ಶ್ರೇಣೀಕರಣ, ಊಳಿಗಮಾನ್ಯ, ಜಾತಿಪದ್ಧತಿಯೊಳಗೇ ಇರಬೇಕಾದ ಅನಿವಾರ್ಯತೆ, ಹೀಗೆ ಹತ್ತು ಹಲವು ಸಿಕ್ಕುಗಳಲ್ಲಿ ಸಿಕ್ಕಿಹಾಕಿಕೊಂಡು ನರಳುತ್ತಿರುವ ಎಲ್ಲ ಬುಡಕಟ್ಟುಗಳಿಗೆ ಸಲ್ಲುವ ಅಭಿವೃದ್ಧಿ ಮೀಮಾಂಸೆ ಸಾಧ್ಯವೇ? ಸಾಧ್ಯವಾದರೆ ಎಲ್ಲಿದೆ? ಈ ಸವಾಲುಗಳಿಗೆ ಉತ್ತರ ಕ್ಲಿಷ್ಟ".[೧]

೬.೧. ಉತ್ತರಕನ್ನಡದ ಬುಡಕಟ್ಟುಗಳ ಆರ್ಥಿಕತೆ: ಒಂದು ತೌಲನಿಕ ಚರ್ಚೆ

ಪಶ್ಚಿಮಘಟ್ಟಗಳ ಮಡಿಲಲ್ಲಿರುವ ಉತ್ತರಕನ್ನಡ ಜಿಲ್ಲೆ ಪ್ರಾಕೃತಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ದೃಷ್ಟಿಯಿಂದ ಒಂದು ವಿಶೇಷ ಪ್ರದೇಶವಾಗಿದೆ. ಇದು ವೈವಿಧ್ಯಮಯ ಭೌಗೋಳಿಕ ಲಕ್ಷಣಗಳಿಂದ ಮತ್ತು ವಿವಿಧ ಜಾತಿ, ಜನಾಂಗ, ಬುಡಕಟ್ಟುಗಳ ಸಂಸ್ಕೃತಿ, ಉಡುಗೆ, ಅಡುಗೆ, ನೃತ್ಯಗಳ ಕುದಿಪಾತ್ರೆಯಾಗಿದ್ದು ಉಳಿದ ಜಿಲ್ಲೆಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ. ಮಹಾರಾಷ್ಟ್ರ ಮತ್ತು ಗೋವಾದಿಂದ ಈ ಕಡೆ ಬಂದ ಹತ್ತಾರು ಬುಡಕಟ್ಟು ಮತ್ತು ಜಾತಿಯವರಿಗೆ ಇದು ಆಸರೆಯಾಗಿದೆ. ಮುಖ್ಯವಾಗಿ ಮಧ್ಯಕಾಲೀನ ಯುಗದ ಅಂತ್ಯದಲ್ಲಿ ಕರ್ನಾಟಕಕ್ಕೆ ಹೀಗೆ ವಲಸಿಗರು ಹರಿದುಬರಲು ಕಾರಣಗಳೇನಿರಬಹುದೆಂಬುದು ಆಸಕ್ತಿಕರ ಪ್ರಶ್ನೆ. ಅವುಗಳೆಂದರೆ ೧. ನೈಸರ್ಗಿಕ–ಭೌಗೋಳಿಕ ಕಾರಣಗಳು, ೨. ಸಾಮಾಜಿಕ–ಧಾರ್ಮಿಕ ಕಾರಣಗಳು, ೩. ರಾಜಕೀಯ–ಆರ್ಥಿಕ ಕಾರಣಗಳು

೧. **ನೈಸರ್ಗಿಕ ಮತ್ತು ಭೌಗೋಳಿಕ ಕಾರಣಗಳು:** ನಿಸರ್ಗ ಶ್ರೀಮಂತಿಕೆಯ ಉತ್ತರಕನ್ನಡದ ಒಂದೆಡೆ ನಯನ ಮನೋಹರ ಕಡಲತೀರ ಮತ್ತು ವ್ಯಾಪಾರಕ್ಕೆ ಸೂಕ್ತವಾದ ಬಂದರುಗಳು ಭಟ್ಕಳದ ನವಾಯತರಿಗೆ, ಉಪ್ಪು ಮಾಡುವ ಅಗೇರರಿಗೆ, ಮೀನುಗಾರಿಕೆಯ ಬೆಸ್ತರಿಗೆ ಆಶ್ರಯ ನೀಡಿದರೆ, ಇಲ್ಲಿನ ದಟ್ಟ ಕಾಡುಗಳು ಬೇಟೆ, ಆಹಾರ ಸಂಗ್ರಹಣೆ ಇತ್ಯಾದಿಗಳನ್ನೇ ಆಧರಿಸಿದ ಆದಿಮ ಬುಡಕಟ್ಟುಗಳಿಗೆ, ಕಾಗದ, ಪ್ಲೈವುಡ್ ಕಾರ್ಖಾನೆಗಳಿಗೆ, ಗಣಿಗಾರಿಕೆಗೆ, ಟಿಂಬರ್ ಡಿಪೋಗಳಿಗೆ, ಇಲ್ಲಿನ ರಭಸವಾಗಿ ಹರಿಯುವ ನದಿಗಳು ಜಲವಿದ್ಯುತ್ ಯೋಜನೆಗಳಿಗೆ ಆಸರೆಯಾದವು. ಒಳನಾಡಿಗೆ ಸರಿದಂತೆ ಸಿಗುವ ಅರೆಮಲೆನಾಡಿನ ಬಯಲುಪ್ರದೇಶಗಳು ಮತ್ತು ಹುಲ್ಲುಗಾವಲುಗಳು ಪಶುಪಾಲಕರಿಗೆ ಮತ್ತು ಕುಮ್ರಿ ಬೇಸಾಯದ ಸಮುದಾಯಗಳಿಗೆ ನೆಲೆ ನೀಡಿವೆ. ಒಂದು ಭಾಗದ ಶ್ರೀಮಂತಿಕೆಯ ಜೊತೆಗೆ ಇನ್ನೊಂದು ಭಾಗದ ಅಂದರೆ ಮಹಾರಾಷ್ಟ್ರದ ಬರಗಾಲ, ನೀರು, ಮೇವಿನ ಕೊರತೆ ಇತ್ಯಾದಿ ನೈಸರ್ಗಿಕ ವಿಪತ್ತುಗಳೂ ಕಾರಣವಾಗಿರಬಹುದು. ಖಾರ್ವಿಗಳು, ನವಾಯತರು, ಗೌಳಿಗರು ಮತ್ತು ಕುಣಬಿಯರು. ಹೀಗೆ ಬಂದವರಲ್ಲಿ ಪ್ರಮುಖರು.

೨. **ಸಾಮಾಜಿಕ ಮತ್ತು ಧಾರ್ಮಿಕ ಕಾರಣಗಳು:** ಈ ವಲಸೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಮನುಷ್ಯ ಸಂಘಜೀವಿಯೇ ಆದರೂ ತನ್ನದೇ ಆದ ರೀತಿ ನೀತಿ, ಸಂಪ್ರದಾಯ ಆಚರಣೆ, ಧರ್ಮ ಜಾತಿಗಳ ಪುಟ್ಟಪುಟ್ಟ ಸಮುದಾಯಗಳನ್ನು ಮಾಡಿಕೊಂಡು ಒಂದೆಡೆ ನೆಲೆಸಿರುತ್ತಾನೆ. ಅಧಿಕಾರವರ್ಗ, ಬಹುಸಂಖ್ಯಾತ ಸಮುದಾಯ, ಅನ್ಯಧರ್ಮೀಯರು ಮುಂತಾದವರಿಂದ ತನ್ನ ಧರ್ಮ ಆಚರಣೆಗಳಿಗೆ ಧಕ್ಕೆ ಬಂದಾಗ ಕೆಲವರು ಮತಾಂತರ, ಹೊಂದಾಣಿಕೆ ಮಾಡಿಕೊಂಡು ಅಲ್ಲಿಯೇ ಉಳಿಯಬಹುದು. ಇನ್ನೂ ಕೆಲವರು ಇದಕ್ಕೊಪ್ಪದೆ ತಮಗೆ ರಕ್ಷಣೆ ಸಿಗುವ ಸ್ಥಳಗಳಿಗೆ ವಲಸೆ ಹೋಗಬಹುದು. ಹವ್ಯಕರು, ಗೌಡಸಾರಸ್ವತರು, ದೈವಜ್ಞರು, ಹಿಂದು ಮತ್ತು ಮುಸ್ಲಿಂ ಸಿದ್ದಿಗಳು ಈ ಗುಂಪಿಗೆ ಸೇರಬಹುದು.

೩. **ರಾಜಕೀಯಾರ್ಥಿಕ ಕಾರಣಗಳು:** ರಾಜಕೀಯ ಅಸ್ಥಿರತೆ, ಪದೇಪದೇ ಯುದ್ಧಗಳು, ಆಳರಸರ ಅಸಮಾನತೆ ಮತ್ತು ದಬ್ಬಾಳಿಕೆ ನೀತಿಗಳು ಈ ರೀತಿಯ ಸ್ಥಿತ್ಯಂತರಗಳಿಗೆ ಕಾರಣವಾಗಿವೆ. ಗೋವಾದ

ಪೋರ್ಚುಗೀಸರ ಇನ್ಕ್ವಿಜಿಷನ್, ಆದಿಲ್‌ಶಾಹಿಗಳ ಮತಾಂತರ ಹಾಗೂ ಅದೇ ಸಮಯದಲ್ಲಿ ಉತ್ತರಕನ್ನಡದ ರಾಜ ರಾಣಿಯರ ಸಹಾಯ ಮತ್ತು ಅಭಯಗಳು ಹಲವಾರು ಸಮುದಾಯಗಳು ಇಲ್ಲಿ ಬರಲು ಕಾರಣವಾದವು. ಜೊತೆಗೆ ಆರ್ಥಿಕವಾಗಿ ಪ್ರತಿಯೊಂದು ಸಮುದಾಯ ತನ್ನ ನೂರಾರು ವರ್ಷಗಳ ವಿಕಾಸದ ಹಾದಿಯಲ್ಲಿ ತನ್ನದೇ ಆದ ಕಸುಬು, ಉತ್ಪಾದನಾ ವಿಧಾನ, ಮಾಲೀಕತ್ವ ಮತ್ತು ಮಾರುಕಟ್ಟೆ ವ್ಯವಸ್ಥೆಯನ್ನು ಹೊಂದಿರುತ್ತವೆ. ಮಾರುಕಟ್ಟೆಯ ಏರಿಳಿತ, ತೀವ್ರ ಪೈಪೋಟಿ, ಉತ್ಪಾದನಾ ಸಾಧನಗಳ ಮೇಲಿನ ನಿಯಂತ್ರಣ ಕಳೆದುಕೊಳ್ಳುವಿಕೆ, ಶೋಷಣೆ ಇತ್ಯಾದಿಗಳೂ ವಲಸೆಗೆ ಪ್ರಮುಖ ಕಾರಣಗಳಾಗಿವೆ.

ಈ ಹಿನ್ನೆಲೆಯಲ್ಲಿ ಈ ಭಾಗದ ಮೂರು ಪ್ರಮುಖ ಬುಡಕಟ್ಟುಗಳಾದ ಸಿದ್ದಿ-ಗೌಳಿ-ಕುಣಬಿಗಳನ್ನು ತೌಲನಿಕವಾಗಿ ವಿವೇಚಿಸಲು ಪ್ರಯತ್ನಿಸಿದ್ದೇನೆ. ಇದಕ್ಕಾಗಿ ಮಲ್ಲಿಕಾರ್ಜುನ ಪಿ. ಸೊರಬದರ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ 'ಕುಣಬಿ ಸಮುದಾಯದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ'(ಉತ್ತರಕನ್ನಡ ಜಿಲ್ಲೆಯನ್ನು ಪರಿಗಣಿಸಿ), ೨೦೧೧ ಹಾಗೂ ಪುಷ್ಪಲತಾ ಹಿರೇಮಠ್, ಗೌಳಿಗ ಮಹಿಳೆಯರ ಸ್ಥಿತ್ಯಂತರಗಳು(ಉತ್ತರಕನ್ನಡ ಜಿಲ್ಲೆಯನ್ನು ಅನುಲಕ್ಷಿಸಿ), ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೨೦೧೧ ಇವರ ಕೃತಿಗಳನ್ನು ಪರಿಗಣಿಸಿದ್ದೇನೆ. ತಮ್ಮ ಸಮೀಕ್ಷೆಯಲ್ಲಿ ಶ್ರೀ ಸೊರಬದ ಅವರು ಒಟ್ಟು ೧೦೦೦ ಕುಣಬಿ ಕುಟುಂಬಗಳನ್ನು ಅಂದರೆ ಸುಮಾರು ೫೪೯೦ ಜನರನ್ನು ಪರಿಗಣಿಸಿದ್ದಾರೆ. ಶ್ರೀಮತಿ ಪುಷ್ಪಲತಾ ಹಿರೇಮಠ್‌ರು ೧೦೫ ಗೌಳಿಗಳ ಕುಟುಂಬದ ೧೧೧೫ ಜನರನ್ನು ಮತ್ತು ನನ್ನ ಅಧ್ಯಯನಕ್ಕೆ ೪೩೭ ಸಿದ್ದಿ ಕುಟುಂಬಗಳ ೧೮೪೯ ಜನರನ್ನು ಪರಿಗಣಿಸಲಾಗಿದೆ. ಈ ತುಲನಾತ್ಮಕ ವಿಶ್ಲೇಷಣೆಯ ಅಂಶಗಳು ಹೀಗಿವೆ.

೧. ಸಿದ್ದಿ-ಗೌಳಿ-ಕುಣಬಿ ಸಮುದಾಯಗಳು ಗೋವಾ-ಮಹಾರಾಷ್ಟ್ರ ಕಡೆಯಿಂದ ಕರ್ನಾಟಕಕ್ಕೆ ವಲಸೆ ಬಂದವುಗಳಾಗಿವೆ.

೨. ಸಿದ್ದಿಗಳು ಮೂಲತಃ ಬೇಟೆಗಾರರು, ಗೌಳಿಗರು ಪಶುಪಾಲಕರು ಮತ್ತು ಕುಣಬಿಗಳು ಸಂಗ್ರಾಹಕರು ಮತ್ತು ಕುಮ್ರಿ ಬೇಸಾಯಗಾರರು.

೩. ಈ ಮೂರು ಸಮುದಾಯಗಳ ಭಾಷೆ ಮರಾಠಿ, ಕೊಂಕಣಿಮಿಶ್ರಿತ ಕನ್ನಡವಾಗಿದೆ.

೪. ಕರ್ನಾಟಕದಲ್ಲಿ ಸಿದ್ದಿಗಳಿಗೆ ಮಾತ್ರ ಪರಿಶಿಷ್ಟ ಬುಡಕಟ್ಟಿನ ಸ್ಥಾನಮಾನ ದೊರೆತಿದೆ.

೫. ಸಿದ್ದಿ ಹಾಗೂ ಕುಣಬಿ ಸಮುದಾಯಗಳಿಗೆ ಗೋವಾದಲ್ಲಿ ಪರಿಶಿಷ್ಟ ಪಂಗಡದ ಸ್ಥಾನಮಾನ ದೊರೆತಿದೆ.

೬. ಈ ಮೂರು ಸಮುದಾಯಗಳು ಅಭಿವೃದ್ಧಿ ಯೋಜನೆಗಳಿಂದ ನಿರ್ವಸಿತರಾಗಿ ಸೂಕ್ತ ಪುನರ್ವಸತಿ ಇಲ್ಲದೆ ನರಳುತ್ತಿದ್ದಾರೆ.

೭. ಈ ಎಲ್ಲ ಸಮುದಾಯಗಳು ಒಟ್ಟಾಗಿ 'ಉತ್ತರಕನ್ನಡ ಜಿಲ್ಲಾ ಬುಡಕಟ್ಟು ಅಭಿವ್ಯಕ್ತಿ ವೇದಿಕೆ'

ಸ್ಥಾಪಿಸಿಕೊಂಡು ಸಾಮೂಹಿಕ ಹೋರಾಟ ಆರಂಭಿಸಿವೆ. ಜೊತೆಗೆ ಗ್ರೀನ್ ಇಂಡಿಯಾ ಕೂಡ ಇವರ ಜೊತೆ ಕೈಜೋಡಿಸಿದೆ.

ನೆಲೆ: ಸಿದ್ದಿ-ಕುಣಬಿ-ಗೌಳಿ ಈ ಮೂರೂ ಬುಡಕಟ್ಟುಗಳ ಭೌಗೋಳಿಕ ನೆಲೆ ಉತ್ತರಕನ್ನಡ ಜಿಲ್ಲೆಯಾದರೂ ಅವರ ನೆಲೆಗಳನ್ನು ನೋಡಿದಾಗ ಸಿದ್ದಿಗಳು ಜಿಲ್ಲೆಯ ಯಲ್ಲಾಪುರ, ಹಳಿಯಾಳ ಮತ್ತು ಮುಂಡಗೋಡದ ಕಡೆ ಹೆಚ್ಚಾಗಿ ನೆಲೆಸಿದ್ದರೆ, ಕುಣಬಿಗಳು ಜೋಯಿಡಾ ಮತ್ತು ಹಳಿಯಾಳ ತಾಲೂಕುಗಳಲ್ಲೂ ಮತ್ತು ಗೌಳಿಗಳು ಕಾರವಾರ, ಯಲ್ಲಾಪುರ ಹಾಗೂ ಜೋಯಿಡಾಗಳಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಭೌಗೋಳಿಕತೆ ಆರ್ಥಿಕತೆಯನ್ನು ಅವಲಂಬಿಸಿರುತ್ತದೆ ಎಂಬ ಮಾತು ಇವರ ನೆಲೆ ಹಾಗೂ ಕಸುಬುಗಳನ್ನು ನೋಡಿದಾಗ ನಿಜವೆನಿಸುತ್ತದೆ.

ಕಸುಬು

ಕೂಲಿ: ಜಿಲ್ಲೆಯ ಆದಿವಾಸಿಗಳ ಮುಖ್ಯಕಸುಬು ಕೂಲಿಯಾಗಿದೆಯೆಂದು ಈಗಾಗಲೇ ತಿಳಿದಿದೆ. ಅದನ್ನೇ ಈ ವಿಶ್ಲೇಷಣೆ ಸಮರ್ಥಿಸುತ್ತದೆ. ಸಿದ್ದಿಗಳ ೯೦೪/೧೮೪೯ ಜನರು, ಕುಣಬಿಗಳಲ್ಲಿ ೨೪೯೦/೫೮೯೦ ಜನರು ಹಾಗೂ ಗೌಳಿಗಳ ೨೪೦/೧೧೧೫ ಜನ ಇದನ್ನೇ ಅವಲಂಬಿಸಿದ್ದಾರೆ. ಕೂಲಿ ಮಾಡುವವರಲ್ಲಿ ಪುರುಷರೇ ಹೆಚ್ಚಾಗಿರುವುದು ಈ ಮೂರು ಸಮುದಾಯಗಳಲ್ಲಿ ಕಂಡುಬರುತ್ತದೆ.

ಪಶುಸಂಗೋಪನೆ

ಎತ್ತು, ಎಮ್ಮೆ, ಹಸು, ಕುರಿ, ಕೋಳಿ ಇತ್ಯಾದಿ ಪಶುಸಂಪತ್ತು ಪಾರಂಪರಿಕ ಆರ್ಥಿಕತೆಗಳ ಲಕ್ಷಣವಾಗಿದ್ದು, ಸಿದ್ದಿಗಳ ೪೩೭ ಕುಟುಂಬಗಳಲ್ಲಿ ಇವುಗಳ ಸಂಖ್ಯೆ ೧೭೦೪ರಷ್ಟಿದ್ದು ಕೋಳಿಗಳೇ ಗಣನೀಯ ಸಂಖ್ಯೆಯಲ್ಲಿವೆ (೧೩೪೭). ಕುಣಬಿಗಳ ೧೦೦೦ ಕುಟುಂಬಗಳಲ್ಲಿ ಪಶುಸಂಪತ್ತು ೧೮೯೦ರಷ್ಟಿದ್ದು ಕೋಳಿಗಳೇ ಇಲ್ಲ. ಏಕೆಂದರೆ ಅವರು ತಾವು ಸಾಕಿದ ಪ್ರಾಣಿಗಳನ್ನು ತಿನ್ನುವುದಿಲ್ಲ. ಆದರೆ ಉಳಿದಂತೆ ಎಲ್ಲವೂ ಸಮನಾಗಿದ್ದು ಕರುಗಳ ಸಂಖ್ಯೆ ಹೆಚ್ಚಾಗಿದೆ. ಕರು ಹಾಕುವ ಸಮಯದಲ್ಲೇ ಕ್ಷೇತ್ರಕಾರ್ಯ ನಡೆಸಿರಬೇಕು. ಇನ್ನು ಗೌಳಿಗಳ ೧೦೫ ಕುಟುಂಬಗಳ ಪಶುಸಂಪತ್ತು ೯೮೩೦. ಹೆಸರು ಗೌಳಿಯಾದರೂ ಇವರಲ್ಲಿ ದನಗಳಿಗಿಂತಲೂ ಕುರಿಗಳ ಸಂಖ್ಯೆಯೇ ಹೆಚ್ಚಾಗಿದೆ(೮೪೮೬). ಇನ್ನು ಮುಂದೆ ಇವರನ್ನು ಕುರುಬ ಜನಾಂಗದವರೆಂದು ಗುರುತಿಸಬಹುದೇನೋ? ಒಟ್ಟಾರೆಯಾಗಿ ಈ ಜಿಲ್ಲೆಯ ಹಸಿರು ವನಸಂಪತ್ತು ಪಶುಪಾಲನೆಗೆ ಸೂಕ್ತವಾಗಿದ್ದು ಜಿಲ್ಲೆಯ ಜನರ ಪ್ರಮುಖ ಬಂಡವಾಳ ಈ ಪಶುಸಂಪತ್ತೇ ಆಗಿದೆ. ಇವು ಪಾರಂಪರಿಕ ಆಹಾರಪದ್ಧತಿ, ಆಚರಣೆ ಮತ್ತು ನಿಸರ್ಗದ ಬ್ಯಾಂಕುಗಳಲ್ಲಿಟ್ಟ ಆಪದ್ಧನವಾಗಿದೆ.

ಅನಕ್ಷರತೆ: ಜಿಲ್ಲೆಯ ಆದಿವಾಸಿಗಳಲ್ಲಿ ಸಾಕ್ಷರತೆ ಪ್ರಮಾಣ ತುಂಬಾ ಕಡಿಮೆ ಇರುವುದು ಈ ತುಲನೆಯಿಂದ ತಿಳಿದುಬರುತ್ತದೆ. ಸಿದ್ದಿಗಳಲ್ಲಿ ಒಟ್ಟಾರೆ ೪೬೦/೧೮೪೯ ಜನ ಅನಕ್ಷರಸ್ಥರಿದ್ದು ಅದರಲ್ಲಿ ೧೯೦ ಪುರುಷರು ಹಾಗೂ ೨೭೦ ಸ್ತ್ರೀಯರೂ ಇದ್ದಾರೆ. ಕುಣಬಿಗಳಲ್ಲಿ ೪೩೩/೫೮೯೦ ಜನ ಅನಕ್ಷರಸ್ಥರಿದ್ದು ಅದರಲ್ಲಿ ೨೫೨ ಗಂಡು ಹಾಗೂ ೧೮೧ ಸ್ತ್ರೀಯರೂ ಇದ್ದಾರೆ. ಗೌಳಿಗಳಲ್ಲಿ ಈ

ಪ್ರಮಾಣ ೬೬೮/೧೧೧೫ ಇದ್ದು ಗಂಡುಮಕ್ಕಳ ಪ್ರಮಾಣ ೩೨೪ ಮತ್ತು ಹೆಣ್ಣುಮಕ್ಕಳ ಪ್ರಮಾಣ ೩೪೪ ಇದೆ. ಕುಣಬಿಯರಲ್ಲಿ ಅನಕ್ಷರತೆ ಪ್ರಮಾಣ ಕಡಿಮೆ ಇರುವಂತೆ ತೋರಿದರೂ ಅವರಲ್ಲಿ ಹೆಚ್ಚು ಓದಿದವರ ಸಂಖ್ಯೆ ತುಂಬಾ ಕಡಿಮೆ ಇದೆ. ಅಂದರೆ ಓದು ಬರಹ ಕಲಿಯುವ ಪೂರ್ತಿ ಶಾಲೆಗೆ ಹೋಗಿ ನಂತರ ಅರ್ಧಕ್ಕೇ ಬಿಟ್ಟು ಪಶುಸಂಗೋಪನೆ ಮತ್ತು ಕೃಷಿಯಲ್ಲಿ ತೊಡಗುವವರ ಸಂಖ್ಯೆ ಹೆಚ್ಚಾಗಿದೆ. ಇದನ್ನು ಮುಂದಿನ ಕೋಷ್ಟಕದಲ್ಲಿ ನೋಡಬಹುದು.

ಲಿಂಗಾನುಪಾತ: ಕೇವಲ ಸಿದ್ದಿಗಳಲ್ಲಿ ಮಾತ್ರ ಪುರುಷರಿಗಿಂತಲೂ ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಉಳಿದಂತೆ ಕುಣಬಿ ಹಾಗೂ ಗೌಳಿಗಳಲ್ಲಿ ಈ ಅನುಪಾತ ಪುರುಷರ ಪರವಾಗಿದೆ.

ಪದವಿಪೂರ್ವ: ಸಿದ್ದಿಗಳಲ್ಲಿ ಪದವಿಪೂರ್ವ ವಿದ್ಯಾಭ್ಯಾಸ ಪಡೆದವರ ಸಂಖ್ಯೆ ೬೪(೨೯ ಗಂ, ೩೫ ಹೆ), ಕುಣಬಿಯರಲ್ಲಿ ೪೬(೩೪ ಗಂ, ೧೨ ಹೆ) ಮತ್ತು ಗೌಳಿಗಳಲ್ಲಿ ೮(೦ ಗಂ, ೮ ಹೆ). ಪದವಿ ಪೂರ್ವ ವಿದ್ಯಾಭ್ಯಾಸ ಮಾಡುವವರಲ್ಲಿ ಬಾಲಕಿಯರ ಸಂಖ್ಯೆ ಹೆಚ್ಚಾಗಿರುವುದು ಸಿದ್ದಿ ಹಾಗೂ ಗೌಳಿಗಳಲ್ಲಿ ಕಂಡುಬರುತ್ತದೆ. ಹೆಣ್ಣುಮಕ್ಕಳಲ್ಲಿ ಹಾಗೂ ಪೋಷಕರಲ್ಲಿ ಸ್ತ್ರೀ ಶಿಕ್ಷಣದ ಜಾಗೃತಿ ಮೂಡುತ್ತಿರುವುದರ ಶುಭ ಸೂಚನೆ ಇದಾಗಿದೆ.

ಪದವಿ: ಆದರೆ ಪದವಿ ಶಿಕ್ಷಣದ ಚಿತ್ರಣ ಬೇರೆಯೇ ಇದೆ. ಸಿದ್ದಿಗಳಲ್ಲಿ ಪದವಿ ಶಿಕ್ಷಣ ಪಡೆದವರು ೯ ಜನ(೮ ಗಂಡು, ೧ ಹೆಣ್ಣು), ಕುಣಬಿಗಳಲ್ಲಿ ೧೮(೧೫ ಗಂಡು, ೩ ಹೆಣ್ಣು) ಮತ್ತು ಗೌಳಿಗಳಲ್ಲಿ ಕೇವಲ ಒಬ್ಬರೇ ಪದವೀಧರರಿದ್ದು ಅದೂ ಹೆಣ್ಣುಮಗಳಾಗಿರುವುದೊಂದು ವಿಶೇಷ. ಬಾಲಕಿಯರಿಗೆ ಪದವಿಪೂರ್ವದವರೆಗೆ ಮಾತ್ರ ಕಲಿಸುತ್ತಿದ್ದು ನಂತರ ಅವರಿಗೆ ಮದುವೆ ಮಾಡುತ್ತಿರಬಹುದಾದ್ದರಿಂದ ಪದವಿ ವೇಳೆಗೆ ಇವರೆಲ್ಲಾ ಮಾಯವಾಗುತ್ತಾರೆ.

ಗೌಳಿಗಳ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯದೇ ಇರುವುದರಿಂದ ಸಿದ್ದಿ ಹಾಗೂ ಕುಣಬಿಗಳ ಜೀವನದ ವಿವಿಧ ಆಯಾಮಗಳನ್ನು ಈ ಕೆಳಗಿನ ಕೋಷ್ಟಕ ೬.೧.೧ರಲ್ಲಿ ನೀಡಲಾಗಿದೆ.

ಕೋಷ್ಟಕ ೬.೧.೧. ಸಿದ್ದಿ ಹಾಗೂ ಕುಣಬಿಗಳ ಜೀವನದ ವಿವಿಧ ಆಯಾಮಗಳು

ಕ್ರಸಂ.	ವಿವರ	ಸಮುದಾಯಗಳು	
		ಸಿದ್ದಿ	ಕುಣಬಿ
೧.	ಸಮೀಕ್ಷೆ ಮಾಡಿದ ಕುಟುಂಬಗಳು	೪೩೬	೧೦೦೦
೨.	ಸಮೀಕ್ಷೆ ಮಾಡಿದ ಒಟ್ಟು ಜನಸಂಖ್ಯೆ	೧೮೪೯	೫೮೯೦
೩.	ಕುಟುಂಬದ ಸರಾಸರಿ ಗಾತ್ರ	೪.೨೩	೫.೮
೪.	ಲಿಂಗವಾರು(ಗಂ+ಹೆ)	೯೨೦+೯೨೯	೩೦೯೪+೨೮೯೬
೫.	೧೮ರಿಂದ ೪೦ರ ವಯೋಮಾನದವರ ಪ್ರಮಾಣ	೫೧೯	೨೫೨೫

೬.	ಮನೆಗಳ ಮಾದರಿ:		
	ಗುಡಿಸಲು	೨೬	೧೨೧
	ಹೆಂಚಿನಮನೆ	೧೪೮	೧೫೩
	ಜನತಾ(ಆಶ್ರಯ)	೨೬೦	–
೭.	ಶೌಚಾಲಯ	೪೭%	೫%
೮.	ಸ್ವಂತಮನೆ	೧೫೭	೯೦೩
೯.	ಸರ್ಕಾರದ್ದು	೨೬೨	೯೭
೧೦.	ಟಿ.ವಿ. ಇದೆ	೩೦%	೧೬%
೧೧.	ಭೂರಹಿತ ಕುಟುಂಬಗಳು	೩೫೦(೮೦%)	೧೯೨(೧೯%)

ಭೌತಿಕ ಸೌಕರ್ಯಗಳ ದೃಷ್ಟಿಯಿಂದ ಸಿದ್ದಿಗಳೇ ಕುಣಬಿಗಳಿಗಿಂತ ಉತ್ತಮವಾಗಿದ್ದಾರಾದರೂ ಭೂಮಿ ಹಂಚಿಕೆ ದೃಷ್ಟಿಯಿಂದ ಕುಣಬಿಗಳಲ್ಲಿ ಸಮಾನತೆ ಇದೆ. ಏಕೆಂದರೆ ಸಿದ್ದಿಗಳಲ್ಲಿ ಶೇ. ೮೦ಕ್ಕಿಂತಲ್ಲೂ ಹೆಚ್ಚು ಭೂರಹಿತ ಕುಟುಂಬಗಳಿದ್ದರೆ ಕುಣಬಿಗಳಲ್ಲಿ ಭೂರಹಿತದ ಪ್ರಮಾಣ ಶೇ. ೧೯.೮ರಷ್ಟು ಮಾತ್ರ ಇದೆ. ಅಂದರೆ ಕುಣಬಿಗಳಲ್ಲಿ ಎರಡು ಎಕರೆಗಿಂತ ಹೆಚ್ಚಿನ ಭೂಮಿ ಇರುವವರು ತುಂಬಾ ಕಡಿಮೆ ಇದ್ದರೂ ಅದಕ್ಕಿಂತ ಕಡಿಮೆ ಭೂಮಿ ಹೊಂದಿದವರ ಸಂಖ್ಯೆ ಹೆಚ್ಚಾಗಿದೆ. ಆದರೆ ಸಿದ್ದಿಗಳಲ್ಲಿ ೫ ರಿಂದ ೨ ಎಕರೆ ಭೂಮಿಯನ್ನು ಹೊಂದಿದವರು ಹಲವಾರು ಕುಟುಂಬಗಳಿದ್ದು ಉಳಿದವರಿಗೆ ಯಾವುದೇ ಭೂಮಿ ಇರುವುದಿಲ್ಲ. ಇದು ಸಮುದಾಯದಲ್ಲಿ ಭೂ ಹಂಚಿಕೆಯ ಅಸಮಾನತೆಯನ್ನು ಸೂಚಿಸುತ್ತದೆ. ಒಟ್ಟಾರೆಯಾಗಿ ಉತ್ತರಕನ್ನಡದ ಆರ್ಥಿಕತೆ ಅರಣ್ಯ ಮತ್ತು ಭೂಮಿಯನ್ನೇ ಆಧರಿಸಿದ್ದು ವಿವಿಧ ಅಭಿವೃದ್ಧಿ ಯೋಜನೆ, ಕಾನುನಗಳಿಂದ ಈ ಎರಡೂ ಸಂಪನ್ಮೂಲಗಳ ಒಡೆತನ ಬುಡಕಟ್ಟುಗಳ ಕೈಗೆ ಸಿಗದೆ ಅವರ ಬದುಕು ಅತಂತ್ರವಾಗುತ್ತಿದೆ.

೬.೨. ಬುಡಕಟ್ಟು ಅಭಿವೃದ್ಧಿ ಯೋಜನೆಗಳು ಮತ್ತು ಅವುಗಳ ಪರಿಣಾಮಗಳು

ಬುಡಕಟ್ಟುಗಳ ಅಭಿವೃದ್ಧಿಗೆ ನೂರಾರು ಯೋಜನೆಗಳು ಇವೆಯಾದರೂ ನಿರ್ದಿಷ್ಟ ಅಭಿವೃದ್ಧಿ ನೀತಿ ಎಂಬುದೇ ಇಲ್ಲ. ಬ್ರಿಟಿಷರಿಗೆ ನಮ್ಮ ಕಾಡು ಹಾಗೂ ಸಂಪನ್ಮೂಲಗಳನ್ನು ದೋಚುವ ಹುನ್ನಾರವಿತ್ತೇ ವಿನಾ ಬುಡಕಟ್ಟುಗಳನ್ನು ಅಭಿವೃದ್ಧಿ ಮಾಡುವ ಸದುದ್ದೇಶವಿರಲಿಲ್ಲ. ಸ್ವಾತಂತ್ರ್ಯಾನಂತರ ನೆಹರೂ ಪಂಚಶೀಲಗಳನ್ನು ಹೇಳಿದರಾದರೂ ಅವರ ವಾಸ್ತವಿಕ ನೀತಿಗಳು ಈ ಆಶಯಗಳಿಗೆ ವಿರುದ್ಧವಾಗಿಯೇ ಇದ್ದವು. ಒಂದೆಡೆ ಬುಡಕಟ್ಟು ಅನನ್ಯತೆಯ ರಕ್ಷಣೆಯ ಮಾತಾಡುತ್ತಿದ್ದರೆ, ಇನ್ನೊಂದೆಡೆ ಅವರ ಆಧುನಿಕ ದೇಗುಲಗಳಾದ ಭಾರೀ ಉದ್ದಿಮೆ ಮತ್ತು ಅಣೆಕಟ್ಟೆಗಳು ಅರಣ್ಯವನ್ನು ಮತ್ತು ಅರಣ್ಯವಾಸಿಗಳನ್ನು ಅತಂತ್ರಗೊಳಿಸಿದವು.

ಪಂಡಿತ್ ಜವಹರಲಾಲ್ ನೆಹರೂ ಅವರು ವೆರಿಯರ್ ಎಲ್ವಿನ್‌ರ "ದಿ ಫಿಲಾಸಫಿ ಆಫ್ ನೇಫಾ" ಎಂಬ ಕೃತಿಗೆ ಬರೆದಿರುವ ಮುನ್ನುಡಿಯಲ್ಲಿ ಆದಿವಾಸಿಗಳ ಅಭಿವೃದ್ಧಿಗಾಗಿ "ಪಂಚಶೀಲ" ತತ್ವಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅವುಗಳೆಂದರೆ,

- ❖ ಆದಿವಾಸಿಗಳ ಜೀವನ ವಿಧಾನದ ಮೇಲೆ ಏನನ್ನೂ ಒತ್ತಾಯಪೂರ್ವಕವಾಗಿ ಹೇರಕೂಡದು. ಅವರ ಪದ್ಧತಿಯ ಮೂಲಕವೇ ಅವರನ್ನು ಮೇಲೆತ್ತುವ ಪ್ರಯತ್ನ ನಡೆಸುವುದು. ಆದಿವಾಸಿ ಕಲೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗೆ ನಮ್ಮಿಂದ ಸಾಧ್ಯವಾದ ಎಲ್ಲಾ ಪ್ರೋತ್ಸಾಹ ಮತ್ತು ಸಹಾಯ ನೀಡುವುದು.
- ❖ ಆದಿವಾಸಿಗಳು ನೆಲೆಸಿರುವಂತಹ ಪ್ರದೇಶಗಳ ಮೇಲೆ ಮತ್ತು ಅರಣ್ಯಗಳ ಮೇಲೆ ಅವರು ಹೊಂದಿರುವ ಹಕ್ಕನ್ನು ಗೌರವಿಸುವುದು.
- ❖ ಆಡಳಿತಾತ್ಮಕ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ನೇರವಾಗಿ ಭಾಗವಹಿಸಲು ಸಾಧ್ಯವಾಗುವಂತೆ ಆದಿವಾಸಿಗಳಿಗೆ ಶಿಕ್ಷಣ ನೀಡುವುದು ಅಗತ್ಯ. ಈ ಕಾರ್ಯಗಳಲ್ಲಿ ಅವರಿಗೆ ತರಬೇತಿ ನೀಡಲು ಹೊರಗಡೆಯ ತಾಂತ್ರಿಕ ಸಿಬ್ಬಂದಿವರ್ಗದವರು ಮಹತ್ವದ ಪಾತ್ರ ನಿರ್ವಹಿಸಬೇಕಾಗುವುದು. ಆದರೆ, ಆದಿವಾಸಿಗಳಿಗೆ ದಿಗಿಲು ಹುಟ್ಟಿಸುವ ರೀತಿಯಲ್ಲಿ ನಾಗರಿಕ ಸಿಬ್ಬಂದಿ ವರ್ಗದವರನ್ನು ದೊಡ್ಡ ಸಂಖ್ಯೆಯಲ್ಲಿ ಕಳುಹಿಸುವುದು ಸೂಕ್ತವಲ್ಲ.
- ❖ ಆದಿವಾಸಿ ಪ್ರದೇಶಗಳಲ್ಲಿ ಒಂದೇ ಬಾರಿಗೆ ಹಲವಾರು ಯೋಜನೆ ಪ್ರಕಲ್ಪಗಳನ್ನು ಹಾಕಿಕೊಳ್ಳ ಕೂಡದು ಹಾಗೂ ಅವರ ಸಂಸ್ಕೃತಿ ಮತ್ತು ಸಾಮಾಜಿಕ ಸಂಸ್ಥೆಗಳೊಂದಿಗೆ ಸ್ಪರ್ಧಿಸುವ ರೀತಿಯಲ್ಲಿ ನಮ್ಮ ಕಾರ್ಯಯೋಜನೆಗಳಿರುವುದು ಸರಿಯಲ್ಲ.
- ❖ ಆದಿವಾಸಿಗಳ ಕಲ್ಯಾಣಕಾರ್ಯದ ಸಾಧನೆಯನ್ನು ಅವರಲ್ಲಿ ವ್ಯಕ್ತಿತ್ವ ಮತ್ತು ಕರ್ತವ್ಯದಲ್ಲಿನ ಪ್ರಗತಿಯ ಮೂಲಕ ಅಳೆಯಬೇಕೇ ವಿನಃ ಕೇವಲ ಅಂಕೆ – ಸಂಖ್ಯೆಗಳ ಮೂಲಕ ಅಥವಾ ಅವರಿಗೆ ಖರ್ಚು ಮಾಡುವ ಹಣದ ಮೊತ್ತದ ಮೂಲಕವಲ್ಲ.

ನಮ್ಮ ಸಂವಿಧಾನ ನೆಹರೂ ಅವರ ಆಶಯ, ಸಮಾನತೆಯ ಮತ್ತು ಕಲ್ಯಾಣದ ಆಧಾರದಲ್ಲಿ ಹಲವಾರು ಬುಡಕಟ್ಟು ಕಲ್ಯಾಣ ಕಾರ್ಯಕ್ರಮಗಳನ್ನು ಯೋಜಿಸಿ ಜಾರಿಗೊಳಿಸಿದೆ. ಅಂತಹ ಕೆಲವು ನಿಯಮ ಹಾಗೂ ಯೋಜನೆಗಳನ್ನು ಈ ಕೆಳಗೆ ನೀಡಲಾಗಿದೆ

ರಾಜ್ಯಾಂಗದ ಬುಡಕಟ್ಟು ಕಲ್ಯಾಣ ಯೋಜನೆಗಳು[೨]

ಸಂವಿಧಾನ ಅಥವಾ ರಾಜ್ಯಾಂಗವು 'ಪರಿಶಿಷ್ಟ ಬುಡಕಟ್ಟುಗಳ ರಕ್ಷಣೆ' ಸರ್ಕಾರದ ಆದ್ಯ ಕರ್ತವ್ಯವಾಗಿದೆ ಎಂದು ಸ್ಪಷ್ಟಪಡಿಸಿದೆ. ಅದಕ್ಕಾಗಿ ಸಾಕಷ್ಟು ಕಾನೂನು ಸಾಂವಿಧಾನಿಕ ವಿಧಿಗಳನ್ನು ವಿವರಿಸಿದೆ. ಅವುಗಳೆಂದರೆ;

೧. **ಪರಿಚ್ಛೇದ(Article) ೧೫ ಮತ್ತು ೧೬:** ಇದು ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ್ದು, ಎಲ್ಲರಿಗೂ ಸಮಾನ(ತೆ) ಅವಕಾಶ ನೀಡಬೇಕೆಂದಿದ್ದರೂ ಬುಡಕಟ್ಟುಗಳಿಗೆ ವಿಶೇಷ ಸೌಲಭ್ಯ, ಮೀಸಲಾತಿ ಹಾಗೂ ವಿನಾಯಿತಿಗಳನ್ನು ನೀಡಲು ಅವಕಾಶ ನೀಡಿದೆ.

೨. **ಪರಿಚ್ಛೇದ(Article) ೨೪೪:** ಸರ್ಕಾರಕ್ಕೆ ಪರಿಶಿಷ್ಟ ಬುಡಕಟ್ಟುಗಳ ಅಭಿವೃದ್ಧಿಗೆ ವಿಶೇಷ ವ್ಯವಸ್ಥೆ ಮಾಡಲು ಅನುವು ಮಾಡಿಕೊಟ್ಟಿದೆ.

೩. **ಪರಿಚ್ಛೇದ(Article) ೨೭೫–೧ ಬಿ:** ಕೇಂದ್ರ ಸರ್ಕಾರ ಬುಡಕಟ್ಟು ಅಭಿವೃದ್ಧಿಗೆ ವಿಶೇಷ ಹಣಕಾಸಿನ ವ್ಯವಸ್ಥೆ ಮಾಡಲು ಅವಕಾಶ ನೀಡಿದ್ದು ರಾಜ್ಯ ಸರ್ಕಾರಗಳು ಬುಡಕಟ್ಟು ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ಮಾಡಿ ಕೇಂದ್ರದ ಒಪ್ಪಿಗೆ ಪಡೆದಿದ್ದರೆ, ಆ ಯೋಜನೆಗಳಿಗೆ ಕಡ್ಡಾಯವಾಗಿ ಹಣಕಾಸಿನ ನೆರವು ನೀಡುವಂತೆ ತಾಕೀತು ಮಾಡಿದೆ.

೪. **ಸಂವಿಧಾನದ ೫ನೇ ಪರಿಶಿಷ್ಟ ವಿಧಿ(V- Schedule)** ಇದು ಒಂದು ವಿಶಿಷ್ಟ ಅಧಿಕಾರವಾಗಿದ್ದು, ರಾಜ್ಯ ಸರ್ಕಾರಗಳು ಪರಿಶಿಷ್ಟ ಬುಡಕಟ್ಟುಗಳ ಹಿತಾಸಕ್ತಿಗೆ ಮಾರಕವಾದ ಯೋಜನೆ ಅಥವಾ ಕಾಯಿದೆ ಮಾಡಿದ್ದರೆ, ರಾಜ್ಯಪಾಲರು ಅದನ್ನು ಹಿಂದಿನಿಂದ ಅನ್ವಯಿಸುವಂತೆ ರದ್ದು ಮಾಡುವ ಪರಮಾಧಿಕಾರ ಹೊಂದಿದ್ದಾರೆಂದು ತಿಳಿಸುತ್ತದೆ. ರಾಜ್ಯಪಾಲರು ಪಾರ್ಲಿಮೆಂಟಿನ ಕಾನೂನನ್ನು ಧಿಕ್ಕರಿಸುವ ವಿಶೇಷಾಧಿಕಾರವನ್ನು ಸಂವಿಧಾನದಲ್ಲಿ ಬೇರೆಲ್ಲೂ, ಬೇರಾರಿಗೂ ನೀಡಲಾಗಿಲ್ಲ.

೫. **ಸಂವಿಧಾನದ ೬ನೇ ವಿಧಿ(VI- Schedule):** ಬುಡಕಟ್ಟುಗಳು ಹೆಚ್ಚಾಗಿರುವ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಸ್ವಾಯತ್ತ ಸಂಸ್ಥೆಯೊಂದನ್ನು ರಚಿಸಿ, ಅದಕ್ಕೆ ಶಾಸನಾತ್ಮಕ, ಹಣಕಾಸಿನ, ನ್ಯಾಯಿಕ ಹಾಗೂ ಕಾರ್ಯಾತ್ಮಕ ಅಧಿಕಾರ ನೀಡಲು ಅವಕಾಶ ನೀಡಿದೆ. ಇದು ಈಶಾನ್ಯ ರಾಜ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ ಶಾಸನವಾಗಿದ್ದು ಅಲ್ಲಿ ಪ್ರತಿಯೊಂದು ಜಿಲ್ಲೆಯೂ ಸ್ವತಂತ್ರ್ಯ, ಸ್ವಾಯತ್ತ ರಾಜ್ಯವಾಗಿ ಕಾರ್ಯ ಮಾಡಬಹುದಾಗಿದೆ.

೬. **ಪರಿಚ್ಛೇದ(Article) ೪೬ :** ಇದು ಪರಿಶಿಷ್ಟ ಬುಡಕಟ್ಟುಗಳ ಆರ್ಥಿಕ ಮತ್ತು ಶೈಕ್ಷಣಿಕ ಪ್ರಗತಿ ಸಾಧಿಸಲು ಸಹಾಯಕವಾಗಿದೆ.

೭. **ಪರಿಚ್ಛೇದ(Article) ೨೪೪:** ಪರಿಶಿಷ್ಟ ಬುಡಕಟ್ಟು ಪ್ರದೇಶಗಳ ವಿಶೇಷ ಆಡಳಿತಕ್ಕೆ ಸಂಬಂಧಿಸಿದೆ.

೮. **ಪರಿಚ್ಛೇದ(Article) ೨೭೫:** ಇದು ರಾಜ್ಯಗಳು ಕೈಗೊಳ್ಳುವ ಬುಡಕಟ್ಟು ಅಭಿವೃದ್ಧಿ ಯೋಜನೆಗಳಿಗೆ ಕೇಂದ್ರದ (Consolidated fund) ಸಂಚಿತ ನಿಧಿಯಿಂದ ಧನಸಹಾಯ ನೀಡಲು ಅಧಿಕಾರ ನೀಡಿದೆ.

೯. **ಪರಿಚ್ಛೇದ(Article) ೩೩೦:** ಇದು ಸಂಸತ್ತಿನಲ್ಲಿ ಪರಿಶಿಷ್ಟ ಬುಡಕಟ್ಟುಗಳಿಗೆ ಪ್ರಾತಿನಿಧ್ಯ ನೀಡಲು ಮೀಸಲಾತಿ ನೀಡಲು ಅವಕಾಶ ನೀಡಿದೆ.

೧೦. **ಪರಿಚ್ಛೇದ(Article) ೩೩೨:** ರಾಜ್ಯಗಳ ವಿಧಾನ ಸಭೆಗಳಲ್ಲಿ ಪರಿಶಿಷ್ಟ ಬುಡಕಟ್ಟುಗಳಿಗೆ ಮೀಸಲಾತಿ ಕಲ್ಪಿಸಿದೆ.

೧೧. **ಪರಿಚ್ಛೇದ(Article) ೩೩೪:** ಪರಿಶಿಷ್ಟ ಬುಡಕಟ್ಟುಗಳಿಗೆ ನೀಡಿದ ಮೀಸಲಾತಿ ಮತ್ತೆ ೩೦ ವರ್ಷಗಳಿಗೆ ಮುಂದುವರೆಸುವ ಅವಕಾಶ ನೀಡಿದೆ(೨೫.೧.೧೯೮೦ರಿಂದ ಅನ್ವಯ).

೧೨. **ಪರಿಚ್ಛೇದ(Article) ೩೩೫:** ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರಿಯಲ್ಲಿ ಬುಡಕಟ್ಟುಗಳಿಗೆ ವಿಶೇಷ ಅವಕಾಶ.

೧೩. **ಪರಿಚ್ಛೇದ(Article) ೩೩೮:** ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ತನಿಖೆ ಮಾಡಲು ತನಿಖಾಧಿಕಾರಿಯನ್ನು ನೇಮಿಸಲು ರಾಷ್ಟ್ರಪತಿಗಳಿಗೆ ಅಧಿಕಾರ ನೀಡುತ್ತದೆ.

೧೪) **ಪರಿಚ್ಛೇದ(Article) ೩೩೯** : ಪರಿಶಿಷ್ಟ ಬುಡಕಟ್ಟುಗಳ ಕಲ್ಯಾಣ ಹಾಗೂ ಪ್ರದೇಶಗಳ ಆಡಳಿತದ ಮೇಲೆ ಕೇಂದ್ರದ ನಿಯಂತ್ರಣಕ್ಕೆ ಅವಕಾಶ ನೀಡಿದೆ.

ಪಂಚವಾರ್ಷಿಕ ಯೋಜನೆಗಳಲ್ಲಿ ಗಿರಿಜನ ಅಭಿವೃದ್ಧಿ

ಮೇಲೆ ತಿಳಿಸಿದ ಪ್ರಮುಖ ಸಂವಿಧಾನಬದ್ಧ ಅಧಿಕಾರಿಗಳಲ್ಲದೆ ಪಂಚವಾರ್ಷಿಕ ಯೋಜನೆಗಳಲ್ಲೂ ಗಿರಿಜನ ಅಭಿವೃದ್ಧಿಗೆ ಸಾಕಷ್ಟು ಯೋಜನೆಗಳು ಹಾಗೂ ಹಣಕಾಸಿನ ನೆರವನ್ನು ನೀಡಲಾಗಿದೆ.

ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ವೆರಿಯರ್ ಎಲ್ವಿನ್ ಸಮಿತಿಯ ಶಿಫಾರಸಿನಂತೆ ಬುಡಕಟ್ಟು ಅಭಿವೃದ್ಧಿಯ ಬ್ಲಾಕ್ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತಲ್ಲದೆ ಆಯ್ದ ಬುಡಕಟ್ಟು ಪ್ರದೇಶಗಳಲ್ಲಿ Land Colonization Schemeಗಳನ್ನು ಜಾರಿಗೊಳಿಸಲಾಯಿತು. ಬುಡಕಟ್ಟು ಅಭಿವೃದ್ಧಿಗಾಗಿ ಸಹಕಾರ ಸಂಘಗಳನ್ನು ಸ್ಥಾಪಿಸಿ ಅರಣ್ಯ, ಅಬಕಾರಿ ಹಾಗೂ ಕಂದಾಯ ಇಲಾಖೆಗಳಿಂದ ಹಲವಾರು ವಿನಾಯತಿಗಳನ್ನು ಘೋಷಿಸಲಾಯಿತು. ೫ನೇ ಯೋಜನೆಯಲ್ಲಿ ಟಿ ಎಸ್ ಪಿ(Tribal Sub Plan)ಗಳಿಗೆ ಒತ್ತು ನೀಡಲಾಯಿತು. ೬ನೇ ಯೋಜನೆಯಲ್ಲಿ ಶೇ. ೫೦ರಷ್ಟು ಬುಡಕಟ್ಟು ಕುಟುಂಬಗಳನ್ನು ಬಡತನದ ರೇಖೆಯಿಂದ ಮೇಲೆತ್ತುವ ನಿರ್ದಿಷ್ಟ ಉದ್ದೇಶದಿಂದ ೨೪೫ MADA Projects ಮತ್ತು ೭೨ Primitive Tribe Projectಗಳನ್ನು ಕಾರ್ಯಗತಗೊಳಿಸಲಾಯಿತು. ೭ನೇ ಯೋಜನೆಯಲ್ಲಿ ಪ್ರಾದೇಶಿಕ ಹಾಗೂ ಕೌಟುಂಬಿಕ ಅಭಿವೃದ್ಧಿ ಯೋಜನೆಗಳನ್ನು ಸಮ್ಮಿಶ್ರಗೊಳಿಸಿ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳ ವಿದ್ಯಾಭ್ಯಾಸ ಮತ್ತು ಆರ್ಥಿಕಾಭಿವೃದ್ಧಿಗೆ ಒತ್ತು ನೀಡಲಾಯಿತು. ಇದಕ್ಕಾಗಿ ೨ ರಾಷ್ಟ್ರೀಯ ಮಟ್ಟದ ಸಂಸ್ಥೆಗಳನ್ನು ಸ್ಥಾಪಿಸಲಾಯಿತು.

೧. ರಾಜ್ಯ ಮಟ್ಟದ ಸಹಕಾರಿ ಅಭಿವೃದ್ಧಿ ಮಾರುಕಟ್ಟೆ ಮಹಾಮಂಡಳಿಗಳ ಅಪೆಕ್ಸ್ ಸಂಸ್ಥೆಯಾಗಿ ಬುಡಕಟ್ಟು ಸಹಕಾರಿ ಮಾರುಕಟ್ಟೆ ಅಭಿವೃದ್ಧಿ ಫೆಡರೇಶನ್ನನ್ನು ೧೯೮೭ರಲ್ಲಿ ಸ್ಥಾಪಿಸಲಾಯಿತು.

೨. ಬುಡಕಟ್ಟು ಅಭಿವೃದ್ಧಿ ಯೋಜನೆಗಳಿಗೆ ವೇಗವರ್ಧಕವಾಗಿ ಕೆಲಸ ಮಾಡಲು, ಅದರಲ್ಲೂ ಮುಖ್ಯವಾಗಿ ಆರ್ಥಿಕ ಸಹಾಯ ಮತ್ತು ಉದ್ಯೋಗ ಸೃಷ್ಟಿ ಯೋಜನೆಗಳಿಗೆ ಪುನಃಶ್ಚೇತನ ನೀಡಲು 'ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳು ಹಣಕಾಸು ಮತ್ತು ಅಭಿವೃದ್ಧಿ ಕಾರ್ಪೋರೇಷನ್' ಸ್ಥಾಪಿಸಲಾಯಿತು.

ಇತ್ತೀಚಿನ(೭೩ ಮತ್ತು ೭೪ನೇ) ಸಂವಿಧಾನದ ತಿದ್ದುಪಡಿಗಳ ಹಿನ್ನೆಲೆಯಲ್ಲಿ ೯ನೇ ಯೋಜನೆಗಳಲ್ಲಿ 'ಜನಕೇಂದ್ರಿತ ಮತ್ತು ಸರ್ವಸಹಭಾಗಿತ್ವ' ಧೋರಣೆಯಡಿ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಆಡಳಿತಾತ್ಮಕ ಹಾಗೂ ಹಣಕಾಸಿನ ಅಧಿಕಾರಗಳನ್ನು ನೀಡಿ ಅತ್ಯಂತ ಕೆಳಸ್ತರದ ಜನರು ಕೂಡ ನೀತಿ ನಿರೂಪಣೆ ಹಾಗೂ ಆಡಳಿತದಲ್ಲಿ ಪಾಲ್ಗೊಳ್ಳುವ, ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ, ನಿರ್ದೇಶಿಸುವ, ಪರಿಶೀಲಿಸುವ ಮೂಲಕ ಈ ಅಂಚಿನ ವರ್ಗಗಳನ್ನು ಸಬಲೀಕರಣ ಗೊಳಿಸುವ ಉದ್ದೇಶದಿಂದ ಸಹಕಾರಿ ಸಂಸ್ಥೆಗಳಿಗೆ ಒತ್ತು ನೀಡಲಾಯಿತು.

ರಾಜ್ಯಾಂಗದ ಉದ್ದೇಶಗಳೇನೋ ಘನವಾಗಿವೆಯಾದರೂ ಅವುಗಳ ವಿಶ್ಲೇಷಣೆ ಮತ್ತು ಜಾರಿಗೊಳಿಸು ವಿಕೆಯಲ್ಲಿ ಕಾರ್ಯಾಂಗದ ಪಾತ್ರ ಮಹತ್ವದ್ದಾಗಿದ್ದು ಅಲ್ಲಿಯೇ ಬಹುತೇಕ ಸಮಸ್ಯೆಗಳು ಉಂಟಾಗುತ್ತಿವೆ. ಬುಡಕಟ್ಟುಗಳು ತುಂಬಾ ಸೂಕ್ಷ್ಮ ಸ್ವಭಾವದವರಾಗಿದ್ದು ಸ್ವಲ್ಪವೇ ಕಿರಿಕಿರಿ ಅನಿಸಿದರೂ ಚಿಪ್ಪಿನೊಳಗಿನ ಆಮೆಗಳಂತೆ ಹಿಂಜರಿಯುತ್ತಾರೆ. ಬುಡಕಟ್ಟು ಅಭಿವೃದ್ಧಿಯ ಮತ್ತೊಂದು ಪ್ರಮುಖ ಯೋಜನೆಯಾದ ಬುಡಕಟ್ಟು(ಗಿರಿಜನ) ಉಪಯೋಜನೆ(ಟಿ.ಎಸ್.ಪಿ)ಯ ಬಗ್ಗೆ ಸ್ಥೂಲ ಮಾಹಿತಿಯನ್ನು ಈ ಕೆಳಗೆ ನೀಡಲಾಗಿದೆ.

ಗಿರಿಜನ ಉಪಯೋಜನೆ:

ಬುಡಕಟ್ಟು ಸಮುದಾಯಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಶೇ. ೫೦ಕ್ಕಿಂತ ಹೆಚ್ಚು ಬಡುಕಟ್ಟು ಜನರಿರುವ ಪ್ರದೇಶಗಳ ಅಭಿವೃದ್ಧಿಗೆ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರ ಸರ್ಕಾರ ಜಾರಿಗೊಳಿಸಿದ ಪ್ರಮುಖ ಯೋಜನೆ ಇದಾಗಿದೆ. ೧೯೯೨ರಿಂದ ಕರ್ನಾಟಕದ ಎಲ್ಲ ಜಿಲ್ಲೆಗಳಿಗೂ ಇದನ್ನು ವಿಸ್ತರಿಸಲಾಯಿತು. ಲಭ್ಯವಿರುವ ಎಲ್ಲ ಮಾನವ ಮತ್ತು ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸಿ ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿ ಸಾಧಿಸುವ ಯೋಜನೆ ಇದಾಗಿದ್ದು, ರಾಜ್ಯ ಮತ್ತು ಕೇಂದ್ರ ಯೋಜನೆಗಳಲ್ಲಿ ನಿರ್ದಿಷ್ಟ ಅನುದಾನ ನಿಗದಿಪಡಿಸಿಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.

ಉದ್ದೇಶಗಳು

೧. ಬುಡಕಟ್ಟು ಸಮುದಾಯಗಳ ಜೀವನಮಟ್ಟ ಸುಧಾರಿಸುವುದು.

೨. ಬುಡಕಟ್ಟು ಮತ್ತು ಬುಡಕಟ್ಟಲ್ಲದ ಪ್ರದೇಶಗಳ ನಡುವಿನ ಅಭಿವೃದ್ಧಿಯ ಅಂತರ ಹೋಗಲಾಡಿಸುವುದು.

೩. ಬುಡಕಟ್ಟು ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಐಕ್ಯತೆ ಪುನಃಶ್ಚೇತನ.

೪. ನಿರಂತರ ಆದಾಯ ತರುವ ಯೋಜನೆಗಳ ಜಾರಿ.

೫. ಮೂಲಸೌಕರ್ಯ ಅಭಿವೃದ್ಧಿ.

೬. ಶೈಕ್ಷಣಿಕ ಪ್ರಗತಿಗೆ ಒತ್ತು.

೭. ಶೋಷಣೆ ತಪ್ಪಿಸುವುದು.

೮. ಉದ್ಯೋಗಾವಕಾಶ ಸೃಷ್ಟಿ.

ಅರ್ಹತೆಗಳು

೧. ಬುಡಕಟ್ಟು ಸಮುದಾಯಕ್ಕೆ ಸೇರಿದವರಾಗಿರಬೇಕು.

೨. ಬಡತನದ ರೇಖೆಗಿಂತ ಕೆಳಗಿನವರಾಗಿರಬೇಕು(ಬಿ.ಪಿ.ಎಲ್.).

೩. ಸುಸ್ತಿದಾರರಾಗಿರಬಾರದು.

೪. ಸರ್ಕಾರದ ಬೇರಾವುದೇ ಯೋಜನೆ ಫಲಾನುಭವಿಗಳಾಗಿರಬಾರದು.

ಗಿರಿಜನ ಉಪಯೋಜನೆ ಕಾರ್ಯಕ್ರಮಗಳಿಂದಾಗಿ ಕೇಂದ್ರದಿಂದ ರಾಜ್ಯಕ್ಕೆ ಬಂದ ಅನುದಾನವನ್ನು ರಾಜ್ಯ ಸರ್ಕಾರ ಜಿಲ್ಲೆಗಳಲ್ಲಿರುವ ಬುಡಕಟ್ಟು ಜನಸಂಖ್ಯೆಗೆ ಅನುಗುಣವಾಗಿ, ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಮೂದಿಸಿ ಬಿಡುಗಡೆ ಮಾಡುತ್ತದೆ. ಅದೇ ಪ್ರಕಾರ ಜಿಲ್ಲೆಗೆ ಬಿಡುಗಡೆಯಾದ ಅನುದಾನವನ್ನು ಪ್ರತಿ ತಾಲ್ಲೂಕಿನ ಬುಡಕಟ್ಟು ಜನಸಂಖ್ಯೆ ಆಧಾರದ ಮೇಲೆ ಮರುಹಂಚಿಕೆಯಾಗುತ್ತದೆ. ಈ ರೀತಿ ಹಂಚಿಕೆಯಾದ ಅನುದಾನಕ್ಕನುಗುಣವಾಗಿ ಪ್ರತಿ ತಾಲೂಕಿನಲ್ಲಿರುವ ಬುಡಕಟ್ಟು ಜನರಿಗೆ ಉಪಯುಕ್ತ ವಾಗುವ, ಅವರ ಅಭಿವೃದ್ಧಿಗೆ ನೆರವಾಗುವ ಹಾಗೂ ನಿರಂತರ ಆದಾಯ ತರುವ ಯೋಜನೆಗಳನ್ನು ರೂಪಿಸಿಕೊಂಡು, ಅನುಷ್ಠಾನಗೊಳಿಸಲು, ಜಿಲ್ಲಾ ಪಂಚಾಯತ್ ತಾಲೂಕು ಪಂಚಾಯತ್‌ಗಳಿಗೆ ನಿರ್ದೇಶನ ನೀಡುತ್ತದೆ. ಇದು ಮೊದಲ ಹಂತದ ಪ್ರಕ್ರಿಯೆಯಾಗಿರುತ್ತದೆ.

ಎರಡನೇ ಹಂತದಲ್ಲಿ ಗಿರಿಜನ ಉಪಯೋಜನೆಯಲ್ಲಿ ಪ್ರತಿ ತಾಲೂಕಿಗೆ ನಿಗದಿಪಡಿಸಿರುವ ಆರ್ಥಿಕ ಗುರಿ ಅಥವಾ ಅನುದಾನಕ್ಕೆ ಅನುಗುಣವಾಗಿ ಬುಡಕಟ್ಟು ಜನರಿಗೆ ಉಪಯೋಗವಾಗುವಂತಹ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಆಯಾ ತಾಲೂಕು ಪಂಚಾಯತ್‌ಗಳು ಕಾರ್ಯಕ್ರಮಗಳನ್ನು ರೂಪಿಸಿ ಅದಕ್ಕೆ ಸಂಬಂಧಿಸಿದ ಕ್ರಿಯಾಯೋಜನೆ ತಯಾರಿಸಿ ತಾಲೂಕು ಪಂಚಾಯತ್‌ನ ಸರ್ವಸದಸ್ಯರ ಸಭೆಯಲ್ಲಿ ಮಂಡಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸಲು ಪ್ರಯತ್ನಿಸಲಾಗುತ್ತದೆ.

ಪ್ರತಿ ತಾಲೂಕಿನಲ್ಲಿ ಉಪಯೋಜನೆ ಅನುಷ್ಠಾನಗೊಳಿಸಲು ಶೇ. ೫೦ಕ್ಕಿಂತ ಹೆಚ್ಚಿನ ಬುಡಕಟ್ಟು ಜನಸಂಖ್ಯೆ ಹೊಂದಿರುವ ೭ರಿಂದ ೧೨ ಗ್ರಾಮಗಳನ್ನು ಆಯ್ಕೆ ಮಾಡಿ ಗೊಂಚಲುಗಳನ್ನಾಗಿ ವಿಭಾಗಿಸಲಾಗುತ್ತದೆ.

ನಂತರ ಗ್ರಾಮಗಳಲ್ಲಿ ಎಲ್ಲಾ ಇಲಾಖೆಗಳ ಅನುಷ್ಠಾನ ಅಧಿಕಾರಿಗಳು, ಬ್ಯಾಂಕ್ ಅಧಿಕಾರಿಗಳು, ಜನ ಪ್ರತಿನಿಧಿಗಳನ್ನೊಳಗೊಂಡ ಗ್ರಾಮಸಭೆ ನಡೆಸಿ ಜನರಿಗೆ ಕಾರ್ಯಕ್ರಮದ ರೂಪುರೇಷೆ, ಆರ್ಥಿಕ, ಭೌತಿಕ ಗುರಿಗಳನ್ನು ವಿವರಿಸಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುತ್ತಾರೆ.

ಹೀಗೆ ಆಯ್ಕೆಯಾದ ಫಲಾನುಭವಿಗಳಿಂದ ಅನುಷ್ಠಾನಾಧಿಕಾರಿಗಳು ಅರ್ಜಿ ಪಡೆದು ಘಟಕದ ಶೇ. ೭೫ರಷ್ಟು ಸಹಾಯಧನ ಅಥವಾ ಗರಿಷ್ಠ ರೂ. ೧೦,೦೦೦.೦೦ ಹಾಗೂ ಶೇ. ೨೫ರಷ್ಟು ಬ್ಯಾಂಕ್ ಅಥವಾ ಇತರೆ ಹಣಕಾಸಿನ ಸಂಸ್ಥೆಗಳ ಮೂಲಕ ಸಾಲ ಪಡೆದು ಸ್ವತ್ತುಗಳನ್ನು ನೀಡಿ ನಿರಂತರ ಆದಾಯ ಬರುವ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಅನುವು ಮಾಡಿಕೊಡಲಾಗುತ್ತದೆ.

ನಂತರ ಕಾಲಕಾಲಕ್ಕೆ ಈ ಯೋಜನೆಯ ನೋಡಲ್ ಅಧಿಕಾರಿಗಳಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಸಮಾಜ ಕಲ್ಯಾಣಾಧಿಕಾರಿಗಳು, ಗಿರಿಜನ ಕಲ್ಯಾಣಾಧಿಕಾರಿಗಳು ಮುಂತಾದವರು ಭೇಟಿ ನೀಡಿ ಕಾರ್ಯದ, ಸ್ವತ್ತಿನ, ಪರಿಶೀಲನೆ ಹಾಗೂ ಮೌಲ್ಯಮಾಪನ ಮಾಡುತ್ತಾರೆ.

ಈ ಯೋಜನೆ ಉಸ್ತುವಾರಿಗಾಗಿ ೭.೧.೧೯೯೯ರಂದು ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯವನ್ನು ಸಹ ಪ್ರಾರಂಭಿಸಲಾಗಿದೆ. ಜೊತೆಗೆ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಆಯೋಗದ ಮಾದರಿಯಲ್ಲೇ ಕರ್ನಾಟಕ ರಾಜ್ಯ ಸರ್ಕಾರವು "ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ರಚಿಸಿದೆ"(ಸರ್ಕಾರಿ ಆದೇಶ ಸಂಖ್ಯೆ: swdi 58:SSN 2001, Dated 10.10.2002) ೨ನೇ ಮಹಡಿ ನಂ.೧೪. ಸಿ.ಎಫ್.ಸಿ. ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು). ಉಪಯೋಜನೆಯಡಿ ವಿವಿಧ ಇಲಾಖೆಗಳ ಈ ಕೆಳಗಿನ ವಿಷಯಗಳಿಗೆ ನೆರವು ನೀಡಲಾಗಿದೆ.

ಕೃಷಿ ಇಲಾಖೆ

೧. ಕೃಷಿ ಪರಿಕರಗಳು(ಶೇ. ೧೦೦ರ ಸಹಾಯಧನದ ಪ್ರತಿ ಹೆಕ್ಟೇರ್‌ಗೆ-೨೮೦೦ರಂತೆ)

೨. ಉಗ್ರಾಣಗಳು(ಶೇ. ೭೫ರ ಸಹಾಯಧನ, ಗರಿಷ್ಠ ರೂ. ೧೦೦೦ ಮಾತ್ರ)

೩. ಆಧುನಿಕ ಕೃಷಿ ಉಪಕರಣಗಳು(ಶೇ. ೭೫ರ ಸಹಾಯಧನ, ರೂ. ೫೦,೦೦೦)

೪. ಸಸ್ಯ ಸಂರಕ್ಷಣೆ ಉಪಕರಣಗಳು(ಶೇ. ೭೫ರ ಸಹಾಯಧನ, ರೂ. ೧೦೦೦)

೫. ಪಂಪ್‌ಸೆಟ್(ಡೀಸೆಲ್-ಸೀಮೆಎಣ್ಣೆ) (ಶೇ. ೭೫ರ ಸಹಾಯಧನ, ರೂ. ೧೦,೦೦೦)

೫. ಪವರ್ ಟಿಲ್ಲರ್ಸ್(ಶೇ. ೭೫ರ ಸಹಾಯಧನ, ರೂ. ೫೦,೦೦೦)

ಇದರಡಿಯಲ್ಲಿ ತೋಟಗಾರಿಕೆ, ಮೀನುಗಾರಿಕೆ, ಪಶುಸಂಗೋಪನೆ, ರೇಷ್ಮೆ, ವಿದ್ಯುತ್, ವಸತಿ, ಸಣ್ಣ ಕೈಗಾರಿಕೆ, ಕ್ರೀಡೆ ಮತ್ತು ಯುವಜನ ಸೇವೆ, ಕನ್ನಡ ಸಂಸ್ಕೃತಿ, ಶಿಕ್ಷಣ ಇತ್ಯಾದಿ ಇಲಾಖೆಗಳೆಲ್ಲ ತಮ್ಮದೇ ಆದ ಯೋಜನೆಗಳನ್ನು ಬುಡಕಟ್ಟುಗಳ ಅಭಿವೃದ್ಧಿಗಾಗಿ ಹಮ್ಮಿಕೊಂಡಿವೆ. ಇದಕ್ಕಾಗಿ ಕೇಂದ್ರ ಸರ್ಕಾರ ವಿಶೇಷ ಕೇಂದ್ರೀಯ ಸಹಾಯ ಗಿರಿಜನ ಉಪಯೋಜನೆ ಇತ್ಯಾದಿಗಳನ್ನು ಆರಂಭಿಸಿದೆ.

ಇದಲ್ಲದೆ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳಿಗಾಗಿ ಇನ್ನೂ ಹಲವಾರು ವಿಶೇಷ ಯೋಜನೆಗಳನ್ನು ಸರ್ಕಾರ ಜಾರಿಗೊಳಿಸಿದೆ. ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳೆರಡೂ ಸಾಮಾನ್ಯ ಜನತೆಗಿಂತ ಸಾಮಾಜಿಕ–ಆರ್ಥಿಕ ರಂಗಗಳಲ್ಲಿ ಎಲ್ಲ ದೃಷ್ಟಿಯಿಂದ ಹಿಂದುಳಿದಿದ್ದು, ಇಬ್ಬರೂ ಸಮಾನ ದುಃಖಿಗಳಾಗಿದ್ದಾರೆಯಾದರೂ ಇವೆರಡೂ ಗುಂಪುಗಳ ಸಮಸ್ಯೆಗಳಲ್ಲಿ ಹಲವು ವ್ಯತ್ಯಾಸಗಳೂ ಇವೆ.

ಉದಾಹರಣೆ ಪರಿಶಿಷ್ಟ ಜಾತಿಗಳು ಕೇವಲ ಆರ್ಥಿಕವಾಗಿ ಮಾತ್ರವಲ್ಲದೆ ಸಾಮಾಜಿಕವಾಗಿಯೂ ಹಿಂದುಳಿದಿದ್ದಾರೆ. ಆದರೆ ಪರಿಶಿಷ್ಟ ಬುಡಕಟ್ಟುಗಳ ಸಮಸ್ಯೆ ಮೂಲತಃ ಭೌಗೋಳಿಕ ಒಂಟಿತನ ಅಥವಾ ಪ್ರತ್ಯೇಕತೆಯಿಂದ ಉದ್ಭವಿಸಿದ್ದು ತಮ್ಮ ಹಿಂದುಳಿದ ತಾಂತ್ರಿಕ-ಆರ್ಥಿಕ ಅಭಿವೃದ್ಧಿ ಅಲ್ಲದೆ ವಿವಿಧ ಬುಡಕಟ್ಟುಗಳ ಸಮಸ್ಯೆಗಳು ಬೇರೆ ಬೇರೆಯಾಗಿದ್ದು ಬೇರೆ ಬೇರೆ ಪ್ರದೇಶಗಳ ಬುಡಕಟ್ಟುಗಳ ಸಮಸ್ಯೆಗಳು ವ್ಯತ್ಯಾಸ ಹೊಂದಿದೆ.

ಹೀಗಾಗಿ ಯೋಜನೆಗಳಲ್ಲಿ ಬುಡಕಟ್ಟುಗಳಿಗೆ ಮೂಲಸೌಕರ್ಯ ನೀಡುವಲ್ಲಿನ ಕೊರತೆಗಳನ್ನು ನೀಗಿಸಲು ಪ್ರಾಧಾನ್ಯತೆ ನೀಡಲಾಯಿತು. ಬುಡಕಟ್ಟು ಜನರು ಕೇಂದ್ರಿತವಾಗಿರುವ ಪ್ರದೇಶಗಳಲ್ಲಿ, ಶುದ್ಧ ಕುಡಿಯುವ ನೀರು, ಆಹಾರದಲ್ಲಿ ಪೋಷಕಾಂಶಗಳನ್ನು ಒದಗಿಸುವ, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಶಾಲೆಗಳು, ನೈರ್ಮಲ್ಯ ಹಾಗೂ ವಸತಿ ಒದಗಿಸಲು ಯೋಜನೆಗಳಲ್ಲಿ ಪ್ರಯತ್ನಿಸಲಾಗಿದೆ. ಕೇಂದ್ರ ಸರ್ಕಾರ ಭಾರತ್ ನಿರ್ಮಾಣ್ ಯೋಜನೆಯಡಿ ಜಾರಿಗೊಳಿಸಿರುವ ಇಂದಿರಾ ಆವಾಸ್ ಯೋಜನೆ, ಪ್ರಧಾನ್ ಮಂತ್ರಿ ಗ್ರಾಮ ಸಡಕ್ ಯೋಜನೆ, ರಾಜೀವ್ ಗಾಂದಿ ಗ್ರಾಮೀಣ ವಿದ್ಯುದೀಕರಣ ಯೋಜನೆ ಇತ್ಯಾದಿಗಳ ಜೊತೆ ಜೊತೆಗೇ ಕೆಲವು ಮುಂಚೂಣಿ(ಫ್ಲಾಗ್ ಶಿಪ್) ಯೋಜನೆಗಳನ್ನೂ ಜಾರಿಗೆ ತಂದಿದೆ. ರಾಷ್ಟ್ರೀಯ ಮದ್ಯಾಹ್ನದ ಬಿಸಿಯೂಟದ ಯೋಜನೆ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಸರ್ವಶಿಕ್ಷಾ ಅಭಿಯಾನ, ಜನತಾಮನೆ, ರೇಷನ್ ಕಾರ್ಡ್, ಇತ್ಯಾದಿ ಹತ್ತು ಹಲವು ಯೋಜನೆಗಳಿವೆ.

ಬುಡಕಟ್ಟು ಅಭಿವೃದ್ಧಿಯ ಎಲ್ಲ ಯೋಜನೆಗಳ ಬಗ್ಗೆ ಚಿಂತಿಸದೆ ಕೇವಲ ಒಂದೆರಡು ಯೋಜನೆಗಳು ಮತ್ತು ಅವುಗಳ ಜಾರಿಯಿಂದ ಸಿದ್ದಿಗಳಿಗೆ ಲಾಭ-ನಷ್ಟ ಎಷ್ಟಾಗಿದೆ ಎನ್ನುವುದನ್ನು ಈ ಕೆಳಗಿನ ಉದಾಹರಣೆಯ ಮೂಲಕ ಹೇಳಲಾಗಿದೆ.

ಸಿದ್ದಿಯರು ಮತ್ತು ಸರ್ಕಾರದ ಅಭಿವೃದ್ಧಿ ಯೋಜನೆಗಳು

೧. ಪೌಷ್ಟಿಕ ಆಹಾರ ಸರಬರಾಜು ಯೋಜನೆ

ಒರಿಸ್ಸಾದ ಕಾಳಹಂದಿಯಲ್ಲಿ ಸಾವಿರಾರು ಬುಡಕಟ್ಟು ಜನರು ಹಸಿವೆಯಿಂದ ಅಪೌಷ್ಟಿಕತೆಯಿಂದ ದಾರುಣವಾಗಿ ಪ್ರಾಣ ಬಿಟ್ಟರು ಮತ್ತು ಇನ್ನೂ ಬಿಡುತ್ತಿದ್ದಾರೆ ೧೯೯೫ರಲ್ಲಿ ಮಹಾರಾಷ್ಟ್ರದ ಧುಲೆಯಲ್ಲಿ ೧೯ ಬುಡಕಟ್ಟು ಮಕ್ಕಳು ಹಸಿವೆಯಿಂದ ಅಸುನೀಗಿದರು. ಈ ಮಕ್ಕಳು ಮರಣ ಹೊಂದಿದ ಪ್ರದೇಶದಲ್ಲೇ ಆಹಾರಧಾನ್ಯಗಳು ತುಂಬಿದ ಗೋದಾಮುಗಳು ಇದ್ದವು. ಆದರೆ ಆ ಕುಟುಂಬಗಳಿಗೆ ಅದನ್ನು ಕೊಳ್ಳುವ ಸಾಮರ್ಥ್ಯವಿರಲಿಲ್ಲ ಹಾಗೂ ತಲುಪಿಸುವ ಸಾಮರ್ಥ್ಯವಿದ್ದ ಸರ್ಕಾರಕ್ಕೂ ಅದು ಮುಖ್ಯವೆನಿಸಲಿಲ್ಲ. ಇವೆಲ್ಲವುಗಳಿಂದ ಎಚ್ಚೆತ್ತ ಸುಪ್ರಿಂಕೋರ್ಟ್ ಬುಡಕಟ್ಟುಗಳಿಗೆ ಪೌಷ್ಟಿಕ ಆಹಾರ ಒದಗಿಸಬೇಕೆಂದು ಸರ್ಕಾರಕ್ಕೆ ತಾಕೀತು ಮಾಡಿತು. ನಮ್ಮವನೇ ಒಬ್ಬ ಸಹ ಮಾನವ ಹಸಿವೆಯಿಂದ ಸಾಯುವುದು ನಾಚಿಕೆಗೇಡು ಎಂದು ಎಚ್ಚರಿಸಿತು. ಹೀಗಾಗಿ ಬುಡಕಟ್ಟುಗಳಿಗೆ ಪೌಷ್ಟಿಕ ಆಹಾರ ಪೂರೈಸಲು ಕ್ರಮ ತೆಗೆದುಕೊಂಡಿದ್ದು ಉತ್ತರಕನ್ನಡ ಜಿಲ್ಲೆಯಲ್ಲಿ ಪ್ರತಿ ಸಿದ್ದಿ ಕುಟುಂಬಕ್ಕೆ ಪ್ರತಿ ತಿಂಗಳೂ ನೀಡುವ ಆಹಾರದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕೋಷ್ಟಕ ೬.೨.೧. ಉತ್ತರಕನ್ನಡ ಜಿಲ್ಲೆಯ ಸಿದ್ದಿ ಜನರಿಗೆ ಪೌಷ್ಟಿಕ ಆಹಾರ ಸರಬರಾಜಿನ ವಿವರಗಳು

ಕ್ರ ಸಂ.	ತಾಲೂಕು	ಕುಟುಂಬ ಸಂಖ್ಯೆ	ಆಹಾರ ಸಾಮಗ್ರಿಗಳ ವಿವರ (ಪ್ರತಿ ಕುಟುಂಬಕ್ಕೆ ಪ್ರತಿ ತಿಂಗಳು)					
			ಅಕ್ಕಿ/ರಾಗಿ/ ಗೋದಿ (೧೫ ಕೆ.ಜಿ.)	ತೊಗರಿಬೆಳೆ (೨ ಕೆ.ಜಿ.)	ಹೆಸರುಕಾಳು/ ಹುರುಳಿಕಾಳು/ ಅಲಸಂದಿ ಕಾಳು (೧ ಕೆ.ಜಿ.)	ಎಣ್ಣೆ (೧ ಲೀ.)	ಸಕ್ಕರೆ/ಬೆಲ್ಲ (೨ ಕೆ.ಜಿ.)	ಮೊಟ್ಟೆ (೩೦ರಂತೆ)
೧	೨	೩	೪	೫	೬	೭	೮	೯
೧.	ಕಾರವಾರ	೦೬	೯೦	೧೨	೦೬	೦೬	೧೨	೧೮೦
೨.	ಮುಂಡಗೋಡ	೧೮೬	೨೭೯೦	೩೭೨	೧೮೬	೧೮೬	೩೭೨	೫೫೮೦
೩.	ಶಿರಸಿ	೪೩	೬೪೫	೮೬	೪೩	೪೩	೮೬	೧೨೯೦
೪.	ಹಳಿಯಾಳ	೭೮೬	೧೧೭೯೦	೧೫೭೨	೭೮೬	೭೮೬	೧೫೭೨	೨೩೫೮೦
೫.	ಯಲ್ಲಾಪುರ	೮೪೭.	೧೨೭೦೫	೧೬೯೪	೮೪೭	೮೪೭	೧೬೯೪	೨೫೪೧೦
೬.	ಅಂಕೋಲಾ	೨೬೨	೩೯೩೦	೫೨೪	೨೬೨	೨೬೨	೫೨೪	೭೮೬೦
೭.	ಜೋಯಿಡಾ	೧೧	೧೬೫	೨೨	೧೧	೧೧	೨೨	೩೩೦
	ಒಟ್ಟು	೨೧೪೧	೩೨೧೧೫	೪೨೮೨	೨೧೪೧	೨೧೪೧	೪೨೮೨	೬೪೨೩೦

ಜಿಲ್ಲೆಯ ಸಿದ್ದಿಗಳಲ್ಲೇ ಎಂ.ಎಸ್.ಡಬ್ಲ್ಯು. ಮಾಡಿದ ಮೋಹನ್ ಸಿದ್ದಿ ಪ್ರಕಾರ ಸಿದ್ದಿಗಳಿಗೆ ಉಪಯೋಗವಾಗುವ ಏಕೈಕ ಯೋಜನೆಯೆಂದರೆ ಈ ಪೌಷ್ಟಿಕ ಆಹಾರ ಪೂರೈಕೆ ಯೋಜನೆ ಮಾತ್ರ. ಹಳಿಯಾಳದ ಮೇಲ್ಜಾತಿಯ ವ್ಯಾಪಾರಿಯೊಬ್ಬನ ಪ್ರಕಾರ ಈ ಯೋಜನೆ ಸಿದ್ದಿಗಳನ್ನು ಇನ್ನಷ್ಟು ಸೋಮಾರಿಗಳನ್ನಾಗಿಸಿದೆ. ಆದರೆ ಡಿಯೋಗ್ ಸಿದ್ದಿಯವರ ಪ್ರಕಾರ ಕನಿಷ್ಠ ಕೂಲಿಗೆ ಗರಿಷ್ಠ ಕೆಲಸ ಮಾಡಿಯೂ ಶೋಷಣೆಗೊಳಗಾದ ಸಿದ್ದಿಗಳಿಗೆ ಇದು ಉಸಿರು ನೀಡಿದೆ. ಶೋಷಣೆಗೊಳಗಾಗದೆ ನ್ಯಾಯಸಮ್ಮತ ಕೂಲಿ ಕೇಳುವ ಶಕ್ತಿ ನೀಡಿದೆ.

ಪರ ವಿರೋಧ ವಾದಗಳೇನೇ ಇರಲಿ ಈ ಯೋಜನೆ ಜಿಲ್ಲೆಯ ಎಲ್ಲಾ ಸಿದ್ದಿಗಳಿಗೂ ದೊರೆತಿಲ್ಲ. ಸರ್ಕಾರಿ ದಾಖಲೆಗಳ ಪ್ರಕಾರವೇ ಸಿದ್ದಿಗಳ ಜನಸಂಖ್ಯೆ ೧೫,೨೫೨. ವಾಸ್ತವಿಕವಾಗಿ ಇದರ ದುಪ್ಪಟ್ಟು ಸಿದ್ದಿಯರು ಈ ಜಿಲ್ಲೆಯಲ್ಲಿದ್ದಾರೆ. ಅಂದರೆ ಒಟ್ಟಾರೆ ೨೩೦೨ ಕುಟುಂಬಗಳಲ್ಲಿ ೨೧೪೧ ಕುಟುಂಬಗಳಿಗೆ ಈ ಪೌಷ್ಠಿಕ ಆಹಾರ ನೀಡುತ್ತಿರುವುದಾಗಿ ಸರ್ಕಾರ ಹೇಳಿಕೊಂಡಿದೆ. ಮೊದಲನೆಯದಾಗಿ ಸಿದ್ದಿಗಳ ಸಂಖ್ಯೆಯಲ್ಲೇ ಎಷ್ಟೋ ಸಿದ್ದಿಗಳು ಕಳೆದುಹೋಗಿದ್ದಾರೆ. ಎರಡನೆಯದಾಗಿ ಈ ಸಣ್ಣ ಸಮುದಾಯದಲ್ಲೂ ೧೬೧ ಕುಟುಂಬಗಳಿಗೆ ಈ ಸೌಲಭ್ಯ ಸಿಗುತ್ತಿಲ್ಲ.

ಅರಣ್ಯ ಹಕ್ಕುಪತ್ರ ನೀಡಿಕೆ[೫]

ಇನ್ನು ಉತ್ತರಕನ್ನಡ ಜಿಲ್ಲೆಯಲ್ಲಿ ಅರಣ್ಯಭೂಮಿ ಹಕ್ಕುಪತ್ರಕ್ಕಾಗಿ ಅರ್ಜಿ ಸಲ್ಲಿಸಿದ ಸಿದ್ದಿಯರ ಸಂಖ್ಯೆ ಕೇವಲ ೧೫೯೬ (ಒಟ್ಟು ಜನಸಂಖ್ಯೆ ೧೫೨೫೨ ಸರ್ಕಾರಿ ಲೆಕ್ಕದ ಪ್ರಕಾರ ೨೦೦೧ರ ಜನಗಣತಿ) ಕುಟುಂಬಕ್ಕೆ ಒಬ್ಬರಂತೆ ಅರ್ಜಿ ಹಾಕಿದ್ದಾರೆಂದುಕೊಂಡರೂ ಒಟ್ಟು ಕುಟುಂಬಗಳ ಸಂಖ್ಯೆಯೇ ೨೩೦೨. ಶೇ. ೧೦ರಷ್ಟು ಕುಟುಂಬಗಳಿಗೆ ಈಗಾಗಲೇ ಭೂಮಿ ಇದೆ(೨೦೩) ಎಂದೂ ಕೊಂಡರೂ ಇನ್ನೂ ಸುಮಾರು ೨೦೦೦ಕ್ಕಿಂತಲೂ ಹೆಚ್ಚು ಕುಟುಂಬಗಳಿಗೆ ಅವರು ಬದುಕುವ ಭೂಮಿಯ ಮೇಲೆ ಹಕ್ಕಿಲ್ಲ. ಆದರೆ ಇದರಲ್ಲೂ ಕೇವಲ ೧೫೯೬ ಜನ ಸಿದ್ದಿಯರು ಹಕ್ಕುಪತ್ರಕ್ಕೆ ಅರ್ಜಿ ಹಾಕಿದ್ದು ಅದರಲ್ಲಿ ಕೇವಲ ೬೧೫ ಜನ ಸಿದ್ದಿಗಳಿಗೆ ಹಕ್ಕುಪತ್ರ ನೀಡಲಾಗಿದೆ. ಇನ್ನು ೯೮೧ ಸಿದ್ದಿಗಳ ಅರ್ಜಿಗಳು ತಿರಸ್ಕೃತವಾಗಿವೆ. ಇದರ ವಿವರ ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ ೬.೨.೨. ಉತ್ತರಕನ್ನಡ ಜಿಲ್ಲೆಯ ಸಿದ್ದಿ ಜನರ ಅರಣ್ಯ ಅರ್ಜಿ ಹಾಗೂ ಹಕ್ಕುಪತ್ರ ನೀಡಿದ ವಿವರ

ಕ್ರ ಸಂ.	ತಾಲೂಕು	ಸಿದ್ದಿ ಜನರ ಅರ್ಜಿಗಳು	ಇತರೆ ಪ.ವ. ವರ್ಗದ ಅರ್ಜಿಗಳು	ಒಟ್ಟು ಅರ್ಜಿಗಳು	ಸಿದ್ದಿ ಜನರಿಗೆ ಹಕ್ಕುಪತ್ರ ನೀಡಿದ ವಿವರ	ಇತರೆ ಪ.ವ. ಜನರಿಗೆ ಹಕ್ಕುಪತ್ರ	ಒಟ್ಟು ಹಕ್ಕುಪತ್ರ ನೀಡಿದ ವಿವರ	ತಿರಸ್ಕೃತವಾದ ಸಿದ್ದಿ ಜನರ ಅರ್ಜಿಗಳು
೧.	ಕಾರವಾರ	೬	೪	೧೦	೬	–	೬	–
೨.	ಅಂಕೋಲಾ	೧೨೭	೪೨	೧೬೯	೧೨೭	–	೧೨೭	–
೩.	ಶಿರಸಿ	೪೭	೧೭	೬೪	೩೬	೯	೪೫	೧೧
೪.	ಮುಂಡಗೋಡ	೨೧೩	೧೮೭	೪೦೦	೨೪	೪೭	೭೧	೧೮೯
೫.	ಹಳಿಯಾಳ	೫೦೫	೩೫	೫೪೦	೬೪	೩೫	೯೯	೪೪೧
೬.	ಜೋಯಿಡಾ	೭	೧೨	೨೦	೧	೯	೧೦	೬
೭.	ಯಲ್ಲಾಪುರ	೬೯೦	೧೦೫	೭೯೫	೩೫೬	೩೭	೩೯೩	೩೩೪
೮.	ಕುಮಟಾ	೧	–	೧	೧	–	೧	–
೯.	ಹೊನ್ನಾವರ	–	೨	೨	–	೧	೧	–
೧೦.	ಭಟ್ಕಳ	–	೬೮೩	೬೮೩	–	೧೩	೧೩	–
೧೧.	ಸಿದ್ದಾಪುರ	–	೩	೩	–	–	–	–
	ಒಟ್ಟು	೧೮೯೬	೧೦೯೧	೨೯೮೭	೬೧೫	೧೫೧	೭೬೬	೯೮೧

ಸರ್ಕಾರದ ಪರಿಗಣನೆಯಲ್ಲಿ ಅರ್ಧದಷ್ಟು ಸಿದ್ದಿಗಳು ಕಾಣೆಯಾಗಿದ್ದಾರೆ. ಇನ್ನು ಅರ್ಜಿ ಹಾಕಿರುವವರ ಸಂಖ್ಯೆಯೂ ಕಡಿಮೆ. ಮಂಜೂರಾಗಿರುವುದು ಇನ್ನೂ ಕಡಿಮೆ. ಮಂಜೂರಾಗದಿರುವುದಕ್ಕೆ ನೀಡಿರುವ ಕಾರಣಗಳು ವಿಚಿತ್ರ.

೧. ೨೦೦೫ರ ಪೂರ್ವದ ದಾಖಲೆಗಳು, ಕರವಸೂಲಿ ದಾಖಲಾತಿ ನೀಡಿಲ್ಲ. ಕೆಲವರು ದಾಖಲೆಗಳಿಲ್ಲದೆ ಅರ್ಜಿ ಮಾತ್ರ ಸಲ್ಲಿಸಿದ್ದಾರೆ. ಬುಡಕಟ್ಟುಗಳ ಸ್ವಭಾವವೇ ನಿಸರ್ಗದ ಮೇಲೆ ಹಕ್ಕು ಸಾಧಿಸದಿರುವುದು.

ಕಾರಣ: ಅವರ ಅನಕ್ಷರತೆ, ಮುಗ್ಧತೆಗಳಿಂದಾಗಿ ಯಾವುದೇ ದಾಖಲೆಗಳನ್ನು ಇಟ್ಟುಕೊಳ್ಳಲಾರರು. ದಾಖಲೆಗಳು ನಾಡವರಿಗೆ ಮಾತ್ರ ಕಾಡವರಿಗಲ್ಲ ಎಂಬ ಸತ್ಯ ಸರ್ಕಾರಕ್ಕೆ ತಿಳಿಯುವುದೆಂದು?

೨. ಕುಟುಂಬಕ್ಕೆ ಬೇರೆ ಕಡೆ ಅಥವಾ ತಂದೆ ಹೆಸರಿನಲ್ಲಿ ಜಮೀನಿದೆ.

ಕಾರಣ: ಸಿದ್ದಿಗಳದು ಅವಿಭಕ್ತ ಕುಟುಂಬವಲ್ಲ. ಮದುವೆಯ ನಂತರ ಮಗ-ಸೊಸೆ ಬೇರೆ ಮನೆ ಅಥವಾ ಸಂಸಾರ ಹೂಡುವುದು ಸಹಜ. ಹೀಗಾಗಿ ಕುಟುಂಬದಲ್ಲಿ ಈಗಾಗಲೇ ತಂದೆಯ ಹೆಸರಿಗೆ ಜಮೀನಿದೆ ಎಂಬ ವಾದ ನ್ಯಾಯವಾದುದಲ್ಲ.

೩. ನಿರ್ದಿಷ್ಟ ದಿನಾಂಕದ ನಂತರ ಅತಿಕ್ರಮಣ ಮಾಡಿದ್ದಾರೆ ಅಥವಾ ಅರ್ಜಿ ಸಲ್ಲಿಸಿದ್ದಾರೆಂಬ ಕಾರಣಗಳು ಸ್ವೀಕಾರಾರ್ಹವಲ್ಲ.


ಕಾರಣ: ಅನಕ್ಷರಸ್ಥರನ್ನು ಮತ್ತು ಅಕ್ಷರಸ್ಥರನ್ನು ಒಂದೇ ತಟ್ಟೆಯಲ್ಲಿಟ್ಟು ತೂಗುವ ಸರ್ಕಾರದ ನೀತಿಗಳಿಗೆ ಅಧಿಕಾರಿಗಳಿಗೆ ಏನೆನ್ನಬೇಕು?

ಕಾನೂನಿಗಿಂತ ಮಾನವೀಯತೆ ದೊಡ್ಡದು, ದಾಖಲೆಗಿಂತ ಜೀವನ ಮುಖ್ಯ ಎಂಬ ಸತ್ಯ ನಮ್ಮ ಶಾಸಕರಿಗೆ ಮತ್ತು ಅಧಿಕಾರಶಾಹಿಗೆ ತಿಳಿಯುವುದೆಂದು? ಇವರು ಬುಡಕಟ್ಟಿನವರು, ಪ್ರಬಲ ಮತದಾರ ಗುಂಪಲ್ಲವೆಂಬ ಅಸಡ್ಡೆಯೇ? ಲಂಚ ನೀಡುವುದಿಲ್ಲವೆಂಬ ತಿರಸ್ಕಾರವೇ ಅಥವಾ ಮಾನವೀಯತೆ ಇಲ್ಲದ ಮನೋಭಾವನೆಯೇ? ಬಂಡವಾಳಶಾಹಿಗಳಿಗೆ, ಉದ್ದಿಮೆದಾರರಿಗೆ ಯಾವುದೇ ಕಾನೂನು ಅನ್ವಯಿಸುವುದಿಲ್ಲ. ಬೇಕಾದರೆ ಅವರಿಗಾಗಿ ಕಾನೂನನ್ನೇ ತಿದ್ದುಪಡಿ ಮಾಡಲಾಗುತ್ತದೆ. ಆದರೆ ಒಪ್ಪೊತ್ತಿನ ಊಟಕ್ಕೇ ತತ್ವಾರ ಪಡುವ ಈ ಬುಡಕಟ್ಟು ಜನರಿಗೆ ಕರುಣೆ ತೋರುವರಾರು? ಅದರಲ್ಲೂ ಸಿದ್ದಿಗಳು ಅಪರೂಪದ ವಿದೇಶಿ ಅತಿಥಿಗಳಾಗಿದ್ದು, ಟಿಬೇಟಿಯನ್ ನಿರಾಶ್ರಿತರಿಗೆ ನೀಡಿದಂತೆ ಪ್ರತ್ಯೇಕ ಪ್ರದೇಶಗಳನ್ನು ಸಿದ್ದಿಗಳಿಗೂ ನೀಡುವ ಅವಶ್ಯಕತೆಯಿದೆ.

ಆಹಾರ, ಅರಣ್ಯ ಹಕ್ಕುಪತ್ರದ ನಂತರದ ಪ್ರಮುಖ ಅವಶ್ಯಕತೆಯೆಂದರೆ ವಸತಿ. ಮೊದಲೆಲ್ಲಾ ಕಾಡಿನ ನಡುವೆ ಮರದ ಕೆಳಗೆ ಸರಳವಾದ ಹುಲ್ಲಿನ ಗುಡಿಸಲುಗಳಲ್ಲಿ ವಾಸಿಸುತ್ತಿದ್ದ ಸಿದ್ದಿಗಳು ನಂತರ ಜೀವನೋಪಾಯಕ್ಕಾಗಿ ಜಮೀನುಗಳ ಪಕ್ಕ, ಹಳ್ಳಿ, ಪಟ್ಟಣಗಳ ಅಂಚಿನಲ್ಲಿ ವಾಸಿಸಲಾರಂಭಿಸಿದ ಮೇಲೆ ಮನೆಗಳಿಗೆ ಪ್ರಾಮುಖ್ಯತೆ ನೀಡಲಾರಂಭಿಸಿದರು. ಸರ್ಕಾರದ ವಿವಿಧ ವಸತಿ ಯೋಜನೆಗಳ ಲಾಭವನ್ನು ಚೆನ್ನಾಗಿಯೇ ಬಳಸಿಕೊಂಡಿರುವ ಸಿದ್ದಿಗಳ ವಸತಿ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ವೃತ್ತಚಿತ್ರ ೬.೨.೧. ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟಿನ ವಸತಿವಿವರ (ಶೇಕಡವಾರು)[೬]

ಕ್ರಸಂ.	ಮನೆಗಳ ಸಂಖ್ಯಾವಿವರ	
೧.	ಗುಡಿಸಲು	೨೬
೨.	ಹೆಂಚಿನ	೧೫೧
೩.	ಆಶ್ರಯ(ಜನತಾ)	೨೬೦



ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಪ್ರತಿ ತಾಲೂಕುವಾರು ಪಂಚಾಯಿತಿಗಳಂತೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಬರುವ ಏಳು ತಾಲೂಕುಗಳ ೪೩೭ ಕುಟುಂಬಗಳ ಮನೆಗಳ ಮಾದರಿ ಮತ್ತು ವಿವಿಧ ವಸತಿವಿನ್ಯಾಸದ ಅಂಕಿಅಂಶಗಳನ್ನು ಈ ಕೆಳಕಂಡಂತೆ ನೋಡಬಹುದು.

ಕೋಷ್ಟಕ ೬.೨.೩. ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟಿನ ಮನೆಗಳ ಮಾದರಿ ಪ್ರಮಾಣ

ತಾಲೂಕುಗಳು	ಕುಟುಂಬ	ಮನೆಗಳ ಮಾದರಿ						
		ಗುಡಿಸಲು	ಟಿನ್	ದಾಭಾ	ಆರ್‌ಸಿಸಿ	ಹೆಂಚಿನ	ಜನತಾ	ಬಾಡಿಗೆ
ಅಂಕೋಲಾ	೫೮	೬				೨೪	೨೮	
ಕಾರವಾರ	೫					೫		
ಜೋಯಿಡಾ	೧೩					೧೦	೩	
ಮುಂಡಗೋಡ	೩೬	೧				೨೧	೧೪	
ಯಲ್ಲಾಪುರ	೧೪೭	೧೬				೨೧	೧೧೦	
ಶಿರಸಿ	೨೦	೧				೪	೧೫	
ಹಳಿಯಾಳ	೧೫೮	೨				೬೬	೯೦	
ಒಟ್ಟು	**೪೩೭**	**೨೬**				೧೫೧	**೨೬೦**	

ಉತ್ತರಕನ್ನಡ ಜಿಲ್ಲೆಯ ತಾಲೂಕುವಾರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಪಂಚಾಯಿತಿ ನೆಲೆಗಳ ವಸತಿ ಸ್ಥಿತಿಗಳನ್ನು ನೋಡಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ. ಒಟ್ಟಾರೆ ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟು ಸಮುದಾಯದ ೪೩೭ ಕುಟುಂಬಗಳನ್ನು ಅವಲೋಕಿಸಲಾಗಿ



ಅವುಗಳಲ್ಲಿ ಶೇ. ೫.೯೫ರಷ್ಟು ಕುಟುಂಬಗಳು ಗುಡಿಸಲುಗಳಿವೆ. ಶೇ. ೩೪.೫೫ ಕುಟುಂಬಗಳು ಹೆಂಚಿನ ಮನೆಗಳು ಕಂಡುಬಂದರೆ, ಶೇ. ೫೯.೫೦ರಷ್ಟು ಕುಟುಂಬಗಳು ಸರ್ಕಾರ ಆಶ್ರಯ ಯೋಜನೆಯಡಿಯಲ್ಲಿ ನೀಡುವ ವಸತಿಗಳಲ್ಲಿ ವಾಸಿಸುತ್ತಿರುವುದು ಕೋಷ್ಟಕ ೬.೫.೧ ರಲ್ಲಿ ಕಾಣಬಹುದು.

ಸಿದ್ದಿ ಬುಡಕಟ್ಟಿನ ತಾಲೂಕುವಾರು ವಸತಿಗಳ ಮಾದರಿಗಳನ್ನು ನೋಡಲಾಗಿ ಅಂಕೋಲಾ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಕೊಡ್ಲಗದ್ದೆ, ಡೊಂಗ್ರಿ, ಸುಂಕನಾಳ ಪಂಚಾಯಿತಿಗಳ ಒಟ್ಟಾರೆ ೫೮ ವಸತಿಗಳ ಮಾದರಿಗಳಲ್ಲಿ ಗುಡಿಸಲು ಶೇ. ೧೦.೩೪ರಷ್ಟು, ಹೆಂಚಿನ ಮನೆ ಶೇ. ೪೧.೩೮ರಷ್ಟು, ಆಶ್ರಯ ಯೋಜನೆ ಅಡಿಯಲ್ಲಿ ಲಭ್ಯವಾದ ಜನತಾಮನೆಗಳು ಶೇ. ೪೮.೨೮ರಷ್ಟಿರುವುದು ಕಂಡುಬರುತ್ತದೆ (ಅನುಬಂಧದಲ್ಲಿ ಗಮನಿಸಿ).

ಕಾರವಾರ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಮೇಲ್‌ಮಖೇರಿ ಪಂಚಾಯಿತಿಗಳ ಒಟ್ಟಾರೆ ೫ ವಸತಿಗಳಿದ್ದು ಎಲ್ಲ ಕುಟುಂಬಗಳು ಹೆಂಚಿನ ಮನೆಗಳಾಗಿರುವುದು ಕಂಡುಬರುತ್ತದೆ.

ಜೋಯಿಡಾ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಇರನೊಳ್ಳಿ ಪಂಚಾಯಿತಿಗಳ ಒಟ್ಟಾರೆ ೧೩ ವಸತಿಗಳ ಮಾದರಿಗಳಲ್ಲಿ ಹೆಂಚಿನ ಮನೆ ಶೇ. ೭೬.೯೨ರಷ್ಟು, ಆಶ್ರಯ ಯೋಜನೆ ಅಡಿಯಲ್ಲಿ ಲಭ್ಯವಾದ ಜನತಾಮನೆಗಳು ಶೇ. ೨೩.೦೮ರಷ್ಟಿರುವುದು ಕಂಡುಬರುತ್ತದೆ.

ಮುಂಡಗೋಡ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಉಗಿನಕೇರಿ, ಬಸರೆಜಡ್ಡಿ ಪಂಚಾಯಿತಿಗಳ ಒಟ್ಟಾರೆ ೩೬ ವಸತಿಗಳ ಮಾದರಿಗಳಲ್ಲಿ ಗುಡಿಸಲು ಶೇ. ೨.೭೮ರಷ್ಟು, ಹೆಂಚಿನ ಮನೆ ಶೇ. ೫೮.೩೩ರಷ್ಟು, ಜನತಾಮನೆಗಳು ಶೇ. ೩೮.೮೯ರಷ್ಟಿರುವುದು ಕಂಡುಬರುತ್ತದೆ.

ಯಲ್ಲಾಪುರ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಉಮ್ಮಚಗಿ, ಕಣ್ಣಿಗೇರಿ, ಕುಂದರಗಿ, ಹಾಸಣಗಿ ಮತ್ತು ಹಿಟ್ಲಳ್ಳಿ ಪಂಚಾಯಿತಿಗಳ ಒಟ್ಟಾರೆ ೧೪೭ ವಸತಿಗಳ ಮಾದರಿಗಳಲ್ಲಿ ಗುಡಿಸಲು ಶೇ. ೧೦.೮೮ರಷ್ಟು, ಹೆಂಚಿನ ಮನೆ ಶೇ. ೧೪.೨೯ರಷ್ಟು, ಜನತಾಮನೆಗಳು ಶೇ. ೭೪.೮೩ರಷ್ಟಿರುವುದು ಕಂಡುಬರುತ್ತದೆ.

ಶಿರಸಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ದೇವನಳ್ಳಿ, ಕಕ್ಕನಳ್ಳಿ ಪಂಚಾಯಿತಿಗಳ ಒಟ್ಟಾರೆ ೨೦ ವಸತಿಗಳ ಮಾದರಿಗಳಲ್ಲಿ ಗುಡಿಸಲು ಶೇ. ೫.೦೦ರಷ್ಟು, ಹೆಂಚಿನ ಮನೆ ಶೇ. ೨೦.೦೦ರಷ್ಟು, ಜನತಾಮನೆಗಳು ಶೇ. ೭೫.೦೦ರಷ್ಟಿರುವುದು ಕಂಡುಬರುತ್ತದೆ.

ಹಳಿಯಾಳ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಕೆಸರೊಳ್ಳಿ, ಗುಂಡೊಳ್ಳಿ, ಭಾಗವತಿ, ಸಾಂಬ್ರಾಣಿ ಪಂಚಾಯಿತಿಗಳ ಒಟ್ಟಾರೆ ೧೫೮ ವಸತಿಗಳ ಮಾದರಿಗಳಾದ ಗುಡಿಸಲು ಶೇ. ೧.೨೭ರಷ್ಟು, ಹೆಂಚಿನ ಮನೆ ಶೇ. ೪೧.೭೭ರಷ್ಟು, ಜನತಾಮನೆಗಳು ಶೇ. ೫೬.೯೬ರಷ್ಟಿರುವುದು ಕಂಡುಬರುತ್ತದೆ (ಅನುಬಂಧದಲ್ಲಿ ಗಮನಿಸಿ).

ಸಿದ್ದಿ ಬುಡಕಟ್ಟಿನ ಕುಟುಂಬಗಳ ವಸತಿ ಸ್ವರೂಪವನ್ನು ನೋಡಿದಾಗ ಇವರ ಬಡತನದ ಸ್ವರೂಪ, ಆರ್ಥಿಕಮಟ್ಟ ಇತ್ಯಾದಿಗಳನ್ನು ತೋರಿಸುತ್ತದೆ. ಹೆಂಚಿನ ಮನೆಗಳಲ್ಲಿ ೧೫೧ ಕುಟುಂಬಗಳು ವಾಸವಾಗಿರುವುದು ಕಂಡುಬಂದರೆ, ಗುಡಿಸಲು ಮನೆಗಳಲ್ಲಿ ೨೬ ಕುಟುಂಬಗಳು ವಾಸವಾಗಿರುವುದು, ೨೬೦ ಕುಟುಂಬಗಳು ಸರ್ಕಾರಿ ಆಶ್ರಯ ಯೋಜನೆ ಅಡಿಯಲ್ಲಿ ಬರುವ ಮನೆಗಳಾಗಿವೆ. ಇಂತಹ ಬುಡಕಟ್ಟುಗಳ ಅಥವಾ ಹಿಂದುಳಿದ ಸಮುದಾಯಗಳು ವಾಸಿಸುವ ಮನೆಗಳಲ್ಲಿ ಹೆಚ್ಚಿನ ಸೌಲಭ್ಯ ಗಳಿರುವುದಿಲ್ಲ(ಕಾರಣ ವಿವಿಧ ರೀತಿಯ ಮನೆಗಳ ವಿನ್ಯಾಸಗಳ ಬಗ್ಗೆ ಮತ್ತು ಈಗ ಬಳಕೆಯಾಗುತ್ತಿರುವ ಸರಕು ಸಲಕರಣೆಗಳ ಬಗೆಗೆ ಅಷ್ಟೊಂದು ಮಾಹಿತಿ ಲಭ್ಯವಿಲ್ಲದಿರುವುದು ಕಾರಣವಾಗಿರಬಹುದು). ಜೊತೆಗೆ ಆರ್ಥಿಕವಾಗಿ ಇವರು ಅಷ್ಟೊಂದು ಸುಧಾರಣೆಯಾಗಿಲ್ಲವೆಂಬುದನ್ನು ಗಮನಿಸಬಹುದು. ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ ಸರ್ಕಾರ ನೀಡುವ ವಸತಿ ಯೋಜನೆಗಳಾದ ಅಂಬೇಡ್ಕರ್ ಯೋಜನೆ, ಇಂದಿರಾ ಆವಾಸ್ ಯೋಜನೆ, ಜವಹರಲಾಲ್ ವಸತಿ ಯೋಜನೆ ಇಂಥವುಗಳ ಲಾಭ ಪಡೆದು ಮನೆಗಳನ್ನು ಪಡೆದಿರುವುದು ಕಂಡುಬರುತ್ತದೆ.

ಕುಟುಂಬ ಯೋಜನೆಗೊಳಗಾದ ಪ್ರತಿಯೊಬ್ಬ ಭಾರತೀಯ ಅದನ್ನು ದೇಶಕ್ಕೆ ಸಲ್ಲಿಸುವ ಅತ್ಯುತ್ತಮ ಸೇವೆ ಎಂದು ಪರಿಗಣಿಸಬಹುದಾಗಿದೆ. ಸಿದ್ದಿಗಳಲ್ಲಿ ಕುಟುಂಬ ಯೋಜನೆಗೊಳಗಾದವರ ಸಂಖ್ಯೆ ಗಣನೀಯ ಪ್ರಮಾಣದಲ್ಲಿದೆ. ಒಟ್ಟಾರೆ ೩೮೭ ಜನ ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು, ಅದರಲ್ಲಿ ಪುರುಷರೂ ಸೇರಿದ್ದಾರೆ. ಇದಕ್ಕೆ ಅವರ ಜನಸಂಖ್ಯಾ ಜಾಗೃತಿಯೇ ಕಾರಣವಾಗಿರಬಹುದು. ಸರ್ಕಾರ ಒಂದು ಸಾವಿರ ರೂಪಾಯಿ ಪ್ರೋತ್ಸಾಹಧನ ನೀಡುತ್ತದಾದರೂ ಸಾಂಪ್ರದಾಯಿಕ ಸಮುದಾಯಗಳಲ್ಲಿ ಈ ಮಟ್ಟದ ಜಾಗೃತಿ ಶ್ಲಾಘನೀಯ.

೩೪ ಮಹಿಳೆಯರು ವಿಧವಾ ವೇತನವನ್ನು ಪಡೆಯುತ್ತಿದ್ದು, ಸರ್ಕಾರದ ಕಾರ್ಯಕ್ರಮಗಳ ಅರಿವು ಅವರಿಗಿರುವುದನ್ನು ಇದು ಸೂಚಿಸುತ್ತದಲ್ಲದೆ ಸ್ತ್ರೀಯರ, ಅದರಲ್ಲೂ ವಿಧವೆಯರ ಸಬಲೀಕರಣಕ್ಕೆ ಸಹಾಯಕವಾಗಿದೆ.

೧೫೧ ವಿದ್ಯಾರ್ಥಿಗಳು ಶಿಷ್ಯವೇತನ ಪಡೆಯುತ್ತಿರುವುದು ಅವರೆಲ್ಲಾ ವಿದ್ಯಾವಂತರಾಗುತ್ತಿರುವುದರ ಲಕ್ಷಣವಾಗಿದ್ದರೂ ಶೇ. ೧೦೦ರಷ್ಟು ವಿದ್ಯಾರ್ಥಿಗಳು ಇದಕ್ಕೆ ಅರ್ಹರಿದ್ದರೂ ಇವರ ಸಂಖ್ಯೆ ಕಡಿಮೆ ಇರುವುದಕ್ಕೆ ಕಾರಣವೇನು ಎಂಬುದನ್ನು ಹುಡುಕಬೇಕಿದೆ ಮತ್ತು ಹೆಚ್ಚಿನ ಜಾಗೃತಿ ಮೂಡಿಸಬೇಕಿದೆ.

ಮತದಾನ ಪ್ರತಿ ಪೌರನ ಆದ್ಯ ಕರ್ತವ್ಯ ಮತ್ತು ಹಕ್ಕಾಗಿದ್ದು, ಈ ಮೂಲಕ ನಮ್ಮ ಧ್ವನಿ ದಿಲ್ಲಿಯಿಂದ ಹಳ್ಳಿಯವರೆಗೆ ಕೇಳಿಸಲು ಸಾಧ್ಯವಾಗುತ್ತದೆ. ಆದರೂ ೨೧೯ ಜನ ಸಿದ್ದಿಗಳು ಮತದಾನ ಮಾಡುವ ಹಕ್ಕನ್ನು ಇದುವರೆಗೂ ಪಡೆದುಕೊಳ್ಳದೆ ವಂಚಿತರಾಗಿರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳಿಂದ ತಿಳಿಯಬಹುದು. ಸಿದ್ದಿಯರಲ್ಲಿ ರಾಜಕೀಯ ನಿರಾಸಕ್ತಿ, ಜಾಗೃತಿ ಕೊರತೆ ಅಥವಾ ಅಧಿಕಾರಶಾಹಿಯ ಕಿರಿಕಿರಿಗಳು ಇದಕ್ಕೆ ಕಾರಣವಾಗಿರಬಹುದು.

ಕೋಷ್ಟಕ ೬.೨.೪ : ಸಮೀಕ್ಷೆಗೊಳಪಟ್ಟ ಇತರೆ ಸರ್ಕಾರಿ ಸೌಲಭ್ಯಗಳು

ಕ್ರ.ಸಂ.	ತಾಲೂಕುಗಳು	ಕುಟುಂಬ ಯೋಜನೆ			ಓಟಿನ ಕಾರ್ಡ್			ವಿಧವಾ ವೇತನ	ಅಂಗವಿಕಲ			ವೃದ್ಧಾಪ್ಯ			ಶಿಷ್ಯವೇತನ			ಪಡಿತರ ಚೀಟಿ
		ಗಂ	ಹೆ	ಒ	ಗಂ	ಹೆ	ಒ		ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	
೧	ಅಂಕೋಲ		೫೨	೫೨	೬೯	೭೭	೧೪೬	೩	೧	೧	೨		೨	೨	೮	೨	೧೦	೫೭
೨	ಕಾರವಾರ		೩	೩	೬	೭	೧೩		–	–	–	–	–	–	–	–	–	೫
೩	ಜೊಯ್ಡಾ		೧೦	೧೦	೧೪	೧೬	೩೦	೨	–	–	–	–	–	–	–	–	–	೧೨
೪	ಮುಂಡಗೋಡ	೧೪	೨೪	೩೭	೫೬	೪೯	೧೦೨	೩	–	–	–	–	–	–	೩	೧೦	೧೩	೩೬
೫	ಯಲ್ಲಾಪುರ		೭೮	೭೮	೧೭೨	೧೬೪	೩೩೩	೧೨	೨	೨	೪	೨	೧	೩	೨೪	೨೮	೫೨	೧೪೧
೬	ಸಿರ್ಸಿ	೧೩	೨೧	೩೪	೩೦	೨೩	೫೩	೨	–	–	–	–	–	–	೧೨	೮	೨೦	೧೮
೭	ಹಳಿಯಾಳ	೪೯	೧೨೪	೧೭೩	೧೫೧	೧೫೮	೩೦೯	೧೨	೨	೧	೩	೧	೧	೨	೨೬	೩೦	೫೬	೧೪೨
	ಉತ್ತರ ಕನ್ನಡ ಒಟ್ಟು	೭೬	೩೧೨	೩೮೭	೪೯೮	೪೯೪	೯೮೬	೩೪	೫	೪	೯	೩	೪	೭	೭೩	೭೮	೧೫೧	೪೧೧

ಕೋಷ್ಟಕ ೬.೨.೫: ಸಮೀಕ್ಷೆಗೊಳಪಟ್ಟ ಮತದಾರರ ಹಕ್ಕು ಸೌಲಭ್ಯಗಳು

ಕ್ರಸಂ.	ತಾಲೂಕುಗಳು	ಮತದಾರರು			ಓಟಿನ ಕಾರ್ಡ್			ಓಟಿನ ಕಾರ್ಡ್ ವಂಚಿತರು		
		ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ
೧	ಅಂಕೊಲ	೭೯	೮೭	೧೬೭	೬೯	೭೭	೧೪೬	೧೦	೧೦	೨೧
೨	ಕಾರವಾರ	೧೨	೧೦	೨೨	೬	೭	೧೩	೬	೩	೯
೩	ಜೊಯ್ಡಾ	೧೭	೧೯	೩೬	೧೪	೧೬	೩೦	೩	೩	೬
೪	ಮುಂಡಗೋಡ	೫೯	೫೪	೧೧೩	೫೬	೪೯	೧೦೨	೩	೫	೧೧
೫	ಯಲ್ಲಾಪುರ	೧೯೩	೧೮೫	೩೭೮	೧೭೨	೧೬೪	೩೩೩	೨೧	೨೧	೪೫
೬	ಸಿರ್ಸಿ	೩೪	೨೭	೬೧	೩೦	೨೩	೫೩	೪	೪	೮
೭	ಹಳಿಯಾಳ	೨೦೩	೨೧೦	೪೨೮	೧೫೧	೧೫೮	೩೦೯	೫೨	೫೨	೧೧೯
ಉತ್ತರ ಕನ್ನಡ ಒಟ್ಟು		೫೯೭	೫೯೨	೧೨೦೫	೪೯೮	೪೯೪	೯೮೬	೯೯	೯೮	೨೧೯

ಈ ಮೇಲಿನ ಎಲ್ಲ ಯೋಜನೆಗಳ ಫಲ ಸಿದ್ದಿಯರಿಗೆ ಇನ್ನೂ ಸಂಪೂರ್ಣ ದೊರಕಿಲ್ಲ. ಪ್ರಸ್ತುತ ಕ್ಷೇತ್ರಕಾರ್ಯದ ವ್ಯಕ್ತಿ ಅಧ್ಯಯನದಲ್ಲಿ ಬಹಳಷ್ಟು ಜನ ವಯಸ್ಸಾದ ಮತ್ತು ಮಧ್ಯ ವಯಸ್ಸಿನ ಸಿದ್ದಿಗಳು ಸರ್ಕಾರದಿಂದ ಕೇವಲ 'ಅರಣ್ಯ ಸಂಪನ್ಮೂಲ ಸಂಗ್ರಹಣೆಯ, ವಾಸದ ಮತ್ತು ಕುಮ್ರಿ ಜಮೀನಿನ ಮೇಲಿನ ಹಕ್ಕು ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳಿಂದ ಮುಕ್ತಿ ಇಷ್ಟು ಮಾತ್ರ ಸಿಕ್ಕರೆ ಸಾಕು. ನಮಗೆ ನಿಮ್ಮ ನಗರ, ಐಶಾರಾಮ ಯೋಜನೆಗಳು ಇಂತಹ ಯಾವುದೇ ಸೌಕರ್ಯ ಬೇಡ ಎಂದು ಅಭಿಪ್ರಾಯಪಟ್ಟರು.

೬.೩. ಜಾಗತೀಕರಣದ ಸವಾಲುಗಳು

ಜಾಗತೀಕರಣದಿಂದ ಅತಿ ಹೆಚ್ಚು ಅಪವ್ಯಾಖ್ಯಾನಕ್ಕೀಡಾಗಿರುವುದೆಂದರೆ ಅಭಿವೃದ್ಧಿ. ಬಂಡವಾಳ ಶಾಹಿಗಳ ಹೊಸ ಅಸ್ತ್ರವಾಗಿರುವ ಈ ಜಾಗತೀಕರಣ ಎಲ್ಲವನ್ನೂ ತನ್ನ ಲಾಭಕ್ಕೆ ಬಳಸಿಕೊಳ್ಳುತ್ತದೆ ಮತ್ತು ಅದಕ್ಕಾಗಿ ಪ್ರತಿಯೊಂದನ್ನೂ ತನ್ನ ಮೂಗಿನ ನೇರಕ್ಕೆ ವಿಶ್ಲೇಷಿಸುತ್ತದೆ. ಇದಕ್ಕೆ ಅಭಿವೃದ್ಧಿಯೂ ಹೊರತಾಗಿಲ್ಲ. ಅಭಿವೃದ್ಧಿ ಎಂದರೇನು ಎನ್ನುವುದನ್ನು ಶ್ರೀಯುತ ನಾಗೇಶ್ ಹೆಗಡೆಯವರು ತಮ್ಮ ಅಭಿವೃದ್ಧಿಯ ಅಂಧಯುಗ ಕೃತಿಯಲ್ಲಿ ತುಂಬಾ ಮಾರ್ಮಿಕವಾದ ಉದಾಹರಣೆಯ ಮೂಲಕ ವಿವರಿಸುತ್ತಾರೆ.

'ಯಾವನೋ ಹಳ್ಳಿ ಹೈದನೊಬ್ಬ(ಬುಡಕಟ್ಟು ಜನರಲ್ಲೊಬ್ಬ) ಯಾವುದೋ ಕುಗ್ರಾಮದ ಆಚೆಗಿನ ಹಳ್ಳದ ಪಕ್ಕದ ಗುಡಿಸಲಿನಲ್ಲಿ ವಾಸಿಸುತ್ತಿದ್ದಾನೆ. ಅಯ್ಯೋ ಪಾಪ, ಆತ ಕಾಲ್ನಡಿಗೆಯಲ್ಲೇ ಸಂಚರಿಸಬೇಕು. ಅವನಿಗೆ ಹಲ್ಲುಜ್ಜಲು ಟೂಥ್ ಬ್ರಶ್ ಕೂಡ ಇಲ್ಲ. ಇಜ್ಜಲು, ಬೇವಿನ ಕಡ್ಡಿಯನ್ನೇ ಬಳಸುತ್ತಿದ್ದಾನೆ.

ಮೈಕೈ ಕೆಸರು ಮಾಡಿಕೊಂಡು, ಜಿಗಣೆಗಳಿಂದ ಕಚ್ಚಿಸಿಕೊಂಡು ದುಡಿಮೆ ಮಾಡಬೇಕು. ಹಳ್ಳದ ನೀರನ್ನೇ ಕುಡಿಯುತ್ತಾನೆ. ಕ್ಲೋರಿನ್ನಿನಿಂದ ಶುದ್ಧೀಕರಿಸಿದ ನೀರನ್ನು ನೋಡಿದ್ದಾನೋ ಇಲ್ಲವೋ? ಆಧುನಿಕ ಕೃಷಿ ಗೊತ್ತಿಲ್ಲ. ಅವನ ಊಟವೋ ಗೆಡ್ಡೆ, ಗೆಣಸು, ಕುಟ್ಟಿದ ಅಕ್ಕಿ, ಮುದ್ದೆ ಸಾರು. ಜ್ವರಗಿರ ಬಂದರಂತೂ ಎಂಥದೋ ಕಷಾಯ, ಮೂಲಿಕೆ ಬೇರು. ಓದು ಬರಹ ಕೂಡ ಗೊತ್ತಿಲ್ಲದ ಈ ಗಮಾರನಿಗೆ ಅನ್ಯಾಯವಾದರೆ ಕಾನೂನಿನ ನೆರವೂ ಇಲ್ಲ. ಬೇಸರವಾದರೆ ಜನಪದ ಹಾಡು–ಕುಣಿತ ಬಿಟ್ಟರೆ ರೇಡಿಯೋ ಕೂಡ ಇಲ್ಲ. ಕತ್ತಲೆಯಲ್ಲಿ ದೊಂದಿ ಬೆಳಕು ಬಿಟ್ಟರೆ ಬೇರೇನೂ ಇಲ್ಲ.

ಇವನನ್ನು ಮೇಲೆತ್ತಲು ಇಡೀ ದೇಶದ ಆಡಳಿತ ಯಂತ್ರ ಸನ್ನದ್ಧವಾಗುತ್ತದೆ. ಪಂಚವಾರ್ಷಿಕ ಯೋಜನೆಗಳಿಂದ ಹಿಡಿದು ವಿಶ್ವಬ್ಯಾಂಕ್ ನೆರವು, ಎಡಿಬಿ ಸಾಲ, ಮೂಲ ಸೌಲಭ್ಯಗಳಿಗಾಗಿ ಗ್ಲೋಬಲ್ ಟೆಂಡರ್, ಈಗಂತೂ ಜಗತ್ತಿನ ಎಲ್ಲ ಬಹುರಾಷ್ಟ್ರೀಯ ಖಾಸಗಿ ಕಂಪನಿಗಳೂ ಅಭಿವೃದ್ಧಿಯ ರಥವನ್ನು ಮುನ್ನಡೆಸಲು ಪೈಪೋಟಿ ನಡೆಸುತ್ತವೆ. ಈ ಬಡವನನ್ನಂತೂ ಈ ಜನ್ಮದಲ್ಲಿ ಸುಧಾರಿಸಲು ಸಾಧ್ಯವಿಲ್ಲ. ಇವನ ಸಂತಾನಕ್ಕಾದರೂ ಒಂದಿಷ್ಟು ಶಿಕ್ಷಣ ನೀಡಿ, ಪಟ್ಟಣಕ್ಕೆ ಕರೆಸಬೇಕು. ಎಲ್ಲೋ ಕ್ಲರ್ಕ್ ಆಗಿಯೋ, ಶಿಕ್ಷಕನಾಗಿಯೋ, ತನ್ನ ಮಕ್ಕಳನ್ನು ಓದಿಸಿ, ಆ ಮಕ್ಕಳು ನಗರಕ್ಕೆ ಬಂದು ಉನ್ನತ ಹುದ್ದೆಗೆ ಏರಬೇಕು. ಪೈಪೋಟಿಯ ಈ ಜಗತ್ತಿನಲ್ಲಿ ಗೆಲ್ಲುತ್ತಾ ಸಾಗುವುದು ಹೇಗೆಂದು ತೋರಿಸಬೇಕು.

ಈಗ ಈ ಮಗ ಅಭಿವೃದ್ಧಿ ಪಥದಲ್ಲಿ ಮುಂದೆ ಸಾಗುತ್ತಿದ್ದಾನೆ. ಇವನಿಗೆ ಏನೇನೂ ಕೊರತೆಯಾಗದಂತೆ ನೋಡಿಕೊಳ್ಳಲು ಹೊಸ ಹೊಸ ಉದ್ಯಮಗಳು ಹೊಸ ಹೊಸ ಟೆಕ್ನಾಲಜಿಯೊಂದಿಗೆ ದಾಂಗುಡಿಯಿಡುತ್ತಾ ಬರುತ್ತಿವೆ. ಅಜ್ಜನ ಕಾಲದ ಕಾಲ್ನಡಿಗೆ ಮರೆತುಹೋಗಿದೆ. ಸ್ವಂತಕ್ಕೆ ಕಾರು ಇದೆ. ಹಲ್ಲುಜ್ಜಲು ಹತ್ತಾರು ತರದ ಬ್ರಶ್ಗಳು ಬಂದಿವೆ. ಎಳೆ ಮಗನಿಗಂತೂ ಜಿಂಗಲ್ ಬೆಲ್ ಸಂಗೀತ ನುಡಿಸುವ ಬ್ರಶ್. ಮುಂಜಾನೆಯ ತಿಂಡಿಗೆ ಬ್ರೇಕ್‌ಫಾಸ್ಟ್ ಸಿರೀಲ್ಸ್, ಫ್ರಿಜ್‌ನಲ್ಲಿ ಜಾಗ ಇಲ್ಲದೆ ಹೊರಗಡೆ ಇಟ್ಟರೂ ಹಾಳಾಗದಂತಹ ಹಾಲು, ಗಿಣ್ಣು, ಕೆಚಪ್.

ಈ ಆಧುನಿಕ ಮರಿ ಮಗ ಪಕ್ಕಾ ಸಿದ್ಧಾರ್ಥನ ಹಾಗೆ ಬೆಳೆಯಬೇಕು. ಅವನಿಗೆ ದುಃಖ, ದಾರಿದ್ರ್ಯ, ರೋಗಿರುಜಿನ, ವೃದ್ಧಾಪ್ಯಗಳ ಸೋಂಕೂ ತಗುಲದ ಹಾಗೆ ನೋಡಿಕೊಳ್ಳಬೇಕು. ಇಡೀ ಜಗತ್ತನ್ನೇ ಒಂದುಮಾಡಿ ಸೇವೆಗೆ ಒಡ್ಡಬೇಕು. ಸೊಪ್ಪು ತರಕಾರಿಯ ಕೈಗಾಡಿ ಬರಕೂಡದು. ಕೃಷಿಯನ್ನೇ ಒಂದು ಉದ್ಯಮ ಮಾಡಿ, ಆಹಾರವನ್ನು ವಿಮಾನದ ಮೂಲಕ ಪೂರೈಕೆ ಮಾಡಿ, ಕೋಲ್ಡ್ ಸ್ಟೋರೆಜ್ ಚೈನ್‌ಗಳ ಮೂಲಕ ತಾಜಾ ಎನಿಸುವ ತರಕಾರಿಗಳನ್ನು ಹೋಮ್ ಡೆಲಿವರಿ ಮಾಡಬೇಕು. ಈರುಳ್ಳಿ ತೊಳೆಯದ ಹಾಗೆ, ಆಲೂಗಡ್ಡೆ ಮೊಳಕೆ ಬಾರದ ಹಾಗೆ ಅವಕ್ಕೆಲ್ಲ ವಿಕಿರಣ ಸೇಚನ ಮಾಡಿಸಿ ಪೂರೈಸಬೇಕು. ನಲ್ಲಿಯಲ್ಲಿ ಬರುವ ನೀರು ಶುದ್ಧವಿರಲಿಕ್ಕಿಲ್ಲ. ಹಾಗಾಗಿ ಬಾಟಲಿಯಲ್ಲಿ ಪರಿಶುದ್ಧ ನೀರನ್ನು ಪೂರೈಸಲೆಂದೇ ಇಂಡಸ್ಟ್ರಿ ಸ್ಥಾಪಿಸೋಣ, ಮನರಂಜನೆಗೂ ಒಂದಿಷ್ಟು ಇಂಡಸ್ಟ್ರಿಗಳು, ಹಾಡು ಸಂಗೀತದ ಉತ್ಪಾದನೆಗೆ, ನಾಟಕ ಹರಿಕಥೆಗಳ ಉತ್ಪಾದನೆಗೆ ಉದ್ಯಮಗಳು, ದೇವಾಲಯಗಳಿಗೆ

ಹೋಗಬೇಕೆನಿಸಿದೆಯೆ? ಸಂಚಾರ ಸಮಸ್ಯೆಯೆ? ಅದು ಸಮಸ್ಯೆಯೇ ಅಲ್ಲ. ಟಿ.ವಿ. ಯಲ್ಲೇ ಪ್ರಾರ್ಥನೆ, ಭಕ್ತಿ, ಉಪನಿಷದ್ ಕುರಿತು ಉಪನ್ಯಾಸ ಬರುವಂತೆ ಮಾಡೋಣ. ಅತಿಥಿ ಸತ್ಕಾರ ಬೇಕೆ? ಅವಕ್ಕೆಲ್ಲ ಬೇಕಾದ ಹಣ ಪೂರೈಕೆಗೂ ಆಟೋಮ್ಯಾಟಿಕ್ ಯಂತ್ರಗಳನ್ನು ಸ್ಥಾಪಿಸೋಣ.

ಇದೇನು ಇಷ್ಟೆಲ್ಲ ಸೌಲಭ್ಯ ಸಿಕ್ಕರೂ ಆರೋಗ್ಯ ಕೆಟ್ಟಿತೆ? ದೇಹಕ್ಕೆ ವ್ಯಾಯಾಮ ಬೇಕು, ಅದಕ್ಕೆಂದೇ ಅನೇಕ ಜಿಮ್‌ಗಳನ್ನು ತೆರೆದಿದೆ. ಮನೆಯಲ್ಲೇ ವ್ಯಾಯಾಮ ಮಾಡಿಕೊಳ್ಳುವುದಿದ್ದರೆ ಅದಕ್ಕೂ ಆಟೊಮ್ಯಾಟಿಕ್ ಯಂತ್ರಗಳು ಬಂದಿವೆ. ಬಟನ್ ಒತ್ತಿದರೆ ನಿಂತಲ್ಲೇ ವಾಕಿಂಗ್ ಮಾಡಬಹುದು. ಆದರೂ ಕೊಲೆಸ್ಟೆರಾಲ್ ಹೆಚ್ಚಿದೆಯೇ? ರಕ್ತದ ಏರೊತ್ತಡ, ಹೃದ್ರೋಗ, ಕಿಡ್ನಿಯಲ್ಲಿ ಕಲ್ಲು? ಅದಕ್ಕೇಕೆ ಚಿಂತೆ? ಆರೋಗ್ಯ ಉದ್ಯಮವೇ ಇದೆಯಲ್ಲ! ಅದರ ವೆಚ್ಚ ಭರಿಸಲು ವಿಮೆ ಮಾಡಿಸಿಕೊಳ್ಳಿ. ಈಗಂತೂ ವಿಜ್ಞಾನ ಇನ್ನೂ ಮುಂದುವರೆದಿದೆ. ಶುದ್ಧ ಆಮ್ಲಜನಕ ಪೂರೈಕೆ ಮಾಡುವ ಆಕ್ಸಿಜನ್ ಬಾರ್‌ಗಳು ಬಂದಿವೆ. ನಿಮ್ಮ ಆರೋಗ್ಯ ರಕ್ಷಣೆಗೆ ಔಷಧ ಸೇವನೆ ಮಾಡಲೇಬೇಕೆಂದಿಲ್ಲ. ಆಡಿನ ಹಾಲಿನಲ್ಲೇ ಔಷಧವೂ ಜಿನುಗುವಂತೆ ಮಾಡಲಾಗಿದೆ. ನಿಮಗೆ ಬೇಕಿದ್ದ ಜೀವಸತ್ವಗಳೆ ತುಂಬಿರುವ ಬಾಳೆಹಣ್ಣು ಸಿದ್ಧವಾಗುತ್ತಿದೆ. ಉಪ್ಪಿನಲ್ಲಿ ಅಯೋಡಿನ್, ಅಕ್ಕಿಯಲ್ಲಿ ವಿಟಮಿನ್ ಇ, ಕೇಬಲ್‌ನಲ್ಲಿ ಇಂಟರ್‌ನೆಟ್ ಬಂದಿರಬೇಕಲ್ಲ? ಅದರಲ್ಲಿವೆ ನೋಡಿ ಲೇಟೆಸ್ಟ್ ಮಾಹಿತಿಗಳು. ಇನ್ನೇನು ವೃದ್ಧಾಪ್ಯವನ್ನು ಮುಂದೂಡುವ ಹೊಸ ಟೆಕ್ನಿಕ್ ಬರಲಿಕ್ಕಿದೆ. ನಿಮ್ಮದೇ ಶರೀರದ ಸ್ಟೆಮ್‌ಸೆಲ್‌ಗಳನ್ನು ಬ್ಯಾಂಕ್‌ಗಳಲ್ಲಿಡ ಬಹುದು. ಬೇಕೆಂದಾಗ ಅದನ್ನು ಫ್ರಿಜ್‌ನಿಂದ ಹೊರತೆಗೆದು ನಿಮ್ಮ ದೇಹಕ್ಕೆ ಚುಚ್ಚುಮದ್ದಿನ ರೂಪದಲ್ಲಿ ಕೊಡಲಿಕ್ಕಿದೆ. ಆಧುನಿಕ ಟೆಕ್ನಾಲಜಿಯಲ್ಲಿ ಯಾವುದು ಸಾಧ್ಯವಿಲ್ಲ ಹೇಳಿ? ಆದರೂ ಮಾನಸಿಕ ಬಳಲಿಕೆ, ಕೀಲು ನೋವು, ಕೂತಲ್ಲೇ ಸುಸ್ತು, ಹೈಪರ್ ಅಸಿಡಿಟಿ ಇದೆಯೆ? ಟೆನ್ಷನ್ ಮಾಡಿಕೊಳ್ಳಬೇಡಿ. ನಿಮ್ಮ ದೇಹಕ್ಕೆ ಕಾಯಕಲ್ಪ ಚಿಕಿತ್ಸೆ ಅಗತ್ಯವಿದೆ. ನಗರದ ಹೊರವಲಯದಲ್ಲಿ, ಬೇಕೆಂದರೆ ಕಾವೇರಿ ದಡದ ಜಂಗಲ್ ಹಟ್ಸ್‌ನಲ್ಲಿ ನ್ಯಾಚುರೋಪತಿ ಚಿಕಿತ್ಸೆ ವ್ಯವಸ್ಥೆ ಇದೆ. ಇಂದೇ ಬುಕ್ ಮಾಡಿಬಿಡಿ. ಅಲ್ಲಿ ವೇದಕಾಲದ ಆಯುರ್ ವೃದ್ಧಿಯ ಸೂತ್ರಗಳ ಪ್ರಕಾರ ಅಪ್ಪಟ ನೈಸರ್ಗಿಕ ವಿಧಾನದಲ್ಲಿ ನಿಮಗೆ ಶುಶ್ರೂಷೆ ಮಾಡಲಾಗುತ್ತದೆ. ಮುಂಜಾನೆ ಎಳೆ ಬಿಸಿಲಿನಲ್ಲಿ ಹುಲ್ಲು ಹಾಸಿನ ಮೇಲೆ ತುಸು ವಾಕಿಂಗ್, ಹಲ್ಲುಜ್ಜಲು ಬೇವಿನ ಕಡ್ಡಿ, ಆಮೇಲೆ ಮೂಲಿಕೆಗಳ ರಸಪೇಯ, ಮಡ್ ಬಾತ್, ಸನ್ ಬಾತ್, ಬಾಯಾರಿಕೆ ತಣಿಸಲು ಒರತೆ ನೀರು, ತ್ವಚೆಯ ಉರಿಕೆ ಊತಗಳಿದ್ದರೆ ಇಂಬಳ ಚಿಕಿತ್ಸೆಯೂ ಇದೆ. ಇನ್ನು ಊಟಕ್ಕೆ ಕುಟ್ಟಿದ ಅಕ್ಕಿಯ ಅನ್ನ, ಹುಲ್ಲಿನ ಸಾರು, ಟಿ ವಿ, ಮೊಬೈಲ್ ಎಲ್ಲದರಿಂದ ದೂರವಿದ್ದರೆ ಮನಸ್ಸಿಗೆ ನೆಮ್ಮದಿ, ಬೇಕಿದ್ದರೆ ಸ್ಥಳೀಯ ತಂಡಗಳಿಂದ ಜಾನಪದ ಹಾಡು, ನೃತ್ಯ ಇರುತ್ತದೆ. ಇವೆಲ್ಲವೂ ದಿನಕ್ಕೆ ಮೂರುವರೆ ಸಾವಿರ ಅಷ್ಟೆ. ಇಪ್ಪತ್ತು ದಿನಗಳ ಒಂದು ಕೋರ್ಸ್.

ಇಂಥ ಸೌಲಭ್ಯ ಅದೆಷ್ಟು ಜನರಿಗೆ ಸಿಗಲು ಸಾಧ್ಯ? ದೇಶದ ಶೇ. ೩೦ರಷ್ಟು ಜನರು ಈಗಲೂ ಬಡತನದ ಕಂದರದಲ್ಲೇ ಇದ್ದಾರೆ. ಕೆಲವರಂತೂ ಅದೆಷ್ಟು ಕಡುಬಡವರೆಂದರೆ, ಹಳ್ಳದ ಪಕ್ಕದ

ಗುಡಿಸಲಿನಲ್ಲಿ ವಾಸಿಸುತ್ತಿದ್ದಾರೆ. ಕಾಲ್ನಡಿಗೆಯ ಸಂಚಾರ, ಹಲ್ಲುಜ್ಜಲು ಟೂಥ್ ಬ್ರಶ್ ಕೂಡ ಇಲ್ಲ. ಮೈ ಕೈ ಕೆಸರು ಮಾಡಿಕೊಂಡು, ಜಿಗಣೆಗಳಿಂದ ಕಚ್ಚಿಸಿಕೊಂಡು ದುಡಿಮೆ, ಶುದ್ಧೀಕರಿಸಿದ ನೀರಿಲ್ಲ. ಕುಟ್ಟಿದ ಅಕ್ಕಿ, ಮುದ್ದೆ-ಸಾರು, ಔಷಧಕ್ಕೆ ಮೂಲಿಕೆ ಬೇರು; ಮನರಂಜನೆಗೆ ರೇಡಿಯೋ ಕೂಡ ಇಲ್ಲ. ಇವರನ್ನೆಲ್ಲ ಅಭಿವೃದ್ಧಿಯ ಪಥಕ್ಕೆ ಹಚ್ಚಲು ಇನ್ನೆಷ್ಟು ವರ್ಷ ಬೇಕೋ?'[೮]

ಇದು ಜಾಗತೀಕರಣದ ಅಭಿವೃದ್ಧಿಯ ನಿಜವಾದ ಚಿತ್ರಣವಾಗಿದೆ. ಆದರೆ ಇದನ್ನೆಲ್ಲಾ ವ್ಯವಸ್ಥಿತವಾಗಿ ಮುಚ್ಚಿಹಾಕಿ ಬೇರೆಯದೇ ಮುಖವಾಡವನ್ನು ತೊಟ್ಟು ನಮ್ಮ ನಡುವೆ ಇರುವ ಈ ಜಾಗತೀಕರಣದ ಪ್ರವಾಹದ ಹೊಡೆತಕ್ಕೆ ಸಿಕ್ಕು ಹಲವಾರು ಸಮುದಾಯಗಳು ಗುರುತು ಸಿಗದಷ್ಟು ಬದಲಾಗಿವೆ. ಒಂದೆಡೆ ಬಡವರು, ದಲಿತರು ಮತ್ತು ಬುಡಕಟ್ಟುಗಳೆಲ್ಲಾ ತುಂಬಾ ಹಿಂದುಳಿದಿದ್ದು ಆಧುನೀಕರಣ ಗೊಳ್ಳದಿದ್ದರೆ ಉಳಿಗಾಲವಿಲ್ಲ ಎಂದು ಬಿಂಬಿಸುವ ಜಾಗತೀಕರಣ, ಇನ್ನೊಂದೆಡೆ ಬುಡಕಟ್ಟುಗಳ ಕಲೆ, ಗಾಯನ ನೃತ್ಯಗಳು ಅನನ್ಯವೆಂದು ಹೇಳುತ್ತಾ ಅವುಗಳನ್ನು ತನ್ನ ಹಿತಾಸಕ್ತಿಗೆ ತಕ್ಕಂತೆ ಬದಲಿಸಿ ಅವುಗಳ ರಕ್ಷಣೆಯ ಹೆಸರಿನಲ್ಲಿ ಹಣ ಮಾಡುತ್ತಿದೆ. ಈ ಪ್ರವಾಹಕ್ಕೆ ಸಿಲುಕದ ಕೆಲವು ಸಮುದಾಯಗಳು ನಡುಗಡ್ಡೆಗಳಾಗಿಯೇ ಉಳಿದಿದ್ದರೂ ತಮ್ಮ ಅನನ್ಯತೆಯನ್ನು ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗಿವೆ. ಬುಡಕಟ್ಟುಗಳೆಲ್ಲಾ ಅನಾಗರಿಕರು, ಅವರ ನಂಬಿಕೆ, ಆಚರಣೆಗಳೆಲ್ಲಾ ಮೂಢ ನಂಬಿಕೆಗಳು, ಅವರು ಕೇವಲ ಜೀವವಿಲ್ಲದ ಅಧ್ಯಯನದ ವಸ್ತುಗಳು ಎಂಬ ತಿರಸ್ಕಾರ ಮತ್ತು ಮರುಕ ತುಂಬಿದ ದೃಷ್ಟಿಕೋನ ನಮ್ಮ ರಾಜಕಾರಣಿಗಳು, ಪತ್ರಕರ್ತರು, ಬುದ್ಧಿಜೀವಿಗಳು ಹಾಗೂ ಅಧ್ಯಯನಕಾರರಲ್ಲಿ ತುಂಬಿಕೊಂಡಿದೆ. ಅವರೂ ಮನುಷ್ಯರು, ನಮ್ಮ ಸಂಸ್ಕೃತಿಯ ಬೀಜಗಳು ಅವರಲ್ಲಿವೆ, ನೆಲ, ಜಲ ಇತ್ಯಾದಿಗಳ ಮೇಲೆ ಅವರಿಗೇ ಮೊದಲ ಹಾಗೂ ಹೆಚ್ಚಿನ ಅಧಿಕಾರವಿದೆ ಎಂಬ ದೃಷ್ಟಿಕೋನವನ್ನು ಬೆಳೆಸಿಕೊಂಡು ಸಹಬಾಳ್ವೆ ನಡೆಸುವ ಮಾದರಿ ಬೇಕಿದೆ. ಅನನ್ಯತೆ ಉಳಿಸಿಕೊಳ್ಳುವ ಪ್ರಶ್ನೆ ಬಂದಾಗಲೆಲ್ಲಾ ಬುಡಕಟ್ಟುಗಳ ಸ್ವಾಯತ್ತತೆ ಅಧಿಕಾರ ಮತ್ತು ಸರ್ಕಾರದ ಸಾರ್ವಭೌಮ ಅಧಿಕಾರಗಳ ತಾಕಲಾಟ ಪ್ರಾರಂಭವಾಗುತ್ತದೆ. ನೆಹರೂ ತಮ್ಮ ಭಾಷಣದಲ್ಲಿ ಹೇಳಿದಂತೆ ನೀತಿ ನಿಯಮಗಳನ್ನು ಎಲ್ಲರ ಹಿತಾಸಕ್ತಿಯಿಂದ ಮಾಡಲಾಗಿದ್ದು ಅದನ್ನು ಮುರಿದರೆ ಶಾಂತಿ ಸುವ್ಯವಸ್ಥೆ ಹದಗೆಡುತ್ತದೆ. ಹಾಗಾಗಿ ಬುಡಕಟ್ಟುಗಳ ಅನನ್ಯತೆಯಷ್ಟೇ ಮುಖ್ಯ ರಾಷ್ಟ್ರದ ಕಾನೂನುಗಳು. ಹೀಗಾಗಿ ಬುಡಕಟ್ಟುಗಳು ರಾಷ್ಟ್ರದ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಜನತಾಂತ್ರಿಕ ಬಹುಸಂಸ್ಕೃತಿಯ ಸಮಾಜದಲ್ಲಿ ಬಾಳಬೇಕು. ಹಾಗೆಯೇ ಸಮಾಜ ಹಾಗೂ ಸರ್ಕಾರಗಳೂ ಅವರ ಅನನ್ಯತೆಗೆ ಧಕ್ಕೆ ಬರದಂತೆ ನಡೆದುಕೊಳ್ಳಬೇಕಾದ ಅಭಿವೃದ್ಧಿ ಮಾದರಿಯ ಅವಶ್ಯಕತೆ ಇಂದು ಅನಿವಾರ್ಯವಾಗಿದೆ. ಜನತಂತ್ರ ಮತ್ತು ಅನನ್ಯತೆಯನ್ನು ಬೆಸೆಯುವ ಮಾದರಿ ಇದೆಯೇ ಎಂದರೆ ಹೌದು ಇದೆ ಎಂದು ಹೇಳಬಹುದು. ನಿರಂತರವಾಗಿ ರೆಡ್ ಇಂಡಿಯನ್ನರನ್ನು ನಿರ್ನಾಮ ಮಾಡಿ, ಜಾಗತೀಕರಣ ಹಾಗೂ ಆಧುನಿಕತೆಯ ಹರಿಕಾರರೆಂದೇ ಹೆಸರಾದ ಅಮೆರಿಕನ್ನರೇ ಆಶ್ಚರ್ಯಕರವಾದ ಇಂತಹದೊಂದು ವ್ಯವಸ್ಥೆಯನ್ನು ಹುಟ್ಟುಹಾಕಿದ್ದಾರೆ. ಅದರ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಬುಡಕಟ್ಟು ಜನಾಂಗ ಅಲ್ಲಿ, ಇಲ್ಲಿ, ಎಲ್ಲಿಯೂ ಸಲ್ಲದ ತ್ರಿಶಂಕುಗಳಾಗಿರುವ ಪರಿಸ್ಥಿತಿ ಭಾರತದಲ್ಲಿದ್ದರೆ, ಅಮೆರಿಕದಲ್ಲಿ ಇದಕ್ಕೆ ಪೂರ್ಣ ವ್ಯತಿರಿಕ್ತ

ಪರಿಸ್ಥಿತಿ ಇದೆ. ಇಲ್ಲಿ ಸಾರ್ವಭೌಮ ಸರ್ಕಾರಕ್ಕೆ ಸಮನಾದ ಅಧಿಕಾರವನ್ನು ಆದಿವಾಸಿಗಳಿಗೆ ನೀಡಲಾಗಿದ್ದು ಅಲ್ಲಿನ ಸಂಪನ್ಮೂಲಗಳ ಬಳಕೆ, ಉಳಿಕೆಗಳಲ್ಲಿ ಅವರ ಧ್ವನಿಗೆ ಮಾನ್ಯತೆ ಇದೆ.

"ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ಪವಿತ್ರ ಭೂಮಿಗಳ ಶಕ್ತಿ ರಕ್ಷಣೆಗಾಗಿ ಮೀಸಲು ಒಪ್ಪಂದದ ಹಕ್ಕುಗಳು, ರಕ್ಷಿತ ಭೂಮಿ ಉಪಯೋಗ ಅಂಕಿತ, ಸರ್ಕಾರಿ ಭೂಮಿಯ ಸಹನಿರ್ವಹಣೆ ಇತ್ಯಾದಿ ಕಾನೂನುಗಳನ್ನು ಅಮೆರಿಕನ್ ಕಾಂಗ್ರೆಸ್ ಮಾಡಿದ್ದು, ಅವುಗಳ ಜಾರಿಯಲ್ಲಿ ಬುಡಕಟ್ಟು ಸಂಘಟನೆಗಳು ಹಿಂದೆ ಬಿದ್ದಿಲ್ಲ. ಬುಡಕಟ್ಟುಗಳ ಹಕ್ಕುಗಳು ಪ್ರಶ್ನಾತೀತವಲ್ಲದಿದ್ದರೂ, ಸಾಕಷ್ಟು ಶಾಸನಾತ್ಮಕ ಹಾಗೂ ನ್ಯಾಯಾಂಗದ ಮನ್ನಣೆ ಪಡೆದಿದೆ. ಸರ್ಕಾರದ ವಿವಿಧ ಇಲಾಖೆಗಳಿಗೆ ಬುಡಕಟ್ಟು ಸರಕಾರಗಳ ಜೊತೆ ಮಾತುಕತೆ ನಡೆಸುವ, ಒಪ್ಪಂದ ಮಾಡಿಕೊಳ್ಳುವ, ಸಹನಿರ್ವಹಣೆಗೆ ಅವಕಾಶ ನೀಡುವ ಸೌಲಭ್ಯಗಳಿವೆ. 'ಬುಡಕಟ್ಟು ಸರಕಾರ' ಎಂಬ ಪರಿಕಲ್ಪನೆಯೇ ಅದ್ಭುತವಾಗಿದ್ದು ಚುನಾಯಿತ ಸರಕಾರ ಹಾಗೂ ಅದರ ಅಂಗಸಂಸ್ಥೆಗಳು ಇಂತಹ ಬುಡಕಟ್ಟು ಸರಕಾರಗಳಿಗೆ ಮಾನ್ಯತೆ ನೀಡಿ ಸಾರ್ವಭೌಮ ಸರಕಾರಗಳಂತೆಯೇ ಗೌರವಿಸಿ ಒಡಂಬಡಿಕೆ ಮಾಡಿಕೊಳ್ಳುವ ವಿಧಾನ ಅನುಕರಣೀಯ. ಈ ಲೇಖನ ಅಮೆರಿಕದ ವಿವಿಧ ಬುಡಕಟ್ಟುಗಳಿಗೆ ನೀಡಲಾಗಿರುವ ವಿಶೇಷ ಹಕ್ಕುಗಳು, ಒಪ್ಪಂದಗಳು, ಅವು ಇತರ ಯೋಜನೆ ಹಾಗೂ ಇಲಾಖೆಗಳ ಜೊತೆ ನಡೆಸಿದ ತಿಕ್ಕಾಟಗಳ ವಿವರಣೆ ಹಾಗೂ ಮೌಲ್ಯಮಾಪನ ನಡೆಸುತ್ತದೆ.

ದಿ ಬ್ಯಾಡ್ಜರ್ ಟೂ ಮೆಡಿಸನ್ ಕೇಸ್(The Badger – Two Medicine Case)[9]

ಅಮೆರಿಕದ ಅತ್ಯಂತ ಪ್ರಸಿದ್ಧ ಪವಿತ್ರ ಭೂಮಿ ವಿವಾದದ ಕೇಂದ್ರ ಬಿಂದುವೇ ಬ್ಯಾಡ್ಜರ್ ಟೂ ಮೆಡಿಸನ್ ಪ್ರದೇಶ. ಈ ವಿಸ್ತಾರವಾದ ಭೂಪ್ರದೇಶ ಐತಿಹಾಸಿಕವಾಗಿ 'ಬ್ಲ್ಯಾಕ್‌ಫೀಟ್' ಬುಡಕಟ್ಟಿಗೆ ಸೇರಿದ್ದು ೧೮೯೬ರ ಒಪ್ಪಂದದ ಪ್ರಕಾರ 'ತಮ್ಮ ಭೂಮಿಯಲ್ಲಿ ಸುಮಾರು ೪,೦೦,೦೦೦ ಎಕರೆ ಮೀಸಲು ಹಕ್ಕಿನ ಭೂಮಿಯನ್ನು ೧,೫೦೦,೦೦೦ ಡಾಲರ್‌ಗಳಿಗೆ ಫೆಡರಲ್ ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದಾರೆ. ಈ ಭಾಗವನ್ನು 'Ceded Strip' 'ಬಿಟ್ಟುಕೊಟ್ಟ ಪ್ರದೇಶ' ಎಂದು ಕರೆಯಲಾಗುತ್ತದೆ. ಅಂದರೆ, ಎಲ್ಲಿಯವರೆಗೂ ಈ ಭೂಭಾಗ ಸಾರ್ವಜನಕ ಆಸ್ತಿಯಾಗಿರುತ್ತದೆಯೋ ಅಲ್ಲಿಯವರೆಗೂ ಈ ಬುಡಕಟ್ಟುಜನ ಈ ಪ್ರದೇಶದ ಯಾವುದೇ ಭಾಗಕ್ಕೆ ಹೋಗಲು ಅಧಿಕಾರವಿರುತ್ತದೆ. ಅಲ್ಲದೆ, ಸಾಂಘಿಕ, ಶಾಲೆ, ಮನೆ, ಬೇಲಿ ಇತ್ಯಾದಿ(ವಾಣಿಜ್ಯಕವಲ್ಲದ) ಉದ್ದೇಶಗಳಿಗೆ ಮರ-ಮುಟ್ಟು ಕಡಿಯುವ, ಬೇಟೆಯಾಡುವ, ಮೀನು ಹಿಡಿಯುವ ಅಧಿಕಾರವನ್ನು ಅವರಿಗೆ ಮೀಸಲಿಡಲಾಗಿದೆ.

ಈ ಒಪ್ಪಂದದಲ್ಲಿನ ಕೆಲವು ಲೋಪದೋಷಗಳಿಂದಾಗಿ ಈ ಭೂಮಿಯಲ್ಲಿ ಗಣಿಗಾರಿಕೆ ಹಾಗೂ ತೈಲ ಮತ್ತು ನೈಸರ್ಗಿಕ ಅನಿಲ ಕಂಪನಿಗಳಿಗೆ ಶಾಶ್ವತ ಗುತ್ತಿಗೆ ನೀಡಲು ಸರ್ಕಾರಿ ಇಲಾಖೆಗಳು ಮುಂದಾದಾಗ ಬುಡಕಟ್ಟು ಜನರು ತಮ್ಮ "ಮೌಖಿಕ ಪರಂಪರೆ"ಯನ್ನು ಉದಾಹರಿಸಿ ಈ ಭೂಮಿ ನಮ್ಮದಾಗಿದ್ದು ನಮ್ಮ ಒಪ್ಪಿಗೆ ಮೇರೆಗೆ ತಾತ್ಕಾಲಿಕವಾಗಿ ಮಾತ್ರ ಸರ್ಕಾರ ಅನುಮತಿ ನೀಡಬಹುದೆಂದು ಈ ಯೋಜನೆಗಳನ್ನು ವಿರೋಧಿಸಿದರು. ಹಾಗೆಯೇ Great bear wilderness bill ನಲ್ಲಿ Badger Two Medicine Area ವನ್ನು ಸೇರಿಸಿ ಅಭಯಾರಣ್ಯವೆಂದು ಘೋಷಿಸಿದಾಗಲೂ

ಕೂಡಾ Black Feet Tribe ಗಳ ವಿರೋಧದಿಂದಾಗಿ ಸರ್ಕಾರ ತಮ್ಮ ಆದೇಶದಿಂದ Badger two ವನ್ನು ಮುಕ್ತಗೊಳಿಸಿದರು. ಬುಡಕಟ್ಟು ವ್ಯವಹಾರ ಸಭಾ ಈ ಪ್ರದೇಶದ ಅಭಿವೃದ್ಧಿ ಹಾಗೂ ನಿರ್ವಹಣೆಯಲ್ಲಿ ಆದಿವಾಸಿಗಳಿಗೆ ಹೆಚ್ಚಿನ ಪಾತ್ರ ಹಾಗೂ ಅವರ "ಮೀಸಲು ಹಕ್ಕು"ಗಳಿಗೆ ಮಹತ್ವ ನೀಡಬೇಕೆಂದು ಬಲವಾಗಿ ಪ್ರತಿಪಾದಿಸಿದೆ.

ಈ Badger-Two ಪ್ರದೇಶದ ಆಸ್ತಿ ಹಕ್ಕುದಾರರಾಗಿರುವ ನಮಗೆ ಈ ಪ್ರದೇಶದ ಸಂಪನ್ಮೂಲ ನಿರ್ವಹಣೆಯ ನಿರ್ಧಾರದ ಅಧಿಕಾರವನ್ನು ನೀಡಬೇಕು, ಅಥವಾ ಕನಿಷ್ಠ ಪಕ್ಷ ನಿರ್ಧಾರವನ್ನು ನಮ್ಮೊಡನೆ ಚರ್ಚಿಸಿ ಸಭಾದವರು ತಮ್ಮನ್ನು ತಾವು ಈ ಬ್ಲಾಕ್‌ಫೀಟ್ ರಾಷ್ಟ್ರದ ಪ್ರತಿನಿಧಿಗಳೆಂದು ಹೇಳಿಕೊಳ್ಳುತ್ತಾ, ಈ ಪ್ರದೇಶ ಪವಿತ್ರವಾಗಿದ್ದು ಇದನ್ನು ಪಾರಂಪರಿಕ/ಸಾಂಸ್ಕೃತಿಕ ಭೂಭಾಗ ಎಂದು ಗುರುತಿಸಲು ಆಗ್ರಹಿಸುತ್ತದೆ. ಈ ಪ್ರದೇಶ ನಮ್ಮ ಪ್ರಪಂಚದ ಬೆನ್ನೆಲುಬಾಗಿದ್ದು, ನಮ್ಮ ಜೀವನ ಹಾಗೂ ಸಂಸ್ಕೃತಿಗೆ ಮುಖ್ಯ ಆಧಾರವಾಗಿದೆ. ಏಕೆಂದರೆ ನಮ್ಮ ದೈನಂದಿನ ಜೀವನಕ್ಕಾಗಿ ಹಲವಾರು ತಲೆಮಾರುಗಳಿಂದ ನಮ್ಮ ಪೂರ್ವಜನರು ಇದನ್ನು ಉಪಯೋಗಿಸುತ್ತಿದ್ದು, ನಮ್ಮ ಶಕ್ತಿ, ಜೀವನ, ಸಾಂಸ್ಕೃತಿಕ ವೈಶಿಷ್ಟ್ಯತೆಗಳು ಈ ಭೂ ದೈವದ ಮೂಲಕ ಸೃಷ್ಟಿಕರ್ತನೊಡನೆ ನೇರ ಸಂಬಂಧ ಕಲ್ಪಿಸಿದೆ. ಆದ್ದರಿಂದ ನಮ್ಮ ಮೀಸಲು ಒಪ್ಪಂದದ ಹಕ್ಕುಗಳನ್ನು ಮತ್ತು ಆ ಮೂಲಕ ಈ ಪವಿತ್ರ ಭೂಮಿಯನ್ನು ರಕ್ಷಿಸಲು ನಾವು ಬದ್ಧರಾಗಿದ್ದೇವೆ. ನೆಲ, ಜಲ, ಸಂಪನ್ಮೂಲ, ಸಾಂಸ್ಕೃತಿಕ ಅನನ್ಯತೆ, ಮೌಖಿಕ ಸಂಪ್ರದಾಯ ಪಾವಿತ್ರ್ಯ ಇತ್ಯಾದಿಗಳ ರಕ್ಷಣೆ ಹಾಗೂ ನಿರ್ವಹಣೆಯಲ್ಲಿ ಬುಡಕಟ್ಟುಗಳ ದನಿಗೆ ಬಲ ನೀಡಲು ಸಹನಿರ್ವಹಣೆ ಕ್ರಮಗಳನ್ನು ಅಮೆರಿಕದಲ್ಲಿ ಹೇಗೆ, ಹಾಗೂ ಯಾವ ಸಂದರ್ಭದಲ್ಲಿ ಬಳಸಿಕೊಳ್ಳಲಾಗಿದೆ ಎಂಬುದನ್ನು ವಿವರಿಸಲಾಗಿದೆ.

ಸಹನಿರ್ವಹಣೆ : ರಾಷ್ಟ್ರೀಯ ಸರಕಾರ ಹಾಗೂ ಬುಡಕಟ್ಟು ಸರಕಾರಗಳ ನಡುವೆ ಸಮನ್ವಯದ ಹಲವಾರು ವಿಧಾನಗಳಿದ್ದು ಅವುಗಳಲ್ಲಿ ಸಹನಿರ್ವಹಣೆಯೂ ಒಂದಾಗಿದೆ. ನಂಬಿಕೆಯ ಜವಾಬ್ದಾರಿಯಿಂದಾಗಿ ಆದಿವಾಸಿ ಸಹನಿರ್ವಹಣೆ ವಿಶಿಷ್ಟವಾಗಿದ್ದು ಇತರ ರೀತಿಯ ಸಹಭಾಗಿತ್ವದ ನಿರ್ವಹಣೆಗಳಿಗಿಂತಲೂ ಭಿನ್ನವಾಗಿದೆ. ಮೊದಲನೆಯದಾಗಿ, ಆದಿವಾಸಿ ಸರಕಾರಗಳು ಸಾರ್ವಭೌಮ ಸರಕಾರಗಳಾಗಿದ್ದು ಸ್ವಯಂ ಅಧಿಕಾರವನ್ನು ಜನ್ಮದತ್ತವಾಗಿಯೇ ಪಡೆದಿವೆ. ಸರಕಾರ ಹಾಗೂ ಆದಿವಾಸಿಗಳ ನಡುವೆ ಸಾರ್ವಜನಿಕರು ಅಥವಾ ಪಾಲುದಾರರಿಗಿಂತ ಭಿನ್ನವಾದ ಸಂಬಂಧವಿದ್ದು ಅದು ಎರಡು ಸಾರ್ವಭೌಮ ರಾಷ್ಟ್ರಗಳ ನಡುವಿನ ಸಂಬಂಧದಂತಿದೆ. 'ಸಹನಿರ್ವಹಣೆ'ಗೆ ಅವಶ್ಯಕವಾದ ಮತ್ತೊಂದು ಅಂಶವೆಂದರೆ 'ನಂಬಿಕೆ ಸಂಬಂಧ'. ಈ ಸಂಬಂಧ ಎರಡೂ ಸರಕಾರಗಳ ಪರಸ್ಪರ ನಂಬುಗೆಯನ್ನು ಆಧರಿಸಿದೆ. ಏಕೆಂದರೆ, ಬುಡಕಟ್ಟುಗಳು ಸಾರ್ವಭೌಮವಾದರೂ ವಿದೇಶೀ ಸರಕಾರಗಳಲ್ಲ. ಬದಲಾಗಿ ವಿಶಿಷ್ಟ ರಾಜಕೀಯ ಸಮುದಾಯವಾಗಿದ್ದು ಒಂದು ರೀತಿಯ ತಂದೆ-ಮಗ, ವ್ಯಕ್ತಿ-ರಕ್ಷಕ (ward to his guardian) ಸಂಬಂಧದಂತಿದೆ. ಯಾವುದೇ ಸಾರ್ವಭೌಮ ಸರ್ಕಾರ ಇನ್ನೊಂದು ಸರಕಾರದ ಆಸ್ತಿಪಾಸ್ತಿಗೆ ಧಕ್ಕೆ ಮಾಡಬಾರದು ಹಾಗೂ ಪರಸ್ಪರ ರಕ್ಷಣೆ ಮಾಡಬೇಕು. ಅದರಲ್ಲೂ ಫೆಡರಲ್ ಸರ್ಕಾರದ ಮುಖ್ಯ ಕರ್ತವ್ಯವೆಂದರೆ ಆದಿವಾಸಿಗಳ ಹಕ್ಕು, ಆಸ್ತಿ ಹಾಗೂ ವ್ಯಕ್ತಿಗಳನ್ನು ಸಂರಕ್ಷಿಸುವುದಾಗಿದೆ.

ಕ್ಲಾಮತ್ ಬುಡಕಟ್ಟು ತನ್ನ USFS (United States Forest Services) ವ್ಯಾಜ್ಯದಲ್ಲಿ ಬುಡಕಟ್ಟು ಜನರು ಅರಣ್ಯ ಇಲಾಖೆಯ ಸಾಗುವಾನಿ ಹರಾಜನ್ನು ತಮ್ಮ ಒಪ್ಪಂದದ ಪ್ರಕಾರ ಕಡವೆಗಳ ರಕ್ಷಣೆಗೆ ತೊಂದರೆಯಾಗುತ್ತದೆಂಬ ಕಾರಣವೊಡ್ಡಿ ಯಶಸ್ವಿಯಾಗಿ ತಡೆದರು. ಈ ಕಾಯಿದೆಯಲ್ಲಿ ಬರುವ 'Indian tribes do not bear a disappropriate burden' ಎಂಬ ವಾಕ್ಯ ನಿಜಕ್ಕೂ ಶ್ಲಾಘನೀಯ. ನಮ್ಮ ದೇಶದಲ್ಲಿ ರಕ್ಷಿತ ಅರಣ್ಯ ಅಭಿವೃದ್ಧಿ ಯೋಜನೆ, ಇತ್ಯಾದಿಗಳ ಎಲ್ಲ ಭಾರವನ್ನು ಬಡಪಾಯಿ ಆದಿವಾಸಿಗಳೇ ಹೊರಬೇಕು. ಅವರನ್ನು ಪರ್ಯಾಯ ಸರ್ಕಾರವೆಂದು ಹೋಗಲಿ ಮನುಷ್ಯಜೀವಿಗಳೆಂದು ಪರಿಗಣಿಸಿದರೂ ಸಾಕಾಗಿದೆ. ಮೊದಲು ಮಾನವೀಯತೆ ನಂತರ ಕಾನೂನು ಎನ್ನುವುದಕ್ಕಿಂತ ಕಾನೂನೇ ಮಾನವೀಯತೆಗಿಂತ ದೊಡ್ಡದು ಎಂಬ ಮನೋಭಾವ ಭಾರತೀಯ ಸರ್ಕಾರ ಹಾಗೂ ಇಲಾಖೆಗಳದ್ದಾಗಿದೆ. ಹೀಗಾಗಿ, ಕೆಲವರಿಗೆ ಮಾತ್ರ ಅನುಕೂಲವಾಗುವ ಎಲ್ಲ ಅನಾವಶ್ಯಕ ಯೋಜನೆಗಳಿಗೂ ಆದಿವಾಸಿಗಳೇ ನಿರಾಶ್ರಿತರಾಗಬೇಕಾಗಿದೆ. ಪೊಲೀಸರು, ಅರಣ್ಯ ಇಲಾಖೆ, ಅರಣ್ಯ ಕಾಂಟ್ರಾಕ್ಟುದಾರರೂ, ಜಮೀನುದಾರರು, ಕಳ್ಳಸಾಗಾಣಿಕೆದಾರರು, ವನ್ಯಪ್ರಾಣಿ ಹಂತಕರು, ರಾಜಕಾರಣಿಗಳು, ಗಣಿ ಧಣಿಗಳು, ಎಲ್ಲರಿಂದಲೂ ಒದೆಸಿಕೊಳ್ಳುವ, ಶೋಷಿಸಿಕೊಳ್ಳುವ, ಲಾಠಿ ಏಟು ತಿನ್ನುವ, ಜೈಲಿನಲ್ಲಿ ಮುದ್ದೆ ಮುರಿಯುವ ಹೀನಾತಿಹೀನ ಜೀವನ ಆದಿವಾಸಿಗಳದ್ದಾಗಿದ್ದು ಈ ಎಲ್ಲದರ ಭಾರವನ್ನು ಅವರ ಬಲಹೀನ ಹೆಗಲುಗಳೇ ಹೊರಬೇಕಾಗಿರುವುದು ವಿಪರ್ಯಾಸ. ಹಾಗೆಯೇ ಈ ಬ್ಯಾಡ್ಜರ್ ಟೂ ಪ್ರದೇಶದಲ್ಲಿ ಮೋಟಾರು ವಾಹನಗಳನ್ನು ಕೂಡ ಅಲ್ಲಲ್ಲಿ ಗೇಟ್‌ಗಳನ್ನು ಹಾಕುವ ಮೂಲಕ ಬುಡಕಟ್ಟು ಜನರು ನಿರ್ಬಂಧಿಸಿದ್ದು ಇದಕ್ಕೆ ಅರಣ್ಯ ಇಲಾಖೆ ಕೂಡ ಅನುಮತಿ ನೀಡಿದೆ. ಈ ಒಪ್ಪಂದಗಳು ಶಾಸನಾತ್ಮಕ ಬದ್ಧತೆ ಹೊಂದಿರುವ ಎರಡು ಸ್ವತಂತ್ರ ರಾಷ್ಟ್ರಗಳ ನಡುವಿನ ಒಪ್ಪಂದದಂತೆ ಕಡ್ಡಾಯವಾಗಿ ಪಾಲಿಸಬೇಕಾಗಿರುವಂತಹವಾಗಿದೆ.

ಮೀಸಲು ಹಕ್ಕುಗಳು ಫೆಡರಲ್ ಸರ್ಕಾರ ಬುಡಕಟ್ಟುಗಳಿಗೆ ನೀಡಿರುವ ಹಕ್ಕುಗಳಲ್ಲ, ಬದಲಾಗಿ ಬುಡಕಟ್ಟು ಸರ್ಕಾರಗಳೇ ಸಾರ್ವಭೌಮ ಅಧಿಕಾರದಡಿಯಲ್ಲಿ ಮಾಡಿಕೊಂಡಿರುವ ಶಾಸನಗಳಾಗಿವೆ. ಈ ಒಪ್ಪಂದಗಳನ್ನು ವಿಮರ್ಶಿಸುವಾಗ ನ್ಯಾಯಾಲಯಗಳಲ್ಲಿ ಕೆಲವೊಂದು ಅಂಗೀಕೃತ ನಿಯಮಗಳನ್ನು ಅನುಸರಿಸುತ್ತಿದ್ದು ಸಾಮಾನ್ಯವಾಗಿ ಬುಡಕಟ್ಟುಗಳ ಪರವಾಗಿರುತ್ತದೆ. ಅವುಗಳನ್ನು ಬುಡಕಟ್ಟುಗಳ ದೃಷ್ಟಿಕೋನದಿಂದಲೇ ನೋಡಬೇಕಿದ್ದು, ಯಾವುದೇ ಅಸ್ಪಷ್ಟತೆ ಇದ್ದಾಗ ಅದನ್ನು ಬುಡಕಟ್ಟುಗಳ ಪರವಾಗಿಯೇ ತೀರ್ಮಾನಿಸಬೇಕು. ಅಮೇರಿಕನ್ ಕಾಂಗ್ರೆಸ್‌ಗೆ ಈ ಒಪ್ಪಂದಗಳನ್ನು ಪರಿಷ್ಕರಿಸುವ ಪರಮಾಧಿಕಾರವಿದ್ದರೂ ನ್ಯಾಯಾಲಯಕ್ಕೆ ಸೂಕ್ತ ಸಾಕ್ಷ್ಯಾಧಾರಗಳನ್ನು ನೀಡಿ ಅವುಗಳಿಗೆ ಒಪ್ಪಿಗೆಯಾಗುವಂತೆ ಪರಿಷ್ಕರಿಸಬೇಕು.

ಈ ಪವಿತ್ರ ಭೂಮಿಯ ವಿಷಯದಲ್ಲಿ ಎರಡು ವ್ಯಾಜ್ಯಗಳು ಪ್ರಮುಖವಾಗಿವೆ.

೧. ೧೯೮೮ರ Lyng v/s North west Indian cemetry protective association ಮತ್ತು

2. Bear lodge multiple use association v/s Babbit 1998.

ಮೊದಲನೇ ವ್ಯಾಜ್ಯದಲ್ಲಿ ಸರ್ಕಾರ ೨೦೦ ಕಿ.ಮೀ.ಗಳ ಉದ್ದದ ರಸ್ತೆ ನಿರ್ಮಿಸಲು ಯೋಜಿಸಿತ್ತು. ಅದು ಹಲವಾರು ಇಂಡಿಯನ್ ಬುಡಕಟ್ಟುಗಳ ಪವಿತ್ರಭೂಮಿಯ ಮಧ್ಯದಲ್ಲಿ ಹಾದು ಹೋಗುತ್ತಿತ್ತು. ಬುಡಕಟ್ಟು ಪ್ರತಿನಿಧಿಗಳು ಈ ರಸ್ತೆ ನಿರ್ಮಾಣವನ್ನು ವಿರೋಧಿಸಿದರೂ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ಗಳಲ್ಲಿ ಸರಕಾರದ ಪರವಾಗಿ ತೀರ್ಪು ಬಂದಿತು. ಅದರಲ್ಲಿ ಫೆಡರಲ್ ಓನರ್‌ಶಿಪ್ ಬಗ್ಗೆ ಹೇಳುತ್ತಾ "whatever rights the Indians may have to the use of the land , those rights do not divest the government of its right to use what is, after all, 'its', land but it need not and should not discourage it from accommodation religious practices like those engaged in by the Indian respondents."

ಭೂಮಿಯ ಮೇಲಿನ ಅಂತಿಮ ಅಧಿಕಾರ ಸರ್ಕಾರದ್ದೇ. ಆದರೆ ಅದರ ಅರ್ಥ ಸರ್ಕಾರ ಜನರ ಧಾರ್ಮಿಕ ಆಚರಣೆಗಳನ್ನು ನಿರುತ್ತೇಜನಗೊಳಿಸಬಹುದು ಎಂದಲ್ಲ. ಆದರೆ ಅಂತಿಮವಾಗಿ ಅಲ್ಲಿ ರಸ್ತೆ ನಿರ್ಮಿಸಿದರೂ ಅದನ್ನು ರಕ್ಷಿತಾರಣ್ಯವೆಂದು ಘೋಷಿಸಿ ಬುಡಕಟ್ಟುಗಳಿಗೆ ಗೌರವ ನೀಡಲಾಯಿತು. ಆದರೆ ಇದಕ್ಕೆ ವಿರುದ್ಧವಾಗಿ ಮತ್ತೊಂದು ವ್ಯಾಜ್ಯದಲ್ಲಿ **'ಬಿಯರ್ ಲಾಡ್ಜ್'** ಪ್ರದೇಶ ಪ್ರಮುಖ ಮನೋರಂಜನಾ ತಾಣವಾಗಿದ್ದು, ಬಂಡೆ ಹತ್ತುವ ಸಾಹಸಕ್ರೀಡೆಗೆ ಪ್ರಸಿದ್ಧವಾಗಿತ್ತು. ಹಾಗೆಯೇ ಆ ಪ್ರದೇಶ ಹಲವಾರು ಬುಡಕಟ್ಟುಗಳಿಗೆ ಪೂಜನೀಯ ಹಾಗೂ ಪವಿತ್ರವಾಗಿತ್ತು. ಈ ಬಗ್ಗೆ ಬುಡಕಟ್ಟುಗಳು ದೂರು ನೀಡಿದಾಗ ಅವರ ಭಾವನೆಗಳನ್ನು ಮನ್ನಿಸಿ ಬುಡಕಟ್ಟು ಆಚರಣೆಗಳು ಹೆಚ್ಚಾಗಿ ನಡೆಯುವ ಜೂನ್ ತಿಂಗಳಲ್ಲಿ ಈ ವಾಣಿಜ್ಯಕ ಕ್ರೀಡೆಗಳನ್ನು ನಿಷೇಧಿಸಲಾಯಿತು. ನಂತರ ಸ್ವಇಚ್ಛೆಯಿಂದ ಸರ್ಕಾರ ಈ ಭಾಗದಲ್ಲಿ Rock climbing ಕ್ರೀಡೆಯನ್ನು ಸಂಪೂರ್ಣ ನಿಷೇಧಿಸಿತು. ಭಾರತದಲ್ಲಿ ಈ ರೀತಿಯ ಘಟನೆಗಳು ನಡೆಯಲು ಸಾಧ್ಯವೇ? ಬುಡಕಟ್ಟುಗಳ ಪ್ರತಿರೋಧ, ಕೂಗುಗಳಿಗೆ ಹೋಗಲಿ ಅವರ ಕಣ್ಣೀರು, ಕಷ್ಟಗಳಿಗೆ ಸ್ಪಂದಿಸಲು ನಮಗೆ, ಸರ್ಕಾರಗಳಿಗೆ ಸಾಧ್ಯವೇ?

ಅಮೆರಿಕನ್ ಕಾಂಗ್ರೆಸ್ ಹಲವಾರು ಕಾಯಿದೆಗಳನ್ನು ಬುಡಕಟ್ಟುಗಳ ಹಿತದೃಷ್ಟಿಯಿಂದ ಅಂಗೀಕರಿಸಿದೆ.

1. The American Indian Religious Freedom Act – 1978
2. Religious Freedom Restoration Act – 1993

AIRFA ಮತ್ತು RFRAಗಳನ್ನು ಬಳಸಿಕೊಂಡು ನ್ಯಾಯಾಲಯಗಳು ಬುಡಕಟ್ಟುಗಳಿಗೆ ಸಾಕಷ್ಟು ಬಾರಿ ನ್ಯಾಯ ಒದಗಿಸಿವೆ. ಉತ್ತರ ಅರಿಜೋನಾದ ಸ್ಯಾನ್ ಫ್ರಾನ್ಸಿಸ್ಕೋ ಬೆಟ್ಟಗಳು ನವಜೋ, ಹೋಪಿ ಮುಂತಾದ ಇಂಡಿಯನ್ ಬುಡಕಟ್ಟುಗಳಿಗೆ ಪವಿತ್ರ ಸ್ಥಳಗಳಾಗಿವೆ. ಇಲ್ಲಿ ಅರಣ್ಯ ಇಲಾಖೆ ಚರಂಡಿ ನೀರನ್ನು ಬಳಸಿ ಕೃತಕ ಮಂಜಿನ ಹಾಸನ್ನು ಸೃಷ್ಟಿಸಿ ಸ್ಕೀಯಿಂಗ್ ಕ್ರೀಡೆ ನಡೆಸಲು ಅನುಮತಿ ನೀಡಿತು. ಆದರೆ RFRA ಅಡಿಯಲ್ಲಿ ಬುಡಕಟ್ಟುಗಳು ಇದನ್ನು ಕೋರ್ಟ್‌ನಲ್ಲಿ ಪ್ರಶ್ನಿಸಿದಾಗ ಕೋರ್ಟ್ ಈ ಯೋಜನೆ ಬುಡಕಟ್ಟುಗಳ ಧಾರ್ಮಿಕ ನಂಬಿಕೆಗೆ ಧಕ್ಕೆಯುಂಟು ಮಾಡುವುದಲ್ಲದೆ ಸಾರ್ವಜನಿಕ ಹಿತಾಸಕ್ತಿಯ ಸರ್ಕಾರದ ಹಕ್ಕನ್ನು ಚಲಾಯಿಸಲು ಇಲ್ಲಿ ಸಾಧ್ಯವಿಲ್ಲವಾದ್ದರಿಂದ ಈ ಯೋಜನೆಯನ್ನು ನಿಲ್ಲಿಸುವಂತೆ ಆದೇಶಿಸಿತು.

ಫೆಡರಲ್ ಸರ್ಕಾರ ತನ್ನ ವಿವಿಧ ಇಲಾಖೆಗಳಿಗೆ ಬುಡಕಟ್ಟುಗಳ ಜೊತೆ ಹೇಗೆ ವ್ಯವಹರಿಸಬೇಕು, ಅವರ ಆಸ್ತಿಪಾಸ್ತಿ ಹೇಗೆ ರಕ್ಷಿಸಬೇಕು, ಮುಂತಾದವುಗಳ ಬಗ್ಗೆ ಹಲವಾರು ಕಾನೂನು, ಆಡಳಿತಾತ್ಮಕ ನಿಯಂತ್ರಣಗಳು, ಆಂತರಿಕ ನಿರ್ದೇಶನ ಹಾಗೂ ಕಾರ್ಯನಿರ್ವಹಣೆ ನಿರ್ದೇಶನಗಳನ್ನು ನೀಡಿದೆ. ಈ ನಿರ್ದೇಶನಗಳನ್ನು ಪ್ರತಿಯೊಬ್ಬ ಅಧಿಕಾರಿಯೂ ಪಾಲಿಸತಕ್ಕದ್ದು, ಅರಣ್ಯ ಇಲಾಖೆ ಇದನ್ನು ಹೀಗೆ ಹೇಳುತ್ತದೆ. ನಮ್ಮ ಇಲಾಖೆ, ಫೆಡರಲ್ ಸರ್ಕಾರದ 'ನಂಬಿಕೆ ಹೊಣೆಗಾರಿಕೆ'(Trust Responsibility)ಯನ್ನು ಪರಿಗಣಿಸಿ ಅನುಸೂಚಿತ ಬುಡಕಟ್ಟುಗಳನ್ನು ಗೌರವಿಸುತ್ತದೆ. ಪ್ರತಿಯೊಬ್ಬ ಜವಾಬ್ದಾರಿಯುತ ಅರಣ್ಯಾಧಿಕಾರಿಯೂ ನಮ್ಮ ಯೋಜನೆಯಿಂದ ಪ್ರಭಾವಿತವಾಗುವ ಬುಡಕಟ್ಟುಗಳನ್ನು ಆಹ್ವಾನಿಸಿ, ಸಮಾಲೋಚಿಸಿ, ಪಾಲ್ಗೊಳ್ಳಲು ಅವಕಾಶ ಹಾಗೂ ಸಹಯೋಗ ನೀಡುವ ಮೂಲಕ ಸರ್ಕಾರ–ಸರ್ಕಾರಗಳನ್ನು ಅಂದರೆ ಬುಡಕಟ್ಟು–ಫೆಡರಲ್ ಸರ್ಕಾರಗಳಿಗೆ ಗೌರವಿಸಬೇಕು. ಹೀಗಾಗಿ ರಾಕಿ ಮೌಂಟೆನ್‌ನಲ್ಲಿ ತೈಲ ಮತ್ತು ನೈಸರ್ಗಿಕ ಅನಿಲದ ಲೀಸ್ ನೀಡುವಾಗ ಅಲ್ಲಿನ ಅರಣ್ಯಾಧಿಕಾರಿ **ಶ್ರೀಮತಿ ಗ್ಲೋರಿಯಾ ಫ್ಲೋರಾ** ಬುಡಕಟ್ಟುಗಳ ಭಾಗವನ್ನು ಆ ಲೀಸ್‌ನಿಂದ ಹೊರಗಿಟ್ಟರು. 'ಪರಿಸರದ ಕಾನೂನು' ಹಾಗೂ 'ಸ್ಥಳದ ಮೌಲ್ಯ'(value of place)ಗಳನ್ನು ಉಲ್ಲೇಖಿಸಿ ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಂಡರು. ಇಲ್ಲಿ **'ಸ್ಥಳದ ಮೌಲ್ಯ'** ಬುಡಕಟ್ಟುಗಳು ಆ ಭಾಗಕ್ಕೆ ನೀಡಿರುವ ಪ್ರಾಮುಖ್ಯತೆಯನ್ನು ತೋರಿಸುತ್ತದೆ.

ಸಹನಿರ್ವಹಣೆ : ವಿಧಾನಗಳು

ಸಹನಿರ್ವಹಣೆ ಪ್ರಾಧಿಕಾರದ ಅಟಾರ್ನಿ ಎಡ್. ಗುಡ್‌ಮನ್‌ರ ಅಭಿಪ್ರಾಯದಲ್ಲಿ ಸಹ ನಿರ್ವಹಣೆ ಎಂದರೆ "ಸಂಪನ್ಮೂಲಗಳ ನಿರ್ವಹಣೆಯ ಗುರಿಗಳನ್ನು ಹಾಗೂ ಜವಾಬ್ದಾರಿಗಳನ್ನು ಸರ್ಕಾರ ಮತ್ತು ಬುಡಕಟ್ಟುಗಳು ಪರಸ್ಪರ ಹಂಚಿಕೊಳ್ಳುವುದಾಗಿದೆ. ಎರಡು ಸಾರ್ವಭೌಮ ವ್ಯವಸ್ಥೆಗಳು ಇಬ್ಬರಿಗೂ ಸಂಬಂಧಿಸಿರುವ ವಿಷಯಗಳು ಹಾಗೂ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದಾಗಿದೆ. ಸಹನಿರ್ವಹಣೆ ಎಂಬುದು ಫೆಡರಲ್ ಸರ್ಕಾರದ ನಿರ್ಧಾರಗಳನ್ನು ವಿರೋಧಿಸುವ, ನಿಲ್ಲಿಸುವ ಬುಡಕಟ್ಟುಗಳ ಪರಮಾಧಿಕಾರ ಅಥವಾ **'ವಿಟೋ ಪವರ್'** ಅಲ್ಲ. ಆದರೆ ಬುಡಕಟ್ಟುಗಳ ಸಂಪನ್ಮೂಲ ಹಾಗೂ ಹಕ್ಕುಗಳ ಬಗ್ಗೆ ಫೆಡರಲ್ ಸರ್ಕಾರದ ಏಕಪಕ್ಷೀಯ ನಿರ್ಧಾರಗಳನ್ನು ಪ್ರಶ್ನಿಸುವ ಕರೆಯಾಗಿದೆ. ಇಬ್ಬರು ಸಾರ್ವಭೌಮರು ಪರಸ್ಪರ ಪಾಲ್ಗೊಳ್ಳುವಿಕೆಯ ಚೌಕಟ್ಟಿನಲ್ಲಿ ರಚನಾತ್ಮಕವಾಗಿ ನೀತಿ ನಿರ್ಧಾರ ಕೈಗೊಳ್ಳುವ, ತಾಂತ್ರಿಕ ಪರಿಣತಿಯನ್ನು ಪರಸ್ಪರ ಹಂಚಿಕೊಳ್ಳುವ ಪ್ರಕ್ರಿಯೆಯಾಗಿದೆ. "That also include a right to meaningful tribal participation in the decision making process regarding such habitat"- Good Man. ೧೯೮೦ರ ANILCA ಕಾಯಿದೆ ಅಲಾಸ್ಕಾದ ಬುಡಕಟ್ಟುಗಳಿಗೆ ಅಲ್ಲಿನ ಸಂಪನ್ಮೂಲಗಳನ್ನು ತಮ್ಮ ನಿತ್ಯದ ಬಳಕೆಗೆ ಬಳಸಿಕೊಳ್ಳಲು, ಆಹಾರ, ಬಟ್ಟೆ, ವಸತಿ, ಸಲಕರಣೆ, ಉರುವಲು, ಸಾರಿಗೆ, ಕರಕುಶಲ ವಸ್ತುಗಳು, ಪಾರಂಪರಿಕ ವ್ಯಾಪಾರ ಮತ್ತು ಸಾಟಿಪದ್ಧತಿಗಳಿಗಾಗಿ ಬಳಸಿಕೊಳ್ಳುವ ಅಧಿಕಾರ ನೀಡಿದೆ.

ನಮ್ಮಲ್ಲಿಯಾದರೋ ಬುಡಕಟ್ಟುಗಳು ಪಾರಂಪರಿಕ ಕಸುಬಿಗಾಗಿ ಬಿದಿರನ್ನಾಗಲೀ, ಉರುವಲಿಗಾಗಿ ಕಟ್ಟಿಗೆ ಕಡಿಯುವುದು ಕೂಡಾ ಅಪರಾಧ, ಹೊಟ್ಟೆಪಾಡಿಗಾಗಿ ಬೇಟೆಯಾಡುವುದು ಮಹಾಪರಾಧ. ೧೯೯೪ರ ಬುಡಕಟ್ಟು ಸ್ವಯಂಆಡಳಿತ ಕಾಯಿದೆ ಸಹನಿರ್ವಹಣೆಗೆ ಅಧಿಕಾರ ಹಾಗೂ ಅವಕಾಶ ನೀಡಿದೆ(The tribal self government Act–೧೯೯೪). ಅರಣ್ಯ ಇಲಾಖೆ(USFS)ಯು **ನೆಜ್ ಪೆಸ್ಸ್** ಬುಡಕಟ್ಟಿನ ನಡುವೆ ಆದ ತಿಳುವಳಿಕೆ ಒಡಂಬಡಿಕೆಯಂತೆ ಆ ಬುಡಕಟ್ಟಿನ ಸದಸ್ಯರಿಗೆ Reserved rightsನ ಅಡಿಯಲ್ಲಿ ಯಾವುದೇ ಪ್ರವೇಶ ಶುಲ್ಕ ಅಥವಾ ಮನೋರಂಜನಾ ತೆರಿಗೆಗಳನ್ನು ರಾಷ್ಟ್ರೀಯ ಅರಣ್ಯಗಳಲ್ಲಿ ಹಾಕುವಂತಿಲ್ಲ. ಇದೇ ಸಮಯದಲ್ಲಿ ಅರಣ್ಯ ಇಲಾಖೆ ನೆಜ್ ಪೆಸ್ಸ್ ಬುಡಕಟ್ಟಿನ ಅರಣ್ಯ ಹಾಗೂ ವನ್ಯಜೀವಿ ಜ್ಞಾನವನ್ನು ಬಳಸಿಕೊಂಡು ಬುಡಕಟ್ಟಿಗಳಿಗೆ ವಿಶೇಷ ಪ್ರಾಮುಖ್ಯತೆ ಇರುವ ತೋಳ ಮುಂತಾದ ಅಳಿವಿನಂಚಿನ ಪ್ರಾಣಿಗಳನ್ನು ಸಂರಕ್ಷಿಸುವಲ್ಲಿ ಯಶಸ್ವಿಯಾಗಿದೆ. ಅಮೆರಿಕನ್ನರು ಬುಡಕಟ್ಟುಗಳಿಗೆ ನೀಡಿರುವ ಹಕ್ಕು, ಅಧಿಕಾರ, ಸೌಲಭ್ಯಗಳು ಇಲ್ಲಿಗೇ ಮುಗಿಯಲಿಲ್ಲ. ಬುಡಕಟ್ಟಿನ ಸಮಿತಿಗಳಿಗೆ ಕೆಲವು ಭೂಮಿಗಳನ್ನು ವನ್ಯಜೀವಿ ವಲಯವೆಂದು ಘೋಷಿಸುವ ಅಧಿಕಾರವೂ ಇದೆ. ೧೯೮೨ರ ಮಿಷನ್ ಮೌಂಟೆನ್ ವೈಲ್ಡರ್‌ನೆಸ್ ಸುಗ್ರೀವಾಜ್ಞೆ ಪ್ರಕಾರ ೯೨,೦೦೦ ಎಕರೆ ಭೂಮಿಯನ್ನು ವನ್ಯಜೀವಿ ವಲಯವೆಂದು ಘೋಷಿಸಲಾಯಿತು.

Wilderness is hereby recognized as an area where the earth and its community of life are untouched by Man, where man himself is a visitor who does not remain and further, it is an area of undeveloped tribal land, retaining its primeval character and influence, without permanent improvements or human habitation, so as to preserve natural conditions.

Wilderness has played a paramount role in shaping the character of the people and the culture of the tribes. It is the essence of traditional Indian Religion and has served the Indian people of these tribes as a place to hunt, as a place to gather medicinal herbs and roots, as a vision seeking ground, as a sanctuary, and in countless other ways for thousands of years. Because, maintaining an enduring resource of wilderness is vitally important to the tribes and the perpetuation of their culture.

Except as necessary to meet the minimum requirements for administration of the area or health, emergency and safety of persons within the area. There shall be no temporary road, no use of motor vehicles, motor boats, no landing of aircraft, or other form of mechanical transport and no structure or installation within the area.

ಈ ರೀತಿಯ ಭಾವನೆಗಳು, ಗೌರವ, ಹಕ್ಕು, ಅಧಿಕಾರಗಳು ಬುಡಕಟ್ಟುಗಳಿಗೆ ಭಾರತದಲ್ಲಿ ದೊರೆಯಲು ಸಾಧ್ಯವೇ? ಇರುವ ಕಾನೂನುಗಳ ಅರಿವೇ ಇಲ್ಲದಿರುವ ಬುಡಕಟ್ಟುಗಳಿಗೆ ಹೊಸ ಅಧಿಕಾರ, ಗೌರವ ಕೊಡುವ ಕಾನೂನುಗಳನ್ನು ತರಲು ಹೋರಾಡುವವರಾರು? ಅಮೆರಿಕನ್ನರು

ಮೂಲನಿವಾಸಿಗಳನ್ನು ಅವರ ಸ್ಥಳಗಳನ್ನು ನಿರ್ದಾಕ್ಷಿಣ್ಯವಾಗಿ ವಶಪಡಿಸಿಕೊಂಡು ಈಗಿನ ನಾಗರಿಕತೆ ಹೆಸರಿನ ಅನಾಗರಿಕ ಸಮಾಜವನ್ನು ಸೃಷ್ಟಿಸಿದ ರಾಕ್ಷಸರು, ಎಂದು ಮಾತ್ರ ತಿಳಿದುಕೊಂಡಿದ್ದ ನನಗೆ ಅಲ್ಲಿನ ಸಂಸತ್, ನ್ಯಾಯವಾದಿಗಳು, ನ್ಯಾಯಾಧೀಶರು, ಬುಡಕಟ್ಟು ಜನಾಂಗದ ಪ್ರತಿನಿಧಿಗಳು ಎಷ್ಟು ಮಾನವೀಯವಾಗಿ, ಪ್ರಬುದ್ಧವಾಗಿ ಮತ್ತು ವಾಸ್ತವಿಕವಾಗಿ ಯೋಚಿಸಿ ಈ ರೀತಿಯ ಕಾನೂನುಗಳನ್ನು ಮಾಡಿದ್ದಾರೆ, ಜಾರಿಗೊಳಿಸಿದ್ದಾರೆ ಹಾಗೂ ಬುಡಕಟ್ಟುಗಳಿಗೂ ಅದರ ಅರಿವು ಮೂಡಿಸಿದ್ದಾರೆ ಎಂದು ತಿಳಿದು ಆಶ್ಚರ್ಯವಾಯಿತಲ್ಲದೆ ಅದನ್ನು ಇನ್ನೂ ಉಳಿಸಿಕೊಂಡಿರುವ ಬುಡಕಟ್ಟುಗಳ ಬಗೆಗೆ ಹೆಮ್ಮೆಯಾಯಿತು.

ಬುಡಕಟ್ಟು ಅಭಿವೃದ್ಧಿಯ ಸಮಸ್ಯೆಗಳು

ನಮ್ಮೆದುರಿಗಿರುವ ಬುಡಕಟ್ಟು ಅಭಿವೃದ್ಧಿಯ ಪ್ರಶ್ನೆ ಬಿಡಿಸಲಾಗದ ಯಕ್ಷಪ್ರಶ್ನೆಯಾಗಿಯೇ ಉಳಿದಿದೆ. ಅಭಿವೃದ್ಧಿ ಬೇಕೋ? ಬುಡಕಟ್ಟು ಅಭಿವೃದ್ಧಿ ಬೇಕೋ? ಎಂಬ ಪ್ರಶ್ನೆಗೆ ಒಂದೇ ಉತ್ತರವಿಲ್ಲ. ಬೇಕಿದ್ದರೆ ಗಮನಿಸಿ. ನಮ್ಮ ದೇಶದ ಭೂಪಟವನ್ನು ತೆಗೆದುಕೊಂಡು ದೇಶದಲ್ಲಿ ಗಣಿ ಸಂಪತ್ತು ಎಲ್ಲೆಲ್ಲಿದೆ? ಜೀವ ವೈವಿಧ್ಯ ಎಲ್ಲೆಲ್ಲಿದೆ? ವನ್ಯ ಸಂಪತ್ತು ಇನ್ನೂ ಎಲ್ಲಿ ಉಳಿದುಕೊಂಡಿದೆ? ಪರಿಸರ ಮಾಲಿನ್ಯ ಎಲ್ಲಿ ಕಡಿಮೆ ಇದೆ? ಜಲಮೂಲಗಳು ಎಲ್ಲಿವೆ? ಗಿರಿಜನರು ಎಲ್ಲಿ ನೆಲೆಸಿದ್ದಾರೆ? ಔಷಧಿ ಸಸ್ಯಗಳು ಎಲ್ಲಿ ಹೆಚ್ಚಾಗಿವೆ? ಎಂಬುದನ್ನೆಲ್ಲಾ ಗುರುತು ಹಾಕುತ್ತಾ ಹೋಗಿ. ಆಶ್ಚರ್ಯವೆಂದರೆ ಇವೆಲ್ಲವೂ ಜೊತೆಜೊತೆಯಾಗಿಯೇ ಇರುತ್ತವೆ ಮತ್ತು ಒಂದು ನಾಶವಾದರೆ ಉಳಿದವುಗಳೂ ನಾಶವಾಗುತ್ತವೆ.

'ಆಧುನಿಕ ಅಭಿವೃದ್ಧಿ ಮೀಮಾಂಸೆ ಎರಡು ಮುಖ್ಯಧಾರೆಗಳಲ್ಲಿ ಬೆಳೆದುಕೊಂಡು ಬಂದಿದೆ. ಮೊದಲನೆಯದು, ಬಂಡವಾಳಶಾಹಿ ವಿಚಾರ ಪ್ರಣಾಳಿಕೆ ಮತ್ತು ಎರಡನೆಯದು ಮಾರ್ಕ್ಸ್‌ವಾದಿ ವಿಚಾರ ಪ್ರಣಾಳಿಕೆ. ಇವೆರಡೂ ವಿಚಾರಧಾರೆಗಳು ಮೂಲತಃ 'ಅಖಂಡವಾದಿ' ಹಾಗೂ 'ರಾಷ್ಟ್ರೀಯ ವಾದಿ' ವಿಚಾರಧಾರೆಗಳಾಗಿವೆ. ರಾಷ್ಟ್ರಪ್ರಭುತ್ವದ ನೆರಳಲ್ಲಿ ಇವೆರಡೂ ಬೆಳೆದುಬಂದಿವೆ. ಈ ಕಾರಣದಿಂದಾಗಿ ಅಲ್ಲಿ ಬುಡಕಟ್ಟುಗಳ ಅನನ್ಯತೆ ಮತ್ತು ಸ್ವಾಯತ್ತತೆ ಹಾಗೂ ಕುಲಸಂಬಂಧಗಳಿಗೆ ಅವಕಾಶವಿಲ್ಲದಂತಾಗಿದೆ. ಎರಡೂ ವಿಚಾರಧಾರೆಗಳಲ್ಲಿ ಬುಡಕಟ್ಟುಗಳನ್ನು 'ಆಧುನಿಕಪೂರ್ವ' ಹಂತವೆಂದು ಪರಿಗಣಿಸಲಾಗಿದೆ. ಮಾರ್ಕ್ಸ್‌ವಾದಿಗಳಿಗೆ 'ಸಾಮಾಜಿಕ ವರ್ಗ' ಮುಖ್ಯವಾಗಿದ್ದರೆ, ಬಂಡವಾಳಶಾಹಿ ವ್ಯವಸ್ಥೆಗೆ 'ಶ್ರಮ ಮತ್ತು ಬಂಡವಾಳ' ಮುಖ್ಯವಾಗಿ ಅಲ್ಲಿ ಬುಡಕಟ್ಟುಗಳಿಗೆ ಅಸ್ತಿತ್ವವೇ ಇಲ್ಲವಾಗಿದೆ. ಆದರೆ ನಮ್ಮೆದುರಿಗಿರುವ ನಗ್ನಸತ್ಯವೆಂದರೆ ರಾಷ್ಟ್ರಪ್ರಭುತ್ವಗಳಿಗೆ ಬುಡಕಟ್ಟುಗಳನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಗಿಲ್ಲ. ಹೀಗಾಗಿ ಬುಡಕಟ್ಟು ಮತ್ತು ಅಭಿವೃದ್ಧಿಗಳ ನಡುವಿನ ಸಂಬಂಧ ಸಂಘಟನಾತ್ಮಕವಾದುದಾಗಿದೆ. ಈ ಘರ್ಷಣೆಗೆ ಹಲವಾರು ಕಾರಣಗಳಿದ್ದು, ಮೊದಲನೆಯದು ರಾಷ್ಟ್ರಪ್ರಭುತ್ವದ 'ಜೀರ್ಣೋಭವ' ಸ್ವರೂಪ. ಅಲ್ಲಿ ಭಿನ್ನತೆಗೆ, ಭಿನ್ನ ಭಿನ್ನ ಸಂಸ್ಕೃತಿಗಳ ಸಹಜೀವನಕ್ಕೆ ಅವಕಾಶವಿಲ್ಲ, ಅಲ್ಲಿ ಭಿನ್ನತೆಯನ್ನು, ವಿಶಿಷ್ಟತೆಯನ್ನು ವಿಚ್ಛಿದ್ರಕಾರಿ ಹಾಗೂ ರಾಷ್ಟ್ರವಿರೋಧಿ ಶಕ್ತಿಯೆಂದು ಪರಿಗಣಿಸಿ ಹತ್ತಿಕ್ಕಲಾಗುತ್ತದೆ. ಘರ್ಷಣೆಗೆ ಕಾರಣವಾದ ಮತ್ತೊಂದು ಸಂಗತಿ ಎಂದರೆ

ಅಭಿವೃದ್ಧಿಯ 'ಏಕರೂಪೀಕರಣ' ಸ್ವರೂಪ. ಒಂದು ರಾಷ್ಟ್ರ, ಒಂದು ಬಾಷೆ, ಒಂದು ಸಂಸ್ಕೃತಿ, ಒಂದು ಧರ್ಮ, ಒಂದು ಚರಿತ್ರೆ ಇತ್ಯಾದಿಗಳ ಹಿನ್ನೆಲೆಯಲ್ಲಿ ಬುಡಕಟ್ಟುಗಳ 'ಅನೇಕತನವು' ರಾಷ್ಟ್ರೀಯತೆಗೆ ಮಾರಕವೆಂದು ಭಾವಿಸಲಾಗಿದೆ. ಅಭಿವೃದ್ಧಿಯ ಸಾಧನಗಳಾದ ನಗರೀಕರಣ, ಕೈಗಾರಿಕೀಕರಣ, ಶ್ರಮವಿಭಜನೆ, ಆಡಳಿತೀಕರಣ ಹಾಗೂ ವಾಣಿಜ್ಯೀಕರಣ ಪ್ರಕ್ರಿಯೆಗಳಿಂದಾಗಿ ಬುಡಕಟ್ಟೊಂದು ಬುಡಕಟ್ಟಾಗಿ ಉಳಿಯಲು ಸಾಧ್ಯವಿಲ್ಲದಂತಾಗಿದೆ.

ಸಂಘರ್ಷಕ್ಕೆ ಕಾರಣವಾದ ಮೂರನೇ ಸಂಗತಿಯೆಂದರೆ ಆಧುನಿಕ ಜ್ಞಾನ ಶಿಸ್ತುಗಳ 'ಯಾಜಮಾನ್ಯ' ಪ್ರವೃತ್ತಿ. ಅಭಿವೃದ್ಧಿ ಆಧುನೀಕರಣ ಮತ್ತು ರಾಷ್ಟ್ರ ಪ್ರಭುತ್ವಗಳೆಲ್ಲಾ ಯಜಮಾನವಾದಿ ಮಹಾ ಸಂಕಥನಗಳಾಗಿವೆ. ಇದರಿಂದಾಗಿ ಬುಡಕಟ್ಟು ಮತ್ತು ಅಭಿವೃದ್ಧಿಗಳ ನಡುವಿನ ಸಂಬಂಧ ಶ್ರೇಣೀಕೃತ ವಾಗುವ ಅಪಾಯವಿದೆ. ಚರಿತ್ರೆಯುದ್ದಕ್ಕೂ ರಾಷ್ಟ್ರೀಯತೆಯ ಹೆಸರಿನಲ್ಲಿ ವಿಶಿಷ್ಟ ಜನಸಮೂಹಗಳನ್ನು ಸಾಮೂಹಿಕವಾಗಿ ನಾಶ ಮಾಡಿದ ಉದಾಹರಣೆಗಳು ಸಾಕಷ್ಟಿವೆ. ಅದನ್ನು Genocide ಎಂದೂ ಅಮಾನವೀಯವೆಂದೂ ಪರಿಗಣಿಸಲಾಗುತ್ತಿದೆ. ಹಿಟ್ಲರ್, ಸ್ಟಾಲಿನ್ ಹಾಗೂ ಸದ್ದಾಂ ಹುಸೇನ್‌ರನ್ನು ಕುಖ್ಯಾತಿಗೊಳಪಡಿಸಿದ್ದು ಇದೇ ಜಿನೋಸೈಡ್‌ಗಳು. ಆದರೆ ಬುಡಕಟ್ಟುಗಳನ್ನು ಸಾಮೂಹಿಕವಾಗಿ ನಾಶ ಮಾಡದೆ, ಅಭಿವೃದ್ಧಿ ಹೆಸರಿನಲ್ಲಿ ಅವರ ಅನನ್ಯತೆ–ಸ್ವಾಯತ್ತತೆ ಹಾಗೂ ಸಂಸ್ಕೃತಿಯನ್ನು ನಾಶಗೊಳಿಸುವುದನ್ನು ವಿಶ್ವ ಸಮುದಾಯ ಇನ್ನೂ ಜನಾಂಗೀಯ ಹಲ್ಲೆಯಂತಹ ಘೋರ ಅಪರಾಧ ಎಂದು ಒಪ್ಪಿಕೊಂಡಿಲ್ಲ. ಹೀಗಾಗಿ ಅಭಿವೃದ್ಧಿ ಎನ್ನುವುದು ಬುಡಕಟ್ಟುಗಳ ಪಾಲಿಗೆ ಅಮೃತ ಸಿಂಚನವಾಗುವುದರ ಬದಲು ವಿಷಪ್ರಾಶನವಾಗಿಬಿಟ್ಟಿದೆ.'[೧೦] 'ಗಿರಿಜನರು ಹಿಂದೆ 'ಗಿರಿ' ಜನರಾಗಿರಲಿಲ್ಲ. ನಮ್ಮ ನಿಮ್ಮ ಪೂರ್ವಜರಂತೆ ಅವರೂ ನದಿ ತೀರದಲ್ಲೋ, ಜಲಸಿರಿಯುಳ್ಳ ಮೈದಾನಗಳಲ್ಲಿಯೋ ಗೆಡ್ಡೆ ಗೆಣಸು ತಿನ್ನುತ್ತಾ, ಬೇಟೆಯಾಡುತ್ತಾ ಹಾಯಾಗಿ, ಸರಳವಾಗಿ ಬದುಕಿದ್ದವರು. ಮುಂದೆ ನಾಗರಿಕತೆ ಕಲಿತ ಪ್ರಬಲ ಪ್ರಲೋಭನೆಯ ಜನರು ಕೃಷಿಗಾಗಿ, ಗಣಿಗಾರಿಕೆಗಾಗಿ ನೆಲ ವಿಸ್ತರಣೆ ಮಾಡುತ್ತಾ ಬಂದು ಬುಡಕಟ್ಟು ಜನರ ಪ್ರದೇಶಗಳಲ್ಲಿ ತಳವೂರಿದರು. ಅವರನ್ನು ಎದುರಿಸಲು ಸೂಕ್ತ ಶಸ್ತ್ರಾಸ್ತ್ರಗಳಿಲ್ಲದ, ಯಂತ್ರ ತಂತ್ರಗಳಿಲ್ಲದ ಮುಗ್ಧ ಮೂಲನಿವಾಸಿಗಳು ಹಿಂದೆ ಹಿಂದೆ ಸರಿಯುತ್ತಾ ಗುಡ್ಡಗಳನ್ನೇರಿದರು ಇಲ್ಲವೇ ಘನಘೋರ ಅರಣ್ಯದೊಳಗೆ ಹೋಗಿ ಅಲ್ಲೇ ಹೇಗೋ ಬದುಕುವುದನ್ನು ಕಲಿತು 'ಗಿರಿ'ಜನ ಅಥವಾ ವನವಾಸಿಗಳಾಗಬೇಕಾಯಿತು. ಇಷ್ಟಾದರೂ ಅವರನ್ನು ಅವರ ಪಾಡಿಗೆ ಶಾಂತವಾಗಿರಲು ಬಿಡದೆ ನಾಗರಿಕ ಮಾನವ ಅಲ್ಲಿಗೂ ನುಗ್ಗಿ ತನ್ನ ಬುಲ್ಡೋಜರ್, ಡೈನಮೈಟ್‌ಗಳನ್ನು ತಂದು ಗಣಿಗಾಗಿ ಅರಣ್ಯವನ್ನು ಸವರಿ, ವಿದ್ಯುತ್‌ಗಾಗಿ ನದಿಗಳನ್ನು ನಿಲ್ಲಿಸಿ, ಅರಣ್ಯಗಳನ್ನು ಮುಳುಗಿಸಿ ಗಿರಿಜನರನ್ನು ನಿರಾಶ್ರಿತರಾಗಿಸುತ್ತಿದ್ದಾರೆ.'[೧೧]

ಹೀಗಾಗಿ ಅರ್ಥಿಕಾಭಿವೃದ್ಧಿ ನಮ್ಮ ಹಕ್ಕು ಹೇಗೋ ಬುಡಕಟ್ಟು ಅನನ್ಯತೆ ಹಾಗೂ ಯೋಜನೆಗಳ ನೆರವು ಪಡೆಯುವುದು ಬುಡಕಟ್ಟುಗಳ ಹಕ್ಕು. ಆದರೆ ನಾವು ನಮ್ಮ ಹಕ್ಕನ್ನು ಮುಂದೆ ಮಾಡಿ ಅವರ ಹಕ್ಕುಗಳನ್ನು ದಮನ ಮಾಡುತ್ತಿದ್ದೇವೆ. ಉತ್ತರಕನ್ನಡ ಜಿಲ್ಲೆ ದೇಶದಲ್ಲಿಯೇ ಅತ್ಯಂತ

ವಿಶಾಲ ನೈಸರ್ಗಿಕ ಹಾಗೂ ಬುಡಕಟ್ಟುಗಳಿಂದ ಸಮೃದ್ಧವಾಗಿದೆ. ಶತಶತಮಾನಗಳಿಂದ ಇಲ್ಲಿನ ಆದಿವಾಸಿಗಳು ಪ್ರತ್ಯೇಕವಾಗಿ ತಮ್ಮದೇ ಆದ ಸಂಸ್ಕೃತಿ, ಆರ್ಥಿಕ ವ್ಯವಸ್ಥೆ, ಆಚಾರ-ವಿಚಾರಗಳನ್ನು ಹೊಂದಿದ್ದಾರೆ. ಆದರೂ ಇವರು ಅತ್ಯಂತ ಬಡತನದಲ್ಲಿ ಬದುಕುತ್ತಿದ್ದಾರೆ. ದೇಶದ ಇತರ ಭಾಗಗಳಿಗೆ ದೊರಕುತ್ತಿರುವ ಸವಲತ್ತುಗಳು ಈ ಭಾಗಕ್ಕೆ ದೊರಕದೆ ನಿರ್ಲಕ್ಷ್ಯಕ್ಕೆ ಗುರಿಯಾಗಿದೆ. ಸಾಮಾಜಿಕ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳಿಂದ ವಂಚಿತರಾಗಿದ್ದಾರೆ. ಅಲ್ಲದೇ ಅಭಿವೃದ್ಧಿ ಯೋಜನೆಗಳಿಂದ ತಮ್ಮ ಮೂಲನೆಲೆ ಕಳೆದುಕೊಂಡು ಸಂಕಷ್ಟದಲ್ಲಿದ್ದಾರೆ. ಸ್ವಾತಂತ್ರ್ಯಾನಂತರ ದೇಶ ಕಂಡ ಕೈಗಾರಿಕೀಕರಣ, ನಗರೀಕರಣ ಇತ್ಯಾದಿಗಳು ಬುಡಕಟ್ಟು ಪ್ರದೇಶಗಳಲ್ಲಿ ಹಲವಾರು ಬದಲಾವಣೆಗಳನ್ನು ತಂದು ರಸ್ತೆ, ಅಣೆಕಟ್ಟು, ಕಾರ್ಖಾನೆಗಳು ಕಾಲಿಟ್ಟವು. ಇದರಿಂದಾಗಿ ತಮ್ಮ ಮೂಲನಿವಾಸದಲ್ಲೇ ಅತಂತ್ರರಾದ ಆದಿವಾಸಿಗಳು ಬೇರೆಡೆಗೆ ವಲಸೆ ಹೋಗಬೇಕಾಯಿತು. ಹೀಗೆ ತಮ್ಮ ಮೂಲ ಬೇರುಗಳನ್ನು ಕತ್ತರಿಸಿಕೊಂಡು ಮತ್ತೊಂದೆಡೆ ಬೇರೂರುವಾಗ ಪ್ರಕೃತಿಯೊಂದಿಗೆ ತಳುಕು ಹಾಕಿಕೊಂಡಿದ್ದ ಇವರ ಜೀವನೋಪಾಯ ವಿಧಾನಗಳು, ತಲೆಮಾರುಗಳಿಂದ ಬಂದ ಅವಿನಾಭಾವ ಸಂಬಂಧಗಳು ಸಡಿಲಾಗತೊಡಗಿದವು. ಅವರ ಸಂಪ್ರದಾಯ, ಆಚರಣೆ, ನ್ಯಾಯಪದ್ಧತಿ ಇತ್ಯಾದಿಗಳು ಮೂಲೆಗುಂಪಾಗಿ ಮಹತ್ವ ಕಳೆದುಕೊಂಡವು. ಅವರ ಸರಳ ಸುಂದರ ಜೀವನಕ್ರಮ ಮತ್ತು ಸೂಕ್ಷ್ಮ ಆರ್ಥಿಕ-ಸಾಮಾಜಿಕ ವ್ಯವಸ್ಥೆಗಳು ಏರುಪೇರಾದವು. ವಿಪರ್ಯಾಸವೆಂದರೆ ಸರ್ಕಾರದ ಹಾಗೂ ಬಂಡವಾಳಶಾಹಿಗಳಿಂದಾಗಿಯೇ ಶೋಷಣೆಗಳೊಳಗಾದ ಈ ಪರದೇಶಿಗಳ ಕೂಗು ಸರ್ಕಾರದ ಕಿವುಡು ಕಿವಿಗಳ ಮೇಲೆ ಬೀಳದೆ ಅಕ್ಷರಶಃ ಅರಣ್ಯರೋಧನವಾಗಿದೆ. ಪ್ರತಿಭಟಿಸಿದರೆ ಅಧಿಕಾರಶಾಹಿ ಹಾಗೂ ಬಂಡವಾಳಶಾಹಿಗಳಿಂದ ದಬ್ಬಾಳಿಕೆಗೊಳಗಾಗಿ ಜೈಲು ಸೇರುವ ಪರಿಸ್ಥಿತಿಗಳಿಂದ ರೋಸಿಹೋಗಿ ಇಂದು ನಿರಾಸೆಯ-ಹತಾಶೆಯ ಸುಳಿಯಲ್ಲಿ ಸಿಲುಕಿಕೊಂಡಿದ್ದಾರೆ.

ವೆರಿಯರ್ ಎಲ್ವಿನ್ ಅವರು ಹೇಳುವಂತೆ 'ಬುಡಕಟ್ಟುಗಳೊಂದಿಗೆ ವ್ಯವಹರಿಸುವಾಗ ನಾವು ವಿಶಿಷ್ಟವಾದ ಪ್ರೀತಿ ಮನೋಧರ್ಮದಿಂದ ವರ್ತಿಸಬೇಕಾಗುತ್ತದೆ. ನಾವು ನಾಗರಿಕತೆಯೆಂದು ಕರೆಯುವ ಹಠಾತ್ ಒಳದಾರಿಗಳಿಂದ ಅವರು ಗೊಂದಲ, ಆತಂಕಕ್ಕೊಳಗಾಗುತ್ತಾರೆ. ಕೆಲವೊಮ್ಮೆ ಅವರು ಸಹಜ ಸಂದೇಹಗ್ರಸ್ತರೂ ನಮ್ಮ ತಾಂತ್ರಿಕ ಮೇಲ್ಮೆಯಿಂದ ದಿಗ್ಭ್ರಾಂತರೂ ಆಗುತ್ತಾರೆ. ಕೆಲವೊಮ್ಮೆ ಅವರ ಯೋಗಕ್ಷೇಮಕ್ಕಾಗಿ ನಾವು ಕೈಗೊಳ್ಳುವ ಅತ್ಯಂತ ಸದುದ್ದೇಶಪ್ರರಿತ ಕಾರ್ಯಕ್ರಮಗಳನ್ನು ಕೂಡ ವಿರೋಧಿಸುತ್ತಾರೆ. ನಮ್ಮ ಯೋಜನೆಯ ಯಶಸ್ಸು ನಾವು ಅವರನ್ನು ನೋಡುವ ಮನೋಧರ್ಮದ ಮೇಲೆ ನಿಂತಿರುತ್ತದೆ. ಅವರ ಅಭ್ಯುದಯಕ್ಕಾಗಿ ನಾವು ಭಾರಿ ಮೊತ್ತದ ಹಣವನ್ನು ವ್ಯಯಿಸುತ್ತಿದ್ದೇವೆ. ಅಧಿಕಾರಿಗಳು ಹಾಗೂ ಅವರ ನಡುವೆ ಇರುವ ಸಾಮಾಜಿಕ ಕಾರ್ಯಕರ್ತರು ಅನುಗ್ರಹ ಅಥವಾ ಆಶ್ರಯದ ಮನೋಭಾವವನ್ನು ಬಿಟ್ಟು ಪ್ರೀತಿಯ ಮನೋಭಾವ ತುಂಬಿದವರಾದರೆ ಅಧುನಿಕ ಜಗತ್ತಿನ ಒತ್ತಡಗಳಿಗೆ ತ್ವರಿತವಾಗಿ ಪ್ರವೇಶಗೊಳ್ಳುತ್ತಿರುವ ಆದಿಮ ಜನಪದಕ್ಕೆ ಮಾನಸಿಕ ಹಾನಿಯನ್ನುಂಟು ಮಾಡುವ ಅಪಾಯದಿಂದ ನಾವು ಪಾರಾಗುತ್ತೇವೆ. ವಿನಯ ಪ್ರೇಮದ ಚಿಹ್ನೆ. ಬುಡಕಟ್ಟು ಜನರೊಡನೆ ಕೆಲಸ ಮಾಡುವ ಯಾರೇ ಆಗಲೀ ಪ್ರಾಮಾಣಿಕರಾಗಿ, ವಿನಯಶೀಲರಾಗಿರಬೇಕು.

ಅತ್ಯಂತ ಮುಖ್ಯವಾದ ಅಧಿಕಾರಿ ಕೂಡ ಬುಡಕಟ್ಟು ಸಹೋದರರನ್ನು ತನ್ನಂತೆ, ತನಗೆ ಸಮಾನರಂತೆ ಕಾಣಬೇಕು. ಯಾವುದೇ ಮೇಲರಿಮೆ ಅಥವಾ ಹೆಮ್ಮೆ ಅಭಿವೃದ್ಧಿಯ ಲಾಭಗಳನ್ನು ಕೂಡಲೇ ಹಾಳು ಮಾಡುತ್ತದೆ... ಅಭಿವೃದ್ಧಿಯ ಶುಷ್ಕ ಅಸ್ಥಿಗಳು ಪ್ರೀತಿಯಿಂದ ಸ್ಫೂರ್ತಿಗೊಂಡು ಪ್ರಜ್ವಲಿಸುವಂತಾದಾಗ, ಬುಡಕಟ್ಟು ಜನ ಪ್ರತಿಕ್ರಿಯಿಸುತ್ತಾರೆ. ಅವರು ಬದಲಾವಣೆಯನ್ನು ಬಯಸುತ್ತಾರೆ. ಅವರಿಗೆ ಬದಲಾವಣೆ ಅನಿವಾರ್ಯ. ಅವರು ಉಜ್ವಲತರ ಭವಿಷ್ಯದತ್ತ ಮುನ್ನಡೆಯುವುದು ಪ್ರೇಮಪಥದಲ್ಲಿ."[೮]

ಇವರ ಸಮಸ್ಯೆಗಳು ಹಲವಾರಿದ್ದು ಸೂಕ್ತ ಪರಿಹಾರ ಮಾತ್ರ ಮರೀಚಿಕೆಯಾಗಿದೆ. ಆದಿವಾಸಿಗಳ ಮುಖ್ಯ ಸಮಸ್ಯೆಗಳೆಂದರೆ, ಗಾಂಧೀಜಿ ಹೇಳುವಂತೆ 'ಬುಡಕಟ್ಟುಗಳಿಗಿರುವ ಅತಿದೊಡ್ಡ ಅಪಾಯ ಸಂಸ್ಕೃತಿ ವಿನಾಶದ್ದಲ್ಲ, ಅದು ಆರ್ಥಿಕ ಶೋಷಣೆಯದ್ದು'. ಭೂ ಅನ್ಯಾಕ್ರಾಂತತೆ, ಋಣಭಾಧೆ, ಎಂ.ಎಫ್.ಪಿ.ಗಳ ಮೇಲೆ ಸರ್ಕಾರದ ಏಕಸ್ವಾಮ್ಯತ್ವ, ೨೦೦೬ರ ಅರಣ್ಯ ಹಕ್ಕು ಕಾಯ್ದೆಯನ್ನು ಸರಿಯಾಗಿ ಜಾರಿಗೆ ತರದೆ ಇರುವುದು. ಅಭಿವೃದ್ಧಿ ಕಾರ್ಯಗಳಿಗಾಗಿ ಮೂಲನಿವಾಸಿಗಳನ್ನು ಒತ್ತಾಯದಿಂದ ಗುಳೆ ಎಬ್ಬಿಸುವುದು ಮತ್ತು ಅವರಿಗೆ ಸೂಕ್ತ ಪುನರ್ವಸತಿ ಕಲ್ಪಿಸದೆ ಇರುವುದು. ಸ್ಥಿರ ಬೇಸಾಯ ಪದ್ಧತಿ, ಸರ್ಕಾರದಿಂದ ಮಂಜೂರಾದ ಹಣವನ್ನು ಸದ್ಬಳಕೆ ಮಾಡದಿರುವುದು ಮತ್ತು ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳು ಅಗತ್ಯವಿರುವವರಿಗೆ ತಲುಪದೆ ಇರುವುದು. ಈ ಎಲ್ಲಾ ಸಮಸ್ಯೆಗಳು ಪರಿಸರ, ಅರಣ್ಯ, ಪಂಚಾಯತ್‌ರಾಜ್, ಇತ್ಯಾದಿ ವಿವಿಧ ಖಾತೆಗಳ ವ್ಯಾಪ್ತಿಗೆ ಬರುತ್ತಿದ್ದು ಅವುಗಳು ಈವರೆಗೆ ಸೂಕ್ತ ಗಮನ ಹರಿಸಿಲ್ಲ. ಬುಡಕಟ್ಟು ವ್ಯವಹಾರಗಳ ಖಾತೆ ಬುಡಕಟ್ಟು ಜನರ ಅಭಿವೃದ್ಧಿಗೆ ಯಾವ ವಿಶೇಷ ಕಾಳಜಿಯನ್ನೂ ವಹಿಸುತ್ತಿಲ್ಲ. ಸರ್ಕಾರದಿಂದ ಪ್ರತಿ ವರ್ಷ ಮಂಜೂರಾಗುವ ಹಣವನ್ನು ಕೆಲವೇ ಕೆಲವು ಯೋಜನೆಗಳಲ್ಲಿ ತೊಡಗಿಸಿ ಸುಮ್ಮನಾಗುತ್ತದೆ. ಉದಾ: ಕೆಲವು ಸರ್ಕಾರೇತರ ಸಂಸ್ಥೆಗಳಿಗೆ ದೇಣಿಗೆ ನೀಡುವುದು, ವಿದ್ಯಾರ್ಥಿವೇತನ ಕೊಡುವುದು, ಇಷ್ಟಕ್ಕೇ ತನ್ನ ಚಟುವಟಿಕೆಗಳನ್ನು ಸಿಮಿತಗೊಳಿಸಿದೆ. ಇತರ ಖಾತೆಗಳ ಮೇಲೆ ಒತ್ತಾಯ ಹೇರಿ, ಪ್ರಭಾವ ಬೀರಿ ಅವರಿಂದ ಕೆಲಸ ಮಾಡಿಸುವ ಜವಾಬ್ದಾರಿಯನ್ನು ವ್ಯವಸ್ಥೆ ಹೊತ್ತಿಲ್ಲ. ಬುಡಕಟ್ಟು ಅಭಿವೃದ್ದಿಗಾಗಿ ನೀಡಿದ ಸರ್ಕಾರದ ಹಣವನ್ನು ಅಧಿಕಾರಿಗಳು, ಇಲಾಖೆಗಳು ಖರ್ಚು ಮಾಡದೆ ಹಿಂದಕ್ಕೆ ಕಳಿಸಿದ ಉದಾಹರಣೆಗಳೂ ಸಾಕಷ್ಟಿವೆ. ಇತ್ತೀಚೆಗೆ ಯೋಜನಾ ಪತ್ರಿಕೆಯಲ್ಲಿ ಬಂದ ಲೇಖನ ಈ ಬಗ್ಗೆ ಬೆಳಕು ಚಲ್ಲುತ್ತದೆ.

'ಖರ್ಚಾಗದೇ ಉಳಿದಿರುವ ಬಜೆಟ್ ಹಣ: ದೌರ್ಭಾಗ್ಯದ ಸಂಗತಿ ಎಂದರೆ ಮೂಲ ನಿವಾಸಿಗಳು ಇಷ್ಟೆಲ್ಲಾ ಸಮಸ್ಯೆ ಎದುರಿಸುತ್ತಿದ್ದರೂ ಸರ್ಕಾರ ಅವರಿಗಾಗಿ ಮಂಜೂರು ಮಾಡಿರುವ ಹಣವನ್ನು ಕೂಡಾ ಈ ವ್ಯವಸ್ಥೆ ಸಂಪೂರ್ಣವಾಗಿ ಬಳಸಿಕೊಳ್ಳುತ್ತಿಲ್ಲ. ಇದಕ್ಕೆ ಸಾಕ್ಷಿ ಈ ಮುಂದಿನ ಪಟ್ಟಿ.

ವರ್ಷ ಬಳಕೆ	ಅಂದಾಜು ಬಜೆಟ್	ಪರಿಷ್ಕೃತ ಅಂದಾಜು	ಖರ್ಚಾದ ಮೊತ್ತ	ಶೇಕಡ
೨೦೦೬-೦೭	೧೬೫೬.೯೦	೧೬೫೨.೬೮	೧೬೪೭.೩೭	೯೯.೪೨
೨೦೦೭-೦೮	೧೭೯೧.೭೧	೧೭೧೯.೭೧	೧೫೨೪.೩೨	೮೮.೬೩
೨೦೦೮-೦೯	೨೧೨೧.೦೦	೧೯೭೦.೦೦	೧೮೦೫.೯೧	೫.೧೭
೨೦೦೯-೧೦	೩೨೦೫.೫೦	೨೦೦೦.೦೦	೧೯೯೬.೭೯	೬೨.೩೫

ಕಳೆದ ೫ ವರ್ಷಗಳಿಂದ ಸರ್ಕಾರ ಮಂಜೂರು ಮಾಡಿದ ಹಣವನ್ನು ಸರಿಯಾಗಿ ಹೋಗಲಿ, ಸಂಪೂರ್ಣವಾಗಿ ಬಳಸಿಕೊಳ್ಳಲೂ ಆಗದೆ ವಾಪಸ್ ಕಳುಹಿಸುತ್ತಿದೆ. ಇದರಿಂದಾಗಿ ೨೦೦೯-೧೦ ಮತ್ತು ೨೦೧೦-೧೧ನೇ ಸಾಲುಗಳನ್ನು ಹೋಲಿಸಿದರೆ ಸರ್ಕಾರ ಅತ್ಯಲ್ಪ ಏರಿಕೆಯನ್ನು ಮಾತ್ರ ಮಾಡಿದೆ.

ಹಣವನ್ನು ವಾಪಸ್ ಕಳುಹಿಸಿದ್ದಕ್ಕೆ ಕಾರಣಗಳು ಹಲವು. ಅವುಗಳೆಂದರೆ: ಯೋಜನೆಯ ಮಾರ್ಗಸೂಚಿಗೆ ಅನುಗುಣವಾಗಿ ರಾಜ್ಯ ಸರ್ಕಾರ ಸಾಕಷ್ಟು ಪ್ರಸ್ತಾವನೆಗಳನ್ನು ಕೇಂದ್ರಕ್ಕೆ ಕಳಿಸದೆ ಇರುವುದು, ರಾಜ್ಯ ಸರ್ಕಾರದಿಂದ ಬಳಕೆ ಪ್ರಮಾಣಪತ್ರ ಕೇಂದ್ರಕ್ಕೆ ತಲುಪದೆ ಇರುವುದು ಮತ್ತು ಭೌತಿಕ ಅಭಿವೃದ್ಧಿ ಕೊರತೆ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದು, ಹಣ ಬಳಕೆಯ ಬಗ್ಗೆ ಕೇಂದ್ರ ವಿಧಿಸಿರುವ ಕಠಿಣ ನಿಯಮಗಳ ಬಗ್ಗೆ ಸಿಬ್ಬಂದಿವರ್ಗದ ತಿಳುವಳಿಕೆ ಕೊರತೆ ಇತ್ಯಾದಿ. ವ್ಯವಸ್ಥೆ ತನ್ನ ನಿರ್ವಹಣಾ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ಮೂಲನಿವಾಸಿಗಳ ಅಭಿವೃದ್ಧಿಗಾಗಿ ಮೀಸಲಿರುವ ಹಣದ ಸದ್ಬಳಕೆ ಮಾಡಬೇಕಿದೆ. ವ್ಯವಸ್ಥೆಯ ಕಾರ್ಯವೈಖರಿ ಪರಿಣಾಮಕಾರಿಯಾಗಿಲ್ಲ ಮತ್ತು ಅದು ಈಗ ಅನುಸರಿಸುತ್ತಿರುವ ಬಜೆಟ್ ಕೇಂದ್ರಿತ ವಿಧಾನದ ಇತಿಮಿತಿಗಳನ್ನು ಅರಿತುಕೊಂಡು ಸೂಕ್ತ ಮಾರ್ಪಾಟುಗಳನ್ನು ಮಾಡಿಕೊಳ್ಳಬೇಕಿದೆ.

ಖಾಲಿ ಇರುವ ಹುದ್ದೆಗಳ ಸಮಸ್ಯೆಗೆ ಸೂಕ್ತ ಕಾರಣವೆಂದರೆ ಕುಗ್ರಾಮಗಳಿಗೆ ಬಂದು ಸೇವೆ ಸಲ್ಲಿಸಲು ಬಹಳಷ್ಟು ಜನ ಸರ್ಕಾರಿ ನೌಕರರು ಇಷ್ಟ ಪಡುವುದಿಲ್ಲ. ವರ್ಗ ಮಾಡಿದರೂ ಪದೇ ಪದೇ ಗೈರು ಹಾಜರಾಗುತ್ತಾರೆ. ಕೆಲವೊಮ್ಮೆ ರಾಜಕೀಯ ಒತ್ತಡಗಳಿಗೆ ಮಣಿದು ಸರ್ಕಾರವೇ ನೌಕರರನ್ನು ಇಲ್ಲಿಂದ ಬೇರೆ ಕಡೆ ವರ್ಗಾವಣೆ ಮಾಡುತ್ತದೆ. ಕೆಲವರು ಯಾವುದೇ ಕೆಲಸ ಮಾಡದೇ ಸಂಬಳ ಪಡೆಯುತ್ತಾರೆ. ನಮ್ಮ ದೇಶದ ವಿಪರ್ಯಾಸವೆಂದರೆ ಒಂದೆಡೆ ನಿರುದ್ಯೋಗದ ಸಮಸ್ಯೆಯಾದರೆ, ಇನ್ನೊಂದೆಡೆ (ಮೂಲ ನಿವಾಸಿಗಳ ಪ್ರದೇಶಗಳಲ್ಲಿ) ಹುದ್ದೆ ಖಾಲಿ ಇರುವುದು. ಯುನಿಸೆಫ್‌ನ ಅಧ್ಯಯನ ತಂಡ ಕಂಡುಕೊಂಡ ಸತ್ಯವೆಂದರೆ ಕೆಲವೆಡೆ ಶೇಕಡ ೫೦ರಷ್ಟು ಹುದ್ದೆಗಳ ಖಾಲಿ ಇದ್ದು, ಇರುವ ಸಿಬ್ಬಂದಿಗೂ ಕುಶಲತೆ ಇಲ್ಲದಿರುವುದು.

ಅರಣ್ಯ ಹಕ್ಕು ಕಾಯ್ದೆಯನ್ನು ಜಾರಿಗೆ ತರುವಲ್ಲಿ ಕೂಡಾ ವ್ಯವಸ್ಥೆ ವಿಫಲವಾಗಿದೆ. ಇವರ ಕಷ್ಟ ಸುಖಗಳ ಬಗ್ಗೆ ವಸ್ತುನಿಷ್ಠವಾಗಿ ವರದಿ ಮಾಡಿ ಅವರ ಹಿತಾಸಕ್ತಿ ಕಾಪಾಡುವ ಸಂಘ ಸಂಸ್ಥೆಗಳ ಜೊತೆ ವ್ಯವಸ್ಥೆ ಸಹಭಾಗಿತ್ವವನ್ನು ಹೊಂದಿಲ್ಲ. ಮತ್ತೊಂದು ವಿಷಾದದ ಸಂಗತಿ ಎಂದರೆ

ವ್ಯವಸ್ಥೆಯು ಬಜೆಟ್ ಹಣವನ್ನು ನುಂಗಿ ಹಾಕಲು ಹವಣಿಸುವ ಸರ್ಕಾರೇತರ ಸಂಸ್ಥೆಗಳಿಗೆ ಅನುದಾನ ನೀಡಲು ಆಸಕ್ತಿ ತೋರಿಸುತ್ತಿದೆಯೇ ವಿನಾ, ವಿವಿಧ ಇಲಾಖೆಗಳ ಕಾರ್ಯಗಳು ಆದಿವಾಸಿಗಳ ಮೇಲೆ ಹೇಗೆ ಪರಿಣಾಮ ಬೀರುತ್ತಿವೆ ಎನ್ನುವುದರ ಬಗ್ಗೆ ಕಾಳಜಿ ವಹಿಸುತ್ತಿಲ್ಲ. "ಇವರ ದುರ್ಬಲತೆಗೆ ಕೇವಲ ಬಡತನ, ಅನಕ್ಷರತೆಗಳಷ್ಟೇ ಕಾರಣವಲ್ಲ. ಇವರ ಇಚ್ಚೆಗೆ ವಿರುದ್ಧವಾಗಿ, ಬಲವಂತವಾಗಿ ಮುಖ್ಯವಾಹಿನಿಗೆ ಕರೆತರುವ ಪ್ರಯತ್ನ ಕೂಡ ಪ್ರಮುಖ ಕಾರಣ."[೧೩]

೬.೩. ಬುಡಕಟ್ಟು ಅಭಿವೃದ್ಧಿ ಯೋಜನೆಗಳು ಹಾಗೂ ಪರಿಣಾಮಗಳು

ಈಗಾಗಲೇ ಹಲವಾರು ಬುಡಕಟ್ಟು ಯೋಜನೆಗಳ ಬಗ್ಗೆ ವಿವರಿಸಿದ್ದು ಈ ಭಾಗದಲ್ಲಿ ಅಭಿವೃದ್ಧಿ ಯೋಜನೆಗಳಿಂದಾಗಿ ತಳಸಮುದಾಯಗಳು ಹೇಗೆ ಗಾಯಗೊಂಡಿವೆ ಮತ್ತು ಅದಕ್ಕೆ ಮುಲಾಮು ಸವರುವ ಬದಲು ಸರ್ಕಾರಗಳು ಹೇಗೆ ಉಪ್ಪು ಸವರುತ್ತಿವೆಯೆಂಬುದನ್ನು ವಿವರಿಸಲಾಗಿದೆ. ನಮಗೆಲ್ಲಾ ಬುಡಕಟ್ಟುಗಳ ಸಮಸ್ಯೆ ಏನೆಂದು ಚಿಕ್ಕವರಿದ್ದಾಗ ತಿಳಿದಿರಲಿಲ್ಲ. ಆದರೆ ಇತ್ತೀಚಿಗಿನ ೫ನೇ ತರಗತಿಯ ಪುಸ್ತಕದಲ್ಲಿ ಆದಿವಾಸಿಗಳ ಬಗ್ಗೆ ಜಾಗೃತಿ ಮೂಡಿಸುವ ಪಠ್ಯಗಳಿದ್ದು ಈ ಕೆಳಗಿನ ಆದಿವಾಸಿ ಹುಡುಗಿಯ ಪತ್ರ ತುಂಬಾ ಮನೋಜ್ಞವಾಗಿದೆ.

"A forest is everything for us, Adivasis. We can't live away from the forests even for a day. Government has started many projects in the name of Development Dams and factories are being built. Forests, which are ours, are being taken away from us. Because of these projects, we need to think where the forest people will go? And what will happen to their livelihood? Where will the lakhs of animals living in the forests go? If there are no forests, and we dig out our lands for minerals like aluminium, what will be left? Only polluted air, water and miles and miles of barren land..."[14]

ಸರ್ಕಾರಗಳು ಬುಡಕಟ್ಟುಗಳ ಅಭಿವೃದ್ಧಿಗೆ ನೂರಾರು ಯೋಜನೆಗಳನ್ನು ರೂಪಿಸಿವೆ. ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡುತ್ತಿವೆ. ಆದರೆ ಪರಿಹಾರ ದೊರಕಿಸುವ ನಿಟ್ಟಿನಲ್ಲಿ ಅವರನ್ನು ಹೇಗೆ ತೊಡಗಿಸಿಕೊಳ್ಳಬಹುದು ಎನ್ನುವುದರ ಬಗ್ಗೆ ಸರ್ಕಾರ ತಲೆಕೆಡಿಸಿಕೊಳ್ಳುತ್ತಿಲ್ಲ. ಪರಿಣಾಮ, ಯೋಜನೆ ರೂಪಿಸುವವರು ಮತ್ತು ಫಲಾನುಭವಿಗಳ ನಡುವೆ ಅಂತರ ಸೃಷ್ಟಿಯಾಗಿ, ಬಹುತೇಕ ಯೋಜನೆಗಳು ದಾರಿತಪ್ಪಿವೆ. ಇವು ರಾಜಕಾರಣಿ, ಅಧಿಕಾರಿ, ಕಂಟ್ರಾಕ್ಟ್‌ದಾರ, ಎನ್.ಜಿ.ಓ. ಮತ್ತು ಸ್ಥಳೀಯ ಪ್ರಭಾವಿಗಳು ಹಣ ಲೂಟಿ ಮಾಡಲು ಇರುವ ಸುಲಭ ಮಾರ್ಗಗಳಾಗಿವೆ. 'ಯಾರನ್ನು ಗುರಿಯಾಗಿಸಿ ಈ ಯೋಜನೆಗಳನ್ನು ಮಾಡಲಾಗಿದೆಯೋ ಅವರನ್ನು ಒಂದು ಮಾತೂ ಕೇಳದಿರುವುದರಿಂದ ಹಲವಾರು ಯೋಜನೆಗಳು ಅಭಿವೃದ್ಧಿಗಿಂತ ವಿನಾಶವನ್ನೇ ತಂದಿದೆ. ಎನ್.ಜಿ.ಓ.ಗಳು ಅಥವಾ ಅಧಿಕಾರಿಗಳು ಮಾಡಬೇಕಾದದ್ದೆಂದರೆ ಈ ಯೋಜನೆಯಿಂದ ಬುಡಕಟ್ಟುಗಳಿಗೆ ಸಹಾಯವಾಗುತ್ತದೆಂದು ಸರ್ಕಾರವನ್ನು ನಂಬಿಸುವುದು ಮಾತ್ರ. ಇದು ಹಣ ಬಿಡುಗಡೆ ಮಾಡಿಸಿಕೊಳ್ಳಲು

ಇರುವ ಸುಲಭ ಮಾರ್ಗ. ಈ ಕೆಲಸಗಳು ಬುಡಕಟ್ಟುಗಳಿಗೆ ಪ್ರಯೋಜನವಿಲ್ಲದಿದ್ದರೂ ಪರವಾಗಿಲ್ಲ. 'ಸ್ವಿಮಿಂಗ್ ಪೂಲನ್ನಾದರೂ ಕಟ್ಟಿಸಿ, ಬಂಗಲೆಯನ್ನಾದರೂ ಕಟ್ಟಿಸಿ ಆದರೆ ಇದನ್ನೆಲ್ಲಾ ಬುಡಕಟ್ಟು ಅಭಿವೃದ್ಧಿಯ ಹೆಸರಿನಲ್ಲಿ ಮಾಡಬೇಕು ಅಷ್ಟೇ. ಮಧ್ಯಪ್ರದೇಶದ ಸುರಜಾ ಜಿಲ್ಲೆಯ ವಾಡ್ರೋಫ್ ನಗರದಲ್ಲಿ ಕೊರವ ಅಭಿವೃದ್ಧಿ ಯೋಜನೆ ಅಡಿಯಲ್ಲಿ ೩ ಕಿ.ಮೀ. ಉದ್ದದ ರಸ್ತೆಯನ್ನು ೧೭.೪೪ ಲಕ್ಷ ರೂಪಾಯಿ ವೆಚ್ಚದಲ್ಲಿ ೧೯೯೪ರಲ್ಲಿ ನಿರ್ಮಿಸಲಾಯಿತು. ಅದಾಗಲೇ ಆ ಊರಿಗೆ ಕಚ್ಚಾ ರಸ್ತೆ ಇತ್ತು. ಆದರೆ ಆ ಊರಿನಲ್ಲಿ ಕೊರವರ ಮನೆ ಇದ್ದದ್ದು ಒಂದೇ ಒಂದು. ಆ ರಸ್ತೆಯೂ ರಾಮದಾಸ್ ಕೊರವನ ಮನೆಯಿಂದ ೨ ಕಿ.ಮೀ. ದೂರಕ್ಕೆ ನಿಂತಿತ್ತು ಮತ್ತು ಅದರಿಂದ ಅವನಿಗೆ ಯಾವುದೇ ಪ್ರಯೋಜನವೂ ಇರಲಿಲ್ಲ. ಅಂದರೆ ಆ ಹಳ್ಳಿಯಲ್ಲಿ ಪಹಾಡಿ ಕೊರವರು ಇದ್ದಾರೋ ಇಲ್ಲವೋ ಎಂಬುದನ್ನು ಅಧಿಕಾರಿಗಳು ಪರಿಶೀಲಿಸಲಿಲ್ಲ. ಅವರ ಅವಶ್ಯಕತೆ ಏನೆಂದು ಯಾರೂ ವಿಚಾರಿಸಲಿಲ್ಲ. ರಾಮದಾಸ್ ಕೊರವನ ಸಮಸ್ಯೆಯೆಂದರೆ ಕೆಟ್ಟುಹೋದ ಬಾವಿಯನ್ನು ರಿಪೇರಿ ಮಾಡಿಸುವುದು ಮತ್ತು ಅನ್ಯಾಯವಾಗಿ ಮಾಧವಮಿಶ್ರ ಎಂಬ ಲೇವಾದೇವಿದಾರ ವಶಪಡಿಸಿಕೊಂಡಿದ್ದ ತನ್ನ ಭೂಮಿಯನ್ನು ವಾಪಸ್ ಪಡೆಯುವುದಾಗಿತ್ತು. ರಾಮದಾಸ್ ತನ್ನ ತಂದೆಯ ಅನಾರೋಗ್ಯಕ್ಕೆ ಚಿಕಿತ್ಸೆ ಪಡೆಯಲು ಪಡೆದ ಸಾಲಕ್ಕೆ ಮಿಶ್ರಾ ಅದನ್ನು ವಶಪಡಿಸಿಕೊಂಡಿದ್ದ. ಕೆಲವು ಸಾವಿರ ರೂಪಾಯಿ ನೀಡಿದ್ದರೆ ರಾಮದಾಸ್ ತನ್ನ ಬಾವಿಯನ್ನು ರಿಪೇರಿ ಮಾಡಿಸಿಕೊಳ್ಳುತ್ತಿದ್ದ ಮತ್ತು ತಂದೆಗೆ ಚಿಕಿತ್ಸೆಯನ್ನು ನೀಡುತ್ತಿದ್ದ. ಅಲ್ಲದೇ ಕೆಲವು ಲಕ್ಷ ರೂಪಾಯಿ ಅವನ ಹೆಸರಿನಲ್ಲಿ ಬ್ಯಾಂಕಿನಲ್ಲಿ ಠೇವಣಿ ಇಟ್ಟಿದ್ದಾರೆ. ಬರುವ ಬಡ್ಡಿಯಲ್ಲೇ ಅವನು ಸುಖವಾಗಿ ಜೀವನ ಸಾಗಿಸಬಹುದಿತ್ತು. ಆದರೆ ಸರ್ಕಾರ ೧೭.೪೪ ಲಕ್ಷ ರೂಪಾಯಿ ಖರ್ಚು ಮಾಡಿ ಇದ್ದ ಕಚ್ಚಾ ರಸ್ತೆಗೆ ಇನ್ನಷ್ಟು ಮಣ್ಣು ಹಾಕಿಸಿ ಕೈತೊಳೆದುಕೊಂಡಿತ್ತು. ಬುಡಕಟ್ಟು ಅಭಿವೃದ್ಧಿ ನೆಪದಲ್ಲಿ ಆ ಹಣವನ್ನು ಅಧಿಕಾರಿಗಳು, ಕಂಟ್ರಾಕ್ಟರರು ತಮ್ಮದಾಗಿಸಿಕೊಂಡರು.

ಇಂಥಹದ್ದೇ ಇನ್ನೊಂದು ಯೋಜನೆಯಲ್ಲಿ ಒಂದು ಹಳ್ಳಿಯಲ್ಲಿ ಕ್ಷೀರಕ್ರಾಂತಿಯ ಮೂಲಕ ಆ ಜನರನ್ನು ಸಬಲೀಕರಣಗೊಳಿಸಲು ಸಾವಿರಾರು ಕೋಟಿ ರೂಪಾಯಿ ವೆಚ್ಚ ಮಾಡಿ ಕೊನೆಗೆ ಆ ಇಡೀ ಹಳ್ಳಿಯ ಪರಿಸರ ಮತ್ತು ಜನರನ್ನು ದುರ್ಬಲಗೊಳಿಸಲಾಯಿತು. ಅದಾಗಲೇ ಸಾಕಷ್ಟು ಹಾಲು ಉತ್ಪಾದನೆಯಾಗುತ್ತಿದ್ದ ಆ ಹಳ್ಳಿಗೆ ಈ ಯೋಜನೆಯ ಅವಶ್ಯಕತೆಯೇ ಇರಲಿಲ್ಲ. ಆ ಪ್ರದೇಶದ ಅತ್ಯುತ್ತಮ ದೇಶಿ ಖರಿಯಾರ್ ಹೋರಿಗಳನ್ನೆಲ್ಲಾ ನಿರ್ವೀರ್ಯಗೊಳಿಸಿ ವಿದೇಶಿ ಹೋರಿಗಳ ವೀರ್ಯವನ್ನು ಕೃತಕ ಗರ್ಭಧಾರಣೆ ಮಾಡಿಸುವ ಮತ್ತು ಅವುಗಳಿಗಾಗಿ ಕಾಡು ಕಡಿದು ಸುಬಾಬುಲ್ ಗಿಡ ನೆಡಿಸುವ ಈ ಯೋಜನೆಯಿಂದ ಆ ಇಡೀ ಹಳ್ಳಿಯ ಪರಿಸರ ಮತ್ತು ಜನಜೀವನ ಅಸ್ತವ್ಯಸ್ತವಾಯಿತು.'[೧೫]

ದೇಶದ ವಿವಿಧ ಯೋಜನೆಗಳಿಗೆ ಬಲಿಪಶುವಾಗಲು ಸುಲಭವಾಗಿ ಸಿಗುವವರೆಂದರೆ ಆದಿವಾಸಿಗಳು ಮಾತ್ರ ಎನಿಸಿದರೆ ತಪ್ಪಾಗಲಾರದೇನೋ? ಏಕೆಂದರೆ ೧೯೫೦–೯೦ರ ಮಧ್ಯ ಭಾರತದಲ್ಲಿ ಅಭಿವೃದ್ಧಿ ಯೋಜನೆಗಳಿಂದ ನೆಲೆ ತಪ್ಪಿದ ಮೂಲನಿವಾಸಿಗಳ ಸಂಖ್ಯೆ (ಲಕ್ಷಗಳಲ್ಲಿ)

ಕ್ರಸಂ.	ಅಭಿವೃದ್ಧಿ ಯೋಜನೆಗಳು	ನೆಲೆತಪ್ಪಿದವರು	ಪುನರ್ವಸತಿ ಪಡೆದವರು	ಈಗಲೂ ನಿರ್ವಸಿತರು
೧.	ಅಣೆಕಟ್ಟುಗಳು	೫೩	೧೩	೪೦.೦೦
೨.	ಗಣಿಗಾರಿಕೆ	೧೨.೦೦	೩.೦೦	೯.೦೦
೩.	ಉದ್ದಿಮೆಗಳು	೨.೬೦	೦.೬೫	೧.೯೫
೪.	ವನ್ಯಧಾಮಗಳು	೫.೦೦	೧.೨೫	೩.೭೫
೫.	ಇತರೆ	೧.೫	೦.೪೦	೧.೧೦

(ಆಧಾರ: ಪೀಪಲ್ಸ್ ರಿಪೋರ್ಟರ್, ೧ ಅಕ್ಟೋಬರ್, ೧೯೯೫)

ಉತ್ತರಕನ್ನಡದ ಅಣೆಕಟ್ಟುಗಳು ಮತ್ತು ಅಭಿವೃದ್ಧಿ ಯೋಜನೆಗಳು

ಸಿದ್ದಿಗಳೂ ಸೇರಿದಂತೆ ಹಲವಾರು ವಿಶಿಷ್ಟ ಬುಡಕಟ್ಟುಗಳು ನೆಲೆಸಿರುವ ಉತ್ತರಕನ್ನಡ ಜಿಲ್ಲೆಯು ಅಭಿವೃದ್ಧಿ ಯೋಜನೆಗಳ ಅಚ್ಚುಮೆಚ್ಚಿನ ಪ್ರದೇಶವಾಗಿದೆ. ಪಾಶ್ಚಾತ್ಯ ಅಭಿವೃದ್ಧಿ ಮಾದರಿ ಬುಡಕಟ್ಟುಗಳಿಗೆ ಮಾರಕವಾಗಿ ಪರಿಣಮಿಸಿದೆ. ಇದು ದೇಶೀಯ ಹಾಗೂ ಪರಂಪರಾಗತ ಮೌಲ್ಯ, ಉತ್ಪಾದನಾ ಸಂಬಂಧ ಹಾಗೂ ಜೀವನಪದ್ಧತಿ, ಜೀವನೋಪಾಯದ ಮಾರ್ಗಗಳಿಂದು ಕಣ್ಮರೆಯಾಗಿವೆ. ಅರಣ್ಯವನ್ನು, ಅರಣ್ಯವಾಸಿಗಳನ್ನು ಸೃಷ್ಟಿಸುವ, ಹೆಚ್ಚಿಸುವ, ರಕ್ಷಿಸುವ ಕಾರ್ಯ ಮಾಡಬೇಕಿದ್ದ ಈ ಇಲಾಖೆ ಅರಣ್ಯವನ್ನು, ಅರಣ್ಯವಾಸಿಗಳನ್ನು ಭಕ್ಷಿಸುವ ಮತ್ತು ಬೆಂಗಾಡನ್ನು ಸೃಷ್ಟಿಸುವ ಇಲಾಖೆಯಾಗಿದೆ. ಅಕ್ಷರವೇ ಗೊತ್ತಿಲ್ಲದ, ಮಾಲೀಕತ್ವದ ಪರಿಭಾವನೆಯೇ ಇಲ್ಲದ ಮುಗ್ಧ ಬುಡಕಟ್ಟು ಜನರನ್ನು ಕಾನೂನು, ದಾಖಲೆ ಪಹಣಿ, ಅತಿಕ್ರಮಣಗಳ ಹೆಸರಿನಲ್ಲಿ ಅತಂತ್ರರನ್ನಾಗಿಸಿವೆ. ಹೊಟ್ಟೆ ಪಾಡಿಗಾಗಿ ಬೇಟೆಯಾಡಿದರೆ, ಉದುರಿಬಿದ್ದು ಹಾಳಾಗುವ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿದರೆ, ಕುಮ್ರಿ ಬೇಸಾಯ ಮಾಡಿದರೆ ಅರಣ್ಯ ನಾಶವಾಯಿತೆಂದು ಹುಯಿಲೆಬ್ಬಿಸುವ ಈ ಇಲಾಖೆ ಪ್ರವಾಸೋದ್ಯಮದ ಹೆಸರಲ್ಲಿ ರೆಸಾರ್ಟ್ ಕಟ್ಟುವ, ಸಫಾರಿ, ಟ್ರೆಕ್ಕಿಂಗ್ ಮಾಡಿಸುವ, ಬೃಹತ್ ಬಹುರಾಷ್ಟ್ರೀಯ ಕಂಪನಿಗಳಿಗೆ, ಕಾಡಿನ ಗರ್ಭವನ್ನೇ ಸೀಳುವ ರೈಲ್ವೆ, ರಸ್ತೆ ಯೋಜನೆಗಳಿಗೆ, ಕಾಡಿನ ಒಡಲು ಬಗೆದು ಖನಿಜ ತೆಗೆಯುವ ಗಣಿ ಕಂಪನಿಗಳಿಗೆ, ಅರಣ್ಯ, ಅರಣ್ಯಜೀವಿಗಳು, ಅರಣ್ಯವಾಸಿಗಳನ್ನು ಇಡಿ ಇಡಿಯಾಗಿ ಆಪೋಶನ ತೆಗೆದುಕೊಳ್ಳುವ ನೀರಾವರಿ ಮತ್ತು ವಿದ್ಯುತ್ ಯೋಜನೆಗಳಿಗೆ, ಅಣುಸ್ಥಾವರಗಳಿಗೆ, ನೌಕಾನೆಲೆಗಳಿಗೆ ಮಾತ್ರ ರತ್ನಗಂಬಳಿ ಹಾಸುವ ಈ ಇಲಾಖೆಯ ವೈರುಧ್ಯ ವಿಚಿತ್ರವೆನಿಸಿದರೆ ಆಶ್ಚರ್ಯವಿಲ್ಲ. ತಲೆತಲಾಂತರಗಳಿಂದ ಸಹಜೀವನ ನಡೆಸಿಕೊಂಡು ಬಂದಿರುವ ಕಾಡುಪ್ರಾಣಿಗಳು ಮತ್ತು ಕಾಡಿನ ಆದಿವಾಸಿಗಳ ನಡುವೆ ಭೇದ ಕಲ್ಪಿಸಿ ವನ್ಯಪ್ರಾಣಿಗಳ ರಕ್ಷಣೆಗಾಗಿ ವನವಾಸಿಗಳನ್ನೇ ಒಕ್ಕಲೆಬ್ಬಿಸಿ ಅವರ ಪಾರಂಪರಿಕ ಜೀವನ ಮೂಲಗಳಿಂದ ವಂಚಿತರಾಗಿಸುವುದು ಯಾವ ಮಾನವೀಯತೆ? ವೈವಿಧ್ಯಮಯ ನೈಸರ್ಗಿಕ ಅರಣ್ಯವನ್ನು ಕಡಿದು ಅಕೇಶಿಯಾ ನೀಲಗಿರಿಗಳಂತಹ ಏಕರೂಪದ ಕಾಡು ಮಾಡುವುದು ಅರಣ್ಯರಕ್ಷಣೆಯೆ? ನಗರವಾಸಿಗಳ ಮನೆ ಬೆಳಗಿಸಲು ಆದಿವಾಸಿಗಳ ಜೀವನವನ್ನೇ ಕತ್ತಲೆ ಮಾಡುವ ಅಧಿಕಾರ ನೀಡಿದವರಾರು? ದೊಡ್ಡ ದೊಡ್ಡ ಲೂಟಿಕೋರರ ಮೇಲೆ ಕ್ರಮವನ್ನೇ

ಕೈಗೊಳ್ಳದ ಅರಣ್ಯ ಇಲಾಖೆ ಆ ಮೂಲಕ ಆದಿವಾಸಿಗಳ ಮೇಲೆ ದೌರ್ಜನ್ಯ ಮಾಡುವುದಲ್ಲದೆ ಐಪಿಸಿಯ ಎಲ್ಲ ಕಾನೂನುಗಳನ್ನು ಆರೋಪಿಸಿ ಕೇಸ್ ಹಾಕುತ್ತಿರುವುದರ ಮರ್ಮವೇನು?

ನಿಸರ್ಗ ಶ್ರೀಮಂತಿಕೆಯ ಉತ್ತರಕನ್ನಡಕ್ಕೆ ಈ ಶ್ರೀಮಂತಿಕೆಯೇ ಶಾಪವಾಗಿ ಪರಿಣಮಿಸಿದೆ. ದಟ್ಟ ಹಸಿರುಕಾಡು, ಸಮೃದ್ಧ ಪ್ರಾಣಿ ಪಕ್ಷಿಗಳು, ವಿಶಿಷ್ಟ ಬುಡಕಟ್ಟುಗಳು, ಭೋರ್ಗರೆದು ಹರಿಯುವ ನದಿಗಳು, ವಿಶೇಷ ಖನಿಜಗಳು ಈ ಶ್ರೀಮಂತಿಕೆಗೆ ಕಾರಣವಾಗಿವೆ. ಆದರೆ ಈ ಪುಟ್ಟ ಜಿಲ್ಲೆಯಲ್ಲಿರುವ ವಿವಿಧ ಅಭಿವೃದ್ಧಿ ಯೋಜನೆಗಳನ್ನು ನೋಡಿದರೆ ಈ ಬೃಹತ್ ಭಾರವನ್ನು ಧಾರಣೆ ಮಾಡುವ ಶಕ್ತಿ ಈ ಪ್ರದೇಶಕ್ಕಿದೆಯೇ ಎಂಬ ಅನುಮಾನ ಮೂಡುತ್ತದೆ. ಈ ಯೋಜನೆಗಳ ಪಕ್ಷಿನೋಟವನ್ನು ಈ ಕೆಳಗೆ ನೀಡಲಾಗಿದೆ.

೧. ಕೈಗಾ ಅಣು ವಿದ್ಯುತ್ ಯೋಜನೆ

೨. ಸೀಬರ್ಡ್ ನೌಕಾನೆಲೆ

೩. ಕಾಗದ-ಪ್ಲೈವುಡ್ ಕಾರ್ಖಾನೆಗಳು

೪. ರೆಸಾರ್ಟ್‌ಗಳು

೫. ಅಣಶಿ ನ್ಯಾಷನಲ್ ಪಾರ್ಕ್

೬. ಗಣಿಗಾರಿಕೆ: ಪಣಸೋಲಿ, ಡಿಗ್ಗಿ, ಬಾಮಣಿ, ಸಾಳಾವರಿ, ತೆರಾಳಿ, ಉಡಸಿ ಚಾಪೆರಾ, ಕೆಮಲಿ ಇತ್ಯಾದಿ

೭. ಜಲಾಶಯ ಅಥವಾ ಕೃತಕ ಸರೋವರಗಳು

i. ಸುಪಾ ಜಲಾಶಯ

ii. ಕೊಡಸಳ್ಳಿ ಜಲಾಶಯ

iii. ದಾಂಡೇಲಿ ಜಲಾಶಯ

iv. ಬೊಮ್ಮನ ಹಳ್ಳಿ ಜಲಾಶಯ

v. ತಟ್ಟಿಹಳ್ಳಿ ಜಲಾಶಯ

vi. ಕಾಗೇರಿ ಜಲಾಶಯ

vii. ಮಾಗೋಡ್ ಜಲಾಶಯ

viii. ಕದ್ರಾ ಜಲಾಶಯ

ix. ಶರಾವತಿ ಟೇಲ್‌ರೇಸ್ ಜಲಾಶಯ

x. ಲಿಂಗನಮಕ್ಕಿ ಜಲಾಶಯ

xi. ಅಘನಾಶಿನಿ ಜಲಾಶಯ

೮. ಹೆದ್ದಾರಿಗಳು ಮತ್ತು ರಸ್ತೆಗಳು

೯. ರೈಲ್ವೆ ಮಾರ್ಗಗಳು-ಕೊಂಕಣ ರೈಲ್ವೆ

೧೦. ವಿದ್ಯುತ್ ಪ್ರಸರಣ ಮಾರ್ಗಗಳು

ಯೋಜನೆ	**ನಾಶವಾದ ಅರಣ್ಯ**
೧. ಸೀಬರ್ಡ್	೨೨೫೯ ಹೆಕ್ಟೇರ್
೨. ಸೀಬರ್ಡ್ ೩ನೇ ಹಂತ	೧೦೦೦ ಹೆಕ್ಟೇರ್
೩. ಸೀಬರ್ಡ್ ಪುನರ್ವಸತಿ	೬೪೩ ಹೆಕ್ಟೇರ್
೪. ಸೀಬರ್ಡ್ ಕೈಗಾ	೭೨೭ ಹೆಕ್ಟೇರ್
೫. ಕೊಡಸಳ್ಳಿ ಅಣೆಕಟ್ಟು	೧೩೬೦ ಹೆಕ್ಟೇರ್
೬. ಕದ್ರಾ ಅಣೆಕಟ್ಟು	೩೦೫೧ ಹೆಕ್ಟೇರ್
೭. ಶರಾವತಿ ಅಣೆಕಟ್ಟು	೭೦೦ ಹೆಕ್ಟೇರ್
೮. ಅಕ್ರಮ ಸಕ್ರಮ (೧೯೯೭)	೨೮೨೪ ಹೆಕ್ಟೇರ್
೯. ಕೊಂಕಣ ರೈಲ್ವೆ	೨೭೨ ಹೆಕ್ಟೇರ್
೧೦. ಇತರ ಕಾರ್ಯಗಳಿಗೆ	೧೪.೬೫೧ ಹೆಕ್ಟೇರ್

(ಮೂಲ: ವಿಜಯ ಕರ್ನಾಟಕ, ೨೯.೧೧.೨೦೦೯, ಪು.೫.)

ನಿರ್ವಸತಿ ಸಮಸ್ಯೆ ಅಥವಾ ಸ್ಥಳಾಂತರ ಮತ್ತು ಪುನರ್ವಸತಿ

ಹತ್ತು ವರ್ಷದ ಹಿಂದೆ ನೆಲೆಸಿದ ಬೆಂಗಳೂರಿನಿಂದ ಪಕ್ಕದ ಕೋಲಾರಕ್ಕೆ ಟ್ರಾನ್ಸ್‌ಫರ್ ಮಾಡಿದರೆ ಬದುಕುವುದು ಹೇಗೆಂದು ಚಿಂತಿಸುವ, ಆರು ಗಂಟೆ ಕರೆಂಟ್ ಹೋದರೆ ಟಿ.ವಿ, ಎ.ಸಿ. ಇಲ್ಲದೆ ಇರುವುದು ಹೇಗೆಂದು ಚಡಪಡಿಸುವ, ೫೦ ವರ್ಷದ ಹಿಂದಿನ ನನ್ನ ಪಿತ್ರಾರ್ಜಿತ ಆಸ್ತಿಯನ್ನು ರಕ್ಷಿಸಲು ಸುಪ್ರೀಂ ಕೋರ್ಟ್‌ವರೆಗೂ ಕೇಸ್ ಒಯ್ಯಲು ಹಿಂದೆ ಮುಂದೆ ನೋಡದ, ಹೆದ್ದಾರಿ ಅಗಲೀಕರಣಕ್ಕಾಗಿ ಅಕ್ಕಪಕ್ಕದ ಮರಗಳ ಮಾರಣಹೋಮ ನಡೆಸಿದರೆ ಪರಿಸರವೇ ವಿನಾಶವಾಯಿತೆಂದು ಹುಯಿಲೆಬ್ಬಿಸುವ ನಾವು ಸಾವಿರಾರು ವರ್ಷಗಳಿಂದ ಬದುಕು ಕಟ್ಟಿಕೊಂಡಿದ್ದ ಅನಕ್ಷರಸ್ಥ, ಮುಗ್ಧ ಆದಿವಾಸಿಗಳನ್ನು ಅಭಿವೃದ್ಧಿ, ದೇಶಕ್ಕಾಗಿ ತ್ಯಾಗ ಇತ್ಯಾದಿ ಹೆಸರುಗಳಲ್ಲಿ ಬುಡಸಮೇತ ಕಿತ್ತು ನೀರು-ನೆರಳಿಲ್ಲದ, ವಿದ್ಯುತ್, ರಸ್ತೆಗಳಂತಹ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದ ಅಪರಿಚಿತ ಸ್ಥಳಕ್ಕೆ ಎಸೆದಾಗ ಅವರಿಗಾಗುವ ನೋವು, ಹತಾಶೆ, ಅಸಹಾಯಕತೆಗಳ ಬಗ್ಗೆ ಚಕಾರವೆತ್ತದೆ ಇರುವುದೇ ನಾಗರಿಕತೆಯಾಗಿದೆ ಎನಿಸುತ್ತದೆ.

ಅಭಿವೃದ್ಧಿಯ ಮಂತ್ರವಿಂದು ಶೋಷಣೆಯ, ಅಸಮಾನತೆಯ ತಂತ್ರವಾಗಿದೆ. ನಾಗರಿಕ, ಜಗತ್ತಿಗಾಗಿ, ದೇಶಕ್ಕಾಗಿ, ಅಭಿವೃದ್ಧಿಗಾಗಿ ಪ್ರತಿಬಾರಿಯೂ ಅರಣ್ಯಗಳೇ ಬಲಿಯಾಗಬೇಕೇ? ಇದಕ್ಕಾಗಿ

ನಗರಗಳನ್ನೇಕೆ ಬಲಿ ಕೊಡಬಾರದು? ಪ್ರತಿಬಾರಿ ಆದಿವಾಸಿಗಳೇ ತ್ಯಾಗ ಮಾಡಬೇಕೆ? ನಗರವಾಸಿಗಳೆಂದಾದರೂ ಏನನ್ನಾದರೂ ತ್ಯಾಗ ಮಾಡಿದ್ದಾರೆಯೇ? ನಗರವಾಸಿಗಳನ್ನೊಮ್ಮೆ ಪುನರ್ವಸತಿ ಪ್ರದೇಶಗಳಿಗೆ ಹೋಗಿರಲು ಒತ್ತಾಯಿಸಿದರೆ ಸುಮ್ಮನೆ ಒಪ್ಪಿಕೊಳ್ಳುತ್ತಾರೆಯೇ? ಎಲ್ಲರನ್ನು ರಕ್ಷಿಸಬೇಕಾದ ಸರ್ಕಾರ ಯಾವಾಗಲೂ ಬಂಡವಾಳಶಾಹಿಗಳ ರಕ್ಷಣೆಗೆ ಮುಂದಾಗುವುದೇಕೆ? ದೇಶಕ್ಕಾಗಿ ತ್ಯಾಗ ಮಾಡಿದ ಆದಿವಾಸಿಗಳ ನೆನಪಿಗಾಗಿ ಒಂದಾದರೂ ಸ್ಮಾರಕವಿದೆಯೇ? ಅವರಿಗೆ ವಿದ್ಯಾಭ್ಯಾಸವಿಲ್ಲದಿರುವುದರಿಂದ ಸೂಕ್ತ ತರಬೇತಿ ನೀಡಿ ಉದ್ಯೋಗ ಒದಗಿಸಲು ಕ್ರಮ ಕೈಗೊಂಡಿದೆಯೇ? ತನ್ನ ಅಭಿವೃದ್ಧಿ ಯೋಜನೆಯಲ್ಲಿ ಆದಿವಾಸಿಗಳಿಗೆ ವಾಚ್‌ಮನ್, ಪೀವನ್‌ಗಳಿಗಿಂತ ದೊಡ್ಡ ಕೆಲಸ ನೀಡಿದೆಯೇ?

ಇತ್ತ ನಿರ್ವಸತಿಯ ಹಣಕ್ಕಾಗಿ ತಲೆತಲಾಂತರಗಳಿಂದ ಅಲೆಯಬೇಕಾದ ಪರಿಸ್ಥಿತಿ, ಅತ್ತ ಜೀವನೋಪಾಯಕ್ಕಾಗಿ ಕೆಲಸಕ್ಕೆ ಅಲೆಯಬೇಕಾದ ದುಸ್ಥಿತಿ. ಕುಮ್ರಿ ಬೇಸಾಯ, ಪಶುಪಾಲನೆ ಬಿಟ್ಟು ಬೇರೊಂದು ಮಾರ್ಗ ತಿಳಿಯದ ಈ ಆದಿವಾಸಿಗಳಿಗೆ ಅಭಿವೃದ್ಧಿ ಯೋಜನೆಗಳಲ್ಲಿ ಯಾವ ಕೆಲಸ ತಾನೆ ದೊರಕೀತು? ಅಕಸ್ಮಾತ್ ದೊರೆತರೂ ಅದನ್ನು ನಿಭಾಯಿಸಲಾರದೆ ದೊರೆತ ಹಣ, ಕೆಲಸ ಎರಡನ್ನೂ ಕಳೆದುಕೊಳ್ಳುವ, ಹತಾಶೆಗೊಳಗಾಗಿ ಏಕಾಂಗಿಗಳಾಗುವ ಸಂಭವವೇ ಹೆಚ್ಚು. ಇಲ್ಲದೇ ಪಟ್ಟಣಗಳ ಕೊಳೆಗೇರಿಗಳಿಗೆ ಮತ್ತೊಂದಿಷ್ಟು ಸೇರ್ಪಡೆಯಾಗಬಹುದು. ಆದಿವಾಸಿ ಹೆಣ್ಣುಗಳು ಭೋಗದ ವಸ್ತುಗಳಾಗಿ ಕೆಂಪು ದೀಪದಡಿಯಲ್ಲಿ ಕಾಣೆಯಾಗುವ ಸಾಧ್ಯತೆಗಳೂ ಇವೆ. ಇನ್ನು ಸರ್ಕಾರ ನೀಡುವ ಜಮೀನುಗಳಾದರೋ ಬಂಜರು, ತಗ್ಗುದಿನ್ನೆಯ, ನೀರಾವರಿ ಇಲ್ಲದ ಬರಡುಭೂಮಿ. ಅದರಲ್ಲಿ ಆಧುನಿಕ ಬೇಸಾಯವನ್ನು ಮಾಡುವ ಚೈತನ್ಯವಿಲ್ಲದೆ. ಪಾರಂಪರಿಕ ಬೇಸಾಯದ ಸಾಧ್ಯತೆಯೂ ಇಲ್ಲದೆ ಕೊನೆಗೆ ಅದನ್ನು ಮಾರಿಕೊಂಡು ಅತಂತ್ರರಾಗುವ ಸ್ಥಿತಿ ಆದಿವಾಸಿಗಳದ್ದಾಗಿದೆ.

ಒಂದೊಮ್ಮೆ ಬುಡಕಟ್ಟುಗಳ ಸ್ವರ್ಗವಾಗಿದ್ದ ಉತ್ತರಕನ್ನಡ ಜಿಲ್ಲೆ ಅಥವಾ ಕೊಂಕಣ ಪ್ರದೇಶ ಇಂದು ಆದಿವಾಸಿಗಳ ಸ್ಮಶಾನವಾಗಿದೆ. ಈ ಸ್ಮಶಾನದ ಗೋರಿಗಳೊಳಗಿಂದ ಏಳುವ ಪ್ರಶ್ನೆಗಳೆಂದರೆ–

೧. ಉತ್ತರಕನ್ನಡವೆಂದರೆ ಇತರರಿಗೆ ಬೆಳಕು ನೀಡಿ ತಾನು ಕತ್ತಲೆಯಲ್ಲಿರಬೇಕಾದ ಪ್ರದೇಶವೇ?

೨. ಪರಿಸರ ನಾಶದ ಯೋಜನೆಗಳು ಉತ್ತರಕನ್ನಡಕ್ಕೆ ಮಾತ್ರ ಸೀಮಿತವೇ?

೩. ನಿರಾಶ್ರಿತರಾದ ಆದಿವಾಸಿಗಳ ನೋವಿನ ಬೆಲೆ ಏನು?

೪. ಅವರ ಜೀವನ, ಸಂಸ್ಕೃತಿ ನಾಶದ ವೆಚ್ಚವೆಷ್ಟು?

೫. ನಾಶವಾದ ಕಾಡು, ಜನಾಂಗ, ಸಂಸ್ಕೃತಿಗಳನ್ನು ಪುನರ್ ನಿರ್ಮಿಸಲು ಸಾಧ್ಯವೇ?

೬. ಪುನರ್ವಸತಿ ನಂತರ ಹೊಸ ಬದುಕಿಗೆ ಹೊಂದಿಕೊಂಡು ಯಶಸ್ವಿಯಾದ, ಹೊಂದಿಕೊಳ್ಳದೆ ವಿಫಲವಾದ, ನಾಶವಾದ ಬುಡಕಟ್ಟು ಜೀವಗಳೆಷ್ಟು ಮತ್ತು ಅವುಗಳಿಗೆ ಬೆಲೆ ಕಟ್ಟಲು ಸಾಧ್ಯವೇ?

೭. ಈ ಯೋಜನೆಗಳಿಂದ ಜಿಲ್ಲೆಗಾಗಿರುವ ಲಾಭನಷ್ಟಗಳೇನು?

೮. ಕೆಲಜನರ ಸುಖಕ್ಕಾಗಿ ಹಲವಾರು ಸಮುದಾಯಗಳ ಬದುಕನ್ನು ಕಸಿದುಕೊಳ್ಳುವುದು ಅಭಿವೃದ್ಧಿಯೇ?

೯. ಸಿದ್ದಿಗಳಿಗೆ ಈ ಶಾಪದಿಂದ ಮುಕ್ತಿ ಇದೆಯೇ? ಏಕೆಂದರೆ ಆಫ್ರಿಕಾದಿಂದ ನಿರ್ವಹಿತರನ್ನಾಗಿಸಿ ಭಾರತಕ್ಕೆ ತರಲಾಯಿತು. ಗೋವಾದಿಂದ ನಿರಾಶ್ರಿತರಾಗಿ ಉತ್ತರಕನ್ನಡದ ಕಾಡಿಗೆ ಬರಬೇಕಾಯಿತು. ಇನ್ನು ಇಲ್ಲಿಯೂ ಅಭಿವೃದ್ಧಿಗಾಗಿ ನಿರಾಶ್ರಿತರಾಗಿ ಇನ್ನೆಲ್ಲಿ ಹೋಗಬೇಕು? ಈ ಶಾಪಗ್ರಸ್ತ ಪಯಣಕ್ಕೆ ಕೊನೆ ಎಲ್ಲಿ? ಶಾಪ ವಿಮೋಚನೆ ಎಂದು?

ಈ ಹಿನ್ನೆಲೆಯಲ್ಲಿ ಸರ್ಕಾರ, ನಾಗರಿಕ ಜಗತ್ತು ಮತ್ತು ಸ್ವತಃ ಆದಿವಾಸಿ ಜನಾಂಗಗಳು ಎಚ್ಚೆತ್ತು ಸೂಕ್ತ ಕ್ರಮತೆಗೆದುಕೊಳ್ಳದಿದ್ದರೆ, ಹೋರಾಡದಿದ್ದರೆ ಇಲ್ಲಿನ ನೆಲ, ಜಲ, ಪಶುಪಕ್ಷಿ, ಜನ ಜಾನುವಾರು ಸಂಸ್ಕೃತಿ ಪರಂಪರೆಗಳು ಸಂಪೂರ್ಣ ನಾಶವಾಗುವ ಮೊದಲೇ ಅವುಗಳನ್ನು ರಕ್ಷಿಸುವ ಅವಶ್ಯಕತೆ ಇಂದಿನ ಧ್ಯೇಯವಾಗಬೇಕಿದೆ. ಇಲ್ಲಲ್ಲದಿದ್ದರೆ ಇನ್ನೆಲ್ಲೋ ಬದುಕಬಲ್ಲ, ಲಾಭವಿರುವಲ್ಲಿ ಅಂಗಡಿ ತೆರೆಯಬಲ್ಲ ಬಂಡವಾಳಶಾಹಿಗಳಿಗಿಂತ, ಇನ್ನೆಲ್ಲೂ ಬದುಕಲಾಗದ ಆದಿವಾಸಿಗಳ ಪರವಾಗಿ ಚಿಂತಿಸಬೇಕಾದ ಸರಕಾರ ಬರಬೇಕಿದೆ. ಇದಕ್ಕಾಗಿ ಈ ಸಮುದಾಯಗಳನ್ನು ಎಚ್ಚರಿಸುವ, ಹೋರಾಟಕ್ಕೆ ಅಣಿಗೊಳಿಸುವ, ಸಂತೈಸುವ, ಕೆಲಸ ನಾಗರಿಕ ಜಗತ್ತಿನಿಂದಾಗಬೇಕಿದೆ.

೬.೪. ಅಭಿವೃದ್ಧಿಯ ಸವಾಲುಗಳು ಮತ್ತು ಸಾಧ್ಯತೆಗಳು

ಇದನ್ನು ಎರಡು ದೃಷ್ಟಿಯಿಂದ ವಿವೇಚಿಸಬಹುದು. ಮೊದಲನೆಯದು ಒಟ್ಟಾರೆ ಅಭಿವೃದ್ಧಿಯ ಸವಾಲುಗಳು ಮತ್ತು ಎರಡನೆಯದು ಬುಡಕಟ್ಟು ಅಭಿವೃದ್ಧಿಯ ಸವಾಲುಗಳು. ಇವೆರಡೂ ಒಂದಕ್ಕೊಂದು ಪೂರಕವಾಗಿವೆ. ಒಟ್ಟಾರೆ ವಿಶ್ವದ ಹಾಗೂ ಈ ದೇಶದ ಅಭಿವೃದ್ಧಿಗೆ ಇದುವರೆಗೆ ಅನುಸರಿಸಿದ ಪಾಶ್ಚಾತ್ಯ, ಬೃಹತ್ ಮಾದರಿಗಳನ್ನು ಬಿಟ್ಟು ಗಾಂಧೀಜಿ, ಷುಮಾಕರ್ ಅವರ 'ಸಣ್ಣದು ಸುಂದರ' ಮಾದರಿ ಅನುಸರಿಸಬೇಕು. ಬಂಡವಾಳ, ಯಾಂತ್ರೀಕರಣ, ಪರಿಸರ ಮಾಲಿನ್ಯಗಳ ಚಕ್ರದಿಂದ ಹೊರಬಂದು ನೈಸರ್ಗಿಕ ಉತ್ಪಾದನಾ ವಿಧಾನಗಳ ಕಡೆ ಮುಖ ಮಾಡಬೇಕು. ಇನ್ನು ಬುಡಕಟ್ಟುಗಳ ಅಭಿವೃದ್ಧಿಗೆ ಒತ್ತಾಯದ ಮಾರ್ಗ ಬಿಟ್ಟು ಅವರನ್ನು ಪ್ರೀತಿಯಿಂದ ಗೆಲ್ಲುವ, ಅವರಿಚ್ಚಿಸಿದ ಪ್ರದೇಶಗಳನ್ನು ಅವರಿಗೆ ಬಿಟ್ಟುಕೊಟ್ಟು ಬದುಕಲು ಮತ್ತು ಅವರು ಇಚ್ಚಿಸಿದರೆ ಅವರ ಅನನ್ಯತೆ ಉಳಿಸಿಕೊಳ್ಳುವ ಅವಕಾಶ ಕೊಡುವ ಅಭಿವೃದ್ಧಿ ಮಾದರಿ ಇಂದಿನ ಸವಾಲು ಮತ್ತು ಸಾಧ್ಯತೆ ಎರಡೂ ಆಗಿದೆ. ಬುಡಕಟ್ಟುಗಳ ಸಮಸ್ಯೆಗಳು ಇತರರ ಸಮಸ್ಯೆಗಳಿಗಿಂತಲೂ ವಿಶಿಷ್ಟ ಹಾಗೂ ಸಂಕೀರ್ಣ. ಪರಿಶಿಷ್ಟ ಜಾತಿಗೆ ಅಸ್ಪೃಶ್ಯತೆಯಂತೆ, ಬುಡಕಟ್ಟುಗಳಿಗೆ 'ಏಕಾಂಗಿತನ' ಪ್ರಮುಖ ಸಮಸ್ಯೆಯಾಗಿದೆ. ಸಾಂಪ್ರದಾಯಿಕ, ಬದಲಾವಣೆ ಸಹಿಸದ ಮನೋಭಾವ, ಅತ್ಯಂತ ಸರಳ ಅಥವಾ ಹಿಂದುಳಿದ ತಂತ್ರಜ್ಞಾನ, ವೃತ್ತಿ ವೈಶಿಷ್ಟ್ಯತೆ ಇಲ್ಲದ, ವಿವಿಧ ಕಸುಬುಗಳ ಜೀವನಾಧಾರಿತ ವ್ಯವಸ್ಥೆ, ಅಧಿಕ ಉತ್ಪಾದನೆಯಿಲ್ಲದ ಉತ್ಪಾದನಾ ವಿಧಾನ, ವಿವಿಧ ಹಂತಗಳಲ್ಲಿರುವ ವಿಕಾಸ ಕ್ರಮ, ಬೆಲೆ ತಾಂತ್ರಿಕತೆ ಇಲ್ಲದಿರುವಿಕೆ,

ಲಾಭದ ಪ್ರಶ್ನೆಯೇ ಇಲ್ಲದ ವಿತರಣೆಯ ಸಾಟಿಪದ್ಧತಿ, ಇತ್ಯಾದಿಗಳೆಲ್ಲಾ ಸೇರಿ ಬುಡಕಟ್ಟುಗಳದೇ ಒಂದು ವಿಚಿತ್ರ ಆರ್ಥಿಕತೆಯನ್ನು ಸೃಷ್ಟಿಸಿರುವುದರಿಂದ ಸಾಂಪ್ರದಾಯಿಕ ಆರ್ಥಿಕ ನಿಯಮಗಳು ಮೂಲ ರೂಪದಲ್ಲಿ ಇವರಿಗೆ ಅನ್ವಯಿಸುವುದಿಲ್ಲ. ಬದಲಾಗಿ ಸಾಂಪ್ರದಾಯಿಕ ಸಾಮಾಜಿಕ ಕಟ್ಟುಪಾಡುಗಳೇ ಆರ್ಥಿಕತೆಯನ್ನು ನಿಯಂತ್ರಿಸುತ್ತವೆ. ಈ ಹಿನ್ನೆಲೆಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಈಗಾಗಲೇ ಇರುವ ವಿವಿಧ ಸಂಸ್ಥೆ, ಯೋಜನೆಗಳನ್ನು ಮತ್ತು ಅವು ಏನು ಮಾಡಬಹುದು ಎಂಬ ಚಿಂತನೆಯನ್ನು ಇಲ್ಲಿ ನಡೆಸಲಾಗಿದೆ. ಗಾಯಗೊಂಡ ಸಮುದಾಯಗಳಿಗೆ ಮುಲಾಮು ನೀಡುವ ಕೆಲವು ಕಾರ್ಯಕ್ರಮ ಗಳನ್ನು ಇಲ್ಲಿ ಚಿಂತಿಸಲಾಗಿದೆ.

ಇಂದಿನ ಕಾರ್ಪೊರೇಟ್ ಕಾಲೇಜ್ ಹಾಗೂ ಶಾಲೆಗಳಲ್ಲಿ ಮಕ್ಕಳನ್ನು ದೊಡ್ಡ ದೊಡ್ಡ ಮಾರ್ಕೆಟ್‌ಯಾರ್ಡ್‌ಗಳಿಗೆ, ಮಾಲ್‌ಗಳಿಗೆ, ಕಂಪನಿಗಳಿಗೆ ಕರೆದುಕೊಂಡು ಹೋಗುತ್ತಾರೆ. ಇಲ್ಲವೇ ದ ಮೋಸ್ಟ್ ಸಕ್ಸಸ್‌ಫುಲ್ ಬಿಜಿನೆಸ್ ಗುರುಗಳನ್ನು ಕರೆಸುತ್ತಾರೆ. ಆದರೆ ಗುಜರಾತ್‌ನಲ್ಲಿ ವಿಭಿನ್ನವಾದ ಪ್ರಯೋಗವೊಂದು ನಡೆಯಿತು. ಇಲ್ಲಿ ಬುಡಕಟ್ಟು ಕಲಾವಿದರನ್ನು ಕರೆಸಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಯಿತು. ಗುಜರಾತ್‌ನ ಅಹಮದಾಬಾದ್‌ನಲ್ಲಿರುವ ಪ್ರತಿಷ್ಠಿತ CEPT (Centre for Environment, Planning and technology) (ಪರಿಸರ, ಯೋಜನೆ ಮತ್ತು ತಂತ್ರಜ್ಞಾನದ ಕೇಂದ್ರ)ಯು ರಾಷ್ಟ್ರದ Design School ಗಳಲ್ಲಿ ಮುಂಚೂಣಿಯಲ್ಲಿದ್ದು ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದೇ ಒಂದು ಸಾಧನೆಯಾಗಿದ್ದು, ಅದಕ್ಕಾಗಿ ಹಗಲೂ ರಾತ್ರಿ ಕಷ್ಟಪಡುತ್ತಾರೆ. ಇಂತಹ ಸಂಸ್ಥೆಯ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ದಕ್ಷಿಣ ಗುಜರಾತ್‌ನ ಹ್ಯಾಂಗ್ ಜಿಲ್ಲೆಯ ೧೦ ಜನ ಆದಿವಾಸಿ ಗಳನ್ನು ಕರೆಸಲಾಗಿತ್ತು. ಆದಿವಾಸಿಗಳಿಗೆ ಬಿದಿರಿನ ವಸ್ತುಗಳನ್ನು ತಯಾರಿಸುವುದು ಜೀವನೋಪಾಯದ ಮಾರ್ಗವಾಗಿದ್ದರೆ. ವಿದ್ಯಾರ್ಥಿಗಳಿಗೆ ತಮ್ಮ ಜೀವನ ಸಾಧನೆಗೆ ಅತ್ಯುತ್ತಮ ಪ್ರಾಯೋಗಿಕ ಪಾಠವಾಗಿತ್ತು. ೧೫ ದಿನಗಳ ಈ ವಿಶಿಷ್ಟ ತರಬೇತಿಯಲ್ಲಿ ವಿದ್ಯಾರ್ಥಿಗಳು ಆದಿವಾಸಿಗಳಲ್ಲಿರುವ ಸೃಜನಾತ್ಮಕತೆ, ಕ್ರಿಯಾಶೀಲತೆ ಮತ್ತು ಕುಶಲತೆಯನ್ನು ಕಂಡು ಆಶ್ಚರ್ಯ ಚಕಿತರಾದರು. ವಿದ್ಯಾರ್ಥಿಗಳ ಕೌಶಲ್ಯವನ್ನು ಸಾಣೆ ಹಿಡಿದು ಸೃಜನಶೀಲತೆಯನ್ನು ಹೆಚ್ಚಿಸಿಕೊಳ್ಳಲು ಸಂಸ್ಥೆ ತೆಗೆದುಕೊಂಡ ವಿಶೇಷ ಕ್ರಮದ ಅಂಗವಾಗಿ ನೀಡಿದ ಈ ತರಬೇತಿಯಲ್ಲಿ ವಿದ್ಯಾರ್ಥಿಗಳಿಗೆ ಬಿದಿರನ್ನು ಕತ್ತರಿಸುವುದು, ಹೆಣೆಯುವುದು ಇತ್ಯಾದಿಗಳು ಆದಿವಾಸಿಗಳು ಮಾಡುವಷ್ಟು ಸುಲಭವಲ್ಲ ಎಂಬುದು ಅರಿವಾಯಿತು. ಇಷ್ಟೊಂದು ಕಷ್ಟದ ಕೆಲಸಗಳನ್ನು ಅದು ಹೇಗೆ ಅಷ್ಟೊಂದು ಸುಲಭವಾಗಿ ಮಾಡುತ್ತಾರೆ ಎನ್ನುವುದೇ ಅದ್ಭುತ ವಿಷಯವಾಗಿತ್ತು. ದೇವಂಶಿ ದಾಸ್ ಎಂಬ ವಿದ್ಯಾರ್ಥಿನಿಗೆ ಬಿದಿರನ್ನು ಕೇವಲ ಬುಟ್ಟಿ ಮತ್ತು ಚಾಪೆಗಳನ್ನು ಮಾಡಲು ಮಾತ್ರ ಬಳಸಬಹುದೆಂಬ ಅಭಿಪ್ರಾಯವಿತ್ತು. ಆದರೆ ಆದಿವಾಸಿಗಳ ಕರಾಮತ್ತು ನೋಡಿದ ಮೇಲೆ ಬಿದಿರಿನಬೊಂಬನ್ನು ಕೂಡ ಕಾಗದದಂತೆ ಮಡಿಚಿ ಬೇಕಾದ ಆಕಾರವನ್ನು ಕೊಡಬಹುದು ಎಂದು ತಿಳಿಯಿತು. ಜೊತೆಗೆ ಆದಿವಾಸಿಗಳು ತಲೆಮಾರಿನಿಂದ ತಲೆಮಾರಿಗೆ ಕಾಪಾಡಿಕೊಂಡು ಬಂದಿರುವ ಬಿದಿರಿನ ಕಲೆ ಹಾಗೂ ಕೌಶಲ್ಯದ ಬಗ್ಗೆಯೂ ಅಭಿಮಾನ ಮೂಡಿತು. ಮತ್ತೊಬ್ಬ ವಿದ್ಯಾರ್ಥಿ ಮಹಮ್ಮದ್ ವಾಸಿಫ್ ಅಹ್‌ಸಾನ್‌ನ ಅನುಭವ ಇನ್ನೂ ವಿಶಿಷ್ಟ. ನಗರಗಳಲ್ಲಿ

ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಫಾಲ್ಸ್‌ಸೀಲಿಂಗ್‌ಗಾಗಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಅಥವಾ ಕಾರ್ಡ್ ಬೋರ್ಡ್‌ಗಳನ್ನು ಬಳಸುವುದು ಮಾತ್ರ ಗೊತ್ತಿದ್ದವನಿಗೆ ಬಿದಿರನ್ನೂ ಕೂಡಾ ಫಾಲ್ಸ್‌ಸೀಲಿಂಗ್‌ಗೆ ಬಳಸಬಹುದೆಂದೂ ಅದು ಇವೆರಡಕ್ಕಿಂತ ಕಡಿಮೆ ಖರ್ಚು ಮತ್ತು ಹೆಚ್ಚು ಪರಿಣಾಮಕಾರಿ ಎಂದೂ, ಆದಿವಾಸಿಗಳ ಅನುಭವವದಿಂದ ತಿಳಿಯಿತೆಂದೂ, ಆದಿವಾಸಿಗಳೊಡನೆ ಒಡನಾಡದಿದ್ದರೆ ಈ ವಿಷಯ ತಿಳಿಯುತ್ತಲೇ ಇರಲಿಲ್ಲವೆಂದೂ, ಮುಂದಿನ ತನ್ನ ವೃತ್ತಿ ಜೀವನದಲ್ಲಿ ಇದನ್ನು ಬಳಸುವುದಾಗಿಯೂ ತಿಳಿಸಿದ್ದಾನೆ. ರಿಪ್ಕಾ ಎಂಬ ಆದಿವಾಸಿ ತರಬೇತುದಾರನಿಗೂ ಇದೊಂದು ಸುಂದರ ಅನುಭವ. ತಮ್ಮ ಕುಲಕಸುಬು ಕೇವಲ ಹೊಟ್ಟೆಪಾಡಿನ ಕಾಯಕ ಮಾತ್ರವಲ್ಲದೆ ಇದೊಂದು ವಿಶಿಷ್ಟ ಕಲಾ ಪರಂಪರೆಯಾಗಿದ್ದು, ತಾವು ಇದರ ವಾರಸುದಾರರೂ, ರಕ್ಷಕರೂ ಮತ್ತು ಶಿಕ್ಷಕರೂ ಆಗಿದ್ದು, ಇದನ್ನು ಶ್ರದ್ಧೆ ಆಸಕ್ತಿಯಿಂದ ಕಲಿಯುವ ಯುವಕರೂ ಇದ್ದು ಹಣಗಳಿಸುವ ದಾರಿಯೂ ಆಗಿದೆ ಎಂದು ಹೆಮ್ಮೆ ಪಡುತ್ತಾನೆ. ಮತ್ತೊಬ್ಬ ಆದಿವಾಸಿ ಯುವತಿ ಶೀಲಾಳಿಗೂ ಇದು ಹೊಸ ಅನುಭವವಾಗಿದ್ದು ತಮಗೂ ಹಾಗೂ ವಿದ್ಯಾರ್ಥಿಗಳಿಗೂ ಇದೊಂದು ರೀತಿಯ Win-Win ಪರಿಸ್ಥಿತಿಯಾಗಿದ್ದು ತಮ್ಮಂತಹ ಯುವ ಆದಿವಾಸಿಗಳಿಗೆ ತಮ್ಮ ಪೂರ್ವಿಕರ ಕಲೆಯನ್ನು ಕಲಿಯುವ, ಕಲಿಸುವ ಅವಕಾಶದಿಂದಾಗಿ ತಮ್ಮ ಬಗ್ಗೆ ಹೆಮ್ಮೆ ಎನಿಸುತ್ತಿದ್ದು, ವಿದ್ಯಾರ್ಥಿಗಳ ಪ್ರಶ್ನೆಗಳಿಂದಾಗಿ ತಮ್ಮ ಶ್ರದ್ಧೆ ಹಾಗೂ ಕೌಶಲ್ಯ ಹೆಚ್ಚುತ್ತಿದೆ ಹಾಗೂ ಜನರಿಗೆ ಪರಿಸರ ಸ್ನೇಹಿ ವಸ್ತುಗಳ ಬಳಕೆಯ ಬಗ್ಗೆ ಆಸಕ್ತಿ ಮೂಡುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದಿದ್ದಾರೆ.

ಈ ಪ್ರಯೋಗಶೀಲತೆ ಕೇವಲ ಗುಜರಾತ್‌ಗೆ ಅಥವಾ ಡಿಸೈನಿಂಗ್‌ಗೆ ಮಾತ್ರ ಸೀಮಿತವಾಗದೆ ಬುಡಕಟ್ಟು ಜೀವನದ ವಿವಿಧ ರಂಗಗಳ ಶ್ರೀಮಂತ ಅನುಭವ ಹಾಗೂ ಜ್ಞಾನವನ್ನು, ಅದು ಆಧುನಿಕತೆಯ ಹೊಡೆತಕ್ಕೆ ಸಿಕ್ಕು ನಾಶವಾಗುವ ಮೊದಲೇ ಕಾಪಾಡಿ, ಉಳಿಸಿ, ಬೆಳೆಸುವ ಕೆಲಸಕ್ಕೆ ಎಲ್ಲಾ ವಿದ್ಯಾಸಂಸ್ಥೆಗಳೂ ಮುಂದಾಗಬೇಕಾದ ಕಾಲ ಬಂದಿದೆ. ಈ ಸಾಲಿಗೆ ಸಿದ್ದಿಗಳ ಬೆತ್ತದ ಬುಟ್ಟಿಗಳು, ಕೌದಿಗಳ ಕಲೆ ಮತ್ತು ಛತ್ತೀಸ್‌ಘಡದ ಬಸ್ತಾರ್ ಜಿಲ್ಲೆಯ ಘರ್ವಾ ಆದಿವಾಸಿಗಳ ಡೋಕ್ರಾ ಕಲೆ ಕೂಡಾ ಉತ್ತಮ ಉದಾಹರಣೆಯಾಗಬಲ್ಲದು. ಬೆಸುಗೆ ಇಲ್ಲದ, ತುಕ್ಕು ಹಿಡಿಯದ ಸಿಂಧೂ ಕಣಿವೆಯ ನಾಗರೀಕತೆಯ ಕಲಾಪರಂಪರೆಯನ್ನು ಇನ್ನೂ ಉಳಿಸಿ ಬೆಳೆಸಿಕೊಂಡು ಬಂದಿದ್ದಾರಲ್ಲದೆ ಕಾಲಕ್ಕೆ ತಕ್ಕಂತೆ ಪೀಠೋಪಕರಣ, ಕ್ಯಾಂಡಲ್‌ಸ್ಟಾಂಡ್, ಆಶ್ ಟ್ರೇ ಮುಂತಾದವುಗಳನ್ನು ಮಾಡಿ ಆದಿಕೃತಿ ಸಂಘಟನೆಯ ಮೂಲಕ ಮಾರಾಟ ಮಾಡಿ ಲಾಭಗಳಿಸುತ್ತಿದ್ದಾರೆ. ಹಾಗೆಯೇ ಸಿದ್ದಿಗಳು ಕೂಡ ಅತ್ಯಂತ ಕಠಿಣವಾದ ಬೆತ್ತವನ್ನೇ ಬಳಸಿಕೊಂಡು ವಿಶಿಷ್ಟವಾದ ಕೃಷಿ ಹಾಗೂ ದಿನಬಳಕೆಯ ಉಪಕರಣಗಳನ್ನು ತಯಾರಿಸುತ್ತಾರೆ. ಕೌದಿ ಹೊಲೆಯುವ ಅವರ ಕಲೆಗೆ ಉತ್ತೇಜನ ನೀಡುವ ಎರಡೇ ಸಂಘಗಳಿದ್ದು ಅವುಗಳ ಸಂಖ್ಯೆಯನ್ನು ಇನ್ನಷ್ಟು ಹೆಚ್ಚಿಸಬೇಕಾಗಿದೆ. ಅವರನ್ನು ಸಂಘಟಿಸಿ ಅವರ ಕಲೆಗೆ ಮೌಲ್ಯ ತಂದು ಕೊಡುವ ಕೆಲಸಕ್ಕೆ ಸ್ವಯಂಸೇವಾ ಸಂಸ್ಥೆಗಳು ಮತ್ತು ಸರ್ಕಾರ ಮುಂದಾಗಬೇಕಿದೆ. ಅವರ ಪರಿಸರ ಸಂರಕ್ಷಣೆ, ಆಹಾರ ಸಂರಕ್ಷಣೆ ಹಾಗೂ ಸಂಸ್ಕರಣೆ, ವನ್ಯ ಸಂರಕ್ಷಣೆ, ಔಷಧಿ ಹಾಗೂ ವೈದ್ಯಕೀಯ, ಪರಿಸರ ಸ್ನೇಹಿ ತಂತ್ರಜ್ಞಾನ, ಕಲೆ, ಚಿತ್ರಕಲೆ, ಮೌಖಿಕ

ಸಾಹಿತ್ಯ, ಸಂಗೀತ, ಕುಟುಂಬ, ಸಂಬಂಧ, ನ್ಯಾಯ, ನಿಸ್ಪೃಹತೆ, ಮುಗ್ಧತೆ, ಬದ್ಧತೆ ಇತ್ಯಾದಿಗಳಲ್ಲಿ ಆಧುನಿಕ ಮಾನವ ಆದಿವಾಸಿಗಳಿಗೆ ಅಭಾರಿಯಾಗಬೇಕಿದ್ದು, ಅವರಿಂದ ಕಲಿಯುವ ಅವಶ್ಯಕತೆ ಇದೆ. ಆದರೆ ದುರದೃಷ್ಟವಶಾತ್ ಆಧುನಿಕ ಮಾನವ ತಮ್ಮ ಸಂಕುಚಿತ, ಸ್ವಾರ್ಥ ದೃಷ್ಟಿಕೋನದಿಂದ ಆದಿವಾಸಿಗಳಿಗೆ ತಾನೇನೋ ದೊಡ್ಡ ಉಪಕಾರ ಮಾಡುತ್ತಿದ್ದು ಅವರಿಗೆ ಆಧುನಿಕತೆ ಕಲಿಸುವುದೇ ತನ್ನ ದೊಡ್ಡಸ್ತಿಕೆ ಎಂದು ಭಾವಿಸುತ್ತಿರುವುದು ನಿಜಕ್ಕೂ ಶೋಚನೀಯ.

ಬುಡಕಟ್ಟುಗಳ ಅಮೂಲ್ಯ ವೈದ್ಯಕೀಯ ಜ್ಞಾನವನ್ನು ಬಳಸಿಕೊಂಡು ಪ್ರತಿ ಪರಿಣಾಮಗಳಿಲ್ಲದ, ಅಗ್ಗದ, ದೇಶಿಯವಾಗಿ ಲಭ್ಯವಿರುವ, ವಿದೇಶಿ ತಾಂತ್ರಿಕತೆಯ ಅವಶ್ಯಕವಿಲ್ಲದ, ರೋಗ ಲಕ್ಷಣ ಮಾತ್ರವಲ್ಲದೆ, ರೋಗದ ಮೂಲವನ್ನೇ ನಾಶಪಡಿಸಬಹುದಾದ, ಪದ್ಧತಿಗೆ ಉತ್ತೇಜನ ನೀಡುವ ಅವಶ್ಯಕತೆ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ.

ಬುಡಕಟ್ಟು ಅಭಿವೃದ್ಧಿಯಲ್ಲಿ ಹಣಕಾಸಿನ ಸಂಸ್ಥೆಗಳ ಪಾತ್ರ

ಹಣ ಬುಡಕಟ್ಟುಗಳಿಗೆ ಅಪರೂಪವಾದರೂ ಇತ್ತೀಚಿನ ದಿನಗಳಲ್ಲಿ ಹಣವಿಲ್ಲದೆ ಯಾವ ಸಮುದಾಯವೂ ಬದುಕಲಾರದ ಸ್ಥಿತಿ ತಲುಪಿವೆ. ಅವುಗಳ ಅಭಿವೃದ್ಧಿಗೆ ಹಣ ಅನಿವಾರ್ಯ ವಸ್ತುವಾಗಿದೆ. ಈ ಹಿನ್ನಲೆಯಲ್ಲಿ ವಿವಿಧ ಯೋಜನೆಗಳ ಫಲಾನುಭವಿಗಳಾದರೂ ಬುಡಕಟ್ಟಿನ ಅಭಿವೃದ್ಧಿ ಹೇಳಿಕೊಳ್ಳುವಂತಿಲ್ಲ. ಇಲ್ಲಿ ಬ್ಯಾಂಕುಗಳ ಪಾತ್ರ ತುಂಬಾ ಮುಖ್ಯ. ಆದರೆ ನಗರಗಳಲ್ಲಿ ಯಶಸ್ವಿಯಾದಂತೆ ಹಳ್ಳಿ, ಹಾಡಿಗಳಲ್ಲಿ ಇವು ಯಶಸ್ವಿಯಾಗಿಲ್ಲ. ಇದಕ್ಕೆ ಕಾರಣಗಳನ್ನು ಈ ಕೆಳಗೆ ನೀಡಲಾಗಿದೆ.

೧. ಬಹುತೇಕ ಬ್ಯಾಂಕುಗಳು ತಮ್ಮ ಗುರಿ ಸಾಧಿಸುವಲ್ಲಿ ವಿಫಲವಾಗಿವೆ.

೨. ಸಹಕಾರಿ ಬ್ಯಾಂಕುಗಳು ಸಂಪೂರ್ಣ ವಿಫಲವಾಗಿವೆ.

೩. ಸಾಲ ಠೇವಣಿ ಅನುಪಾತ ತುಂಬಾ ಕಡಿಮೆ ಇದೆ. ಅಂದರೆ ಉಳಿತಾಯಕ್ಕೆ ಒತ್ತು ನೀಡುತ್ತಿಲ್ಲ.

೪. TRYSEM ಯೋಜನೆ ತರಬೇತಿಗೊಳಗಾದವರ ಸಂಖ್ಯೆ ಕಡಿಮೆ ಇದೆ. ಅದರ ಬಗ್ಗೆ ಜಾಗೃತಿ ಕಡಿಮೆ.

೫. ಕೃಷಿ ಸಲಕರಣೆಗಳಿಗೆ ನೀಡುವ ಸಾಲ–ಟ್ರಾಕ್ಟರ್, ಪಂಪ್‌ಸೆಟ್, ಟಿಲ್ಲರ್–ದುರುಪಯೋಗವಾಗಿದೆ. ಅಂದರೆ ಅವುಗಳ ಉಪಯೋಗ ಬುಡಕಟ್ಟುಗಳಿಗಿಂತಲೂ ಇತರರು ಬುಡಕಟ್ಟಿನ ಹೆಸರಿನಲ್ಲಿ ಲಾಭ ಮಾಡಿಕೊಳ್ಳುತ್ತಿದ್ದಾರೆ.

೬. ವಿದ್ಯುತ್ ವ್ಯತ್ಯಯದಿಂದಾಗಿ ವಿದ್ಯುತ್ ಪಂಪ್‌ಸೆಟ್‌ಗಳಿಗಿಂತಲೂ ಡೀಸೆಲ್ ಜನರೇಟರ್‌ಗಳು ಹೆಚ್ಚು ಉಪಯುಕ್ತವಾಗಿದ್ದು ಅವುಗಳ ಸಾಲ ಹೆಚ್ಚು ಮಾಡಬೇಕು.

೭. ಪಶುಸಂಗೋಪನೆ ಸಾಲ ನೀಡಿದರೂ ಹಳ್ಳಿಗಳಲ್ಲಿ ತರಬೇತಿ ಹೊಂದಿದ ಸಿಬ್ಬಂದಿ ಹಾಗೂ ಪಶುವೈದ್ಯ ಶಾಲೆಗಳ ಕೊರತೆಯಿಂದ ಪಶುಗಳ ಸಾವು ಹೆಚ್ಚಾಗುತ್ತಿದೆ.

೮. ಗೋಬರ್ ಗ್ಯಾಸ್ ಸ್ಥಾಪನೆಗೆ ಹೆಚ್ಚಿನ ಒತ್ತು ನೀಡಿ ಹಣಕಾಸಿನ ನೆರವು ನೀಡಬೇಕು.

೯. ಮಾರುಕಟ್ಟೆ ಸೌಕರ್ಯಗಳು ಹೆಚ್ಚಾಗಬೇಕು. ಮತ್ತು ಲ್ಯಾಂಪ್ಸ್ ಸೊಸೈಟಿಗಳಿಗೆ ಬ್ಯಾಂಕುಗಳು ಹೆಚ್ಚಿನ ಹಣಕಾಸಿನ ನೆರವು ನೀಡಬೇಕು.

೧೦. ಗಿರಿಜನ ಹಾಡಿಗಳ ಸಮೀಪದಲ್ಲಿ ಬ್ಯಾಂಕುಗಳ ಶಾಖೆಗಳನ್ನು ಹೆಚ್ಚು ಹೆಚ್ಚು ತೆರೆಯಬೇಕು.

೧೧. ಬುಡಕಟ್ಟು ಜನರಿಗೆ ಬ್ಯಾಂಕು ವ್ಯವಹಾರ ಹಾಗೂ ನೆರವು ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಕೆಲಸವಾಗಬೇಕಾಗಿದೆ.

೧೨. ಬುಡಕಟ್ಟು ಜನರು ಅನುತ್ಪಾದಕ ಉದ್ದೇಶ ಅಥವಾ ಅನುಭೋಗಕ್ಕಾಗಿ ಹೆಚ್ಚು ಸಾಲ ಮಾಡುತ್ತಿದ್ದು ಅದರ ಅಪಾಯಗಳ ಬಗ್ಗೆ ಅರಿವು ಮೂಡಿಸಬೇಕು.

೧೩. ಅನುಭೋಗ ಸಾಲದ ಬದಲು 'ಆಹಾರ ಬ್ಯಾಂಕ್' 'ಬೀಜ ಬ್ಯಾಂಕ್'ಗಳನ್ನು ಲೀಡ್ ಬ್ಯಾಂಕ್ ಗಳೇ ಸ್ಥಾಪಿಸಿ 'ಸರಕು ಸಾಲ'(Commodity loan) ನೀಡಬೇಕು.

೧೪. ತಾರತಮ್ಯದ ಬಡ್ಡಿದರ ಯೋಜನೆ ಜಾರಿಗೆ ತಂದು ಬುಡಕಟ್ಟುಗಳನ್ನು ಅತಿ ವಿಶೇಷ ಗುಂಪುಗಳೆಂದು ಪರಿಗಣಿಸಿ ಅತಿ ಕಡಿಮೆ ಬಡ್ಡಿದರದ ವಿಶೇಷ ಸಾಲ ನೀಡಬೇಕು.

೧೫. ಬುಡಕಟ್ಟು ಮಹಿಳೆಯರ ಸ್ವಸಹಾಯ ಸಂಘಗಳಿಗೆ 'ಸೂಕ್ಷ್ಮ ಸಾಲ' ನೀಡಬೇಕು.

೧೯. TRYSEM ಯೋಜನೆಯನ್ನು ಬುಡಕಟ್ಟು ಪ್ರದೇಶಗಳಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕ್ರಮ ಕೈಗೊಳ್ಳಬೇಕು. IRDP ಸಬ್ಸಿಡಿ ಸೂಕ್ತ ವ್ಯಕ್ತಿಗಳಿಗೆ ಸೂಕ್ತ ಸಮಯದಲ್ಲಿ ತಲುಪುವಂತೆ ಮಾಡಿ ಭ್ರಷ್ಟಾಚಾರ ನಿರ್ಮೂಲನೆ ಮಾಡಬೇಕು.

೨೦. ಜಿಲ್ಲಾ ಸಾಲ ಯೋಜನೆ ಅಡಿಯಲ್ಲಿ ಈ ಜಿಲ್ಲೆಗೆ ಸೂಕ್ತವಾದ ಸಾಲ ಸೌಲಭ್ಯ ಒದಗಿಸಬೇಕು

೨೧. ಬ್ಯಾಂಕುಗಳು ತಮ್ಮ ಸಾಲ ನೀಡಿಕೆ ಪ್ರಕ್ರಿಯೆಯನ್ನು ಸರಳಗೊಳಿಸಬೇಕು. ಅನಾವಶ್ಯಕ ಕಾಗದಪತ್ರ, ವಿಳಂಬಗಳಿಂದಾಗಿ, ಅನಕ್ಷರಸ್ಥ ಆದಿವಾಸಿಗಳು ಬ್ಯಾಂಕ್‌ಗಳಿಂದ ದೂರವಾಗಿ, ದೇಶಿಯ ಬ್ಯಾಂಕ್ ಕಪಿಮುಷ್ಟಿಗೆ ಸಿಲುಕುತ್ತಿದ್ದಾರೆ.

೨೧. ಬುಡಕಟ್ಟು ಬ್ಯಾಂಕ್‌ಗಳೆಂಬ ಹೊಸ ಏಕಗವಾಕ್ಷಿ ವ್ಯವಸ್ಥೆಯ ಅವಶ್ಯಕತೆಯಿದೆ.

ಈ ಹಿನ್ನೆಲೆಯಲ್ಲಿ ಅವರ ಸಮಸ್ಯೆಗಳ ಪರಿಹಾರಕ್ಕೆ ಹಾಗೂ ಅಭಿವೃದ್ಧಿಗೆ ಭಗೀರಥ ಪ್ರಯತ್ನವೇ ಆಗಬೇಕಿದೆ. ವಿವಿಧ ವಿಷಯಗಳ ವಿವಿಧ ರಂಗಗಳ ವಿದ್ವಾಂಸರೆಲ್ಲಾ ಸೇರಿ ವಿಸ್ತೃತ ಕ್ಷೇತ್ರ ಕಾರ್ಯ ವನ್ನಾಧರಿಸಿ ಪ್ರತಿ ಬುಡಕಟ್ಟಿಗೂ ಅದರ ಪರಿಸರ, ಸಮಸ್ಯೆ, ಸವಾಲುಗಳಿಗನುಗುಣವಾಗಿ ವಿಶೇಷ ನೀತಿ ನಿಯಮಗಳನ್ನು ರೂಪಿಸುವ ಅಗತ್ಯವಿದೆ.

ಬುಡಕಟ್ಟು ಅಭಿವೃದ್ಧಿಯಲ್ಲಿ ಸರ್ಕಾರೇತರ ಸಂಸ್ಥೆಗಳು ಅಥವಾ ಸ್ವಯಂ ಸೇವಾ ಸಂಸ್ಥೆಗಳು, ಸ್ವ ಸಹಾಯ ಗುಂಪುಗಳು ಇತ್ಯಾದಿಗಳ ಪಾತ್ರ[೧೭]

ಈ ನೆಲದ ಮೂಲನಿವಾಸಿಗಳೇ ಇಲ್ಲಿ ನಿರ್ವಸಿತರಾಗುವ ಸನ್ನಿವೇಶವಿದೆ. ಅವರ ಏಕಾಂಗಿತನ ಅನಕ್ಷರತೆ, ಮುಗ್ಧತೆ ಮತ್ತು ಶೋಷಣೆ ಇದನ್ನು ತಪ್ಪಿಸಲು ಅವರಿಗೆ ಹೊರಗಿನ ಸಹಾಯ ಅವಶ್ಯಕ. ಅದನ್ನು NGOಗಳು ಸ್ವಇಚ್ಛೆಯಿಂದ ನೀಡುತ್ತವೆ. ಈ ದಿಶೆಯಲ್ಲಿ ಪ್ರಮುಖ ಹೆಸರುಗಳೆಂದರೆ ಗಾಂಧಿ, ಟಕ್ಕರ್ ಬಾಪಾ(ಗುಜರಾತ್) ವೆರಿಯರ್ ಎಲ್ವಿನ್, ಮಹಾಶ್ವೇತಾದೇವಿ, ಡಾ. ಸುದರ್ಶನ್ ಮತ್ತು ಪ್ರಾದೇಶಿಕ ಮಟ್ಟದಲ್ಲಿ ಅಕ್ಸಡಾ, ಗ್ರೀನ್ ಇಂಡಿಯಾ, ಸಿದ್ದಿ ಜನವಿಕಾಸ ಸಂಘ ಉತ್ತರಕನ್ನಡ ಜಿಲ್ಲಾ ಬುಡಕಟ್ಟು ಅಭಿವ್ಯಕ್ತಿ ವೇದಿಕೆ, ಕರ್ನಾಟಕ ಸಿದ್ದಿ ಬುಡಕಟ್ಟು ಜನಪರ ಒಕ್ಕೂಟ, ಲಯೋಲಾ ವಿಕಾಸ ಕೇಂದ್ರ, ಸ್ಕೂಡ್ ವೇಸ್ ಇತ್ಯಾದಿ.

ಒಡೆಯರ್ ಡಿ. ಹೆಗಡೆ ಪ್ರಕಾರ 'ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಭಾರತ ದಂತಹ ರಾಷ್ಟ್ರದಲ್ಲಿ ಆಡಳಿತ ಕೂಡಾ ಹಿಂದುಳಿದಿರುತ್ತದೆ ಮತ್ತು ಇಂತಹ ಪರಿಸ್ಥಿತಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಸಾಮಾಜಿಕಾರ್ಥಿಕ ಪರಿವರ್ತನೆಗೆ ವೇಗತರಬಲ್ಲವು.'

ಸರಕಾರಗಳು ಮಾಡಬೇಕಾದ, ಆದರೂ ಮಾಡದೇ ಇರುವ, ಕಾರ್ಯಗಳನ್ನು ಈ NGOಗಳು ಮಾಡುತ್ತಿವೆ. ಇವುಗಳಿಗೆ ವಿದೇಶಗಳಿಂದ, ಕೇಂದ್ರ, ರಾಜ್ಯ ಸರ್ಕಾರಗಳಿಂದ ನೆರವು ಹರಿದು ಬರುತ್ತಿದೆ. ಸರಕಾರಗಳು ಹಲವಾರು ಕೆಲಸಗಳನ್ನು ಮಾಡಬೇಕಿದ್ದು ಭ್ರಷ್ಟಾಚಾರ, ಕೆಂಪು ಪಟ್ಟಿ, ಅಧಿಕಾರಶಾಹಿ ಬೇಜವಾಬ್ದಾರಿತನ, ಬುಡಕಟ್ಟುಗಳ ಬಗೆಗಿನ ಅಜ್ಞಾನ, ಏಕರೂಪದ ನೀತಿಗಳು ಇತ್ಯಾದಿ ಸಮಸ್ಯೆಗಳನ್ನು ಎದುರಿಸುತ್ತಿವೆ. ಬುಡಕಟ್ಟುಗಳದಾದರೂ ಒಂದೊಂದು ಪ್ರದೇಶ ಒಂದೊಂದು ಸಮಸ್ಯೆ ಆದರೆ ಎಲ್ಲ ಬುಡಕಟ್ಟುಗಳಿಗೂ ಒಂದೇ ಔಷಧವೆಂಬ ಸಾಮಾನ್ಯ ಸರ್ಕಾರಿ ಕಾರ್ಯಕ್ರಮಗಳು ಯಶಸ್ವಿಯಾಗಲಾರವು. ಪ್ರತಿ ಪ್ರದೇಶ, ಬುಡಕಟ್ಟಿಗೆ ಕಾಲಕ್ಕೆ ತಕ್ಕಂತೆ, ವಿವಿಧ ಪರಿಹಾರ ಯೋಜನೆಗಳು ಬೇಕಿದ್ದು, ಆಯಾ ಪ್ರದೇಶದಲ್ಲಿಯೇ ಹುಟ್ಟಿ ಬೆಳೆದು ಕೆಲಸ ಮಾಡುವ ಸ್ವಯಂಸೇವಾ ಸಂಸ್ಥೆಗಳು ತಮ್ಮ ಸ್ಥಳೀಯ ಪರಿಜ್ಞಾನ ಹಾಗೂ ನೇರ ಸಂಪರ್ಕ ಸಂಬಂಧಗಳಿಂದ ಈ ಕೆಲಸವನ್ನು ಚೆನ್ನಾಗಿ ಮಾಡಬಲ್ಲವು. CAPART- (Council for advancement of Peoples action and Rural Technology) ಭಾರತದ ಸ್ವಯಂ ಸೇವಾ ಸಂಸ್ಥೆಗಳ ಚಟುವಟಿಕೆಗಳನ್ನು ಉತ್ತೇಜಿಸುವ ಕೇಂದ್ರ ಸಂಸ್ಥೆ ಇದಾಗಿದ್ದು ಸಂಘ ಸಂಸ್ಥೆಗಳ ನೋಂದಣಿ ಕಾಯಿದೆ ಸೆಪ್ಟೆಂಬರ್ ೧೯೮೮ರನ್ವಯ ನೋಂದಾಯಿಸ ಲಾಗಿದೆ. ಇದಕ್ಕಿಂತಲೂ ಮೊದಲು ಕಾರ್ಯ ನಿರ್ವಹಿಸುತ್ತಿದ್ದ PADI-Peoples Action Development India, CART-Council for advancement of Rurl technologyಗಳನ್ನು ವಿಲೀನಗೊಳಿಸುವ ಮೂಲಕ CAPARTನ್ನು ಸ್ಥಾಪಿಸಲಾಯಿತು. ಇದು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯ ನೇತೃತ್ವದ ಅರೆಸ್ವಾಯತ್ತ ಸಂಸ್ಥೆಯಾಗಿದ್ದು, ಗ್ರಾಮೀಣಾಭಿವೃದ್ಧಿಯಲ್ಲಿ ಪಾಲ್ಗೊಳ್ಳುವಿಕೆ ಮತ್ತು ಹೊಸ ತಂತ್ರಜ್ಞಾನಗಳ ಆವಿಷ್ಕಾರಕ್ಕೆ ಇವುಗಳನ್ನು ಉತ್ತೇಜಿಸುವ ಉದ್ದೇಶದಿಂದ ಆರ್ಥಿಕ ಮತ್ತು ತಾಂತ್ರಿಕ

ಸಹಾಯವನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡುತ್ತಿವೆ. ಇದಕ್ಕೆ ವಿವಿಧ ವಿದೇಶಿ ಸಂಸ್ಥೆಗಳು ಹಣಕಾಸಿನ ನೆರವು ನೀಡುತ್ತಿವೆ. ಅವುಗಳೆಂದರೆ 1. SIDA- Sweedish international Developmet 2. DANIDA-Danish international Development Agency 3. NORAD - Norwegian Agency for Development.*

ಸರಕಾರೇತರ ಸಂಸ್ಥೆಗಳು/ಸ್ವಯಂ ಸೇವಾ ಸಂಸ್ಥೆಗಳ ಗುಣಗಳು

೧. ಪ್ರದೇಶಕೇಂದ್ರಿತ ಮತ್ತು ಜನಕೇಂದ್ರಿತ

೨. ಸ್ಥಳೀಯ ಸಹಭಾಗಿತ್ವ

೩. ಆ ಪ್ರದೇಶದ ಮತ್ತು ಜನರ ಬಗ್ಗೆ ಪೂರ್ಣಮಾಹಿತಿ

೪. ಜನರಿಗೆ ಸದಾ ಲಭ್ಯವಾಗಿರುತ್ತಾರೆ

೫. ದೂರದ ಮೂಲೆಯ ಹಳ್ಳಿಗಳಲ್ಲೂ ಕೆಲಸ ಮಾಡಲು ತಯಾರಿರುತ್ತಾರೆ.

೬. ಕಡಿಮೆ ವೆಚ್ಚ

೭. ಹೊಂದಾಣಿಕೆ, ಆವಿಷ್ಕಾರಿ ಗುಣ, ಸೇವಾ ಮನೋಭಾವನೆ ಇತ್ಯಾದಿ

೮. ಇವು ತುಳಿತಕ್ಕೊಳಗಾದ ವರ್ಗಗಳ ಕಣ್ಣು, ಕಿವಿ, ಬಾಯಿಗಳಾಗಿ ಕೆಲಸ ಮಾಡುತ್ತವೆ.

೯. ಆರೋಗ್ಯ, ನೈರ್ಮಲ್ಯ, ಸ್ವ ಉದ್ಯೋಗ, ಗೃಹನಿರ್ಮಾಣ, ದೇಶಿ ಉತ್ಪಾದನೆಗೆ ಬೆಂಬಲ ಮತ್ತು ಮಾರುಕಟ್ಟೆ, ಸೂಕ್ತ ತಂತ್ರಜ್ಞಾನ ಮತ್ತು ತರಬೇತಿ ಇತ್ಯಾದಿ ಕ್ಷೇತ್ರಗಳಿಗೆ ಸೂಕ್ತ.

ದೋಷಗಳು

೧. ತ್ಯಾಗ ಮತ್ತು ನಿಃಸ್ವಾರ್ಥ ಮನೋಭಾವದ ಕೊರತೆ

೨. ಸ್ವಯಂಸೇವಕರಲ್ಲಿ ನಿಷ್ಠೆ, ಪ್ರಾಮಾಣಿಕತೆ ಮತ್ತು ದಕ್ಷತೆಯ ಕೊರತೆ

೩. ಇತರ ಸಂಘಟನೆಗಳೊಡನೆ ಪೈಪೋಟಿ ಮತ್ತು ಸಂಘರ್ಷ

೪. ರಾಜಕೀಯ ಹಸ್ತಕ್ಷೇಪ

೫. ಸೂಕ್ತ ಲೆಕ್ಕಪತ್ರ ದಾಖಲೆ ಮತ್ತು ಲೆಕ್ಕ ಪರಿಶೋಧನೆಯ ಕೊರತೆ

೬. ಸ್ವಾರ್ಥ, ದುರಾಸೆ ಇತ್ಯಾದಿಗಳಿಂದಾಗಿ ಮುಗ್ಧರ ಶೋಷಣೆ

೭. ಸರಕಾರಿ ಅಧಿಕಾರಿಗಳಿಂದ ಕಿರುಕುಳ ಮತ್ತು ಲಂಚದ ಬೇಡಿಕೆ

೮. ಧಾರ್ಮಿಕ ಮೂಲಭೂತವಾದೀ ಧೋರಣೆ

೯. ಸೂಕ್ತ ಕಾನೂನು ನಿಯಮಗಳ ಕೊರತೆ ಹಾಗೂ ಅತಿಯಾದ ನಿಯಂತ್ರಣ. ಒಟ್ಟಾರೆಯಾಗಿ ಸ್ವಯಂಸೇವಾ ಸಂಸ್ಥೆಗಳೇ ಎಲ್ಲ ಸಮಸ್ಯೆಗಳಿಗೆ ಪರಿಹಾರ ಎನ್ನಲಾಗದಿದ್ದರೂ ಅವು ಇನ್ನಷ್ಟು ವಿಸ್ತಾರಗೊಳ್ಳಬೇಕು ಮತ್ತು ಸರ್ಕಾರ ಅದಕ್ಕೆ ಅವಕಾಶ ಮಾಡಿಕೊಡಬೇಕು.

ಸರ್ಕಾರದಿಂದ ಧನಸಹಾಯ ಪಡೆದು, ಸರಕಾರದೊಡನೆ ಸಹಭಾಗಿತ್ವದ ಕೆಲಸ ಮಾಡುತ್ತಲೇ ಸರ್ಕಾರದ ದೋಷಪೂರಿತ ನೀತಿ ಮತ್ತು ದಬ್ಬಾಳಿಕೆಗಳ ವಿರುದ್ಧ ಹೋರಾಡಬೇಕಾದ ಅನಿವಾರ್ಯತೆ ಈ ಸ್ವಯಂ ಸೇವಾ ಸಂಸ್ಥೆಗಳಿಗಿದೆ. ಜನವಿರೋಧಿ, ಪರಿಸರವಿರೋಧಿ ಯೋಜನೆಗಳು, ಗಣಿಗಾರಿಕೆ, ಅರಣ್ಯನಾಶ, ಹಕ್ಕುಗಳ ದಮನ ಮುಂತಾದ ಸಮೂಹಗಳಲ್ಲಿ ಜನರನ್ನು ಎಚ್ಚರಿಸುವ, ಸಂಘಟಿಸುವ, ಹೋರಾಟಕ್ಕೆ ಹಚ್ಚುವ ಕೆಲಸವನ್ನು ಇವು ಮಾಡುತ್ತವೆ.

ಸರಕಾರ ಇವುಗಳನ್ನು ಸ್ಪರ್ಧಿಗಳು ಅಥವಾ ವೈರಿಗಳೆಂದು ಪರಿಗಣಿಸದೆ ಪ್ರೀತಿ ವಿಶ್ವಾಸದ ಸಂಬಂಧ ಬೆಳೆಸಿದರೆ ಇವು ನಿಜಕ್ಕೂ ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲವು.

ರುಡ್‌ಸೆಟ್- ಹಳಿಯಾಳದ ಮಾದರಿ[೧೮]

ಬುಡಕಟ್ಟು ಚಟುವಟಿಕೆಯ ಕೇಂದ್ರವಾದ ಹಳಿಯಾಳದ 'ದೇಶಪಾಂಡೆ ರುಡ್‌ಸೆಟ್ ಸಂಸ್ಥೆ' ಅಲ್ಪಕಾಲಾವಧಿಯ ಸ್ವ ಉದ್ಯೋಗ ತರಬೇತಿಗಳನ್ನು ನೀಡುತ್ತಿದೆ. ೧೮ ರಿಂದ ೪೫ ವರ್ಷದೊಳಗಿನ ಸಾಮಾನ್ಯ ಓದು ಬರಹ ಕಲಿತ ಎಲ್ಲರಿಗೂ ಇಲ್ಲಿ ತರಬೇತಿಗೆ ಅವಕಾಶವಿದ್ದು ಈಗಾಗಲೇ ಹಲವರು ಸಿದ್ದಿಯರು ಇಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಬೆತ್ತದ ಆಲಂಕಾರಿಕಗಳ ತರಬೇತಿ ನೀಡುವವರಲ್ಲಿ ಒಬ್ಬ ಸಿದ್ದಿ ಯುವಕನೂ ಇರುವುದು ವಿಶೇಷ. ಇದರ ವಿವರಗಳನ್ನುಳ್ಳ ಕರಪತ್ರದ ನಕಲನ್ನು ಅನುಬಂಧದಲ್ಲಿ ನೀಡಲಾಗಿದ್ದು ಇದೊಂದು ಅನುಕರಣೀಯ ಯೋಜನೆಯಾಗಿದೆ.

ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರಗಳು[೧೯]

'ಬುಡಕಟ್ಟುಗಳ ಪ್ರಮುಖ ಸಮಸ್ಯೆಗಳಾದ ಏಕಾಂತತೆ, ಹಿಂದುಳಿದ ತಾಂತ್ರಿಕತೆ, ಅನಕ್ಷರತೆ, ಸಾಲಬಾಧೆಗಳೆಲ್ಲದರ ಜೊತೆಗೆ ಮಾರುಕಟ್ಟೆ ಹಾಗೂ ಮಾರುಕಟ್ಟೆ ಜ್ಞಾನದ ಕೊರತೆಗಳೂ ಪ್ರಮುಖವಾಗಿವೆ. ಇದನ್ನು ನೀಗಿಸಲು ಸರ್ಕಾರ ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರಗಳನ್ನು ತೆರೆದಿವೆ. ಬುಡಕಟ್ಟುಗಳ ಉತ್ಪನ್ನ ಹಾಗೂ ಕಲಾಕೃತಿಗಳಿಗೆ ಮಾರುಕಟ್ಟೆಯೇ ಪ್ರಮುಖ ಆಧಾರವಾಗಿದೆ. ಆದರೂ ಇವು ಬುಡಕಟ್ಟು ಉತ್ಪನ್ನ ಹಾಗೂ ಕಲಾಕೃತಿಗಳ ಮಾರಾಟಕ್ಕಾಗಿಯೇ ಪ್ರತ್ಯೇಕ ಮಳಿಗೆಗಳನ್ನು ತೆರೆಯುವ ಅವಶ್ಯಕತೆಯಿದೆ. ಬುಡಕಟ್ಟುಗಳ ನೇಯ್ಗೆ, ಕರಕುಶಲತೆ, ಪಶುಸಾಕಣೆ, ಮೀನುಗಾರಿಕೆ, ಕೃಷಿ ಆಧರಿತ ಮತ್ತು ಅರಣ್ಯಾಧಾರಿತ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಮತ್ತು ಬೆಲೆ ಒದಗಿಸಿದರೆ ಅವರ ಜೀವನ ಹಸನಾಗುತ್ತದೆ. ಈ ದಿಶೆಯಲ್ಲಿ ಕೆವಿಐಗಳು ಪ್ರಮುಖ ಪಾತ್ರ ವಹಿಸಬಲ್ಲವು. ಆದರೆ 'ಗ್ರಾಮೀಣ–ನಗರ'ಗಳ ನಡುವಿನ ವಿಷಮತೆಗಳ ಬಗ್ಗೆ ಮಾತ್ರ ಗಮನ ಹರಿಸುವ, ಪ್ರಾದೇಶಿಕ ಅಸಮಾನತೆಯ ಮಾತಾಡುವ ವಿದ್ವಾಂಸರು ಹಾಗೂ ಅಧಿಕಾರಿಗಳು 'ಗ್ರಾಮೀಣ ಮತ್ತು ಬುಡಕಟ್ಟುಗಳ' ನಡುವಿರುವ ಅಂತರ ಹಾಗೂ ಸಮಸ್ಯೆಗಳ ಬಗ್ಗೆ ಚಿಂತಿಸುವುದೇ ಇಲ್ಲ. ಲ್ಯಾಂಪ್ ಸೊಸೈಟಿಗಳ ಜೊತೆ ಇವುಗಳನ್ನು ಸಮನ್ವಯಗೊಳಿಸುವುದರಿಂದ ಬುಡಕಟ್ಟುಗಳಿಗೆ ಹೆಚ್ಚಿನ ವರಮಾನ, ಮಾರುಕಟ್ಟೆ ದೊರೆಯಬಲ್ಲದು.

ಇವೆಲ್ಲಾ ಅವರ ಭೌತಿಕ ಅಭಿವೃದ್ಧಿಯ ಸಾಧ್ಯತೆಗಳಾದರೆ ಅವರ ಸಂಸ್ಕೃತಿ ಪರಂಪರೆ, ಆಹಾರ, ಚಿಕಿತ್ಸೆಯ ವಿಧಾನ, ಭಾಷೆ, ನೃತ್ಯ, ಕಾಡು, ಭೂಮಿ ಇತ್ಯಾದಿಗಳ ಮೇಲಿನ ಅವರ ಆಜನ್ಮ

ಹಕ್ಕನ್ನು ಮಾನ್ಯತೆ ಮಾಡಿ ಸೀಮಿತ ಪ್ರಮಾಣದಲ್ಲಿಯಾದರೂ ಸ್ವಾಯತ್ತತೆ ನೀಡುವ ಬಗ್ಗೆ ಚಿಂತಿಸಬೇಕಿದೆ. ಉದ್ದಿಮೆಗಳಿಗೆ, ಅಭಿವೃದ್ಧಿ ಯೋಜನೆಗಳಿಗೆ, ವನ್ಯಧಾಮಗಳಿಗೆ ಸಾವಿರಾರು ಎಕರೆ ಭೂಮಿ ನೀಡಬಹುದಾದರೆ ಈ ನೆಲದ ಮೂಲನಿವಾಸಿಗಳಿಗೆ ಒಂದು ಹಿಡಿ ಭೂಮಿ ನೀಡಲಾಗದೇ? ಅದೂ ಅವರು ತಲೆತಲಾಂತರಗಳಿಂದ ಬದುಕಿರುವ, ಭಾವನಾತ್ಮಕ ನೆಲೆಯಿರುವ ಭೂಮಿಯನ್ನು ಮಾನವೀಯತೆಯ ನೆಲೆಯಲ್ಲಿ ನೀಡಬಹುದು. 'ಬುಡಕಟ್ಟು ಮತ್ತು ರಾಜ್ಯಗಳ ಸಹಭಾಗಿತ್ವದ ಇಬ್ಬಖಾಲ್ದುನನ ಬರಹ ಮತ್ತು ಚಿಂತನೆಗಳು ಇದಕ್ಕೆ ಪೂರಕವಾಗಿಯೇ ಇದ್ದು ಇಂದಿಗೂ ಇಸ್ಲಾಮಿಕ್ ಜಗತ್ತಿನಲ್ಲಿ ಚರ್ಚಿಸಲ್ಪಡುತ್ತಿವೆ.'[೨೦] ಸ್ವಾಯತ್ತತೆ ಬೇಡವೆಂದಾದರೆ ಕನಿಷ್ಠ ಅವರ ಮೇಲೆ ಶೋಷಣೆ ಮಾಡದೆ ಅವರ ಹಕ್ಕುಗಳನ್ನಾದರೂ ಅವರಿಗೆ ನೀಡಿ ಅವರ ಪಾಡಿಗೆ ಅವರನ್ನು ಬದುಕಲು ಬಿಡಬಹುದು. ನಿರ್ಜೀವ ವಸ್ತುಗಳನ್ನೇ ಪ್ರೀತಿಸುವ ನಾವು ಜೀವಂತವಿರುವ ಸಹ ಮಾನವರಿಗೆ ಒಂದಷ್ಟು ಪ್ರೀತಿ ಹಂಚಲಾರೆವೇ?

ಕಾಡುಗಳನ್ನೇ ಆಶ್ರಯಿಸಿರುವ ಈ ಬುಡಕಟ್ಟು ಸಮುದಾಯಗಳಿಗೆ ಆತ್ಮವಿಶ್ವಾಸದಿಂದ ಸ್ವತಂತ್ರವಾಗಿ, ಮಾನವೀಯವಾಗಿ ಬದುಕಲು ಬೇಕಾಗುವ ಕನಿಷ್ಠ ವಾತಾವರಣವನ್ನು ಎಲ್ಲರೂ ಸೇರಿ ನಿರ್ಮಿಸಬೇಕಿದೆ. ಅಣೆಕಟ್ಟುಗಳಿಗೆ, ಗಣಿಗಾರಿಕೆಗೆ, ಉದ್ದಿಮೆಗಳಿಗೆ ಸಾವಿರಾರು ಎಕರೆ ನೀಡುವ ಸರ್ಕಾರ ದೇಶದ ಮೂಲನಿವಾಸಿಗಳಿಗೂ ಅರಣ್ಯ ಮಧ್ಯದಲ್ಲೇ ಒಂದಷ್ಟು ಭೂಮಿ ನೀಡಿ, ಅದೂ ಹೊಸದಾಗಿ ಅಲ್ಲದೆ ಅವರು ಪಾರಂಪರಿಕವಾಗಿ ಬಳಸಿಕೊಂಡ ಭೂಮಿಯನ್ನು ಅವರಿಗೆ ನೀಡುವ ಮೂಲಕ ಅವರ ವಿಶಿಷ್ಟ ಸಂಸ್ಕೃತಿ, ಪರಂಪರೆಗಳನ್ನು ಅವರಿಚ್ಚಿಸುವವರೆಗೂ ಅವರಿಂದ ಬೇರ್ಪಡಿಸೆ ಮಾನವೀಯತೆ ಮೆರೆಯಬೇಕಿದೆ. ಬಂಡವಾಳಶಾಹಿಗಳಿಗೆ ಈ ಭೂಮಿ ಲಾಭದ ಮೂಲವಾದರೆ ಬುಡಕಟ್ಟುಗಳಿಗೆ ಇದು ಜೀವನೋಪಾಯದ ಉಸಿರು. ಹೀಗಾಗಿ ಅವರು ನಂಬಿಕೊಂಡು ಬಂದ ಬದುಕಿನ ಮೂಲಕವೇ ಅವರನ್ನು ಸಬಲೀಕರಣಗೊಳಿಸಿ ಮಾನವಂತ ಜೀವನದ ಅವಕಾಶ ಕಲ್ಪಿಸಬೇಕಿದೆ. ಇದು ಸಂವಿದಾನಾತ್ಮಕವಾಗಿ ನಾವೇ ಘೋಷಿಸಿರುವ ಸಮಾನತೆ, ಬದುಕುವ ಹಕ್ಕು, ಸಮಾಜವಾದಿ ಸಮಾಜ ನಿರ್ಮಾಣದ ಆಶಯಗಳಿಗೆ ಪೂರಕವಾಗಿಯೇ ಇದೆ.

ನಮ್ಮ ಅಭಿವೃದ್ಧಿ ಮಾದರಿಗಳು ಏಕಮುಖವಾಗಿ ಬಂಡವಾಳಶಾಹಿ, ಬೃಹತ್ ಉದ್ದಿಮೆಗಳ ಪರವಾಗಿದ್ದು ಅವರ ಅಬ್ಬರದಲ್ಲಿ ಸಣ್ಣ ಸಮುದಾಯಗಳ, ಸಣ್ಣ ಕೈಗಾರಿಕೆಗಳ, ಕುಶಲಕಲೆಗಳ ನಾಶವಾಗುತ್ತಿರುವುದು, ಕಡು ಹಸಿರಿನ ಕಾಡುಗಳು ಬಿರುಬಿಸಿಲಿನ ಕಾಂಕ್ರಿಟ್ ಕಾಡುಗಳಾಗಿ ಪರಿಸರ ಅಸಮತೋಲನವಾಗುತ್ತಿರುವುದು ಈ ಏಕಮುಖ ಪ್ರವಾಹಕ್ಕೆ ಸಾಕ್ಷಿಗಳಾಗಿವೆ. ಇಲ್ಲಿ ಕೇವಲ ಕಾಡಿನ ನಾಶ ಹಾಗೂ ಗಿರಿಜನರ ಒಕ್ಕಲೆಬ್ಬಿಸುವಿಕೆ ಮಾತ್ರ ಕಣ್ಣಿಗೆ ಕಾಣುತ್ತಿದೆ. ಆದರೆ ವಾಸ್ತವಿಕವಾಗಿ ಈ ನಾಡಿನ ಬಹುದೊಡ್ಡ ವೈದ್ಯಕೀಯ, ಮೌಖಿಕ, ಮೌಲಿಕ ಪರಂಪರೆಗಳ ನಾಶ ಸದ್ದಿಲ್ಲದೆ ನಡೆಯುತ್ತಿದೆ. ಇದನ್ನು ಯಾವುದೇ ಲಿಖಿತ ದಾಖಲೆಗಳಿಲ್ಲದೆ ನೂರಾರು ತಲೆಮಾರುಗಳಿಂದ ಕಾಪಾಡಿಕೊಂಡು ಬಂದಿದ್ದ ಸಮುದಾಯಗಳ ಸ್ಥಿತ್ಯಂತರದೊಂದಿಗೆ ಇವು ನಾಶವಾಗುತ್ತಿವೆ. ಅರಣ್ಯ ಇಲಾಖೆ ಕೇವಲ

ಕಾಡಿನ, ಕಾಡುಪ್ರಾಣಿಗಳ ರಕ್ಷಣೆಯನ್ನೇ ಮುಂದೆ ಮಾಡಿಕೊಂಡು ಈ ಸಮುದಾಯಗಳನ್ನು ಕಡೆಗಣಿಸದಿದ್ದರೆ ಈ ಅಮೂಲ್ಯ ಪರಂಪರೆ ರಾಷ್ಟ್ರದ, ವಿಶ್ವದ ಆಸ್ತಿಯಾಗಿ ಉಳಿಯಬಹುದಿತ್ತು(ಅವರ ಹಂಚಿಕೊಂಡು ಬದುಕುವ, ಸಂಕಷ್ಟಗಳನ್ನು ಜೀವನದ ಅವಿಭಾಜ್ಯ ಅಂಗವಾಗಿ ಪರಿಗಣಿಸಿ ನಗುನಗುತ್ತಾ ಎಲ್ಲವನ್ನೂ ಎದುರಿಸುವ ಕಲೆ ನಮಗೂ ಸಿದ್ಧಿಸಿದ್ದರೆ ನಮ್ಮ ಬದುಕೂ ಇನ್ನಷ್ಟು ಸಹನೀಯವಾಗುತ್ತಿತ್ತು).

'ಫೋರ್ಬ್ಸ್' ಪತ್ರಿಕೆಯ ಇತ್ತೀಚಿನ ಸಮೀಕ್ಷೆ ಪ್ರಕಾರ ವಿಶ್ವದ ೧೦೦ ಜನ ಅತ್ಯಂತ ಶ್ರೀಮಂತರು ತಮ್ಮ ಕಳೆದ ವರ್ಷದ ಸಂಪತ್ತಿಗೆ ೨೪೦ ಶತಕೋಟಿ ಡಾಲರ್‌ಗಳನ್ನು ಸೇರಿಸಿದ್ದಾರೆ. ನಿಜಕ್ಕೂ ಅವರಿಗೆ ಅಷ್ಟೊಂದು ಹಣದ ಅವಶ್ಯಕತೆ ಇಲ್ಲ ಎಂಬುದೇ ದುರ್ವಿಧಿ. ವಿಶ್ವ ಜನಸಂಖ್ಯೆಯ ಶೇ. ೨ರಷ್ಟಿರುವ (೬೦ ದಶಲಕ್ಷ ಜನ) ೨.೫. ದಶ ಲಕ್ಷಕೋಟಿ ಜನರ ಒಟ್ಟು ಸಂಪತ್ತನ್ನು ಹೊಂದಿದ್ದಾರೆ. ಮೇಲಿನ ೦.೦೧ ಪ್ರತಿ ಶತ ಜನ(೬ ಲಕ್ಷ ಜನ) ೨ ಶತಕೋಟಿ ಜನರ ಸಂಪತ್ತಿಗೆ ಸಮನಾದ ಸಂಪತ್ತನ್ನು ಕ್ರೋಡೀಕರಿಸಿಕೊಂಡಿದ್ದಾರೆ. ಈಗ ವಿಶ್ವದಲ್ಲಿ ೧೨೦೦ ಶತಕೋಟ್ಯಧಿಪತಿಗಳಿದ್ದರೆ ಇನ್ನೊಂದು ಕಡೆ ಪ್ರತಿ ವರ್ಷ ೭೦ ದಶಲಕ್ಷ ಹೆಚ್ಚುವರಿ ಮಕ್ಕಳು ಅಂದರೆ ಪ್ರತಿ ದಿನ ೧,೯೨,೫೦೦ ಹೊಸ ಬಾಯಿಗಳು ಆಹಾರಕ್ಕಾಗಿ ಹೆಚ್ಚಾಗುತ್ತಿವೆ. FAO ವರದಿ ಪ್ರಕಾರ ಈಗಾಗಲೇ ಇರುವ ಜನ ಸಂಖ್ಯೆಗೆ ಆಹಾರದ ಕೊರತೆ ಇದ್ದು ಆಹಾರ ಸಂಗ್ರಹಣಾ ವೆಚ್ಚವೂ ಪ್ರತಿವರ್ಷ ಹೆಚ್ಚಾಗುತ್ತಿದೆ. ಆದರೂ ಶ್ರೀಮಂತ ರಾಷ್ಟ್ರಗಳಲ್ಲೇ ಶೇ.೪೦ರಷ್ಟು ಆಹಾರ ವ್ಯರ್ಥವಾಗುತ್ತಿದೆ. ೧೦೦ ಜನ ಅತ್ಯಂತ ಶ್ರೀಮಂತರು ಪ್ರತಿ ವರ್ಷ ಹೆಚ್ಚಿಸುತ್ತಿರುವ ೨೪೦ ಶತಕೋಟಿ ಡಾಲರ್‌ಗಳಿಂದ ವಿಶ್ವದ ಬಹುತೇಕ ಸಮಸ್ಯೆಗಳನ್ನು ಪರಿಹರಿಸಬಹುದಾದರೂ ೨೦೫೦ರ ಹೊತ್ತಿಗೆ ಜಗತ್ತಿಗೆ ಬರಲಿರುವ ೨ ಶತಕೋಟಿ ಹೊಸಬರಿಗೆ, ಅದರಲ್ಲೂ ಬಡರಾಷ್ಟ್ರಗಳಲ್ಲೇ ಬರಲಿರುವವರಿಗೆ ಎಲ್ಲಿ, ಹೇಗೆ ಅವಕಾಶ ಕಲ್ಪಿಸುವು ದೆಂಬುದೇ ದೊಡ್ಡ ಸಮಸ್ಯೆಯಾಗಲಿದೆ.

ಈ ಎಲ್ಲ ಸಮಸ್ಯೆಗಳಿಗೆ ಪರಿಹಾರವೂ ಸ್ಪಷ್ಟವಿದೆ. ಅದೆಂದರೆ, 'ಸಂಪತ್ತು ಸಾಕಷ್ಟಿದೆ. ಆದರೆ ಅದು ನ್ಯಾಯಸಮ್ಮತವಾಗಿ, ಸಮಾನವಾಗಿ ಹಂಚಿಕೆಯಾಗಿಲ್ಲ'. ಸಿರಿವಂತರು ಇನ್ನಷ್ಟು ಸಿರಿವಂತರಾಗುವ, ಬಡವರು ಮತ್ತಷ್ಟು ಕಡುಬಡವರಾಗುವ ಈ ಪರಿಸ್ಥಿತಿ ಜನರಲ್ಲಿ ಹತಾಶೆ, ಅಸಹನೆ ಆಕ್ರೋಶಗಳಿಗೆ ಕಾರಣವಾಗುತ್ತಿವೆ. ಇತಿಹಾಸವನ್ನು ಶಾಲೆಗಳಲ್ಲಿ ನಾವೆಲ್ಲಾ ಕಲಿತಿದ್ದರೂ ವ್ಯರ್ಥ. ಏಕೆಂದರೆ ಅದರಿಂದ ನಾವ್ಯಾರೂ ಪಾಠ ಕಲಿಯುತ್ತಿಲ್ಲ. ೧೦೦ ಜನ ಶತಕೋಟ್ಯಧೀಶರೂ ಕಲಿಯುತ್ತಿಲ್ಲ. ಈಗ ನಮಗಿರುವ ದಾರಿಗಳು ಎರಡೇ. ಇದೇ ವ್ಯವಸ್ಥೆಯು ಟೈಂ ಬಾಬ್‌ನಂತೆ ಸ್ಫೋಟಗೊಳ್ಳುವವರೆಗೂ ಕಾಯುವುದು (ಸ್ವಿಡ್ಜರ್‌ಲ್ಯಾಂಡ್‌ನ ಚುನಾವಣೆ, ಗ್ರೀಕ್ ಅಶಾಂತಿ, ವಾಲ್‌ಸ್ಟ್ರೀಟ್ ಆಕ್ರಮಿಸಿ ಆಂದೋಲನ ಇತ್ಯಾದಿಗಳೆಲ್ಲಾ ಈ ಬಿಗ್‌ಬ್ಯಾಂಗ್‌ನ ಮುನ್ಸೂಚಿ ಬಾಂಬ್‌ಗಳು ಮಾತ್ರ) ಇಲ್ಲವೇ ಹಿಂದಿನ ಬುಡಕಟ್ಟು ಜನರ ಪರಸ್ಪರ ಸಹಕಾರದ, ಹಂಚಿಕೊಳ್ಳುವ ಹಾದಿಗೆ ಮರಳಿ ದೀರ್ಘ ಶಾಂತಿಗೆ ಶ್ರಮಿಸುವುದು. ಸಮಸ್ಯೆ ಇರುವುದು ಜನ ಜಾಗೃತಿಯಲ್ಲ ಬದಲಾಗಿ ರಾಜಕೀಯ ಇಚ್ಛಾಶಕ್ತಿಯ ಕೊರತೆ ಮಾತ್ರ. ಜಸ್ಟಿಸ್

ಮಾರ್ಕಾಂಡೇಯ ಕಾಟ್ಜು ಅವರೂ ಕೂಡ ಇದೇ ಮಾತುಗಳನ್ನೇ ಹೇಳಿದ್ದಾರೆ. 'ಅಪಾರ ಹಸಿವೆ, ಭಾರಿ ಬಡತನ, ಕಾಡುವ ನಿರುದ್ಯೋಗ, ಏರುವ ಬೆಲೆಗಳು, ಬಡವರಿಗೆ ಕನಸಾಗಿರುವ ಆರೋಗ್ಯ ಸೌಲಭ್ಯಗಳು, ರೈತರ ಆತ್ಮಹತ್ಯೆಗಳು, ಮಕ್ಕಳ ಅಪೌಷ್ಟಿಕತೆ... ಇತ್ಯಾದಿಗಳೆಲ್ಲಾ ಭಾರಿ ಸ್ಫೋಟಕ ಮಿಶ್ರಣಗಳಾಗಿದ್ದು ಇಂದಿನ ರಾಜಕಾರಣಿಗಳು ಇನ್ನೂ ಎಚ್ಚೆತ್ತುಕೊಳ್ಳದಿದ್ದರೆ(ಆ ಸಾಧ್ಯತೆ ತುಂಬಾ ಕಡಿಮೆ) ಅನಾಗರಿಕತೆ, ಅಸ್ಥಿರತೆಗಳ ಸುದೀರ್ಘ ಕಷ್ಟಕಾಲ ಭಾರತಕ್ಕೆ ಅನಿವಾರ್ಯವಾಗಲಿದೆ ಮತ್ತು ಆ ಕಾಲ ತುಂಬಾ ದೂರವೇನೂ ಇಲ್ಲ.'[೨೨]

ಅಡಿಟಿಪ್ಪಣಿಗಳು

೧. ವಿವೇಕ ರೈ ಬಿ.ಎ., ಆದಿವಾಸಿ ಆಖ್ಯಾನ, ಮುನ್ನುಡಿ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ೨೦೦೮.

೨. Sibi Zakarias, The Microlevel Impact of Tribal Development Programmes Among the Kadar Tribe of Kerala, Project Report, Centere for Development Studies, Thiruvanthapuram, p. 7-9, 2003.

೩. ಮೇತ್ರಿ ಕೆ.ಎಂ., ಸರಕಾರದ ಬುಡಕಟ್ಟು ಅಭಿವೃದ್ಧಿ ಯೋಜನೆಗಳು, ಆದಿವಾಸಿ ಆಖ್ಯಾನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ಪು.೫೨೫, ೨೦೦೮.

೪. ಕಾರವಾರ ಜಿಲ್ಲಾ ಪಂಚಾಯತ್ ದಾಖಲೆಗಳು

೫. ಅದೇ,

೬. ಸಮೀಕ್ಷೆ

೭. ಅದೇ,

೮. ನಾಗೇಶ್ ಹೆಗಡೆ, ಬಡತನದ ಅಧುನೀಕರಣ, ಅಭಿವೃದ್ಧಿಯ ಅಂಧಯುಗ, ಭೂಮಿ ಬುಕ್ಸ್, ಬೆಂಗಳೂರು, ಪು. ೧೧–೧೫, ೨೦೧೦.

೯. Martin Nie, "The use of Co-Management and protected land use designations to protect tribal cultural resource and reserved treaty Rights on Federal land." Pp. 585-646, 2008.

೧೦. ನಾಗೇಶ್ ಹೆಗಡೆ, ಬಡತನದ ಅಧುನೀಕರಣ, ಅಭಿವೃದ್ಧಿಯ ಅಂಧಯುಗ, ಭೂಮಿ ಬುಕ್ಸ್, ಬೆಂಗಳೂರು, ಪು. ೧೧–೧೫, ೨೦೧೦.

೧೧. ಅದೇ, ಪು.೧೬

೧೨. ಪ್ರೇಮ ಮತ್ತು ಬುಡಕಟ್ಟುಗಳು, ಆದಿವಾಸಿ ಆಖ್ಯಾನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ಪು. ೧೨೮–೧೨೯, ೨೦೦೮.

೧೩. ಸಕ್ಸೇನಾ ಎಸ್.ಸಿ., ಬುಡಕಟ್ಟು ಜನರ ಹಕ್ಕುಗಳು (ಕನ್ನಡಕ್ಕೆ) ಕು. ಲಾಸ್ಯ ಬಿ. 'ಯೋಜನಾ' ಅಭಿವೃದ್ಧಿ ಮಾಸಪತ್ರಿಕೆ. ಪು. ೧೬ರಿಂದ ೧೮, ಏಪ್ರಿಲ್ ೨೦೧೧.

೧೪. Sikhya, A 10th Class Girl from Orissa to The Chief Minister, The EVS book of V[th]std. CBSE. p.187, 2013.

೧೫. ಸಾಯಿನಾಥ ಪಿ., ಬರ ಅಂದ್ರೆ ಎಲ್ಲರಿಗೂ ಇಷ್ಟ, (ಅನು) ಜಿ.ಎನ್. ಮೋಹನ, ಅಭಿನವ ಪ್ರಕಾಶನ, ಬೆಂಗಳೂರು, ಪು.೪೩, ೨೦೧೨.

೧೬. Basant Mehta & PC Mehta (Ed.,) Perspectives of Tribal Economy, Intellectual Publishing House, New Delhi, p.79, 1997.

೧೭. ಅದೇ ಪು.೧೬

೧೮. ಕ್ಷೇತ್ರಕಾರ್ಯ

೧೯. Prasad R., Anita K Sharvani. Role of KVI Tribal Development a study, Perspectives of Tribal Economy, Intellectual Publishing House, New Delhi, p.117, 1997

೨೦. ಪ್ರಶಾಂತ್ ಎಚ್.ಡಿ., ಬುಡಕಟ್ಟು ಪರಿಕಲ್ಪನೆ: ಕೆಲವು ಟಿಪ್ಪಣಿಗಳು, ಆದಿವಾಸಿ ಆಖ್ಯಾನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ಪು. ೧೩೮, ೨೦೦೮.

೨೧. Roberto Savio, Stopping the Rich - Switzerland Shows the way ಡೆಕ್ಕನ್ ಹೆರಾಲ್ಡ್ – ಪು.೧೦, ಬುಧವಾರ, ೧೩.೩.೨೦೧೩.

ಅಧ್ಯಾಯ ಏಳು

ಉಪಸಂಹಾರ

೧. ಅಧ್ಯಯನದ ಫಲಿತಗಳು

೨. ಪರಿಹಾರೋಪಾಯಗಳು

ಅಧ್ಯಾಯ ಏಳು

ಉಪಸಂಹಾರ

ಸಿದ್ದಿಗಳು ಈ ನಾಡಿನ ವಿಶಿಷ್ಟ ಬುಡಕಟ್ಟು ಸಮುದಾಯದವರು. ಇವರು ಆಫ್ರಿಕಾದಿಂದ ಗುಲಾಮರಾಗಿ ಇಲ್ಲಿಗೆ ಬಂದು, ನಂತರದ ಕಾಲಘಟ್ಟದಲ್ಲಿ ನಾಡಿನಿಂದ ತಪ್ಪಿಸಿಕೊಂಡು ಕಾಡಿಗೆ ಹೋಗಿ, ಮತ್ತೆ ಆದಿಮ ಜೀವನವನ್ನು ಆರಂಭಿಸಿದ್ದಾರೆ. ಇದೀಗ ಪರಿಶಿಷ್ಟ ಬುಡಕಟ್ಟಿನ ಸ್ಥಾನ ಪಡೆದಿರುವ ಇವರ ಅರ್ಥಿಕತೆಯ ಹಿನ್ನೆಲೆಯಲ್ಲಿ, ಬುಡಕಟ್ಟು ಅರ್ಥಿಕತೆಯನ್ನು ವಿವೇಚಿಸುವ ಈ ಅಧ್ಯಯನ ಅಂತರ್‌ಶಿಸ್ತೀಯ ಹಿನ್ನೆಲೆಯ 'ಬುಡಕಟ್ಟು ಅರ್ಥಿಕತೆ' ಎಂಬ ಜ್ಞಾನಶಾಸ್ತ್ರದ ಹೊಸ ಶಾಖೆಯ ವಿಶ್ಲೇಷಣೆಯ ಹೊಸ ಪ್ರಯತ್ನವಾಗಿದೆ. ಅರ್ಥಶಾಸ್ತ್ರವೆಂಬ ಅಧುನಿಕ ಮುಖ್ಯವಾಹಿನಿಯ ಭೌತಿಕವಾದಿ ಶಾಸ್ತ್ರವನ್ನು ಬುಡಕಟ್ಟೆಂಬ ಭಾವನಾತ್ಮಕಪ್ರಧಾನ ಜೀವನದ ಜೊತೆ ಕಸಿಮಾಡುವ ಚಿಂತನೆ ಇದಾಗಿದೆ. ಲೋಹಿಯಾ ಅವರು ಹೇಳುವಂತೆ 'ಆದಿವಾಸಿಯೊಬ್ಬ ತನ್ನ ಬಡತನದ ನಡುವೆಯೂ ಗಾನ, ನೃತ್ಯ ಹಾಗೂ ನಗುವ ಶಕ್ತಿಯ ಸಹಜ ಆನಂದವನ್ನು ನಿರಂತರವಾಗಿ ಉಳಿಸಿಕೊಂಡು ಬಂದಿದ್ದಾನೆ. ಈ ಅರಣ್ಯವಾಸಿಗಳು ಹಾಗೂ ಗುಡ್ಡಗಾಡು ಜನರಿಂದ ಇಡೀ ಭಾರತ ಆನಂದದ ಸಂಸ್ಕೃತಿಯನ್ನು ಕಲಿಯಬೇಕಿದೆ ಹಾಗೂ ಇದಕ್ಕೆ ಪ್ರತಿಯಾಗಿ ಆದಿವಾಸಿಗಳಿಗೆ ಕೃಷಿ ಹಾಗೂ ಕೈಗಾರಿಕೆಯ ಯಂತ್ರಗಳನ್ನು ತಲುಪಿಸಬೇಕಿದೆ. ತನ್ನ ಧಮನಿಗಳಲ್ಲಿ ಹರಿಯುತ್ತಿರುವ ರಕ್ತದ ಗಣನೀಯ ಪ್ರಮಾಣ ಆದಿವಾಸಿ ರಕ್ತವೇ ಎಂಬುದನ್ನು ಇಡೀ ಭಾರತ ನೆನಪಿನಲ್ಲಿಡಬೇಕು. ಈ ಸಂಗಮ ಸಾವಿರಾರು ವರ್ಷಗಳ ಹಿಂದೆಯೇ ಆಗಿರುವಂಥದ್ದು. ಇದೀಗ ಹೊಸ ರಕ್ತಮಿಶ್ರವೊಂದು ಸಂಭವಿಸುವುದು ಅನಿವಾರ್ಯವಾಗಿದೆ.' ಆದಿವಾಸಿಗಳ ಸರಳ, ನೈಸರ್ಗಿಕ, ಮಿತಬಯಕೆ, ಮಿತ ಉತ್ಪಾದನೆ ಮತ್ತು ಅಪರಿಮಿತ ಸಂತೋಷದ ಜೀವನ, ಸುಖವೆಂಬ ಮರೀಚಿಕೆಯ ಬೆನ್ನುಹತ್ತಿರುವ ನಾಡಿನ ಜನರಿಗೆ ಪಾಠವಾಗಬಲ್ಲದು. ತಾವು ಸಾಕಿದ ಪ್ರಾಣಿಗಳನ್ನಷ್ಟೇ ಅಲ್ಲದೆ ಸಕಲ ಚರಾಚರಗಳನ್ನು

ಹಿರಿಯ ಆತ್ಮಗಳೆಂದು ಬಗೆದು ಅವುಗಳನ್ನು ರಕ್ಷಿಸುವ, ಪೂಜಿಸುವ ಅವರ ಮನಸ್ಸು ನಮ್ಮಲ್ಲಿಯ ಮನುಷ್ಯ, ಮನುಷ್ಯರ ಶೋಷಣೆಯನ್ನು ಗುಲಾಮಗಿರಿಯನ್ನು ತಪ್ಪೆಂದು ತಿಳಿಸಿ ಕಣ್ಣು ತೆರೆಸಬಹುದಿತ್ತು. ಆದರೆ ಇದೀಗ ಆಗುತ್ತಿರುವುದೇ ಬೇರೆ ನಮ್ಮ ಟಿ.ವಿ., ಮೊಬೈಲ್, ಆಧುನಿಕ ಉಡುಗೆ ತೊಡುಗೆ, ಆಚಾರ ವಿಚಾರಗಳೇ ಶ್ರೇಷ್ಠವೆಂದೂ ಬುಡಕಟ್ಟುಗಳ ಜೀವನ ಕೀಳೆಂಬ ಮನೋಭಾವನೆ ತುಂಬಿ ಅವರ ಮನಃಶಾಂತಿ, ಸಂಪ್ರದಾಯ, ನಂಬಿಕೆ ಮತ್ತು ಮೌಲ್ಯಗಳನ್ನು ನಾಶ ಮಾಡಿ ಅವರಿಗೆ ವಿವಿಧ ರೋಗಗಳನ್ನು ಹಂಚಿ ನಾವು ಸಾಧಿಸುತ್ತಿರುವುದೇನು? ಅವರ ನಿಶ್ಚಿತ ಆರ್ಥಿಕ ಮೂಲಗಳನ್ನು ನಾಶ ಮಾಡಿ ಅನಿಶ್ಚಿತ ಮೂಲಗಳನ್ನೇ ಅವಲಂಬಿಸುವಂತೆ ಮಾಡಿರುವುದು, ಸಾಮಾಜಿಕ, ಶೈಕ್ಷಣಿಕ ಹಿಂದುಳಿಯುವಿಕೆ ಇತ್ಯಾದಿಗಳಿಂದ ಈ ಸಮುದಾಯಗಳ ವರ್ತಮಾನವನ್ನು ಎದುರಿಸಿ ನಿಲ್ಲಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅವರಿಗೆ ಸಾಮಾಜಿಕವಾಗಿ ಗೌರವ, ಉನ್ನತ ಸ್ಥಾನಮಾನ, ಶೈಕ್ಷಣಿಕ ಪ್ರಗತಿಗೆ ಅವಕಾಶ ನೀಡಿದಲ್ಲಿ ಅವರೂ ವರ್ತಮಾನದ ಹಾದಿಯಲ್ಲಿ ಧೃಡವಾದ ಹೆಜ್ಜೆ ಊರಲು ಅವಕಾಶವಾಗುತ್ತದೆ.

ರಾಜಕೀಯವಾಗಿ ಕೂಡಾ ಹಿಂದುಳಿದಿದ್ದ ಸಿದ್ದಿ ಜನಾಂಗ ಇಂದು ಗ್ರಾಮ ಹಾಗೂ ತಾಲೂಕು ಪಂಚಾಯಿತಿ ಮಟ್ಟದಲ್ಲಿ ಛಾಪು ಮೂಡಿಸುತ್ತಿದೆಯಾದರೂ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಯಾವುದೇ ಪ್ರಮುಖ ಸ್ಥಾನ ಪಡೆಯಲು ವಿಫಲವಾಗಿದೆ. ಜೊತೆಗೆ ರಾಜಕೀಯ ಪಕ್ಷಗಳು ಈ ಸಮುದಾಯಗಳನ್ನೇ ಒಡೆದು ಒಬ್ಬರ ಮೇಲೆ ಇನ್ನೊಬ್ಬರನ್ನು ಎತ್ತಿಕಟ್ಟುತ್ತಿರುವುದು ಕಂಡುಬರುತ್ತಿದೆ. ಇದಕ್ಕೆ ಇಡೀ ಜನಾಂಗಕ್ಕೆ ನಾಯಕತ್ವದ ಕೊರತೆ ಮತ್ತು ಜಾತಿಭೇದಗಳು ಕಾರಣವಾಗಿವೆ. ಮೀಸಲಾತಿ ದೊರೆತ ಸುಮಾರು ಹತ್ತು ವರ್ಷಗಳ ನಂತರವೂ ಅದರ ಲಾಭವನ್ನು ಸಂಪೂರ್ಣವಾಗಿ ಪಡೆಯಲು ಈ ಸಮುದಾಯಕ್ಕಿನ್ನೂ ಸಾಧ್ಯವಾಗಿಲ್ಲ. ಇದರ ಪ್ರಜ್ಞೆ ಮೂಡಿಸಬೇಕಿರುವ ಸ್ಥಳೀಯ ಎನ್‌ಜಿಓಗಳು, ಸಮಾಜಕಲ್ಯಾಣ ಇಲಾಖೆ, ರಾಜಕೀಯ ಪಕ್ಷಗಳು ಈ ದಿಕ್ಕಿನಲ್ಲಿ ಇನ್ನಷ್ಟು ಕ್ರಿಯಾಶೀಲರಾಗಬೇಕಿದೆ.

ಲಿಂಗಸಂಬಂಧಿ ಆಯಾಮದಿಂದ ನೋಡಿದರೆ ಸಿದ್ದಿಗಳಲ್ಲಿ ಪಿತೃಪ್ರಧಾನ ಕುಟುಂಬ ತುಂಬಾ ಪ್ರಭಲವಾಗಿದ್ದು ಸ್ತ್ರೀಯರಿಗೆ ಸಂಸಾರದ ನಿರ್ಧಾರಗಳಲ್ಲಿ ಪಾಲ್ಗೊಳ್ಳುವ ಅವಕಾಶಗಳು ಕಡಿಮೆ ಇವೆ. ಇದರ ನಡುವೆಯೂ ಲಿಂಗಾನುಪಾತದ ದೃಷ್ಟಿಯಿಂದ ಸಿದ್ದಿಯರಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದ್ದು ಪಿಯುಸಿವರೆಗಿನ ಶಿಕ್ಷಣದಲ್ಲಿ ಹೆಣ್ಣುಮಕ್ಕಳೇ ಮುಂದಿದ್ದಾರೆ. ಆದರೆ ಮುಂದಿನ ವಿದ್ಯಾಭ್ಯಾಸದಲ್ಲಿ ಇವರ ಸಂಖ್ಯೆ ತುಂಬಾ ಕಡಿಮೆ ಇರುವುದು ಬಾಲ್ಯವಿವಾಹ ಹಾಗೂ ಸ್ತ್ರೀ ಶಿಕ್ಷಣದ ಅಸಡ್ಡೆಯನ್ನು ಸೂಚಿಸುತ್ತಿದೆ. ಆದರೂ ದುಡಿಮೆಯಲ್ಲಿ ಅವರ ಪಾಲು ಗಣನೀಯವಾಗಿದೆ. ಇದೀಗ ಸಿದ್ದಿ ಸ್ತ್ರೀಯರು ಪಾರಂಪರಿಕ ಕಟ್ಟುಪಾಡುಗಳ ಹೊಸಿಲನ್ನು ದಾಟಿ ಸ್ತ್ರೀಶಕ್ತಿ ಸಂಘಗಳನ್ನು ಕಟ್ಟಿಕೊಂಡು ಸಬಲರಾಗುತ್ತಿದ್ದಾರೆ.

ಸಿದ್ದಿಯರ ಬದುಕು ನಿರಂತರವಾಗಿ ಒಂದು ಸ್ಥಿತ್ಯಂತರದಿಂದ ಇನ್ನೊಂದು ಸ್ಥಿತ್ಯಂತರಕ್ಕೆ ಒಳಗಾಗುತ್ತಿದ್ದು ಸ್ಥಿರವಾದ, ನಿರ್ದಿಷ್ಟ ನೆಲೆಯ ಹಾಗೂ ಸಿದ್ದಿ ಅಸ್ಮಿತೆಯ ಹುಡುಕಾಟದಲ್ಲಿದ್ದಾರೆ.

ಸಾಂಪ್ರದಾಯಿಕ, ನಾಚಿಕೆ ಸ್ವಭಾವದ ಸಿದ್ದಿಗಳು ಆಧುನಿಕತೆಗೆ ಇನ್ನೂ ತಮ್ಮನ್ನು ತಾವು ಸಂಪೂರ್ಣ ತೆರೆದುಕೊಳ್ಳಲು ಸಾಧ್ಯವಾಗಿಲ್ಲ. ಇತ್ತೀಚೆಗೆ ಸ್ವಯಂ ಸೇವಾ ಸಂಸ್ಥೆಗಳೊಡನೆ ಒಡನಾಟದಿಂದ ಸಿದ್ದಿಯರ ಬದುಕಿನಲ್ಲಿ ಬೆಳ್ಳಿಗೆರೆಗಳು ಮೂಡುತ್ತಿವೆ. ಸಿದ್ದಿ ಪುರುಷರಲ್ಲಿ ನಂಬಿಕೆ, ಸ್ವಾಭಿಮಾನ, ಹಕ್ಕುಗಳ ಬಗ್ಗೆ ಜಾಗೃತಿ ಮೂಡಿದ್ದು ಹೋರಾಟದಲ್ಲಿ ಧುಮುಕುತ್ತಿದ್ದಾರೆ. ಅರಣ್ಯ ಭೂಮಿಯ ಬದಲು ಸರಕಾರಿ ಭೂಮಿಗಳನ್ನು ಕಂಡುಕೊಂಡು ಅದರ ಮೇಲೆ ತಮ್ಮ ಹಕ್ಕುಗಳನ್ನು ಚಲಾಯಿಸುತ್ತಿದ್ದಾರೆ.

ಆಧುನಿಕ ಅರ್ಥವ್ಯವಸ್ಥೆಯು ಜಾಗತೀಕರಣದ ಬೆನ್ನೇರಿ ತನ್ನ ಯಾಂತ್ರೀಕರಣ, ಮಾರುಕಟ್ಟೆ, ಜಾಹಿರಾತು, ಶ್ರಮವಿಭಜನೆ, ಕಾರ್ಖಾನೆ, ಸಾರಿಗೆ, ಸಂಪರ್ಕ ಇತ್ಯಾದಿಗಳಿಂದ ಬೃಹತ್ ಪ್ರಮಾಣದ ಉತ್ಪಾದನೆ, ವಿತರಣೆಯಲ್ಲಿ ಯಶಸ್ವಿಯಾಗಿ ಗ್ರಾಹಕನ ಮುಂದೆ ಅಸಂಖ್ಯಾತ ಆಯ್ಕೆಗಳನ್ನು ತೆರೆದಿಟ್ಟಿದೆ. ಒಂದು ಕಾಲದಲ್ಲಿ ಐಶಾರಾಮಿ ಎಂದುಕೊಂಡಿದ್ದ ವಸ್ತುಗಳು ಇಂದು ಅವಶ್ಯಕವಾಗಿದ್ದು ಎಲ್ಲರಿಗೂ ಕೈಗೆಟುಕುವ ಬೆಲೆಗೆ, ಎಲ್ಲೆಡೆ ದೊರೆಯುತ್ತಿವೆ. ಸಂಬಳಗಳು ಐದಂಕಿ, ಆರಂಕಿಯನ್ನು ಮುಟ್ಟುತ್ತಿವೆ. ಸಾರಿಗೆ ಸಂಪರ್ಕಗಳಿಗೆ ಮನೋವೇಗ ಬಂದಿದೆ. ಇವೆಲ್ಲವುಗಳೂ ದಿನ ಬೆಳಗಾಗುವುದರಲ್ಲಿ ಸಂಭವಿಸಿದವಲ್ಲ. ಈ ಅರ್ಥಿಕತೆಯ ಮೂಲವಾದ ಆದಿಮಾನವನ ಜೀವನ ವಿಧಾನದಿಂದ ಹಂತ ಹಂತವಾಗಿ ಬೇಟೆ, ಆಹಾರ ಸಂಗ್ರಹಣೆ, ಪಶುಸಂಗೋಪನೆ, ಕುಮರಿ ಬೇಸಾಯ, ಮಡಿಕೆ, ನೇಯ್ಗೆ, ಕಮ್ಮಾರಿಕೆ, ಕಬ್ಬಿಣದ ಅನ್ವೇಷಣೆ, ಕರಕುಶಲ ಕಲೆ, ಕುಟುಂಬ, ಸಮುದಾಯ, ಖಾಸಗಿ ಆಸ್ತಿ, ಶ್ರಮ ವಿಭಜನೆ, ಗುಲಾಮಗಿರಿ, ಹಾಡಿ, ಹಳ್ಳಿ, ನಗರ, ರಾಜ್ಯ ಇತ್ಯಾದಿ ಹಲವಾರು ಹಂತಗಳನ್ನು ದಾಟಿ, ಪಲ್ಲಟಗಳನ್ನು ಸೃಷ್ಟಿಸಿ, ಇಂದಿನ ಜಾಗತೀಕರಣೋತ್ತರ ಆರ್ಥಿಕತೆಗೆ ತಲುಪಿದೆ. ಆದರೆ ಈ ಬದಲಾವಣೆಗಳು ಎಲ್ಲ ಕಡೆ, ಏಕಕಾಲದಲ್ಲಿ, ಏಕರೂಪವಾಗಿ ಘಟಿಸಿಲ್ಲ. ಕೆಲವು ಕಡೆ ನ್ಯಾನೋ ತಂತ್ರಜ್ಞಾನದ ಅತ್ಯಂತ ಆಧುನಿಕ ಆರ್ಥಿಕತೆಗಳಿದ್ದರೆ ಇನ್ನೂ ಕೆಲವು ಕಡೆ ಆದಿಮಾನವನ ಅರ್ಥಿಕತೆಗಳಿನ್ನೂ ಉಳಿದುಕೊಂಡಿವೆ.

ಈ ಹಿನ್ನೆಲೆಯಲ್ಲಿ ಆರ್ಥಿಕತೆ ಬೆಳೆದು ಬಂದ ದಾರಿಯನ್ನು ಸಿದ್ದಿಗಳ ಆರ್ಥಿಕತೆಯ ವಿನ್ಯಾಸ, ಪಲ್ಲಟಗಳು, ಗುಲಾಮಗಿರಿ, ಉತ್ಪಾದನಾ ಸಾಧನಗಳ ಮಾಲೀಕತ್ವದ ಬದಲಾವಣೆ ಗಳೊಡನೆ ಅನುಸಂಧಾನಿಸಿ ವಿಮರ್ಶಿಸುವ ಕ್ರಮ ಅನುಸರಿಸುತ್ತಾ ಬಂದಿದ್ದೇನೆ. ಇದಕ್ಕಾಗಿ ಸಿದ್ದಿಗಳ ಆಫ್ರಿಕನ್ ನಂಟು, ಗುಲಾಮಗಿರಿಯ ಕರಾಳ ಯಾತ್ರೆ, ಅವರ ಸಾಮಾಜಿಕ, ಸಾಂಸ್ಕೃತಿಕ ಜೀವನ ಇತ್ಯಾದಿಗಳನ್ನೂ ದಾಖಲಿಸಿದ್ದೇನೆ. ಇವೆಲ್ಲವುಗಳ ಹಿನ್ನೆಲೆಯಲ್ಲಿ ಅವರ ಪ್ರಸ್ತುತ ಆರ್ಥಿಕತೆ, ಸಮಸ್ಯೆಗಳು ಸವಾಲುಗಳು ಮತ್ತು ಭವಿಷ್ಯದ ಅವಕಾಶಗಳ ವಿಶ್ಲೇಷಣೆ ನಡೆಸಲಾಗಿದೆ. ಈ ಹಾದಿಯಲ್ಲಿ ಅರ್ಥಶಾಸ್ತ್ರದ ವಿವಿಧ ಪ್ರಯೋಗಗಳು, ಮಾನವಶಾಸ್ತ್ರದ ಸಂವೇದನೆಗಳನ್ನು ಪರಿಶೀಲಿಸಿ ಬುಡಕಟ್ಟು ಆರ್ಥಿಕತೆಯೆಂಬ ಉದಯೋನ್ಮುಖ ಜ್ಞಾನಶಿಸ್ತಿನ ವಿವರಣೆಯನ್ನು ನೀಡಲು ಪ್ರಯತ್ನಿಸಿದ್ದೇನೆ. ಜೊತೆಗೆ ಸಿದ್ದಿ ಆರ್ಥಿಕತೆಯ ಲಿಂಗಸಂಬಂಧಿ ಆಯಾಮಗಳು, ಆ ಪರಿಸರದ ಇತರ ಪ್ರಮುಖ ಬುಡಕಟ್ಟುಗಳ ಜೊತೆಗಿನ ಅವರ ಸಂಬಂಧದ ತೌಲನಿಕ ಅಧ್ಯಯನ ನಡೆಸಲಾಗಿದೆ.

ಇನ್ನು ಕೊನೆಯದಾಗಿ ಜಾಗತೀಕರಣದ ನಂತರದ ವಿದ್ಯಮಾನಗಳು ಸಿದ್ದಿಗಳ ಬದುಕಿನಲ್ಲಿ ತಂದ ಸ್ಥಿತ್ಯಂತರ, ಸವಾಲು ಮತ್ತು ಸಾಧ್ಯತೆಗಳನ್ನು ವಿವರಿಸಿ ಮುಖ್ಯವಾಹಿನಿಗೆ ಬರುವ, ಬಿಡುವ ಯಾವುದೇ ನಿರ್ಧಾರವನ್ನು ಆಯಾ ಸಮುದಾಯಗಳೇ ತೀರ್ಮಾನಿಸುವುದು ಸೂಕ್ತವಾದರೂ ಮುಖ್ಯವಾಹಿನಿಯ ಥಳಕು ಬಳುಕಿನ ಮುಖವಾಡವನ್ನು ಕಿತ್ತು ಅದರ ಅಸಲಿ ಮುಖವಾಡವನ್ನು, ಗುಪ್ತ ಅಜೆಂಡಾಗಳನ್ನು, ಕುಟಿಲ ಹುನ್ನಾರಗಳನ್ನು ಅನಾವರಣಗೊಳಿಸಿದ ನಂತರವಷ್ಟೇ ಅವರಿಗೆ ತೀರ್ಮಾನದ ತಿಳುವಳಿಕೆ ಮೂಡಿಸಲು ಸಾಧ್ಯ. ಬುಡಕಟ್ಟುಗಳಿಗೆ ಅವರು ವಾಸಿಸುವ ಪ್ರದೇಶದ ಮೇಲೆ ಸ್ವಯಮಾಡಳಿತ, ಮಾಲೀಕತ್ವ ಮತ್ತು ಸ್ವಾತಂತ್ರ್ಯಗಳನ್ನು ನೀಡಿ ಅವರ ಜೀವನವೇ ಹೊರಗಿನ ಜೀವನಕ್ಕಿಂತಲೂ ಉತ್ತಮ ಮತ್ತು ಮೌಲಿಕವಾದದ್ದು ಎಂಬ ಸ್ವಾಭಿಮಾನ ಮೂಡಿಸುವ ಕೆಲಸ ಆಗಬೇಕಿದೆ. ಇಷ್ಟಾದ ಮೇಲೂ ಅವರ ನಡೆ ಕಾಡಿನ ಕಡೆಗೋ ನಾಡಿನ ಕಡೆಗೋ ಎಂಬ ತೀರ್ಮಾನವನ್ನು ಅವರಿಗೇ ಬಿಡುವುದು ಸೂಕ್ತವೆಂಬ ಅನಿಸಿಕೆಯೊಡನೆ ಈ ಅಧ್ಯಯನದ ಫಲಿತಗಳನ್ನು ಇಲ್ಲಿ ನೀಡಲಾಗಿದೆ.

ಅಧ್ಯಯನದ ಫಲಿತಗಳು

ಬಹುರೂಪಿ ಸಂಸ್ಕೃತಿಯನ್ನು ನಾಶ ಮಾಡಿ ಏಕರೂಪಿ 'ಸರಕುಸಂಸ್ಕೃತಿ' ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿರುವ ಜಾಗತೀಕರಣದ ಈ ಕಾಲಘಟ್ಟದಲ್ಲಿ ಈ ವಿಶಿಷ್ಟ ಬುಡಕಟ್ಟಿನ ಅಧ್ಯಯನದ ಮಹಾಪ್ರಬಂಧದ ಫಲಿತಗಳನ್ನು ಈ ಕೆಳಗಿನಂತೆ ವಿವರಿಸಬಹುದಾಗಿದೆ.

೧. ಸಿದ್ದಿಗಳದು ಒಂದು ಅಪರೂಪದ, ವಿದೇಶಿ ಮೂಲದ ಮತ್ತು ಗುಲಾಮಗಿರಿಯ ಅಡಿಯಲ್ಲಿ ನಲುಗಿದ ಬುಡಕಟ್ಟಾಗಿದೆ. ಒಂದು ಭೂಖಂಡದಲ್ಲಿ ಬುಡಕಟ್ಟಾಗಿ, ಇನ್ನೊಂದು ಖಂಡಕ್ಕೆ ಗುಲಾಮರಾಗಿ ಹೋಗಿ ನಗರಗಳಲ್ಲಿ ನೆಲೆಸಿ ಮತ್ತೆ ಕಾಡಿಗೆ ಹೋಗಿ ಬುಡಕಟ್ಟಾದ ವೈಶಿಷ್ಟ್ಯ ಸಿದ್ದಿಯರದಾಗಿದೆ.

೨. ಒಂದೊಮ್ಮೆ ಬಾಹ್ಯಶಕ್ತಿಗಳ ಒತ್ತಡಗಳಿಗೆ ಸಿಲುಕಿ ಅನಿವಾರ್ಯವಾಗಿ ಸ್ಥಿತ್ಯಂತರಗೊಂಡ ಸಿದ್ದಿಯರಲ್ಲಿ ಇದೀಗ ಸಮುದಾಯದ ಒಳಗಿನ ಒತ್ತಡದಿಂದಾಗಿ ಮತ್ತೊಮ್ಮೆ ಸ್ಥಿತ್ಯಂತರದ ಹೊಸ್ತಿಲಲ್ಲಿದ್ದಾರೆ.

೩. ಬುಡಕಟ್ಟು ಅರ್ಥಿಕತೆ ಎಂಬುದೊಂದು ಅನನ್ಯ ಆರ್ಥಿಕ ಸ್ಥಿತಿಯಾಗಿದ್ದು ಅದು ಆದಿಮ ಕಾಲದಿಂದ ನೈಸರ್ಗಿಕವಾಗಿ ವಿಕಾಸವಾದ, ಯಾವುದೇ ವಸ್ತುವಿನ ಮೇಲೆ ಹಾಗೂ ಉತ್ಪಾದನಾ ಸಲಕರಣೆಗಳ ಮೇಲೆ ವೈಯಕ್ತಿಕ ಮಾಲೀಕತ್ವ ಹೊಂದದ, ಅನಾವಶ್ಯಕವಾಗಿ ಏನನ್ನೂ ಸಂಗ್ರಹಿಸಿಡದ, ದೊರೆತದ್ದನ್ನು ಸಮುದಾಯದ ಇತರರೊಡನೆ ಹಂಚಿಕೊಳ್ಳುವ, ಹಣದ ಅವಶ್ಯಕತೆಯೇ ಇಲ್ಲದ, ಸೀಮಿತ ಬಯಕೆಗಳ, ಸರಳ, ಸಂತೃಪ್ತ ಜೀವನ ವಿಧಾನವಾಗಿದೆ.

೪. ಮೂಲತಃ ಅರಣ್ಯ ಉತ್ಪನ್ನ ಸಂಗ್ರಹಕಾರರು ಹಾಗೂ ಚತುರ ಬೇಟೆಗಾರರಾಗಿದ್ದ ಸಿದ್ದಿಗಳು ಇಂದಿನ ಅರಣ್ಯ ಕಾನೂನುಗಳಿಂದಾಗಿ ತಮ್ಮ ಮೂಲ ಆರ್ಥಿಕತೆಯಿಂದ ದೂರವಾಗಿದ್ದು

ಗುಲಾಮಗಿರಿಯ ಪೂರ್ವದ ಆರ್ಥಿಕತೆ ಇಂದು ಕೇವಲ ಪಳೆಯುಳಿಕೆಯಾಗಿ ಮಾತ್ರ ಉಳಿದುಕೊಂಡಿದೆ.

೫. ಜಾಗತೀಕರಣದ ನಂತರ ದೇಶದಲ್ಲಿ ಶ್ರಮವಿಭಜನೆ ಹೆಚ್ಚಾದರೂ ಶ್ರಮಗೌರವ ಮಾತ್ರ ಹೆಚ್ಚಾಗಿಲ್ಲ. ಹೀಗಾಗಿ ದೈಹಿಕ ಶ್ರಮದ ಕಸುಬುಗಳನ್ನೇ ಆಧರಿಸಿರುವುದು ಸಿದ್ದಿಗಳ ಆರ್ಥಿಕ ಮತ್ತು ಸಾಮಾಜಿಕ ಹಿನ್ನಡೆಗೆ ಕಾರಣವಾಗಿದೆ.

೬. ಸಿದ್ದಿಗಳ ಹಿಂಜರಿಕೆ ಮತ್ತು ಹಿಂದುಳಿಯುವಿಕೆಗೆ ಜೈವಿಕ, ಐತಿಹಾಸಿಕ, ಸಾಮಾಜಿಕ ಇತ್ಯಾದಿ ಕಾರಣಗಳ ಜೊತೆಗೆ ಅವರ ಆರ್ಥಿಕತೆಯ ಮೇಲಿನ ಹಿಡಿತ ಅವರ ಕೈಯ್ಯಲ್ಲಿರದೆ, ಇತರ ಪಟ್ಟಭದ್ರ ಹಿತಾಸಕ್ತಿಗಳ ಮತ್ತು ಬಂಡವಾಳಶಾಹಿಗಳ ನಿಯಂತ್ರಣದಲ್ಲಿರುವುದೂ ಪ್ರಮುಖ ಕಾರಣವಾಗಿದೆ.

೭. ಕಾಡಿನ ಮೇಲಿನ ಹಕ್ಕನ್ನು ಸರಕಾರ ಕಿತ್ತುಕೊಂಡರೆ ಹಿಡುವಳಿಗಳ ಹಕ್ಕನ್ನು ಲೇವಾದೇವಿದಾರರು ಮತ್ತು ಬೌದ್ಧಿಕ ಸ್ವಾತಂತ್ರ್ಯವನ್ನು ಆಯಾ ಧರ್ಮಗಳ ಪುರೋಹಿತಶಾಹಿಗಳು ಕಿತ್ತುಕೊಂಡಿರುವುದರಿಂದ ಯಾವುದೇ ಉತ್ಪಾದನಾ ಸಾಧನಗಳ ಮಾಲೀಕತ್ವ ಸಿದ್ದಿಗಳಿಗಿಲ್ಲ.

೮. ಮೀಸಲಾತಿ ಹಾಗೂ ಬದಲಾವಣೆಗಳೆಡೆಗಿನ ತೀವ್ರ ತುಡಿತದಿಂದಾಗಿ ಕುಣಬಿ, ಗೌಳಿ ಮತ್ತು ಕುಮ್ರಿ ಮರಾಠಿಗಳಿಗಿಂತ ಸಿದ್ದಿಯರ ಆರ್ಥಿಕ ಸ್ಥಿತಿ ಉತ್ತಮವಾಗಿದೆಯಾದರೂ ಸಾಮಾಜಿಕ ಪರಿಸ್ಥಿತಿ ತೌಲನಿಕವಾಗಿ ಹಿಂದುಳಿದಿದೆ.

೯. ತಮ್ಮ ಸುತ್ತಮುತ್ತಲಿನ ಬುಡಕಟ್ಟುಗಳು ಹಾಗೂ ಮುಖ್ಯವಾಹಿನಿಯ ಆಂತರಿಕ ವಲಯಕ್ಕೆ ಸಿದ್ದಿಯರಿಗಿನ್ನೂ ಮುಕ್ತ ಪ್ರವೇಶ ದೊರಕಿಲ್ಲ. ಹೀಗಾಗಿ ಭಾರತೀಯ ಸಮಾಜದ ಏಣಿಶ್ರೇಣಿಯಲ್ಲಿ ಸಿದ್ದಿಯರು ಇನ್ನೂ ಕೆಳಹಂತದಲ್ಲಿದ್ದಾರೆ. ಹೀಗಾಗಿ ವೈವಾಹಿಕ ಮತ್ತು ಆಚರಣಾತ್ಮಕ ನೆಲೆಗಳಲ್ಲಿ ಅವರಿಗಿನ್ನೂ ಒಂಟಿತನದ ಭಾವ ಕಾಡುತ್ತಿದೆ. ಇದಕ್ಕೆ ಅವರ ಆಫ್ರಿಕನ್ ಮೂಲ, ದೈಹಿಕ ಚಹರೆ ಮತ್ತು ಮೈಬಣ್ಣಗಳೇ ಕಾರಣವಾಗಿವೆ.

೧೦. ಭಾರತೀಯ ಸಂಸ್ಕೃತಿ ಬಹುರೂಪಿಯೂ ವೈಶಿಷ್ಟ್ಯಪೂರ್ಣವೂ ಆಗಿರುವಂತೆ ಸಂಕೀರ್ಣವೂ ಆಗಿದೆ. ಭಾಷೆ, ಅಸ್ಪೃಶ್ಯತೆ ಮತ್ತು ಜಾತಿಗಳ ವಿಭಜನೆ ನಿಧಾನವಾಗಿ ಕಣ್ಮರೆಯಾಗುತ್ತಿವೆಯಾದರೂ, ಮೈಬಣ್ಣದ ಬಗೆಗಿನ ತಿರಸ್ಕಾರ ಮಾತ್ರ ಹೆಚ್ಚಾಗುತ್ತಿದೆ.

೧೧. ಸಿದ್ದಿಗಳಲ್ಲಿ ಭೂರಹಿತ ಕೂಲಿಕಾರರೇ ಹೆಚ್ಚಾಗಿದ್ದು ಭೂಹಿಡುವಳಿ ಹೊಂದಿರುವವರಲ್ಲೂ ಹಿಡುವಳಿಯ ಗಾತ್ರ ತುಂಬಾ ಚಿಕ್ಕದಿದೆ.

೧೨. ಪರ್ಯಾಯ ಉತ್ಪಾದನಾ ಪರಿಕರಗಳು ಮತ್ತು ಅವಕಾಶಗಳ ಕೊರತೆ, ಅರಣ್ಯಗಳ ಮೇಲೆ ಅಧಿಕಾರವಿಲ್ಲದಿರುವುದು, ಏರುತ್ತಿರುವ ಬೆಲೆಗಳಿಂದಾಗಿ ಹೆಚ್ಚುತ್ತಿರುವ ವೆಚ್ಚಗಳು, ಸ್ಥಳಾಂತರಗಳು, ಅನುತ್ಪಾದಕ ಸಾಲಗಳು, ಸಾಂಸ್ಥಿಕ ಸಾಲ ಮೂಲಗಳ ಕೊರತೆ, ಸರಕಾರದ ಯೋಜನೆಗಳಲ್ಲಿ ಮಧ್ಯವರ್ತಿಗಳ ಪ್ರಾಬಲ್ಯ ಇತ್ಯಾದಿಗಳು ಸಿದ್ದಿ ಸಮುದಾಯದ ಜ್ವಲಂತ ಸಮಸ್ಯೆಗಳಾಗಿವೆ.

೧೩. ಸಿದ್ದಿಗಳ ದುಡಿಮೆಯಲ್ಲಿ ಸ್ತ್ರೀಯರ ಪಾತ್ರ ಪ್ರಮುಖವಾಗಿದ್ದರೂ ಅವರಿಗೆ ಸಾಮಾಜಿಕವಾಗಿ ಮತ್ತು ಕೌಟುಂಬಿಕವಾಗಿ ಉನ್ನತ ಸ್ಥಾನಮಾನಗಳಿನ್ನೂ ದೊರಕಿಲ್ಲ. ಮಾರುಕಟ್ಟೀಕರಣಕ್ಕೊಳಗಾಗಿಲ್ಲವೆಂಬ ಕಾರಣಕ್ಕಾಗಿ ಸಿದ್ದಿ ಮಹಿಳೆಯರ ಗೃಹಕೃತ್ಯದ ದುಡಿಮೆಗಳು ಅನುತ್ಪಾದಕವೆಂದು ಅಸಡ್ಡೆಗೊಳಗಾಗಿವೆ.

೧೪. ಇತ್ತೀಚಿನ ದಿನಗಳಲ್ಲಿ ಸ್ತ್ರೀ ಶಕ್ತಿ ಸಂಘಗಳ ಹೆಚ್ಚಳದ ಪರಿಣಾಮವಾಗಿ ಸಿದ್ದಿ ಮಹಿಳೆಯರಲ್ಲಿ ಜಾಗೃತಿ ಮತ್ತು ಸಂಘಟನೆ ಹೆಚ್ಚಾಗಿದೆ. ಆರ್ಥಿಕ ಸಬಲೀಕರಣದ ಜೊತೆಜೊತೆಗೇ ವ್ಯಾವಹಾರಿಕ ಸಾಕ್ಷರತೆ, ಕೌಶಲ್ಯ, ಸಮಸ್ಯೆ ನಿವಾರಣಾ ಸಾಮರ್ಥ್ಯಗಳು ಹೆಚ್ಚಾಗಿವೆ.

೧೫. ಪರಿಶಿಷ್ಟ ಬುಡಕಟ್ಟಿನ ಮೀಸಲಾತಿ ಸ್ಥಾನಮಾನ ದೊರೆತು ದಶಕಗಳೇ ಕಳೆದರೂ ಅದರ ಫಲ ಈ ಸಮುದಾಯಕ್ಕೆ ಇನ್ನೂ ಸಂಪೂರ್ಣವಾಗಿ ದಕ್ಕಿಲ್ಲ.

೧೬. ಆದರೆ ಇದು ಸಿದ್ದಿಯರಲ್ಲಿ ಅದರಲ್ಲೂ ಸಿದ್ದಿ ಯುವಪೀಳಿಗೆಯಲ್ಲಿ ಏಕತೆಯ, ಸ್ವಾಭಿಮಾನದ ಮತ್ತು ವಿಭಿನ್ನ ಚಿಂತನೆಯ ಪ್ರಜ್ಞೆ ಮೂಡಿಸುವಲ್ಲಿ ಯಶಸ್ವಿಯಾಗಿದೆ. ಗುಲಾಮಗಿರಿಯ ನೆರಳಿನಿಂದ ಹೊರಬಂದು ಅಭಿವೃದ್ಧಿಮುಖಿ ಚಿಂತನೆಗಳನ್ನು ಅವರು ರೂಪಿಸಿಕೊಳ್ಳುತ್ತಿದ್ದಾರೆ.

೧೭. ಮುಖ್ಯವಾಹಿನಿಗೆ ಬರುವ ಬಗ್ಗೆ ಹಳೆಯ ತಲೆಮಾರಿಗೆ ಹಿಂಜರಿಕೆ ಇದ್ದರೆ ಹೊಸ ತಲೆಮಾರು ಅದಕ್ಕಾಗಿ ತುಂಬಾ ಉತ್ಸುಕವಾಗಿದೆ.

೧೮. ವಿವಿಧ ಧರ್ಮಗಳಲ್ಲಿ ಹಂಚಿಹೋಗಿದ್ದರೂ ಸಿದ್ದಿ ಸಂಸ್ಕೃತಿ ಅಂತರಗಂಗೆಯಂತೆ ಅವರೆಲ್ಲರಲ್ಲೂ ವ್ಯಾಪಿಸಿಕೊಂಡಿದ್ದು ಹಿರಿಯರ ಹಬ್ಬ, ತೆಂಗಿನಕಾಯಿ ಮತ್ತು ಸಿದ್ದಿನ್ಯಾಸಗಳ ರೂಪದಲ್ಲಿ 'ಸಿದ್ದಿ ಅಸ್ಮಿತೆ' ವ್ಯಕ್ತವಾಗುತ್ತಿದೆ.

೧೯. ಲ್ಯಾಂಪ್ಸ್ ಸೊಸೈಟಿ ಮತ್ತು ಎನ್.ಜಿ.ಒ.ಗಳು ಸಿದ್ದಿಯರಲ್ಲಿ ಸಾಕಷ್ಟು ಅರಿವು ಮೂಡಿಸಿವೆಯಾದರೂ ಅವುಗಳ ಕಾರ್ಯ ಇನ್ನಷ್ಟು ಪರಿಣಾಮಕಾರಿಯಾಗಬೇಕಾಗಿದೆ.

೨೦. ಆಫ್ರಿಕಾದ ಕಾಡಿನಿಂದ ನಾಡಿಗೆ, ನಾಡಿನ ಗುಲಾಮಗಿರಿಯ ನಂತರ ಮತ್ತೆ ಮರಳಿ ಕಾಡಿಗೇ ಹೋದ ಸಿದ್ದಿಗಳ ಜೀವನ, ಪ್ರಕೃತಿಯೇ ಮಾನವನ ಮೊದಲ ಹಾಗೂ ಅಂತಿಮ ನೆಲೆ ಎಂಬುದನ್ನು ನಿರೂಪಿಸುತ್ತದೆ. ಇದು ಆಧುನಿಕತೆಯ ಹಿಂದೆ ಬಿದ್ದಿರುವ ಮಾನವನಿಗೊಂದು ಪಾಠವಾಗಬಲ್ಲದು.

ಪರಿಹಾರೋಪಾಯಗಳು

- ಬಂಡವಾಳಶಾಹಿ ಮತ್ತು ಜಾಗತೀಕರಣದ ಅನಿಶ್ಚಿತತೆ, ಅಸಮಾನತೆ, ಶೋಷಣೆಗಳ ವಿರುದ್ಧ ಹೋರಾಡಲು ಮತ್ತು ಅವುಗಳಿಗೆ ಪರ್ಯಾಯ ಮಾರ್ಗಗಳನ್ನು ಹುಡುಕಲು ಬುಡಕಟ್ಟು ಆರ್ಥಿಕತೆಯ ಆದರ್ಶಗಳೇ ನಮಗೆ ಸೂಕ್ತ ಆಯುಧಗಳಾಗಬಹುದು.

- ಸ್ಥಿತ್ಯಂತರಕ್ಕೆ ತುಡಿಯುತ್ತಿರುವ ಸಿದ್ದಿ ಸಮುದಾಯ ಅದಕ್ಕೆ ಸೂಕ್ತವಾದ ಆಂತರಿಕ ಮತ್ತು ಬಾಹ್ಯಶಕ್ತಿಗಳನ್ನು ನಿಭಾಯಿಸುವ ಸಾಮರ್ಥ್ಯ ಗಳಿಸಿಕೊಳ್ಳಬೇಕಾಗಿರುವುದು ಇಂದಿನ ಆದ್ಯತೆಯಾಗಬೇಕಿದೆ.
- ಸಿದ್ದಿಗಳ ಬೆತ್ತದ ಕಲೆ ಮತ್ತು ಕೌದಿ ಹೊಲಿಗೆಗೆ ಆಧುನಿಕತೆಯ ಸ್ಪರ್ಶ ನೀಡುವ ಜೊತೆಗೆ ಅದಕ್ಕೆ ಪ್ರಚಾರವನ್ನು ಮತ್ತು ಮಾರಾಟ ಮಳಿಗೆಗಳನ್ನು ಒದಗಿಸಬೇಕಿದೆ.
- ಸಿದ್ದಿಗಳು ಭಾರತದ ವಿಶಿಷ್ಟ ಸಮುದಾಯವಾಗಿರುವುದರಿಂದ ಅವರಿಗೂ ಟಿಬೆಟಿಯನ್ ರಾಜಕೀಯ ನಿರಾಶ್ರಿತರಂತೆ ಸೂಕ್ತವಾದ ಮತ್ತು ವಿಶೇಷವಾದ ವಲಯಗಳನ್ನು, ಯೋಜನೆಗಳನ್ನು ಮತ್ತು ಮೀಸಲಾತಿಯನ್ನು ನಿಗದಿಪಡಿಸಬೇಕಾಗಿದೆ.
- ಆಂಗ್ಲೋ ಇಂಡಿಯನ್ನರಂತೆ ಸಿದ್ದಿಗಳಿಗೂ 'ಆಫ್ರೋ ಇಂಡಿಯನ್' ಎಂದು ಶಾಸನ ಸಭೆಗಳಲ್ಲಿ ನಾಮಕರಣ ಸದಸ್ಯತ್ವ ನೀಡಬೇಕು ಮತ್ತು ಆ ಮೂಲಕ ಎರಡೂ ಖಂಡಗಳ ನಡುವಿನ ಬಾಂಧವ್ಯಕ್ಕೆ ಹೊಸ ನಾಂದಿ ಹಾಡಬೇಕು.
- ಸಿದ್ದಿಗಳಿಗೆ ಅವರ ಭಾಷೆಯಲ್ಲಿ ಶಿಕ್ಷಣ ನೀಡಲಾಗದಿದ್ದರೆ ಒರಿಸ್ಸಾ ಮಾದರಿಯಲ್ಲಿ ಪೂರ್ವತರಬೇತಿ ಅಥವಾ ಬ್ರಿಡ್ಜ್ ಕೋರ್ಸ್ ನಡೆಸಿ ನಂತರ ಅವರನ್ನು ಸಾಮಾನ್ಯ ಶಾಲೆಗಳಿಗೆ ಕಳಿಸಬಹುದು.
- ಸಿದ್ದಿಗಳ ದೈಹಿಕ ಕ್ಷಮತೆಯನ್ನು ಕ್ರೀಡಾರಂಗದಲ್ಲಿ ಬಳಸಿಕೊಳ್ಳಲು ಅವರಿಗೆ ಸೂಕ್ತ ವಿದ್ಯಾಭ್ಯಾಸ ಮತ್ತು ತರಬೇತಿ ನೀಡಲು ಕ್ರಮ ಕೈಗೊಳ್ಳಬೇಕಿದೆ. ಈ ಹಿಂದಿನ ಇಂತಹ ಕ್ರಮಗಳು ದೋಷಪೂರಿತ ವಾಗಿದ್ದುದರಿಂದ ಅವುಗಳನ್ನು ಪುನರ್ ಪರಿಶೀಲಿಸಿ ಮರು ರೂಪಿಸಬೇಕಿದೆ.
- ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿರುವ ಸಿದ್ದಿಗಳಿಗೂ ಮೀಸಲಾತಿ ಸೌಲಭ್ಯ ವಿಸ್ತರಿಸಬೇಕು.
- ಹಳಿಯಾಳದ ರುಡ್‌ಸೆಟ್ ಮಾದರಿಯಲ್ಲಿ ಸಿದ್ದಿಗಳಿಗೆ ತಾಂತ್ರಿಕ ಮತ್ತು ಸ್ವ ಉದ್ಯೋಗ ತರಬೇತಿ ನೀಡಲು ವಿಶೇಷ ಸಂಸ್ಥೆಗಳನ್ನು ಸ್ಥಾಪಿಸಬೇಕು.
- ಅಮೆರಿಕದ ರೀತಿ ಬುಡಕಟ್ಟುಗಳಿಗೆ ಸಮಾನಾಂತರ ಸರ್ಕಾರದ ಮಾನ್ಯತೆ ನೀಡದಿದ್ದರೂ ಬುಡಕಟ್ಟುಗಳಿಗೆ ತಮ್ಮ ಪ್ರದೇಶದ ಮೇಲೆ ಹಕ್ಕು ಮತ್ತು ಸೀಮಿತ ಸ್ವಾಯುತ್ತತೆಗಳನ್ನು ನೀಡುವ ಬಗೆಗೆ ಚಿಂತಿಸಬೇಕು.

ಸಂಶೋಧನೆ ಎಂಬುದು ಗಮ್ಯವಲ್ಲ. ಬದಲಾಗಿ ಅದೊಂದು ಸತ್ಯಾನ್ವೇಷಣೆಯ ನಿರಂತರ ಯಾನ. ಈ ಪ್ರಬಂಧದಲ್ಲಿ ನನ್ನಳವಿಗೆ ನಿಲುಕಿದಷ್ಟನ್ನು ಮಾತ್ರ ನೀಡಿದ್ದೇನೆ. ಇದರ ಮಿತಿಗಳನ್ನು ಪರಿಶೀಲಿಸಿ ಪರಿಷ್ಕರಿಸಿ ಉತ್ತಮಪಡಿಸುವ ಸಾಧ್ಯತೆಗಳು ಬಹಳಷ್ಟಿದೆ. ಸಮಾಜಶಾಸ್ತ್ರೀಯ, ಮಾನವಶಾಸ್ತ್ರೀಯ ಮತ್ತು ಕೇನ್ಸ್ ಪ್ರೇರಿತ ಅರ್ಥಶಾಸ್ತ್ರದ ಮಾರ್ಗಗಳ ಜೊತೆ ಅನುಸಂಧಾನಗೊಳ್ಳುತ್ತಲೇ ಬುಡಕಟ್ಟು ಅರ್ಥಶಾಸ್ತ್ರವನ್ನು ಪ್ರಾಯೋಗಿಕವಾಗಿಸುವ ಕಾರ್ಯ ಆಗಬೇಕಿದೆ. ಅಲಕ್ಷಿತರ ಸಂಸ್ಕೃತಿ, ಜ್ಞಾನ,

ಸಂಗೀತ, ನೃತ್ಯಗಳ ಅಧ್ಯಯನಕ್ಕೆ ಪ್ರಾಮುಖ್ಯತೆ ದೊರೆಯುತ್ತಿರುವ ಈ ದಿನಗಳಲ್ಲಿ, ಅಲಕ್ಷಿತರ ಅರ್ಥಶಾಸ್ತ್ರ ಅಥವಾ ಅಲಕ್ಷಿತರ ಆರ್ಥಿಕ ಸಿದ್ಧಾಂತಗಳನ್ನು ಅಧ್ಯಯನ ಮಾಡುವ ಅನಿವಾರ್ಯತೆ ಇದೆ. ಸಿದ್ದಿ ಹೆಸರಿನ ವ್ಯುತ್ಪತ್ತಿ, ಸಿದ್ದಿಗಳ ಮೂಲ ಆಫ್ರಿಕಾವೇ ಆದರೂ ನಿರ್ದಿಷ್ಟವಾಗಿ ಯಾವ ಸಮುದಾಯಕ್ಕೆ ಸೇರಿದ್ದರು? ಭಾರತೀಯ ಸಿದ್ದಿಗಳೆಲ್ಲಾ ಆಫ್ರಿಕಾದ ಒಂದೇ ಪ್ರದೇಶದಿಂದ ಬಂದವರೇ? ಹೇಗೆ? ಗುಲಾಮಗಿರಿಯಿಂದ ತಪ್ಪಿಸಿಕೊಂಡವರಷ್ಟೇ ಉತ್ತರಕನ್ನಡದ ಕಾಡಿಗೆ ಬಂದರೇ? ಆ ಕಾಲ ಘಟ್ಟದ ಸಿದ್ದಿಗಳ ಜೀವನ ಹೇಗಿತ್ತು? ಗೋತ್ರಗಳನ್ನು ಕಳೆದುಕೊಂಡು ಅನ್ಯ ಸಮುದಾಯಗಳಿಂದಲೂ ದೂರವಿರಿಸಲ್ಪಟ್ಟ ಸ್ಥಿತಿಯಲ್ಲಿ ತಮ್ಮ ತಮ್ಮಲ್ಲೇ ಮದುವೆಯಾಗುವ ಅನಿವಾರ್ಯತೆಗೊಳಗಾಗಿರುವ ಸಿದ್ದಿಗಳಲ್ಲಿ ಒಂದೇ ರಕ್ತದ ಸಹೋದರ ಸಂಬಂಧ ವಿವಾಹದಿಂದಾಗುವ ಅಂಗವೈಕಲ್ಯ ಮನೋವೈಕಲ್ಯದ ಜೀನ್ಸ್‌ಗಳ ಬದಲಾವಣೆಯೇನಾದರೂ ಆಗಿದೆಯೇ? ಇತ್ಯಾದಿಗಳ ಅಧ್ಯಯನಕ್ಕೆ ವಿಪುಲ ಅವಕಾಶಗಳಿವೆ.

ಒಟ್ಟಾರೆಯಾಗಿ ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟಿನ ಅರ್ಥವ್ಯವಸ್ಥೆ ಕುರಿತು ಅಧ್ಯಯನ ಮಾಡಿದಾಗ ಕಂಡುಬಂದ ಫಲಿತಗಳು ಮತ್ತು ಮುಂದೆ ಅಧ್ಯಯನ ನಡೆಸಲು ಇರಬಹುದಾದ ಸಾಧ್ಯತೆಗಳ ಕುರಿತು ಇಲ್ಲಿ ವಿವರಿಸಲಾಗಿದೆ. ಅಧ್ಯಯನ ಮಿತಿ ಹಾಗೂ ಕಾಲಮಿತಿಗಳಿಂದಾಗಿ ಪ್ರಸ್ತುತ ಅಧ್ಯಯನವನ್ನು ಉತ್ತರ ಕನ್ನಡ ಜಿಲ್ಲೆಯ ಏಳು ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ಪಂಚಾಯಿತಿಗಳ ನೆಲೆಗಳನ್ನು ಮಾತ್ರ ಅಧ್ಯಯನಕ್ಕೆ ಸೀಮಿತಗೊಳಿಸಲಾಗಿದೆ. ಈ ಅಧ್ಯಯನವು ಸಿದ್ದಿ ಜನರ ಮೇಲೆ ಬೀರುತ್ತಿರುವ ಆಧುನೀಕರಣದ ಬದಲಾವಣೆಗಳನ್ನು ಅರಿಯುವ ಒಂದು ಪ್ರಯತ್ನವಾಗಿದೆ. ಈ ಅಧ್ಯಯನವು ಮುಂದೆ ಸಿದ್ದಿ ಅಥವಾ ಇತರೆ ಬುಡಕಟ್ಟುಗಳ ಕುರಿತು ಅಧ್ಯಯನ ಮಾಡುವವರಿಗೆ ಒಂದು ಆಕರವಾದೀತೆಂದು ಭಾವಿಸಲಾಗಿದೆ. ಈ ಅಧ್ಯಯನಗಳಲ್ಲಿಯ ಮಿತಿಗಳನ್ನು ಮುಂದಿನ ಅಧ್ಯಯನಕಾರರಿಗೆ ಬಿಡಲಾಗಿದೆ.

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು

೨. ವಕ್ತೃವಿವರ

೩. ಸಮೀಕ್ಷೆ ಮಾಡಿದ ನೆಲೆಗಳ ನಕ್ಷೆ

೪. ಪ್ರಶ್ನಾವಳಿ ಮಾದರಿ

೫. ಅಂಕಿ-ಅಂಶಗಳ ಪಟ್ಟಿ

೬. ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು

ಕನ್ನಡ ಗ್ರಂಥಗಳು

ಅಗ್ನಿ ಶ್ರೀಧರ್, ಟಿಬೇಟಿಯನ್ನರ ಸತ್ತವರ ಪುಸ್ತಕ, ಅಂಕಿತ ಪುಸ್ತಕ, ಬೆಂಗಳೂರು, ೨೦೧೨.

ಅನೀಕಿನ್ ಎ.ವಿ., ರಾಜಕೀಯ ಅರ್ಥಶಾಸ್ತ್ರದ ತಾರುಣ್ಯ, (ಅನು) ಕೆ.ಎಲ್. ಗೋಪಾಲಕೃಷ್ಣ ರಾವ್., ಪ್ರಗತಿ ಪ್ರಕಾಶನ, ಮಾಸ್ಕೋ. ೧೯೮೨.

ಅರುಣ್ ಜೋಳದಕೂಡ್ಲಿಗಿ, ಕನ್ನಡ ಜಾನಪದ ಅಧ್ಯಯನದ ತಾತ್ವಿಕ ನೆಲೆಗಳು, ರೂಪ ಪ್ರಕಾಶನ, ಮೈಸೂರು, ೨೦೧೩

ಅಂಬೇಡ್ಕರ್, ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂ.೫, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಕಮಲ ಎಂ.ಆರ್., ಕಪ್ಪು ಹಕ್ಕಿಯ ಬೆಳಕಿನ ಹಾಡು(ಗುಲಾಮ ಪದ್ಧತಿ ವಿರುದ್ಧ ಸೆಣಸಿದ ಕಪ್ಪು ಮಹಿಳೆಯರ ಆತ್ಮ ಕಥೆಗಳು), ಕಥನ ಪ್ರಕಾಶನ, ಬೆಂಗಳೂರು, ೨೦೦೪.

ಕಿಕ್ಕೇರಿ ನಾರಾಯಣ, ಬುಡಕಟ್ಟು ಸಂಸ್ಕೃತಿ, ಅರುಹು ಕುರುಹು ಪ್ರಕಾಶನ, ಮೈಸೂರು, ೨೦೧೧

ಕುಮಾರ್ ಜೆ., ನೂರೊಂದು ವಿರಕ್ತರು, ಒಂದು ಅಧ್ಯಯನ, ರೂಪ ಪ್ರಕಾಶನ, ಮೈಸೂರು, ೨೦೧೧.

ಕೃಷ್ಣಮೂರ್ತಿ ಎಚ್.ಆರ್., ಆರ್ಥಿಕ ಚಿಂತನೆ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೬.

ಕೃಷ್ಣಮೂರ್ತಿ ಎಚ್.ಆರ್., ಅಭಿವೃದ್ಧಿ ಅರ್ಥಶಾಸ್ತ್ರ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೬.

ಕೇಶವನ್ ಪ್ರಸಾದ್ ಕೆ., ಬುಂಡೆ ಬೆಸ್ತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಕೇಶವನ್ ಪ್ರಸಾದ್ ಕೆ., ಸೋಲಿಗರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

ಕೊಸಾಂಬಿ. ಡಿ.ಡಿ., ಪ್ರಾಚೀನ ಭಾರತದ ಚರಿತ್ರೆ, (ಮೂಲ) ಕೆ. ಬಾಲಗೋಪಾಲ್, ಎಚ್.ಎಸ್. ಶ್ರೀಮತಿ, ಬೆಳ್ಳಿ ಚುಕ್ಕಿ ಪುಸ್ತಕಾಲಯ, ಬೆಂಗಳೂರು, ೧೯೯೮.

ಗುರುಪ್ರಸಾದ್ ಸಿ.ಟಿ., ಹಗೇವು, ಸಿ.ವಿ.ಜಿ. ಪ್ರಕಾಶನ, ಬೆಂಗಳೂರು, ೨೦೦೩.

ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ: ಹುಟ್ಟು ಸಾವಿನ ನಡುವೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

ಗಂಗಾಧರ ದೈವಜ್ಞ, ಗೊಂದಲಿಗರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಚಲುವರಾಜು, ದಕ್ಕಲರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೯.

ಚಲುವರಾಜು, ಹಂಪಿ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

ಚಂದ್ರ ಪೂಜಾರ ಎಂ., ದೇಶೀಯತೆಯ ನೆರಳಿನಲ್ಲಿ ವಿಕೇಂದ್ರೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

ಚಂದ್ರ ಪೂಜಾರ್ ಎಂ., ಅಭಿವೃದ್ಧಿ ಮತ್ತು ಚುನಾವಣೆಯ ಗೆಲುವು, ವಿ.ಕ. ೨೦೧೩.

ಚಂದ್ರಶೇಖರ್ ಟಿ.ಆರ್., ಮಹಿಳೆ–ಆರ್ಥಿಕತೆ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

ಚಂದ್ರಶೇಖರ್ ಟಿ.ಆರ್., ಅಮರ್ತ್ಯಸೇನ್–ಅಭಿವೃದ್ಧಿ ಅಧ್ಯಯನಗಳು, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೨೦೦೩.

ಚಂದ್ರಶೇಖರ್ ಟಿ.ಆರ್., ಅಮರ್ತ್ಯಸೇನ್‌ರ ಅಭಿವೃದ್ಧಿ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

ನಾಗೇಶ್ ಹೆಗಡೆ, ಅಭಿವೃದ್ಧಿಯ ಅಂಧಯುಗ, ಭೂಮಿ ಬುಕ್ಸ್, ಬೆಂಗಳೂರು, ೨೦೧೦.

ನಾಗೇಶ್ ಹೆಬ್ಬಾಲೆ, ಅರಳವ್ವ, ರುಚಿರ ಪ್ರಕಾಶನ, ಹೊಸಪೇಟೆ, ೨೦೦೭.

ಪಾರ್ವತಮ್ಮ ಸಿ., ಆದಿವಾಸಿ ಸಮುದಾಯಗಳ ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

ಪುಷ್ಪಲತಾ ಹಿರೇಮಠ್, ಗೌಳಿಗ ಮಹಿಳೆಯರ ಸ್ಥಿತ್ಯಂತರಗಳು(ಉತ್ತರಕನ್ನಡ ಜಿಲ್ಲೆಯನ್ನು ಅನುಲಕ್ಷಿಸಿ), (ಅಪ್ರಕಟಿತ ಪಿಎಚ್‌ಡಿ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್, ಪುಸ್ತಕ ಪ್ರಕಾಶನ, ಮೈಸೂರು, ೧೯೮೬.

ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಪ್ರಭಾಕರ ಎ.ಎಸ್. (ಸಂ), ಆದಿವಾಸಿ ಆಖ್ಯಾನ (ಸಮುದಾಯಗಳ ಅಧ್ಯಯನಕ್ಕೊಂದು ಆಕರ), ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ೨೦೦೮ (ಪ್ರಮು.೨೦೦೬).

ಪ್ರಭಾಕರ ಎ.ಎಸ್., ಅಲೆಮಾರಿಗಳ ಶಾಪಗ್ರಸ್ತ ಪಯಣ, ಬುಡಕಟ್ಟು ಅಧ್ಯಯನ, ಸಂ–೧, ೨, ೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಭಾಕರ ಎ.ಎಸ್. ಮತ್ತು ಶ್ರೀಪಾದ ಶೆಟ್ಟಿ, ಲೋಹಿಯಾ: ವರ್ತಮಾನದ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

ಪ್ರಸನ್ನ, ದೇಸಿ ಜೀವನ ಪದ್ಧತಿ, ಒಂಟಿದನಿ ಪ್ರಕಾಶನ, ಸಾಗರ, ೨೦೦೫.

ಫ್ರೆಡರಿಕ್ ಎಂಗೆಲ್ಸ್, ಕುಟುಂಬ, ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ(ಲುಯಿ ಎಚ್ ಮಾರ್ಗನ್‌ರ ಪರಿಶೋಧನೆಗಳ ಬೆಳಕಿನಲ್ಲಿ), (ಅನು) ಕೆ.ಎಲ್. ಗೋಪಾಲಕೃಷ್ಣರಾವ್, ಪ್ರಗತಿ ಪ್ರಕಾಶನ, ಮಾಸ್ಕೊ, ೧೯೮೦.

ಬಾಲಗುರುಮೂರ್ತಿ, ಬುಡ್ಗನಾದ, ಅಲೆಮಾರಿ ಪ್ರಕಾಶನ, ಬೆಂಗಳೂರು, ೨೦೧೦.

ಬೋರಲಿಂಗಯ್ಯ ಹಿ.ಚಿ., ಸಿದ್ದಿಯರ ಸಂಸ್ಕೃತಿ, ಉಪಸಂಸ್ಕೃತಿ ಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩.

P.T.O

ಬೋರಲಿಂಗಯ್ಯ ಹಿ.ಚಿ. ಮತ್ತು ಪ್ರಭಾಕರ್ ಎ.ಎಸ್., ಅರ್ಧವಾರ್ಷಿಕ ಅಧ್ಯಯನ, ಬುಡಕಟ್ಟು ಅಧ್ಯಯನ, ಸಂ-೧, ೨, ೩, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬೋರಲಿಂಗಯ್ಯ ಹಿ.ಚಿ., ಬುಡಕಟ್ಟು ರಾಮಾಯಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

ಬೋರಲಿಂಗಯ್ಯ ಹಿ.ಚಿ., ಕಾಡು ಕಾಂಕ್ರಿಟ್ ಜಾನಪದ, ಅಕ್ಷರ ಪ್ರಕಾಶನ, ಹೆಗ್ಗೋಡು. ೧೯೯೫

ಬೋರಲಿಂಗಯ್ಯ ಹಿ.ಚಿ., ವಿಸ್ಮೃತಿ ಸಂಸ್ಕೃತಿ, ಸಿ.ವಿ.ಜಿ. ಪ್ರಕಾಶನ, ಬೆಂಗಳೂರು, ಪು.೧೮-೧೯, ೨೦೦೪.

ಭಗವತ್ ಶರಣ ಉಪಾಧ್ಯಾಯ, ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, ನವಕರ್ನಾಟಕ ಪ್ರಕಾಶನ, ೧೯೫೦.

ಮಲ್ಲಿಕಾರ್ಜುನ ಪಿ. ಸೊರಬದ, ಕುಣಬಿ ಸಮುದಾಯದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ(ಉತ್ತರ ಕನ್ನಡ ಜಿಲ್ಲೆಯನ್ನು ಪರಿಗಣಿಸಿ), (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

ಮಿದವೊಯ್ ಎ.ಐ., (ಅನು) ಕೆ.ಎಲ್. ಗೋಪಾಲಕೃಷ್ಣರಾವ್, ಭಾರತದ ಆರ್ಥಿಕ ವ್ಯವಸ್ಥೆ, ಪ್ರಗತಿ ಪ್ರಕಾಶನ, ೧೯೮೭.

ಮೊಗಳ್ಳಿ ಗಣೇಶ್, ದೇಶಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

ಮೊಗಳ್ಳಿ ಗಣೇಶ್, ಆದಿಮ, ಸಾರಂಗ ಪ್ರಕಾಶನ, ತಿಪಟೂರು, ೨೦೦೫.

ಮೊಗಳ್ಳಿ ಗಣೇಶ್, ದಲಿತ ಕಥನ, ಚಿಂತನಮಾಲೆ ೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

ಮೈತ್ರಿ ಕೆ.ಎಂ., ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

ಮಂಜುನಾಥ ಬೇವಿನಕಟ್ಟಿ, ಪರಿಶೆ v/s ಮಾನ್ಯೇವು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ರಮೇಶ್ ಸ.ಚಿ., ಶಿಕಾರಿ ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

ರವಿ ಎಚ್.ಎಲ್., ಕೊಡಗು ಜಿಲ್ಲೆಯ ಬುಡಕಟ್ಟು ಮಹಿಳಾ ಸ್ವಸಹಾಯ ಸಂಘಗಳಲ್ಲಿ ಆರ್ಥಿಕ ಚಟುವಟಿಕೆಗಳನ್ನು ಕುರಿತು ಅರ್ಥಶಾಸ್ತ್ರೀಯ ಹಿನ್ನೆಲೆಯಲ್ಲಿ ಅಂತರ್‌ಶಿಸ್ತೀಯ ಅಧ್ಯಯನ (ವಿರಾಜಪೇಟೆ ತಾಲೂಕನ್ನು ಅನುಲಕ್ಷಿಸಿ), (ಅಪ್ರಕಟಿತ ಸಂಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

ರಹಮತ್ ತರೀಕೆರೆ, ಪ್ರತಿಸಂಸ್ಕೃತಿ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೯೩.

ರಹಮತ್ ತರೀಕೆರೆ, ನಡೆದಷ್ಟೂ ನಾಡು, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ೨೦೧೨.

ಲಕ್ಕಪ್ಪಗೌಡ ಎಚ್.ಟಿ., ಕರ್ನಾಟಕ ಬುಡಕಟ್ಟುಗಳು, ಸಂ-೧,೨, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು, ೧೯೯೯.

ವಿನಾಯಕ ಭಟ್, ಡಾ. ಅನಿಲ್ ಅಬ್ಬಿ, (ಸಂ) ಪಶ್ಚಿಮಘಟ್ಟದ ಕಾಡುಹಣ್ಣುಗಳು, ಪುಟ ೨೪–೨೫. ಶ್ರೀ ಟ್ರಾಪಿಕಲ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಸೆಂಟರ್, ಬೆಂಗಳೂರು, ೨೦೦೭.

ವೆರಿಯರ್ ಎಲ್ವಿನ್ (ಅನು), ಎಚ್.ಎಲ್. ನಾಗೇಗೌಡ, ವೆರಿಯರ್ ಎಲ್ವಿನ್‌ರ ಗಿರಿಜನ ಪ್ರಪಂಚ, ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು, ೨೦೦೪.

ಶಂಕರನಾರಾಯಣ ತೀ.ನಂ, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೮೨.

ಶುಮಾಕರ್, ಸಣ್ಣದು ಸುಂದರ, (ಅನು) ಈಶ್ವರ ಸಿಂಪಿ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೩.

ಶೇಷಗಿರಿ ರಾವ್ ಎಲ್.ಎಸ್., ,ಅರಣ್ಯ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೬.

ಸಾಯಿನಾಥ ಪಿ., ಬರ ಅಂದ್ರೆ ಎಲ್ಲರಿಗೂ ಇಷ್ಟ, (ಅನು) ಜಿ.ಎನ್. ಮೋಹನ, ಅಭಿನವ ಪ್ರಕಾಶನ, ಬೆಂಗಳೂರು, ೨೦೧೨.

ಹೆಗಡೆ ಎಲ್.ಆರ್., ಸಿದ್ದಿಯರ ಕಥೆಗಳು, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೮೨.

ಇಂಗ್ಲಿಷ್ ಗ್ರಂಥಗಳು

Aiyer Ananthakrishna, L.K. : The Mysore Tribes And Castes, Vol.1to.5, 1935, Mysore University, Mysore.

Ashish Nandy, (Ed), Science Hegemony And Violence, Oxford University Presss, Delhi, 1990.

Awadhesh Kumar Singh, Dynamics of Tribal Economy, Serial Pub, ND, 2003.

Basant Mehta, Mehta P C: Perspectives of Tribal Economy, Intellectual Publishing House, New Delhi,1997.

Defoe Daniel : Robinson Crusoe, Text Book, V Std, NCERT Publications.

Edgar Thurston, Rangachari.K.,: Castes And Tribes of Southern India,Vol 6, P.5, Asian Educational Services, New Delhi, 1987.

Enthoven. R.E.: The Tribes And Castes of Bombay, Vol-1, Asian Educational Services, New Delhi, 1990.

Hiremath R.S. KUD, Life, Living And Language Among Siddis of North Kanara, 1994.

Hiremath,R.S.: Siddis And Their Organisations or Associations (With Reference To The North Kanara District of Karnataka State, India.) KUD. Internet.

Karl Marx, Capital: A Critique of Political Economy, Vol, Penguin Classics, London,1992.

Karl Marx, Theroies of Surplus Value, I, Moscow,1969.

Ketaki Sheth, A Certain Grace, The Sidi-Indians of African Descent.

Kiran Kumar Prasad: In Search of An Identity: Jana Jagruti Prakashana, Bengaluru, 2005.

Longkumar J.Changes and Continuity in Tribal Village, Akanksha, Publishing House, New Delhi, 2009.

Lohia, Rammanohar, Marx Gandhi and Socialism, Navahind Prakashan, Hyderabad, 1963.

Lohia, Rammanohar, The Caste System, Rammanohar Lohia Samata, Samata Vidyalay Nyas, Hyderabad, 1964.

Mann R.S, Mann K., Tribal Cultures And Change, Mittal Publications, Delhi, 1989.

Manjula S. Anthropological Demography of Siddis of Uttrarakannada District Karnataka, Ph.D. Thesis, KUD.

Magavi. M. V. Consumption and Exchange among Siddhi. Field Work Report, Dept of Anthropology, KUD,1962.

Martin Nie, "The use of Co-Management and protected land use designations to protect tribal cultural resource and reserved treaty Rights on Federal land." P. 585 to 646, Natural Resource Journal, Vol. 48, No.3, Pub- University of New Mexico, School of Law, Summer-2008.

Palakshappa T.C, The Siddis of North Kannara Sterling Publisher, 1976.

Pathyjagannath: Tribal Peasantry Dynamics of Development, Inter-India Publication New Delhi, 1984.

Sibi Zakarias: The Micro level Impact of Tribal Development Programmes Among the Kadar Tribe of Kerala, Project Report, Centre for Development Studies, Thiruvanthapuram, 2003

Subhadra Chana, Tribal Religion And Economic Life, Cosmo Publications, 2002.

Sukant K. Chaudhary, SM Patnaik: Indian Tribes And The Mainstream, Rawat Publications, Jaipur. 2008.

Trivedi. R.K: Siddhi – A Negroid Tribe of Gujrat, Ethnographic Survey of Gujrat, 1961.

Vidyarthi C.P, The Tribal Culture of India, Concept Publishing Company.

Upadhyai H.C, Status of Scheduled Tribes in India, Anmol Pub, ND, 1999.

World Bank, Indigenous Knowledge, Local Pathway To Global Development, Knowledge And Learning Group, Africa Region, 2004, Net.

ಕೈಪಿಡಿಗಳು ಮತ್ತು ನಿಯತಕಾಲಿಕೆಗಳು

೧. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮ, ೨೦೦೫, ಕರ್ನಾಟಕ ಸರ್ಕಾರ. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಕೈಪಿಡಿ, ಕರ್ನಾಟಕ ಸರ್ಕಾರ, ಭಾರತ ಜನಗಣತಿ ವರದಿ ೨೦೦೧, ೨೦೧೧. ಜನಪದ ಏಪ್ರಿಲ್ ೨೦೦೪, ಸಂಕ್ರಮಣ ಮಾಸಪತ್ರಿಕೆ, ಬೆಂಗಳೂರು, ವಿಜಯಕರ್ನಾಟಕ, ೧೧.೦೧.೨೦೧೩, ಪ್ರಜಾವಾಣಿ, ೨೯.೦೪.೨೦೧೧ ಯೋಜನಾ, ವಿಜಯವಾಣಿ, ಜಿಲ್ಲಾ ಅಂಕಿ-ಸಂಖ್ಯಾ ಮಾಹಿತಿ ಪುಸ್ತಕ. ಅಂತರ್ಜಾಲ. ಗೂಗಲ್, ವಿಕಿಪೀಡಿಯಾ, ಬ್ಲಾಗ್‌ಸ್ಪಾಟ್(ಜಾತಿಜ್ಯೋತಿ), ಹಳಿಯಾಳ ಲ್ಯಾಂಪ್ಸ್ ಸೊಸೈಟಿಯ ಅಡಾವೆ ಪತ್ರ ೨೦೧೧, ಯೋಜನಾ: ಏಪ್ರಿಲ್-೨೦೧೧, ಕಾರವಾರ ಜಿಲ್ಲಾ ಪಂಚಾಯಿತಿಯ ದಾಖಲೆಗಳು.

ವಕ್ತೃಮಾಹಿತಿ ವಿವರ

ಡಿಯೋಗ್ ಬಿ. ಸಿದ್ದಿ (೬೦), ಸಾಮಾಜಿಕ ಕಾರ್ಯಕರ್ತ, ಹಳಿಯಾಳ, ಉತ್ತರಕನ್ನಡ ಜಿಲ್ಲೆ.

ವಿಷ್ಣು (೩೦), ತರಬೇತಿ ಶಿಕ್ಷಕರು, ರುಡ್‌ಸೆಟ್ ಹಳಿಯಾಳ ತಾ. ಉತ್ತರಕನ್ನಡ ಜಿಲ್ಲೆ.

ಕಿರಣ್ ಕಮಲ್ ಪ್ರಸಾದ್ (೫೦), ಫಾದರ್, ಲೇಖಕರು, ಮುಂಡಗೋಡು ತಾ. ಉತ್ತರಕನ್ನಡ ಜಿಲ್ಲೆ.

ಪಟ್ನಿಶ್ ಆಚಾರ್ಯ (೫೦), ಕಿರಾಣಿ ವ್ಯಾಪಾರಿಗಳು, ಹಳಿಯಾಳ ತಾ. ಉತ್ತರಕನ್ನಡ ಜಿಲ್ಲೆ.

ರಾಮನಾಥ ಸಿದ್ದಿ (೨೩), ಗ್ರೀನ್ ಇಂಡಿಯಾ, ಹಳಿಯಾಳ ತಾ. ಉತ್ತರಕನ್ನಡ ಜಿಲ್ಲೆ.

ಇಮಾಮ್ ಸಿದ್ದಿ (೩೦), ಲ್ಯಾಂಪ್ಸ್ ಸೊಸೈಟಿ, ಹಳಿಯಾಳ, ಉತ್ತರಕನ್ನಡ ಜಿಲ್ಲೆ.

ಜವೇರ್ ಸಿದ್ದಿ (೨೩), ಲ್ಯಾಂಪ್ಸ್ ಸೊಸೈಟಿ ನಿರ್ವಾಹಕರು, ಹಳಿಯಾಳ, ಉತ್ತರಕನ್ನಡ ಜಿಲ್ಲೆ

ಬುಡೇಸಾಬ್ ಹಜರತ್‌ಸಾಬ್ (೨೫), ಡ್ರೈವರ್, ಗುಂಡೊಳ್ಳಿ, ಹಳಿಯಾಳ ತಾ. ಉತ್ತರಕನ್ನಡ ಜಿಲ್ಲೆ.

ಅದಮ್‌ಸಾಬ ಹುಸ್ಮನಸಾಬ್ (೬೦), ಕೃಷಿಕೂಲಿ, ಅಡಕೆ ಹೊಸರು, ಸಂಬ್ರಾಣಿ ಪಂಚಾಯತ್, ಹಳಿಯಾಳ ತಾ. ಉತ್ತರಕನ್ನಡ ಜಿಲ್ಲೆ

ಅಲೋಶಿಯಾಸ್ ಅಂಥೋನಿ ಬಾಳಗುಂದಕರ್ (೨೫), ಅಂಗನವಾಡಿ ಕಾರ್ಯಕರ್ತೆ, ಸಾಂಬ್ರಾಣಿ, ಹಳಿಯಾಳ ತಾ. ಉತ್ತರಕನ್ನಡ ಜಿಲ್ಲೆ.

ಪೆದ್ರೂ ಸುರೇಶ (೨೦), ವಿದ್ಯಾರ್ಥಿ, ನಿಲವಾಣಿ, ಸಾಂಬ್ರಾಣಿ ಪಂಚಾಯತ್, ಹಳಿಯಾಳ ತಾ. ಉತ್ತರಕನ್ನಡ ಜಿಲ್ಲೆ.

ಖೈರುನಬಿ ಗೊರೆಸಾಬ್ (೫೮), ಕೃಷಿ, ಗುಂಡೊಳ್ಳಿ, ಹಳಿಯಾಳ ತಾ. ಉತ್ತರಕನ್ನಡ ಜಿಲ್ಲೆ

ಪೆದ್ರು ಪಸ್ಕಲಸ್ ಫಾರ್ನಂಡಿಸ್ (೩೭), ಗೌಂಡಿಕೆಲಸ, ಗಾಡಗೇರ, ಕೆಸರೊಳ್ಳಿ ಪಂಚಾಯತ್, ಹಳಿಯಾಳ, ಉತ್ತರಕನ್ನಡ ಜಿಲ್ಲೆ.

ಫ್ರಾನ್ಸಿಸ್ ಸಿದ್ದಿ (೩೯), ಪೊಲೀಸ್, ಸಾಂಬ್ರಾಣಿ ಪಂಚಾಯತ್, ಹಳಿಯಾಳ ತಾ. ಉತ್ತರಕನ್ನಡ ಜಿಲ್ಲೆ.

ನಮಾಜಬಿ ಮಮ್ಮನಸಾಬ್ (೨೦), ನರ್ಸಿಂಗ್, ಭಾಗವತಿ ಪಂಚಾಯತ್, ಹಳಿಯಾಳ ತಾ. ಉತ್ತರಕನ್ನಡ ಜಿಲ್ಲೆ.

ಫಕೀರಸಾಬ್ ಗುಂಡುಸಾಬ್ (೧೮), ವಿದ್ಯಾರ್ಥಿ, ತಟ್ಟಿಗೇರ, ಸಾಂಬ್ರಾಣಿ ಪಂಚಾಯತ್, ಹಳಿಯಾಳ ತಾ. ಉತ್ತರಕನ್ನಡ ಜಿಲ್ಲೆ.

ಜೊಜೆ ಡುಮಿಂಗ್ ಜುಲಪಾಚೆ (೫೮), ಅರಣ್ಯ ಕಾವಲುಗಾರ, ಸಾಂಬ್ರಾಣಿ ಪಂಚಾಯತ್, ಹಳಿಯಾಳ ತಾ. ಉತ್ತರಕನ್ನಡ ಜಿಲ್ಲೆ.

ಜಾನ್ಸನ್ ಜೊಜೆ ಸಿದ್ದಿ (೨೦), ಡಿ ದರ್ಜೆ ನೌಕರ, ಜೋಯಿಡಾ ತಾ. ಉತ್ತರಕನ್ನಡ ಜಿಲ್ಲೆ.

ಡುಮಿನ್ ಮೊತ್ತೆ ಸಿದ್ದಿ (೩೩), ಸೈನಿಕ, ಮೇಲ್‌ಮಖೇರಿ, ಕಾರವಾರ ಜಿಲ್ಲೆ.

ಕವಿತಾ ಸಿದ್ದಿ (೨೫), ತಾಲೂಕು ಪಂಚಾಯತ್ ಸದಸ್ಯರು, ಮೇಲ್‌ಮಖೇರಿ, ಕಾರವಾರ ಜಿಲ್ಲೆ.

ಮಹೇಂದ್ರಕುಮಾರ ಜೈನ್ (೫೦), ಗ್ರೀನ್ ಇಂಡಿಯಾ ವ್ಯವಸ್ಥಾಪಕರು, ದಾಂಡೇಲಿ, ಉತ್ತರಕನ್ನಡ ಜಿಲ್ಲೆ.

ಗಣಪತಿ ಕೃಷ್ಣ ಸಿದ್ದಿ (೨೮), ಗ್ರೀನ್ ಇಂಡಿಯಾ, ದಾಂಡೇಲಿ, ಉತ್ತರಕನ್ನಡ ಜಿಲ್ಲೆ.

ರವಿ ಸಿದ್ದಿ (೩೦), ಕೃಷಿಕರು, ಯಲ್ಲಾಪುರ, ಉತ್ತರಕನ್ನಡ ಜಿಲ್ಲೆ.

ಮೋಹನ್ ಸಿದ್ದಿ (೨೫), ಎನ್.ಜಿ.ಓ., ಯಲ್ಲಾಪುರ, ಉತ್ತರಕನ್ನಡ ಜಿಲ್ಲೆ.

ಗುಳ್ಳಪುರ ಕೃಷ್ಣ ಸಿದ್ದಿ (೪೦), ಗ್ರೀನ್ ಇಂಡಿಯಾ, ಗುಳ್ಳಪುರ, ಯಲ್ಲಾಪುರ ತಾ. ಉತ್ತರಕನ್ನಡ ಜಿಲ್ಲೆ.

ಮಂಜುನಾಥ ಹೆಗಡೆ (೨೧), ಜಮೀನ್ದಾರ, ಕೈಗಡಿ, ಯಲ್ಲಾಪುರ ತಾ. ಉತ್ತರಕನ್ನಡ ಜಿಲ್ಲೆ.

ಅನಸೂಯ ಲಾರೆನ್ಸ್ ಸಿದ್ದಿ (೪೬), ಕೂಲಿ, ಕೊಡ್ಸೆ, ಯಲ್ಲಾಪುರ ತಾ. ಉತ್ತರಕನ್ನಡ ಜಿಲ್ಲೆ.

ಲಕ್ಷ್ಮೀ ನಾಗಪ್ಪ ಸಿದ್ದಿ (೫೬), ಕೂಲಿ, ಕೊಡ್ಸೆ, ಯಲ್ಲಾಪುರ ತಾ. ಉತ್ತರಕನ್ನಡ ಜಿಲ್ಲೆ.

ಸುಶೀಲಾ ಜೊಜೆ ಸಿದ್ದಿ (೩೬), ಕೂಲಿ, ಕೊಡ್ಸೆ, ಯಲ್ಲಾಪುರ ತಾ. ಉತ್ತರಕನ್ನಡ ಜಿಲ್ಲೆ.

ಡೇಜಿ ಫ್ರಾನ್ಸಿಸ್ ಸಿದ್ದಿ (೧೪), ವಿದ್ಯಾರ್ಥಿನಿ, ಕಣ್ಣಿಗೇರಿ, ಯಲ್ಲಾಪುರ ತಾ. ಉತ್ತರಕನ್ನಡ ಜಿಲ್ಲೆ.

ಯಶವಂತ ಫ್ರಾನ್ಸಿಸ್ ಸಿದ್ದಿ (೨೭), ಮನೆಕೆಲಸ, ಜನಶೆಟ್ಟಿಕೊಪ್ಪ, ಯಲ್ಲಾಪುರ ತಾ. ಉತ್ತರಕನ್ನಡ ಜಿಲ್ಲೆ.

ಶ್ರೀಧರ ಸುಬ್ಬಾ ಸಿದ್ದಿ (೨೭), ಡ್ರೈವರ್, ಕಾಗರಕೊಡ್ಲು, ಉಮಚಗಿ ಪಂಚಾಯತ್, ಯಲ್ಲಾಪುರ ತಾ. ಉತ್ತರಕನ್ನಡ ಜಿಲ್ಲೆ.

ದತ್ತಾತ್ರೇಯ ರಾ ಸಿದ್ದಿ (೨೮). ಕೆಡಿಸಿಸಿ ಬ್ಯಾಂಕ್(ಕಿರಿಯ ಸಹಾಯಕರು), ಉಚ್ಚಿಗೇರಿ, ಕುಂದರಗಿ ಪಂಚಾಯತ್, ಯಲ್ಲಾಪುರ ತಾ. ಉತ್ತರಕನ್ನಡ ಜಿಲ್ಲೆ.

ದಾಕ್ಷಾಯಿಣಿ ಹನುಮಂತ ಸಿದ್ದಿ (೨೨), ಅಂಗನವಾಡಿ ಕಾರ್ಯಕರ್ತೆ, ದೇವರಕಲ್ಲಳ್ಳಿ, ಹಾಸಣಗಿ ಪಂಚಾಯತ್, ಯಲ್ಲಾಪುರ ತಾ. ಉತ್ತರಕನ್ನಡ ಜಿಲ್ಲೆ.

ಪ್ರಕಾಶ ಲಕ್ಷ್ಮಣ್ ಸಿದ್ದಿ (೩೨), ಕೂಲಿ, ಭರಣಿ, ಕುಂದರಗಿ ಪಂಚಾಯತ್, ಯಲ್ಲಾಪುರ ತಾ. ಉತ್ತರಕನ್ನಡ ಜಿಲ್ಲೆ.

ವೆಂಕಟೇಶ್ ನಾಯಕ್ (೩೦), ಸ್ಕಾಡ್‌ವೆಸ್ ಸ್ಥಾಪಕರು, ಶಿರಸಿ, ಉತ್ತರಕನ್ನಡ ಜಿಲ್ಲೆ

ಜಾನಕಿ ಸುಬ್ರಾಯ ಸಿದ್ದಿ (೩೩), ಮನೆಕೆಲಸ, ಮತ್ತಿಘಟ್ಟ, ಶಿರಸಿ ತಾ. ಉತ್ತರಕನ್ನಡ ಜಿಲ್ಲೆ.

ಸೀತಾರಾಮ ಹೆಗಡೆ (೫೫), ಉಪನ್ಯಾಸಕರು, ಹರಪನಹಳ್ಳಿ ತಾ. ದಾವಣಗೆರೆ ಜಿಲ್ಲೆ.

ಸವಿತಾ ಶಂಕರ ಸಿದ್ದಿ (೩೪), ಮನೆಕೆಲಸ, ರಾಮನಗುಡಿ, ಅಂಕೋಲಾ ತಾ. ಉತ್ತರಕನ್ನಡ ಜಿಲ್ಲೆ.

ಸಂವರ್ಥ ಸಿದ್ದಿ (೨೦), ಕೂಲಿ, ಡೊಂಗ್ರಿ, ಅಂಕೋಲಾ ತಾ. ಉತ್ತರಕನ್ನಡ ಜಿಲ್ಲೆ.

ವಿದ್ಯಾ ಸಂತೋಷ ಸಿದ್ದಿ (೨೬), ಅಂಗನವಾಡಿ ಕಾರ್ಯಕರ್ತೆ, ಕೂಡ್ಲಗದ್ದೆ, ಅಂಕೋಲಾ ತಾ. ಉತ್ತರಕನ್ನಡ ಜಿಲ್ಲೆ.

ಲಕ್ಷ್ಮೀ ಸಾಣ್ಯ ಸಿದ್ದಿ (೫೫), ಕೃಷಿಕೂಲಿ, ಹಳವಳ್ಳಿ, ಅಂಕೋಲಾ ತಾ. ಉತ್ತರಕನ್ನಡ ಜಿಲ್ಲೆ.

ಶಿವರಾಮ ಬಾಬು ಸಿದ್ದಿ (೪೯), ಕೂಲಿ, ವೈದ್ಯಹೆಗ್ಗಾರ, ಅಂಕೋಲಾ ತಾ. ಉತ್ತರಕನ್ನಡ ಜಿಲ್ಲೆ

ವಿನೂತ ಚಂದ್ರ ಸಿದ್ದಿ (೧೭), ವಿದ್ಯಾರ್ಥಿ, ಹಳವಳ್ಳಿ, ಅಂಕೋಲಾ ತಾ. ಉತ್ತರಕನ್ನಡ ಜಿಲ್ಲೆ.

ರೇಣುಕಾ ಮಂಜುನಾಥ ಸಿದ್ದಿ (೨೨), ಕಾನೂನು ವಿದ್ಯಾರ್ಥಿನಿ, ಕನಕನಹಳ್ಳಿ, ಅಂಕೋಲಾ ತಾ. ಉತ್ತರಕನ್ನಡ ಜಿಲ್ಲೆ.

ಕರ್ನಾಟಕ

ಉತ್ತರಕನ್ನಡ ಜಿಲ್ಲೆಯ ಸಿದ್ದಿಗಳ ಸಮೀಕ್ಷಾ ನೆಲೆ





ಸಿದ್ದಿ ಬುಡಕಟ್ಟುಗಳ

ತಾಲೂಕುವಾರು ಸಮೀಕ್ಷಾ ನೆಲೆಗಳು





ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ -೫೮೩ ೨೭೬

ಪ್ರಶ್ನಾವಳಿ

ಒಂದು ಬುಡಕಟ್ಟಿನ ಅರ್ಥವ್ಯವಸ್ಥೆ (ಸಿದ್ದಿ ಬುಡಕಟ್ಟನ್ನು ಪರಿಗಣಿಸಿ)

೧. ಸಾಮಾನ್ಯ ಮಾಹಿತಿ

ಎ. ಸಮೀಕ್ಷೆಯ ದಿನಾಂಕ

ಬಿ. ಒಳಪಂಗಡ :

ಸಿ. ಬೆಡಗು :

ಡಿ. ಮಾತೃಭಾಷೆ

ಇ. ಮನೆದೇವರು / ದೈವ

ಇ. ಕುಲಚಿಹ್ನೆ

ಎಫ್. ಮನೆತನದ ಹೆಸರು

ಜಿ. ಕು.ಗ್ರಾಮ / ಗ್ರಾಮ / ನಗರ

ಎಚ್. ವಾರ್ಡ್

ಐ. ಪಂಚಾಯತಿ

ಜೆ. ತಾಲೂಕು

ಕೆ. ಜಿಲ್ಲೆ

ಎಲ್. ಭೂಹಿಡುವಳಿ (ಎಕರೆಗಳಲ್ಲಿ)

೧. ಒಣ :

೨. ನೀರಾವರಿ :

೧೧. ವೈಯಕ್ತಿಕ ಮಾಹಿತಿ

ಕ್ರ.ಸಂ.	ಸದಸ್ಯರ ಹೆಸರುಗಳು	ಸಂಬಂಧ	ಲಿಂಗ	ವಯಸ್ಸು	ಶಿಕ್ಷಣ	ವೈವಾಹಿಕ ಸ್ಥಾನಮಾನ	ಕಸಬು	ಸರ್ಕಾರಿ ಸೌಲಭ್ಯಗಳು ( )			
								ಓಟಿನಕಾರ್ಡ	ವಿಧವಾ ವೇತನ	ಅಂಗವಿಕಲ	ಶಿಷ್ಯವೇತನ
೧		ಮುಖ್ಯಸ್ಥ/ಮುಖ್ಯಸ್ಥೆ									
೨											
೩											
೪											
೫											
೬											
೭											
೮											
೯											
೧೦											
೧೧											
೧೨											

ಒ. ಪಶುಸಂಪತ್ತು (ಸಂಖ್ಯೆಗಳಲ್ಲಿ)

೧. ಎತ್ತು, ಹೋರಿ :

೨. ಆಕಳು, ಕರು :

೩. ಎಮ್ಮೆ, ಕೋಣ :

೪. ಕುರಿ :

೫. ಮೇಕೆ :

೬. ಕೋಳಿ :

ಪಿ. ಮನೆ ವಿವರ

೧. ಗುಡಿಸಲು

೨. ಟಿನ್‌ಮನೆ

೩. ದಾಬಾ ಮಾಳಿಗೆ

೪. ಆರ್.ಸಿ.ಸಿ.

೫. ಹೆಂಚಿನ ಮನೆ

೬. ಆಶ್ರಯ ಮನೆ

೭. ಬಾಡಿಗೆ ಮನೆ

ಕ್ಯೂ ಇತರೆ ಸೌಲಭ್ಯಗಳು

೧. ಪಡಿತರ ಚೀಟಿ

೨. ಗ್ಯಾಸ್

೩. ನಲ್ಲಿ

೪. ಶೌಚಾಲಯ

೫. ಸ್ನಾನಗೃಹ

೬. ಸೈಕಲ್

೭. ರೇಡಿಯೋ

೮. ಟೇಪ್ ರಿಕಾರ್ಡರ್

೯. ಟಿ.ವಿ.

೧೦. ದೂರವಾಣಿ

೧೧. ಮೋಟರ್ ಸೈಕಲ್

೧೨. ಇತರ

ಮಾರ್ಗದರ್ಶಕರು

ಡಾ. ಎ.ಎಸ್. ಪ್ರಭಾಕರ್, ಸಹಪ್ರಾಧ್ಯಾಪಕರು

ಸಂಶೋಧಕರು

ಜಿ. ಶಶಿಕಿರಣ್

ಮಾಹಿತಿ ದಾಖಲೆದಾರರ ಸಹಿ ಮತ್ತು ವಿಳಾಸ

ಅಂಕಿ ಅಂಶಗಳು ೧ : ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟಿನ ತಾಲೂಕುವಾರು, ಪಂಚಾಯಿತಿವಾರು, ಕುಟುಂಬಗಳು, ಲಿಂಗವಾರು ಜನಸಂಖ್ಯೆ ಹಾಗೂ ಲಿಂಗವಾರು ವಯೋಮಾನ

ತಾಲೂಕುಗಳು	ಪಂಚಾಯತಿಗಳು	ಕುಟುಂಬಗಳು	ಜನಸಂಖ್ಯೆ			ವಯೋಮಾನ														
						0–6			7–17			18–40			41–60			61ರ ಮೇಲ್ಪಟ್ಟು		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಅಂಕೋಲಾ	ಕೊಡ್ಲಗದ್ದೆ	೨	೫	೫	೧೧	೧		೧				೩	೩	೬		೧	೧	೧	೧	೨
	ಡೊಂಗ್ರಿ	೫೦	೯೯	೧೦೯	೨೦೮	೫	೭	೧೨	೩೦	೨೬	೫೬	೪೧	೫೧	೯೨	೨೦	೨೧	೪೧	೩	೪	೭
	ಸುಂಕಸಾಳ	೬	೧೭	೮	೨೫	೧		೧	೫	೨	೭	೯	೪	೧೩		೨	೨	೨		೨
	ಒಟ್ಟು	೫೮	೧೨೧	೧೨೨	೨೪೪	೭	೭	೧೪	೩೫	೨೮	೬೩	೫೩	೫೮	೧೧೧	೨೦	೨೪	೪೪	೬	೫	೧೧
ಕಾರವಾರ	ಮೇಲ್‌ಮಖೇರಿ	೫	೧೪	೧೨	೨೬	೧	೨	೩	೧		೧	೮	೬	೧೪	೨	೪	೬	೨		೨
ಜೋಯಿಡಾ	ಇರನೊಳ್ಳಿ	೧೩	೩೦	೨೭	೫೭	೩	೨	೫	೧೦	೬	೧೬	೧೨	೧೪	೨೬	೫	೩	೮		೨	೨
ಮುಂಡಗೋಡ	ಉಗಿನಕೇರಿ	೨೧	೫೦	೩೮	೮೮	೩		೩	೮	೮	೧೬	೨೬	೨೧	೪೭	೧೦	೭	೧೭	೩	೨	೫
	ಬಸರೆಜಡ್ಡಿ	೧೫	೨೬	೪೩	೬೯	೨	೮	೧೦	೪	೧೧	೧೫	೯	೧೪	೨೩	೧೧	೯	೨೦		೧	೧
	ಒಟ್ಟು	೩೬	೭೬	೮೧	೧೫೭	೫	೮	೧೩	೧೨	೧೯	೩೧	೩೫	೩೫	೭೦	೨೧	೧೬	೩೭	೩	೩	೬
ಯಲ್ಲಾಪುರ	ಉಮ್ಮಚಗಿ	೪೪	೯೦	೭೫	೧೬೫	೯	೩	೧೨	೧೭	೨೧	೩೮	೩೮	೩೫	೭೩	೨೦	೧೩	೩೩	೬	೩	೯
	ಕಣ್ಣಿಗೇರಿ	೪೮	೮೮	೯೫	೧೮೩	೧೨	೯	೨೧	೨೨	೨೬	೪೮	೪೧	೪೨	೮೩	೧೧	೧೩	೨೪	೨	೫	೭
	ಕುಂದರಗಿ	೩೬	೬೪	೬೬	೧೩೦	೩	೨	೫	೧೨	೧೮	೩೦	೩೪	೩೨	೬೬	೧೦	೧೨	೨೨	೫	೨	೭
	ಹಾಸಣಗಿ	೧೪	೨೪	೨೮	೫೨	೩	೨	೫	೩	೫	೮	೧೩	೧೫	೨೮	೪	೫	೯	೧	೧	೨
	ಹಿಟ್ಲಳ್ಳಿ	೫	೧೨	೧೪	೨೬	೧	೩	೪	೩	೪	೭	೬	೫	೧೧	೨	೨	೪			
	ಒಟ್ಟು	೧೪೭	೨೭೮	೨೭೮	೫೫೬	೨೮	೧೯	೪೭	೫೭	೭೪	೧೩೧	೧೩೨	೧೨೯	೨೬೧	೪೭	೪೫	೯೨	೧೪	೧೧	೨೫
ಶಿರಸಿ	ದೇವನಳ್ಳಿ	೧೦	೨೩	೧೭	೪೦				೮	೬	೧೪	೧೧	೮	೧೯	೨	೨	೪	೨	೧	೩
	ಕಕ್ಕನಳ್ಳಿ	೧೦	೩೦	೨೯	೫೯	೨	೫	೭	೯	೮	೧೭	೯	೮	೧೭	೮	೫	೧೩	೨	೩	೫
	ಒಟ್ಟು	೨೦	೫೩	೪೬	೯೯	೨	೫	೭	೧೭	೧೪	೩೧	೨೦	೧೬	೩೬	೧೦	೭	೧೭	೪	೪	೮
ಹಳಿಯಾಳ	ಕೆಸರೊಳ್ಳಿ	೨೨	೫೦	೫೫	೧೦೫	೯	೧೧	೨೦	೧೮	೧೭	೩೫	೧೬	೨೩	೩೯	೭	೧	೮	೦	೩	೩
	ಗುಂಡೊಳ್ಳಿ	೧೭	೩೦	೩೫	೬೫	೭	೯	೧೬	೩	೫	೮	೧೪	೧೨	೨೬	೨	೫	೭	೪	೪	೮
	ಭಾಗವತಿ	೪೬	೧೦೯	೧೧೩	೨೨೨	೧೫	೧೭	೩೨	೩೭	೩೬	೭೩	೩೯	೪೩	೮೨	೧೬	೧೪	೩೦	೨	೩	೫
	ಸಾಂಬ್ರಾಣಿ	೭೩	೧೫೯	೧೬೦	೩೧೯	೨೨	೨೨	೪೪	೩೫	೩೬	೭೧	೭೨	೭೪	೧೪೬	೨೩	೨೨	೪೫	೭	೬	೧೩
	ಒಟ್ಟು	೧೫೮	೩೪೮	೩೬೩	೭೧೧	೫೩	೫೯	೧೧೨	೯೩	೯೪	೧೮೭	೧೪೧	೧೫೨	೨೯೩	೪೮	೪೨	೯೦	೧೩	೧೬	೨೯
ಉತ್ತರ ಕನ್ನಡ ಒಟ್ಟು		೪೩೭	೯೨೦	೯೨೯	೧೮೪೯	೯೯	೧೦೨	೨೦೧	೨೨೫	೨೩೫	೪೬೦	೪೦೧	೪೧೦	೮೧೧	೧೫೩	೧೪೧	೨೯೪	೪೨	೪೧	೮೩

ಅಂಕಿ ಅಂಶಗಳು ೨ : ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟಿನ ತಾಲೂಕುವಾರು, ಪಂಚಾಯಿತಿವಾರು, ಕುಟುಂಬಗಳು, ಲಿಂಗವಾರು ಜನಸಂಖ್ಯೆ ಹಾಗೂ ಲಿಂಗವಾರು ವೈವಾಹಿಕ ಸ್ಥಾನಮಾನಗಳು

ತಾಲೂಕುಗಳು	ಪಂಚಾಯತಿಗಳು	ಕುಟುಂಬಗಳು	ಜನಸಂಖ್ಯೆ			ವೈವಾಹಿಕ ಸ್ಥಾನಮಾನ								
						ಅವಿವಾಹಿತ			ವಿವಾಹಿತ			ವಿಧುರ/ವಿಧವೆ		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಅಂಕೋಲಾ	ಕೊಡ್ಲಗದ್ದೆ	೨	೫	೫	೧೧	೨	೧	೩	೩	೩	೬		೧	೧
	ಡೊಂಗ್ರಿ	೫೦	೯೯	೧೦೯	೨೦೮	೫೧	೪೭	೯೮	೪೮	೪೮	೯೬		೧೪	೧೪
	ಸುಂಕನಾಳ	೬	೧೭	೮	೨೫	೧೦	೨	೧೨	೬	೬	·೧೨	೧		೧
	ಒಟ್ಟು	೫೮	೧೨೧	೧೨೨	೨೪೪	೬೩	೫೦	೧೧೩	೫೭	೫೭	೧೧೪	೧	೧೫	೧೬
ಕಾರವಾರ	ಮೇಲ್‌ಮಖೇರಿ	೫	೧೪	೧೨	೨೬	೮	೫	೧೩	೬	೬	೧೨		೧	೧
ಜೋಯಿಡಾ	ಇರನೊಳ್ಳಿ	೧೩	೩೦	೨೭	೫೭	೧೮	೧೧	೨೯	೧೨	೧೩	೨೫		೩	೩
ಮುಂಡಗೋಡ	ಉಗಿನಕೇರಿ	೨೧	೫೦	೩೮	೮೮	೨೭	೧೨	೩೯	೨೧	೨೧	೪೨	೨	೫	೭
	ಬಸರೆಜಡ್ಡಿ	೧೫	೨೬	೪೩	೬೯	೧೦	೨೪	೩೪	೧೬	೧೯	೩೫			
	ಒಟ್ಟು	೩೬	೭೬	೮೧	೧೫೭	೩೭	೩೬	೭೩	೩೭	೪೦	೭೭	೨	೫	೭
ಯಲ್ಲಾಪುರ	ಉಮ್ಮಚಗಿ	೪೪	೯೦	೭೫	೧೬೫	೪೬	೨೮	೭೪	೪೩	೪೩	೮೬	೧	೪	೫
	ಕಣ್ಣಿಗೇರಿ	೪೮	೮೮	೯೫	೧೮೩	೪೯	೩೮	೮೭	೪೧	೪೧	೮೨	೨	೧೨	೧೪
	ಕುಂದರಗಿ	೩೬	೬೪	೬೬	೧೩೦	೨೯	೨೬	೫೫	೩೪	೩೪	೬೮	೧	೫	೬
	ಹಾಸಣಗಿ	೧೪	೨೪	೨೮	೫೨	೧೦	೧೨	೨೨	೧೪	೧೪	೨೮		೨	೨
	ಹಿಟ್ಲಳ್ಳಿ	೫	೧೨	೧೪	೨೬	೬	೭	೧೩	೬	೬	೧೨		೧	೧
	ಒಟ್ಟು	೧೪೭	೨೭೮	೨೭೮	೫೫೬	೧೪೦	೧೧೧	೨೫೧	೧೩೮	೧೩೮	೨೭೬	೪	೨೪	೨೮
ಶಿರಸಿ	ದೇವನಳ್ಳಿ	೧೦	೨೩	೧೭	೪೦	೧೩	೭	೨೦	೯	೯	೧೮	೧	೧	೨
	ಕಕ್ಕನಳ್ಳಿ	೧೦	೩೦	೨೯	೫೯	೧೫	೧೩	೨೮	೧೫	೧೪	೨೯		೨	೨
	ಒಟ್ಟು	೨೦	೫೩	೪೬	೯೯	೨೮	೨೦	೪೮	೨೪	೨೩	೪೭	೧	೩	೪
ಹಳಿಯಾಳ	ಕೆಸರೊಳ್ಳಿ	೨೨	೫೦	೫೫	೧೦೫	೩೧	೩೧	೬೨	. ೧೯	೨೦	೩೯	೦	೪	೪
	ಗುಂಡೊಳ್ಳಿ	೧೭	೩೦	೩೫	೬೫	೧೪	೧೪	೨೮	೧೬	೧೮	೨೮	೦	೩	೩
	ಭಾಗವತಿ	೪೬	೧೦೯	೧೧೩	೨೨೨	೬೮	೬೩	೧೨೪	೪೦	೫೦	೮೫	೦	೫	೫
	ಸಾಂಬ್ರಾಣಿ	೭೩	೧೫೯	೧೬೦	೩೧೯	೮೩	೭೫	೧೫೮	೭೩	೮೦	೧೫೪	೩	೫	೮
	ಒಟ್ಟು	೧೫೮	೩೪೮	೩೬೩	೭೧೧	೧೯೬	೧೮೩	೩೭೨	೧೪೮	೧೬೮	೩೦೬	೩	೧೭	೨೦
ಉತ್ತರ ಕನ್ನಡ ಒಟ್ಟು		೪೩೭	೯೨೦	೯೨೯	೧೮೪೯	೪೯೦	೪೧೬	೮೯೯	೪೨೨	೪೪೫	೮೫೭	೧೧	೬೮	೭೯

ಅಂಕಿ ಅಂಶಗಳು ೩ : ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟಿನ ತಾಲೂಕುವಾರು, ಪಂಚಾಯಿತಿವಾರು, ಲಿಂಗವಾರು ಶೈಕ್ಷಣಿಕ ಹಂತಗಳು

ತಾಲೂಕುಗಳು	ಪಂಚಾಯತಿಗಳು	ಶೈಕ್ಷಣಿಕ ಹಂತಗಳು: ಪ್ರಾಥಮಿಕ			ಮಾಧ್ಯಮಿಕ			ಪೌಢ			ಡಿಪ್ಲೋಮಾ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಅಂಕೋಲಾ	ಕೊಡ್ಲಗದ್ದೆ	೧		೧	೧		೧	೧	೧	೨			
	ಡೊಂಗ್ರಿ	೩೦	೨೯	೫೯	೧೭	೧೮	೩೫	೨೨	೧೧	೩೩			
	ಸುಂಕನಾಳ	೩	೧	೪	೩	೨	೫	೪	೧	೫			
	ಒಟ್ಟು	೩೪	೩೦	೬೪	೨೧	೨೦	೪೧	೨೭	೧೩	೪೦			
ಕಾರವಾರ	ಮೇಲ್ಮಖೇರಿ	೧		೧	೨		೨	೩		೩	೧		೧
ಜೋಯಿಡಾ	ಇರನೊಳ್ಳಿ	೩	೩	೬	೯	೪	೧೩	೭	೫	೧೨			
ಮುಂಡಗೋಡ	ಉಗಿನಕೇರಿ	೮	೩	೧೧	೯	೬	೧೫	೧೮	೮	೨೬			
	ಬಸರೆಜಡ್ಡಿ	೬	೧೩	೧೯	೨	೭	೯	೬	೧	೭			
	ಒಟ್ಟು	೧೪	೧೬	೩೦	೧೧	೧೩	೨೪	೨೪	೯	೩೩			
ಯಲ್ಲಾಪುರ	ಉಮ್ಮಚಗಿ	೨೯	೩೧	೬೦	೩೧	೧೬	೪೫	೧೨	೧೦	೨೨			
	ಕಣ್ಣಿಗೇರಿ	೧೯	೧೮	೩೭	೧೭	೧೭	೩೪	೧೯	೮	೨೭	೧		೧
	ಕುಂದರಗಿ	೨೪	೨೫	೪೯	೧೭	೧೯	೩೬	೯	೧೧	೨೦			
	ಹಾಸಣಗಿ	೮	೧೦	೧೮	೬	೮	೧೪	೨	೬	೮			
	ಹಿಟ್ಲಳ್ಳಿ	೫	೫	೧೦	೬	೪	೧೦	೧		೧			
	ಒಟ್ಟು	೮೫	೮೯	೧೭೪	೭೭	೬೪	೧೩೯	೪೩	೩೫	೭೮	೧		೧
ಶಿರಸಿ	ದೇವನಳ್ಳಿ	೯	೬	೧೫	೮	೪	೧೨	೩	೪	೭			
	ಕಕ್ಕನಳ್ಳಿ	೭	೫	೧೨	೬	೫	೧೧	೪	೨	೬			
	ಒಟ್ಟು	೧೬	೧೧	೨೭	೧೪	೯	೨೩	೭	೬	೧೩			
ಹಳಿಯಾಳ	ಕೆಸರೊಳ್ಳಿ	೧೭	೧೪	೩೧	೫	೨	೭	೧೦	೧೦	೨೦	೦	೦	೦
	ಗುಂಡೊಳ್ಳಿ	೧೦	೭	೧೭	೩	೩	೬	೩	೩	೬	೦	೦	೦
	ಭಾಗವತಿ	೩೪	೧೫	೪೯	೯	೧೭	೨೬	೧೪	೧೨	೨೬	೦	೦	೦
	ಸಾಂಬ್ರಾಣಿ	೩೫	೩೦	೬೫	೨೯	೨೮	೫೭	೨೫	೧೯	೪೨			
	ಒಟ್ಟು	೯೬	೬೬	೧೬೨	೪೬	೫೦	೯೬	೫೨	೪೪	೯೪	೦	೦	೦
ಉತ್ತರ ಕನ್ನಡ ಒಟ್ಟು		೨೪೯	೨೧೫	೪೬೪	೧೮೦	೧೬೦	೩೩೮	೧೬೩	೧೧೨	೨೭೩	೨	೦	೨

ತಾಲೂಕುಗಳು	ಪಂಚಾಯತಿಗಳು	ಪದವಿಪೂರ್ವ			ಪದವಿ			ಇತರೆ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಅಂಕೋಲಾ	ಕೊಡ್ಲಗದ್ದೆ		೧	೧						
	ಡೊಂಗ್ರಿ	೩	೬	೯	೧	೧	೨		೧	೧
	ಸುಂಕನಾಳ									
	ಒಟ್ಟು	೩	೭	೧೦	೧	೧	೨		೧	೧
ಕಾರವಾರ	ಮೇಲ್ಮಖೇರಿ	೨	೩	೫	೧		೧			
ಜೋಯಿಡಾ	ಇರನೊಳ್ಳಿ	೨	೨	೪						
ಮುಂಡಗೋಡ	ಉಗಿನಕೇರಿ	೪	೧	೫						
	ಬಸರೆಜಡ್ಡಿ	೧	೩	೪						
	ಒಟ್ಟು	೫	೪	೯						
ಯಲ್ಲಾಪುರ	ಉಮ್ಮಚಗಿ	೩	೩	೬					೧	೧
	ಕಣ್ಣಿಗೇರಿ	೧	೧	೨	೧		೧		೧	೧
	ಕುಂದರಗಿ	೩	೩	೬	೩		೩			
	ಹಾಸಣಗಿ	೩	೧	೪	೧		೧		೧	೧
	ಹಿಟ್ಲಳ್ಳಿ									
	ಒಟ್ಟು	೧೦	೮	೧೮	೫		೫		೩	೩
ಶಿರಸಿ	ದೇವನಳ್ಳಿ									
	ಕಕ್ಕನಳ್ಳಿ	೩		೩						
	ಒಟ್ಟು	೩		೩						
ಹಳಿಯಾಳ	ಕೆಸರೊಳ್ಳಿ	೧	೬	೭	೧	೦	೧	೦	೦	೦
	ಗುಂಡೊಳ್ಳಿ	೧	೧	೨	೦	೦	೦	೦	೧	೧
	ಭಾಗವತಿ	೨	೦	೨	೦	೦	೦	೦	೦	೦
	ಸಾಂಬ್ರಾಣಿ		೪	೪						
	ಒಟ್ಟು	೪	೧೧	೧೫	೧	೦	೧	೦	೧	೧
ಉತ್ತರ ಕನ್ನಡ ಒಟ್ಟು		೨೯	೩೫	೬೪	೮	೧	೯	೦	೫	೫

ಅಂಕಿ ಅಂಶಗಳು ೪ : ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟಿನ ತಾಲೂಕುವಾರು, ಪಂಚಾಯಿತಿವಾರು, ಕುಟುಂಬಗಳು, ಲಿಂಗವಾರು ವಿವಿಧ ಕಸುಬುಗಳು

ತಾಲೂಕುಗಳು	ಪಂಚಾಯಿತಿಗಳು	ಕುಟುಂಬಗಳು	ಕಸುಬುಗಳು: ಕೃಷಿ			ಕೃಷಿಕೂಲಿ			ಮನೆಗೆಲಸ			ಸರ್ಕಾರಿ			ಖಾಸಗಿ			ಇತರೆ		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಅಂಕೋಲಾ	ಕೊಡ್ಲಗದ್ದೆ	೨				೩	೧	೪		೩	೩									
	ಡೊಂಗ್ರಿ	೫೦	೧೨	೯	೨೧	೫೪	೫೨	೧೦೬		೭	೭									
	ಸುಂಕನಾಳ	೬				೯		೯		೬	೬									
	ಒಟ್ಟು	೫೮	೧೨	೯	೨೧	೬೬	೫೩	೧೧೯		೧೬	೧೬									
ಕಾರವಾರ	ಮೇಲ್‌ಮಖೇರಿ	೫				೯	೭	೧೬												
ಜೋಯಿಡಾ	ಇರನೊಳ್ಳಿ	೧೩				೧೨	೧೪	೨೬		೨	೨	೧		೧				೧		೧
ಮುಂಡಗೋಡ	ಉಗಿನಕೇರಿ	೨೧				೩೬	೨೮	೬೪												
	ಬಸರೆಜಡ್ಡಿ	೧೫				೧೭	೨೧	೩೮												
	ಒಟ್ಟು	೩೬				೫೩	೪೯	೧೦೨												
ಯಲ್ಲಾಪುರ	ಉಮ್ಮಚಗಿ	೪೪				೫೯	೫೧	೧೧೦										೧		೧
	ಕಣ್ಣಿಗೇರಿ	೪೮				೫೩	೫೮	೧೧೧												
	ಕುಂದರಗಿ	೩೬				೪೫	೪೪	೮೯				೧		೧						
	ಹಾಸಣಗಿ	೧೪				೧೭	೧೯	೩೬					೧	೧						
	ಹಿಟ್ಟಳ್ಳಿ	೫				೮	೮	೧೬												
	ಒಟ್ಟು	೧೪೭				೧೮೨	೧೮೦	೩೬೨				೧	೧	೨				೧		೧
ಶಿರಸಿ	ದೇವನಳ್ಳಿ	೧೦	೧೨	೫	೧೭	೩	೧	೪		೨	೨									
	ಕಕ್ಕನಳ್ಳಿ	೧೦				೧೪	೧೩	೨೭		೧	೧							೧		೧
	ಒಟ್ಟು	೨೦	೧೨	೫	೧೭	೧೭	೧೪	೩೧		೩	೩							೧		೧
ಹಳಿಯಾಳ	ಕೆಸರೊಳ್ಳಿ	೨೨	೧೦	೮	೧೮	೮	೧೧	೧೯	೦	೧	೧	೦	೦	೦	೦	೦	೦	೦	೦	೦
	ಗುಂಡೊಳ್ಳಿ	೧೭	೭	೬	೧೩	೬	೮	೧೪	೦	೦	೦	೦	೦	೦	೨	೦	೨	೦	೦	೦
	ಭಾಗವತಿ	೪೬	೦	೦	೦	೫೧	೬೧	೧೧೨	೦	೦	೦	೦	೧	೧	೦	೦	೦	೦	೦	೦
	ಸಾಂಬ್ರಾಣಿ	೭೩	೩	೨	೫	೭೯	೬೦	೧೩೯		೩	೩	೩		೩					೨	೨
	ಒಟ್ಟು	೧೫೮	೨೦	೧೬	೩೬	೧೪೪	೧೪೦	೨೮೪	೦	೪	೪	೩	೧	೪	೨	೦	೨	೦	೨	೨
ಉತ್ತರ ಕನ್ನಡ ಒಟ್ಟು		೪೩೭	೪೪	೩೦	೭೪	೪೮೩	೪೫೭	೯೪೦	೦	೨೫	೨೫	೫	೨	೭	೨	೦	೨	೩	೨	೫

ಅಂಕಿ ಅಂಶಗಳು ೫ : ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟಿನ ತಾಲೂಕುವಾರು, ಪಂಚಾಯಿತಿವಾರು, ಕುಟುಂಬಗಳು, ಲಿಂಗವಾರು ಸರ್ಕಾರಿ ಸೌಲಭ್ಯಗಳು

ತಾಲೂಕುಗಳು	ಪಂಚಾಯತಿಗಳು	ಕುಟುಂಬಗಳು	ಸರ್ಕಾರಿ ಸೌಲಭ್ಯಗಳು																
			ಕುಟುಂಬ ಯೋಜನೆ			ಓಟನ ಕಾರ್ಡ್			ವಿಧವಾ ವೇತನ	ಅಂಗವಿಕಲ			ವೃದ್ಯಾಪ			ಶಿಷ್ಯವೇತನ			ಭಾಗ್ಯಲಕ್ಷ್ಮಿ ಯೋಜನೆ
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	
ಅಂಕೋಲಾ	ಕೊಡ್ಲಗದ್ದೆ	೨		೧	೧	೨	೩	೫											
	ಡೊಂಗ್ರಿ	೫೦		೪೮	೪೮	೫೮	೬೮	೧೨೬	೩		೧	೧		೨	೨	೫	೧	೬	
	ಸುಂಕನಾಳ	೬		೩	೩	೯	೬	೧೫		೧		೧				೩	೧	೪	
	ಒಟ್ಟು	೫೮		೫೨	೫೨	೬೯	೭೭	೧೪೬	೩	೧	೧	೨		೨	೨	೮	೨	೧೦	
ಕಾರವಾರ	ಮೇಲ್‌ಮಖೇರಿ	೫		೩	೩	೬	೭	೧೩											
ಜೋಯಿಡಾ	ಇರನೊಳ್ಳಿ	೧೩		೧೦	೧೦	೧೪	೧೬	೩೦	೨										
ಮುಂಡಗೋಡ	ಉಗಿನಕೇರಿ	೨೧		೮	೮	೩೯	೨೯	೬೮	೩										
	ಬಸರೆಜಡ್ಡಿ	೧೫	೧೪	೧೬	೨೯	೧೭	೨೦	೩೪								೩	೧೦	೧೩	
	ಒಟ್ಟು	೩೬	೧೪	೨೪	೩೭	೫೬	೪೯	೧೦೨	೩							೩	೧೦	೧೩	
ಯಲ್ಲಾಪುರ	ಉಮ್ಮಚಗಿ	೪೪		೩೫	೩೫	೫೧	೪೬	೯೬	೪	೧	೧	೨				೧೦	೭	೧೭	
	ಕಣ್ಣಿಗೇರಿ	೪೮				೫೨	೫೩	೧೦೫	೧	೧	೧	೨	೨	೧	೩				
	ಕುಂದರಗಿ	೩೬		೨೯	೨೯	೪೫	೪೦	೮೩	೫							೧೦	೧೫	೨೫	
	ಹಾಸಣಗಿ	೧೪		೧೦	೧೦	೧೭	೧೮	೩೫	೧							೩	೪	೭	
	ಹಿಟ್ಲಳ್ಳಿ	೫		೪	೪	೭	೭	೧೪	೧							೧	೨	೩	
	ಒಟ್ಟು	೧೪೭		೭೮	೭೮	೧೭೨	೧೬೪	೩೩೩	೧೨	೨	೨	೪	೨	೧	೩	೨೪	೨೮	೫೨	
ಶಿರಸಿ	ದೇವನಳ್ಳಿ	೧೦		೮	೮	೧೪	೧೦	೨೪								೫	೨	೭	
	ಕಕ್ಕನಳ್ಳಿ	೧೦	೧೩	೧೩	೨೬	೧೬	೧೩	೨೯	೨							೭	೬	೧೩	
	ಒಟ್ಟು	೨೦	೧೩	೨೧	೩೪	೩೦	೨೩	೫೩	೨							೧೨	೮	೨೦	
ಹಳಿಯಾಳ	ಕೆಸರೊಳ್ಳಿ	೨೨	೧	೧೧	೧೨	೨೧	೨೪	೪೫	೩	೨	೧	೩	೦	೦	೦	೦	೦	೦	
	ಗುಂಡೊಳ್ಳಿ	೧೭	೦	೧೧	೧೧	೧೬	೧೫	೩೧	೩	೦	೦	೦	೦	೦	೦	೦	೦	೦	
	ಭಾಗವತಿ	೪೬	೩೪	೫೦	೮೪	೪೭	೫೬	೧೦೩	೪	೦	೦	೦	೦	೧	೧	೨೦	೨೩	೪೩	
	ಸಾಂಬ್ರಾಣಿ	೭೩	೧೪	೫೨	೬೬	೬೭	೬೩	೧೩೦	೨				೧		೧	೬	೭	೧೩	
	ಒಟ್ಟು	೧೫೮	೪೯	೧೨೪	೧೭೩	೧೫೧	೧೫೮	೩೦೯	೧೨	೨	೧	೩	೧	೧	೨	೨೬	೩೦	೫೬	
ಉತ್ತರ ಕನ್ನಡ ಒಟ್ಟು		೪೩೭	೭೬	೩೧೨	೩೮೭	೪೯೮	೪೯೪	೯೮೬	೩೪	೫	೪	೯	೩	೪	೭	೭೩	೭೮	೧೫೧	

ಅಂಕಿ ಅಂಶಗಳು ೬ : ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟಿನ ತಾಲೂಕುವಾರು, ಪಂಚಾಯಿತಿವಾರು, ಕುಟುಂಬಗಳು, ಭೂಹಿಡುವಳಿ ಶ್ರೇಣಿಗಳು ಹಾಗೂ ಪಶುಸಂಪತ್ತು

			ಭೂಹಿಡುವಳಿ (ಎಕರೆಗಳಲ್ಲಿ)			ಭೂ ಹಿಡುವಳಿ ಶ್ರೇಣಿಗಳಲ್ಲಿ 25 ಎ. ಮೇಲ್ಪಟ್ಟು	10.1–25.00	5.01–10.00	2.51–5.00	0.5–2.50	ಭೂ ರಹಿತ	ಪಶುಸಂಪತ್ತು (ಸಂಖ್ಯೆಗಳಲ್ಲಿ)							
ತಾಲೂಕುಗಳು	ಪಂಚಾಯತಿಗಳು	ಕುಟುಂಬಗಳು	ಒಣ	ನೀರಾವರಿ	ಒಟ್ಟು	ಎ	ಬಿ	ಸಿ	ಡಿ	ಇ	ಎಫ್	ಎತ್ತು	ಆಕಳು	ಎಮ್ಮೆ	ಕುರಿ	ಮೇಕೆ	ಕೋಳಿ	ಹಂದಿ	ಕೌಜಗ
ಅಂಕೋಲಾ	ಕೊಡ್ಲಗದ್ದೆ	೨	೨		೨					೧	೧		೨				೧೦		
	ಡೊಂಗ್ರಿ	೫೦	೫೫.೮		೫೬			೧	೧೦	೧೧	೨೮	೨೨	೩೧	೧೧			೧೮೮		
	ಸುಂಕನಾಳ	೬									೬		೭				೪೦		
	ಒಟ್ಟು	೫೮	೫೭.೮		೫೭.೮			೧	೧೦	೧೨	೩೫	೨೨	೪೦	೧೧			೨೩೮		
ಕಾರವಾರ	ಮೇಲ್‌ಮಖೇರಿ	೫									೫						೨೨		
ಜೋಯಿಡಾ	ಇರನೊಳ್ಳಿ	೧೩	೨		೨					೧	೧೨	೨	೨				೩೧		
ಮುಂಡಗೋಡ	ಉಗಿನಕೇರಿ	೨೧									೨೧						೬೭		
	ಬಸರೆಜಡ್ಡಿ	೧೫	೪		೪				೧	೧	೧೩	೮							
	ಒಟ್ಟು	೩೬	೪		೪				೧	೧	೩೪	೮					೬೭		
ಯಲ್ಲಾಪುರ	ಉಮ್ಮಚಗಿ	೪೪									೪೪	೧೩	೧೯	೧೫			೧೪೫		
	ಕಣ್ಣಿಗೇರಿ	೪೮	೧೮.೫	೩	೨೨					೨೮	೨೦	೬	೧೦	೩೦			೩೦೨		
	ಕುಂದರಗಿ	೩೬									೩೬	೧೯	೩೧	೧೧			೨೯೮		
	ಹಾಸಣಗಿ	೧೪									೧೪	೩	೭	೩			೮೭		
	ಹಿಟ್ಲಳ್ಳಿ	೫									೫			೨			೩೬		
	ಒಟ್ಟು	೧೪೭	೧೮.೫	೩	೨೧.೫					೨೮	೧೧೯	೪೧	೬೭	೬೧			೮೬೮		
ಶಿರಸಿ	ದೇವನಳ್ಳಿ	೧೦	೫	೯.೭	೧೫				೩	೬	೧		೯	೬					
	ಕಕ್ಕನಳ್ಳಿ	೧೦	೨		೨					೧	೯	೨							
	ಒಟ್ಟು	೨೦	೭	೯.೭	೧೬.೭				೩	೭	೧೦	೨	೯	೬					
ಹಳಿಯಾಳ	ಕೆಸರೊಳ್ಳಿ	೨೨	೧೯.೩	೦	೧೯	೦	೦	೧	೧	೫	೧೫	೨೩	೧೩	೩	೦	೦	೪೭	೦	೦
	ಗುಂಡೊಳ್ಳಿ	೧೭	೧೫	೦	೧೫	೦	೦	೦	೨	೪	೧೧	೪	೦	೧	೦	೦	೬	೦	೦
	ಭಾಗವತಿ	೪೬	೧.೫	೦	೧.೫	೦	೦	೦	೦	೧	೪೫	೧೦	೩	೧	೧	೦	೫೧	೦	೦
	ಸಾಂಬ್ರಾಣಿ	೭೩	೨೬.೫		೨೭			೧	೫	೩	೬೪	೨೨	೩	೨			೧೭		
	ಒಟ್ಟು	೧೫೮	೬೨.೩	೦	೬೨.೩	೦	೦	೨	೮	೧೩	೧೩೫	೫೯	೧೯	೭	೧	೦	೧೨೧	೦	೦
ಉತ್ತರ ಕನ್ನಡ ಒಟ್ಟು		೪೩೭	೧೫೨	೧೨.೭	೧೬೪	೦	೦	೩	೨೨	೬೨	೩೫೦	೧೩೪	೧೩೭	೮೫	೧	೦	೧೩೪೭	೦	೦

ಅಂಕಿ ಅಂಶಗಳು ೭ : ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟಿನ ತಾಲೂಕುವಾರು, ಪಂಚಾಯಿತಿವಾರು, ಕುಟುಂಬಗಳು, ವಸತಿ ಮಾದರಿಗಳು ಹಾಗೂ ಇತರೆ ಸೌಲ

ತಾಲೂಕುಗಳು	ಪಂಚಾಯತಿಗಳು	ಕುಟುಂಬ	ಮನೆ ಮಾದರಿಗಳು							ನಿವೇಶನ		ಮನೆ		ವಿದ್ಯುತ್		ಪಡಿತರ	ಇತರೆ ಸೌಲಭ್ಯಗಳು					
			ಗುಡಿಸಲು	ಟಿನ್	ದಾಭಾ	ಆರ್‌ಸಿಸಿ	ಹೆಂಚಿನ	ಜನತಾ	ಬಾಡಿಗೆ	ಸ್ವಂತ	ಸರ್ಕಾರಿ	ಸ್ವಂತ	ಸರ್ಕಾರಿ	ಸ್ವಂತ	ಸರ್ಕಾರಿ	ಚೀಟಿ	ಸೈಕಲ್	ರೇಡಿಯೋ	ಟೇಪ್	ಟಿವಿ	ಫೋನ್	ಸ್ನಾನಗೃಹ
ಅಂಕೋಲಾ	ಕೊಡ್ಲಗದ್ದೆ	೨					೧	೧			೨		೨		೨	೨				೨		೨
	ಡೊಂಗ್ರಿ	೫೦	೬				೨೩	೨೧		೪೪	೫	೨೭	೨೦	೨೧	೧೫	೪೯	೯	೨	೨	೮		೬
	ಸುಂಕಸಾಳ	೬						೬			೬		೬		೬	೬				೪		
	ಒಟ್ಟು	೫೮	೬				೨೪	೨೮		೪೪	೧೩	೨೭	೨೮	೨೧	೨೩	೫೭	೯	೨	೨	೧೪		೮
ಕಾರವಾರ	ಮೇಲ್‌ಮಖೇರಿ	೫					೫			೫		೫		೫		೫	೪			೩		೪
ಜೋಯಿಡಾ	ಇರನೊಳ್ಳಿ	೧೩					೧೦	೩		೧೦	೧	೧೦	೩	೭	೭	೧೨	೩	೧	೩	೬		೫
ಮುಂಡಗೋಡ	ಉಗಿನಕೇರಿ	೨೧					೨೧			೨೧		೨೧		೨೧		೨೧	೧೧	೫	೭	೯		೧೧
	ಬಸರೆಜಡ್ಡಿ	೧೫	೧					೧೪			೧೪		೧೪		೧೪	೧೫		೧		೨		೩
	ಒಟ್ಟು	೩೬	೧				೨೧	೧೪		೨೧	೧೪	೨೧	೧೪	೨೧	೧೪	೩೬	೧೧	೬	೭	೧೧		೧೪
ಯಲ್ಲಾಪುರ	ಉಮ್ಮಚಗಿ	೪೪	೪				೬	೩೪		೧೮	೨೫	೯	೩೪	೫	೩೭	೪೦	೭	೨	೨	೧೭		
	ಕಣ್ಣಿಗೇರಿ	೪೮	೫				೩	೪೦		೨೬	೨೦	೫	೪೦	೪	೩೦	೪೭	೨೪	೮	೪	೧೦		೨
	ಕುಂದರಗಿ	೩೬	೧				೯	೨೬		೨೭	೯	೧೦	೨೬	೨೫	೮	೩೬	೧೩	೨		೧		೭
	ಹಾಸಣಗಿ	೧೪	೫				೧	೭	೧	೯	೪	೬	೭	೩	೬	೧೪	೪					೧
	ಹಿಟ್ಲಳ್ಳಿ	೫	೧				೧	೩		೨	೩	೨	೩		೪	೪	೧					
	ಒಟ್ಟು	೧೪೭	೧೬				೨೦	೧೧೦	೧	೮೨	೬೧	೩೨	೧೧೦	೩೭	೮೫	೧೪೧	೪೯	೧೨	೬	೨೮		೧೦
ಶಿರಸಿ	ದೇವನಳ್ಳಿ	೧೦	೧					೯		೯	೧		೯	೧	೯	೮				೩		೪
	ಕಕ್ಕನಳ್ಳಿ	೧೦					೪	೬		೪	೬	೪	೬		೧೦	೧೦				೧		೪
	ಒಟ್ಟು	೨೦	೧				೪	೧೫		೧೩	೭	೪	೧೫	೧	೧೯	೧೮				೪		೮
ಹಳಿಯಾಳ	ಕೇಸರೊಳ್ಳಿ	೨೨	೦	೦	೦	೦	೨	೨೦	೦	೧	೧೨	೨	೨೦	೦	೨೧	೨೨	೫	೦	೧	೧೩	೦	೧೬
	ಗುಂಡೊಳ್ಳಿ	೧೭	೧	೦	೦	೦	೮	೭	೧	೨	೧	೬	೮	೦	೧೪	೧೬	೨	೦	೦	೬	೦	೫
	ಭಾಗವತಿ	೪೬	೧	೦	೦	೦	೧೮	೨೬	೧	೩	೩೮	೧೮	೨೬	೨	೪೧	೪೪	೧೨	೩	೩	೨೪	೦	೨೬
	ಸಾಂಬ್ರಾಣಿ	೭೩					೩೬	೩೭		೩೦	೩೫	೩೨	೩೮	೮	೫೯	೬೦	೧೧	೧		೧೩		೧೮
	ಒಟ್ಟು	೧೫೮	೨	೦	೦	೦	೬೪	೯೦	೨	೩೬	೮೬	೫೮	೯೨	೧೦	೧೩೫	೧೪೨	೩೦	೪	೪	೫೬	೦	೬೫
ಉತ್ತರ ಕನ್ನಡ ಒಟ್ಟು		೪೩೭	೨೬	೦	೦	೦	೧೪೮	೨೬೦	೩	೨೧೧	೧೮೨	೧೫೭	೨೬೨	೧೦೨	೨೮೩	೪೧೧	೧೦೬	೨೫	೨೨	೧೨೨	೦	೧೧೪



ಸಿದ್ದಿಗಳ ದೇವರ ಮನೆ



ಸಿದ್ದಿ ನ್ಯಾಸ



ಸಿದ್ದಿಗಳ ಡಮಾಮಿ ಕುಣಿತ



ಸಿದ್ದಿ ಮಹಿಳೆಯರ ಕೆಂಪಿರುವೆ ಚಟ್ನಿ ನೃತ್ಯ



ಜೆರೋಮ್ ಗುಲಾಮರ ಮಾರುಕಟ್ಟೆ





ಸಿದ್ದಿಗಳ ಅರಣ್ಯೋತ್ಪನಗಳು





ಸಿದ್ದಿಗಳ ಬಿದಿರು ಮತ್ತು ಬೆತ್ತದ ಕುಶಲ ಕಲೆ




ಸಿದ್ದಿಗಳ ಮನೆಯ ಸಿರಿತನ - ಬಡತನ



ಬಾಬ್‌ಷಾ ಸಿದ್ದಿಯೊಡನೆ ಜಪಾನಿನ ಹಜಿಮೆ ಚಿಬ